॥ ಶ್ರೀಮದ್ಧನುಮದ್ಭೀಮಮಧ್ವಾಂತರ್ಗತ ಶ್ರೀರಾಮಕೃಷ್ಣವೇದವ್ಯಾಸಾತ್ಮಕ
ಶ್ರೀ ಲಕ್ಷ್ಮೀಹಯಗ್ರೀವಾಯ ನಮಃ ॥

ಭಾವಿಸವೀರ ಶ್ರೀವಾದಿರಾಜತೀರ್ಥ ವಿರಚಿತ ಕನ್ನಡ

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯ

ಅಧ್ಯಾಯ ೧
ಸರ್ವಶಾಸ್ತ್ರಾರ್ಥನಿರ್ಣಯ

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯ ಪ್ರಥಮಾಧ್ಯಾಯದಲ್ಲಿ ಶ್ರೀಮದಾನಂದತೀರ್ಥರು ವೇದವ್ಯಾಸರ ಸಂದರ್ಶನಕ್ಕೆ ಮೂರನೇ ಆವರ್ತೀಲಿ ಬದರಿಕಾಶ್ರಮಕ್ಕೆ ಹೋಗಿರಲಾಗಿ, ಶ್ರೀ ವೇದವ್ಯಾಸರು ಆನಂದತೀರ್ಥರಿಗೆ ಆಜ್ಞಾಪಿಸಿದ್ದೇನೆಂದರೆ, 'ವೇದ-ಪುರಾಣಗಳಲ್ಲಿ, ರಾಮಾಯಣಗಳಲ್ಲಿ, ಭಾರತ ಶಾಸ್ತ್ರಗಳಲ್ಲಿ, ಪಂಚರಾತ್ರಾಗಮದಲ್ಲಿ, ಶ್ರುತಿಸ್ಮೃತಿಗಳಲ್ಲಿ, ಅಸುರಜನಮೋಹಾರ್ಥವಾಗಿ ಪುರುಷ ವ್ಯತ್ಯಾಸ, ಕಾಲವ್ಯತ್ಯಾಸ ಹೇಳೀವೆ. ಆದಕಾರಣ ಜ್ಞಾನಿಗಳು ಮೋಹಿತರಾಗಿದ್ದಾರೆ. ಸಕಲಸಜ್ಜನರಿಗೆ ದಿವ್ಯ ಜ್ಞಾನಪ್ರಕಾಶ ಮಾಡಿಕೊಡಬೇಕಾಗಿ, ಸಕಲ ಶಾಸ್ತ್ರಸಾರ ತೆಗಿದು ನಿರ್ಣಯಗ್ರಂಥ ಮಾಡು', ಹೀಂಗಂತ ವೇದವ್ಯಾಸದೇವರು, ಆಜ್ಞಾಪಿಸಲಿಕ್ಕೆ ದೇವರಾಜ್ಞೆ ಶಿರಸಾವಹಿಸಿಕೊಂಡು, ಆನಂದತೀರ್ಥರು ಬದರಿಕಾಶ್ರಮದಿಂದ ಉಡುಪಿ ಕ್ಷೇತ್ರಕ್ಕೆ ಬಂದು, **ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯ** ಗ್ರಂಥ ರಚಿಸಿ, ಅದರಲ್ಲಿ ಮಹಾಭಾರತಾರ್ಥ ಹೇಳಿದ್ದಾರೆ. ಆನಂದತೀರ್ಥರ ಹೃತ್ಕಮಲವೆಂಬಲ್ಲಿ ಅಚ್ಯುತನಿದ್ದಾನೆ. 'ನಾವು ಮಾಡಿದ ಗ್ರಂಥ ನಿರ್ವಿಘ್ನದಿಂದ ನಡಿಯಲೆಂದು ದೇವರಿಗೆ ಮೊರೆಹೊಕ್ಕು ಟೀಕಾ ಮಾಡಿರಥೇವೆ.' ಈ ನಿರ್ಣಯ ಹೇಳಬೇಕಾಗಿ ಆನಂದತೀರ್ಥರು ಮಂಗಳಾಚರಣೆ ಮಾಡಿದ್ದಾರೆ. ಆನಂದತೀರ್ಥರು ನಿರ್ಧೂತ ವಿಪರೀತ ಉಳ್ಳವರು. ಅವರಿಗೆ ಹರಿಮಹಿಮೆ ಕೊಂಡಾಡೋದರಲ್ಲಿ ವಿಘ್ನ ಇಲ್ಲದಿದ್ದರೂ, ಸಕಲ ಜನರೂ ಗ್ರಂಥಾರಂಭಕಾಲದಲ್ಲಿ ಮಂಗಳಾಚರಣೆ ಮಾಡಲೆಂದು ತಾವು ಮಂಗಳಾಚರಣೆ ಮಾಡಿ ಲೋಕಕ್ಕೆ ತೋರಿಸಿದ್ದಾರೆ.

ಆನಂದತೀರ್ಥರು ದೇವರನುಗ್ರಹಕ್ಕೆ ಪಾತ್ರರು. ಆರಂಭಮಾಡಿದ ಗ್ರಂಥ ಮುಗಿಯಬೇಕೆಂದು ಸಾಂಪ್ರದಾಯ ತೋರಿಸಬೇಕಾಗಿ, ಮುಂದೆ ತಮ್ಮ ಶಿಷ್ಯರು ಮಂಗಳಾಚರಣೆ ಇಲ್ಲದೆ ಹರಿಮಹಿಮೆಗಳ ಕೊಂಡ್ಯಾಡಾರೂ ಎಂದು, ತಾವು ಮಂಗಳಾಚರಣೆ ಮಾಡಿದ್ದಾರೆ.

'ನಾರಾಯಣಾ ನಿನಗೋಸ್ಕರ ನಮಸ್ಕಾರ' ಎನ್ನುತ್ತಾರೆ. ನಾರಾಯಣ ಎಲ್ಲಿ, ತಾವು ಎಲ್ಲಿ? ನಮಸ್ಕಾರ ಹ್ಯಾಂಗೆ ಅಂದರು ಎಂದಲ್ಲಿ, ಅಪರೋಕ್ಷಜ್ಞಾನಿಗಳಾದ ಆನಂದತೀರ್ಥರಿಗೆ ದೇವರು ಪ್ರತ್ಯಕ್ಷ ತೋರುತಿಹಾ. ಆದಕಾರಣ ನಮೋನಮಃ ಎನ್ನುತಾರೆ. ನಾರಾಯಣನ ಸ್ವರೂಪ ತಿಳಿಯದೆ ಹ್ಯಾಂಗೆ ನಮಸ್ಕಾರ ಎನಬೇಕು ಎಂದಲ್ಲಿ, ಲಕ್ಷಣದಮ್ಯಾಲೆ ತಿಳೀಬೇಕು. ನಾರಾಯಣನ ಲಕ್ಷಣವೆಂಥಾವೆಂದರೆ, ನಾರಾಯಣ ಪರಿಪೂರ್ಣಗುಣ ಉಳ್ಳಾತ, ಜ್ಞಾನಾನಂದ, ವೀರ್ಯ, ಪ್ರಾಜ್ಞ ಉಳ್ಳಾತ. ಇಂಥಾ ಸ್ವಾಮಿ ಜಗತ್ತು ಸೃಷ್ಟಿ, ಪಾಲನೆ, ಸಂಹಾರ ಮಾಡಥಾನೆ. ಪ್ರಾಣಿಗಳು ಇಷ್ಟು ದಿವಸ ಸುಖಿಗಳಾಗಿ, ಇಷ್ಟು ದಿವಸ ದುಃಖಿಗಳಾಗಿರಬೇಕೆಂದು ನಿರ್ಮಾಣಮಾಡಿರಥಾನೆ. ಜ್ಞಾನಪ್ರದಾಯಕ ಬ್ರಹ್ಮಾದಿಗಳಿಗೆ ಜ್ಞಾನಪ್ರಕಾಶ ಮಾಡಿಕೊಡಥಾನೆ; ದೈತ್ಯರಿಗೆ ಅಜ್ಞಾನ ಹುಟ್ಟಿಸಿಕೊಡಥಾನೆ. ಸರ್ವಜಗತ್ತಿಗೆ ಬಂಧನ, ಮೋಕ್ಷ ಕೊಡಥಾನೆ. ಸಕಲ ಜಗತ್ತನ್ನು ಪ್ರಕೃತಿದೆಸೆಯಿಂದ ಕಟ್ಟಿ ಹಾಕಥಾನೆ. ಇಂಥಾ ಸ್ವಾಮಿ, ಸೃಷ್ಟ್ಯಾದಷ್ಟಕರ್ತ, ಸರ್ವಾಂತರ್ವ್ಯಾಪ್ತನಾಗಿ ಸರ್ವಜಗತ್ತಿನಲ್ಲಿರಥಾನೆ. ಬ್ರಹ್ಮಾದಿದೇವತೆಗಳಿರಲಿಕ್ಕೆ, ನಾರಾಯಣನಿಗೇನುಕಾರಣ ನಮಸ್ಕಾರ ಮಾಡಬೇಕೆಂದಲ್ಲಿ, ದೋಷವಿರೋಧವಾದಂಥ ಗುಣಗಳಿಗೆ ನಾರಾಯಣ ಆಶ್ರಯನಾದಕಾರಣ ಸ್ವಾಮಿಗೆ ನಮಸ್ಕಾರ ಮಾಡಬೇಕು. ಬ್ರಹ್ಮಾದಿ ದೇವತೆಗಳು ಗುಣಬದ್ಧರು. ನಾರಾಯಣ ಸತ್ತ್ವಾದಿಗುಣರಹಿತ. **'ಆಸೀದುದಾರ ಗುಣ. ವಾರಿಧಿರಪ್ರಮೇಯೋ....'** ಎಂಬ ಶ್ಲೋಕ ಸೃಷ್ಟಿ ಇಲ್ಲದ ಕಾಲವೆಂಬ ಪ್ರಳಯ ಕಾಲದಲ್ಲಿ, ತಾ ಒಬ್ಬನೇ ಇರಥಾನೆಂದು ಐತರೇಯಶ್ರುತಿಯಲ್ಲಿ ಹೇಳತದೆ. ಸ್ವಾಮಿ, ಉತ್ಕೃಷ್ಟಗುಣಪೂರ್ಣ, ಜ್ಞಾನಾನಂದ, ಅನಂತ, ಅಪ್ರಮೇಯ, ಸಾಕಲ್ಯೇನ ಸ್ವಾಮೀ ಸ್ವರೂಪ, ಲಕ್ಷ್ಮೀ, ಬ್ರಹ್ಮಾದಿಗಳು ತಿಳಿಯಲಾರರು. ಚೇತನಾಚೇತನ ಜಗತ್ತಿಗೆ ನಿಯಾಮಕ, ಸ್ವಾಮೀ ಜ್ಞಾನಕ್ಕೆ ವಿಕಾರವಿಲ್ಲ. ಬ್ರಹ್ಮಾದಿಗಳ ಜ್ಞಾನಕ್ಕೆ ವಿಕಾರವದೆ ಮಾತ್ರ. ಬ್ರಹ್ಮಾದಿಗಳ ಜ್ಞಾನ ನಾರಾಯಣನ ವಶ. ಇಂಥ ಮುಕ್ತಾ-ಮುಕ್ತ ಜಗತ್ತನ್ನು ಸ್ವಾಮಿ ತನ್ನುದರದೊಳಗಿಟ್ಟುಕೊಂಡಿರಥಾನೆ. ಪ್ರಳಯ-ಕಾಲದಲ್ಲಿ ಸರ್ವಜಗತ್ತು ತನ್ನುದರದೊಳಗಿಟ್ಟುಕೊಂಡು, ಒಬ್ಬನೇ ಲಕ್ಷ್ಮೀ-ಭುಜಾಂತರದಲ್ಲಿ ಅಪ್ಪಿಕೊಂಡು ರಮಿಸಥಾನೆ. ಸ್ವಾಮಿ ಸ್ವರಮಣ, ಲಕ್ಷ್ಮೀದೇವಿಗೆ ಸುಖ ಹೆಚ್ಚಿಸಿಕೊಡಬೇಕಾಗಿ ಭುಜಾಂತರದಲ್ಲಿ ಅಪ್ಪಿಕೊಂಡಿರಥಾನೆ.

ಇಂಥ ಲಕ್ಷ್ಮೀಪತಿಯು ಮುಂದೇನು ಕರ್ತವ್ಯ ಮಾಡಿದನೆಂದರೆ, ಪ್ರಳಯ ಕಾಲದಲ್ಲಿ ತನ್ನುದರದೊಳಗಿದ್ದ ಲಿಂಗದೇಹಿಗಳಿಗೆ ಸ್ಥೂಲಶರೀರ ಕೊಟ್ಟು ಸೃಷ್ಟಿ ಮಾಡಬೇಕೆಂದು, ಬ್ರಹ್ಮದೇವರ ನೂರು ವರ್ಷ ಪ್ರಳಯದಾಗೆ ಕಡೀ ಹನ್ನೆರಡುವರೆ ವರ್ಷದೊಳಗೆ, ಲಕ್ಷ್ಮೀದೇವೀ ಕೈಯ್ಯಾ ಸೃಷ್ಟಿ ಮಾಡಬೇಕೆಂದು ಸ್ತೋತ್ರ ಮಾಡಿಸಿ ಕೊಂಡು, ಸೃಷ್ಟಿ ಮಾಡಲಿಕ್ಕೆ ಸ್ವಾಮಿ ಇಚ್ಛೆಮಾಡಿದನು. ಲಿಂಗಭಂಗ ಉಳ್ಳಂಥ

(ಹೊಂದಿರುವ) ಮುಕ್ತರಿಗೆ, ತಪೋಯೋಗ್ಯರಿಗೆ ಸ್ಥೂಲದೇಹ ಕೊಡೋದಿಲ್ಲ. ಲಿಂಗದೇಹ ಉಳ್ಳಂಥಾ ತ್ರಿವಿಧಥಂಡ ಜೀವರಿಗೆ ಸ್ಥೂಲಶರೀರ ಕೊಟ್ಟು ಸೃಷ್ಟಿ ಮಾಡಥಾನೆ. ತನಗೇನೂ ಅಪೇಕ್ಷವಿಲ್ಲ, ಜೀವರಮ್ಯಾಲೆ ಅನುಗ್ರಹದಿಂದ, ಪೋಕ್ಷಾಧಿಕಾರಿಗಳಿಗೆ ಆನಂದೋದ್ರೇಕ ಮುಕ್ತಿಯಲ್ಲಿ ಹೆಚ್ಚಿಸಿಕೊಡಬೇಕಾಗಿ ಸ್ವಾಮಿ ಜಗತ್ಸೃಷ್ಟಿ ವ್ಯಾಪಾರ ಮಾಡಥಾನೆ. ತನ್ನ ಭಕ್ತಜನಕ್ಕೆ ಜ್ಞಾನ, ಭಕ್ತಿ, ವೈರಾಗ್ಯ ಹೆಚ್ಚಿಸಿ ಕೊಡಥಾನೆ, ಅಭಕ್ತರಿಗೆ ಅಜ್ಞಾನ ಹೆಚ್ಚಿಸಿ ಕೊಡಥಾನೆ. ನಿತ್ಯ-ಸಂಸಾರಿಗಳಿಗೆ ಮಿಶ್ರಜ್ಞಾನ ಕೊಡಬೇಕಾಗಿ, ಮಹಾಪ್ರಳಯದೊಳಗೆ ಈ ಕಡೇ ಹನ್ನೆರಡುವರೆ ವರ್ಷದಾಗೆ ಜಗದ್ವ್ಯಾಪಾರ ಆರಂಭ ಮಾಡಥಾನೆ. ಬ್ರಹ್ಮದೇವರ ನೂರು ವರ್ಷ ಸೃಷ್ಟಿ, ನೂರು ವರ್ಷ ಪ್ರಳಯ—ಇದು ಸ್ವಾಮಿಗೆ ನಿಮೇಷ ಮಾತ್ರ. ಕಣ್ಣು ಯುವೆ ಇಕ್ಕೋಣ, ತೆರಿಯೋಣ ಉಪಚಾರ ಮಾತ್ರ ತಿಳಿದು, ಆಯುಷ್ಯ-ಸಂಖ್ಯೆ ಕಟ್ಟಬಾರದು. ಸ್ವಾಮಿ, ಶಶ್ವದೇಕಪ್ರಕಾರನಾಗಿ, ಅನಂತಾನಂತಕಾಲದಲ್ಲಿ ಸೃಷ್ಟಿ, ಸಂಹಾರ, ಪಾಲನೆ ಮಾಡತಿರಥಾನೆ.

ಸ್ವಾಮೀ ಉದರದೊಳಗೆ ಸೃಜ್ಯರು, ಅಸೃಜ್ಯರು, ಅನಂತಾನಂತ ಕಾಲದಲ್ಲಿ ಕೂಡಿರಥಾರೆ—ಸೃಜ್ಯರ ಹುಟ್ಟಿಸಬೇಕೆಂದು ಇಚ್ಛೆ ಮಾಡಿದನು. ಮುಕ್ತರು ಲಿಂಗ-ಭಂಗ ಉಳ್ಳವರಾಗಿ, ಆನಂದದೇಹ ಉಳ್ಳವರಾಗಿ, ಪರಮಾತ್ಮನ ಧ್ಯಾನಮಾಡತ, ಬ್ರಹ್ಮಾದಿಗಳೂ ಪರಮಾತ್ಮನುದರದೊಳಗಿರಥಾರೆ. ಇನ್ನು, ತಪೋಯೋಗ್ಯರು ಲಿಂಗಭಂಗರಾಗಿ ತಮುಸ್ಸಿನೊಳಗೆ ಬಿದ್ದು, ಅಲ್ಲಿ ನಾರಾಯಣನ ದ್ವೇಷ ಮಾಡುತ್ತ ಕಲ್ಯಾದಿಗಳಿರುತ್ತಾರೆ. ಇನ್ನು, ಲಿಂಗಭಂಗ ಇಲ್ಲದ ಮೋಕ್ಷಯೋಗ್ಯರು, ತಪೋ-ಯೋಗ್ಯರು, ನಿತ್ಯಸಂಸಾರಿಗಳು, ಸುಷುಪ್ತಾವಸ್ಥಿಯಲ್ಲಿರಥಾರೆ. ಬ್ರಹ್ಮಾದಿಗಳು, ಶಿವ, ಶೇಷ, ಮೊದಲಾಗಿ ಮನುಷ್ಯೋತ್ತಮರು ಕಡಿಯಾಗಿ, ಮನುಷ್ಯಾಧಮರು, ಕಲಿ ಮೊದಲಾಗಿ ಸುಷುಪ್ತಾವಸ್ಥಿಯಲ್ಲಿರಥಾರೆ. ಎಚ್ಚರಿಕೆ ಉಳ್ಳವರಾಗಿ ಕಣ್ಣು ತೆರೆದು ಇಹೋದಿಲ್ಲ. ಇನ್ನು, ಮುಕ್ತಬ್ರಹ್ಮಾದಿಗಳಿಗೆ, ಲಕ್ಷ್ಮೀದೇವೀಗೆ ಸುಷುಪ್ತಿ ಇಲ್ಲ. ಉನ್ಮೇಷಣ ಸ್ವಾತಂತ್ರ್ಯವೂ ಇಲ್ಲ. ಅವರು, ಉಸಿರುಬಿಡೋ ವ್ಯಾಪಾರ ಮೊದಲಾದ್ದು, ಸ್ವಾಮಿ ನಾರಾಯಣನ ಅಧೀನ. ಲಿಂಗಭಂಗ ಉಳ್ಳವರಿಗೆ, ಸ್ಥೂಲ-ಶರೀರ ಕೊಡೋಣವಿಲ್ಲ. ಲಿಂಗದೇಹ ಉಳ್ಳಂಥಾ ತ್ರಿವಿಧಥಂಡ ಜೀವರಿಗೆ ಸ್ಥೂಲ-ಶರೀರ ಕೊಟ್ಟು, ಸಜ್ಜನರಿಗೆ ಮೋಕ್ಷ ಕೊಡಬೇಕಾಗಿ, ತಪೋಯೋಗ್ಯರಿಗೆ ದುಃಖ ಕೊಡಬೇಕಾಗಿ, ನಿತ್ಯಸಂಸಾರಿಗಳಿಗೆ ಸುಖದುಃಖಮಿಶ್ರ ಕೊಡಬೇಕಾಗಿ, ಜಗತ್ತು ಹುಟ್ಟಿಸಿ ಜಗತ್ತಿನೊಳಗೆ ತಾನು ಕ್ರೀಡಾ ಮಾಡಬೇಕಾಗಿ, ಲಕ್ಷ್ಮೀದೇವೀ ಕೂಡ ರಮಿಸಿ, ಸಿರಿದೇವಿಗೆ ಬ್ರಹ್ಮಾದಿಗಳೆಂಬ ಪುತ್ರ, ಪೌತ್ರ, ಸರ್ವಸಂಪತ್ತು ಹೆಚ್ಚಿಸಿ-ಕೊಟ್ಟು, ಜಗತ್ಸೃಷ್ಟಿ ಮಾಡಬೇಕಾಗಿ ರಮೇಶ ಇಚ್ಛೆಮಾಡಿದನು.

ಮೊದಲೆ ಶುದ್ಧಸೃಷ್ಟಿ; ಪರಾಧೀನ ವಿಶೇಷಾವಾಪ್ತಿಲಕ್ಷಣ ಲಕ್ಷ್ಮೀಸೃಷ್ಟಿ. ಲಕ್ಷ್ಮೀಪತಿ ಅವತಾರಗಳು ನಿತ್ಯವಾದಂಥಾವು. ಅವನ್ನೇ ವ್ಯಕ್ತಮಾಡಬೇಕಾಗಿ ನಾರಾಯಣನೇವೆ ನಿಜಭಕ್ತರಿಗೆ ಮುಕ್ತಿ ಕೊಡಬೇಕಾಗಿ, ವಾಸುದೇವನಾಗಲಿಕ್ಕೆ, ನಾರಾಯಣನ ಆಜ್ಞಾದಿಂದ ರಮಾದೇವಿ ಮಾಯಾದೇವಿಯಾದಳು. ಜಗತ್ಸಂಹಾರ ಮಾಡಬೇಕಾಗಿ (ನಾರಾಯಣನು), ಸಂಕರುಷಣನಾಗಿ ಅವತಾರಮಾಡಿದನು. ರಮಾದೇವಿಯು ನಾರಾಯಣನ ಆಜ್ಞಾದಿಂದ ಜಯಾದೇವಿ ಆದಳು. ಆ ಸಂಕರುಷಣನೇ ಸೃಷ್ಟಿಮಾಡಬೇಕಾಗಿ, ಪ್ರದ್ಯುಮ್ನನಾಗಿ ಅವತಾರ ಮಾಡಿದ. ಆತನ ಹೆಂಡತಿ ಕೃತೀದೇವಿಯಾದಳು. ನಾಲ್ಕನೇ ಅವತಾರ, ಜಗತ್ತನ್ನು ಪಾಲಿಸಬೇಕಾಗಿ ನಾರಾಯಣನೇವೆ, ಅನಿರುದ್ಧನಾಗಿ ಅವತಾರ ಮಾಡಿದನು. ಆತನ ಹೆಂಡತಿ ಶಾಂತೀದೇವಿಯಾದಳು. ಹೀಂಗೆ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ, ನಾಲ್ಕು ನಾರಾಯಣನ ಅವತಾರಗಳು; ಮಾಯಾ, ಜಯಾ, ಕೃತೀ, ಶಾಂತೀ, ಹೀಂಗೆ ನಾಲ್ಕು ಲಕ್ಷ್ಮೀ ಅವತಾರಗಳು. ಈ ಪ್ರಕಾರ ವಾಸುದೇವ ಅವತಾರ ವ್ಯಕ್ತವಾಗಿ ದೇವತೆಗಳ ಸಾವಿರವರುಷಪರಿಯಂತ ಪ್ರವರ್ತಿಯಿಲ್ಲದೆ, ಲಕ್ಷ್ಮೀನಾರಾಯಣರು ಇದ್ದರು. ಸ್ವಾಮಿ ಲಕ್ಷ್ಮೀನಿವಾಸ ಅಚಿಂತ್ಯಾದ್ಭುತ ಶಕ್ತಿಯುಳ್ಳಾತ: ಸಾವಿರ ವರುಷ ಮುಗಿದಮೇಲೆ ತನ್ನ ಉದರದೊಳಗಿದ್ದಂಥ ಲಿಂಗದೇಹವುಳ್ಳ ಜೀವರಾಶಿಗಳನ್ನೆಲ್ಲಾ (ತ್ರಿವಿಧಥಂಡ ಜೀವರುಗಳು ಪ್ರದ್ಯುಮ್ನನ ಉದರದೊಳಗಿದ್ದರು), ಪ್ರದ್ಯುಮ್ನನಾಮಕ ನಾರಾಯಣ, ಅನಿರುದ್ಧನಾಮಕ ನಾರಾಯಣನ ಕೈಲಿ ಕೊಟ್ಟನು. ಅವರೆಲ್ಲ ನಿರ್ದೇಹ ಉಳ್ಳವರು, ಲಿಂಗದೇಹ ಉಳ್ಳವರಾಗಿ ಇಹೋರು. ಅವರನ್ನೆಲ್ಲ ತನ್ನ ಉದರದೊಳಗಿಟ್ಟುಕೊಂಡು, ಅನಿರುದ್ಧದೇವರು, ಲಿಂಗದೇಹಕ್ಕೆ ಅಭಿವೃದ್ಧಿ ಆಗಬೇಕಾಗಿ, ತ್ರಿವಿಧಥಂಡ ಜೀವರಿಗೆ ಲಿಂಗದೇಹದವ್ಯಾಲಿ, ಅನಿರುದ್ಧದೇಹ ಕೊಟ್ಟನು. ಕಡ್ಲೀಬ್ಯಾಳಿವ್ಯಾಲೆ ಹ್ಹೊಟ್ಟು ಹ್ಯಾಂಗೆ ಇರುತ್ತದೋ, ಹೊಟ್ಟಿನವ್ಯಾಲಿ ಸೊಗಡು ಹ್ಯಾಂಗೆ ಇರುತ್ತದೋ, ಹಾಂಗೆ ಲಿಂಗದೇಹದವ್ಯಾಲಿ ಅನಿರುದ್ಧದೇಹ ಕೊಟ್ಟನು. ಅದರವ್ಯಾಲೆ ಸ್ಥೂಲಶರೀರ ಕೊಡಬೇಕಾಗಿ ಮುಖ್ಯಪ್ರಾಣ, ಗರುಡ, ಶೇಷ, ರುದ್ರ, ಇಂದ್ರಾದಿ ಸಮಗ್ರ ಲಿಂಗದೇಹ ಉಳ್ಳವರಿಗೆ ಸ್ಥೂಲದೇಹ ಕೊಟ್ಟನು. ಈ ಸೃಷ್ಟಿಪ್ರಕರಣ ಮೂರನೇ ಅಧ್ಯಾಯದಲ್ಲಿ ವಿಸ್ತರಿಸಿ ಹೇಳಿಯದೆ. ಮೊದಲನೇ ಅಧ್ಯಾಯದ ಒಂಭತ್ತನೇ ಶ್ಲೋಕಪರಿಯಂತರವು ಸೃಷ್ಟಿಪ್ರಕಾರ ಹೇಳಿ, ಇನ್ನು ಎರಡನೇ ಅಧ್ಯಾಯದಲ್ಲಿ ಭಗವಂತನ ಮಹಿಮೆ, ಋಗಾದಿ ವೇದಗಳ ಪ್ರಮಾಣ ಹೇಳಿಯಿವೆ.

ಇಂಥ ನಾರಾಯಣನೇವೆ ವಾಸುದೇವಾದಿ ನಾಲ್ಕು ಅವತಾರ, ಕೇಶವಾದಿ ಹನ್ನೆರಡು, ಸಂಕರುಷಣಾದಿ ಹನ್ನೆರಡು, ಮತ್ಸ್ಯಾದಿ ಹತ್ತು, ನಾರಾಯಣಾದಿ ನೂರು, ವಿಶ್ವಾದಿ ಸಾವಿರ, ಪರಾದಿ ಅನಂತಾವತಾರ—ಹಾಂಗೆ ಲಕ್ಷ್ಮೀರೂಪಗಳು

ಅನಂತ—ಇಂಥಾ ಲಕ್ಷ್ಮೀಪತಿ ಅಖಿಳ ದೋಷವರ್ಜಿತ, ಆನಂದಾತ್ಮಕ, ದೇಶಕಾಲ-ಪರಿಚ್ಛೇದಶೂನ್ಯ. ಸ್ವಾಮೀ ಸದೃಶ ಭೂತ, ಭವಿಷ್ಯ, ವರ್ತಮಾನದಲ್ಲಿ ದಾರೂ ಇಲ್ಲ. ಸರ್ವಶಕ್ತಿ ಉಳ್ಳಾತ, ಸರ್ವಗುಣಪರಿಪೂರ್ಣ, ಬಲಜ್ಞಾನಸಮೂಹ ಉಳ್ಳಾತ. ರಮಾ, ಬ್ರಹ್ಮಾದಿ ಜಗತ್ತಿನ ಉಸಿರುಬಿಡೋ ವ್ಯಾಪಾರ, ಸ್ವಾಮೀ ಅಧೀನ. ಸರ್ವ ಜಗತ್ತಿಗೆ ನಾರಾಯಣ ಬಿಂಬ, ಮುಖ್ಯಪ್ರಾಣ ಪ್ರತಿಬಿಂಬ. ಲಕ್ಷ್ಮೀದೇವಿ ಸಮ ತಿಳೀಬಾರದು, ಲಕ್ಷ್ಮೀದೇವಿ ದೊಡ್ಡಾಕಿ. ಲಕ್ಷ್ಮೀದೇವಿಯ ನೋಡಲಿಕ್ಕೆ, ಮುಖ್ಯಪ್ರಾಣ ನೀಚ. ಮುಖ್ಯಪ್ರಾಣಗೆ ಪ್ರತಿಬಿಂಬರು, ಗರುಡ, ಶೇಷ, ರುದ್ರರು. ಹೀಂಗೆ ಈ ಮೂರು ಮಂದಿಗೆ ಪ್ರತಿಬಿಂಬರು, ಇಂದ್ರ ಕಾವುರು. ಇಂದ್ರ, ಕಾವುರಿಗೆ ಪ್ರತಿಬಿಂಬರು, ಅಹಂಕಾರಿಕ ಪ್ರಾಣ ಮೊದಲಾದ ದೇವತೆಗಳು. ಅವರಿಗೆ ಋಷ್ಯಾದಿಗಳು ಪ್ರತಿಬಿಂಬರು, ಈ ಪ್ರಕಾರ ತಿಳಿಯಬೇಕು.

ಇನ್ನು, ಸ್ತ್ರೀಯರ ಬಿಂಬ ಪ್ರತಿಬಿಂಬ ಹೇಳುತ್ತದೆ. ನಾರಾಯಣನ ತರುವಾಯ ಪ್ರತಿಬಿಂಬಳೆಂಬಾಕಿ ಲಕ್ಷ್ಮೀದೇವಿ. ಬ್ರಹ್ಮ, ವಾಯುದೇವರ ನೋಡಲಿಕ್ಕೆ, ಕೋಟಿಗುಣ ಅಧಿಕಳು. ಬ್ರಹ್ಮ ವಾಯುದೇವರಿಗೆ ಲಕ್ಷ್ಮೀದ್ವಾರದಿಂದ ಪ್ರತಿಬಿಂಬ ಎಂತ ತಿಳಿಯಬೇಕು.. ಲಕ್ಷ್ಮೀದೇವಿಗೆ ಪ್ರತಿಬಿಂಬರು ಸರಸ್ವತೀ, ~~ಭಾರತೀ. ಸರಸ್ವತೀ, ಭಾರತೀಗೆ ಪ್ರತಿಬಿಂಬರು ಸೌಪರ್ಣೀ, ವಾರುಣೀ, ಪಾರ್ವತೀ.~~ ಈ ಮೂರು ಮಂದಿಗೆ ಪ್ರತಿಬಿಂಬರು ಶಚೀದೇವಿ, ರತೀದೇವಿ. ಉತ್ತಮರ ನೋಡಲಿಕ್ಕೆ ಶತಗುಣ ನೀಚರು. ಶತಶಬ್ದವಾಚ್ಯ ಹನ್ನೆರಡು ಗುಣಕ್ಕೆ ಅದೆ, ಹದಿನೈದು ಗುಣಕ್ಕೆ ಅದೆ, ಇಪ್ಪತ್ತು ಗುಣಕ್ಕೆ ಅದೆ, ನೂರು ಗುಣಕ್ಕೆ ಅದೆ, ಸಾವಿರ ಗುಣಕ್ಕೆ ಅದೆ. 'ಶತ' ಎಂಬುವ ಶಬ್ದ ಬಹುವಾಚಿಕ. ಹೀಂಗೆ ಗುಣ-ತಾರತಮ್ಯ ತಿಳಿಯಬೇಕು. ಮುಕ್ತಿಯಲ್ಲಿ, ಸಂಸಾರದಲ್ಲಿ, ಜೀವರಿಗೆ ತಾರತಮ್ಯವದೆ. ರಾಮಾನುಜರ ಮತದಲ್ಲಿ, ಲಿಂಗದೇಹ ಹೋದಮ್ಯಾಲೆ ತಾರತಮ್ಯವಿಲ್ಲ ಅಂತ ಹೇಳುತ್ತಾರೆ. ನಾರಾಯಣಗೆ **'ಸರ್ವೋತ್ತಮ'** ಎಂದು ಒಡಂಬಟ್ಟು, ಮುಖ್ಯ-ಪ್ರಾಣನು, ತಾವು ಸಮವೆಂದು ತಿಳೀತಾರೆ. ಹೀಂಗೆ ತಿಳೋಣ ಅನರ್ಥಕ್ಕೆ ಸಾಧನ.

ಮನುಷ್ಯೋತ್ತಮರು ಕಡೆಯಾಗಿ, ಬ್ರಹ್ಮದೇವರು ಮೊದಲಾಗಿ ಎಷ್ಟು ಸ್ಥಾವರ ಜಂಗಮ ಜೀವಗಳವೆ, ಅಷ್ಟಕ್ಕೆ ಉತ್ತರೋತ್ತರ ತಾರತಮ್ಯವದೆ. ಮಧ್ಯಮರೆಂಬುವರು ನಿತ್ಯಸಂಸಾರಿಗಳು, ಅವರಿಗೆ **ತಾರತಮ್ಯವಿಲ್ಲ.*** ಇನ್ನು ಮನುಷ್ಯಾಧಮರು ಮೊದಲುಮಾಡಿಕೊಂಡು, ಕಲಿಪರಿಯಂತರ ತಮೋಯೋಗ್ಯರಿಗೆ

* ನಿತ್ಯಸಂಸಾರಿಗಳಲ್ಲಿ ತಾರತಮ್ಯವಿದೆ. ಆದರೆ ದೇವತಾ ತಾರತಮ್ಯ ತಿಳಿದು, ತಾರತಮ್ಯಾನುಸಾರ ಭಕ್ತಿ ಮಾಡಬೇಕು. ದೈತ್ಯತಾರತಮ್ಯ ತಿಳಿದು, ಕ್ರಮವಾಗಿ ತಾರತಮ್ಯದಿಂದ ದ್ವೇಷಮಾಡಬೇಕು. ನಿತ್ಯಸಂಸಾರಿಗಳ ತಾರತಮ್ಯ ತಿಳಿದು ಸಾಧನೆ ಮಾಡುವ ಕಾರಣವಿಲ್ಲ. ಈ ಅರ್ಥದಲ್ಲಿ ನಿತ್ಯಸಂಸಾರಿಗಳಲ್ಲಿ ತಾರತಮ್ಯವಿಲ್ಲ ಎಂದು ಹೇಳಿದೆ.

ತಾರತಮ್ಯವದೆ. ಮೋಕ್ಷಾಧಿಕಾರಿಗಳಿಗೆ ಸ್ವಾಮಿ, ತಮಸ್ಸಿಗೆ ಕೆಡಹಾಕೋದಿಲ್ಲ, ತಮೋಯೋಗ್ಯರಿಗೆ ಮೋಕ್ಷ ಕೊಡೋದಿಲ್ಲ. ಅನಂತಕಾಲದಲ್ಲಿ ಮುಕ್ತಿಯೋಗ್ಯರು ಸಂಸಾರದಲ್ಲಿ ಇದ್ದು, ದೇವರ ವಿಷಯಕ ಜ್ಞಾನ, ಭಕ್ತಿ ಸಂಪಾದಿಸಿ, ಅನಾದಿಕಾಲದ ಸಂಸಾರ ಪರಿಹರಿಸಿಕೊಂಡು ಮುಕ್ತಿಗೆ ಹೋಗಥಾರೆ. ದೇವರು ಒಬ್ಬರ ಪದವಿ ಒಬ್ಬರಿಗೆ ಕೊಡೋದಿಲ್ಲ. ಬ್ರಹ್ಮಪದವಿ ಬ್ರಹ್ಮರಾಯನೇ ಆಳಬೇಕು. ಇಂದ್ರಪದವಿ ಇಂದ್ರನೇ ಆಳಬೇಕು. ತಮೋಯೋಗ್ಯರು ದೇವರ ದ್ರೋಹವಮಾಡಿ ಹರಿಭಕ್ತರ ಕೂಡೆ ವೈರತನ ಮಾಡಿ, ತಮಸ್ಸಿಗೆ ಹೋಗಿ ಬೀಳಥಾರೆ. ಅಲ್ಲಿ ಹರಿದ್ವೇಷ, ಹರಿಭಕ್ತರ ದ್ವೇಷಮಾಡತಿರಥಾರೆ. ತಮಸ್ಸಿಗೆ ಬೀಳೋ ಜೀವರು, ಮುಕ್ತಿಗೆ ಬಾಹೋ ಜೀವರುಗಳು ಮುಗಿದವು ಅನಲಿಕ್ಕೆ ಕೂಡದು. ಅನೇಕ ಬ್ರಹ್ಮಾಂಡಕಲ್ಪ ಹೋದರೂ, ಜೀವರ ಸಮುದಾಯ ಸಮಾಪ್ತಿ ಐದೋದಿಲ್ಲ. ಜೀವರ ರಾಶಿ ಅನಂತಗಳಿವೆ. ಅನಂತಗಣ ದೇವತೆಗಳು, ಅನಂತಗಣ ಅಸುರರು, ಈ ಪ್ರಕಾರ ದೇವಾಸುರರನ್ನು, ನಿತ್ಯಸಂಸಾರಿಗಳನ್ನು ಜಗತ್ತಿನೊಳಗೆ ಹುಟ್ಟಿಸಥಾನೆ, ಪಾಲಿಸ್ಥಾನೆ, ಸಂಹರಿಸ್ಥಾನೆ. ಇಂಥಾ ಸ್ವಾಮಿ ಅಚಿಂತ್ಯ ಮಹಿಮೆ ರಮಾ, ಬ್ರಹ್ಮ, ರುದ್ರಾದಿ ದೇವತೆಗಳು ಚಿಂತಿಸಲಿಕ್ಕೆ ಶಕ್ತರಲ್ಲ. ಸ್ವಾಮಿ ಆದ್ಯನಾದಿ ಕರ್ತನು. ಶಶ್ವದೇಕ ಪ್ರಕಾರನಾಗಿ ಪೂರ್ಣಾನಂದ, ದಾವಾಗಲೂ ತನ್ನ ಇಚ್ಛೆಯಿಂದ ರಮಿಸತಿರಥಾನೆ. ಇಂಥಾ ಸ್ವಾಮಿಗೆ ಸಾಮ್ಯ ದಾರೂ ಐದನೆನಲಾರರು. ಮುಕ್ತಬ್ರಹ್ಮ, ಶೇಷ, ಮೊದಲಾದವರಿಗೆ, ಸ್ವಾಮೀ ಸಾಮ್ಯ ಕೂಡದು, ಇನ್ನು ಐಕ್ಯ ಎಲ್ಲಿಂದ ಬಂದೀತು? ಅನಾದಿಕಾಲದಿಂದ ನಾರಾಯಣ ಸರ್ವತಂತ್ರಸ್ವತಂತ್ರ, ರಮಾ ಬ್ರಹ್ಮಾದಿಗಳು ಅಸ್ವತಂತ್ರರು. ಐಕ್ಯ ಎಂದಿಗೂ ಕೂಡದು. ಮುಕ್ತಿಯಲ್ಲಿ, ಸಂಸಾರದಲ್ಲಿ ಬ್ರಹ್ಮಾದಿಗಳು ಸ್ವತಂತ್ರರಲ್ಲ, ನಾರಾಯಣನ ಅಧೀನರು.

ಈ ಪ್ರಕಾರ ದೇವರ ಗುಣೋತ್ಕರ್ಷಣೆ, ಜೀವರ ಬಿಂಬ ಪ್ರತಿಬಿಂಬ ಹೇಳಥೇವೆ. ನಾವು ಸ್ವಕಪೋಲಕಲ್ಪಿತ ಹೇಳೋದಿಲ್ಲ. ವೇದವ್ಯಾಸರ ಆಜ್ಞಾದಿಂದ ಪುರಾಣ, ರಾಮಾಯಣ, ಭಾರತಾದಿ ಶಾಸ್ತ್ರಗಳಲ್ಲಿ, ಪಂಚರಾತ್ರಾಗಮ, ವೇದಗಳಲ್ಲಿ ಹೇಳು ವಂಥಾವನ್ನೇ ಹೇಳಥೇವೆ. ಪುರಾಣಗಳಲ್ಲಿ ವೇದವ್ಯಾಸ ತನ್ನ ಮಹಿಮೆ ತಾನೇ ಹೇಳುತ್ತಾನೆ.

ಯಸ್ಮಾತ್ ಕ್ಷರಮತೀತೋಽಹಮಕ್ಷರಾದಪಿ ಚೋತ್ತಮಃ।
ಅತೋಽಸ್ಮಿನ್ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ।
ದ್ವಾವಿಮೌ ಪುರುಷೌ ಲೋಕೇ

ಇವೇ ಮೊದಲಾದ ಸುವಾಕ್ಯಗಳ, ಸ್ವಾಮಿ ಹೇಳಥಾನೆ. ನಾರಾಯಣ ಸರ್ವ-ಸ್ವತಂತ್ರ. ನಾರಾಯಣನ ಸದೃಶ ಎರಡನೇ ವಸ್ತು ಇಲ್ಲ. **ಏಕಮೇವಾ**ಽ.

ದ್ವಿತೀಯ' ಎಂಬ ಶ್ರುತಿ ಅದೆ. ನಾರಾಯಣನಿಗೆ, ನಾರಾಯಣನ ಗುಣಕ್ಕೆ ಲೇಶಮಾತ್ರ ಭೇದವಿಲ್ಲ. ಭೇದ ತಿಳಿದ ಪಕ್ಷಕ್ಕೆ ತಮಸ್ಸಿಗೆ ಹೋಗಿ ಬೀಳಥಾರೆ. ನಾರಾಯಣನ ದೆಸೆಯಿಂದ ಜೀವರು ಭಿನ್ನರು, ಜೀವಜೀವಕ್ಕೆ ಭಿನ್ನ. ಇಂಥಾ ಸ್ವಾಮಿ ಪೂರ್ಣಷಾಡ್ಗುಣ್ಯವಿಗ್ರಹ, ಐಶ್ವರ್ಯಾದಿ ಗುಣಸಮುದ್ರ, ಅನಂತ ಜೀವರುಗಳಿಗೆ ತಾ ನಿಯಾಮಕ. ಸ್ವಾಮಿಗೆ ಸಮರಿಲ್ಲ, ಅಧಿಕರಿಲ್ಲ. ದೇಶ, ಕಾಲ ವ್ಯಾಪ್ತಳು ಲಕ್ಷ್ಮೀದೇವಿ, ಸ್ವಾಮಿ ಸದೃಶ ಬರಲಾರಳು. ಇನ್ನು ಬ್ರಹ್ಮಾದಿಗಳು ಸಮತ್ವ ಐದಬಲ್ಲರೆ! ಬ್ರಹ್ಮಾದಿ ಜೀವರುಗಳ ಆನಂದ ನಾರಾಯಣನ ದ್ರಪ್ಪದ ಸರಿಬಾರದು.

ಮನುಷ್ಯೋತ್ತಮರ ಆನಂದ ಹೇಳಥಾರೆ. `ಸಪ್ತದ್ವೀಪಾಂತರ ಭೂಮಿ ಆಳತಾನೆ, ಭಂಡಾರ ಯಥೇಷ್ಟ ಅದೆ. ದೇಹದಲ್ಲಿ ದಾರಢ್ಯವದೆ, ವೀರ್ಯ ಶೌರ್ಯ ಪರಾಕ್ರಮವದೆ. 'ಸ ಏಕೋ ಮಾನುಷ ಆನಂದಃ'—ಹೀಂಗೆ ಮನುಷ್ಯೋತ್ತಮರ ಆರಂಭಿಸಿ ಶತಮಾಡಿ ಹೆಚ್ಚಿಸ್ತಾ ಬ್ರಹ್ಮದೇವರ ಪರಿಯಂತರ ಎಷ್ಟು ಆನಂದ, ಅಷ್ಟು, ಸ್ವಾಮಿ ಆನಂದದ ದ್ರಪ್ಪದ ಸರಿಬಾರದು. ಸ್ವಾಮೀಸಾಮ್ಯ ಮುಕ್ತಗಣಗಳಿಗೆ ಕೂಡದು. ಮುಕ್ತರಾದವರಿಗೆ ಸೃಷ್ಟಿ, ಸಂಹಾರ ಪಾಲನ ಶಕ್ತಿ ಇಲ್ಲ. ಮುಕ್ತಬ್ರಹ್ಮರೂ ಸ್ವಾಮೀ ಮಹಿಮೆ ತಿಳಿಯಲಾರರು. ಲಕ್ಷ್ಮೀದೇವಿ ಮೊದಲಾದವರು ಸ್ವಾಮೀ ಅಚಿಂತ್ಯಮಹಿಮೆ ತಿಳಿಯಲಾರರು. ಇಂಥಾ ಶ್ರೀನಾರಾಯಣನಿಗೆ ಮುಖ್ಯಪ್ರಾಣ ಆಭಾಸಕ. ಮುಖ್ಯಪ್ರಾಣನಿಗೆ ರುದ್ರ; ರುದ್ರಗೆ ಪರಾಭಾಸಕ ಇಂದ್ರ. ಇಂದ್ರಗೆ ಅಹಂಕಾರಿಕ ಪ್ರಾಣ ಮೊದಲಾದವರು. ಈ ಪ್ರಕಾರ ನೀಚಕ್ರಮ ತಿಳೀಬೇಕು.

ಪೂರ್ವಪಕ್ಷ ಬೆಳಸಥಾರೆ. ನಾರಾಯಣಗೆ ಲಿಂಗದೇಹವಿಲ್ಲ, ಬಿಂಬನಾಗಿಕೊಳ್ಳಲಿ. ಜೀವರಿಗೆ ಲಿಂಗದೇಹವದೆ, ಪ್ರತಿಬಿಂಬರಾಗಲಿ. ಜೀವರಿಗೆ ಲಿಂಗದೇಹ ಹೋದಮ್ಯಾಲೆ ನಾರಾಯಣನು, ಜೀವರು ಸಮ ಯಾಕನ್ನಬಾರದು, ಅಂದಲ್ಲಿ—ಜೀವರಿಗೆ ಸ್ವರೂಪೋಪಾಧಿ, ಬಹಿರುಪಾಧಿ ಹೀಂಗೆ ಎರಡು ಅವೆ. ಬಹಿರುಪಾಧಿ ಲಿಂಗದೇಹ, ಬಿಟ್ಟುಹೋಗತದೆ. ಸ್ವರೂಪ ಕೆಡೋದಿಲ್ಲ. ಸ್ವರೂಪ ಕೆಟ್ಟುಹೋದಮ್ಯಾಲೆ ಸ್ವಾಮಿ-ಭೃತ್ಯತ್ವ ಇಲ್ಲದೇಹೋದೀತು. ಮುಕ್ತಿಯಲ್ಲಿ, ಸಂಸಾರದಲ್ಲಿ ಬಿಂಬ-ಪ್ರತಿಬಿಂಬ ಕೆಡೋದಿಲ್ಲ. ಸ್ವಾಮಿ-ಭೃತ್ಯತ್ವ ಅನಾದಿಕಾಲದಲ್ಲಿ ಸಿದ್ಧವಾಗಿದೆ. ನಾರಾಯಣ ಸರ್ವೋತ್ತಮ. ಲಕ್ಷ್ಮೀ ಬ್ರಹ್ಮಾದಿಗಳು ಸ್ವಾಮಿ ಅಧೀನರು. ಹೀಂಗೆ ಶ್ರುತಿ ಸ್ಮೃತಿಗಳು ಹೇಳತವೆ. ಇದಕ್ಕೆ ಸಮ್ಮತಿ ಹೇಳಥಾರೆ.

ಸಾಧನೀ ದ್ವಾದಶಿ ದಿನ ದೂರ್ವಾಸಮುನಿ, ಅಂಬರೀಶರಾಯನಮ್ಯಾಲೆ ಕೋಪಕ್ಕೆ ಬಂದು ಭೂತ ಹರೆಬಿಟ್ಟ. ಸ್ವಾಮಿ ಭಕ್ತವತ್ಸಲ, ಭಕ್ತನ ವಹಿಸಿಕೊಂಡು ಚಕ್ರ ಹರೆಬಿಟ್ಟ. ಚಕ್ರ, ಭೂತನ ಕೊಂದು ದೂರ್ವಾಸನ ಬೆನ್ನು ಅಟ್ಟಿತು. ದೂರ್ವಾಸ ಬಹು ತಿರಗಿ, ಮಹಾರುದ್ರನ ಬೆನ್ನು ಪೊಕ್ಕ. ಮಹಾರುದ್ರ,

ದೂರ್ವಾಸನ ಕುರಿತು ಮಾತನಾಡಥಾನೆ. 'ಎಲ್ಲೋ ತಾತನೇ, ನಮ್ಮ ಸ್ವಾಮಿ, ನಮ್ಮಂಥ ಜೀವರ ಬಹಳ ಹುಟ್ಟಿಸ್ಯಾನೆ. ಇಂಥಾ ಬ್ರಹ್ಮಾಂಡವು ಅನಂತವಾಗಿ ಹೋಗಿ ಅದೆ. ಜೀವ ಅಂತ ಐದಿಲ್ಲ. ಇಂಥಾ ಸ್ವಾಮಿ, ಸೃಷ್ಟ್ಯಾದಷ್ಟಕರ್ತನು. ಸ್ವಾಮಿ ಏನುಕಾರಣ ಚಕ್ರ ಹರೆಬಿಟ್ಟಾನು, ನಾವು ಬೆನ್ನುಹಾಕಿಕೊಳ್ಳಲಿಕ್ಕೆ ಸಮರ್ಥರಲ್ಲ.' ಹೀಂಗೆ ನವಮಸ್ಕಂಧ ಭಾಗವತ ವಾಕ್ಯ ವೇದವ್ಯಾಸರು ಹೇಳಿ ಇದ್ದಾರೆ. ಇನ್ನು ಭಾರತ ವಾಕ್ಯ—ಜನಮೇಜಯರಾಯ ವೈಶಂಪಾಯನಾಚಾರ್ಯರ ಕೇಳಿ ಇದ್ದಾನೆ, ಪುರುಷರು ಏಸು ಮಂದಿ ಎಂದಲ್ಲಿ **'ಬಹವಃ ಪುರುಷಾಃ ಪುರುಷಾಃ ಪ್ರವರೋ'**, ಪುರುಷರು ಬಹುಮಂದಿ, ಪುರುಷೋತ್ತಮ ತಾ ಒಬ್ಬನೇ. ಹೀಂಗೆ ಭಾರತದ ಮೋಕ್ಷಧರ್ಮದಲ್ಲಿ ಹೇಳಿಯದೆ. ಹಾಂಗೆ ಶ್ರುತಿಯಲ್ಲಿ **'ದ್ವಾ ಸುಪರ್ಣಾ'** ಎಂದು ಹೇಳತದೆ. ಜೀವ-ಪರಮಾತ್ಮರು ನಿತ್ಯರು- ಜೀವ ದುಃಖಿ, ಪರಮಾತ್ಮ ನಿರ್ದುಃಖಿ. ಹರಿ ಸರ್ವೋತ್ತಮ, ದೋಷದೂರನೆಂದು ವೇದವಾಕ್ಯಗಳು ಅವೆ. ಪ್ರಮಾಣ, ಉದಾಹರಣೆಗಳು ಹೇಳುತ್ತಾರೆ: ನಾರಾಯಣ ಸರ್ವೋತ್ತಮನೆಂದು ಋಗಾದಿ ನಾಲ್ಕು ವೇದಗಳು ಹೇಳತವೆ. ಭವಿಷ್ಯೋತ್ತರ ಪುರಾಣದಲ್ಲಿ ಹೇಳತದೆ, ನರನಾರಾಯಣ, ಪಂಚರಾತ್ರಾಗಮ ಮಾಡಿ ಇದ್ದಾನೆ. ಮೂಲರಾಮಾಯಣ ಹಯಗ್ರೀವ ಮಾಡಿದ್ದಾನೆ. ಅಲ್ಲೆಲ್ಲಾ ನಾರಾಯಣ ಸರ್ವೋತ್ತಮನೆಂದು ಹೇಳತದೆ. ನಾರಾಯಣನ ಆಜ್ಞಾದಿಂದ ಮಹಾರುದ್ರ, ಜಗತ್ತಿಗೆ ಮೋಹಿಸಬೇಕಾಗಿ, ಅನ್ಯ-ಶಾಸ್ತ್ರ, ಪಾಶುಪತಾದಿ ವಿದ್ಯಾದ್ಯಾಗಮಗಳು ಮಾಡಿ ಇದ್ದಾನೆ. ಅದರಿಂದ ಅಜ್ಞಾನಿಗಳು ಮಿಥ್ಯಾಜ್ಞಾನ ಉಳ್ಳವರಾಗಿ, ದುಃಖ ಅನುಭವಿಸಥಾರೆ. ಜ್ಞಾನಿಗಳು, ನಾರಾಯಣ ಸರ್ವೋತ್ತಮನೆಂದು ಎಲ್ಲಿ ಹೇಳತದೆ, ಅಂಥಾ ದಿವ್ಯ ಜ್ಞಾನ ಸಂಪಾದಿಸಥಾರೆ. **'ಏಕೋರುದ್ರ'** ಮೊದಲಾದ ಶ್ರುತಿಗಳು ಹೇಳುತ್ತವೆ. ಅವಕ್ಕೆ ಅನ್ಯಾರ್ಥ ನಾರಾಯಣನ ಪರ, ಮಾಡಬೇಕು.

ಅಷ್ಟಾದಶ ಪುರಾಣಗಳಲ್ಲಿ ಮೋಹಕ ಹೇಳತದೆ. ಅದರೊಳಗೆ ಆರು ಸಾತ್ತ್ವಿಕ, ಆರು ರಾಜಸ, ಆರು ತಾಮಸಗಳಿವೆ. ಶುದ್ಧ ಸಾತ್ತ್ವಿಕ ಪುರಾಣ, ನಾರಾಯಣ ಸರ್ವೋತ್ತಮನೆಂದು ಹೇಳತದೆ. ಸ್ವಾಮಿ, ಅಸುರಜನ ಮೋಹಿಸಬೇಕಾಗಿ, ರಾಮಾವತಾರದಲ್ಲಿ ಹೆಂಡತೀನ ಹೋಗಲಾಡಿಸಿಕೊಂಡು, ಪ್ರಲಾಪಮಾಡಿ ಇದ್ದಾನೆ. ಲಕ್ಷ್ಮೀನಾರಾಯಣರು, ದೇಶಕಾಲಪರಿಚ್ಛೇದಶೂನ್ಯರು. ಲಕ್ಷ್ಮೀಪತಿಗೆ ದೋಷ, ಅಜ್ಞಾನ ತಿಳಿಯಬಾರದು. ಕೃಷ್ಣಾವತಾರದಲ್ಲಿ ನರಕಾಸುರನ ಸಂಗಡ ಯುದ್ಧ ಮಾಡಿ, ಪರವಶ ತೋರಿಸಿದ್ದಾನೆ. ಪರಶುರಾಮಾವತಾರದಲ್ಲಿ ಭೀಷ್ಮನ ಕೂಡ ಯುದ್ಧ ಮಾಡಿ ವೇದನೆ ತೋರಿಸಿ ಇದಾನೆ. ರಘುನಾಥ ಸೀತಾದೇವೀನ ಮದುವೆ ಮಾಡಿಕೊಂಡು, ಅಯೋಧ್ಯಕ್ಕೆ ಬಾಹೋವಾಗ, ಪರಶುರಾಮದೇವರು, ತನ್ನ 'ಶಾರ್ಙ್ಗಧನಸ್ಸು ಹೆದೆಯೇರಿಸು, ಪಿನಾಕಿಧನಸ್ಸು ಮುರಿದಹಾಂಗಲ್ಲ' ಎಂದು,

ತಾವು ಒಬ್ಬರೇ ಆದರೂ, ಭೇದ ತೋರಿಸಿ ಇದ್ದಾರೆ. ಕೃಷ್ಣಾವತಾರದಲ್ಲಿ ಚತುರ್ವಿಧ ನಾಶರಹಿತನಾದರೂ, ದೇಹ ಬಿಟ್ಟನೆಂಬೋಹಾಂಗೆ ತೋರಿಸಿದ್ದಾನೆ. ತಾ ಸರ್ವೇಶ್ವರ, ಸರ್ವಸ್ವಾಮಿ, ಸರ್ವಸ್ವತಂತ್ರ, ಉಗ್ರಸೇನರಾಯಗೆ ಸಿಂಹಾಸನದಲ್ಲಿ ಕೂಡ್ರಿಸಿ, ತಾ ಛತ್ರಾ ಹಿಡಿದು 'ಪರಾಕು, ರಾಯ' ಎಂದು ನಮಸ್ಕಾರ ಮಾಡಿ ಇದ್ದಾನೆ. ಈ ಪ್ರಕಾರ, ಅನಾಶ್ರಿತ, ಆಶ್ರಿತತನ ತೋರಿಸಿದ್ದಾನೆ.

ಸ್ವತಃ ತಾ ಬ್ರಹ್ಮಾದಿಗಳಿಗೆ ಅರಸು, ತಾ ಏನಂತ ಹೇಳಿಕೊಂಡಾನೆಂದರೆ— ಬ್ರಹ್ಮಾದಿಗಳು ದೊಡ್ಡೋರು, ನಾ ನೀಚನೆಂದು ಈ ಪ್ರಕಾರ ಅಸುರಜನ-ಮೋಹನಾರ್ಥ ಹೇಳಿದ್ದಾನೆ. ಸ್ವಾಮಿ ಅಛೇದ್ಯ, ಅಭೇದ್ಯ, ಗುಣಪೂರ್ಣ, ದೇಶ-ಕಾಲಪರಿಚ್ಛೇದಶೂನ್ಯ, ಅನಂತಾವತಾರ ಮಾಡಥಾನೆ. ಸ್ವಾಮೀ ಅವತಾರಕ್ಕೆ, ಅಂತರ್ಯಾಮಿರೂಪಕ್ಕೆ, ಆವೇಶರೂಪಕ್ಕೆ, ಮೂಲರೂಪಕ್ಕೆ, ಲೇಶಮಾತ್ರ ಭೇದ ವಿಲ್ಲ. ಸ್ವಾಮಿ ಸಮಾಧಿಕಶೂನ್ಯ, ಸರ್ವೋತ್ತಮ ದೇವತೆ. ಇಂಥಾ ಸ್ವಾಮೀ ಮಹಿಮೆ, ಬ್ರಹ್ಮಸೂತ್ರದಲ್ಲಿ ಹೇಳಿಯದೆ. ಸೂತ್ರಾನುಸಾರ ಸಕಲ ಗ್ರಂಥಗಳ ಜ್ಞಾನಿಗಳು ಮಾಡಿ ಇದ್ದಾರೆ. ಶ್ರೀಮದಾಚಾರ್ಯರು ಭಾಷ್ಯಮಾಡಿ ನಾಲ್ಕು ಅಧ್ಯಾಯಗಳಲ್ಲಿ ಸಂಗ್ರಹಿಸಿ ಹೇಳಿ ಇದ್ದಾರೆ. ನಾರಾಯಣ ಸರ್ವಗುಣಪರಿಪೂರ್ಣ, ಸರ್ವಶಬ್ದವಾಚ್ಯ, ಈ ಪ್ರಕಾರ ಪ್ರಥಮಾಧ್ಯಾಯದಲ್ಲಿ ಹೇಳಿ, ಎರಡನೇ ಅಧ್ಯಾಯ ದಲ್ಲಿ ಸ್ವಾಮಿ ಸರ್ವದೋಷದೂರನೆಂದು ಹೇಳಿದ್ದಾರೆ. ಹಾಂಗೆ, ಸ್ವರೂಪಗಳಿಗೆ ಅತ್ಯಂತ ಅಭೇದವೆಂದು ಹೇಳಿದ್ದಾರೆ. ಮೂರನೇ ಅಧ್ಯಾಯದಲ್ಲಿ ಪಂಚಭೇದ ಹೇಳಿ, ನಾಲ್ಕನೇ ಅಧ್ಯಾಯದಲ್ಲಿ ಮುಕ್ತರಿಗೆ ಮೊದಲಾಗಿ ತಾರತಮ್ಯ ಹೇಳುತ್ತದೆ. ಇಂಥಾ ದಿವ್ಯಗ್ರಂಥಕ್ಕೆ ವಿರುದ್ಧ ಎಲ್ಲಿಂದ ಬಂದೀತು! ಅದಷ್ಟು ಅಸುರಜನ ಮೋಹನಾರ್ಥ ಹೇಳಿಯದೆ ಎಂದು ತಿಳಿಯಬೇಕು.

ಪುರಾಣದಲ್ಲಿ ಮೋಹಕ ಹೇಳುತ್ತದೆ. ಭಾಷಾತ್ರಯದಿಂದ ಗ್ರಂಥಗಳು ನಡೆದಿವೆ. ಮಂದಮತಿಗಳು ತಮಗೆ ತೋದೆ ಅನ್ಯಾರ್ಥ ಮಾಡಥಾರೆ. ಇನ್ನು ಸಮ್ಮತಿ ಹೇಳಥಾರೆ. ವರಾಹಪುರಾಣದಲ್ಲಿ ಮಹಾರುದ್ರಗೆ ನಾರಾಯಣನು ಹೇಳಿ ಇದ್ದಾನೆ. 'ಎಲೋ ಪಾರ್ವತೀಪತಿ, ನಾನು ಅಸುರಜನ ಮೋಹಿಸಬೇಕಾಗಿ ಮಧ್ಯಮಜ್ಞಾನಿಗಳಿಗೆ ವಂಚನ ಮಾಡಥೀನಿ. ನೀನು ಮಿಥ್ಯಾಜ್ಞಾನಿಗಳಿಗೆ ನನ್ನ ಆಜ್ಞಾದಿಂದ ವಂಚಿಸು. ಎಲೈ ಮಹಾಬಾಹೋ, ನನ್ನಲ್ಲಿಲ್ಲದಂಥ ದೋಷಗಳನ್ನ ನನ್ನಲ್ಲಿ ಆರೋಪಿಸು. ನಾರಾಯಣ ಪರಾಧೀನ, ಹೀಂಗೆ ವಿರೋಧಾರ್ಥ ಹೇಳು. ಜಗತ್ತಿನೊಳಗೆ ನಿನ್ನ ಪ್ರಕಾಶ ನೀ ಮಾಡಿಕೋ.' ಹೀಂಗಂತ ಸ್ವಾಮಿ ಆಜ್ಞಾ ಆಗಲು, ಆಜ್ಞಾ ಮೀರಲಿಕ್ಕೆ ವಶವಲ್ಲದ ಕಾರಣ, ಮಹಾರುದ್ರ ಹೇಳಿದ್ದಾನೆ. 'ಎಲ್ಲೆಲ್ಲೂ ಲಿಂಗದ ಪಿಂಡಕೀನೆ ಕಾಣತೀನಿ, ಲಿಂಗಮೂಲ ಕಾಣುವುದಿಲ್ಲ; ಎಷ್ಟು ನೋಡಿದರೂ ಗೊತ್ತಾಗಲಿಲ್ಲ. ನಾರಾಯಣನು ಲಿಂಗಮೂಲ ಅಗಳತ

(ಅಗೆಯುತ್ತ) ಹೋಗಿ ಕಟ್ಟಕಡೇಲಿ ಲಿಂಗಮೂಲ ಕಂಡದ್ದಿಲ್ಲ' ಎಂದು ಮಹಾರುದ್ರಗೆ ಹೇಳಿದಂತೆ ವಾಕ್ಯವದೆ. '**ಶಿವ ಸರ್ವೋತ್ತಮ**ನೆಂದು ತಿಳದು, ಕೃಷ್ಣ, ತನ್ನ ಹೆಂಡತಿ ರುಕ್ಮಿಣೀ ಕೂಡಿಕೊಂಡು ಕೈಲಾಸಕ್ಕೆ ಬಂದು, ನನ್ನ ಕೈಯಾ ವರವ ಸಂಪಾದಿಸಿ ಪ್ರದ್ಯುಮ್ನನೆಂಬ ಮಗನ ಪಡೆದಿದ್ದಾನೆ' ಹೀಂಗೆ ತನ್ನ ಪ್ರಕಾಶ ಶಿವನು ಹೇಳಿಕೊಂಡಿದ್ದಾನೆ. ಇದಷ್ಟೂ, ಅಸುರಜನ ಮೋಹಿಸಬೇಕಾಗಿ, ನಾರಾಯಣನ ಆಜ್ಞೆಯಿಂದ ಶಿವ ಹೇಳಿದ್ದಾನೆ. ಬ್ರಹ್ಮಾಂಡಪುರಾಣದಲ್ಲಿ 'ನಾರಾಯಣ ಅಪ್ರಾಕೃತ, ಸ್ವಗತಭೇದವಿವರ್ಜಿತ, ದೋಷದೂರ, ಗುಣಪೂರ್ಣ, ಜ್ಞಾನಾನಂದವೇ ಶರೀರ ಉಳ್ಳಾತ, ಚಿದಾನಂದಾತ್ಮಕ,' ಹೀಂಗೆ ವಚನಗಳು ಹೇಳವೆ. ಇದಕ್ಕೆ ವಿರುದ್ಧ ತಿಳಿದ ಪಕ್ಷವೆ, ತಮಿಸ್ರಗೆ ಹೋಗಿ ಬೀಳಥಾನೆ. ಇನ್ನು ಸ್ಕಾಂದಪುರಾಣದಲ್ಲಿ ಷಣ್ಮುಖಗೆ ಮಹಾರುದ್ರ ಹೇಳಿದ್ದಾನೆ. 'ಎಲೇ ಪುತ್ರಾ, ನಾರಾಯಣ ಸರ್ವೋತ್ತಮನೆಂದು ತಿಳಿ. ಅದರಿಂದ ಮೋಕ್ಷಾದಿ ಕಾರಣವೆಂದು ತಿಳಿ. ಶಿವ ಸರ್ವೋತ್ತಮ ಎಂದು ಎಲ್ಲಿ ಹೇಳತದೆ ಅದಷ್ಟೂ, ಅಸುರಜನ ಮೋಹಿಸಬೇಕಾಗಿ ಹೇಳತದೆ. ನಾನಾ ಕರ್ಮಗಳು ಮಾಡಲ್ಯಾಕೆ, ಜ್ಞಾನ ವ್ಯತಿರಿಕ್ತ ಮುಕ್ತಿಯಾಗೋದಿಲ್ಲ. ಜ್ಞಾನದಿಂದ ಮುಕ್ತಿಯಾಗತದೆ. ನಾರಾಯಣಗೆ, ನನಗೆ ಸಮ ತಿಳಿಯಬಾರದು. ನಾರಾಯಣ ದೊಡ್ಡಾತನೆಂದು, ಸ್ವಾಮಿ ಭೃತ್ಯತ್ವ ತಿಳೀಬೇಕು. ನಾರಾಯಣ ಸರ್ವೋತ್ತಮ ದೇವತೆ. ರಮಾ, ಬ್ರಹ್ಮಾದಿ ಸರ್ವ ಜಗತ್ತಿಗೆ ಒಡಿಯ. ಹೀಂಗೆ ನಿಶ್ಚಯಜ್ಞಾನವಿಲ್ಲದೆ ಅನೇಕ ತೀರ್ಥಯಾತ್ರೆ ಮಾಡಲ್ಯಾಕೆ, ಯಜ್ಞಾದಿ ಕರ್ಮಗಳು ಮಾಡಲಿ, ಅದರಿಂದ ಮೋಕ್ಷವಾಗದು. ಆದಕಾರಣ ತಾರತಮ್ಯಜ್ಞಾನವಿರಬೇಕು. ಮುಕ್ತರಾದವರು ನಾರಾಯಣನ ಅಧೀನರು. ಜೀವೇಶ್ವರಗೆ ಐಕ್ಯ ತಿಳೀಣ, ಇದಿಷ್ಟು ಅಸುರಜನ ಮೋಹಾರ್ಥ, ತಿಳಿ.' ಇನ್ನು, ಪದ್ಮಪುರಾಣದಲ್ಲಿ ಪಾರ್ವತಿಗೆ ಮಹಾರುದ್ರ ಹೇಳಿದ್ದಾನೆ 'ಎಲೈ ಶೋಭನವಾದ ಪಚ್ಚ ಉಳ್ಳಂಥ ಸ್ತ್ರೀಯೆ! ನಮ್ಮ ಸ್ವಾಮಿ ಅಸುರಜನ ಮೋಹಿಸಬೇಕಾಗಿ, ತನ್ನ ಸ್ವರೂಪಾಂಶದಿಂದ ಅವತಾರ ವ್ಯಕ್ತವಾಡಿ, ದ್ವಾಪರಾದಿ ಯುಗಗಳಲ್ಲಿ ಮುಕ್ಕಳ ಬೇಡಿಕೋಬೇಕಾಗಿ, ಕೈಲಾಸಗಿರಿಗೆ ಬಂದು, ಸೇವೆ ಮಾಡಿ ವರವು ಬೇಡಿಕೊಂಡಿದ್ದಾನೆ. ಆಹಾ! ಸ್ವಾಮಿ ಏನು ವಿಡಂಬನೆ ಮಾಡಥಾನೆ! ನನಗೆ ನಾರಾಯಣನ ಆಜ್ಞೆವದೆ. ಅಜ್ಞಾನಪ್ರವೃತ್ತಿ ಹ್ಯಾಂಗಾದೀತು, ಹಾಂಗೆ ಮಾಡು ಎಂದು. ನಮ್ಮ ಸ್ವಾಮಿ ಆಜ್ಞೆವಿದ್ದು, ಜನರು ಮೋಹಿಸೋ ಹಾಂಗೆ, ಕರ್ತವ್ಯ ಮಾಡು ಎಂದಕಾರಣ ನಮ್ಮ ಸ್ವಾಮಿಗೆ ನಾನು, ವರವು ಕೊಟ್ಟಿದ್ದೇನೆ. ಗ್ರಂಥಗಳಲ್ಲಿ **ಶಿವ ಸರ್ವೋತ್ತಮ, ಗಣೇಶ ಸರ್ವೋತ್ತಮ, ಬೃಹಸ್ಪತಿ ಸರ್ವೋತ್ತಮ** ಎಂದು ಹೇಳತದೆ. ಎಲ್ಲೆ ಶೋಭನವಾದಂಥ ಹುಬ್ಬುಗಳು ಉಳ್ಳಾಕಿಯೆ! ರುದ್ರಾದಿ ನಾವುಗಳು. ನಾರಾಯಣನಲ್ಲಿ ಸಮನ್ವಯ ಮಾಡಬೇಕು.

ಸರ್ವಶಬ್ದವಾಚ್ಯ, ನಾರಾಯಣ. ನೀ ಹೀಂಗ್ ನಿಶ್ಚಯಜ್ಞಾನ ತಿಳಿ. ದುರ್ಮತಿಗಳು ಅಂತರಾರ್ಥ ತಿಳಿಯದೆ ವಿಪರೀತಾರ್ಥ ಮಾಡಥಾರೆ. ನಾರಾಯಣ, ಆದ್ಯನ್ಹಾದಿ-ಕರ್ತನೆಂದು ವೇದಶ್ರುತಿಗಳು ಹೇಳುತ್ತವೆ.' **'ಅಸ್ಯ ದೇವಸ್ಯ', 'ಯಂ ಕಾಮಯೇ ತಂ ತಮುಗ್ರಂ ಕೃಣೋಮಿ'** ಎಂಬ ಶ್ರುತಿಗಳು, ಸ್ವಾಮಿ ಸರ್ವಜಗತ್ತಿಗೆ ಒಡಿಯ, ಭಕ್ತರಿಗೆ ಅಭೀಷ್ಟ ಕೊಡಲಿಕ್ಕೆ ಸರ್ವಸಮರ್ಥ, ಸರ್ವಾಂತ-ರ್ಯಾಪ್ತ, ಗುಣಪೂರ್ಣ. ಇಂಥಾ ನಾರಾಯಣನ ಪೂಜೆ ಮಹಾರುದ್ರ ಅನಾದಿ ಕಾಲದಲ್ಲಿ ಮಾಡಿ, ಐವತ್ತು ಕಲ್ಪ ಪರಿಯಂತ ಸಾಧನಸಂಪತ್ತು ಮಾಡಿ, ರುದ್ರ-ಪದವಿ ಸಂಪಾದಿಸಿದ್ದಾನೆ. ಮಂತ್ರದ್ರಷ್ಟಋಷಿ ಅಶ್ವಿನೀದೇವತೆಗಳಿಗೆ ಹೇಳಿದ್ದಾನೆ. 'ಎಲ್ಲೆ ಅಶ್ವಿನೀದೇವತೆಗಳೆರ್ಯಾ, ನೀವು ವೈದ್ಯಕರ್ಮ ಮಾಡುತ್ತೀರೆಂದು, ದೇವೇಂದ್ರ ನಿಮಗೆ ಸೋಮಪಾನಕ್ಕೆ ತಕ್ಕವರನ್ನಾಗಿ ಮಾಡಲಿಲ್ಲದ ಕಾರಣ, ದೇವರಿಗೆ ಶರಣುಹೋಗಿರಿ. ಶಿವ, ದೇವರ ಆರಾಧನೆ ಮಾಡಿ, ತನ್ನ ರುದ್ರಪದವಿ ಹ್ಯಾಂಗೆ ಸಂಪಾದಿಸಿದ, ಹಾಂಗೆ ನೀವು ದೇವರಿಗೆ ಶರಣುಹೊಕ್ಕು ಸೋಮಪಾನಕ್ಕೆ ಯೋಗ್ಯರಾಗಿರಿ' ಹೀಂಗೆ ಮಹಾರುದ್ರನ ದೃಷ್ಟಾಂತ ಕೊಟ್ಟು, ಮಂತ್ರದ್ರಷ್ಟಋಷಿ ಅಶ್ವಿನೀದೇವತೆಗಳಿಗೆ ಹೇಳಿದ್ದಾನೆ. ಸ್ವಾಮಿ, ಸಿಂಹನ ಸಾಮರ್ಥ್ಯ ಉಳ್ಳಾತ.

ಸಿಂಹ ಹ್ಯಾಂಗೆ ಉಗ್ರ, ಹಾಂಗೆ ನರಸಿಂಹನೂ ಮಹಾ ಉಗ್ರ. ದಾವಾಗಲೂ ಹದಿನಾರುವರ್ಷ ಪ್ರಾಯದವನಷ್ಟಂದ ಅನಂತಕಾಲದಲ್ಲಿ ಇರಥಾನೆ. ಸಿಂಹ, ಮೃಗಗಳ ಕೊಂದರೆ, ನರಸಿಂಹ ಹಿರಣ್ಯಕಶ್ಯಪ ಮೊದಲಾದ ದೈತ್ಯರ ಹತ-ಮಾಡಿದ್ದಾನೆ. 'ಎಲ್ಲೆ ಶಂಭು! ನರಸಿಂಹನ ಪೂಜೆ ಮಾಡು' ಹೀಂಗಂತ ಮಂತ್ರದ್ರಷ್ಟ ಹೇಳಿದ್ದಾನೆ. ಇಂಥಾ ಸ್ವಾಮೀ ಅನುಗ್ರಹದಿಂದ ಲಕ್ಷ್ಮೀದೇವಿ, ಬ್ರಹ್ಮದೇವರಿಗೆ ಬ್ರಹ್ಮಪದವಿ ಕೊಡಥಾಳೆ, ರುದ್ರಗೆ ರುದ್ರಪದವಿ ಕೊಡಥಾಳೆ. ಸ್ವಾಮೀ ಅನುಗ್ರಹದಿಂದ ಲಕ್ಷ್ಮೀದೇವಿಗೆ ಇಂಥಾ ಸಾಮರ್ಥ್ಯವದೆ. ಅಂಥಾ ಲಕ್ಷ್ಮೀ ಅಂತಾಳೆ. **'ಮಮಯೋನಿರಪ್ಸ್ವಂತಃ ಸಮುದ್ರೇ.'** ಇಂಥಾ ಲಕ್ಷ್ಮೀಪತಿ, ಕ್ಷೀರಸಮುದ್ರಶಾಯಿ. ಪ್ರಳಯಕಾಲದಲ್ಲಿ **'ಏಕೋ ನಾರಾಯಣ'** ತಾ ಒಬ್ಬನೇ ವಟಪತ್ರಶಾಯಿಯಾಗಿರಥಾನೆ. ಸಮಸ್ತ ಜೀವರುಗಳನ್ನ ತನ್ನುದರದೊಳಗಿಟ್ಟುಕೊಂಡಿರಥಾನೆ. ಬ್ರಹ್ಮ, ಶಿವ, ಶಕ್ರ ಮೊದಲಾದವರ ಮ್ಯಾಲೆ, ಅನುಗ್ರಹ ಮಾಡಬೇಕಾಗಿ, ಸೃಷ್ಟಿಮಾಡಬೇಕೆಂದು ಸರ್ವಜೀವರಗಳನ್ನ ಹುಟ್ಟಿಸಥಾನೆ. **'ಯದಾ ಪಶ್ಯಃ ಪಶ್ಯತೆ ರುಗ್ಮವರ್ಣಂ'** ಎಂಬ ಶ್ರುತಿ, ಸ್ವಾಮಿ, ದಾವಾಗಲೂ ಸುವರ್ಣದೋಪಾದಿ ಹೊಳೆಯುತ್ತಿರಥಾನೆ ಎಂದು ಹೇಳಥದೆ. ಸೃಷ್ಟಿಕಾಲದಲ್ಲಿ ಬ್ರಹ್ಮಾಂಡವೆಂಬ ಗರ್ಭವನ್ನ ಲಕ್ಷ್ಮೀದೇವಿಯಲ್ಲಿಡಥಾನೆ. ಲಕ್ಷ್ಮೀದೇವಿ ಬ್ರಹ್ಮಾಂಡ ಹಡೀಥಾಳೆ, ಸಕಲಸೃಷ್ಟಿ ಆಗತದೆ. ಮೋಕ್ಷಾಧಿಕಾರಿಗಳು ಸಾಧನಸಂಪತ್ತು ಮಾಡಿ ಅಪರೋಕ್ಷಜ್ಞಾನಿಗಳಾಗಥಾರೆ. ಅಪರೋಕ್ಷಿಗಳಿಗೆ ಅನಿಷ್ಟಪುಣ್ಯವಿಲ್ಲ. **'ಯಜ್ಞೇಷು**

ವಿಪ್ರ ರಾಜ್ಯೇ' ಪಾಪದ ಲೇಪವಿಲ್ಲ, ಅಷ್ಟೂ ಪರಿಹರಿಸಿ ಹೋಗಥದೆ. ನಿರ್ದೋಷ ಉಳ್ಳವರಾಗಿ ಸಾರೂಪ್ಯ, ಸಾಲೋಕ್ಯ, ಸಾಮೀಪ್ಯ, ಸಾಯುಜ್ಯ ಐದಥಾರೆ. ಬ್ರಹ್ಮ-ದೇವರೂ ಕೂಡ ನಾರಾಯಣನ್ನ ಐದಿ, ತಮ್ಮ ಸ್ವರೂಪಾನಂದ, ಮೋಕ್ಷದಲ್ಲಿ ಭೋಗಿಸಥಾರೆ. ಮೋಕ್ಷದಲ್ಲಿ ಮೊದಲಾಗಿ ಕಾಮಸುಖ ಉಂಟು. ಮೋಕ್ಷದಲ್ಲಿ ತಾರತಮ್ಯವದೆ. ಜೀವ-ಪರಮಾತ್ಮರಿಗೆ ಭೇದ, ಸರ್ವಜಗತ್ತು ಉಪಜೀವಿಕ, ನಾರಾಯಣ ಉಪಜೀವ್ಯ. ನಾರಾಯಣ ಏನು ಕರ್ಮ ಮಾಡಥಾನೆ, ಅದಷ್ಟೂ ನಿತ್ಯವೇ, ಮಿಥ್ಯಾಭೂತವಲ್ಲ. **'ಸತ್ಯಃ ಸೋಽಸ್ಯಮಹಿಮಾ.'** ಬಲ್ಯಾದಿ ದಿತಿಯ ಮಕ್ಕಳು, ಅದಿತಿ ಮಕ್ಕಳು ಉಳ್ಳ ಸ್ವರ್ಗಪದವಿಯ ಇಚ್ಛೈಸಿ ಸ್ವರ್ಗಕ್ಕೆ ಧಾಳಿ ಹಾಕಿ, ಸ್ವರ್ಗಪದವಿ ಕೊಂಡರು. ತನ್ನ ಭಕ್ತರಾದ ದೇವತೆಗಳು, ಐಶ್ವರ್ಯಭ್ರಷ್ಟರಾದರೆಂದು, ವಟುವಾಮನ ಅವತಾರಮಾಡಿ, ವಿಪ್ರರಾಜನೆಂಬಂಥ ಆ ವಾಮನ, ಯಜ್ಞದಲ್ಲಿ ಹೋಗಿ, ಯಾಚಕವೃತ್ತಿಯಿಂದ ದೇವತೆಗಳಿಗೆ ಐಶ್ವರ್ಯ ತಂದು-ಕೊಟ್ಟಾನೆ. ಸ್ವಾಮಿ ತಾ ರಾಜಾಧಿರಾಜ, ಜಗತ್ಸೃಷ್ಟಿ ಮಾಡುವಾತ, ಈ ಪ್ರಕಾರ ಚರಿತ್ರೆಗಳ ತೋರಿಸಥಾನೆ. ಇಂಥಾ ಚರಿತ್ರೆಗಳ, ಸುಖಾಪೇಕ್ಷೆಯುಳ್ಳವರು, ನಿರಂತರ ಕೊಂಡಾಡಥಾರೆಂದು ಮಂತ್ರದ್ರಷ್ಟ ಹೇಳಥಾನೆ. ಜಗತ್ತೆಲ್ಲ ಸತ್ಯ, ಮಿಥ್ಯಾಭೂತವಲ್ಲ. ನಾರಾಯಣನ ಜ್ಞಾನಾನಂದ ಗುಣಗಳು ಸತ್ಯ. ನಾರಾಯಣನ ಗುಣಕ್ಕೆ, ನಾರಾಯಣನ ಅವತಾರಗಳಿಗೆ, ಭೇದ ತಿಳೋಣ ಅಸತ್ಯ. ಇಂಥಾ ಸ್ವಾಮಿ, ಅನಂತ ಅವತಾರ ವ್ಯಕ್ತಮಾಡಥಾನೆ. ಜಗತ್ತನ್ನು ಪ್ರವಾಹರೂಪದಿಂದ ಚಕ್ರ-ದೋಪಾದಿ ತಿರಗಿಸಥಾನೆ. ಇಂಥಾ ಜಗತ್ತು ಸತ್ಯವೆಂದು ಸ್ಥಿರಜ್ಞಾನವಿರಬೇಕು. ಪಂಚಭೇದ ತಿಳೀಬೇಕು. ಜೀವ-ಈಶ್ವರ ಭೇದ, ಜಡ-ಈಶ್ವರ ಭೇದ, ಜಡ-ಜಡ ಭೇದ, ಜೀವ-ಜೀವರ ಭೇದ, ಜಡ-ಜೀವ ಭೇದ—ಹೀಂಗೆ ಪಂಚಭೇದ, ಸರ್ವ ವಸ್ತುಗಳಲ್ಲಿ ನಿರಂತರವಾಗಿ ತಿಳೀಬೇಕು.

ಇನ್ನು ತಾರತಮ್ಯ. ಮನುಷ್ಯೋತ್ತಮರ ನೋಡಲಿಕ್ಕೆ, ನೂರುಮಡಿ ಕ್ಷಿತಿಪರು ದೊಡ್ಡವರು. ಕ್ಷಿತಿಪರೆಂಬುವರು ರಾಯರು. ರಾಯರ ನೋಡಲಿಕ್ಕೆ, ನೂರುಮಡಿ ಮನುಷ್ಯಗಂಧರ್ವರು ದೊಡ್ಡವರು. ಮನುಷ್ಯಗಂಧರ್ವರ ನೋಡಲಿಕ್ಕೆ, ದೇವಗಂಧರ್ವರು ದೊಡ್ಡವರು. ದೇವಗಂಧರ್ವರ ನೋಡಲಿಕ್ಕೆ, ನೂರುಮಡಿ ಚಿರಪಿತೃಗಳು—ಚಿರಪಿತೃಗಳೊಳಗೆ ಏಳು ಮಂದಿ ಬಹಳ ದೊಡ್ಡವರು. ಅಂಥಾ ಚಿರಪಿತೃಗಳ ನೋಡಲಿಕ್ಕೆ, ಇಪ್ಪತ್ತನಾಲ್ಕು ಅಜಾನಜ ದೇವತೆಗಳು ನೂರುಮಡಿ ದೊಡ್ಡವರು. ಅಜಾನಜದೇವತೆಗಳು, ದೇವಕುಲದವರಾದರು. ಅನಾಖ್ಯಾತರು ಪ್ರಸಿದ್ಧಿಗೆ ಬಂದಿಲ್ಲ. ಅಂಥಾ ಅಜಾನಜ ದೇವತೆಗಳ ನೋಡಲಿಕ್ಕೆ, ನೂರುಮಡಿ ಕರ್ಮಜದೇವತೆಗಳು ದೊಡ್ಡವರು. ಕರ್ಮಜದೇವತೆಗಳ ನೋಡಲಿಕ್ಕೆ, ವಹ್ನಿ, ಬೃಹಸ್ಪತ್ಯಾದಿಗಳು ದೊಡ್ಡವರು. ಇವರ ನೋಡಲಿಕ್ಕೆ, ದಕ್ಷಪ್ರಜೇಶ್ವರ ದೊಡ್ಡವ.

ದಕ್ಷನ ನೋಡಲಿಕ್ಕೆ, ಇಂದ್ರ ದೊಡ್ಡಾತ. ಇಂದ್ರನ ನೋಡಲಿಕ್ಕೆ, ಗರುಡ ಶೇಷ ರುದ್ರರು ದೊಡ್ಡವರು. ಇವರ ನೋಡಲಿಕ್ಕೆ, ಸರಸ್ವತೀ ದೊಡ್ಡಾಕಿ. ಸರಸ್ವತೀ ನೋಡಲಿಕ್ಕೆ, ವಾಯುದೇವರು ದೊಡ್ಡಾತ. ಈ ಪ್ರಕಾರ ಶತಗುಣೋತ್ತರ ತಿಳೀಬೇಕು. ವಾಯುದೇವರು ಬ್ರಹ್ಮಪದವಿಗೆ ಬರಥಾರೆ. ಜೀವರೊಳಗೆ ಮುಕ್ತಿಯಲ್ಲಿ, ಸಂಸಾರದಲ್ಲಿ, ವಾಯುಥೇವರ ಸದೃಶ ದಾರೂ ಇಲ್ಲ. ಬ್ರಹ್ಮ ವಾಯುಗಳ ನೋಡಲಿಕ್ಕೆ, ಕೋಟಿಗುಣಕ್ಕೆ ಅಧಿಕಳು ಲಕ್ಷ್ಮೀದೇವಿ. ಲಕ್ಷ್ಮೀದೇವಿಯ ನೋಡಲಿಕ್ಕೆ, ಅನಂತಗುಣಪರಿಪೂರ್ಣ ಶ್ರೀನಾರಾಯಣ ದೊಡ್ಡಾತ. ನಾರಾಯಣಗೆ ಸಮರಿಲ್ಲ, ಅಧಿಕರಿಲ್ಲ. ಹೀಂಗೆ ವೇದವಾಕ್ಯಗಳು ನಾರಾಯಣನ ಗುಣೋತ್ಕರ್ಷ ಪೇಳತವೆ. ಯಜ್ಞದೊಳಗೆ ಅಶ್ವಮೇಧಯಜ್ಞ ಹ್ಯಾಂಗೆ ದೊಡ್ಡದು, ಹಾಂಗೆ ಸಕಲ ಜ್ಞಾನದೊಳಗೆ ನಾರಾಯಣ ಗುಣಪರಿಪೂರ್ಣನೆಂದು ತಿಳಿಯೋಣ ಬಹಳ ದೊಡ್ಡದು. ಅನಂತಕಾಲದಲ್ಲಿ ನಾರಾಯಣ ಗುಣಪೂರ್ಣನೆಂದು ತಿಳಿದು ಪೂಜೆಮಾಡೋದು ದೊಡ್ಡ ಧರ್ಮ. ಅದರಿಂದ ಮುಕ್ತಿ ಮಾರ್ಗ ಐದಥಾನೆ. ಡಾಂಭಿಕತನದಿಂದ ಏನು ಕರ್ಮ ಮಾಡ್ಯಾನು ಅದಷ್ಟೂ ನಿಷ್ಫಲ. ಆದಕಾರಣ ನಾರಾಯಣ ಸರ್ವೋತ್ತಮನೆಂಬ ದಿವ್ಯಜ್ಞಾನ ಸಂಪಾದಿಸಿ, ಭಕ್ತಿಪೂರ್ವಕ ನಾರಾಯಣನ ಪೂಜೆ ಮಾಡಿ ಏನು ಕರ್ಮ ಮಾಡ್ಯಾನು, ಅದರಿಂದ ಮುಕ್ತಿಯಾಗತದೆ. ಲಿಂಗಭಂಗವಾಗಿ ತನ್ನ ನಿಜಸ್ವರೂಪ ಪ್ರಕಟವಾಗತದೆ. ನಾರಾಯಣ ತನ್ನ ಭಕ್ತರಿಗೆ ಮೋಕ್ಷ ಕೊಡಥಾನೆ. ನಾರಾಯಣನ ಆಜ್ಞಾದಿಂದ ವಾಯುದೇವರು ಮುಕ್ತಿ ಕೊಡಥಾರೆ. ಉತ್ತಮರಾದವರು ನೀಚರಿಗೆ ಉಪದೇಶ ಕೊಡಥಾರೆ. ಉತ್ತಮರಿಂದ ನೀಚರಿಗೆ ಗತಿಯಾಗತದೆ. ಉತ್ತಮರಿಗೆ, ನೀಚರಿಗೆ, ಮುಖ್ಯ ಗತಿ ಕೊಡುವಂಥ ಅನಂತ ವೇದಪ್ರತಿಪಾದ್ಯ ಶ್ರೀನಾರಾಯಣ, ಮೋಕ್ಷಾಧಿಕಾರಿಗಳಿಗೆ ಮುಕ್ತಿಕೊಡಥಾನೆ. ಮುಕ್ತಿಮಾರ್ಗ ಐದುವವ, ಪಂಚಭೇದ ತಿಳಿಯಬೇಕು. ಸ್ವಾಮೀ ಗುಣೋತ್ಕರ್ಷಣೆ ಮುಖ್ಯ ತಿಳಿಯಬೇಕು. ಸ್ವಾಮಿ, ಸ್ವಗತಭೇದವರ್ಜಿತ. ಸಾಕ್ಷಾದವತಾರಗಳಿಗೆ, ಆವೇಶಕ್ಕೆ ಅಂತರ್ಯಾಮಿ ಭೇದ ತಿಳಿಯಬಾರದು. ಸಾಕ್ಷಾದವತಾರ ಬ್ಯಾರೆ, ಆವೇಶ ಬ್ಯಾರೆ, ಹೀಂಗೆ ದೃಢವಾಗಿ ತಿಳಿದಿರಬೇಕು. ಸ್ವಾಮೀ ಮಹಿಮೆ ಎಲ್ಲಿ ಹೇಳದೆ, ಎಲ್ಲಿ ತಿಳೀಬೇಕು ಎಂದಲ್ಲಿ, ವೇದಗಳಲ್ಲಿ, ಪಾಂಚರಾತ್ರಾಗಮ, ಇತಿಹಾಸ, ಪುರಾಣಗಳಲ್ಲಿ ಹೇಳತದೆ, ಬಹಳವಾಗಿ ಲಕ್ಷ್ಮೀಪತಿ ಮಹಿಮೆ ಕೊಂಡಾಡತದೆ. ಜ್ಞಾನವಿಲ್ಲದೆ ಪೂಜೆ ಮಾಡಿದರೆ ಭಕ್ತಿಯಲ್ಲ. ದೇವರಿಗೆ ಆಭರಣ ಮಾಡಿಸಿ, ಮಂಗಳಾರತಿ ಮಾಡಿದ್ದು ಭಕ್ತಿಯಂತ ತಿಳಿಯಬಾರದು. ಭಕ್ತಿ ಎಂಥಾದ್ದು ಎಂದರೆ, ಸ್ವಾಮಿ ಸರ್ವದೇವೋತ್ತಮ. ರಮಾ ಬ್ರಹ್ಮಾದಿ ಜಗತ್ತಿಗೆ ಒಡಿಯ, ಇಂಥಾ ದಿವ್ಯಜ್ಞಾನ ಸಂಪಾದಿಸಿ ಏನು ಪೂಜ ಮಾಡ್ಯಾನು, ಅದರಿಂದ ನಾರಾಯಣಗೆ ಬಹಳ ತುಷ್ಟಿಯಾಗತದೆ. ಅಂಥವಗೆ ಮತ್ತಷ್ಟು ಭಕ್ತಿ ಹೆಚ್ಚಿಸಿ ಕೊಡಥಾನೆ. ಜ್ಞಾನ ಸಂಪಾದಿಸಿ ಭಕ್ತಿಪೂರ್ವಕ ನಾರಾಯಣನ ಪೂಜೆ ಮಾಡಿದ್ದರಿಂದ ಮುಕ್ತಿಯಾಗತದೆ.

ದೇವ, ಮನುಷ್ಯ, ಗಂಧರ್ವ, ಮನುಷ್ಯೋತ್ತಮರ ಆರಂಭವಾಡಿ ಬ್ರಹ್ಮ-ದೇವರ ಪರಿಯಂತರ ಮುಕ್ತಿಯೋಗ್ಯರು. ಮನುಷ್ಯಾಧಮರು ಮೊದಲಾಗಿ ಕಲಿ-ಪರಿಯಂತರ ತಮೋಯೋಗ್ಯರು ನಿತ್ಯಸಂಸಾರಿಗಳು ಮುಕ್ತಿಯೋಗ್ಯರಲ್ಲ, ತಪಸ್ಸಿಗೂ ಯೋಗ್ಯರಲ್ಲ. ಸ್ವರ್ಗ ನರಕ ಅನಂತಕಾಲದಲ್ಲಿ ಅನುಭವಿಸತಾ ಇರಥಾರೆ. ಮುಕ್ತಿಯೋಗ್ಯರು ಮುಕ್ತಿಗೆ ಹೋದಮ್ಯಾಲೆ ತಿರುಗಿ ಸಂಸಾರಕ್ಕೆ ಬಾಹೋದಿಲ್ಲ. ತಮೋಯೋಗ್ಯರು ತಮಸ್ಸಿಗೆ ಹೋದಮ್ಯಾಲೆ ಪುನಃ ಹುಟ್ಟೋಣಿಲ್ಲ. ಲಿಂಗದೇಹ ನಾಶವಾಗಿಹೋಗಿರತದೆ. ಮನುಷ್ಯೋತ್ತಮರಿಗೆ ನರಕವಿಲ್ಲ. ತಮಸ್ಸಂತೂ ಇಲ್ಲವೇ ಇಲ್ಲ. ಅಸುರರಿಗೆ ಮುಕ್ತಿ ಇಲ್ಲ. ನಿತ್ಯಸಂಸಾರಿಗಳಿಗೆ ಮುಕ್ತಿ ಇಲ್ಲ, ತಮಸ್ಸೂ ಇಲ್ಲ. ಸ್ವರ್ಗ ನರಕ ಅನುಭವಿಸತಾ ಇರಥಾರೆ. ನಾರಾಯಣ ಸರ್ವಗುಣಪೂರ್ಣನೆಂದು, ಮುಕ್ತರು ಪೂಜೆ ಮಾಡತಾ ಮುಕ್ತಿಯಲ್ಲಿ ಇರಥಾರೆ. ಬ್ರಹ್ಮದೇವರು ನಾರಾಯಣನ ಸರ್ವಗುಣ ಉಪಾಸನೆ ಮಾಡತಿರತಾರೆ.* ಜ್ಞಾನಾತ್ಮಕ, ಆನಂದಾತ್ಮಕ, ಭೋಪಾತ್ಮಕ, ಮಮಸ್ವಾಮಿ ಸರ್ವಸ್ವಾಮಿ, ಹೀಂಗೆ ನಾಲ್ಕು ಗುಣಗಳಿಂದ ಉಪಾಸನೆ ಮಾಡಬೇಕು. ಈ ಪ್ರಕಾರ ದೇವರ ಉಪಾಸನೆ ಮಾಡಿದ್ದರಿಂದ ಋಜು-ಗಣದವರು ಬ್ರಹ್ಮಪದವಿಗೆ ಬರಥಾರೆ. ಹಾಂಗೆ, ಗರುಡ, ಶೇಷ, ರುದ್ರ, ಇಂದ್ರಾದಿ ದೇವತೆಗಳಿಗೆ ಪ್ರತ್ಯೇಕ ಗುಣಗಳವೆ. ಈ ಪ್ರಕಾರ, ಲಕ್ಷ್ಮೀ, ಬ್ರಹ್ಮಾದಿ ಜಗತ್ತಿಗೆ ತಾರತಮ್ಯ ಉಂಟು. ತಾರತಮ್ಯ ವಿಪರೀತ ಮಾಡಲಿಕ್ಕೆ ಶಕ್ಯವಿಲ್ಲ. ದೇವರ ಗುಣೋತ್ಕರ್ಷಣೆ ತಿಳೋವಲ್ಲಿ ಅಚ್ಛಿದ್ರ ಇರಬಾರದು. ಕಾಮ್ಯಕರ್ಮದಿಂದ ದೇವರ ಪೂಜಾ ಮಾಡಬಾರದು. ನಿಷ್ಕಾಮವುಳ್ಳವರಾಗಿ ಪೂಜಾ ಮಾಡಬೇಕು. ಶ್ರುತಿ, ಸ್ಮೃತಿ ಹೇಳಿದ ಪ್ರಕಾರ ವಿಹಿತಕರ್ಮ ಮಾಡದೆ, ದೇವರಾಜ್ಞೆ ಮೀರಿ ನಿಷಿದ್ಧ-ಕರ್ಮದಲ್ಲಿ ರತನಾಗಿ ಬಹಳ ಉನ್ಮತ್ತನಾಗಿ ಕೆಡಬಾರದು. ದಾವ ಕಾಲದಲ್ಲೂ ನಾರಾಯಣವಿಷಯಕ ಜ್ಞಾನ ಸಂಪಾದಿಸಿ, ಸಾಧನಸಂಪತ್ತು ಮಾಡಿ ನಾರಾಯಣಗೆ ಶರಣು ಹೋಗಬೇಕು. ಜ್ಞಾನ ವಿನಃ ತೀರ್ಥಸ್ನಾನ ದೊಡ್ಡದಲ್ಲ, ಧನ ದೊಡ್ಡದಲ್ಲ, ಕೃಚ್ಛ್ರ-ಚಾಂದ್ರಾಯಣ ಉಪವಾಸ ದೊಡ್ಡವಲ್ಲ, ತಪಸ್ಸು ದೊಡ್ಡದಲ್ಲ. ಜ್ಞಾನ ವಿಲ್ಲದೆ ಯಜ್ಞಾದಿ ಕರ್ಮಗಳು ದೊಡ್ಡವಲ್ಲ. ಇವಿಷ್ಟೂ ಸಾಧನಗಳು ಹರಿಸೇವೆಗೆ ಅಂಗಭೂತಗಳು; ಮುಕ್ತಿಗೆ ಮುಖ್ಯಸಾಧನವಲ್ಲ. ಮುಖ್ಯಸಾಧನ ನಾರಾಯಣನ ಜ್ಞಾನದಿಂದ ಮುಕ್ತಿಯಾಗತದೆ. ಇದೇ ಪ್ರಕಾರ ಶ್ರುತಿಗಳಲ್ಲಿ ಹೇಳತವೆ. '**ಶೃಣ್ವೇ ವೀರ ಉಗ್ರಮುಗ್ರಂದವಾಯಮನ್ನನ್ಯಮನ್ಯಯಮತಿನೇ ನೀಯ-**

* ಬ್ರಹ್ಮದೇವರು ಸರ್ವಗುಣೋಪಾಸನೆ ಮಾಡುತ್ತಾರೆ ಎಂದರೆ, ತಮ್ಮ ಸ್ವರೂಪ ಸ್ವಭಾವದಿಂದ ಅವರು ಎಷ್ಟು ಗುಣ ಉಪಾಸನೆ ಮಾಡಬಹುದೋ, ಆ ಸರ್ವಗುಣಗಳನ್ನೂ ಉಪಾಸನೆ ಮಾಡುತ್ತಾರೆ. ಇತರ ಜೀವಿಗಳಾದರೋ ತಮ್ಮ ಸ್ವರೂಪ ಸ್ವಭಾವದಿಂದ ಮಾಡ ಬೇಕಾದ ಸರ್ವಗುಣಗಳನ್ನೂ ಉಪಾಸನೆ ಮಾಡಲು ಶಕ್ತರಲ್ಲ.

ಮಾನಃ.' ಶ್ರುತಿ ಏನಂತ ಕೊಂಡಾಡತದೆ. **'ಸ್ವಾಮಿ ನೀ ಅರಿಸು,** ಸ್ವಾಮಿ ನೀ ಹಿಡಿದ ಕೆಲಸ ಬಿಡೋವನಲ್ಲ' ಏನ್ನುತ್ತದೆ. ಸ್ವಾಮಿ ತಮೋಯೋಗ್ಯರಿಗೆ ಉಗ್ರದಂಡನೆ ಮಾಡತಿರಥಾನೆ. ಮುಕ್ತಿಯೋಗ್ಯರಿಗೆ ಮೋಕ್ಷ ಕೊಡಥಾನೆ. ಮಧ್ಯಸ್ಥರಾದಂಥ ಮನುಷ್ಯರೂ, ತಮ್ಮ ಸ್ವರೂಪ ಮೀರಿ ಏನು ತಪಸ್ಸು ಮಾಡತಿರಥಾರೆ, ಅದಷ್ಟೂ ಸ್ವಾಮಿ ಕೆಡಿಸಿಬಿಡಥಾನೆ. ಹೀಂಗೆ ವಿತ್ತಂಡಜೀವನಕ್ಕೆ ಸ್ವಾಮಿ ಅರಸು, ರಾಜಾಧಿರಾಜ. ನಿತ್ಯಸಂಸಾರಿಗಳಿಗೆ ಮೋಕ್ಷ ಕೊಡೋದಿಲ್ಲ, ತಮಸ್ಸೂ ಕೊಡೋದಿಲ್ಲ. ತಮೋಯೋಗ್ಯರು ಸ್ವಾಮಿ ಸೇವಾ ಮಾಡಿದರೆ, ಅವರ ಪೂಜೆ, ಸ್ವಾಮಿ ದೃಷ್ಟೀಲಿ ನೋಡಥಾನಲ್ಲದೆ, ಸ್ವೀಕಾರ ಮಾಡೋದಿಲ್ಲ. ಭಕ್ತರ ಪೂಜಾ ಬಹಳ ತ್ವರ್ಯಾದಿಂದ ಕೊಳ್ಳಥಾನೆ. ಅಕಳು ನೀರಡಿಸಿ ಹ್ಯಾಂಗೆ ಓಡತಾ ಬರತದೆ, ಹಾಂಗೆ ಮೋಕ್ಷಯೋಗ್ಯರ ಕೈಯಾ ಪೂಜಾ ಕೊಳ್ಳಬೇಕಾಗಿ ಸ್ವಾಮಿ, ಮಹಾತ್ವರ್ಯಾದಿಂದ ಬರಥಾನೆ. ಹೀಂಗೆ ಅನಂತಕಲ್ಪದಲ್ಲಿ ಚೇಷ್ಟಿ ನಡಸತಿರಥಾನೆ. ಇದಕ್ಕೆ ಅನ್ಯಥಾ ಸ್ವಾಮಿ ಮಾಡೋದಿಲ್ಲ. **'ತಸ್ಮೇವಂ ವಿದ್ವಾನಮೃತ ಇಹ ಭವತಿ ನಾನ್ಯಃ ಪಂಥಾ ಅಯನಾಯ ವಿದ್ಯತೆ.'** ಭಕ್ತ, ದಿವ್ಯಜ್ಞಾನ ಸಂಪಾದಿಸಿದ್ದರಿಂದ ಮೋಕ್ಷಕ್ಕೆ ಹೋಗಥಾನೆ. ಅನಾದಿಕಾಲ ಸಂಸಾರಸಮುದ್ರ ದಾಟಲಿಕ್ಕೆ ಭಕ್ತಿಯೆಂಬಂಥ ಮಾರ್ಗ, ಜ್ಞಾನವೆಂಬಂಥ ನಾವಿ. ನಾರಾಯಣನಲ್ಲಿ ಕೆಡಕವಿಲ್ಲದೆ ನಿರಂತರ ಭಕ್ತಿ ಮಾಡತಿರಬೇಕು. ನಾರಾಯಣನಲ್ಲಿ ಹ್ಯಾಂಗೆ ಭಕ್ತಿ ಮಾಡಬೇಕು, ಹಾಂಗೆ ಗುರುಗಳಲ್ಲಿ ಭಕ್ತಿ ಮಾಡಬೇಕು. ಗುರುಗಳಲ್ಲಿ ತಾರತಮ್ಯ ತಿಳೀಬೇಕು. ಭಕ್ತರಾದವರು ಒಂದು ಕರ್ಮದ ವಶದಿಂದ ಬ್ರಹ್ಮಹತ್ಯಾದಿ ಪಾಪಗಳ ಮಾಡಿದರೂ, ಸ್ವಾಮಿ ದಯಾಸಮುದ್ರ, ಅದಷ್ಟೂ ಕ್ಷಮಿಸಿಬಿಡಥಾನೆ. **'ಧರ್ಮಂ ಭವತ್ಯಧರ್ಮೋಪಿ',** ಸ್ವಾಮಿ ಭಕ್ತರಾದವರು ಏನು ಅನ್ಯಾಯ ಮಾಡಿದರೂ, ಅದೆಲ್ಲಾ ಧರ್ಮದೊಳಗೆ ಬೀಳತದೆ. ಅಭಕ್ತರು ಏನು ಧರ್ಮ ಮಾಡಲ್ಯಾಕೆ, ಅದಷ್ಟೂ ಅಧರ್ಮದೊಳಗೆ ಬೀಳತದೆ.

ಇನ್ನು ಹನ್ನೊಂದನೇ ಅಧ್ಯಾಯದಲ್ಲಿ ಗೀತಾವಾಕ್ಯ — **'ಭಕ್ತ್ಯಾ ತ್ವನನ್ಯಯಾ ಶಕ್ಯ'** — ಕೃಷ್ಣ ಅರ್ಜುನಗೆ ಅನ್ನತಾನೆ, 'ಕಾಮಾದಿ ವೈರಿಗಳನ್ನು ಕೊಲ್ಲುವಂಥ ಅರ್ಜುನ ನನ್ನಲ್ಲಿ ಭಕ್ತಿಮಾಡಿದವ ದೊಡ್ಡವ, ನನ್ನಲ್ಲಿ ಭಕ್ತಿ ಮಾಡಿದವ ಮೋಕ್ಷಾಧಿಕಾರಿ ಅಂತ ತಿಳೀಬೇಕು.' ಸಜ್ಜನರು ಅನಾದಿ ಕಾಲದಲ್ಲಿ ದೇವರಲ್ಲಿ ಭಕ್ತಿ ಮಾಡಥಾರೆ. ದೈತ್ಯರು ಅನಾದಿಕಾಲದಿಂದ ಸ್ವಾಮಿಯಲ್ಲಿ ದ್ವೇಷ ಮಾಡಥಾರೆ. ಸ್ವಾಮೀ ಕೂಡ ದ್ವೇಷ ಮಾಡಿದ್ದರಿಂದ, ದೈತ್ಯರು ತಮಸ್ಸಿಗೆ ಹೋಗಿ ಬೀಳಥಾರೆ. ಅಲ್ಲಿ ಘೋರವಾದಂಥ ಪೂರ್ಣ ದುಃಖ ಅನುಭವಿಸಥಾರೆ. ದುಃಖ ತಾ ಎಂಥಾದ್ದಂದರೆ, ತಮೋಯೋಗ್ಯ ಸ್ಥಾವರ ಜೀವದ ಒಂದು ತೃಣ ದುಃಖ ಹೇಳತಾನೆ—ಹತ್ತು ಮೊಳದ ಕಟ್ಟಿಗಿಯಿಂದ, ತೊಂಬತ್ತು ಅಳತಿ ಭೂಮಿಗೆ ಬೀಜ

ಎಂಬಂಥ ಮಾರ್ಗ, ಜ್ಞಾನವೆಂಬಂಥ ನಾವಿ. ನಾರಾಯಣನಲ್ಲಿ ಕೆಡಕವಿಲ್ಲದೆ

ಬಿತ್ತಿ, ಭೂಮಿ ಏನು ಬೆಳೆಯದೇ ಇರೋಣ, ಅರಮನೆಯ ಬಾಧೆ, ನಿರಂತರ ದುಃಖ, ದ್ರವ್ಯ ಹೋಗಲಾಡಿಸಿಕೊಂಡ ದುಃಖ, ಹೆಂಡರು ಮಕ್ಕಳು ಸತ್ತ ದುಃಖ, ತಾಯಿತಂದೇರು ಪುತ್ರಬಾಂಧವರು ಸತ್ತ ದುಃಖ, ಸರ್ಪ ಕಚ್ಚಿದ ದುಃಖ, ಚೇಳು ಕಚ್ಚಿದ ದುಃಖ, ಹೀಂಗೆ ಏಕಕಾಲದಲ್ಲಿ ಸರ್ವದುಃಖ ಆಗತಿರಬೇಕು. ಹೀಂಗೆ ಮನುಷ್ಯಾಧಮ ಆರಂಭಮಾಡಿ, ಕಲಿ ಪರಿಯಂತರ ದುಃಖ ಹೆಚ್ಚಿಗಿ ಅದೆ. ಮನುಷ್ಯೋತ್ತಮರ ಆರಂಭಮಾಡಿ, ಬ್ರಹ್ಮದೇವರ ಪರಿಯಂತರ ನವವಿಧಭಕ್ತಿ ಮಾಡಿದರ, ತಮೋಯೋಗ್ಯರು ಮನುಷ್ಯಾಧಮರ ಆರಂಭ ಮಾಡಿ, ಕಲಿ ಪರಿಯಂತರ ನವವಿಧದ್ವೇಷ ಮಾಡಥಾರೆ.) ನವವಿಧಭಕ್ತಿ ದಾವದು ಎಂದಲ್ಲಿ **'ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಮ್। ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಮ್॥'** ಹೀಂಗೆ ನವವಿಧಭಕ್ತಿ ಸಜ್ಜನರು ಅನಾದಿಕಾಲದಿಂದ ಮಾಡತಿರಥಾರೆ. (ತಮೋಯೋಗ್ಯರು ನವವಿಧದ್ವೇಷ ಮಾಡುವದು ದಾವದು ಎಂದಲ್ಲಿ, ಜೀವರು ಅಭೇದ; ದೇವರು ನಿರ್ಗುಣ, ನಿರಾಕಾರ; ದೇವರು ಅಪೂರ್ಣ; ನಾರಾಯಣಗೆ ಸಮತ್ವ; ದೇವರಿಗೆ ಅಧಿಕ (ಇದ್ದಾನೆ); ದೇವರ ಗುಣಕ್ಕೆ ದೇವರಿಗೆ ಭೇದ ತಿಳಿಯೋಣ; ಮೂಲರೂಪಕ್ಕೆ ಅವತಾರರೂಪಕ್ಕೆ ಭೇದ ತಿಳಿಯೋಣ; ಹರಿಭಕ್ತರ ನಿಂದಾ; ವಿಷ್ಣುಪ್ರತಿಪಾದಕಶಾಸ್ತ್ರನಿಂದಾ ಮಾಡೋಣ, ಈ ಪ್ರಕಾರ ನವವಿಧದ್ವೇಷ ಮಾಡಿದ್ದರಿಂದ ತಮಸ್ಸಿಗೆ ಹೋಗಿ ಬೀಳಥಾರೆ.) ಸಂಪೂರ್ಣ ದುಃಖ ಕಲಿಗೆ, ಮೋಕ್ಷದಲ್ಲಿ ಸಂಪೂರ್ಣ ಸುಖ ಬ್ರಹ್ಮದೇವರಿಗೆ. ನವವಿಧದ್ವೇಷರಹಿತವಾಗಿದ್ದಂಥಾದ್ದು ಅಚ್ಛಭಕ್ತಿ. ಅಶ್ವತ್ಥಾಮ ಮೊದಲಾಗಿ ಕೃಷ್ಣನ ವಾಕ್ಯ ಮೀರ್ಯಾನೆ, ವೇದವ್ಯಾಸನ ಆಜ್ಞಾ ನಡಿಸಿದ್ದಾನೆ. ಸ್ವಾಮೀ ಅವತಾರಕ್ಕೆ ಭೇದ ತಿಳಿಸ್ಯಾನೆ. ಆದಕಾರಣ ಮುಖ್ಯಜ್ಞಾನ ಸಂಪಾದಿಸಬೇಕು. ಜ್ಞಾನದಿಂದ ಭಕ್ತಿಯಾಗತದೆ, ಭಕ್ತಿಯಿಂದ ಸುಖವಾಗತದೆ. ಭಕ್ತಿ ಮಾಡಿದವರಿಗೆ ಸರ್ವಥಾ ದುಃಖವಿಲ್ಲ. ಬಿಳೇ ಆಕಳು, ಕರೇ ಆಕಳು ಆಗುವುದಿಲ್ಲ. ಭಕ್ತಿಯೊಳಗೆ ತಾರತಮ್ಯವದೆ. ಬ್ರಹ್ಮದೇವರು ಮಾಡುವಂಥ ಭಕ್ತಿ ರುದ್ರಾದಿಗಳಲ್ಲಿಲ್ಲ. ಭಕ್ತಿ ಬ್ರಹ್ಮಾದಿ ದೇವತೆಗಳಿಗೆ ತಾರತಮ್ಯಕವಾಗಿ ಅದೆ. ಭಕ್ತಿ ತಾರತಮ್ಯಾನುಸಾರ ಇರತದೆ. ನಾರಾಯಣನ ಪ್ರೀತಿಯಿಂದ ಮೋಕ್ಷವಾಗತದೆಂದು ಗ್ರಂಥಗಳಲ್ಲಿ ಹೇಳತವಲ್ಲ ಎಂದಲ್ಲಿ, ಭಕ್ತಿಯಿಂದ ನಾರಾಯಣನ ಪ್ರೀತಿಯಾಗತದೆ. ಸ್ವಾಮೀ ಪ್ರೀತಿಯಿಂದ ಮೋಕ್ಷವಾಗತದೆ. ದೇವತೆಗಳಿಗೆ, ಮೋಕ್ಷಾಧಿಕಾರಿಗಳಿಗೆ ಭಕ್ತಿಸಾಧನ. ದೈತ್ಯರಿಗೆ, ದ್ವೇಷಸಾಧನ. ಇನ್ನು, ಮನುಷ್ಯರಿಗೆ ಏನು ಸಾಧನ ಎಂದರೆ, ಮನುಷ್ಯರೊಳಗೆ ಮೂರು ಥಂಡ—ಉತ್ತಮ, ಅಧಮ, ಮಧ್ಯಮ. ಮನುಷ್ಯೋತ್ತಮರು ಮೋಕ್ಷಪ್ರಾಪ್ತಿಯುಳ್ಳವರು. ಮನುಷ್ಯಾಧಮರು ತಮಸ್ಸಿಗೆ ಯೋಗ್ಯರು. ಮಧ್ಯಮ ಮನುಷ್ಯರು ನಿತ್ಯಸಂಸಾರಿಗಳು, ಮಿಶ್ರಜ್ಞಾನಿಗಳು—ಸ್ವರ್ಗ ನರಕ ಮಿಶ್ರಫಲ

ಉಣ್ಣಥಾರೆ. ಹೀಂಗೆ ಮನುಷ್ಯರಲ್ಲಿ ಮೂರು ಥಂಡ ಹೇಳಿ, ಇನ್ನು ಭಕ್ತಿವಿಶೇಷ ಹೇಳಥಾರೆ.

ಪರಮಭಕ್ತಿ ಬ್ರಹ್ಮದೇವರಿಗೆ; ಗರುಡ, ಶೇಷ, ರುದ್ರ, ಇಂದ್ರಾದಿಗಳಲ್ಲಿ, ತಾರತಮ್ಯಾನುಸಾರ ಭಕ್ತಿ, ಕೊರತೆಯದೆ. ಈ ಪ್ರಕಾರ ನಾವು ಸ್ವಕಪೋಲಕಲ್ಪಿತ ಹೇಳಲಿಲ್ಲ. ಪುರಾಣವಾಕ್ಯಗಳನ್ನೇವೇ ಹೇಳಿದ್ದೇವೆ. ಆದಕಾರಣ ದೇವರಲ್ಲಿ ಭಕ್ತಿ ಮಾಡಬೇಕು, ಗುರುಗಳಲ್ಲಿ ಭಕ್ತಿ ಮಾಡಬೇಕು. ಗುರುವು ಎಂಥಾತನಾಗಿರಬೇಕೆಂದಲ್ಲಿ, ತತ್ತ್ವದಲ್ಲಿ ಸಂಶಯ ಇರಬಾರದು. ಲಕ್ಷಣೋತ್ತಮ ಗುರು ಇರಬೇಕು. ತನ್ನ ಬೆರಳಿನ ಅಂಗುಲದಲ್ಲಿ ತೊಂಭತ್ತಾರು, ಮೊಳದಲ್ಲಿ ನಾಲ್ಕು, ಪಾದದಲ್ಲಿ ಏಳು, ಹೀಂಗೆ ದೇಹದ ಎತ್ತರವಿರಬೇಕು. ಮೂವತ್ತೆರಡು ಲಕ್ಷಣ ಇರಬೇಕು. ಇಂಥಾತ ತನಗೆ ಮುಖ್ಯಗುರುವು. ಕಣ್ಣು, ಭುಜಗಳು, ಮೊಳಕಾಲು, ಮೂಗು ಇವೆಲ್ಲ ಉನ್ನತವಾಗಿರಬೇಕು. ತ್ವಗಿಂದ್ರಿಯ ಮೃದು ಇರಬೇಕು. ಕೈಬೆರಳು, ಕೈ ಉದ್ದ ಇರಬೇಕು. ಹಲ್ಲು ಸಣ್ಣವಿರಬೇಕು. ಅಂಗೈ ಅಂಗಾಲು ಥಾಳಾಗಿ, ರಕ್ತವರ್ಣಯುಕ್ತ ಇರಬೇಕು. ವಕ್ಷಸ್ಥಳ, ಹೆಗಲು, ಹಣೆ, ವಿಶಾಲ ಇರಬೇಕು. ಕಟಿಪ್ರದೇಶ ಸಣ್ಣದಿರಬೇಕು. ತೊಡೆ, ಕೊರಳು, ಲಿಂಗ ಇವು ಕಿರಿದಿರಬೇಕು. ಆತನ ಸ್ವರ ಗಂಭೀರ ಇರಬೇಕು. ಗುಂಭ ಹೊಕ್ಕಳಿರಬೇಕು. ಅಂತಃಕರಣ ಗಂಭೀರ ಇರಬೇಕು. ಹೀಂಗೆ ಮೂವತ್ತೆರಡು ಲಕ್ಷಣ ಬ್ರಹ್ಮದೇವರಂಗದೆ. ಈ ಲಕ್ಷಣ, ಲಕ್ಷಣಶಾಸ್ತ್ರದಲ್ಲಿ ಹೇಳೀದೆ. ರುದ್ರ, ಇಂದ್ರಾದಿಗಳಿಗೆ, ಈ ಲಕ್ಷಣ ಕೊರತೆಯದೆ. ಮನುಷ್ಯರಿಗೆ ಲಕ್ಷಣಗಳವೆ, ಅವಲಕ್ಷಣಗಳವೆ. ಸಂಪೂರ್ಣ ದುರ್ಲಕ್ಷಣ, ಕಲಿಗದೆ. ಸಂಪೂರ್ಣ ಸುಲಕ್ಷಣ ಬ್ರಹ್ಮರಾಯಗದೆ. ಇಂಥಾ ಲಕ್ಷಣೋತ್ತಮ ಗುರುವು ಸಜ್ಜನರಿಗೆ ಪ್ರಸನ್ನರಾಗಿ ಉಪದೇಶ ಮಾಡಥಾರೆ. ಗುರುದ್ವಾರದಿಂದ ನಾರಾಯಣ ಪ್ರಸನ್ನನಾಗತಾನೆ. ಆದಕಾರಣ ಗುರುಗಳ ತುಷ್ಟಿಬಡಿಸಬೇಕು. ಗುರುವು ಯಾತರಿಂದ ತುಷ್ಟಿಬಡತಾನೆಂದರೆ, ಸೇವೆಯಿಂದ ತುಷ್ಟನಾಗತಾನೆ, ದ್ರವ್ಯದಿಂದ ತುಷ್ಟನಾಗತಾನೆ. ಗುರುವು ತುಷ್ಟನಾಗಿ, ಶಿಷ್ಯನವ್ಯಾಲೆ ಅನುಗ್ರಹಮಾಡಿ ಏನು ಉಪದೇಶಮಾಡ್ಯಾನು, ಅದರಿಂದ ಬಹಳ ಫಲವಾಗತದೆ. ಗುರುಗಳ ಸೇವಾ ಮಾಡಿ, ಗುರುಗಳ ಅನುಗ್ರಹ ಸಂಪಾದಿಸೋಣ ಉತ್ತಮ. ದ್ರವ್ಯಕೊಟ್ಟು ಅನುಗ್ರಹ ಸಂಪಾದಿಸೋಣ ಮಧ್ಯಮ. ತನ್ನದೊಂದು ವಿದ್ಯ ಕೊಟ್ಟು, ತಾನು ಗುರುವಿನ ಕೈಯ ಸಂಪಾದಿಸೋಣ ನೀಚ. ಗುರುವು ಅಪೇಕ್ಷೆ ಉಳ್ಳವನಾಗಿ ಹೇಳಬಾರದು. ಶಿಷ್ಯ, ಶಠತನ ಮಾಡಬಾರದು. ತನ್ನ ಶಕ್ತಿ ಮೀರಿ ಗುರುಗಳ ಸೇವಾ ಮಾಡಬೇಕು. ತಾನು ಸ್ವರೂಪೋತ್ತಮ, ನೀಚನ ಉದರದಲ್ಲಿ ಹುಟ್ಟಿರತಾನೆಯಾದರೂ ಮರ್ಯಾದಾರ್ಥವಾಗಿ ತಾಯಿ-ತಂದೇರ ಸೇವಾ, ಗುರುಹಿರಿಯರ ಸೇವಾ ಮಾಡಬೇಕು. ಸ್ವರೂಪೋತ್ತಮರಿಗೆ ಯಾವರೀತಿ ಬಾಗಿರಥಾನೆ, ಅಂಥಾ ಪೂಜಾ ಮಾಡಲಿಕ್ಕೆ ಕಾರಣವಿಲ್ಲ. ಮುಖ್ಯ-

ಲಕ್ಷಣಗಳು ಬ್ರಹ್ಮದೇವರಲ್ಲವೆ. ಈ ಲಕ್ಷಣಗಳು ಪಾಂಚರಾತ್ರಾಗಮ ಪುರಾಣಗಳಲ್ಲಿ ಹೇಳೀವೆ. ಇಂಥಾ ಲಕ್ಷಣೋತ್ತಮ ಗುರುದ್ವಾರದಿಂದ ಸ್ವಾಮಿ ಪ್ರಸನ್ನನಾಗಿ, ಸಜ್ಜನರಿಗೆ ಸ್ವರೂಪ ಪ್ರಕಟಮಾಡಿಕೊಡಥಾನೆ. ಮುಕ್ತಿಯಲ್ಲಿ ಸ್ವಾಮಿಯನ್ನ ತಮ್ಮತಮ್ಮ ಯೋಗ್ಯತಾನುಸಾರ ಕಾಣಥಾರೆ. ಕೆಲವು ಮುಕ್ತರು ಸ್ವಾಮಿಯನ್ನ ಮಿಂಚಿನೋಪಾದಿ ಕಾಣಥಾರೆ. ಕೆಲವರು ಸೂರ್ಯಮಂಡಲೋಪಾದಿ ಕಾಣಥಾರೆ. ಕೆಲವರು ಕನ್ನಡಿಯೊಳಗೆ ಕಂಡಹಾಂಗೆ ಕಾಣಥಾರೆ. ಬ್ರಹ್ಮದೇವರಿಗೆ ಪ್ರತ್ಯಕ್ಷವಾಗಿ ಕಾಣಿಸಥಾನೆ. ಬಿಂಬಾಪರೋಕ್ಷೀಕರಿಸಿ ನಾರಾಯಣನ್ನ ಯಾವಾಗ ಕಾಣಥಾರೋ, ಆಗ್ಗೆ ಅವರ ಅನಿಷ್ಟ ಕೆಟ್ಟುಹೋಗತದೆ. ಅನಾದಿಕಾಲದ ಪಾಪ ಕೆಟ್ಟುಹೋಗತದೆ. ಅಪರೋಕ್ಷವಾದ ಮ್ಯಾಲೆ, ಶ್ರೀಷ್ಮಾಪರಾಧನ ಹೊರ್ತು ಅಷ್ಟೂ ಪಾಪ ಕೆಟ್ಟುಹೋಗತದೆ. ಸಂಚಿತವೂ ಕೆಟ್ಟುಹೋಗತದೆ. ಪ್ರಾರಬ್ಧಕರ್ಮ ಕೆಟ್ಟು ಹೋಗೋದಿಲ್ಲ. ಹೀಂಗೆ ಭವಿಷ್ಯತ್ಪರ್ವದಲ್ಲಿ ಹೇಳತದೆ. ಹಾಂಗೆ ಬ್ರಹ್ಮಸೂತ್ರ-ಭಾಷ್ಯದಲ್ಲಿ ಪ್ರಮಾಣಗಳವೆ. ಅಪರೋಕ್ಷಜ್ಞಾನಿಗಳಿಗೆ ಪಾಪದ ಲೇಪವಿಲ್ಲ. ಕಮಲದ ಎಲಿ ಉದಕದೊಳಗಿದ್ದರೂ, ಉದಕಲೇಪ ಹ್ಯಾಂಗೆ ಇಲ್ಲ ಹಾಂಗೆ, ಅಪರೋಕ್ಷ ಜ್ಞಾನಿಗಳಿಗೆ ಪಾಪದ ಲೇಪವಿಲ್ಲ. ಅಷ್ಟೂ ಪಾಪ ಸುಟ್ಟುಹೋಗತದೆ. ಅರಳಿರಾಶಿಗೆ, ಊಬಿನರಾಶಿಗೆ ಅಗ್ನಿ ಹಚ್ಚಿದರೆ ಹ್ಯಾಂಗೆ ಸುಟ್ಟುಹೋಗತದೋ ಹಾಂಗೆ, ಅಪರೋಕ್ಷ ಜ್ಞಾನಿಗಳ ಪಾಪ ಅಷ್ಟೂ ಸುಟ್ಟುಹೋಗತದೆ. ಈ ಪ್ರಕಾರ ಪಾಪಗಳನ್ನೆಲ್ಲಾ ಕೆಡಿಸಿಕೊಂಡು, ದೇವತೆಗಳೆಲ್ಲ ದೇವೇಂದ್ರನ್ನ ಐದಥಾರೆ. ದೇವೇಂದ್ರ ಶೇಷನ್ನ ಐದತಾನೆ. ಶೇಷ ಬ್ರಹ್ಮದೇವರನ್ನ ಐದಥಾನೆ. ಬ್ರಹ್ಮದೇವರು ಲಕ್ಷ್ಮೀದ್ವಾರದಿಂದ ನಾರಾಯಣನ್ನ ಐದಥಾರೆ. ಮುಕ್ತರು ನಿತ್ಯಸುಖವುಳ್ಳವರಾಗಿ ಸ್ವೇಚ್ಛೆಯಿಂದ ಸುಖ ಅನುಭವಿಸಥಾರೆ.

ಹೀಂಗೆ ಅನಂತ ದೇವತಾಗಣ, ಅನಂತ ಮೋಕ್ಷಗಳಲ್ಲಿ ಆನಂದ ಅನುಭವಿಸ ಥಾರೆ. ಇನ್ನು ಮನುಷ್ಯಾಧಮರಾರಂಭವಾಗಿ ಕಲಿಪರಿಯಂತರ, ದುಃಖಾಧಿಕವೇ ತಮಸ್ಸಿನಲ್ಲಿ ಅನುಭವಿಸಥಾರೆ. ಹೀಂಗೆ ಅನಂತಗುಣ ಬ್ರಹ್ಮದೇವರದು. ಹಾಂಗೆ ಕಲಿಅವಗುಣ ಅನಂತ. ಅಸುರರೊಳಗೆ ಯೋಗ್ಯತೆ ಗಣಗಳವೆ. ಸರ್ವಜೀವರ ನೋಡಲಿಕ್ಕೆ, ಬ್ರಹ್ಮದೇವರು ಬಹಳ ದೊಡ್ಡಾತ. ಇಂಥ ಬ್ರಹ್ಮದೇವರಿಗೆ ನಾರಾಯಣ ಆಶ್ರಯ. ಮುಕ್ತಿಯಲ್ಲಿ, ಸಂಸಾರದಲ್ಲಿ ಮುಖ್ಯಾಶ್ರಯ, ನಾರಾಯಣನೇವೆ. ಈ ನಾರಾಯಣನ ಮಹಿಮ, ಎಲ್ಲಿ ಹೇಳತದೆ ಎಂದರೆ, ಋಗಾದಿ ನಾಲ್ಕು ವೇದಗಳಲ್ಲಿ, ಪಾಂಚರಾತ್ರಾಗಮದಲ್ಲಿ, ಅಷ್ಟಾದಶ ಪುರಾಣಗಳಲ್ಲಿ, ಬ್ರಹ್ಮಸೂತ್ರದಲ್ಲಿ, ಭಾರತಾದಿ ಶಾಸ್ತ್ರಗಳಲ್ಲಿ ಹೇಳತದೆ. ಇದನ್ನೆಲ್ಲಾ ಸಾರಭೂತ ತೆಗೆದು, ಸಕಲ ಸಜ್ಜನರ ಮ್ಯಾಲೆ ಅನುಗ್ರಹಾರ್ಥವಾಗಿ, ನಾರಾಯಣನ ಆಜ್ಞಾದಿಂದ ಆನಂದತೀರ್ಥ ಮುನಿಗಳು ಸರ್ವಶಾಸ್ತ್ರ ಮಥನಮಾಡಿ, ಸಕಲ ಸಾರಭೂತ ಸಜ್ಜನರಿಗೆ ತಿಳಿಸ

ಬೇಕಾಗಿ ಹೇಳತಾರೆ. ಆನಂದತೀರ್ಥರು ಬಲೋನ್ನತಿಯುಳ್ಳವರು. ಸಕಲಶಾಸ್ತ್ರ-ನಿರ್ಣಯವಮಾಡಿ ಹೇಳಿದ್ದಾರೆ. ಶ್ರೀಮದಾಚಾರ್ಯರು ಮಾಡಿದ ಗ್ರಂಥ, ಹೃತ್ಕಮಲದಲ್ಲಿ ಬಚ್ಚಿಟ್ಟುಕೊಂಡು, ನಾರಾಯಣನು ಸರ್ವೋತ್ತಮನೆಂದು ತಿಳಿದ ಪಕ್ಷವೇ, ಅದರಿಂದ ಮೋಕ್ಷವಾಗುತ್ತದೆ. ಇಂಥ ಸಚ್ಛಾಸ್ತ್ರ, ಸಕಲಶಾಸ್ತ್ರ ಮಥನ ಮಾಡಿ ಹೇಳದೆ. ಹೇಳಿ ಕೇಳಿದ ಮಾತ್ರ ವೈಕುಂಠಲೋಕ ಪ್ರಾಪ್ತವಾಗತದೆ ಎಂಬಲ್ಲಿಗೆ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯವನ್ನು ಪ್ರಾಕೃತದಿಂದ ವಿವರಿಸುವ "ಸರ್ವಶಾಸ್ತ್ರಾರ್ಥನಿರ್ಣಯ" ಎಂಬ ಮೊದಲನೇ ಅಧ್ಯಾಯ ಸಂಪೂರ್ಣವು.

॥ ಶ್ರೀಮಧ್ವೇಶಾರ್ಪಣಮಸ್ತು ॥

ಅಧ್ಯಾಯ ೨

ಸುವಾಕ್ಯೋದ್ಧರಣ

ಈ ಎರಡನೇ ಅಧ್ಯಾಯದಲ್ಲಿ ನಾರಾಯಣ ಸರ್ವೋತ್ತಮನೆಂದು ಸಕಲ ಭಾರತಾದಿ ಸುವಾಕ್ಯಗಳನ್ನೇ ಹೇಳಿದ್ದಾರೆ. ಪ್ರಥಮಾಧ್ಯಾಯದಲ್ಲಿ ನಾರಾಯಣನ ಗುಣೋತ್ಕರ್ಷಣೆ ಹೇಳಿ, ಈ ಅಧ್ಯಾಯದಲ್ಲಿ, ಸ್ವಾಮಿ <u>ನಿರ್ದೋಷ, ಗುಣಪೂರ್ಣ</u> ನೆಂದು ಹೇಳಬೇಕಾಗಿ, ಶ್ರೀಮದಾಚಾರ್ಯರು ಮಂಗಳಾಚರಣೆ ಮಾಡತಾರೆ. ಭಾರತದ ಆದಿಪರ್ವ ಶ್ಲೋಕದಲ್ಲಿ ಶ್ರೀವೇದವ್ಯಾಸರು ಮಂಗಳಾಚರಣೆ ಮಾಡಿದ್ದಾರೆ.

ನಾರಾಯಣಂ ಸುರಗುರುಂ ಜಗದೇಕನಾಥವ್ ।
ಭಕ್ತಪ್ರಿಯಂ ಸಕಲಲೋಕ ನಮಸ್ಕೃತಂ ಚ ॥
ತ್ರೈಗುಣ್ಯವರ್ಜಿತಮಜಂ ವಿಭುಮಾದ್ಯಮೀಶವ್ ।
ವಂದೇ ಭವಘ್ನಮಮರಾ ಸುರ ಸಿದ್ಧ ವಂದ್ಯವ್ ॥

~~ಈ ಮಂಗಳಾಚರಣೆ ಅರ್ಥವೇನಿದಯ್ಯೋ ಅದರಪ್ಪಂದೆ ಅರ್ಥ ಹೊಂದಿಬಾಹೋ~~ ಹಾಂಗೆ, ಆನಂದತೀರ್ಥರು ತಾವು ಮಂಗಳಾಚರಣೆ ಮಾಡಿದ್ದಾರೆ.

ಜಯತಿ ಹರಿರಚಿಂತ್ಯಃ ಸರ್ವದೇವೈಕವಂದ್ಯಃ ।
ಪರಮಗುರುರಭೀಷ್ಟಾವಾಪ್ತಿದಃ ಸಜ್ಜನಾನಾವ್ ॥
ನಿಖಿಲಗುಣಗಣಾರ್ಣೋ ನಿತ್ಯನಿರ್ಮುಕ್ತದೋಷಃ ।
ಸರಸಿಜನಯನೋಽಸೌ ಶ್ರೀಪತಿರ್ವಾನದೋ ನಃ ॥

ಸ್ವಾಮಿ ಅಚಿಂತ್ಯಮಹಿಮ, ದಾವಾಗಲೂ ಉತ್ಕೃಷ್ಟನಾಗಿ ಜಯಿಸತಿರಥಾನೆ. ಸ್ವಾಮಿ ಮುಕ್ತಾಮುಕ್ತ ಜಗದ ಕೈಯ ವಂದಿಸಿಕೊಳ್ಳಥಾನೆ. ಇಂಥಾ ಜಗದೇಕ-ನಾಥ ಭಕ್ತರಿಗೆ ಬಹಳ ಪ್ರಿಯ. ಕಮಲದೋಪಾದಿ ಕಣ್ಣು ಚಲ್ವಿಕೆ ಉಳ್ಳಾತ. ಸ್ವಾಮಿಗೆ ಗರ್ಭವಾಸ ದುಃಖವಿಲ್ಲ, ಸಕಲ ಗುಣಸಮುದ್ರ. ಇಂಥಾ ಸ್ವಾಮಿಗೆ ಶರಣುಹೋಗೋಣ ಪರಮಧರ್ಮ. ಸಜ್ಜನರಿಗೆ ಅಭೀಷ್ಟ ಕೊಡೋವಲ್ಲಿ ಕಾಮ-ಧೇನು. ಇಂಥಾ ಸ್ವಾಮಿ ನಮಗೆ ಜ್ಞಾನ ಪ್ರಕಾಶಮಾಡಿ ಕೊಡಲಿ, ಹೀಂಗಂತ ಮಂಗಳಾಚರಣ ಮಾಡಿ ಸಕಲ ಸಜ್ಜನರ ಬುದ್ಧಿ ಅನುಕೂಲಮಾಡಿಕೊಡಬೇಕಾಗಿ, ಹಿಂದಿನ ಅಧ್ಯಾಯಕ್ಕೆ ಅನುಕೂಲ ಹಚ್ಚಿ ಹೇಳಥಾರೆ.

ಮೊದಲನೇ ಅಧ್ಯಾಯದಲ್ಲಿ ನಾರಾಯಣನ ಗುಣೋತ್ಕರ್ಷಣೆ ಹೇಳೋವಲ್ಲ್ಲೆ, ಆನಂದತೀರ್ಥರಿಗೆ ಬಹಳ ತಾತ್ಪರ್ಯವಿತ್ತು. ಈ ಅಧ್ಯಾಯದಲ್ಲಿ ನಿರ್ದೋಷ-

ಗುಣಪೂರ್ಣತ್ವ ಉಪಪಾದಿಸುತ್ತಾರೆ. ಭಾರತವಾಕ್ಯ ಇರಲಿಕ್ಕೆ, ತಾವೇನು ಕಾರಣ ಹೇಳಬೇಕು ಎಂದಲ್ಲಿ, ಭಾರತದಲ್ಲಿ ವೇದವ್ಯಾಸರು ಹೇಳದಂಥಾದ್ದನ್ನು, ಕವಿತಾ-ಪ್ರಾತುರ್ಯ ಬಲ್ಲವರು ಗ್ರಂಥಗಳು ಮಾಡಿ, ಭಾರತದಲ್ಲಿ ಹಾಕಿ, ವೇದವ್ಯಾಸರು ಹೇಳಿದಂಥಾದ್ದನ್ನು ತೆಗೆದುಬಿಟ್ಟಾರೆ. ಏನುಕಾರಣ ತೆಗೆದುಬಿಟ್ಟಾರೆಂದಲ್ಲಿ, ವ್ಯಾಸರ ಗುಟ್ಟು ತಿಳಿಯದ ಕಾರಣ ತೆಗೆದುಬಿಟ್ಟಾರೆ. ವೇದವ್ಯಾಸರು ಆದಿಭಾಗದಲ್ಲಿ ಹೇಳಿದಂಥಾದ್ದು ಕಡೇಲಿ ಹೇಳಥಾರೆ. ಕಡೇಲಿ ಹೇಳಿದಂಥಾದ್ದು ಮೊದಲಿಗೇ ಹೇಳಥಾರೆ. ಅವೈಷ್ಣವರು, ನಾರಾಯಣನ ಗುಣೋತ್ಕರ್ಷಣೆ, ಭಾರತದಲ್ಲಿ ಇರಬಾರದೆಂದು ತೆಗೆದುಬಿಟ್ಟಾರೆ. ಈ ಪ್ರಕಾರ ಭಾರತ ವ್ಯತ್ಯಾಸವಾಗಿಯದೆ. ಒಂದಕ್ಕೊಂದು ಸಂಗತಿ ಕೂಡೋಲ್ಲ. ಆದಕಾರಣ ಭಾರತದಲ್ಲಿ ಬಲು ವಿಪರೀತವಾಗೇದೆ.

"ಭಾರತಾರ್ಥ ದೇವತೆಗಳಿಗೆ ಮೊದಲಾಗಿ ದುರ್ಗಮಾರ್ಥವಾದಕಾರಣ, ವೇದವ್ಯಾಸರು ನನಗೆ ಆಜ್ಞಾಪಿಸಿದ್ದಾರೆ. ಏನಂತ ಎಂದರೆ 'ನಾ ಮಾಡಿದಂಥ ಅರವತ್ತುಲಕ್ಷ ಭಾರತಶ್ಲೋಕ, ದೇವಲೋಕ, ಗಂಧರ್ವಲೋಕ, ಋಷಿಲೋಕಕ್ಕೆ ವಿಭಾಗವಾಗಿ ಹೋಗಲಿಕ್ಕೆ, ಒಂದುಲಕ್ಷ ಶ್ಲೋಕ ಮನುಷ್ಯಲೋಕದಲ್ಲಿ ಉಳಿಯಿತು. ಅಸಜ್ಜನರಿಂದ ವಿಲುಲಿತವಾಗೇದೆ. ಸಜ್ಜನರಿಗೆ ಭಾರತಾರ್ಥ ಸ್ಪಷ್ಟವಾಗಿ ತಿಳಿಯೋದಿಲ್ಲಾದಕಾರಣ, ಮಹಾಭಾರತ ಸಜ್ಜನರಿಗೆ ನಿರ್ಣಯಮಾಡಿಕೊಡು' ಹೀಂಗಂತ ವೇದವ್ಯಾಸರು ಹೇಳಿದ್ದಾರೆ. ಆದಕಾರಣ ನಮ್ಮ ಸ್ವಾಮಿ ವೇದವ್ಯಾಸರ ಆಜ್ಞೆ ಶಿರಸಾವಹಿಸಿಕೊಂಡು, ಸ್ವಾಮೀ ಅನುಗ್ರಹಕ್ಕೆ ನಾವು ಪಾತ್ರರಾದಕಾರಣ ಸಕಲ ಭಾರತಾರ್ಥ ಹೇಳಥೇವೆ. ದೇವತೆಗಳಿಗೆ ದುರ್ಗಮಾರ್ಥ, ನೀವೇನು ಬಲ್ಲಿರಿ ಎಂದಲ್ಲಿ, ಅವರ ಅನುಗ್ರಹದಿಂದ ಸಕಲ ಶಾಸ್ತ್ರವೇದಾರ್ಥ ನಾವು ಬಲ್ಲೆವು. ದೇಶದೇಶಗಳಲ್ಲಿ ಗ್ರಂಥಗಳವೆ. ಹಾಂಗೆ. ಪುಣ್ಯಭೂಮಿಯಲ್ಲಿ, ಬದರಿಕಾಶ್ರಮದಲ್ಲಿ, ತಂತ್ರಭಾಗವತ ಮೊದಲಾದ ಗ್ರಂಥಗಳವೆ. ಸಾಕ್ಷಾತ್ ನಾರಾಯಣ ಮಾಡಿದಂಥ ಗ್ರಂಥ ಅಪಾರವೆ. ಸಕಲಶಾಸ್ತ್ರನಿರ್ಣಯಶಬ್ದ ಸ್ವಲ್ಪ, ಅರ್ಥ ಬಾಹುಳ್ಯ, ಅಂಥಾದೊಂದು **ಶ್ರೀಮನ್ ಮಹಾಭಾರತತಾತ್ಪರ್ಯನಿರ್ಣಯ** ನಾವು ಹೇಳಥೇವೆ. ನೋಡಿದರೆ ಅಲ್ಪ-ಗ್ರಂಥವಾದರೂ, ಸರ್ವಶಾಸ್ತ್ರನಿರ್ಣಯಮಾಡಿ ಹೇಳಥೇವೆ."

ಬ್ರಹ್ಮಾದಿ ದೇವತೆಗಳು ವೇದವ್ಯಾಸರನ್ನು ಕೇಳಿದರು — ಪರೀಕ್ಷೆ ಮಾಡ-ಬೇಕಾಗಿ. ರತ್ನದರಾಶಿ ಪ್ರತಿನಿಧಿರತ್ನವನ್ನೇರಿಸಿಟ್ಟು ತೂಕಮಾಡಿ ನೋಡಲಿಕ್ಕೆ ಭಾರತ ಹೆಚ್ಚಿತ್ತು. ಭಾರತ ಭಾರವುಳ್ಳದ್ದಾಯಿತೆಂದು **ಮಹಾಭಾರತ**ವೆಂದು ಕರೆದರು. ಭಾರತದಲ್ಲಿ ಬ್ರಹ್ಮಾದಿ ದೇವತಗಳಿಗೆ ನಾರಾಯಣನ ವಶತ್ವ ಹೇಳೀದೆ. ಅವತಾರದಲ್ಲಿ ಕೃಷ್ಣನ ವಶ, ಪಾಂಡವರಾಗಿದ್ದಾರೆ. ಕೃಷ್ಣ-ಪಾಂಡವರ ಮಹಿಮೆ ವೇದವ್ಯಾಸರು ಭಾರತದಲ್ಲಿ ಹೇಳಿದ್ದಾರೆ. ಬ್ರಹ್ಮರುದ್ರರೂಪನಾದಂಥ ಶುಕಾಚಾರ್ಯಗೆ ಜ್ಞಾನ ಹೆಚ್ಚಿಸಿಕೊಟ್ಟಿದ್ದಾರೆ. ಶುಕಾಚಾರ್ಯ ರುದ್ರಾವತಾರ. ಬ್ರಹ್ಮದೇವರ ಪದವಿ

ಬಾಹೋಂಥ ವಾಯುದೇವರ ಆವೇಶವಪೆ. ಆದಕಾರಣ ಬ್ರಹ್ಮರುದ್ರರೂಪನಾದಂಥ ಶುಕನೆಂತ ಹೇಳತಪೆ. ನಾರಾಯಣ ಅಸುರಲೋಕವನ್ನೆಲ್ಲ ಮರ್ದಿಸಬೇಕಾದರೆ ಮುಖ್ಯಪ್ರಾಣ ಅಂಗಭೂತನಾಗಥಾನೆ. ನಾರಾಯಣ ಕೃಷ್ಣಾವತಾರ ಮಾಡಿ, ಭೂಭಾರ ಇಳಿಸಬೇಕೆಂದು ಇಚ್ಛೆಮಾಡಿದರೆ, ಮುಖ್ಯಪ್ರಾಣನವತಾರನಾದಂಥ ಭೀಮಸೇನ, ಪ್ರಧಾನಾಂಗಭೂತನಾದಕಾರಣ, ಜರಾಸಂಧ, ಕೀಚಕ, ಬಕಾಸುರ, ಕಿರ್ಮೀರ, ಹಿಡಿಂಬ ಮೊದಲಾದ ರಾಕ್ಷಸರ ಕೊಂದಾನೆ.

ದೇವತೆಗಳು ನಾರಾಯಣಾಂಗಭೂತರಾಗಿ ಸೇವೆಮಾಡಬೇಕೆಂದು, ಕ್ಷತ್ರಿಯರಾಗಿ ಹುಟ್ಟಿದ್ದಾರೆ. ಕ್ಷತ್ರಿಯರೊಳಗೆ ಬಲಜ್ಯೇಷ್ಠ, ದೊಡ್ಡಾತ. ಅಂಥಾ ಬಲಜ್ಯೇಷ್ಠ ವಿಷ್ಣುಕಾರ್ಯಕ್ಕೆ ಅನುಕೂಲನಾಗಿ ಇದ್ದವ, ದೇವತೆಯಂತ ತಿಳಿಯಬೇಕು. ನಾರಾಯಣನ ಕಾರ್ಯಕ್ಕೆ ಅನುಕೂಲವಿಲ್ಲದವನ ಬಲಜ್ಯೇಷ್ಠತ್ವ ಕೊಂಡು ಏನು ಮಾಡಲಿಕ್ಕೆ! ಅಶ್ವತ್ಥಾಮ ರುದ್ರಾವತಾರ, ಅರ್ಜುನನ್ನ ನೋಡಲಿಕ್ಕೆ ದೊಡ್ಡವ. ಅರ್ಜುನನಲ್ಲಿ ಸ್ವಾಭಾವಿಕಬಲವಿದ್ದಿಲ್ಲ. ವಿಷ್ಣುಕಾರ್ಯಕ್ಕೆ ಅಂಗಭೂತನಾಗಬೇಕೆಂದು ಅರ್ಜುನನಲ್ಲಿ ಆವೇಶಬಲ ಇಹೋದು, ವರದಬಲ ಇಹೋದು. ಬಲಜ್ಯೇಷ್ಠ, ಗುಣಜ್ಯೇಷ್ಠ, ಭಕ್ತಿಜ್ಞಾನದಿಂದ ನಾರಾಯಣಗೆ ಅನುಕೂಲನಾಗಿ ದಾರು ಇರಥಾರೆ, ಅವಗು ದೇವತೆಗಳಂತ ತಿಳಿಯಬೇಕು. ದೈತ್ಯರಿಗೆ ಭಕ್ತಿ, ಜ್ಞಾನ, ಗುಣಗಳು ಇಹೋದಿಲ್ಲ. ದ್ರೋಣಾಚಾರ್ಯ ಬೃಹಸ್ಪತ್ಯವತಾರ, ಬ್ರಹ್ಮದೇವರ ಆವೇಶವಪೆ, ಸ್ವಾಭಾವಿಕ ಬಲವಿಲ್ಲ. ದ್ರೋಣ ಬ್ರಾಹ್ಮಣನಾದರೂ ಕ್ಷತ್ರಿಯವೃತ್ತಿ ಅಂಗೀಕಾರ ಮಾಡಿದ. ಕೇಶವಗೆ ಅಂಗಭೂತರಾದರೆ, ಬಲಜ್ಯೇಷ್ಠರು ಜ್ಞಾನ, ಭಕ್ತಿ, ಗುಣವುಳ್ಳವರೆಂತ ತಿಳೀಬೇಕು. ಸ್ವಾಮಿ ತಾ ಅವತಾರಮಾಡಿ ಬಲವೀರ್ಯ ತೋರಿಸಿದ್ದಾನೆ. ಕೃಷ್ಣರಾಮರೂಪಾವತಾರಮಾಡಿ, ದೈತ್ಯರ ಹತಮಾಡಿ ಭೂಭಾರ ಇಳುಹಿದ್ದಾನೆ. ಬರೇ ಅವತಾರ, ಜ್ಞಾನಕಾರ್ಯವಲ್ಲವೆಂದು ತಿಳಿಯಬಾರದು. ಜ್ಞಾನೋಪದೇಶ ಮಾಡಲಿಕ್ಕೆ ಸರ್ವಸಮರ್ಥ. ದತ್ತಾತ್ರೇಯ, ವೇದವ್ಯಾಸ, ಕಪಿಲಾವತಾರ ಮೊದಲಾದ್ದು ಜ್ಞಾನಕಾರ್ಯಕ್ಕೆ ಅವತಾರಗಳು. ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ, ವಾಮನ, ಭಾರ್ಗವ, ರಾಮ, ಕೃಷ್ಣ, ಬುದ್ಧ, ಕಲ್ಕಿ, ವೇದವ್ಯಾಸ, ಕಪಿಲ, ದತ್ತಾತ್ರೇಯ, ಶಿಂಶುಮಾರ, ಯಜ್ಞನಾಮಕ ನಾರಾಯಣ, ಯವುದೇವರ ಹೆಂಡತಿ ಮೂರ್ತೀದೇವಿಯಲ್ಲಿ ಮೂರು ಅವತಾರ—ನಾರಾಯಣ, ಹರಿ, ಕೃಷ್ಣ ಹೀಂಗೆ—ತಾಪಸನನು, ಗಜೇಂದ್ರನ ಮೋಕ್ಷ ಮಾಡಿದ್ದಾನೆ (ಇದಕ್ಕಾಗಿ ಆದ ಅವತಾರ.) ಮಹಿದಾಸಾವತಾರ ಇತರಾದೇವಿಯಲ್ಲಿ, ಹಂಸಾವತಾರ, ನಾರಾಯಣೀ, ಹಯಶೀರ್ಷ, ವಡವಾವಕ್ತ್ರರೂಪ—ಸಮುದ್ರದೊಳಗೆ ಇದ್ದಾನೆ—ಕಲ್ಕಿ, ಧನ್ವಂತರಿ, ಪರಮಪುರುಷಾವತಾರ ಮೊದಲಾದ ಸಾಕ್ಷಾತ್ ನಾರಾಯಣನ ಅವತಾರಗಳು ಬಹಳವೆ. ಗುಣಗಳಿಂದ, ಬಲ, ಜ್ಞಾನಗಳಿಂದ ಸಮ, ಹೆಚ್ಚು ಕೊರತಿ ಲೇಶಮಾತ್ರ ಇಲ್ಲ.

ಇನ್ನು, ಆವೇಶ ಅವತಾರಗಳು ಹೇಳಥಾರೆ. ಶ್ರೀ, ಬ್ರಹ್ಮ, ರುದ್ರ, ಶೇಷ, ಗರುಡ, ಇಂದ್ರ, ಕಾಮ, ಕಾಮಪುತ್ರ ಅನಿರುದ್ಧ, ಸೂರ್ಯ, ಚಂದ್ರ, ಬೃಹಸ್ಪತಿ, ಯಮಧರ್ಮ, ಹಾಂಗೇ ಇವರ ಹೆಂಡತಿಯರು—ಸರಸ್ವತೀ, ಭಾರತೀ ಸೌಪರ್ಣೀ, ವಾರುಣೀ, ಪಾರ್ವತೀ ಮೊದಲಾದ ಸ್ತ್ರೀಯರಲ್ಲಿ ಆವೇಶ ಅವತಾರ. ದಕ್ಷ-ಪ್ರಜೇಶ್ವರ, ಕರ್ದಮಪ್ರಜೇಶ್ವರ, ಹದಿಮೂರು ಮನುಗಳು, ಮನುಪುತ್ರರು, ಪ್ರಿಯವ್ರತರಾಯ, ಉತ್ತಾನಪಾದರಾಯರಲ್ಲಿ, ಹೀಂಗೆ ಉಳದಂಥ ಮನುಮಕ್ಕಳಲ್ಲಿ ಆವೇಶ ಅವತಾರ. ಸಪ್ತಋಷಿಗಳಲ್ಲಿ, ನಾರದಋಷಿ, ಪರ್ವತಋಷಿ (ಅಥವಾ ಹಿಮವಂತಪರ್ವತನಲ್ಲಿ), ಕಶ್ಯಪನಲ್ಲಿ, ಸನಕ, ಸನಂದನ ಮೊದಲಾದ ನಾಲ್ವರಲ್ಲಿ, ಅಗ್ನ್ಯಾದಿ ದಿಕ್ಕುಗಳಲ್ಲಿ, ಹಾಂಗೇ ದುಷ್ಯಂತ, ಭರತನಲ್ಲಿ, ಕಾರ್ತವೀರ್ಯಾರ್ಜುನನಲ್ಲಿ, ಗಯರಾಯನಲ್ಲಿ, ಲಕ್ಷ್ಮಣನಲ್ಲಿ, ಭರತ-ಶತ್ರುಘ್ನರಲ್ಲಿ, ರೋಹಿಣೀನಂದನ ಬಲರಾಮನಲ್ಲಿ, ಪ್ರದ್ಯುಮ್ನನಲ್ಲಿ, ಈತನ ಮಗ ಅನಿರುದ್ಧನಲ್ಲಿ, ಅರ್ಜುನ ಮೊದಲಾದವರಲ್ಲಿ ವಿಶೇಷ ಆವೇಶವದೆ, ವಾಲಿ, ಸಾಂಬರಲ್ಲಿ ಕಿಂಚಿದಾವೇಶ. ನಾರಾಯಣನ ಅನುಗ್ರಹದಿಂದ, ಸ್ವಾಭಾವಿಕ ಬಲ ಉಳ್ಳಾತ ಅಂಗಭೂತಕ್ಕೆ ಸಾಧನ. ರಾಮಾವತಾರದಲ್ಲಿ ಹನುಮಂತ, ಕೃಷ್ಣಾವತಾರದಲ್ಲಿ ಭೀಮಸೇನ, ಅಂಗಭೂತನಾಗ್ಯಾನೆ, ಭೀಮಸೇನನೇ ಭಾವಿಬ್ರಹ್ಮ. ವಾಯುದೇವರ ಹೊರ್ತು, ಬ್ರಹ್ಮಪದವಿಗೆ ದಾರೂ ಬಾಹೋದಿಲ್ಲ. ಋಜುಗಣದವರು ಜೀವೋತ್ತಮರು, ದೇವರಲ್ಲಿ ಬಹಳ ಭಕ್ತಿ ಉಳ್ಳವರು. ದೇವರಲ್ಲಿ ದ್ವೇಷಮಾಡೋವರು ಅಭಕ್ತರು, ತಮೋಯೋಗ್ಯರು.

ಹೀಂಗೆ ಪುರುಷರ ತಾರತಮ್ಯ ಹೇಳಿ, ಇನ್ನು ಸ್ತ್ರೀಯರ ತಾರತಮ್ಯ ಹೇಳತಾರೆ. ಸ್ತ್ರೀಯರಿಗೆ ಪುರುಷರಪ್ಪಂದೆ ಬಲವಿಲ್ಲ, ಜ್ಞಾನವಿಲ್ಲ. ಸುಂದರತನದಲ್ಲಿ ದೊಡ್ಡವರೆಂದು ತಿಳಿಯಬೇಕು. ರೂಪ, ಲಾವಣ್ಯ ವರಾವೇಶದಿಂದ ಬಂದಿರತದೆ. ಅದ್ದರಿಂದ ದೊಡ್ಡವರೆಂದು ತಿಳಿಯಬಾರದು. ಸ್ವಾಭಾವಿಕ ಸುಂದರತ್ವ ಇರಬೇಕು. ಜ್ಞಾನ, ಭಕ್ತಿಯಿಂದ ದೊಡ್ಡವರಾಗಿರಬೇಕು. ಸ್ತ್ರೀಯರು ಯುದ್ಧಮಾಡಿ ತಮ್ಮ ಬಲ ತೋರಿಸೋದಿಲ್ಲ. ತಮ್ಮ ಜ್ಞಾನಬಾಹುಳ್ಯ ತೋರಿಸೋದಿಲ್ಲ. ಸ್ತ್ರೀಯರಿಗೆ ಬಲ, ಜ್ಞಾನವಿಲ್ಲದಮ್ಯಾಲೆ, ತಾರತಮ್ಯ ಹ್ಯಾಂಗೆ ತಿಳಿಯಬೇಕು ಎಂದಲ್ಲಿ, ಸ್ತ್ರೀಯರ ತಾರತಮ್ಯ ಸೂಕ್ಷ್ಮದೃಷ್ಟಿಯಿಂದ ಜ್ಞಾನಿಗಳು ತಿಳಿಯುತ್ತಾರೆ. ಸ್ಥೂಲದೃಷ್ಟಿಯವರು, ಸೌಂದರ್ಯತನದಮ್ಯಾಲೆ ದೊಡ್ಡವರೆಂತ ತಿಳಿಯುತ್ತಾರೆ. ಸ್ತ್ರೀಯರಲ್ಲಿ ಸೌಂದರ್ಯತ್ವ ಕೆಲಸಕ್ಕೆ ಬಾರದು, ಲಕ್ಷಣಗಳಿರಬೇಕು, ಭಕ್ತಿಗುಣಗಳಿರಬೇಕು. ಸ್ತ್ರೀಯರಿಗೆ ರೂಪಲಾವಣ್ಯ, ವರಬಲದಿಂದ ಬಂದಿರತದೆ. ವರಾವೇಶದಿಂದ ಚೆಲುವಿಕೆ ಬಂದಿರತದೆ. ತ್ರಿಜಟೆ, ಪಾರ್ವತೀವರಾವೇಶದಿಂದ ಸುಭದ್ರೆಯಾಗಿ, ರೂಪದಿಂದ ಚೆಲ್ವಿಯಾಗಿ ಹುಟ್ಟಿದ್ದಾಳೆ. ಊರ್ವಶೀವೇಶದಿಂದ ಪೂತನೀ, ಸುಂದರರೂಪ ಧರಿಸಿ ಬಂದಿದ್ದಾಳೆ. ಅಂಥಾವೆಲ್ಲ ವರಾವೇಶದಿಂದ ಚೆಲ್ವತನ ಬಂದಿರತದೆ.

ಸ್ತ್ರೀಯರಿಗೆ ಸ್ವಾಭಾವಿಕದಿಂದ ಚೆಲ್ವತನವಿರಬೇಕು. ಹೆಂಗಸರೊಳಗೆ ರೂಪದಿಂದ, ಗುಣದಿಂದ, ಔದಾರ್ಯತ್ವದಿಂದ ದೊಡ್ಡವರು, ಸಾಕ್ಷಾತ್ ಲಕ್ಷ್ಮೀದೇವಿ. ಹಾಂಗೆ ಲಕ್ಷ್ಮೀ ಅವತಾರ ಸೀತಾದೇವಿ, ರುಕ್ಮಿಣೀ, ಸತ್ಯಭಾಮೆ, ಜಯಂತೀ ಮೊದಲಾದ ರೂಪಗಳು ದೊಡ್ಡವು. ಅದರ ತರುವಾಯ ಸರ್ವ ಜೀವರಿಗೆಲ್ಲ ದೊಡ್ಡಾಕಿ, ಜ್ಞಾನ-ಭಕ್ತಿಗಳಿಂದ ಅಧಿಕಳು, ಸರ್ವಸ್ತ್ರೀಯರ ನೋಡಲಿಕ್ಕೆ, ಭೀಮಸೇನನ ಹೆಂಡತಿ ದ್ರೌಪದೀ, ಲಕ್ಷ್ಮೀದೇವಿಗಿಂತ ನೀಚಳು. ದ್ರೌಪದೀದೇವಿ ಭೂಭಾರ ಇಳಹಲಿಕ್ಕೆ ಕಾರಣಳಾಗಿದ್ದಾಳೆ. ಭೀಮಸೇನ ಹ್ಯಾಂಗೆ ಅಂಗಭೂತನಾಗಿದ್ದಾನೋ ಹಾಂಗೆ, ದ್ರೌಪದೀ ಅಂಗಭೂತಳಾಗ್ಯಾಳೆ. ಇದರಿಂದ ಭೀಮ, ದ್ರೌಪದಿ ಸಮರಾದರೆಂದಲ್ಲಿ, ಭೀಮಸೇನ ಪಾಪಿಗಳ ಕೂಡ ವೈರತನ ಮಾಡ್ಯಾನೆ. ಪಾಪಿಗಳನ್ನ ವಿನಾಶಮಾಡ್ಯಾನೆ. ದ್ರೌಪದೀ ವೈರತನಕ್ಕೆ ಕಾರಣಳಾಗ್ಯಾಳೆ. ದ್ರೌಪದೀ ವೈರತನದಿಂದ ದುರ್ಯೋ-ಧನಾದಿಗಳು ವಿನಾಶರಾಗಿದ್ದಾರೆ. ಕೃಷ್ಣಾವತಾರದಲ್ಲಿ ಭೂಭಾರ ಇಳಹಲಿಕ್ಕೆ, ದೇವರ ಅಂಗಭೂತ ಸಹಾಯ ದಾರು ದಾರು ಆಗಿದ್ದಾರೆಂದು ಪ್ರಸಂಗಸಂಗತಿಯಿಂದ ಹೇಳಥಾರೆ. ದ್ರೌಪದೀ ತರುವಾಯ ಬಲರಾಮ ಅಂಗಭೂತ. ಅದರ ತರುವಾಯ ಅರ್ಜುನನ್ನ ಹೇಳಿದ್ದಾರೆ. ಅಶ್ವತ್ಥಾಮನ್ನ ಹೇಳೋದು ಬಿಟ್ಟು, ಅರ್ಜುನನ್ನ ಏನು ಕಾರಣ ಹೇಳಬೇಕು ಎಂದಲ್ಲಿ, ಅರ್ಜುನನಲ್ಲಿ ನರಾವೇಶವದೆ. ಹಾಂಗೆ ಅಶ್ವತ್ಥಾಮ, ದ್ರೋಣಾದಿಗಳು ಅಂಗಭೂತರೆಂತ ಹೇಳಿ, ಸಿಂಹಾವಲೋಕನದಿಂದ, ಬಲರಾಮನ ನೋಡಲಿಕ್ಕೆ, ಪರಮಪ್ರಿಯರು ಷಣ್ಮಹಿಷಿಯರು — ಜಾಂಬವತೀ, ಭದ್ರಾದೇವಿ, ಮಿತ್ರವಿಂದಾದೇವಿ, ಲಕ್ಷಣಾದೇವಿ, ನೀಲಾದೇವಿ, ಕಾಳಿಂದೀದೇವಿ. ಈ ಮುಂದಿ ನೋಡಲಿಕ್ಕೆ, ಜಾಂಬವತೀ ಎರಡು ಗುಣಕ್ಕೆ ಅಧಿಕಳು. ದೇವರ ಹೆಂಡರು ಷಣ್ಮಹಿಷಿಯರು, ತರುವಾಯ ಬಲರಾಮನ ಹೆಂಡತಿ ರೇವತೀ.

ಈ ಪ್ರಕಾರ ಕೃಷ್ಣಾವತಾರ ಚರಿತ್ರ ಹೇಳತ ಹೇಳತ, ರಾಮಾವತಾರದಲ್ಲಿ ಭೂಭಾರ ಇಳಹಲಿಕ್ಕೆ ಅಂಗಭೂತರು ದಾರುದಾರು ಎಂದಲ್ಲಿ, ಪ್ರಧಾನ ಅಂಗಭೂತ ಹನುಮಂತ. ಅತನ ತರುವಾಯ ಲಕ್ಷ್ಮಣ, ಅತನ ತರುವಾಯ ಕಾಮಾವತಾರ ನಾದ ಭರತ, ಇಂದ್ರಾವತಾರ ವಾಲಿ, ಹೀಂಗೆ ಶತ್ರುಘ್ನ, ಸುಗ್ರೀವ ಮೊದಲಾದವರು, ಅಂಗಭೂತರಾಗಿ ಸೇವೆ ಮಾಡಿದ್ದಾರೆ. ರಾಮಾವತಾರದಲ್ಲಿ ವಾಲಿ, ದೇವರ ಸೇವೆ ಪೂರ್ಣವಾಗಿ ಮಾಡಲಿಲ್ಲವೆಂದು ಬಹಳ ಪಶ್ಚಾತ್ತಾಪ ಉಳ್ಳವನಾಗಿ, ಭೀಮಸೇನನ ತಮ್ಮ ಅರ್ಜುನನಾಗಿ ಹುಟ್ಟಿದ್ದಾನೆ. ಅರ್ಜುನ ಭೂಭಾರ ಇಳಹಬೇಕಾಗಿ ಅಂಗ-ಭೂತನಾಗಿ ದೇವರ ಸೇವೆ ಮಾಡಿದ್ದಾನೆ. ಸುಗ್ರೀವಾದಿಗಳು ರಾಮಾವತಾರದಲ್ಲಿ ರಾಮನ ಸೇವೆ ತಮ್ಮ ಯೋಗ್ಯತೆ ಮೀರಿ ಮಾಡಿದ್ದರು. ಪುಣ್ಯ ಬಹಳ ಒದಗಿತ್ತು. ಕೃಷ್ಣಾವತಾರದಲ್ಲಿ ಕರ್ಣನಾಗಿ ಹುಟ್ಟಿ, ಕೃಷ್ಣನ ಪಕ್ಷಪಾತಿ ಪಾಂಡವರ ಕೂಡ ದ್ವೇಷಮಾಡಿ, ಯೋಗ್ಯತೆ ಮೀರಿ ಎಷ್ಟು ಪುಣ್ಯ ಒದಗಿತ್ತು, ಅಷ್ಟು ಪುಣ್ಯ ಬರಕೈದು

(ಹ್ರಾಸವಾಗಿ) ಹೋಯಿತು. ಅಶ್ವಿನೀದೇವತೆಗಳು ರಾಮಾವತಾರದಲ್ಲಿ ವಿವಿದ, ಮೈಂದರಾಗಿ, ರಾಮನ ಸೇವೆ ಬಹಳ ಮಾಡಿ, ಯೋಗ್ಯತೆ ಮೀರಿ ಪುಣ್ಯ ಸಂಪಾದಿಸಿದ್ದರು. ಕೃಷ್ಣಾವತಾರದಲ್ಲಿ ನಕುಲ ಸಹದೇವರಾಗಿ ಹುಟ್ಟಿದರು. ವಿವಿದ ಮೈಂದರೇ ಕೃಷ್ಣಾವತಾರದಲ್ಲಿ ಕೃಷ್ಣನ ವಿರೋಧಮಾಡಿ, ರಾಮಾವತಾರದಲ್ಲಿ ಯೋಗ್ಯತೆ ಮೀರಿ ಬಹಳ ಸೇವೆ ಮಾಡಿದ್ದು, ಕೃಷ್ಣಾವತಾರದಲ್ಲಿ ಬಹಳ ಕೊರತೆ ಮಾಡಿಕೊಂಡರು. ಹೀಂಗೆ ಸ್ವಾಮೀ ಸೇವೆ ಮಾಡಿದವರು ರಾಮ ಮತ್ತು ಕೃಷ್ಣಾವತಾರಗಳಲ್ಲಿ ಶುಭ ಸಂಪಾದಿಸಿದಾರೆ.

ಉಪಕ್ರಮ ನೋಡಲಿಕ್ಕೆ ಉಪಸಂಹಾರ ಪ್ರಾಬಲ್ಯವೆಂದು, ಕೃಷ್ಣಾವತಾರದಲ್ಲೀವೇ ವೇಧವ್ಯಾಸರು ಈ ಭಾರತ ಮಾಡಿದ್ದಾರೆ. ಭಾರತದಲ್ಲಿ ಪುರಾಣ, ರಾಮಾಯಣ ಸಕಲಶಾಸ್ತ್ರವದೆ. ಭಾರತದಲ್ಲಿಲ್ಲದಂಥಾದ್ದು ಎಲ್ಲೂ ಇಲ್ಲ. ಭಾರತದ ಪ್ರಶಂಸ ವಾಯುಪ್ರೋಕ್ತಗ್ರಂಥದಲ್ಲಿ ಹೇಳತದೆ. ಹಾಂಗೆ ಬ್ರಹ್ಮಾಂಡಪುರಾಣದಲ್ಲಿ ಹೇಳತದೆ. ಮಾರ್ಕಂಡೇಯಪುರಾಣದಲ್ಲಿ ಹೇಳತದೆ. ಬ್ರಹ್ಮಾದಿ ದೇವತೆಗಳೊಳಗೆ, ಪುರುಷೋತ್ತಮ ವೇದವ್ಯಾಸ ಹ್ಯಾಂಗೆ ದೊಡ್ಡಾತ, ಸಕಲ ಪ್ರಾಣಿಗಳೊಳಗೆ ಮನುಷ್ಯರು ಹ್ಯಾಂಗೆ ದೊಡ್ಡವರು, ಮನುಷ್ಯರಲ್ಲಿ ನಾಲ್ಕು ವರ್ಣದವರಿದ್ದಾರೆ, ನಾಲ್ಕು ವರ್ಣದೊಳಗೆ ಬ್ರಾಹ್ಮಣ ದೊಡ್ಡಾತ, ಆಯುಧದೊಳಗೆ ವಜ್ರಾಯುಧ ಹ್ಯಾಂಗೆ ದೊಡ್ಡದೋ, ಧಾನ್ಯದೊಳಗೆ ಯವ ಹ್ಯಾಂಗೆ ದೊಡ್ಡದೋ ಹಾಂಗೆ, ಸರ್ವ ಶಾಸ್ತ್ರದೊಳಗೆ ಭಾರತ ದೊಡ್ಡದು. ವೇದವ್ಯಾಸ ಸಾಕ್ಷಾನ್ನಾರಾಯಣನ ಅವತಾರ ಆದಕಾರಣ ಮಹಾಭಾರತ, ಪುಂಡರೀಕಾಕ್ಷನ ಹೊರತು, ದಾರೂ ಮಾಡಲಾರರು. ಭಾರತದಲ್ಲಿ ಸರ್ವಶಾಸ್ತ್ರ ಹೇಳೀದೆ. ನಾರಾಯಣನ ಮಹಿಮೆ ಆದಿಯಲ್ಲಿ, ಮಧ್ಯದಲ್ಲಿ, ಉಪಸಂಹಾರಕಾಲದಲ್ಲಿ ಹೇಳತದೆ. ಮೊದಲೀ ಭಾರತದ ಆದ್ಯಶ್ಲೋಕ ಹೇಳತದೆ.

ನಾರಾಯಣಂ ಸುರಗುರುಂ ಜಗದೇಕನಾಥವ್ ।
ಭಕ್ತಪ್ರಿಯಂ ಸಕಲಲೋಕ ನಮಸ್ಕೃತಂ ಚ ॥
ತ್ರೈಗುಣ್ಯವರ್ಜಿತವಮಜಂ ವಿಭುವಾದ್ಯಮೀಶವ್ ।
ವಂದೇ ಭವಘ್ನವಮರಾಸುರಸಿದ್ಧವಂದ್ಯವ್ ॥

ಸ್ವಾಮಿ ಲಕ್ಷ್ಮೀಬ್ರಹ್ಮಾದಿ ಜಗತ್ತಿಗೆ ಮುಖ್ಯಗುರುವು. ಜಗದೇಕನಾಥ, ಮುಕ್ತಾ-ಮುಕ್ತಜಗತ್ತಿಗೆ ಒಡಿಯ. ಭಕ್ತಪ್ರಿಯ, ತನ್ನ ಭಕ್ತಜನ ಉದ್ಧಾರವಾಗಬೇಕಾಗಿ, ಭಕ್ತರಿಗೆ ಜ್ಞಾನೋಪದೇಶ ಮಾಡಥಾನೆ. ಭಕ್ತರ ಭಕ್ತಿಯಿಂದ ಸ್ವಾಮಿ ತುಷ್ಟನಾಗಥಾನೆ. ಚಿಕ್ಕಕಾರ್ಯಕ್ಕಾಗಿ, ಸರ್ವೋತ್ತಮ ದೇವತೆಗೇನು ಕಾರಣ ಬೇಡಿಕೋಬೇಕೆನಬಾರದು. ಚಿಕ್ಕ ಕಾರ್ಯವಾಗಲೀ, ದೊಡ್ಡ ಕಾರ್ಯವಾಗಲೀ ನಾರಾಯಣಗೆ

ಶರಣುಹೋಗಬೇಕು. ದೇವರ ವಿನಃ ಇಂದ್ರಾದಿ ದೇವತೆಗಳಿಗೆ ಶರಣುಹೋಗ-ಬಾರದು, ಸ್ವಾಮೀ ಪರಿವಾರದೇವತೆಗಳೆಂದು ಶರಣುಹೋಗಬಹುದು. ಸ್ವಾಮಿ ತ್ರೈಗುಣ್ಯವರ್ಜಿತ, ಸರ್ವಗುಣಪರಿಪೂರ್ಣ, ಅಪ್ರಾಕೃತ, ಸರ್ವದೋಷದೂರ, ಜನ್ಮಜರಾದಿದೋಷರಹಿತ, ಜಗಜ್ಜನ್ಮಾದಿಕಾರಣ, ಆನಂದಪರಿಪೂರ್ಣ, ದೇಶ-ಕಾಲಪರಿಚ್ಛೇದಶೂನ್ಯ—ಲಕ್ಷ್ಮೀದೇವಿಗೆ ಗುಣಪೂರ್ಣವಿಲ್ಲ—ದೇಶಾನಂತ್ಯ, ಗುಣಾ-ನಂತ್ಯ, ಆದ್ಯನಾದಿಕರ್ತನು, ಸಮಾಧಿಕಶೂನ್ಯ, ಇಂಥಾ ಸರ್ವೋತ್ತಮದೇವತೆಗೆ ಶರಣುಹೋಗಬೇಕು. ಅದರಿಂದ ಸಂಸಾರದುಃಖ ಪರಿಹರಿಸಿಕೊಂಡು, ಅಚ್ಯುತ ಆನಂದಸುಖ ಅನುಭವಿಸಥಾರೆ. ಈ ಪ್ರಕಾರ ಭಾರತದ ಆದ್ಯಶ್ಲೋಕದಲ್ಲಿ, ಮುಕ್ತಾ-ಮುಕ್ತವಂದಿತನೆಂದು ಹೇಳತದೆ. ನಾರಾಯಣನ ಗುಣ ಪೂರ್ತಿ ಉಪಕ್ರಮದಲ್ಲಿ ಹೇಳಿ, ಉಪಸಂಹಾರದಲ್ಲೂ ಹೇಳತದೆ. ಕೃಷ್ಣ ಸಾಕ್ಷಾತ್ ನಾರಾಯಣನೆಂದು ತಿಳಿದು, ಯಜ್ಞಾದಿ ಕರ್ಮಗಳ ಮಾಡಿ, ಶ್ರೀಕೃಷ್ಣಾರ್ಪಣವೆಂದು ಸಮರ್ಪಿಸಿ, ಯಜ್ಞಮಾಡಿದವರು ಸೋಮರಸ ಪಾನಮಾಡಿ ಶುದ್ಧರಾಗಥಾರೆ. ಹಾಂಗೆ ಕ್ಷತ್ರಿಯರು ಯುದ್ಧವೆಂಬಂಥ ಯಜ್ಞದಲ್ಲಿ, ದುಷ್ಟಜನರ ಸಂಹರಿಸಿ ಕರ್ಮಫಲವನ್ನು ಶ್ರೀಕೃಷ್ಣಗೆ ಅರ್ಪಿಸಥಾರೆ. ವಾನಪ್ರಸ್ಥಾಶ್ರಮವುಳ್ಳವರು, ಪಂಚಾಗ್ನಿಯಲ್ಲಿ ತಪಸ್ಸು ಮಾಡಿ, ಸ್ವಾಮಿಗೆ ಅರ್ಪಿಸಥಾರೆ. ಈ ಪ್ರಕಾರ ಮುಕ್ತಾಮುಕ್ತರ ಕೈಯ ವಂದಿತ, ಸಮಸ್ತ ಸಜ್ಜನರ ಕೈಯ ಪೂಜೆಕೊಳತಾನೆಂದು ಉಪಕ್ರಮದಲ್ಲಿ ಹೇಳತದೆ. ಮತ್ತು ಭಾರತವಾಕ್ಯ ಉಪಸಂಹಾರದಲ್ಲಿ ಹೇಳತದೆ.

ಸೃಷ್ಟ್ವಾ ಬ್ರಹ್ಮಾದಯೋ ದೇವಾ ನಿಹತಾಯೇನ ದಾನವಾಃ ।
ತಸ್ಮೈ ದೇವಾಧಿದೇವಾಯ ನಮಸ್ತೇ ಶಾರ್ಙ್ಗಧಾರಿಣೇ ॥

ಸ್ವಾಮಿ ಶಾರ್ಙ್ಗಧನುರ್ಧಾರಿ, ಸರ್ವಜಗತ್ತನ್ನು ಹುಟ್ಟಿಸಥಾನೆ, ಸಂಹರಿಸಥಾನೆ. ದೇವ ದೈತ್ಯರಿಗೆ ಸಾಮ್ಯ ಬಂತಲ್ಲ ಎಂದಲ್ಲಿ, ದೇವತೆಗಳಿಗೆ ಮುಕ್ತಿಕೊಡೋಣ, ಹುಟ್ಟಿಸೋಣ; ದೈತ್ಯರಿಗೆ ತಮಸ್ಸಿಗೆ ಹಾಕೋಣ, ಕೊಲ್ಲೋಣ; ಈ ಪ್ರಕಾರ ಜಗತ್ಸರ್ಜನೆ ಮಾಡಿ, ಆನಂದಸಾಂದ್ರ, ದೇವತೆಗಳಿಗೆ ಮುಕ್ತಿಕೊಡಬೇಕಾಗಿ ದೇಹ-ವಿಯೋಗ ಮಾಡಿಸಥಾನೆ. ಸ್ವಾಮಿ, ದೈತ್ಯರನ್ನ ತಮಸ್ಸಿಗೆ ಕೆಡಹಬೇಕಾಗಿ, ಎರಡು ಪಕ್ಷ ಮಾಡಿದ್ದಾನೆ— ದೇವತಾಪಕ್ಷ ಭೀಮಸೇನಂದು, ಸ್ವಪಕ್ಷ; ದುರ್ಯೋಧನಂದು ಪರಪಕ್ಷ; ಹೀಂಗೆ ಎರಡು ಥಂಡ ಮಾಡಿ, ಭಾರತಕಥಾ, ಸ್ವಾಮಿ ವೇದವ್ಯಾಸ ಮಾಡಿದ್ದಾನೆ. ಭಾರತಮಂಗಳಾಚರಣೆ ಮಾಡಿ, ವೇದವ್ಯಾಸಗೆ ಶರಣುಹೋಗಲಿಕ್ಕೆ, ಸ್ವಾಮಿ ಅವರವರ ಹೃತ್ಕಮಲದಲ್ಲಿ ತೋರಥಾನೆ, ಬಿಂಬಮೂರ್ತಿ ಕಾಣಥಾರೆ. ಮತ್ತೆ ಭಾರತವಾಕ್ಯ—**ನಾಸ್ತಿ ನಾರಾಯಣ ಸಮಂ ನ ಭೂತಂ ನ ಭವಿಷ್ಯತಿ**—ನಾರಾಯಣಸದೃಶ, ಭೂತಭವಿಷ್ಯದ್ವರ್ತಮಾನದಲ್ಲಿ, ಹಿಂದೆಹೋದ

ಜಗತ್ತು, ಮುಂದೆ ಬಾಹೋ ಜಗತ್ತು, ವರ್ತಮಾನ ಜಗತ್ತಿನಲ್ಲಿ ದಾರೂ ಇಲ್ಲ. ಇಂಥಾ ನಾರಾಯಣ ಉತ್ಕೃಷ್ಟಗುಣವುಳ್ಳಾತ, ನಿರ್ದೋಷನೆಂದು ಭಾರತದಲ್ಲಿ ಹೇಳತದೆ. ಸುವಾಕ್ಯಗಳ ಉದ್ಧಾರ ಹೇಳಬೇಕಾಗಿ, ವೇದವ್ಯಾಸರು ಅಂಥಾರೆ, **ಸತ್ಯಂ ಸತ್ಯಂ ಪುನಃ ಸತ್ಯಂ.** ಹೀಂಗಂತ ವೇದವ್ಯಾಸರು ತಮ್ಮ ಎರಡೂ ತೋಳು ಮ್ಯಾಲಕ್ಕೆ ಎತ್ತಿಕೊಂಡು, **ವೇದಶಾಸ್ತ್ರಾತ್ಪರಂ ನಾಸ್ತಿ ನ ದೈವಂ ಕೇಶವಾತ್ಪರಂ**—ವೇದಶಾಸ್ತ್ರಸದೃಶ ದಾವುದೂ ಇಲ್ಲ, ಕೇಶವನ ಹೊರತು ಮತ್ತೆ ಒಂದೂ ದೇವತೆ ಇಲ್ಲ. ಸಕಲ ವೇದಶಾಸ್ತ್ರ ಆಲೋಡನೆ ಮಾಡಿ ನೋಡಲಿಕ್ಕೆ, ಅಮೃತಸಾರ ಸಾಕ್ಷಾನ್ನಾರಾಯಣನ ಹೊರ್ತು ಮತ್ತೆ ಎಂದೂ ಅಧಿಕ ದೇವತೆ ಇಲ್ಲ. ಹೀಂಗೆ ಮಧ್ಯಭಾಗದಲ್ಲಿ ಹೇಳತದೆ. **ಉಪಕ್ರಮೋಪಸಂಹಾರಾವಭ್ಯಾಸೋಽಪೂರ್ವತಾ ಫಲವ್ ।** ಅರ್ಥವಾದ ಉಪಪತ್ತಿ ಹೀಂಗೆ ಏಳು ಪ್ರಕಾರ ಹೇಳಿತು. **ಸ್ಮರ್ತವ್ಯಃ ಸತತಂ ವಿಷ್ಣುಃ।** ಸ್ವಾಮಿ ಸರ್ವ ಉತ್ಕೃಷ್ಟನೆಂದು, ಗುಣಪೂರ್ಣನೆಂದು ವ್ಯಾಳಿವ್ಯಾಳಿಗೆ ಆಲೋಚನೆ ಮಾಡತಿರಬೇಕು. ದೇವರ ಸ್ಮರಣೆ ಪ್ರತಿಕ್ಷಣದಲ್ಲಿ ಮಾಡಿದವ ಸಕಲ ವಿಧೀನೂ ಮಾಡಿದವನೆ. ದೇವರ ವಿಸ್ಮೃತಿ ಉಳ್ಳವನಾದ ಎಂದಕೆ, ನಾನಾಕರ್ಮಗಳ ಮಾಡಲ್ಯಾಕೆ, ಅದಷ್ಟೂ ನಿಷ್ಫಲವಾದ ಕಾರಣ, ದೇವರ ಸ್ಮರಣೆ ಉಳ್ಳವನಾಗ ವಿಹಿತಮಾಡಬೇಕು, ನಿಷಿದ್ಧ ಬಿಡಬೇಕು. ನಾರಾಯಣಗೆ ಸಮವಿಲ್ಲ ಅಧಿಕವಿಲ್ಲ, ಇಂಥಾ ಶ್ರೀನಾರಾಯಣನ ಮಹಿಮೆ, ದೇಶತಃ ಕಾಲತಃ ವ್ಯಾಪ್ತಳಾದ ಲಕ್ಷ್ಮೀದೇವಿ ತಿಳೀಲಾರಳು ; ಸಕಲ ಜೀವೋತ್ತಮ ಬ್ರಹ್ಮದೇವರೂ ತಿಳೀಲಾರನು. ಸ್ವಾಮಿ, ತನ್ನ ಮಹಿಮೆ ತಾನೇ ಬಲ್ಲ, ಕೃಷ್ಣ ಬಲ್ಲ. ಸ್ವಾಮಿ ವಸುದೇವ-ದೇವಕೀಯಲ್ಲಿ ಅವತಾರ ವ್ಯಕ್ತಮಾಡ್ಯಾನೆ. ಸತ್ಯವತೀಯಲ್ಲಿ ವ್ಯಾಸಾವತಾರ ವ್ಯಕ್ತಮಾಡ್ಯಾನೆ. ದಶರಥರಾಯನಲ್ಲಿ ರಾಮಾವತಾರ ಮಾಡ್ಯಾನೆ. ಜಮದಗ್ನಿಯಲ್ಲಿ ಪರಶುರಾಮಾವತಾರ ಮಾಡ್ಯಾನೆ. ಅಪ್ರಮೇಯ ತನ್ನ ಇಚ್ಛಾದಿಂದ ಅವತಾರಗಳು ವ್ಯಕ್ತಮಾಡ್ಯಾನೆ. ಜಗತ್ಸೃಷ್ಟಿಮಾಡಿ ದೇವತೆಗಳಿಂದ ಕ್ರೀಡಿಸಥಾನೆ. ಬ್ರಹ್ಮಾದಿ ದೇವತೆಗಳ ರಚನೆಮಾಡಿ ಬಾಲಕನೋಪಾದಿ ಜಗತ್ರಯದೊಳಗೆ ಆಡಥಾನೆ. ಅವತಾರ ವ್ಯಕ್ತಮಾಡಿ, ಅಧರ್ಮ ಕೆಡಿಸಿ, ಧರ್ಮ ಸಂರಕ್ಷಿಸಥಾನೆ. ಈ ಪ್ರಕಾರ ಜಗತ್ತು ಹುಟ್ಟಿಸಥಾನೆ, ಪಾಲಿಸಥಾನೆ, ತನ್ನ ಚಿತ್ತಕ್ಕೆ ಬಾರದಿದ್ದರೆ ಸಂಹರಿಸಥಾನೆ. ಸ್ವಾಮಿ ಭಕ್ತರ ಸಂಸಾರ ಪರಿಹರಿಸಥಾನೆ. ಮಧು ಎಂಬಂಥ ದೈತ್ಯನ ಕೊಂದಂಥ ಮಧುಸೂದನನ ಮಹಿಮೆ ದಾರೂ ತಿಳೀಲಾರರು. ನಾರಾಯಣಗೆ ಸಮರೂ, ಅಧಿಕರೂ ಇಲ್ಲೇ ಇಲ್ಲ. ಅವತಾರದಲ್ಲಿ ರಾಮ, ಕೃಷ್ಣದೇವರ ಅವತಾರಗಳು ಪ್ರಾಣಿಗಳಿಗೆ ತೋರಿಸಥಾನೆ. ಸ್ವಾಮಿಯ ಬಂಧಶಕ್ತಿಯಿಂದ ಪ್ರಾಣಿಗಳು, ಸ್ವಾಮಿ ಸರ್ವೋತ್ತಮದೇವತೆಯೆಂದು ತಿಳಿದವರಲ್ಲ. ಸ್ವಾಮಿ ಒಬ್ಬರಿಂದಲೂ ವಧ್ಯನಲ್ಲ.

ನಿತ್ಯಾನಂದ, ದುಃಖರಹಿತ, ನಿರ್ದೋಷಗುಣಪೂರ್ಣ, ಜಗತ್ತಿಗೆ ಮೋಹಿಸ-ಬೇಕಾಗಿ, ತಾನು ಸರ್ವಜ್ಞಶಿಖಾಮಣಿಯಾದರೂ, ತಾ ಏನೂ ಅರೇನೆಂಬೋ ಹಾಂಗೆ ರಾಮಾವತಾರದಲ್ಲಿ ಲಕ್ಷ್ಮಣನನ್ನ ಕೇಳಿದ್ದಾನೆ. 'ಎಲೈ ಲಕ್ಷ್ಮಣಾ, ಈ ಪರ್ಣಶಾಲ ದಾರದು? ಸೀತಾಕೃತಿ ಎತ್ತ ಹೋದಳು' ಎಂದು, ಅಡವಿಂದಡವೀ ಹುಡುಕುತ್ತ ಹೋಗ್ಯಾನೆ. ಇಂದ್ರಜಿತನ ನಾಗಪಾಶದಿಂದ, ರಣರಂಗದಲ್ಲಿ ತಾ ಬಿದ್ದಾನೆಂಬೋ ಹಾಂಗೆ ತೋರಿದ್ದಾನೆ. ಪ್ರಾಗ್ಜ್ಯೋತಿಷ ಪಟ್ಟಣಕ್ಕೆ ಹೋಗಿ, ನರಕಾಸುರನಲ್ಲಿ ಶತಘ್ನವೆಂಬ ಆಯುಧದಿಂದ, ತಾ ಮೂರ್ಛೆಯಿಂದ ಬಿದ್ದನು, ಎಂಬೋ ಹಾಂಗೆ ತೋರಿದ್ದಾನೆ. ಪರಶುರಾಮಾವತಾರದಲ್ಲಿ, ಅಂಬೀ ವಹಿಸಿಕೊಂಡು ಭೀಷ್ಮನ ಕೂಡ ಯುದ್ಧಮಾಡಿ, ಗಾಯದಿಂದ ತಾ ಬಿದ್ದಹಾಂಗೆ, ಸೋಥಾಂಗೆ ತೋರಿದ್ದಾನೆ. ಕೃಷ್ಣ ಮನುಷ್ಯ, ದೇಹ ಬಿಟ್ಟನು ಎಂಬೋಹಾಂಗೆ ಅಸುರಜನಕ್ಕೆ ತೋರಿದ್ದಾನೆ. ತನ್ನಲ್ಲಿಲ್ಲದ ಗುಣಗಳು, ನಷ್ಟಪುರುಷ ಹ್ಯಾಂಗೆ ತೋರಸಥಾನೆ ಹಾಂಗೆ, ಸ್ವಾಮಿ ಅಸುರಜನ ಮೋಹಿಸಬೇಕಾಗಿ, ಅಶಕ್ತನೆಂದು ದುರ್ಬಲತ್ವ ತೋರಿಸಿದ್ದಾನೆ. ಸ್ವಾಮಿ ಕಪಟನಾಟಕಿ, ಜಗತ್ತಿಗೆ ಶ್ರೇಷ್ಠ, ಅಚಿಂತ್ಯಮಹಿಮನೆಂದು ದೇವತೆಗಳು ತಿಳೀಥಾರೆ. ಅಸುರರು, ಇದೆಲ್ಲ ಯಥಾರ್ಥವೆಂದು ತಿಳೀಥಾರೆ. ಸ್ವಾಮಿ ಸರ್ವರಿಗೆ ಈಶ, ಸರ್ವ ಜಗತ್ತಿಗೆ ನಿಯಾಮಕ, ಪಾಂಡವರ ದೂತತ್ವ ಮಾಡಿದ್ದಾನೆ. ತಾನು ರಾಜಾಧಿರಾಜ, ಭೃತ್ಯನೋಪಾದಿ ಹಸ್ತಿನಾವತಿಗೆ ಸಂಧಾನಕ್ಕೆ ಹೋಗೋಣ, ಕರಸಿದರೆ ಬಾಹೋಣ, ದುರ್ಬಲತ್ವದವ ಹ್ಯಾಂಗೆ ಮಾಡಥಾನೋ ಹಾಂಗೆ, ತಾ ಸರ್ವೋತ್ತಮ ದೇವತೆ-ಯಾದರೂ ನಿಂದಿತ ಕರ್ತವ್ಯ ಮಾಡಿ, ಜಗತ್ತನ್ನು ಮೋಹಿಸಿದ್ದಾನೆ. ತಾನು ಕರ್ಮಬದ್ಧನಲ್ಲ, ಲೋಕಶಿಕ್ಷಾರ್ಥವಾಗಿ ಯಜ್ಞಾದಿ ಕರ್ಮಗಳ ಮಾಡಿದ್ದಾನೆ. ತಾನು ಸ್ವರಮಣ, ಆನಂದಪೂರ್ಣ, ಗೋಪೀಜನಜಾರ, ನವನೀತಚೋರ, ಹೀಂಗೆಂದು ಕರಸಿಕೊಂಡ್ಯಾನೆ. ಬ್ರಹ್ಮಾದಿ ದೇವತೆಗಳ ಕೊಲ್ಲಥಾನೆ. ಬ್ರಹ್ಮ-ಪೂರಕಗೆ ಜಗತ್ತು ಕೊಂದ ದೋಷವಿಲ್ಲ. ವ್ಯಭಿಚಾರ, ಕಳ್ಳತನ, ಸ್ವಾಮಿಗೆ ಎಲ್ಲಿಯದು! ಸ್ವಾಮೀ ಅವತಾರಗಳು ಅನಂತ, ಅಪ್ರಾಕೃತ. ಇಂಥಾ ಸ್ವಾಮಿ, ಅಸುರರಿಗಂತೂ ಮೋಹಿಸೇ ಮೋಹಿಸಾನು, ಸಜ್ಜನರಿಗೇ ಮೊದಲಾಗಿ ಮೋಹಿಸ ಥಾನೆ. ಜರಾಸಂಧನ ಕೊಲ್ಲಲಿಕ್ಕೆ ಭೀಮಾರ್ಜುನರ ಕೂಡಿ ಹೋಗುವಾಗ್ಲೆ, ಧರ್ಮರಾಯ ಸ್ವಾಮಿ ಕೂಡ ಮಾತನಾಡಿದ್ದಾನೆ—'ಸ್ವಾಮೀ, ನೀನು ನನ್ನ ಪ್ರಾಣ. ಭೀಮಾರ್ಜುನರು ಎರಡು ಕಣ್ಣು. ನೀವು ಮೂವರೂ ಹೋದಮ್ಯಾಲೆ ನನ್ನ ಬದುಕೋಣ ಏತಕ್ಕೆ' ಎಂದು ಧರ್ಮರಾಯ ಕೃಷ್ಣಗೆ, ಪ್ರಾಕೃತದೇಹ ಉಳ್ಳಾತನೆಂದು ತಿಳಿದು, ಇಂಥಾ ಮಾತನಾಡಿದ. ಇದರಿಂದೇನಾಯಿತೆಂದರೆ, ಸಜ್ಜನರು ತಮ್ಮ ಯೋಗ್ಯತೆ ಮೀರಿ ಏನು ಪುಣ್ಯ ಮಾಡಿದ್ದರೂ, ಕೃಷ್ಣ ಪ್ರಾಕೃತ-ಪುರುಷ ಎಂತ ತಿಳಿದದ್ದರಿಂದ, ತಮ್ಮ ಪುಣ್ಯವೆಲ್ಲ ಹ್ರಾಸಮಾಡಿಕೊಂಡರು. ಕೆಲವು

ಸಜ್ಜನರಿಗೆ ಪುಣ್ಯ ಹೆಚ್ಚಿಸಬೇಕಾಗಿ, ಕೃಷ್ಣ ಸರ್ವೋತ್ತಮದೇವತೆಯೆಂದು ತಿಳಿಸಿಕೊಡುವ. ಭೀಷ್ಮಪರ್ವದಲ್ಲಿ, ಗೀತಾವಾಕ್ಯ, ಅರ್ಜುನಗೆ ಕೃಷ್ಣ ಅಂದದ್ದು, 'ಮನುಷ್ಯದೇಹ ಧರಿಸಿದೇನೆಂದು ಪ್ರಾಣಿಗಳು ನನ್ನ ಸಾಮರ್ಥ್ಯ ತಿಳೀದೇ ನನ್ನ ಅವಜ್ಞಾ ಮಾಡಥಾರೆ. ಎಂಥಾ ಅವಜ್ಞಾ ಎಂದರೆ, ನನ್ನ ಅವತಾರಕ್ಕೆ ದೋಷ ಯಾರು ತಿಳೀಥಾರೆ, ಅವರು ಅವಜ್ಞಾರೊಳಗೆ ದೊಡ್ಡ ಅವಜ್ಞಾರು. **ಅವಜಾನಂತಿ ಮಾಂ ಮೂಢಾಃ,** ಎಲೈ ಅರ್ಜುನ, ಪ್ರಾಣಿಗಳು ಮೂಢಾಂತಃಕರಣ ಉಳ್ಳವರಾಗಿ, ನನ್ನನ್ನು ಬ್ರಹ್ಮರುದ್ರಾದಿಗಳ ಸಮನೆಂತ ತಿಳೋಣ, ಲಕ್ಷ್ಮೀ, ಬ್ರಹ್ಮಾದಿಗಳಲ್ಲಿ ಪೂರ್ಣತ್ವ ತಿಳೋಣ, ನನ್ನಲ್ಲಿ ದೋಷಾರೋಪಿಸೋಣ, ಇವೆಲ್ಲ ದೋಷಕ್ಕ ಸಾಧನ. ಪ್ರಾಣಿಗಳು ನನ್ನ ಭಾವ ಅರಿಯರು. **ಮೋಘಾಶಾ ಮೋಘ. ಕರ್ಮಾಣೋ ಮೋಘಜ್ಞಾನಾವಿಚೇತಸಃ॥** ಇವೆಲ್ಲ ನನ್ನಲ್ಲಿ ದೋಷ ತಿಳದ್ದರಿಂದ ಅವಷ್ಟೂ ಕೆಟ್ಟುಹೋಗಿ, ರಾಕ್ಷಸಯೋನಿಯಲ್ಲಿ ಐದಥಾರೆ. ಜ್ಞಾನಿಗಳು ನನ್ನಲ್ಲಿ ದೋಷ ತಿಳೋದಿಲ್ಲ.' ಅದಕ್ಕೆ ಅರ್ಜುನ ಅಂದದ್ದು, **ಪಿತಾಸಿ ಲೋಕಸ್ಯ ಚರಾಚರಸ್ಯ,** 'ಚರಾಚರ ಜಗತ್ತಿಗೆ ಸಮಾಧಿಕಶೂನ್ಯ' ಹೀಂಗಂತ ಅರ್ಜುನ, ಸ್ವಾಮೀ ಸ್ತೋತ್ರ ಮಾಡಿದ್ದಾನೆ. **ಯಜ್ಞತ್ವಾ ಮುನಯಃ ಸರ್ವೇ,**

" ಮುನಿಗಳು ನನಗೆ ಏನಂಥ ತಿಳೀಥಾರೆ, 'ಸರ್ವೋತ್ತಮದೇವತೆ ಶ್ರೀನಾರಾಯಣ, ಲಕ್ಷ್ಮೀದೇವಿಯಲ್ಲಿ ಗರ್ಭ ಇಟ್ಟು ಬ್ರಹ್ಮಾಂಡ ಹುಟ್ಟಿಸಥಾನೆ.' ಹೀಂಗಂತ ತಮ್ಮ ಜ್ಞಾನಬಾಹುಳ್ಯದಿಂದ, ನನ್ನ ಅನುಗ್ರಹ ಉಳ್ಳವರಾಗಿ ತಿಳೀಥಾರೆ." **ದ್ವಾವಿಮೌ ಪುರುಷೌ ಲೋಕೇ ಕ್ಷರಶ್ಚಾಕ್ಷರ ಏವ ಚ॥** ಲಕ್ಷ್ಮೀ ಬ್ರಹ್ಮಾದಿ ದೇವತೆಗಳು ಕ್ಷರಾಕ್ಷರ ಚೇತನರು. ಲಕ್ಷ್ಮೀ ಅಕ್ಷರಳು, ಬ್ರಹ್ಮಾದಿ ಜೀವರು ಕ್ಷರರು. ಇಂಥಾ ಕ್ಷರಾಕ್ಷರ ಚೇತನಕ್ಕೆ, ಸ್ವಾಮಿ ಒಡಿಯ.

" **ಮಮಯೋನಿರ್ಮಹದ್ಬ್ರಹ್ಮ,** 'ಬ್ರಹ್ಮಾಂಡ ಹುಟ್ಟಿಸಥಾನೆ. ಹದಿನಾಲ್ಕು ಲೋಕ ಧರಿಸಿದ್ದಾನೆ.' ಇಂಥಾ ನಿಶ್ಚಯಜ್ಞಾನ ಯಾರು ತಿಳೀಥಾರೆ, ಅವರು ಸರ್ವಜ್ಞರು. ಇಂಥಾ ದಿವ್ಯಪ್ರಮಾಣ, ನೀನು ನನಗೆ ಗೆಳೆಯನಾದಕಾರಣ ಗೌಪ್ಯಪ್ರಮಾಣ ಹೇಳಥೀನಿ." ಹೀಂಗಂತ ಕೃಷ್ಣ ಅರ್ಜುನಗೆ ಅಂದಾನೆ. **ಇತಿ ಗುಹ್ಯತಮಂ ಶಾಸ್ತ್ರಂ,** 'ಗೌಪ್ಯಮಾಡಿಕೊಂಡು, ಎಲೈ ಭರತ, ಇದರಿಂದ ಕೃತಕೃತ್ಯನಾಗು' ಹಾಂಗೆ ಕೃಷ್ಣಾರ್ಜುನ ಸಂವಾದ. **ದ್ವೌ ಭೂತಸರ್ಗೌ ಲೋಕೇಽಸ್ಮಿನ್ ದೈವ ಆಸುರ ಏವ ಚ,** " ಎಲೈ ಅರ್ಜುನನೇ! ಅಸುರರ ಮಾತು ಹೇಳಥೀನೆ. ಪಾಪಿಗಳು ಏನಂತ ತಿಳೀಥಾರೆ, ಈ ಜಗತ್ತೆಲ್ಲ ಮಿಥ್ಯಾಭೂತವೆಂದು ತಿಳೀಥಾರೆ. 'ಜಗತ್ತಿಗೆ ಈಶ್ವರನಿಲ್ಲ. ಈಶ್ವರನೇ ಜಗದಾಕಾರನಾಗಿಹಾನೆ' ಹೀಂಗಂತ ತಿಳೀಥಾರೆ. ಅವ್ಯಕ್ತತತ್ತ್ವದಿಂದ ಮಹತ್ತತ್ತ್ವ ಹುಟ್ಟಿಯದೆ. ಅದರಿಂದ ಅಹಂಕಾರತತ್ತ್ವ ಹುಟ್ಟಿಯದೆ. ಅಹಂಕಾರ ಮೂರು ಪ್ರಕಾರ—ವೈಕಾರಿಕ, ತೈಜಸ, ತಾಮಸ.

ಅಹಂಕಾರದಿಂದ ಪಂಚಭೂತ, ಪೃಥ್ವಿ ಆಪ ತೇಜ ವಾಯು ಆಕಾಶ. ಹೀಂಗೆ ಪಂಚಭೂತಾತ್ಮ ಜಗತ್ತಿಗೆ ಒಡಂಬಡೋದಿಲ್ಲ. ಈಶ್ವರನೇ ಜಗದಾಕಾರನಾಗಿರಥಾನೆ ಎಂದು ಜೀವೇಶ್ವರ ಐಕ್ಯ ತಿಳೀಥಾರೆ. ಇಂಥಾ ದುರ್ಮತಿಗಳು ಸಜ್ಜನರ ಸನ್ಮಾರ್ಗ ತಿಳೋದಿಲ್ಲ. ತಾವೂ ಕೆಡಥಾರೆ, ತಮ್ಮ ಉಪದೇಶದಿಂದ ಪರರನ್ನು ಕೆಡಸಥಾರೆ. ಮತ್ತೆ ಏನಂತ ತಿಳೀಥಾರೆ, 'ನಾನೇ ಈಶ್ವರ, ನಾನೇ ಭೋಗಿ, ನಾನೇ ಸಿದ್ಧ, ನಾನೇ ಬಲವಂತ, ನಾನೇ ದ್ರವ್ಯಸಂಪನ್ನ, ನಾನೇ ಅಜರಾಮರ, ನನ್ನ ಸದೃಶ ದಾರು,' ಹೀಂಗೆ ಪಾಪಿಗಳು ತಿಳೀಥಾರೆ. ನನ್ನಲ್ಲಿ ದ್ವೇಷಮಾಡಿ, ಸಂಸಾರದಲ್ಲಿ ಅಸುರಯೋನಿ ಐದಿ, ಅನೇಕ ಪಾಪಕರ್ಮದಿಂದ ತಮಸ್ಸಿಗೆ ಹೋಗಿ ಬೀಳಥಾರೆ."

ಈ ಪ್ರಕಾರ ಅಸುರರ ಮಾತು ಕೃಷ್ಣ ಹೇಳಲಿಕ್ಕೆ, ಅಸುರರ ಮಾತು ಉದಾಸೀನದಿಂದ ಕೇಳಿ ಅರ್ಜುನ 'ಎಲೈ ಸ್ವಾಮೀ, ಕಮಲೇಕ್ಷಣ, ಸಜ್ಜನರ ಮಾತು, ಸಾತ್ತ್ವಿಕ ಬುದ್ಧಿ ಹೇಳಿಕೊಡು' ಎಂದಲ್ಲಿ, 'ಸಜ್ಜನರು ಸ್ವಾಮೀಜ್ಞಾನ ಉಳ್ಳವರು. ಜೀವಜಡಾತ್ಮಕ ಪಂಚಭೇದ ತಿಳಿದವರು, ನಾರಾಯಣ ಚತುರ್ವಿಧ-ನಾಶರಹಿತನೆಂದು ತಿಳೀಥಾರೆ. ನಾರಾಯಣ ಸ್ವಗತಭೇದವಿವರ್ಜಿತ, ದೋಷದೂರ, ಗುಣಪೂರ್ಣನೆಂದು ನನ್ನ ಉಪಾಸನ ಮಾಡತಿರಥಾರೆ. ಎಲೈ ಅರ್ಜುನ, ನೀನು ನನಗೆ ಪ್ರಿಯಾತ್ಮನಾದಕಾರಣ ಗೌಪ್ಯಪ್ರಮೇಯ ಹೇಳಥೀನಿ. **ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು,** ಎಲೈ ಅರ್ಜುನ, ಏನು ಭಕ್ತಿ ಮಾಡೋದು ನನ್ನಲ್ಲಿ ಮಾಡು, ನನಗೆ ಶರಣುಹೋಗು. ಯಜ್ಞಾದಿಕರ್ಮಗಳ ಮಾಡಿ ನನಗೆ ಅರ್ಪಿಸತ ಬಾ. ನಾನು ಸರ್ವೋತ್ತಮದೇವತೆಯೆಂದು ತಿಳಿ.' ಈ ಪ್ರಕಾರ ಭೀಷ್ಮಪರ್ವ ಗೀತಾವಾಕ್ಯಗಳ ಹೇಳಿ, ಇನ್ನು ಶಾಂತಿಪರ್ವ ಮೋಕ್ಷಧರ್ಮ ವಾಕ್ಯ ಹೇಳಥಾನೆ.

ಮೋಕ್ಷಧರ್ಮದಲ್ಲಿ ಪಾಂಚರಾತ್ರಾಗಮ ಪ್ರಶಂಸ ಬಹಳ ಹೇಳತದೆ. ಪಾಂಚ-ರಾತ್ರಾಗಮದಲ್ಲಿ ನಾರಾಯಣ ಸರ್ವೋತ್ತಮನೆಂದು ಹೇಳೀದೆ. ಕಪಿಲ, ಸಾಂಖ್ಯ-ಶಾಸ್ತ್ರ ಮಾಡಿದ್ದಾನೆ. ಅಲ್ಲೀ ನಾರಾಯಣ ಸರ್ವೋತ್ತಮನೆಂದು ಹೇಳೀದೆ. ಮೋಕ್ಷಧರ್ಮ ಹೇಳುವಾಗ ಜನಮೇಜಯರಾಯ ವೈಶಂಪಾಯನಾಚಾರ್ಯನ ಕೇಳಿದ್ದಾನೆ. **ಬಹವಃ ಪುರುಷಾಃ ಪುರುಷಃ ಪ್ರವರೋ,** 'ಎಲೈ ವೈಶಂಪಾಯನಾ-ಚಾರ್ಯನೇ, ಪುರುಷರು ಏಸು ಮಂದಿ? ಪುರುಷರನೆಲ್ಲ ಒಬ್ಬನೇ ಅಂಬೋದು ಅಬದ್ಧ. ಇದನ್ನೆಲ್ಲಾ ವಿವೇಕಿಸಿ ಹೇಳು' ಎಂದು ಜನಮೇಜಯರಾಯ ಕೇಳಲಾಗಿ, ವೈಶಂಪಾಯನ ಹೇಳಿದ್ದಾನೆ. "ರಾಯ, ನೀ ಕೇಳಿಥಾಂಗೆ ಬ್ರಹ್ಮದೇವರಿಗೆ ರುದ್ರ ಕೇಳಿದ. ಮಹಾರುದ್ರಗೆ ಬ್ರಹ್ಮದೇವರು ಹೇಳಿದ್ದಾರೆ. 'ನನಗೆ ಮೂಲಕಾರಣ ನಾರಾಯಣ, ನಿನಗೆ ಮೂಲಕಾರಣ ನಾನು. ನನ್ನ ದೆಸಿಯಿಂದ ಹುಟ್ಟಿದ್ದಿ. ಹಾಂಗೆ ನನ್ನ ದೆಸಿಯಿಂದ ಸ್ಥಾವರಜಂಗಮ ಪ್ರಾಣಿಗಳು ಹುಟ್ಟಿಯವೆ. ವೇದದ ನಾನಾ

ರಹಸ್ಯಗಳು, ದೇವರ ಆಜ್ಞಾದಿಂದ ನನ್ನ ಅಧೀನವಾಗವೆ.' ಮಹಾರುದ್ರ ಬ್ರಹ್ಮ-ದೇವರ ಆಶ್ರಯಿಸಿದ್ದಾನೆ." ಹೀಂಗಂತ ಬ್ರಹ್ಮದೇವರು ರುದ್ರಗೆ ಹೇಳಿದಂಥಾದ್ದು, ವೈಶಂಪಾಯನ ಜನಮೇಜಯರಾಯಗೆ ಹೇಳಿದ್ದಾನೆ.

ಭೀಮಸೇನ ಧರ್ಮರಾಯಗೆ ಅಂದದ್ದು, 'ಎಲ್ಲೆ ಅಣ್ಣಾ, ಮುಕ್ತಾಮುಕ್ತ ಬ್ರಹ್ಮರುದ್ರಾದಿಗಳು, ನಾರಾಯಣನ ಗುಣಗಳ ವ್ಯಾಖ್ಯಾನ ಮಾಡಲಾಗಿ, ಯಾರೂ ಅಂತ ಐದುವುದಿಲ್ಲ. ದೇಶಕಾಲವ್ಯಾಪ್ತಳು ಲಕ್ಷ್ಮೀ ಮೊದಲಾಗಿ, ಸ್ವಾಮೀ ಅನಂತ-ಗುಣಗಳ ಕಡೇ ಪೂರೈಸಿ ತಿಳೀಲಾರದೆ, ಕುತೂಹಲಸಮುದ್ರದೊಳಗೆ ಮುಣಗಿ, 'ಸ್ವಾಮೀ ನವನವಚರಿತೆ ಕಂಡು, ಬಹಳಾಶ್ಚರ್ಯ ಉಳ್ಳಾಕಿಯಾಗಿರಥಾಳೆ. ಅಂಥಾ ಲಕ್ಷ್ಮೀಪತಿ ನಮ್ಮ ಕೃಷ್ಣನಾಗಿ ಹುಟ್ಟಿದ್ದಾನೆ. ಅನಾದಿಕಾಲದ ಸ್ವಾಮಿ ಆದ್ಯನಾದಿ ಕರ್ತನು, ನಮ್ಮ ಇಷ್ಟದೇವತೆ, ಕುಲದೇವತೆ, ಶ್ರೀಕೃಷ್ಣನ ಕಂಡ್ಯ?' ಎಂದು ಭೀಮಸೇನ ಧರ್ಮರಾಯಗೆ ಕೇಳಿದ್ದಾನೆ. 'ರಾಮ, ಕೃಷ್ಣ ಮನುಷ್ಯರಂತ ತಿಳೀ-ಬಾರದು. ಸಾಕ್ಷಾತ್ಪರಬ್ರಹ್ಮ, ಸರ್ವಜಗತ್ತಿಗೆ ಒಡಿಯ ಲಕ್ಷ್ಮೀಪತಿಯಂತ ತಿಳಿ. ನಮ್ಮ ಸ್ವಾಮಿ ಶ್ರೀಕೃಷ್ಣ ಬ್ರಹ್ಮಾದಿ ಜೀವರುಗಳ ಹುಟ್ಟಿಸಥಾನೆ. ಜಗದೋತ್ಪಾದಕ ನಮ್ಮ ಸ್ವಾಮೀಕೋಪದ ದೆಶೆಯಿಂದ ಮಹಾರುದ್ರ ಹುಟ್ಯಾನೆ.' ಕೃಷ್ಣ ಧರ್ಮರಾಯನ ಕುರಿತು ಮಾತನಾಡಿದ್ದಾನೆ. 'ಎಲ್ಲೆ ಧರ್ಮರಾಯ, ಇಂದ್ರಾದಿ ದೇವತೆಗಳು ಮಹಾರುದ್ರನ ಆಶ್ರಯಿಸಿದ್ದಾರೆ. ಮಹಾರುದ್ರನು ಬ್ರಹ್ಮನನ್ನು ಆಶ್ರಯಿಸಿದ್ದಾನೆ. ಬ್ರಹ್ಮರಾಯ ನನ್ನ ಆಶ್ರಯಿಸಿದ್ದಾನೆ. ನಾನು ದಾರನ್ನೂ ಆಶ್ರಯಿಸೋದಿಲ್ಲ. ಮುಕ್ತಾಮುಕ್ತ ಜಗತ್ತಿಗೆ ಮುಖ್ಯಾಶ್ರಯನಾಗಿದ್ದೇನೆ. ಸೂರ್ಯನ್ನ, ಕಿರಣಗಳು ಹ್ಯಾಂಗೆ ಆಶ್ರಯಿಸಿರತವೋ ಹಾಂಗೆ ಸಕಲ ಚರಾಚರ ಜಗತ್ತು ನನ್ನ ಆಶ್ರಯಿಸಿ ಅದೆ. ಹಿಂದೆ ಹೋದ ಜಗತ್ತು, ಮುಂದೆ ಬಾಹೋ ಜಗತ್ತು, ವರ್ತಮಾನ ಜಗತ್ತು ನನ್ನಾಶ್ರಯಿಸಿ ಅದೆ. ಅನಂತ ಬ್ರಹ್ಮಾಂಡಕಲ್ಪಗಳು ಆಗಿಹೋಗ್ಯಾವೆ. ಅಷ್ಟಕ್ಕೂ ನಾನೇ ನಿಯಾಮಕ. ನನಗೆ ಸಮವಿಲ್ಲ, ಅಧಿಕವಿಲ್ಲ.'

ಈ ಮಹಾಭಾರತ, ಭಾಷಾತ್ರಯದಿಂದ ಗ್ರಂಥಗಳು ನಡದವೆ. ನಾರಾಯಣ ಸರ್ವೋತ್ತಮನೆಂದು ಎಲ್ಲಿ ಹೇಳತದೆ, ಅದು **ಸಮಾಧಿಭಾಷಾ** ಅಂತ ತಿಳಿಯ ಬೇಕು. **ದರ್ಶನಭಾಷಾ** ಎರಡು ಪ್ರಕಾರ—**ಲೋಕದರ್ಶನ, ಪರದರ್ಶನ.** ವಿಷಯಾಸಕ್ತಿಯುಳ್ಳವರು ಈ ಪ್ರಕಾರ ಕ್ಲೇಶಬಡಥಾರೆಂದು, ಸ್ವಾಮಿ ಸ್ಮರಣ, ಸೀತಾದೇವಿ ತನ್ನ ಸಮೀಪದಲ್ಲಿದ್ದರೂ, ಸೀತಾದೇವಿ ಹುಡುಕುತ್ತ, ಅಡವಿಂದಡವೀ ತಿರುಗುತ್ತ, ಈ ಪ್ರಕಾರ ಲೋಕವಿಡಂಬನೆ ಮಾಡಿದ್ದು, ಲೋಕದರ್ಶನವೆಂತ ತಿಳೀ ಬೇಕು. ಇನ್ನು ಪರದರ್ಶನವೆಂಬೋದು, ಪರಮಾತ್ಮ ಎಂಥಾತ, ಮಿಥ್ಯಾಜ್ಞಾನಿಗಳು ಶಿವ ಸರ್ವೋತ್ತಮನೆಂಥಾರೆ; ಗಣೇಶ ಸರ್ವೋತ್ತಮ, ಬೃಹಸ್ಪತಿ ಸರ್ವೋತ್ತಮ ಎಂದು ತಿಳೀಥಾರೆ, ಅದು ಪರದರ್ಶನ. ದರ್ಶನಭಾಷಾದೊಳಗೆ, ಸಮಾಧಿಭಾಷಾ-ದೊಳಗೆ, ಕೂಡಿ ಬಾಹೋಹಾಂಗಿದ್ದರೆ ತಿಳಕೋಬೇಕು. ಇನ್ನು **ಗುಹ್ಯಭಾಷಾ**—

ಉಚ್ಛಿಷ್ಟಂ ಶಿವನಿರ್ಮಾಲ್ಯಂ ವಮನಂ ಮೃತಕಪರ್ಪಟವತ್ ।
ಕಾಕವಿಷ್ಟ ಸಮುದ್ಭೂತಂ ಪಂಚಭೂತಾನಿ ಭಾರತ ॥

ಇದಕ್ಕೆ ಅನ್ಯಾರ್ಥ ಮಾಡಬೇಕು. ವತ್ಸೋಚ್ಛಿಷ್ಟ, ಆಕಳ ಹಾಲು ತಕ್ಕೋಬೇಕು. ಶಿವನಿರ್ಮಾಲ್ಯವೆಂದರೆ, ಭಾಗೀರಥೀ ಉದಕ ತಕ್ಕೋಬೇಕು. ವಮನವೆಂದರೆ ಜೇನು-ತುಪ್ಪ ತಕ್ಕೋಬೇಕು. ಮೃತಕಪರ್ಪಟವೆಂದರೆ, ದಸರೆ (ರೇಶ್ಮೆ) ತಕ್ಕೋಬೇಕು. ಕಾಕವಿಷ್ಟ ಎಂದರೆ, ಅಶ್ವತ್ಥವೃಕ್ಷ ತಕ್ಕೋಬೇಕು—ಅಶ್ವತ್ಥವೃಕ್ಷದ ನ್ಯರಳೊಳಗೆ (ನೆರಳು) ಕೋಟಿಯಜ್ಞದ ಫಲ ಬರತದೆ. ಈ ಪ್ರಕಾರ ಭಾರತದಲ್ಲಿ ಸಮಾಧಿಭಾಷಾ, ದರ್ಶನಭಾಷಾ, ಗುಹ್ಯಭಾಷಾ ಹೀಂಗೆ, ಭಾಷಾತ್ರಯದಿಂದ ಗ್ರಂಥ ನಡದದೆ. ವೇದವ್ಯಾಸ ಸಜ್ಜನರಿಗೆ ಅಂದದ್ದು, 'ದರ್ಶನಭಾಷಾ ಯಥಾರ್ಥ ತಿಳೀಬ್ಯಾಡಿರಿ. ವೇದವ್ಯಾಸ ಹೇಳ್ಯಾನೆಂದು ವಿಶ್ವಾಸ ಮಾಡಬ್ಯಾಡಿ. ಅಸುರರ ಮೋಹಿಸಬೇಕಾಗಿ ದರ್ಶನಭಾಷಾ ಎರಡು ಪ್ರಕಾರ ಹೇಳಿದ್ದೇನೆ. ಗುಹ್ಯಭಾಷಾ ಹೇಳಿದ್ದೇನೆ. ಅನ್ಯಾರ್ಥ ಮಾಡತಾಬನ್ನಿ. ನಾರಾಯಣ ಸರ್ವೋತ್ತಮನೆಂದು ತಿಳೀತಾಬನ್ನಿ. ಭಾರತದಲ್ಲಿ ನಾರಾಯಣನ ಮಹಿಮೆ ಕೊಂಡಾಡತದೆ.'

ಮೂಲನಾರಾಯಣ ಅಸುರರ ಸಂಹರಿಸಬೇಕಾಗಿ, ವಾಯುದೇವರೇವೆ ಪ್ರಧಾನಾಂಗಭೂತರಾಗ್ಯಾರೆ. ಮೂಲರೂಪದಲ್ಲಿ ಅಂಗಭೂತ, ಅವತಾರದಲ್ಲಲ್ಲ ಎನಲಿಕ್ಕಿಲ್ಲ.

ಪ್ರಥಮೋ ಹನುಮನ್ನಾಮ ದ್ವಿತೀಯೋ ಭೀಮ ಏವ ಚ ।
ಪೂರ್ಣಪ್ರಜ್ಞಸ್ತೃತೀಯಸ್ತು ಭಗವತ್ಕಾರ್ಯಸಾಧಕಃ ॥

ರಾಮಾವತಾರದಲ್ಲಿ ಭಗವತ್ಕಾರ್ಯ ಸಾಧಿಸಬೇಕಾಗಿ ಹನುಮಂತ ಪ್ರಥಮಾಂಗನಾಗ್ಯಾನೆ. ಕೃಷ್ಣಾವತಾರದಲ್ಲಿ ಎರಡನೇ ಅವತಾರನಾಗ್ಯಾನೆ. ಕಲಿಯುಗದಲ್ಲಿ ಪೂರ್ಣಬೋಧ, ಭಗವಂತನ ಕಾರ್ಯ ಸಾಧಿಸಬೇಕಾಗಿ, ಮೂರನೇ ಅವತಾರ ಮಾಡ್ಯಾನೆ. ವಾಯುದೇವರು ಏನು ದೇವತಾಕಾರ್ಯ ಸಾಧಿಸಥಾನೆ, ಅದಷ್ಟೂ ಈಶವನಾಜ್ಞಾದಿಂದ ಅವತಾರಮಾಡಿ, ಭಗವತ್ಕಾರ್ಯ ಸಾಧಿಸಥಾನೆ. ವಾಯುದೇವರು ಮುಖ್ಯ ಪ್ರಧಾನ ಅಂಗ. ಭಾರತೀ, ಸರಸ್ವತೀ ಭಗವತ್ಕಾರ್ಯ ಸಾಧಿಸಬೇಕಾಗಿ, ಭಾರತೀಯೇ ದ್ರೌಪದೀದೇವಿಯಾಗಿ ಅವತಾರಮಾಡಿದ್ದಾಳೆ. ಅಚ್ಚ ಭಾರತೀ ಅವತಾರವಾಗೇದೆ, ಹಾಂಗೆ, ಕಾಳೀದೇವಿ. ಕಲಿಯುಗದಲ್ಲಿ ಚಂದ್ರಾದೇವಿ (ಚಂದ್ರಸೇನಾ) ಎಂಬ ಅವತಾರ ಮಾಡಿದ್ದಾಳೆ. ಹೀಂಗೆ ಭಾರತೀ ಮೂರು ಅವತಾರ ಮಾಡಿದ್ದಾಳೆ. ನಾರಾಯಣಗೆ ಪ್ರಥಮಾಂಗ ವಾಯುದೇವರು, ಭಾರತೀ ಎರಡನೇ ಅಂಗಭೂತಳು. ಇನ್ನು ಮೂರನೇ ಅಂಗ ಶೇಷನೇವೆ, ನರ, ಲಕ್ಷ್ಮಣ, ಬಲಭದ್ರ, ಹೀಂಗೆ ಮೂರು ಅವತಾರ ಮಾಡಿದ್ದಾನೆ. ಶೇಷನೇವೆ ಪೂರ್ವೋತ್ತರ ಗತಿಯಲ್ಲಿ ರುದ್ರನಾಗಿದ್ದನು. ರುದ್ರಪದವಿ ಆಳಿ ಶೇಷಪದವಿಗೆ ಬಂದಾನೆ. ಅನ್ಯತ್ರ ಗತಿ ಇಲ್ಲ.

ಈ ರುದ್ರನೂ ಶೇಷಪದವಿಗೆ ಬಾಹೋನು. ಈ ರುದ್ರನೇವೆ ಶುಕಾಚಾರ್ಯ, ಅಶ್ವತ್ಥಾಮನಾಗಿ ಅವತಾರಮಾಡಿದ್ದಾನೆ. ಇವರೆಲ್ಲ ಮೂರನೇ ಅಂಗಭೂತರು. ಇಂದ್ರನವತಾರನಾದಂಥ ಅರ್ಜುನನಲ್ಲಿ ನರಾವೇಶವಿದ್ದಕಾರಣ, ಮೂರನೇ ಅಂಗ ದೊಳಗೆ ಬಿದ್ದನು. ಕಾಮಾವತಾರ ಪ್ರದ್ಯುಮ್ನ ಮೊದಲಾದವರು ನಾಲ್ಕನೇ ಅಂಗ-ಭೂತರು. ಷಳಿಷ್ಟಿಳಿಗ್ಯೆ, ತಾರತಮ್ಯ ಏನು ಕಾರಣ ಹೇಳಿದ್ದನ್ನೇ ಹೇಳಬೇಕು ಎಂದಲ್ಲಿ, ನಾರಾಯಣ ಸರ್ವೋತ್ತಮದೇವತೆ, ಬ್ರಹ್ಮಾದಿ ದೇವತೆಗಳು ಪರಿವಾರ-ದೇವತೆ, ಸ್ವಾಮೀ ಅಂಗಭೂತರೆಂತ ಪ್ರತಿಕ್ಷಣದಲ್ಲಿ ಆಲೋಚನೆ ಮಾಡತಿರಬೇಕು. ವೈಷ್ಣವಚರಿತ್ರೆ ಪುನಃಪುನಃ ಹೇಳಿದ್ದನ್ನೇ ಹೇಳತಿರಬೇಕು. ಶ್ರೀಮನ್ನಾರಾಯಣ ಸರ್ವೋತ್ತಮ, ಬ್ರಹ್ಮ ರುದ್ರಾದಿಗಳು ತದ್ದಾಸರೆಂದು ತಿಳದದ್ದರಿಂದ ನಾರಾಯಣನ ಗುಣೋತ್ಕರ್ಷಣ ಬಹಳ ತಿಳಿದಹಾಂಗಾಗತದೆ. ಹರಿದಾಸರ ಮಹಿಮೆ ಮರಳಿಮರಳಿ ಕೇಳತಿರಬೇಕು. ನಾರಾಯಣ ನಿರ್ದೋಷಗುಣಪೂರ್ಣ, ಸ್ಮರಮಣನೆಂದು ಹನುಮಂತದೇವರು, ಕಿಂಪುರುಷಖಂಡದಲ್ಲಿ ಆಷ್ಟ್ರಿಷೇಣಗೆ ಹೇಳಿದ್ದಾನೆ, ಪಂಚಮ-ಸ್ಕಂಧ ಭಾಗವತವಾಕ್ಯವದೆ.

ನಮ್ಮ ಸ್ವಾಮಿ ರಘುನಾಥ, ಕೌಸಲ್ಯಾದೇವಿಯಲ್ಲಿ ಏನುಕಾರಣ ಅವತಾರ ಮಾಡ್ಯಾನೆ? ಬಲಿಷ್ಠ ರಾವಣಾದಿ ರಾಕ್ಷಸರನ್ನ ಕೊಲ್ಲಬೇಕಂತ ಅವತಾರ ಮಾಡಿದಾತನಲ್ಲ. ವಿಷಯಾಸಕ್ತರಿಗೆ ಚೆನ್ನಾಗಿ ಬುದ್ಧಿ ಕಲಿಸಬೇಕಾಗಿ, ರಮಾಪತಿ ದಶರಥರಾಯನಲ್ಲಿ ಅವತಾರ ಮಾಡಿ, ಹೆಂಡತಿ ಹೋಗಾಡಿಸಿಕೊಂಡಹಾಂಗೆ ಲೋಕ-ವಿಡಂಬನೆ ಮಾಡುತ್ತ, ಸರ್ವೋತ್ತಮ ವ್ಯಾಪ್ತನಾದರೂ, ಅಡವಿಂದಡವೀ ತಿರುಗುತ್ತ ದಂಡಕಾರಣ್ಯಕ್ಕೆ ಬಂದಾನೆ. ನಮ್ಮ ಸ್ವಾಮಿಗೆ, ಸೀತಾದೇವಿಗೆ ಎಂದಿಗಾದರೂ ವಿಯೋಗ ಉಂಟೆ? ಸ್ವಾಮಿ ಸರ್ವೋತ್ತಮ ಸರ್ವಾಂತರ್ಯಾಪ್ತ ವಿಷಯಾಸಕ್ತಿ ಯುಳ್ಳವರಿಗೆ ಅಣಕಮಾಡಿ ತೋರಿಸ್ಯಾನೆ. ಲಕ್ಷ್ಮೀವಿಯೋಗ ಸ್ವಾಮಿಗಿಲ್ಲ. ದೇಶ-ಕಾಲಪರಿಚ್ಛೇದಶೂನ್ಯಳು, ನಿರ್ದೋಷಗುಣವುಳ್ಳಂಥ ಸೀತಾದೇವಿಗೆ, ನಮ್ಮ ಸ್ವಾಮಿಗೆ ಎಂದಿಗೂ ವಿಯೋಗ ಉಂಟೆ! ಚಂದ್ರನ ಬೆಳದಿಂಗಳು, ಸೂರ್ಯನ ಕಿರಣಗಳಪ್ಪಂದೆ ತಾಪ ಕೊಡತದೆ. ಶ್ರೀಗಂಧ ಹಚ್ಚಿಕೊಂಡರೆ, ಸ್ತ್ರೀ ಸಮೀಪದಲ್ಲಿಲ್ಲದ ಕಾರಣ, ದೇಹಕ್ಕೆ ಅಗ್ನಿ ಹಚ್ಚಿಕೊಂಡಹಾಂಗೆ ಆಗತದೆ. ಈ ವ್ಯಾಳೆ ಸುಳಿಗಾಳಿ ವಜ್ರಕ್ಕೆ ಸರಿಯಾಗಿ ದೇಹಕ್ಕೆ ತಾಕತದೆ. ಈ ಪ್ರಕಾರ ಲೋಕಕ್ಕೆ ಅಣಕಮಾಡಿ ತೋರಿಸ್ಯಾನೆ.

ಸ್ವಾಮಿ ಸ್ಮರಮಣ, ಸ್ತ್ರೀನಿಮಿತ್ತ ಸ್ವಾಮಿಗೆ ಕಶ್ಮಲಾಂತಃಕರಣವಿಲ್ಲ. ಸ್ವಾಮಿ ನಿರ್ದೋಷಗುಣಪೂರ್ಣನೆಂದು ಪಂಚಮಸ್ಕಂಧ ಭಾಗವತ ವಾಕ್ಯ ಹೇಳಿ, ಇನ್ನು ನವಮಸ್ಕಂಧ ಭಾಗವತವಾಕ್ಯ ಹೇಳಥಾರೆ. ಸ್ತ್ರೀಸಂಗವುಳ್ಳವರು, ಸ್ತ್ರೀವಿಯೋಗದಿಂದ ಹೀಂಗೆ ದುಃಖಪಡತಾರೆಂದು, ಸ್ವಾಮಿ ಸೀತಾಕೃತಿ ಹುಡುಕುತ್ತ ವನವನ ತಿರುಗುತ್ತ

ದಂಡಕಾರಣ್ಯಕ್ಕೆ ಬಂದು ನಾಲ್ಕು ತಿಂಗಳು ಮಳೆಗಾಲ ಕಳೆದು, ಸೇತುವೆ ಕಟ್ಟಿ, ರಾವಣಾದಿ ಖಳರ ಕೊಂದು, ಸೀತಾಕೃತಿ ಕೊಂಡುಬಂದಾನೆ. ಸೀತಾರಾಮರಿಗೆ ಎಂದಿಗೂ ವಿಯೋಗವಿಲ್ಲ. ಆದರೂ ಪೂರ್ಣ ರಾಮಾಯಣ ಭಾರತದಲ್ಲಿ ಮೋಹಕ ಕಥೆ ಹೇಳತದೆ. ರಾಮಚಂದ್ರ ರಾವಣನ ಕೊಂದದ್ದರಿಂದ ಬ್ರಹ್ಮಹತ್ಯ ಬಂತೆಂದು, ಬ್ರಹ್ಮಹತ್ಯ ಹೋಗಬೇಕಾಗಿ ಈಶ್ವರನ ಪೂಜಿ, ಲಿಂಗಪ್ರತಿಷ್ಠಾ ಮಾಡಿದ್ದಾನೆ. ಲಕ್ಷ್ಮೀಪತಿಗೆ ಪಾಪ ಉಂಟಿ! ಸೇತುದರ್ಶನದಿಂದ ಬ್ರಹ್ಮಹತ್ಯ, ಪಂಚಮಹಾ-ಪಾತಕಗಳು ಹೋಗುತ್ತವ. ಜಗದ್ಗುರು ಬ್ರಹ್ಮರಾಯನ್ನ ಪ್ರಳಯಕಾಲದಲ್ಲಿ ಕೊಲ್ಲಥಾನೆ. ಅಂಥಾ ಪಾಪ ಮೊದಲಾಗಿ ಸ್ವಾಮಿಗೆ ಇಲ್ಲ. ಅಸುರರ ಕೊಂದ ಪಾಪ ಉಂಟಿ! ಸರ್ವಥಾ ಇಲ್ಲ. ಸ್ವಾಮಿ ಲೋಕಶಿಕ್ಷಾರ್ಥವಾಗಿ ಋಷಿಗಳಿಗೆ ನಮಸ್ಕಾರ ಮಾಡಿದ್ದಾನೆ. ದೇವತೆಗಳಿಗೆ ನಮಸ್ಕಾರ ಮಾಡಿದ್ದಾನೆ. ತಾನು ಸರ್ವರಿಗೆ ಈಶ. ತನ್ನ ರಾಣಿ ಲಕ್ಷ್ಮೀಕಟಾಕ್ಷದಿಂದ ಬ್ರಹ್ಮಾದಿ ದೇವತೆಗಳು, ಅಸುರರಿಗೆ ದೇವತೆಗಳಿಗೆ ವರ, ಬಲಗಳ ಕೊಡಥಾರೆ. ಅಂಥಾ ಸರ್ವಸ್ವಾಮಿ ಮಧುಕೈಟಭರ ಕೈಯ ತಾನು ವರವು ಸಂಪಾದಿಸಿದ್ದಾನೆ, ಮಧುಕೈಟಭರಿಗೆ ತಾ ಸಜ್ಜನಕ! ಮಧುಕೈಟಭರು ನಾರಾಯಣಗಂದದ್ದು, ಏನು ವರ ಬೇಡತಿದ್ದಿ ಬೇಡೆನಲಿಕ್ಕೆ, ಸ್ವಾಮಿ ತಾನು ಸರ್ವ-ಸಮರ್ಥನಾದರೂ, ಏನಂತ ವರವು ಬೇಡಕೊಂಡನೆಂದರೆ, ನಿಮ್ಮನ್ನು ನಾನು ಕೊಂದೇನೆಂದನು. ಒಳ್ಳೇದಂಥಾರೆ. ತಮ್ಮ ಕೀರ್ತಿ ಕೆಡತದಾದಕಾರಣ 'ಅವಶ್ಯ ಕೊಲ್ಲು' ಎಂದರು. ಸ್ವಾಮಿ ಅವರ ವರಬಲದಿಂದ ಕೊಂದಾತನಲ್ಲ, ಸರ್ವಶಕ್ತಿ-ಯುಳ್ಳಾತ ಅಸುರಜನ ಮೋಹಿಸಬೇಕಾಗಿ ವರವು ಪಡಕೊಂಡು ಕೊಂದಾನೆ.

ಈ ಭಾರತಕ್ಕೆ **ಮನ್ವಾದ್ಯುಪರಿಚರಿಕಾಸ್ತಿಕ** ಹೀಂಗೆ ಮೂರು ಅರ್ಥ ಹೇಳತದೆ. **ಉಪರಿಚರಿಕಾರ್ಥ**, ಬ್ರಹ್ಮದೇವರ ಹೊರತಾಗಿ ಭಾರತಾರ್ಥ ಯಾರೂ ಮಾಡಲಾರರು. **ಮನ್ವಾದಿಕಾರ್ಥ**, ಜ್ಞಾನಿಗಳು ಮಹಾಶ್ರಮದಿಂದ ಮಾಡ್ಯಾರು. **ಆಸ್ತಿಕಾರ್ಥ** ಸಮಸ್ತರೂ ಮಾಡಥಾರೆ. ಭಾರತದಲ್ಲಿ ಪುರುಷವ್ಯತ್ಯಾಸ, ಕಾಲ-ವ್ಯತ್ಯಾಸ ಹೇಳತದೆ. ದುರ್ಯೋಧನ ಸಾಯುವಾಗ ಕೃಷ್ಣ, ರಣರಂಗದಲ್ಲಿದ್ದಿಲ್ಲ, ದ್ವಾರಾವತಿಗೆ ಹೋಗಿದ್ದನೆಂದು ಹೇಳತದೆ. ಗೋಮೂತ್ರ ಹ್ಯಾಂಗೆ ಅಡವಡು ಹೋಗತದೆ ಹಾಂಗೆ ಅರ್ಥ ನಡದದೆ. ಯಥಾಸ್ಥಿತಿ ಹೇಳೋದು 'ಆಸ್ತಿಕಾರ್ಥ.' 'ಮನ್ವಾದಿಕಾರ್ಥ'ವೆಂಬೋದು, ಎಲ್ಲಿ ಧರ್ಮವೆಂತ ಬರತದೆ, ಅಲ್ಲಿ ಶ್ರವಣ, ಮನನ ನಿಧಿಧ್ಯಾಸನ ಶೀಲಸ್ವಭಾವನವೃತ ಇವೆಲ್ಲ ಧರ್ಮವೆಂತ ಬಂದಲ್ಲಿ, ಧರ್ಮಾಭಿಮಾನಿ ದೇವತೆಗಳು, ಈ ಹತ್ತು ಗುಣಗಳ ತಕೋಬೇಕು. ಇವೆಲ್ಲ ಸಂಜ್ಞಾರ್ಥದಿಂದ ತಿಳಿದುಕೋಬೇಕು. ಇನ್ನು 'ಉಪರಿಚರಿಕಾರ್ಥ' ಯಾವುದೆಂದರೆ, ಭಾರತದಲ್ಲಿ ಭೀಮಸೇನ ಏಂತ ಹೇಳಿದ್ದಾರೆ. ಅಲ್ಲಿ ಜ್ಞಾನ ಭಕ್ತಿ ವೈರಾಗ್ಯ ಪ್ರಜ್ಞ ಸ್ವಾಮೀವಚನ ಬುದ್ಧಿ ಧೈರ್ಯ ಯೋಗಾಭ್ಯಾಸ ಹೀಂಗೆ ದಶ-

ಸುಭುಕ್ತಿಯಿಂದಿರಬೇಕು. ದ್ರೌಪದೀ ಬಂದಲ್ಲಿ, ವಿದ್ಯಾದಿ ದಶಕ ತಕೋಬೇಕು. ದುರ್ಯೋಧನ ಬಂದೆಲ್ಲಿ ಅಜ್ಞಾನ ತಕೋಬೇಕು. ದುಶ್ಶಾಸನ ಬಂದಲ್ಲಿ ಮಿಥ್ಯಾಜ್ಞಾನ ತಕೋಬೇಕು. ಶಕುನಿ ಬಂದಲ್ಲಿ ಗುರುವಿಲ್ಲ, ದೇವತೆಯಿಲ್ಲ ಎಂಬ ದುಷ್ಟಮತ ತಕೋಬೇಕು: ವಿಕರ್ಣ ಮೊದಲಾದವರು, ದುರ್ಯೋಧನನ ತಮ್ಮಂದಿರು ಬಂದಲ್ಲಿ ಅಜ್ಞಾನಾದಿ ದೋಷಗಳು ತಕೋಬೇಕು. ಅಶ್ವತ್ಥಾಮ ಬಂದಲ್ಲಿ ಅಹಂಕಾರ ತಕೋಬೇಕು. ದ್ರೋಣ ಮೊದಲಾದವರು ಬಂದಲ್ಲಿ, ಇಂದ್ರಿಯಗಳ ತಕೋಬೇಕು. ಕುರುಸೈನ್ಯ ಬಂದಲ್ಲಿ ಪಾಪಗಳ ತಕೋಬೇಕು. ಪಾಂಡವರಂತ ಎಲ್ಲಿ ಹೇಳತದೆ ಅಲ್ಲಿ, ಪುಣ್ಯ ತಕೋಬೇಕು. ಈ ಪ್ರಕಾರ ಸರ್ವಭಾರತ ತಿಳಿಬೇಕು. ಈ ಭಾರತಾರ್ಥ ದೇವತೆಗಳು ಮಾಡಲಾರರು. ಮನುಷ್ಯರು ಏನು ಮಾಡಲಾಪರು! ಭಾರತಕ್ಕೆ ಮೂರು ಅರ್ಥ—ಉಪರಿಚರಿಕಾರ್ಥ ಬ್ರಹ್ಮಾದಿ ದೇವತೆಗಳಿಗೆ ಯೋಗ್ಯ, ಋಷಿಗಳಿಗೆ ಮನ್ವಾದಿಕಾರ್ಥ ಯೋಗ್ಯ, ಆಸ್ತಿಕಾರ್ಥ ಮನುಷ್ಯರಿಗೆ ಯೋಗ್ಯ. ಥೋಡೆ ತೋರಸ್ತಾರೆ, ಜ್ಞಾನಬಾಹುಳ್ಯದಿಂದ ತಿಳಕೋಬೇಕು. ಭಾರತಾರ್ಥ ಸಮಗ್ರ, ವೇದವ್ಯಾಸ ತಾ ಬಲ್ಲ. ಆತನ ಪ್ರಸಾದದಿಂದ ಬ್ರಹ್ಮದೇವರು ಬಲ್ಲರು. ನಾನು ಬಲ್ಲೇನೆಂಬೋದು ಶುಕಾಚಾರ್ಯ ತಾ ಬಲ್ಲ. ಭಾರತಾರ್ಥ ಕೆಲವು ಸಂಜಯ ಬಲ್ಲನೆಂಬೋದು, ಶುಕಾಚಾರ್ಯ ಬಲ್ಲ. ವಾಯೂನೂ ಭಾವಿಬ್ರಹ್ಮನಾದಕಾರಣ ದೇವರ ಅನುಗ್ರಹದಿಂದ ಭಾರತಾರ್ಥ ಬಲ್ಲ. ಸಮಸ್ತ ದೇವತೆಗಳೊಳಗೆ, ಬ್ರಹ್ಮದೇವರು ಭಾರತಾರ್ಥ ಬಲ್ಲಹಾಂಗೆ ದಾರೂ ಅರಿಯರು. ವಾಯುದೇವರು ದೊಡ್ಡಾತನೆಂದು ಅರಣ್ಯಪರ್ವದಲ್ಲಿ ಹೇಳತದೆ.

ಜ್ಞಾನೇ ವಿರಾಗೇ ಹರಿಭಕ್ತಿಭಾವೇ
ಧೃತಿಸ್ಥಿತಿಪ್ರಾಣಬಲೇಷು ಯೋಗೇ।
ಬುದ್ಧೌ ಚ ನಾನ್ಯೋ ಹನುಮತ್ಸಮಾನಃ
ಪುಮಾನ್ಕದಾಚಿತ್ಕ್ವಚಕಶ್ಚನೈವ ॥

ಹನುಮಂತನ ಸಮ ದಾರೂ ಇಲ್ಲ. ಹನುಮಂತ ಭಾವಿಬ್ರಹ್ಮನೆಂದು, ಹನುಮಂತನ ಕೀರ್ತಿ ಅರಣ್ಯಪರ್ವದಲ್ಲಿ ಹೇಳೇದೆ. ವಾಯುದೇವರು ಹನುಮಂತನ ಅವತಾರ ಪಾಡ್ಯಾನೆಂದು ವೇದಶ್ರುತಿಯಲ್ಲಿ ಹೇಳತದೆ.

ಬಳಿತ್ಥಾ ತದ್ವಪುಷೇ ಧಾಯಿ ದರ್ಶತಂ
ದೇವಸ್ಯ ಭರ್ಗಃ ಸಹಸೋ ಯತೋಜನಿ।
ಯದೀ ಮುಪಹ್ವರತೇ ಸಾಧತೇ
ಮತಿರ್ಜುತಸ್ಯ ಧೇನಾ ಅನಯಂತ ಸಸ್ರುತಃ॥

ಎಂಬೋ ವೇದಶ್ರುತಿಯಲ್ಲಿ, ವಾಯುದೇವರ ಮಹಿಮೆ ಹೇಳತದೆ. ವಾಯು-ದೇವರು ನಾರಾಯಣನನುಗ್ರಹದಿಂದ ಬಲಾತ್ಮಕ ಜ್ಞಾನಾತ್ಮಕ ಭರಣ ಗಮನ ಉಳ್ಳಾತ. ಲಕ್ಷ್ಮೀನಾರಾಯಣರ ವ್ಯತಿರಿಕ್ತ, ಸರ್ವಜಗತ್ತಿಗೆ ಕರ್ತನು, ಜಗತ್ತಿಗೆ ಪೋಷಕನು. ಇಂಥಾ ಮುಖ್ಯಪ್ರಾಣ ಭಗವಂತನ ಕಾರ್ಯ ಸಾಧಿಸಬೇಕಾಗಿ, ನಾರಾಯಣನಾಜ್ಞ ಶಿರಸಾವಹಿಸಿಕೊಂಡು, ಸ್ವಾಮೀ ಆಜ್ಞ ಶಿರೋರತ್ನ ಮಾಡಿ-ಕೊಂಡು, ಸಮಸ್ತ ದೇವತೆಗಳಿಂದ ಪ್ರಾರ್ಥಿತನಾಗಿ, ಅವತಾರ ಮಾಡಬೇಕೆಂದು ಬಿನ್ನಹಮಾಡಲಿಕ್ಕೆ, ದೇವತೆಗಳ ಬಿನ್ನಪಮಾಲಿ, ಮುಖ್ಯಪ್ರಾಣ ಕೊರಳಿಗೆ ಹಾಕಿಕೊಂಡು; ವಾಯುದೇವರ ಮೊದಲನೇದಾದ ಅವತಾರ, ಹನುಮಂತ ಅವತಾರ ಮಾಡಿ, ನೈರ್ಗುಣ್ಯವಾದಿಗಳ ಮಾತೆಲ್ಲ ಸಂಹರಿಸಿಬಿಟ್ಟ. **ಯದೀವಮುಪಹ್ವರತೇ ಸಾಧತೇ ವಮತಿಖರ್ವತಸ್ಯ ಧೇನಾ,** ರಾವುನ ವಾಕ್ಯ ಕೇಳಿ ಸೀತಾಕೃತಿ ಒಯ್ದು-ಕೊಟ್ಟಾನೆ. ಮೂಲರಾಮಾಯಣ ಕಥೆ, ನಿರಂತರ ಕಿಂಪುರುಷಖಂಡದಲ್ಲಿ ಹನುಮಂತದೇವರು ಕೊಂಡಾಡುತ್ತಾನೆ.

ಎರಡನೇ ಅವತಾರ ಭೀಮಸೇನನಾಗಿ ಹುಟ್ಟಿ, ದುರ್ಯೋಧನಾದಿಗಳ ಸೈನ್ಯ ವನ್ನೆಲ್ಲ ಮರ್ದಿಸಿಬಿಟ್ಟ. **ಪೃಷ್ಠೋವಪುಃ ಪಿತುವಾನ್** ಎಂದು ಕರೆಸಿಕೊಂಡು, ಏಕಚಕ್ರನಗರದಲ್ಲಿ ಭಿಕ್ಷಾನ್ನ ಯಥೇಷ್ಟ ಭೋಜನ ಮಾಡುವ. ಬಕಾಸುರನ ಸಮೀಪಕ್ಕೆ ಹೋಗತಾನೆಂದು, ಎಷ್ಟು ಉಂಬೋವಷ್ಟು ಭೋಜನ ಮಾಡಿಸಿ, ಮಂಗಳಸ್ನಾನ ಮಾಡಿಸಿ ಕಳುಹಿಸಿಕೊಟ್ಟರು. ಬಕಾಸುರಗೆ ನೇಮಿಸಿದಂಥ ಅನ್ನವಷ್ಟೂ ಭೀಮಸೇನ ತಾ ಭೋಜನ ಮಾಡಿದ. ಅಂಗುಷ್ಠಪ್ರಮಾಣ ಜಠರಾಗ್ನಿ ಉಳ್ಳಾತ, ಬಹ್ವನ್ನ ಭಕ್ಷ್ಯ ಭೋಜನ ಮಾಡಿದ, ದಕ್ಕಿಸಿಕೊಳ್ಳಲಿಕ್ಕೆ ಸಮರ್ಥನಾದ. ಭೀಮಸೇನ ನಿರಂತರ ನಾರಾಯಣನ ಗುಣೋತ್ಕರ್ಷಣೆ ವಿಚಾರ ಮಾಡತಿರಥಾನೆ. ಋಗಾದಿ ನಾಲ್ಕು ವೇದಗಳಲ್ಲಿ ಭಾರತದಲ್ಲಿ ಭಾಗವತದಲ್ಲಿ ಪುರಾಣಗಳಲ್ಲಿ ಪಾಂಚರಾತ್ರಾಗಮದಲ್ಲಿ ಹೀಂಗೆ ಹೇಳತದೆ. ಭೀಮಸೇನ ಪ್ರತಿಕ್ಷಣದಲ್ಲಿ ನಾರಾ-ಯಣನ ಗುಣೋತ್ಕರ್ಷಣೆ ವಿಚಾರ ಮಾಡತಿರಥಾನೆ. ಅದರಿಂದ ಆನಂದಪೂರ್ಣ ನಾಗಿ ಕ್ರೀಡಿಸತಿರಥಾನೆ. ಸ್ವಾಮಿಯ ಅದ್ಭುತ ಪರಾಕ್ರಮ, ಅನಂತಮಹಿಮೆ ವಿಚಾರಮಾಡಿ ಬಹಳ ರಮಿಸಥಾನೆ.

ಇನ್ನು ತೃತೀಯಾವತಾರ, ದಶಪ್ರಮತಿಂ, ಪೂರ್ಣಪ್ರಜ್ಞರನ್ನು ಸ್ತ್ರೀಯರು ಹಡೆದರು ಎಂದಲ್ಲಿ, ಬಹುವಚನವೇನುಕಾರಣ ಬಂತೆಂದಲ್ಲಿ, ಮಧ್ಯಗೇಹಭಟ್ಟನ ಹೆಂಡತಿಯಲ್ಲಿ ಮುಖ್ಯಪ್ರಾಣಾವತಾರ ಮಾಡಿದ ಕಾರಣ, ಗುರುಗಳ ತಾಯಿ ಎಂಬ ಕಾರಣ, ಸ್ತ್ರೀಯರು ಹಡೆದರು ಎಂದು ಶ್ರುತಿ ಹೇಳತದೆ. ಅಥವಾ ಶ್ರೀ ಭೂ ದುರ್ಗಾದೇವೇರು ವಾಯುದೇವರನ್ನು ಹಡೆದಿದ್ದಾರೆ. ಅಂಥಾ ವಾಯುದೇವರ ಅವತಾರರಾದಂಥ ಪೂರ್ಣಬೋಧಾಚಾರ್ಯರು, ನಾರಾಯಣನ್ನ ಅಮೃತಕಿರಣದಂತೆ

ಭಕ್ತರಿಗೆ ದುಗ್ಧದೋಪಾದಿ ಕರದು ಕೊಡಥಾರೆ. ಆನಂದತೀರ್ಥರ ಅವತಾರವಾಗಲಿಕ್ಕೆ ಕಾರಣವೇನೆಂದಲ್ಲಿ, ಈಶನಾಜ್ಞಾದಿಂದ, ರುದ್ರಾದಿಗಳಿಗೆ ಮೊದಲಾಗಿ, ಮನುಷ್ಯೋತ್ತಮರು ಕಡೆಯಾಗಿ, ಮೋಕ್ಷಸಾಧನವಾದಂಥ ಜ್ಞಾನೋಪದೇಶ ಮಾಡಲಿಕ್ಕೆ ಅವತರಿಸಿದ್ದಾರೆ. ಬ್ರಹ್ಮಾಂಡಪುರಾಣದಲ್ಲಿ ಈತನ ಮಹಿಮೆ ಬಹಳ ಹೇಳತದೆ. ಶುಕಾಚಾರ್ಯ ಜ್ಞಾನ ಸಂಪಾದಿಸಿದ್ದಾನೆ. ಪೂರ್ಣಪ್ರಜ್ಞರ ಮುಖಕಮಲದಿಂದ ನಾರಾಯಣನ ಚರಿತ್ರೆ ಕೇಳಬೇಕೆಂದು ಮೂಲದೇವತೆಗಳು, ಶೇಷ ಮೊದಲಾಗಿ ಪುರಾಣ ಕೇಳಲಿಕ್ಕೆ ಬಾಹೋಣ, ಕೃಷ್ಣಪಕ್ಷದಲ್ಲಿ ಖೇಚರಮಾರ್ಗದಿಂದ ಹೋಗುವ ಶೇಷನ ಪ್ರಕಾಶದಿಂದ ಬೆಳದಿಂಗಳು ಬಿತ್ತು. ಶಿಷ್ಯರು ಪ್ರತ್ಯಕ್ಷ ಕಂಡರು. ಅನಂತಪರಾಕ್ರಮ ಉಳ್ಳಂಥ ನಾರಾಯಣನ ಕೀರ್ತಿ ನಿರಂತರ ಗಾಯನ ಮಾಡುವ ದೇವತೆಗಳಿಲ್ಲ, ಈ ಪೂರ್ಣಪ್ರಜ್ಞಾಚಾರ್ಯರ ದಾಸರು. ನಾರಾಯಣ, ವೀರ್ಯೌದಾರ್ಯಜ್ಞಾನಾನಂದಗುಣಪೂರ್ಣನೆಂದು ಶ್ರೀಮದಾಚಾರ್ಯರ ಮುಖದಿಂದ ಚೆನ್ನಾಗಿ ಹೇಳೋರು **ಮಧು ದೌ ೞರಸ್ತು ನಃ ಪಿತಾ.**

ಆನಂದತೀರ್ಥರು ಸುಖಸಾಧನಶಾಸ್ತ್ರ ಮಾಡಿದಕಾರಣ ಮಧ್ವರಾಯರೆಂದು ಕರೆಸಿಕೊಂಡರು. ಮಿಥ್ಯಾಜ್ಞಾನಿಗಳು ಅಸುರರು ನಾರಾಯಣ ನಿರ್ಗುಣ, ನಿರಾಕಾರನೆಂತ ಜಗತ್ತಿನೊಳಗೆ ಪಸರಿಸಿಬಿಟ್ಟಿದ್ದಾರೆ. ಅದಷ್ಟೂ ಮಧ್ವರಾಯರು ಕೆಡಿಸಿಬಿಟ್ಟು, ವೈಷ್ಣವಚಿನ್ಹ ಪಸರಿಸಿ, ವಿಶಿಷ್ಟಸಂಪ್ರದಾಯ ಜಗತ್ತಿನೊಳಗೆ ನಡೆಸಿಬಿಟ್ಟರು. ದುರ್ವಾದಿಗಳ ಮತವೆಲ್ಲ ಖಂಡಿಸಿ, ಸರ್ವಶಾಸ್ತ್ರದೃಷ್ಟಾಂತಸಮ್ಮತ, ನಾರಾಯಣ ಗುಣಪೂರ್ಣನೆಂದು ಸಜ್ಜನರಿಗೆ ತಿಳುಹಿಸಿಕೊಟ್ಟರು. ಅವೈಷ್ಣವರು, ನಾರಾಯಣ ನಿರ್ಗುಣ, ನಿರಾಕಾರನಂತ ಪ್ರಶ್ನ ಮಾಡಿದರೆ, ತೃಣದೋಪಾದಿ ಮಿಥ್ಯಾಜ್ಞಾನವೆಲ್ಲ ತುಂಡುತುಂಡು ಮಾಡಿಬಿಟ್ಟರು. ಹಲ್ಲಿನಿಂದ ತೃಣ ಹ್ಯಾಂಗೆ ತುಂಡುಮಾಡಿಬಿಡಥಾರೆ ಹಾಂಗೆ, ಆನಂದತೀರ್ಥರು ಮುಖಕಮಲವಚನಗಳಿಂದ ದುರ್ಮತವೆಲ್ಲ ತುಂಡುತುಂಡು ಮಾಡಿಬಿಟ್ಟರು. ಇಂಥಾ ವಾಯುದೇವರಿಗೆ ಸಮೀಚೀನಜ್ಞಾನ ಲಕ್ಷ್ಮೀನಾರಾಯಣರು ಪ್ರೇರಿಸಥಾರೆ. ಮುಖ್ಯಪ್ರಾಣ ಪರಮ ಶುದ್ಧ, ಪರಮ ದಯಾಳು, ಸಜ್ಜನರಿಗೆ ಸಚ್ಛಾಸ್ತ್ರ ವ್ಯಾಖ್ಯಾನ ಮಾಡಿಕೊಟ್ಟು, ಸಮ್ಯಕ್‌ಜ್ಞಾನ ತೋರಿಸಿಕೊಟ್ಟಾರೆ. ಇಂಥಾ ಆನಂದತೀರ್ಥರಿಗೆ ಗರ್ಭವಾಸದುಃಖವಿಲ್ಲ. ಮಧ್ಯಗೇಹಭಟ್ಟನ ಹೆಂಡತಿಯಲ್ಲಿ, ಮೋಕ್ಷಜೀವಕ್ಕೆ ಗರ್ಭವಾಸದುಃಖ ಉಂಟಿ ಎನಲಿಕ್ಕೆ, ಅಮೋಕ್ಷಜೀವನ್ನ ಒಂದು ದ್ವಾರ ದೇಹದಿಂದ ಹೊರಗೆ ಹೊರಡಿಸಿ, ಮಹಾದ್ವಾರದಿಂದ ಮುಖ್ಯಪ್ರಾಣದೇವರು ಪ್ರವೇಶವಾದರು.

ವೇದ ಅಪೌರುಷೇಯ ಗ್ರಂಥ, ಅನಾದಿ ವೇದಾರ್ಥ ತಿಳಿಸಿಕೊಡಬೇಕಾಗಿ, ವೇದವ್ಯಾಸ ಮಾಡಿದಂಥ ಭಾರತಾದಿ ಗ್ರಂಥ, ಸರ್ವಶಾಸ್ತ್ರ ನಿರ್ಣಯ ಮಾಡಿಕೊಟ್ಟಾರೆ. ಭಾರತಾರ್ಥ ತಾತ್ಪರ್ಯದಿಂದ ಹೇಳಥಾರೆ. ವೇದಾರ್ಥ ತಮಗೆ

ಕಠಿಣವಿಲ್ಲದಿದ್ದರೂ, ಮುಖ್ಯಪ್ರಾಣ ರೂಪತ್ರಯಗಳು ವೇದಶ್ರುತಿಯಲ್ಲಿ ಹೇಳಿದಂಥಾದ್ದನ್ನೆಲ್ಲ ಹೇಳಿ, ಇನ್ನು ಪ್ರಮಾಣಗಳು ಹೇಳಥಾರೆ. ಪೌರುಷಗ್ರಂಥದಲ್ಲಿ ಮುಖ್ಯಪ್ರಾಣನ ಮಹಿಮೆ ಹೇಳತದೆ. ಯಜ್ಞದೊಳಗೆ ಅಶ್ವಮೇಧಯಜ್ಞ ಹ್ಯಾಂಗೆ ದೊಡ್ಡದು, ಎರಡು ಕಾಲು ಪ್ರಾಣಿಗಳೊಳಗೆ ಮನುಷ್ಯರು ಹ್ಯಾಂಗೆ ದೊಡ್ಡವರು, ನಾಲ್ಕು ವರ್ಣದೊಳಗೆ ಬ್ರಾಹ್ಮಣರು ಹ್ಯಾಂಗೆ ದೊಡ್ಡವರು ಹಾಂಗೆ, ದೇವತೆಗಳೊಳಗೆ ಮಾರುತಿ ದೊಡ್ಡಾತ. ಸಕಲ ದೇವತೆಗಳಿಗೆ ದೇವೇಂದ್ರ ಬಲಪ್ರದ, ದೇವೇಂದ್ರನಿಗೆ ರುದ್ರ ಬಲಪ್ರದ, ರುದ್ರಗೆ ವಾಯುದೇವರು ಬಲಪ್ರದ, ವಾಯುದೇವರಿಗೆ ನಾರಾಯಣ ಬಲಪ್ರದ, **ವಾಯುರ್ಭೀಮೋ ಭೀಮನಾದೋ.** ಸಮಸ್ತ ದೈತ್ಯರನ್ನ ವಿನಾಶಮಾಡುವಾತ ಭೀಮಸೇನ, ಸಮಸ್ತ ಪ್ರಾಣಿಗಳಿಗೆ ಪ್ರಾಣಭೂತ. ಮರಣಕಾಲದಲ್ಲಿ ಜೀವನ್ನ ದೇಹವಿಯೋಗ ಮಾಡಿಸಿಕೊಂಡು, ನಾರಾಯಣನ್ನ ಹೆಗಲ ವ್ಯಾಲೆ ಕೂಡಿಸಿಕೊಂಡು ಹೋಗತಾನೆ. ಜೀವಕ್ಕೆ ನಾನಾ ಯೋನಿಗಳ ಅನುಭವಿಸಿಸಿ, ಕಡೇಲಿ ಚರಮದೇಹದಿಂದ ಕಡೆಗೆ ಮಾಡಿಸಿ, ದಿವ್ಯಗತಿ, ನಾರಾಯಣನಾಜ್ಞಾದಿಂದ ಮೋಕ್ಷಾಧಿಕಾರಿಗಳಿಗೆ ಮೋಕ್ಷ ಕೊಡಥಾನೆ. ದೇವದೇವನಾದಂಥ ವಾಯುದೇವರು ಭೀಮಸೇನನಾಗಿ ಹುಟ್ಟಿ, ನಾರಾಯಣಗೆ ಅಂಗಭೂತನಾಗಿ ಭೂಭಾರ ಇಳಸಥಾನೆ. ಕೌರವಪಾಂಡವರ ಸೈನ್ಯದೊಳಗೆ ಭೀಮಸೇನನ ಸದೃಶ ಶೌರ್ಯದಲ್ಲಿ, ಧೈರ್ಯದಲ್ಲಿ, ವೇಗದಲ್ಲಿ ಜ್ಞಾನದಲ್ಲಿ ಬಲದಲ್ಲಿ, ಲಾಘವದಲ್ಲಿ, ಪಾಂಡಿತ್ಯದಲ್ಲಿ, ಪಟುತರದಲ್ಲಿ, ಪರಾಕ್ರಮದಲ್ಲಿ—ಭಾರತದಲ್ಲಿ—ಭೀಮಸೇನನ ಸರಿ ದಾರೂ ಇಲ್ಲ. ಅರ್ಜುನನಸ್ಪಂದೆ ಭೀಮಸೇನ ದುಃಖಮಾಡಿಕೊಂಬಾತನಲ್ಲ. ಭೀಮಸೇನನ ಶೂರತ್ವ ಧರ್ಮರಾಯ ಪೊಗಳಿದ್ದಾನೆ. ಧರ್ಮ ಕಾಮ ಮೋಕ್ಷ ಮಾಡಿಸುವ ಕೀರ್ತಿ ನಮ್ಮ ಭೀಮಸೇನನ ಅಧೀನವಾಗಿಯದೆ. ಧರ್ಮರಾಯ ಸ್ನೇಹದಿಂದ ತಮ್ಮನ್ನ ಪೊಗಳಿದ. ವೈರಿ ದುರ್ಯೋಧನ ಮೊದಲಾಗಿ ಭೀಮಸೇನನ್ನ ಪೊಗಳಿದ್ದಾನೆ. ವಿರಾಟಪರ್ವ ವಾಕ್ಯವದೆ. 'ದೇವಾಸುರರೊಳಗೆ, ಮನುಷ್ಯ, ರಾಕ್ಷಸರೊಳಗೆ ನಾಲ್ವರು ದೊಡ್ಡವರು. ಭೀಮಸೇನ ಬಲಭದ್ರ ಶಲ್ಯ ಕೀಚಕ, ಈ ನಾಲ್ವರು ಸಂಪೂರ್ಣ ಬಲವೀರ್ಯ, ಪರಾಕ್ರಮ ಉಳ್ಳವರು. ಇವರ ಸದೃಶ ಐದನೇವರು ಪರಾಕ್ರಮ ಉಳ್ಳವರು, ನನ್ನ ದೃಷ್ಟಿಗೆ ತೋರೋದಿಲ್ಲ' ಎಂದು ದುರ್ಯೋಧನ ಅಂದಾನೆ. 'ಬಾಹುಪರಾಕ್ರಮದಲ್ಲಿ ಜ್ಞಾನದಲ್ಲಿ ಧೈರ್ಯದಲ್ಲಿ ಶೂರತ್ವದಲ್ಲಿ ಬಲದಲ್ಲಿ ಪಾಂಡಿತ್ಯದಲ್ಲಿ ಪಟುತ್ವದಲ್ಲಿ, ವೇಗದಲ್ಲಿ ಲಾಘವದಲ್ಲಿ ಭೀಮಸೇನನ ಸದೃಶ ದಾರೂ ಇಲ್ಲ', ಎಂದು ಶ್ರುತಿ, ಸ್ಮೃತಿಗಳು ಹೇಳತಪೆ. ಉದ್ಯೋಗಪರ್ವ ಭಾರತವಾಕ್ಯ ಹೇಳಿದ್ದಾರೆ. ಕೃಷ್ಣ ಹಸ್ತಿನಾವತಿಗೆ ಸಂಧಾನಕ್ಕೆ ಹೋಗುವಾಗ ಭೀಮಸೇನ ಮೊದಲಾಗಿ ದಯಾಳುತನಕ್ಕೆ ಬಂದತೆಂದು, ಸ್ವಭಾವ ತೋರಿಸಬೇಕಾಗಿ, 'ಸ್ವಾಮಿ ದಾವ ಪ್ರಕಾರಾದರೂ ಸಂಧಾನ ಮಾಡಿಕೊಂಡು ಬಾ' ಎಂದು, ಅಶಕ್ತತನ ಹೇಳಿ-

ಕೊಳ್ಳಲಿಕ್ಕೆ, ‘ಭೀಮಾ! ನಿನ್ನ ಪರಾಕ್ರಮ ಎತ್ತ ಹೋಯಿತು! ನಿನ್ನ ಬಲ ನೀ ಹೇಳಿಕೊ’ ಎಂದಲ್ಲಿ, ‘ಸ್ವಾಮೀ, ಇಂಥಾ ಬ್ರಹ್ಮಾಂಡ ಎರಡು ಹೋಳು ಮಾಡಿ ತಾಳ ಬಾರಿಸೇನು’ ಹೀಂಗೆ ಎನಲಿಕ್ಕೆ, ‘ಥೋಡೆ ಬಲ ಹೇಳಕೊಂಡಿದ್ದಿ, ಸಾವಿರ ಭಾಗ ಮಾಡಲಿಕ್ಕೆ ಒಂದು ಭಾಗ ನಿನ್ನ ಒಲ ಹೇಳಿಕೊಂಡಿದ್ದಿ’ ಎಂದು ಸ್ವಾಮಿ ಭೀಮಸೇನನ್ನ ಪೊಗಳಿದ್ದಾನೆ. ‘ನೀನು ಕುರುಕುಲದಲ್ಲಿ ಹುಟ್ಟಿದ್ದಿ. ಸಕಲ ಯುದ್ಧ-ಭಾರ ನಿನ್ನಲ್ಲಿಟ್ಟಿದೆ. ನಿನ್ನ ತರುವಾಯ ಅರ್ಜುನನಲ್ಲಿ ಯುದ್ಧಭಾರವಿಟ್ಟಿದೆ. ಅದರ ತರುವಾಯ ತಮ್ಮ ಶಕ್ತ್ಯನುಸಾರ, ವೀರಭೂಪಾಲಕರು ಯುದ್ಧಭಾರ ವಹಿಸಿ-ಕೊಳ್ಳಲಿ’ ಹೀಂಗಂತ ಕೃಷ್ಣ ಅಂದಾನೆ.

ಬ್ರಹ್ಮಾಂಡಪುರಾಣದಲ್ಲಿ ನಾರದಗೆ ಹೇಳಿದ್ದಾರೆ. ಗರುಡ ಶೇಷ ರುದ್ರ ಮೊದಲಾದ ದೇವತೆಗಳಿಗೆ, ನಮ್ಮ ದ್ರೌಪದೀ ಮುಖ್ಯ ಒಡಿಯಳು. ಮುಖ್ಯ-ಪ್ರಾಣನ ದೆಸಿಯಿಂದ ಗರ್ಭ ಧರಿಸಿ, ಗರುಡ ಶೇಷ ರುದ್ರರ ಹಡದಾಳೆ. ಆ ಭಾರತೀ, ದ್ರೌಪದೀ ಆಗಿ ಹುಟ್ಟಿದ್ದಾಳೆ. ಶೇಷನೇವೆ ಬಲರಾಮನಾಗಿ ಹುಟ್ಟಿದ್ದಾನೆ. ಬಲಾಧಿಕ ಮುಸಲಾಯುಧ ಹಿಡಕೊಂಡು ನಿಂತಮ್ಯಾಲೆ, ಆತನ ಎದುರಿಗ್ ಭೀಮಸೇನನ ಹೊರ್ತು ದಾರೂ ನಿಂದಿರಲಾರರು. ಅರ್ಜುನ, ಭೀಮಸೇನ ಮತ್ತು ಕೃಷ್ಣನ ಆಜ್ಞೆಂದ ಬಲರಾಮನ ಎದುರಿಗೆ ನಿಂದಿರುವ. ವೀರ್ಯ ಶೌರ್ಯದಲ್ಲಿ ಅರ್ಜುನನ ಸರಿ ದಾರು ಇದ್ದಾರೆ! ವಾಸುದೇವನ್ನ ಕುರಿತು ದ್ರೌಪದೀ ಅಂದದ್ದು, ‘ಗಾಂಡೀವ ಧನುಸ್ಸು, ಸ್ವಾಮಿ, ನಿನ್ನ ಹೊರ್ತು ಭೀಮಾರ್ಜುನರ ಹೊರ್ತಾಗಿ, ಧರಿಸಲಿಕ್ಕೆ ಸಮರ್ಥರು ದಾರು ಇದ್ದಾರೆ!’ ಅಶ್ವತ್ಥಾಮ, ಅರ್ಜುನನ ನೋಡಲಿಕ್ಕೆ ದೊಡ್ಡವನಲ್ಲವೆ ಎಂದಲ್ಲಿ, ಆಯುಧ ಸಾಧನಸಾಮಗ್ರಿಯಿಂದ ಅಶ್ವತ್ಥಾಮನ್ನ ನೋಡಲಿಕ್ಕೆ, ಅರ್ಜುನ ದೊಡ್ಡ ಪರಾಕ್ರಮಿ. ಅವನಲ್ಲಿ ಅಕ್ಷಯಬತ್ತಳಿಕೆ ಇಹೋದು ಗಾಂಡೀವಧನುಸ್ಸು ಇಹೋದು ಧ್ವಜಸ್ತಂಭದಲ್ಲಿ ಹನುಮಂತ ಇಹೋನು.

‘ನಾರಾಯಣ ಸರ್ವೋತ್ತಮ, ಬ್ರಹ್ಮಾದಿ ದೇವತೆಗಳು ತದ್ದಾಸರು ಎಂದು ಅಪಾರ ವಾಕ್ಯಗಳವೆ. ಪ್ರಾಣಿಗಳ ಮಾರ್ಗ ನೋಡುವವರಿಗೆ ದಿಕ್ಕುಮಾತ್ರ ಹ್ಯಾಂಗೆ ತೋರಸಥಾರೆ, ಅದರಂತೆ ಸುವಾಕ್ಯೋದ್ಧಾರ ಅಲ್ಪಮಾತ್ರ ಹೇಳಿದ್ದೇವೆ. ಇಂಥಾ ಸುವಾಕ್ಯಗಳು ಬಹಳವೆ. ಕ್ಷರಾಕ್ಷರ ಚೇತನಕ್ಕೆ ಉತ್ತಮ, ವಾಸುದೇವನೆಂದು ಸರ್ವ-ಶಾಸ್ತ್ರದಲ್ಲಿ ಹೇಳತದೆ.’ ಇಷ್ಟು ಸುವಾಕ್ಯ ಪೂರ್ಣಪ್ರಜ್ಞಾಚಾರ್ಯರು ಸಂಕ್ಷೇಪದಿಂದ ಜ್ಞಾನಿಗಳಿಗೆ ಹೇಳಿದ್ದಾರೆ. ನಾರಾಯಣ ಗುಣಪೂರ್ಣ ಜಗತ್ಪಾಲಕ ಜಗತ್ತು ಹುಟ್ಟಿಸಿ ಮನಬಂದಂತೆ ರಮಿಸಥಾನೆ. ಇಂಥಾ ದಿವ್ಯಜ್ಞಾನದಿಂದ ಸಂಸಾರವೆಂಬಂಥ ದುಸ್ತರಸಮುದ್ರ ದಾಟಿಸಥಾನೆ. ಇದಕ್ಕೆ ದೃಷ್ಟಾಂತ, ಪಾಂಡವರು ಸ್ವಾಮೀ ಪಾದಕಮಲಾರಾಧನೆ ಮಾಡಿ, ನಾರಾಯಣ ಗುಣಪೂರ್ಣ ಜಗಜ್ಜನ್ಮಾದಿಕಾರಣ ನೆಂದುಪಾಸನೆ ಮಾಡಿ ವೈರಿಗಳ ಕೊಂದು, ಮೂವತ್ತಾರು ವರ್ಷ ಸಾಮ್ರಾಜ್ಯ

ವನ್ನಾಳಿ, ಕಡೇಲಿ ಸ್ವರಾಜ್ಯ ಐದಿದರು. ಲೀಲಾವಿನೋದದಿಂದ ವೈರಿಗಳ ಕೊಂದರು. ಪ್ರಯಾಸದಿಂದ ವೈರಿಗಳ ಕೊಂದವರಲ್ಲ. ಅಪ್ರಯಾಸದಲ್ಲಿ, ಅರಣ್ಯದಲ್ಲಿ ಲೇಶಮಾತ್ರ ದುಃಖವಿಲ್ಲದೆ, ವನಭೋಗಕೊಂಡು. ಅಪ್ರಯಾಸದಿಂದ ವೈರಿಗಳ ವಿನಾಶಮಾಡಿ, ಸಮುದ್ರವೇ ಒಡ್ಯಾಣವಾಗುಳ್ಳಂಥ ಸರ್ವಭೂಮಿ ಆಳಿ, ಕಟ್ಟಕಡೇಲಿ ತಮ್ಮತಮ್ಮ ಸ್ವರಾಜ್ಯ ಐದಿದಕಾರಣ, ಜ್ಞಾನಿಗಳಾದವರು ಆನಂದತೀರ್ಥರು ಮಾಡಿದಂಥ ಗ್ರಂಥ, ಆಸ್ತಿಕತೆಯಿಂದ ಮರಳಿಮರಳಿ ದಾರು ಹೇಳಿ ಕೇಳಥಾರೆ, ಅವರಿಗೆ ಸಂಸಾರದುಃಖ ವಿಲ್ಲ, ಮೋಕ್ಷದಲ್ಲಿ ಆನಂದ ಅನುಭವಿಸಥಾರೆ. ಇಂಥಾ ಸುವಾಕ್ಯ ಕೇಳಿದಮಾತ್ರಕ್ಕೆ, ಅನಿಷ್ಟನಿವೃತ್ತಿ, ಇಷ್ಟಪ್ರಾಪ್ತಿಯಾಗತದೆ ಎಂಬಲ್ಲಿಗೆ ಶ್ರೀಮದಾಚಾರ್ಯರು ಹೇಳಿದ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯವನ್ನು ಪ್ರಾಕೃತದಿಂದ ವಿವರಿಸುವ ' ಸುವಾಕ್ಯೋದ್ಧರಣ ' ಎಂಬ ಎರಡನೇ ಅಧ್ಯಾಯ ಸಂಪೂರ್ಣವು.

॥ ಶ್ರೀಮಧ್ವೇಶಾರ್ಪಣಮಸ್ತು ॥

ಅಧ್ಯಾಯ ೩

ಸರ್ಗ — ಅನುಸರ್ಗ ಪ್ರಾದುರ್ಭಾವ ನಿರ್ಣಯ

ಈ ಮೂರನೇ ಅಧ್ಯಾಯದಲ್ಲಿ ಸೃಷ್ಟಿಪ್ರಕಾರ ಹೇಳಿದೆ. ಮೊದಲನೇ ಅಧ್ಯಾಯದಲ್ಲಿ ಸಕಲಶಾಸ್ತ್ರ ನಿರ್ಣಯಮಾಡಿ ನಾರಾಯಣ ಸರ್ವೋತ್ತಮನೆಂದು ಹೇಳಿ, ಎರಡನೇ ಅಧ್ಯಾಯದಲ್ಲಿ ಸುವಾಕ್ಯಪ್ರಕರಣ ಹೇಳಿ, ಮೂರನೇ ಅಧ್ಯಾಯದಲ್ಲಿ ಭಾರತಾನುಸಾರ ಸಂಕ್ಷೇಪದಿಂದ ಸೃಷ್ಟಿಪ್ರಕಾರ ಹೇಳತದೆ.

ಭಾರತಕ್ಕೆ ಆದಿಕರ್ತರೆಂಬೋರು ವೇದವ್ಯಾಸರು. ಅಂಥಾ ವೇದವ್ಯಾಸರು ಮಂಗಳಾಚರಣೆ ಮಾಡ್ಯಾರೆ. ರಾಮ, ಕೃಷ್ಣಾವತಾರದೊಳಗೆ ರಾಮ ಕೃಷ್ಣರು ಭಾರತದಲ್ಲಿ ಪ್ರತಿಪಾದ್ಯರು. ವೇದವ್ಯಾಸರೂ ಪ್ರತಿಪಾದ್ಯರು ಅಹುದು. ಆದಕಾರಣ ಮಂಗಳಾಚರಣೆ ಮಾಡಥಾರೆ.

ಜಯತ್ಯಜೋಽಖಂಡ ಗುಣೋರುಮಂಡಲಃ |
ಸದೋದಿತೋ ಜ್ಞಾನ ಮರೀಚಿ ಮಾಲೀ ||
ಸ್ವಭಕ್ತಹಾರ್ದೋಚ್ಚತಮೋ ನಿಹಂತಾ |
ವ್ಯಾಸಾವತಾರೋ ಹರಿರಾತ್ಮಭಾಸ್ಕರಃ ||

ನಮ್ಮ ಸ್ವಾಮಿ ವೇದವ್ಯಾಸ ಸ್ವತಂತ್ರಭಾಸ್ಕರ. ಸೂರ್ಯನೋಪಾದಿಯಲ್ಲಿ ಪರತಂತ್ರನಲ್ಲ. ಸ್ವಾಮೀ ಅಂಜಿಕೆಯಿಂದ **'ಭೀಷಾಸ್ಮಾದ್ವಾತಃ ಪವತೇ'**— ಸ್ವಾಮಿ ಅಂಜಿಕೆಯಿಂದ ವಾಯು ಘಾಳಿ ಬೀಸಥಾನೆ ಸೂರ್ಯನು ಉದಯಿಸಥಾನೆ, ದೇವೇಂದ್ರ ವ್ಯಾಳೆವ್ಯಾಳೆಗೆ ಮಳೆಗರೆಯಥಾನೆ, ಅಗ್ನಿ ಜ್ವಲಿಸಥಾನೆ. ಸ್ವಾಮೀ ಅಂಜಿಕೆಯಿಂದ ಮೃತ್ಯುದೇವತೆ ಒದಗಿಬರಥಾಳೆ. ಇವರೆಲ್ಲ ಸ್ವಾಮೀ ಆಜ್ಞಾದಿಂದ ತಮ್ಮತಮ್ಮ ವ್ಯಾಪಾರಗಳ ಮಾಡಥಾರೆ. ಇಂಥಾವರಿಗೆಲ್ಲ ಸ್ವಾಮಿ–ಸೂರ್ಯ, ದೃಷ್ಟಾಂತ ಕೊಟ್ಟು ಮಂಗಳಾಚರಣ ಮಾಡಥಾರೆ. ಜ್ಞಾನಾನಂದಗುಣಗಳೆಂಬ ಗುಣಗಳುಳ್ಳ ಮಂಡಲ ಉಳ್ಳಾತ. ರಶ್ಮಿಗಳು ಬೇಕಲ್ಲ–ಜ್ಞಾನವೆಂಬ ಕಿರಣಗಳುಳ್ಳಾತ. ಇಂಥಾ ಸೂರ್ಯ ದಾವಾಗ ಉದಯಿಸಥಾನೆ, ಆವಾಗ ಕತ್ತಲೆ ಪರಿಹರಿಸಿದರೆ ವೇದವ್ಯಾಸನೆಂಬ ಭಾಸ್ಕರ ಅಜ್ಞಾನವೆಂಬಂಥ ಕತ್ತಲೆ ಪರಿಹರಿಸಥಾನೆ. ಇಂಥಾ ವ್ಯಾಸಾವತಾರನಾದಂಥ ಭಾಸ್ಕರಗೆ ನಮಸ್ಕಾರ.

ರಘುನಾಥನ್ನ ಚಂದ್ರನ್ನ ಮಾಡಿ ವರ್ಣಿಸಥಾರೆ.

ಜಯತ್ಯಜೋಽಕ್ಷೀಣಸುಖಾತ್ಮಬಿಂಬಃ |
ಸ್ವೈಶ್ವರ್ಯಕಾಂತಿ ಪ್ರತತಃ ಸದೋದಿತಃ ||

ಸ್ವಭಕ್ತಸಂತಾಪದುರಿಷ್ಟಹಂತಾ ।
ರಾವಮಾವತಾರೋ ಹರಿರೀಶ ಚಂದ್ರವಮಾಃ ॥

ರಾಮ ಸ್ವತಂತ್ರಚಂದ್ರಮನು. ಕೃಷ್ಣಪಕ್ಷದೊಳಗೆ ಚಂದ್ರಮನು ಕ್ಷೀಣನಾಗಥಾನೆ —ಚಂದ್ರಮಂಡಲ ಇಪ್ಪತ್ತುಸಾವಿರ ಗಾವುದ. ರಾಮ ಎಂಥಾತ, ಶಶ್ವದೇಕ-ಪ್ರಕಾರನಾಗಿ ಉದಿತನಾಗಿರಥಾನೆ. ಚಂದ್ರನು ಬಿಸಲತಾಪ ಶೀತಲಕಿರಣಗಳಿಂದ ಪರಿಹರಿಸಿದರೆ, ರಾಮನೆಂಬೋ ಚಂದ್ರನು ಆಧ್ಯಾತ್ಮಿಕ ಆದಿಭೌತಿಕ ಅಧಿದೈವಿಕ ಹೀಂಗೆ ತ್ರಿವಿಧತಾಪಗಳ ಪರಿಹರಿಸಥಾನೆ. ಇನ್ನು ಕೃಷ್ಣನ್ನ ಸಮುದ್ರ ದೃಷ್ಟಾಂತ ಕೊಟ್ಟು ವರ್ಣಿಸಥಾರೆ.

ಜಯೆತ್ಯಸಂಖ್ಯೇರುಬಲಾಂಬುಪೂರೋ ।
ಗುಣೋಚ್ಚರತ್ನಾಕರ ಆತ್ಮವೈಭವಃ ॥
ಸದಾ ಸದಾತ್ಮಜ್ಞ ನದೀಭಿರಾಪ್ಯಃ ।
ಕೃಷ್ಣಾವತಾರೋ ಹರಿರೇಕಸಾಗರಃ ॥

ಈ ಪ್ರಕಾರ ಕೃಷ್ಣನು ಅಸಂಖ್ಯವಾದಂಥ ಬಲಜ್ಞಾನಸಮೂಹವೆಂಬಂಥ ಉದಕ-ಸಮುದ್ರ ಉಳ್ಳಾತ. ಸಮುದ್ರದಲ್ಲಿ ರತ್ನಗಳು ಇರುತ್ತವೆ. ರತ್ನ ಬೇಕಲ್ಲ —ಜ್ಞಾನವೆಂಬ ರತ್ನ ಉಳ್ಳಾತ. ಸಮುದ್ರಕ್ಕೆ ನದಿಗಳು ಕೂಡಿಯವೆ. ಸಜ್ಜನರೆಂಬಂಥ ನದಿಗಳ ಪ್ರಾಪ್ತಿ ಉಳ್ಳಾತ. ನದಿಗಳು ಸಮುದ್ರಕ್ಕೆ ಹ್ಯಾಂಗೆ ಕೂಡತವೆ ಹಾಂಗೆ ಜ್ಞಾನಿಗಳು — ನಿರ್ದೋಷಜ್ಞಾನ ಉಳ್ಳವರು, ಪರಮಾತ್ಮನ ತತ್ತ್ವವಿಚಾರ ಬಲ್ಲವರು, ಅಂಥಾ ಜ್ಞಾನಿಗಳು — ಕೃಷ್ಣನೆಂಬಂಥ ಆನಂದದ ಸಮುದ್ರದಲ್ಲಿ ರವಿಸಥಾರೆ. ಇಂಥಾ ಜ್ಞಾನಿಗಳಿಗೆ ಆಶ್ರಯನಾದಂಥ ಶ್ರೀಕೃಷ್ಣ ಉತ್ಕೃಷ್ಟನಾಗಿ ಜಯಿಸತಿರಥಾನೆ.

ಜನಮೇಜಯರಾಯಗೆ ವೈಶಂಪಾಯನಾಚಾರ್ಯರು ಭಾರತ ಹೇಳುವಾಗ ಮಂಗಳಾಚರಣೆ ಮಾಡಿದ್ದಾರೆ.

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ವ್ಯಾಸಂ ತತೋಜಯಮುದೀರಯೇತ್ ॥

ನಾರಾಯಣಗೆ ನಮಸ್ಕಾರ. ನರೋತ್ತಮ ಎಂಬ ಮುಖ್ಯಪ್ರಾಣಗೆ ನಮಸ್ಕಾರ. ನರನಾದಂಥ ಶೇಷಗೆ ನಮಸ್ಕಾರ. ದೇವೀ ಎಂಬ ಲಕ್ಷ್ಮೀದೇವಿಗೆ ನಮಸ್ಕಾರ. ಸರಸ್ವತೀಗೆ ನಮಸ್ಕಾರ. ವೇದವ್ಯಾಸಗೆ ನಮಸ್ಕಾರ. ನಾರಾಯಣ ವೇದವ್ಯಾಸ ಅವತಾರ ಒಂದೇ ಬ್ಯಾರೆಬ್ಯಾರೆ ಏನುಕಾರಣ ನಮಸ್ಕಾರ ಎಂದಲ್ಲಿ, ವಾಚ್ಯಸ್ವರೂಪ ನಾರಾಯಣ ವಕ್ತೃಸ್ವರೂಪ ವೇದವ್ಯಾಸನೆಂದು ವ್ಯಾಸಗೆ ನಮಸ್ಕಾರ. 'ಕೃಷ್ಣದ್ವೈಪಾಯನಾ-

ಚಾರ್ಯರು ಮಾಡಿದಂಥ ಜಯನಾಮಕ ಭಾರತ, ಜನಮೇಜಯರಾಯಗೆ ಹೇಳಥೇವೆ' ಎಂದು ವೈಶಂಪಾಯನಾಚಾರ್ಯರು ಮಂಗಳಾಚರಣೆ ಮಾಡಿದ್ದಾರೆ. ಭಾರತಪ್ರತಿಪಾದ್ಯ ನಾರಾಯಣ ನರ ಉಪಸಾಧಕನೆಂದು ಶೇಷಗೆ ನಮಸ್ಕಾರ ಮಾಡಬೇಕು. ಮುಖ್ಯಪ್ರಾಣಗೆ ಏನುಕಾರಣ ಎಂದಲ್ಲಿ ಜ್ಞಾನಾಭೀಷ್ಟ ಕೊಡೋವಲ್ಲಿ ಮುಖ್ಯಪ್ರಾಣ ದೊಡ್ಡಾತ, ಆದಕಾರಣ ನಮಸ್ಕಾರ ಮಾಡಬೇಕು. ಲಕ್ಷ್ಮೀದೇವಿ ಭಾಗ್ಯಾತ್ಮಕಳು, ಹೇಳಿಕೇಳೋರಿಗೆ ಮನಸ್ಸು ಸಮಾಧಾನವಿರಬೇಕು ಉದರ ತುಂಬಿದರೆ ಹೇಳುವವರ ಕೇಳುವವರ ಮನಸ್ಸು ಸ್ವಸ್ಥ ಇದ್ದು ಹೇಳಿಕೇಳಥಾರೆ. ಆದಕಾರಣ ಭಾಗ್ಯಾಭಿಮಾನಿ ಲಕ್ಷ್ಮೀದೇವಿಗೆ ನಮಸ್ಕಾರ. ಸರಸ್ವತೀಗೆ ಏನುಕಾರಣ ನಮಸ್ಕಾರ ಎಂದಲ್ಲಿ, ವಾಗಭಿಮಾನಿ ವಚನಚತುರತಾದಲ್ಲಿ ಪ್ರಾಜ್ಞವೌಳಿ ಸರಸ್ವತೀಯನ್ನು ಪ್ರಸನ್ನೀಕರಿಸಿಕೊಂಡದ್ದರಿಂದ ವಾಕ್ಸಾಫಲ್ಯವಾಗತದೆ ಆದಕಾರಣ ಸರಸ್ವತೀಗೆ ನಮಸ್ಕಾರ. ದಾವ ಗ್ರಂಥ ಹೇಳಿದರೂ ಇವರಿಗೆಲ್ಲ ನಮಸ್ಕಾರಮಾಡಿ ಗ್ರಂಥ ಆರಂಭಿಸ ಬೇಕು. ಭಾರತದಲ್ಲಿ ಇವರೂ ಪ್ರತಿಪಾದ್ಯರು. ನಾರಾಯಣ ಕೃಷ್ಣಾವತಾರಮಾಡಿದ ಕಾರಣ, ಭಾರತದಲ್ಲಿ ಕೃಷ್ಣ ಪ್ರತಿಪಾದ್ಯನೆಂದು ಕೃಷ್ಣಗೆ ನಮಸ್ಕಾರ. ವೇದವ್ಯಾಸ ಭಾರತ ಮಾಡ್ಯಾನೆ ಆದಕಾರಣ, ವೇದವ್ಯಾಸಗೆ ನಮಸ್ಕಾರ. ದೇವೀ ಅಂದರೆ ಲಕ್ಷ್ಮೀ ಅವತಾರಗಳು ರುಕ್ಮಿಣೀ ಸತ್ಯಭಾಮಾರಿಗೆ ನಮಸ್ಕಾರ. ನರ ಎಂದರೆ ಶೇಷಗೆ ನಮಸ್ಕಾರ. ನರೋತ್ತಮನಾದ ಭೀಮಸೇನಗೆ ನಮಸ್ಕಾರ. ನರಾವೇಶನಾದಂಥ ಅರ್ಜುನ ಉಪಸಾಧಕನಾದಕಾರಣ ಅರ್ಜುನಗೆ ನಮಸ್ಕಾರ. ಸರಸ್ವತೀ ಎಂಬ ದ್ರೌಪದೀಗೆ ನಮಸ್ಕಾರ. ಈ ಪ್ರಕಾರ ನಮಸ್ಕಾರ ಮಾಡಿ ಜಯನಾಮಕ ಭಾರತ ಜನಮೇಜಯರಾಯಗೆ ಹೇಳಲಿಕ್ಕೆ ಆರಂಭ ಮಾಡಿದ್ದಾರೆ. ಭಾರತ ಐದನೇ ವೇದ ಹೇಳಲಿಕ್ಕೆ ಶಕ್ತಿ ಬೇಕಲ್ಲ ಎಂದಲ್ಲಿ, ವೈಶಂಪಾಯನಾಚಾರ್ಯರಲ್ಲಿ ಬ್ರಹ್ಮದೇವರು ಹೊಕ್ಕು ಸಮಗ್ರ ಭಾರತ, ವೇದವ್ಯಾಸರಾಜ್ಞಾದಿಂದ ಜನಮೇಜಯರಾಯಗೆ ಹೇಳಿದ್ದಾರೆ.

ಭಾರತದಲ್ಲಿ ಮೋಹಕವದೆ. ಅಂಥಾ ಭಾರತಾರ್ಥ ನಿರ್ಣೈಸಿ ಹೇಳಬೇಕಾಗಿ ಮುಖ್ಯಪ್ರಾಣನ ಅವತಾರ ಭೀಮಸೇನನೇ ಆನಂದತೀರ್ಥರಾಗಿ ಅವತರಿಸಿ, ಭಾರತಾರ್ಥ ಜ್ಞಾನಿಗಳಿಗೆ ತಿಳಿಸಿಕೊಟ್ಟಾರೆ. ಅವರಿಗೆ ಮಧ್ವಾಚಾರ್ಯರೆಂಬ ಮತ್ತೊಂದು ನಾಮವದೆ. ಅಂಥಾ ಮಧ್ವಾಚಾರ್ಯರು ನಾರಾಯಣನ ಚರಿತ್ರೆ ಹೇಳಬೇಕಾಗಿ, ಸೃಷ್ಟಿಪ್ರಕಾರ ಹೇಳಥಾರೆ. ನಾರಾಯಣ ಪ್ರಳಯಕಾಲದಲ್ಲಿ ಲಕ್ಷ್ಮೀ-ರೂಪಳಾದಂಥ ಶ್ರೀ ಭೂ ದುರ್ಗಾದೇವಿ ಕೈಯ ಸೃಷ್ಟಿಮಾಡಬೇಕೆಂದು ಸ್ತೋತ್ರ ಮಾಡಿಸಿಕೊಂಡು, ವಾಸುದೇವ ಸಂಕರ್ಷಣ ಪ್ರದ್ಯುಮ್ನ ಅನಿರುದ್ಧ ಹೀಂಗೆ ನಾಲ್ಕು ಅವತಾರಮಾಡಿದ್ದಾನೆ. ಲಕ್ಷ್ಮೀದೇವಿಯು ಮಾಯಾ ಜಯಾ ಕೃತೀ ಶಾಂತೀ ಹೀಂಗೆ ನಾಲ್ಕು ರೂಪಳಾದಳು.

ಸ್ವಾಮಿ ಮುಂದೇನು ಕರ್ತವ್ಯ ಮಾಡಿದನು ಎಂದಲ್ಲಿ, ಅದನ್ನೆಲ್ಲ ಆನಂದ-ತೀರ್ಥರು ಸಂಗ್ರಹಿಸಿ ಹೇಳುತ್ತಾರೆ. ಸ್ವಾಮಿ ಈ ಸೃಷ್ಟಿಮಾಡಬೇಕೆಂದು ವಾಸು-ದೇವನು ಮಾಯಾದೇವಿ ಭೋಗಮಾಡಿ, ಪುರುಷನಾಮಕ ಬ್ರಹ್ಮನ ಹಡೆದನು. ಸಂಕರ್ಷಣ ಜಯಾದೇವಿ ಭೋಗಮಾಡಿ, ಸೂತ್ರನಾಮಕ ವಾಯುದೇವರನ್ನು ಹಡೆದನು. ಆ ವಾಯುದೇವರೇವೆ ಭಾವಿಬ್ರಹ್ಮನಾದನು. ಇಂಥಾ ಸೂತ್ರನಾಮಕ ಮುಖ್ಯಪ್ರಾಣ ಸಮಸ್ತ ಜೀವರಾಶಿಯಲ್ಲಿರಥಾನೆ. ಪ್ರದ್ಯುಮ್ನ ಕೃತೀ ಭೋಗಮಾಡಿ, ಆಕೆಯಲ್ಲಿ ಅವಳಿ-ಜವಳಿ ಪ್ರಕೃತೀ ಶ್ರದ್ಧಾದೇವಿ ಎಂಬ ಎರಡು ಹೆಣ್ಣುಮಕ್ಕಳ ಹಡೆದ. ಇವರನ್ನ ನಾರಾಯಣನಾಜ್ಞೆಂದ ಬ್ರಹ್ಮದೇವರು ವಾಯುದೇವರು ಮದುವೆ ಮಾಡಿಕೊಂಡರು. ಪುರುಷನಾಮಕ ಬ್ರಹ್ಮನ ದೆಸೆಯಿಂದ ಪ್ರಕೃತೀ ಎಂಬಂಥ ಸ್ತ್ರೀಯಲ್ಲಿ ಜೀವಾಭಿಮಾನಿ ಶೇಷ ಹುಟ್ಟಿದನು. ಸೂತ್ರನಾಮಕ ಮುಖ್ಯಪ್ರಾಣನ ದೆಸೆಯಿಂದ ಶ್ರದ್ಧಾಳಲ್ಲಿ ಕಾಲಾಭಿಮಾನಿ ಗರುಡ ಹುಟ್ಟಿದನು. ಗರುಡ ನಾರಾಯಣಗೆ ವಾಹನನಾದ. ಶೇಷ ನಾರಾಯಣಗೆ ಹಾಸಿಗೆಯಾದ. ಪ್ರಸಂಗ ಸಂಗತಿಯಿಂದ ದ್ವಾರಪಾಲಕರ ಹೇಳಬೇಕಾಗಿ ವಿಷ್ವಕ್ಸೇನ ಪಾರ್ಶದ ಸೂತ್ರನಾಮಕ ವಾಯು-ದೇವರ ಮಗ ಕಾಲ ಜಯ ಕುಮುದ ಪ್ರಚಂಡ ಮೊದಲಾದವರು, ಪುರುಷನಾಮಕ-ನಾಪಂಥ ಬ್ರಹ್ಮದೇವರ ದೆಸೆಯಿಂದ ಹುಟ್ಟಿದ್ದಾರೆ. ವಿಷ್ವಕ್ಸೇನನ್ನ ನೋಡಲಿಕ್ಕೆ ನೀಚರು, ಬ್ರಹ್ಮಾಂಡ ಹುಟ್ಟಿದಮ್ಯಾಲೆ ಎಷ್ಟೋ ದಿನಕ್ಕೆ ಹುಟ್ಟಿದ್ದಾರೆ. ಇವರೆಲ್ಲ ಇಂದ್ರಾದಿಗಳ ನೋಡಲಿಕ್ಕೆ ನೀಚರು. ಸ್ವಾಮಿ ನಾರಾಯಣ ಬ್ರಹ್ಮ ಕ್ಷತ್ರಿಯ ವೈಶ್ಯ ಶೂದ್ರ ಈ ಪ್ರಕಾರ ಬೀಜಾತ್ಮಕರಾದ ದೇವತಿಗಳ ಒಂದು ಸಾವಿರ ವರ್ಷ, ಸೃಷ್ಟಿ ಮಾಡದೆ ಸುಮ್ಮನಿದ್ದನು.

ಇನ್ನು ತತ್ತ್ವಸೃಷ್ಟಿ ಮಾಡಬೇಕಾಗಿ ಇವರಷ್ಟು ಮುಂದೀನ್ನೂ, ಶಾಂತೀ ಉದರದಲ್ಲಿ ಸೃಷ್ಟಿಮಾಡಿದ್ದಾನೆ. ಸ್ಥೂಲಸೃಷ್ಟಿ ಮಾಡಬೇಕಾಗಿ, ಸ್ವಾಮಿ ಮಹ-ತ್ತತ್ತ್ವಕ್ಕೆ ಅಭಿಮಾನಿ ಬ್ರಹ್ಮದೇವರನ್ನು ಹುಟ್ಟಿಸಿದನು. ಸಂಗಡಲೇ ಶಾಂತೀದೇವಿ ದೆಸೆಯಿಂದ ವಾಗಭಿಮಾನಿ ಸರಸ್ವತೀ ಹುಟ್ಟಿದಳು ಬ್ರಹ್ಮದೇವರು ಸರಸ್ವತೀ ಭೋಗಮಾಡಿ, ಅಹಂಕಾರತತ್ತ್ವಕ್ಕೆ ಅಭಿಮಾನಿ ಮಹಾರುದ್ರನ್ನ ಹುಟ್ಟಿಸಿದನು. ಬುದ್ಧಿಗೆ ಅಭಿಮಾನಿ ಉಮಾದೇವಿ ಹುಟ್ಟಿದಳು. ಮಹಾರುದ್ರ, ಉಮಾದೇವಿ ಭೋಗಮಾಡಿ, ವೈಕಾರಿಕರುದ್ರ ತೈಜಸರುದ್ರ ತಾಮಸರುದ್ರ ಹೀಂಗೆ ಮೂರು ಮಂದಿ ರುದ್ರರನ್ನ ಹುಟ್ಟಿಸಿದನು. ವೈಕಾರಿಕರುದ್ರನ ದೆಸೆಯಿಂದ ಮನಸ್ಸು ಇಂದ್ರಿಯಾಭಿಮಾನಿ ದೇವತೆಗಳು ಹುಟ್ಟಿದರು. ತೈಜಸರುದ್ರನ ದೆಸೆಯಿಂದ ಐದು ಜ್ಞಾನೇಂದ್ರಿಯ ಐದು ಕರ್ಮೇಂದ್ರಿಯ ಹೀಂಗೆ ಹತ್ತು ಇಂದ್ರಿಯಗಳು ಬುದ್ಧಿ ಅಹಂಕಾರಿಕ ಪ್ರಾಣ ಹುಟ್ಟಿದವು. ತಾಮಸಾಹಂಕಾರ ದೆಸೆಯಿಂದ ಪಂಚಭೂತ ಪಂಚತನ್ಮಾತ್ರ ಹುಟ್ಟಿದವು—ಪೃಥ್ವಿ ಅಪ್ಪು ತೇಜಸ್ಸು ವಾಯು ಆಕಾಶ ಶಬ್ದ

ಸ್ಪರ್ಶ ರೂಪ ರಸ ಗಂಧ. ಆಕಾಶಗುಣ ಶಬ್ದ; ವಾಯುವಿನ ಗುಣ, ಶಬ್ದ ಸ್ಪರ್ಶ; ತೇಜಸ್ಸಿನ ಗುಣ, ಶಬ್ದ ಸ್ಪರ್ಶ ರೂಪ; ಉದಕದ ಗುಣ, ಶಬ್ದ ಸ್ಪರ್ಶ ರೂಪ ರಸ; ಪೃಥ್ವಿಯಲ್ಲಿ, ಶಬ್ದ ಸ್ಪರ್ಶ ರೂಪ ರಸ ಗಂಧ, ಹೀಂಗೆ ಪಂಚಭೂತ ಪಂಚ-ತನ್ಮಾತ್ರ ತಾಮಸರುದ್ರನ ದೆಸಿಯಿಂದ ಆದವು.

ಇನ್ನು ಪುರುಷನಾಮಕ ಬ್ರಹ್ಮದೇವರ ದೆಸಿಯಿಂದ ಪ್ರಕೃತೀನಾಮಕ ಸರಸ್ವತೀ ಗಾಯಿತ್ರೀ ಸಾವಿತ್ರೀ ಸರಸ್ವತೀ ಹೀಂಗೆ ತ್ರಿರೂಪಳಾದಳು. ಬ್ರಹ್ಮದೇವರ ದೆಸಿಯಿಂದ ಬ್ರಹ್ಮ ವಾಯು ಶೇಷ ಹೀಂಗೆ ಮೂರುವುಂದಿ ಹುಟ್ಟಿದರು. ಇವರು ಮೂರು ವುಂದಿ ದೆಸಿಯಿಂದ ಮೂರುವುಂದಿ ರುದ್ರರು ಹುಟ್ಟಿದರು. ಬ್ರಹ್ಮದೇವರ ದೆಸಿಯಿಂದ ವೈಕಾರಿಕರುದ್ರ ಹುಟ್ಟಿದ. ವಾಯುದೇವರ ದೆಸಿಯಿಂದ ತೈಜಸರುದ್ರ ಹುಟ್ಟಿದ. ಶೇಷನ ದೆಸಿಯಿಂದ ತಾಮಸರುದ್ರ ಹುಟ್ಟಿದ. ಈ ಮೂರು ಥಂಡ ರುದ್ರರ ದೆಸಿಯಿಂದ ಇಂದ್ರಾದಿ ದೇವತೆಗಳು ಹುಟ್ಟಿದ್ದಾರೆ. ಸೂತ್ರನಾಮಕ ವಾಯುದೇವರ ದೆಸಿಯಿಂದ ಶ್ರದ್ಧಾದೇವಿಯಲ್ಲಿ ಶೇಷ ರುದ್ರ ಇಂದ್ರರು ಹುಟ್ಯಾರೆ. ವಾಸುದೇವನ ದೆಸಿಯಿಂದ ಬ್ರಹ್ಮ ವಿಷ್ಣು ಮಹೇಶ್ವರ ಹೀಂಗೆ ಮೂರು ಅವತಾರ ನಾರಾಯಣನೇ ಮಾಡಿದ್ದಾನೆ. ಮಾಯಾರೂಪಳಾದಂಥ ಲಕ್ಷ್ಮೀದೇವಿ, ಶ್ರೀ ಭೂ ದುರ್ಗಾ ಎಂತ ಮೂರು ರೂಪಳಾದಳು. ಅಲ್ಲಿ ಬ್ರಹ್ಮ ವಿಷ್ಣು ಮಹೇಶ್ವರ ಹೀಂಗೆ ಮೂರು ನಾರಾಯಣಾವತಾರಗಳಾದವು. ಜಡಪ್ರಕೃತಿ ಸತ್ತ್ವ ರಜ ತಾಮಸ ಹೀಂಗೆ ಮೂರು ಪ್ರಕಾರವಾದವು. ಸತ್ತ್ವಗುಣಕ್ಕೆ ಅಭಿಮಾನಿ ಶ್ರೀದೇವಿಯಲ್ಲಿ, ವಿಷ್ಣು ಆಗಿ ಹುಟ್ಟಿದನು. ರಜೋಗುಣಕ್ಕೆ ಅಭಿಮಾನಿ ಭೂದೇವಿಯಲ್ಲಿ, ವಿರಿಂಚಿನಾಮಕ ನಾರಾಯಣ ಹುಟ್ಟಿದನು. ತಮೋಗುಣಕ್ಕೆ ಅಭಿಮಾನಿ ದುರ್ಗಾದೇವಿಯಲ್ಲಿ, ರುದ್ರನಾಮಕ ನಾರಾಯಣ ಹುಟ್ಟಿದನು. ಹೀಂಗೆ ಸೌಪರ್ಣಶ್ರುತಿಯಲ್ಲಿ ಹೇಳದೆ. ಜ್ಞಾನಾನಂದಪೂರ್ಣ ಪುರುಷೋತ್ತಮ ಜಗತ್ಸೃಷ್ಟಿ ಸ್ಥಿತಿ ಲಯ ಮಾಡಬೇಕಾಗಿ, ಸತ್ತ್ವ ರಜ ತಮ ಪ್ರಕೃತಿಗುಣಗಳ ನೋಡಿದ. ಏನುಕಾರಣ ಗುಣತ್ರಯಗಳ ನೋಡಿದ ಎಂದರೆ, ಸತ್ತ್ವಗುಣದಿಂದ ಜಗತ್ತು ಪಾಲಿಸಬೇಕೆಂದು ವಿಷ್ಣು ಅವತಾರ ಮಾಡಿದ. ರಜೋಗುಣದಿಂದ ಸೃಷ್ಟಿ ಮಾಡಬೇಕೆಂದು ಬ್ರಹ್ಮಾಂಡದೊಳಗೆ ಚತುರ್ಮುಖಬ್ರಹ್ಮದೇವರ ಹುಟ್ಟಿಸಿ, ಚತುರ್ಮುಖಬ್ರಹ್ಮನೊಳಗೆ ಬ್ರಹ್ಮನಾಮಕ ನಾರಾಯಣ ಪ್ರವಿಷ್ಟನಾದ. ತಮೋಗುಣದಿಂದ ಜಗತ್ತು ಸಂಹಾರಮಾಡಬೇಕಾಗಿ ಪಂಚಮುಖರುದ್ರನ್ನ ಹುಟ್ಟಿಸಿ, ರುದ್ರನೊಳಗೆ ರುದ್ರನಾಮಕ ನಾರಾಯಣ ಪ್ರವಿಷ್ಟನಾದ—ವಿಷ್ಣು ಸಾಕ್ಷಾದವತಾರ, ಬ್ರಹ್ಮರುದ್ರರು ಆವೇಶಾವತಾರ. ಜಗತ್ಸೃಷ್ಟಿ-ಸಂಹಾರ ಮಾಡುವಲ್ಲಿ ಮುಖ್ಯಕರ್ತ ನಾರಾಯಣ.

ಇನ್ನು ಬ್ರಹ್ಮಾಂಡದ ಉತ್ಪತ್ತಿ ಹೇಳಬೇಕಾಗಿ, ದೇವತೆಗಳ ಸ್ತೋತ್ರಪ್ರಕಾರ ಹೇಳಥಾರೆ. ದೇವತೆಗಳು ತಮಗೆ ನಿಂದಿರಲಿಕ್ಕೆ ಮನಿ ಇಲ್ಲವಾದ ಕಾರಣ—ತಾವು

ಬ್ರಹ್ಮಾಂಡ ಹುಟ್ಟಿಸುವಲ್ಲಿ ಸಮರ್ಥರಲ್ಲ—'ಸ್ವಾಮೀ, ನಮಗೆ ನಿಲ್ಲಲಿಕ್ಕೊಂದು ಘಟ್ಟ ಮನಿ ಮಾಡಿಕೊಡು' ಎಂದು ಸಮಸ್ತ ತಾತ್ತ್ವಿಕದೇವತೆಗಳು, ವಿಷ್ಣು-ನಾಮಕ ನಾರಾಯಣಗೆ ಸ್ತೋತ್ರಮಾಡಿದರು. ಸ್ವಾಮಿ ಚಿತ್ರವಿಚಿತ್ರ ಜಗತ್ಸೃಷ್ಟಿ ಮಾಡೋದರಲ್ಲಿ ಬಹಳ ನಿಸ್ಸೀಮ ಪರಮ ಸಮರ್ಥ ಅಚಿಂತ್ಯಮಹಿಮೆ ಶಕ್ತಿ ಉಳ್ಳಾತ. 'ಸ್ವಾಮಿ, ನಾವು ನಿನ್ನ ಭೃತ್ಯರಿದ್ದೇವೆ. ನಮಗೆಲ್ಲ ಈ ಪ್ರಕಾರ ಇರೋದೆಂದು ಆಜ್ಞಾ ಹೇಳಿಕೊಡು. ನೀ ಸರ್ವೋತ್ತಮ ದೇವತೆ ಇದ್ದಿ' ಎಂದು ಬ್ರಹ್ಮಾದಿ ದೇವತೆಗಳು ಸ್ತೋತ್ರಮಾಡಿದರು. ಸ್ವಾಮಿ ಅನಂತಪರಾಕ್ರಮ ಉಳ್ಳಾತ ದೇವತೆಗಳ ಕೈಯ ಸ್ತೋತ್ರಮಾಡಿಸಿಕೊಂಡು ವಿಷ್ಣುನಾಮಕ ನಾರಾಯಣ ಶ್ರೀದೇವಿ ಭೋಗಮಾಡಲಾಗಿ, ಹಿರಣ್ಯಾತ್ಮಕವಾದ ಬ್ರಹ್ಮಾಂಡ, ಉದಕದೊಳಗೆ ಹಡೆದಳು. ದಾವ ಉದಕದೊಳಗೆ ಹಡೆದಳು ಎಂದಲ್ಲಿ, ಮಹಾಪ್ರಳಯೋದಕ ಮೊದಲಿಗೆ ಶೋಷಿಸಿಬಿಟ್ಟಿದ್ದ. ಪಂಚಭೂತದೊಳಗಿನ ಉದಕದೊಳಗೆ ಸುವರ್ಣಾತ್ಮಕ ಬ್ರಹ್ಮಾಂಡ ಹಡೆದಳು. ಸ್ವಾಮಿ ಹೊರಗಿದ್ದ ದೇವತೆಗಳ ಕೊಂಡು, ವಿಷ್ಣುನಾಮಕ ನಾರಾಯಣ ಬ್ರಹ್ಮಾಂಡದೊಳಗೆ ಪ್ರವಿಷ್ಟನಾದ. ಬ್ರಹ್ಮಾಂಡದೊಳಗಿನ ಗರ್ಭೋದಕ-ದಲ್ಲಿ ದೇವತೆಗಳು ಹುಟ್ಟಿದರು. ಸ್ವಾಮಿ ಯೋಗನಿದ್ರೆ ಮಾಡಲಾಗಿ, ನಾಭೀ-ಕಮಲದಿಂದ ಹದಿನಾಲ್ಕುಲೋಕಕ್ಕೆ ಆಶ್ರಯವಾದ ಸುವರ್ಣಾತ್ಮಕ ಕಮಲ ಹುಟ್ಟಿತು. ಆ ಕಮಲದಲ್ಲಿ ಬ್ರಹ್ಮರಾಯ ಹುಟ್ಟಿದ. ಈ ಚತುರ್ಮುಖ ಬ್ರಹ್ಮನಿಂದ ಸಕಲಸೃಷ್ಟಿ ಆಗತದೆ. ಬ್ರಹ್ಮಾಂಡದೊಳಗೆ ಬ್ರಹ್ಮದೇವರ ದೇಹದಲ್ಲಿ ತತ್ತ್ವಭಿಮಾನಿ ದೇವತೆಗಳು ಬ್ರಹ್ಮರಾಯನ ಆಶ್ರಯಿಸಿ ನಿಂತರು.

ದೇವತೆಗಳು ತಮ್ಮೊಳಗೆ ಯಾರು ದೊಡ್ಡವರೆಂದು ವಿಚಾರಕ್ಕೆ ಬಿದ್ದರು. ತಾವು ಬಲ್ಲವರಾದರೂ ಸರಿಯೇ ಲೋಕಕ್ಕೆ ತಿಳಿಸಬೇಕಾಗಿ, ಮುಖ್ಯಪ್ರಾಣ ಸರ್ವ-ಜೀವೋತ್ತಮನೆಂದು ಸಕಲರಿಗೆ ತಿಳಿಸಿಕೊಟ್ಟರು. ಋಗ್ವೇದ ಆರಣ್ಯಕದಲ್ಲಿ **'ಅತೇ-ಹಿಂಸಂತ'** ಎಂಬ ಶ್ರುತಿಪ್ರಮಾಣವದೆ. ಬ್ರಹ್ಮದೇವರ ಪಾದದಲ್ಲಿ ಜಯಂತ ಬಿಟ್ಟುಹೋಗಲಿಕ್ಕೆ, ಪಾದಚೇಷ್ಟ ಇಲ್ಲದಹಾಂಗಾಯಿತು. ಕಣ್ಣಿನಲ್ಲಿ ಸೂರ್ಯ ಇದ್ದವ ಬಿಟ್ಟುಹೋಗಲಿಕ್ಕೆ, ಕುರುಡಾಯನ ಹೊಕ್ಕರು. ಶ್ರೋತ್ರೇಂದ್ರಿಯಾಭಿಮಾನಿ ದೇವತೆಗಳು ಬಿಟ್ಟುಹೋಗಲಿಕ್ಕೆ, ಕಿವುಡಾಯನ ಹೊಕ್ಕರು. ಅಶ್ವಿನೀದೇವತೆಗಳು ಬಿಡಲಾಗಿ, ಮೂಕನೆಂದರು. ಸಮಸ್ತ ದೇವತೆಗಳು ಬಿಟ್ಟುಹೋದರೂ, ದೇಹ ಪತನವಾಗಿದ್ದಿಲ್ಲ. ಮುಖ್ಯಪ್ರಾಣ ಬಿಡಲಿಕ್ಕೆ, ಬ್ರಹ್ಮದೇವರ ದೇಹ ಪತನವಾಯಿತು. ದೇವತೆಗಳೆಲ್ಲ ಕೂಡಿ ಇನ್ನೊಮ್ಮೆ ಪರೀಕ್ಷೆ ಮಾಡಬೇಕೆಂದು, ಮೊದಲು ಹ್ಯಾಂಗೆ ಬಿಟ್ಟಿದ್ದರೋ ಅದೇ ಪ್ರಕಾರ ಬ್ರಹ್ಮರಾಯನ ದೇಹದೊಳಕ್ಕೆ ಹೋಗಲಿಕ್ಕೆ, ಚೇಷ್ಟ ಏನೂ ಆಗಲಿಲ್ಲ. ಆಗ ಮುಖ್ಯಪ್ರಾಣ ಪ್ರವೇಶವಾಗೋಣ ದೇಹ ಎದ್ದಿತು. ಅದರಿಂದ ಮಾರುತಿ ದೇವೋತ್ತಮ ದೊಡ್ಡವನೆಂದು ದೇವತೆಗಳೆಲ್ಲ ತಿಳಿದರು.

ಬ್ರಹ್ಮದೇವರು ಆ ದೇಹದಲ್ಲಿರಲಿಕ್ಕೆ ಮುಖ್ಯಪ್ರಾಣನ ಮಹಿಮೆ ಉತ್ಕೃಷ್ಟವಾಗಿ ಏನುಕಾರಣ ಹೇಳಬೇಕು ಎಂದಲ್ಲಿ, ಮುಖ್ಯಪ್ರಾಣ ರುದ್ರಾದಿ ದೇವತೆಗಳಿಗೆ ಸರ್ವ-ಜೀವೋತ್ತಮನೆಂದು ಲೋಕಕ್ಕೆ ತಿಳಿಸಬೇಕಾಗಿ ನಾರಾಯಣ, ಬ್ರಹ್ಮದೇವರು ಉದಾಸೀನ ಉಳ್ಳವರಾಗಿದ್ದರು. ದೇಹಕ್ಕೆ ಚೇಷ್ಟ ಮಾಡಿಸೋವಲ್ಲಿ ನಾರಾಯಣ ಬ್ರಹ್ಮದೇವರು ಪರಮ ಸಮರ್ಥರಾದರೂ, ಮಧ್ಯಸ್ಥರಾಗಿ ಮುಖ್ಯಪ್ರಾಣನ ಮಹಿಮೆ ಪ್ರಕಟಮಾಡಬೇಕಾಗಿ, ಉದಾಸೀನವೃತ್ತಿ ಉಳ್ಳವರಾಗಿದ್ದರು. ನಾರಾಯಣ, ಬ್ರಹ್ಮ-ದೇವರ ಹೊರ್ತ ಮುಖ್ಯಪ್ರಾಣ ದೊಡ್ಡಾತನೆಂದು ಸಮಸ್ತ ದೇವತೆಗಳು ತಿಳಿದರು.

ಸ್ವಾಮೀ ನಾಭೀಕಮಲ ಹದಿನಾಲ್ಕುದಳಾತ್ಮಕವಾದುದು. ಅದರಿಂದ ಕೆಳಗೆ ಅತಳಾದಿ ಸಪ್ತಲೋಕಗಳಾದವು. ಹೀಂಗೆ ಹದಿನಾಲ್ಕು ಲೋಕದಲ್ಲಿ, ಬ್ರಹ್ಮದೇವರ ದೆಸೆಯಿಂದ ಸ್ಥೂಲತರ ಸೃಷ್ಟಿ—ದೇವತೆಗಳು ಋಷಿಗಳು ಸಮಸ್ತರು ಹುಟ್ಟಿದರು. ದಾವದಾವ ಅವಯವದಿಂದ ದಾರುದಾರು ಹುಟ್ಟಿದರು ಎಂದರೆ, ಬ್ರಹ್ಮದೇವರಂತಃ-ಕರಣವು ಮೂರು ಪ್ರಕಾರ ಇಹೋವು—ಅಹಂಕಾರವೃತ್ತಿ ಬುದ್ಧಿವೃತ್ತಿ ಮನೋ-ವೃತ್ತಿ. ಅಹಂಕಾರವೃತ್ತಿಯಿಂದ ಮಹಾರುದ್ರ ಹುಟ್ಟಿದ. ಬುದ್ಧಿವೃತ್ತಿಯಿಂದ ಉಮಾದೇವಿ ಹುಟ್ಟಿದಳು. ಮನೋವೃತ್ತಿಯಿಂದ ಇಂದ್ರಕಾಮರು ಹುಟ್ಟಿದ್ದಾರೆ. ಗುರು ಆದಿತ್ಯರು ಬೃಹಸ್ಪತಿ ಸ್ವಾಯಂಭುವಮನು ದಕ್ಷಪ್ರಜೇಶ್ವರ ಅನಿರುದ್ಧ ಶಚೀದೇವಿ. ಇವರೆಲ್ಲ, ಬ್ರಹ್ಮದೇವರ ಮನಸ್ಸಿನಿಂದ ಹುಟ್ಟಿದರು. ಬ್ರಹ್ಮದೇವರ ಕಣ್ಣಿನ ದೆಸೆಯಿಂದ ಸೂರ್ಯನು ಹುಟ್ಟಿದನು. ಶ್ರೋತ್ರೇಂದ್ರಿಯದಿಂದ ದಿಗಭಿಮಾನಿ ದೇವತೆಗಳು ಹುಟ್ಟಿದರು. ಸ್ಪರ್ಶೇಂದ್ರಿಯದಿಂದ ವಕ್ಷಸ್ಥಳದಲ್ಲಿ ಯಮಧರ್ಮ ಹುಟ್ಟಿದನು. ನಾಲಿಗೆಯಿಂದ ವರುಣ ಹುಟ್ಟಿದನು. ಮೂಗಿನ ದೆಸೆಯಿಂದ ಅಶ್ವಿನೀ ದೇವತೆಗಳು ಹುಟ್ಟಿದರು. ಹೀಂಗೆ 'ಪದ್ಮಸೃಷ್ಟಿ' ಹೇಳಿದರು. ಇಲ್ಲಿಗೆ ಬ್ರಹ್ಮದೇವರಿಗೆ ಐವತ್ತುವರ್ಷವಾಯಿತು. ಈ ಐವತ್ತು ವರ್ಷದ ಪೈಕಿ ಎರಡು ದಿನ ಉಳಿದಿರಲಿಕ್ಕೆ, ಮೊದಲ ದಿವಸ ವಿರಾಟಕಲ್ಪ ಎರಡನೇ ದಿವಸ ಪದ್ಮಕಲ್ಪ ಈ ಪ್ರಕಾರ ಹೇಳಿ, ಎರಡನೇ ಐವತ್ತುವರ್ಷದೊಳಗೆ ಮೊದಲ ದಿವಸದಲ್ಲಿ ವರಾಹಕಲ್ಪ ಹೇಳಿದ್ದಾರೆ.

ತಾರತಮ್ಯಸೂಚಕ ಹೇಳಬೇಕಾಗಿ, ಮೊದಲ ದಿವಸ ಬ್ರಹ್ಮದೇವರ ಮನಸ್ಸಿನ ದೆಸೆಯಿಂದ ಸನಕಾದಿಗಳು—ಸನಕ ಸನಂದನ ಸನತ್ಸುಜಾತ ಸನತ್ಕುಮಾರ—ನಾಲ್ಕು ಮಂದಿ ಹುಟ್ಟಿದರು. ಹಾಂಗೆ ಬ್ರಹ್ಮದೇವರ ಮನಸ್ಸಿನಿಂದ ಮರೀಚಿ ಅತ್ರಿ ಅಂಗೀರಸ ಪುಲಸ್ತ್ಯ ಪುಲಹ ಕ್ರತು ವಸಿಷ್ಠ ಹೀಂಗೆ ಏಳುಮಂದಿ ಮರೀಚ್ಯಾದಿ ಋಷಿಗಳು ಹುಟ್ಟಿದರು. ಬ್ರಹ್ಮರಾಯ ಸನಕಾದಿಗಳಿಗೆ ಸೃಷ್ಟಿಮಾಡಲು ಆಜ್ಞಾಪಿಸಿದನು. ಸನ್ಯಾಸಿಗಳಾದ ತಮಗೆ ಸೃಷ್ಟಿ ಥರವೇ ಅಂದಾಗ, ಬ್ರಹ್ಮದೇವರಿಗೆ ಕೋಪ ಬಂತು. ಕೋಪ ಹೊರಚೆಲ್ಲದೆ ಹುಬ್ಬುಗಂಟುಹಾಕಿಕೊಂಡು ಕುಳಿತಿರಲಿಕ್ಕೆ, ಬ್ರಹ್ಮ-ದೇವರ ದೆಸೆಯಿಂದ ಮಹಾರುದ್ರ ಹುಟ್ಟಿದ. ಸನಕಾದಿಗಳ ನೋಡಲಿಕ್ಕೆ ಮಹಾರುದ್ರ

ದೊಡ್ಡಾತ. ಮೊದಲೇ ಹುಟ್ಟಿದವರು ದೊಡ್ಡವರೆಂದು ತಿಳಿಯಬಾರದು. ಮೊದಲೇ ದೇವತೆಗಳು ಹುಟ್ಟಿಲ್ಲ, ಅಸುರರು ಹುಟ್ಯಾರೆ. ಅಸುರರು ದೊಡ್ಡವರಂತ ತಿಳಿಯಬಾರದು. ಬ್ರಹ್ಮಾಂಡದಲ್ಲಿ ವಿಚಿತ್ರವಾದಂಥ ಸೃಷ್ಟಿಯದೆ. ಮೊದಲಿಗೆ ದೈತ್ಯರು— ಹಿರಣ್ಯಾಕ್ಷ ಹಿರಣ್ಯಕಶಿಪು ಮಧು ಕೈಟಭ ಮೊದಲಾದ ಅಸುರರು ಹುಟ್ಯಾರೆ. ದೈತ್ಯರು ದೊಡ್ಡವರೆಂತ ತಿಳಿಯಬಾರದು. ಅಸುರರ ಹೊರ್ತು ಆದಿಸೃಷ್ಟಿಯಲ್ಲಿ ಮೊದಲಿಗೆ ದಾರುದಾರು ಹುಟ್ಟಿದರೂ ದೈತ್ಯರು ಹುಟ್ಟಿದಕಾಲಕ್ಕೂ ದೊಡ್ಡವರೆನ-ಬಾರದು. ಕಲಿ ಹಿಂದಿನಕಡೇಲಿಂದ ಹುಟ್ಟಿದ್ದಾನೆ; ಇದು ತಾರತಮ್ಯಸೂಚಕವಲ್ಲ; ದೈತ್ಯರೊಳಗೆ ದೊಡ್ಡಾತ. ಸಂಸಾರದಲ್ಲಿ ದೇವತೆಗಳು, ನೀಚಕ್ರಮದಿಂದ ಹುಟ್ಟುವಾಗ ತಾರತಮ್ಯಕ್ಕೆ ವ್ಯತ್ಯಾಸವಿಲ್ಲ. ದೇವತೆಗಳು ಅಂಶದಿಂದ ಹುಟ್ಟಿದರೂ ಸರಿಯೇ ಶುಕ್ಲಶೋಣಿತ ತಾಯಿತಂದೇರ ದೋಷದಿಂದ ಯುಗಾನುಸಾರದಿಂದ, ಅವರ ಜ್ಞಾನಾನಂದಗುಣಗಳು ಕೊರತಿಯಾಗತವೆ. ಅಪರೋಕ್ಷಜ್ಞಾನಿಗಳಿಗೆ ಮೊದಲಿಗೆ ಪ್ರಾರಬ್ಧಕರ್ಮದಿಂದ ಜ್ಞಾನ ತಿರೋಧಾನವಾಗತದೆ. ಉಚ್ಚಕ್ರಮದಿಂದ ಸೃಷ್ಟಿಯಾಗತದೆ, ನೀಚಕ್ರಮದಿಂದ ಪ್ರಳಯವಾಗತದೆ. ಸ್ವಾಮಿ ಪ್ರಳಯಕಾಲದಲ್ಲಿ ವಟಪತ್ರಶಯನನಾಗಿರಥಾನೆ. ಸ್ವಾಮಿಗೆ ಗಾಢನಿದ್ರೆಯಿಲ್ಲ, ಯೋಗನಿದ್ರೆ ಮಾಡಥಾನೆ. ಇಂಥಾ ಸ್ವಾಮಿ, ಜಗದ್ವ್ಯಾಪಾರ ಮಾಡಲಿಕ್ಕೆ ಅನಂತಾನಂತ ಅವತಾರಗಳ ವ್ಯಕ್ತ ಮಾಡಥಾನೆ. ಅನಂತಶಕ್ತಿ ಉಳ್ಳಾತ ಅನಂತಗುಣಪರಿಪೂರ್ಣ. ಅವಯವಗಳು ಅನಂತ, ಅನಂತಬಾಹು, ಅನಂತಶೀರ್ಷ, ಅನಂತಹಸ್ತ-ಪಾದ—ಈ ಪ್ರಕಾರ ಅನಂತ ಸುಖಸಮುದ್ರದೊಳಗೆ ಅನಂದ ಅನುಭೋಗಿಸಿಕೊಳ್ಳತಿರಥಾನೆ. ಇಂಥಾ ಸ್ವಾಮಿ ಅನಾದ್ಯನಂತಕಾಲದಲ್ಲಿ ಸೃಷ್ಟಿ, ಸಂಹಾರ ಮಾಡತಿರಥಾನೆ. ಕುಂಬಾರ ಮಣ್ಣು ತೀರೋಣ, ಮೃಣ್ಮಯಪಾತ್ರೆ ಮಾಡೋದು ಹ್ಯಾಂಗೆ ಬಿಡತಾನೆ ಹಾಂಗೆ, ಸ್ವಾಮಿಗೆ ಎಲ್ಲ ಉಪಸಾಧನ ತೀರಿಹೋಯಿತೆನಲಿಕ್ಕೆ ಕೂಡದು. ಜೀವಗಳು ಅನಂತ. ಪ್ರಕೃತಿ ನಿತ್ಯ, ಕಾಲ ಪ್ರವಾಹದಿಂದ ನಿತ್ಯ, ಕೈವುತ್ಯನ್ಯಾಯದಿಂದ ದೇವದೇವನಾದಂಥ ನಾರಾಯಣ ನಿತ್ಯನೆಂದು ಎಷ್ಟಂತ ಹೇಳಬೇಕು! ಅನಂತಕಾಲದಲ್ಲಿ ಶಶ್ವದೇಕ-ಪ್ರಕಾರನಾಗಿ, ಹದಿನಾರುವರ್ಷದ ಪ್ರಾಯದವನೋಪಾದಿ ನಿತ್ಯನಾಗಿರಥಾನೆ. ಸಮುದ್ರದೊಳಗೆ ನದಿಗಳು ಹ್ಯಾಂಗೆ ಕೂಡತವೆ ಹ್ಯಾಂಗೆ ಕಲಕವಾಗೋದಿಲ್ಲ ಹಾಂಗೆ, ಸರ್ವಜೀವರೂ ನಾರಾಯಣನ ಉದರದೊಳಗೆ ಹೋಗಿ ಕೂಡಥಾರೆ. ಸ್ವಾಮಿ ದೇಶಕಾಲಪರಿಚ್ಛೇದಶೂನ್ಯ—ಈ ಪ್ರಕಾರ ಅನಂತಕಲ್ಪ ಅನಂತ ಬ್ರಹ್ಮಾಂಡಗಳಾಗಿ ಹೋಗಿಯವೆ—ಇಂಥಾ ಬ್ರಹ್ಮಾಂಡನಾಯಕಗೆ ಸರ್ವಜಗತ್ತಿನ ವ್ಯಾಲೆ ಲೀಲೆಯದೆ. ಸರ್ವದೇಶದಲ್ಲಿ ಸರ್ವಕಾಲದಲ್ಲಿ ಇರಥಾನೆ. ಇಂಥಾ ಲಕ್ಷ್ಮೀಪತಿಯ ಮಹಿಮೆ ನಿರಂತರವಿಂದ ಯಾರು ಹೇಳಿ ಕೇಳಥಾರೋ ಅವರು ಸಂಶಯವಿಲ್ಲದೆ ಮುಕ್ತಿ ಐದಥಾರೆ.

ದೇವತೆಗಳು ಲಿಂಗಭಂಗರಾಗಿ ತೀರಿಹೋದರು, ಎನಲಿಕ್ಕಿಲ್ಲ. ದೇವತಾಗಣಗಳು ಅನಂತ. ದೇವತೆಗಳು ಮೊದಲಾಗಿ ಮನುಷ್ಯೋತ್ತಮರು ಕಡೆಯಾಗಿ ಹರಿವಿಷಯಕ ಜ್ಞಾನ ಸಂಪಾದಿಸಿ, ಸಾಧನಸಂಪತ್ತು ಮಾಡಿಕೊಂಡು, ಶ್ವೇತದ್ವೀಪಾನಂತಾಸನಕ್ಕೆ ಹೋಗಿ ತಮ್ಮ ಸ್ವರೂಪಾನಂದ ಅನುಭವಿಸಥಾರೆ. ಸ್ವಾಮಿ ತನ್ನ ಭಕ್ತರಿಗೆ ತನ್ನರಮನೆ ಶ್ವೇತದ್ವೀಪ ಅನಂತಾಸನ ವೈಕುಂಠದಲ್ಲಿ ಸ್ನೇಹದಿಂದಿಟ್ಟುಕೊಂಡಿರಥಾನೆ. ಈ ಪ್ರಕಾರ ಸೂಕ್ಷ್ಮಸೃಷ್ಟಿ ಹೇಳಥಾರೆ. ಈ ಬ್ರಹ್ಮಾಂಡದ ಸ್ಥೂಲ ಸೂಕ್ಷ್ಮತರ ಹೇಳಿ ಇನ್ನುಮೇಲಿನ ಸೃಷ್ಟಿ ಹೇಳಥಾರೆ.

ಬ್ರಹ್ಮಾಂಡದೊಳಗೆ ಮೂರು ಪ್ರಕಾರ ಸೃಷ್ಟಿ. ವರಾಹಕಲ್ಪಸೃಷ್ಟಿಯಲ್ಲಿ ಹುಟ್ಟಿದಂಥವರೆ ಮಿಥುನಭಾವದಿಂದ ಕಶ್ಯಪನ ಹೊಟ್ಟೇಲಿ ಹುಟ್ಟಿದ್ದಾರೆ. ಸ್ವಾಯಂಭುವಮನು ಶತರೂಪಾದೇವಿ ಬ್ರಹ್ಮದೇವರ ದೆಸೆಯಿಂದ ಹುಟ್ಟಿ ಅಲ್ಲಿ ಮಿಥುನಸೃಷ್ಟಿ. ಪ್ರಿಯವ್ರತರಾಯ ಉತ್ತಾನಪಾದರಾಯ ಆಕೂತಿ ದೇವಹೂತಿ ಪ್ರಸೂತಿ ಹೀಂಗೆ ಮೂರು ಮಂದಿ ಹೆಣ್ಣುಮಕ್ಕಳಿಂದ ಸೃಷ್ಟಿ ಮೊದಲಿಗೆ ನಡದದೆ. ಅದೆಲ್ಲಾ ಭಾಗವತದಲ್ಲಿ ಹೇಳತದೆ. ನಿರ್ಣಯಗ್ರಂಥ ಸಂಕೋಚವದೆ ಆದಕಾರಣ ಕಶ್ಯಪನಿಂದ ಮಿಥುನಸೃಷ್ಟೀನೆ ಹೇಳಥಾರೆ. ಸನಕಾದಿಗಳಿಗೆ ಸೃಷ್ಟಿಮಾಡು ಎಂದರೆ ತಾವು ಸನ್ಯಾಸಿಗಳೆಂದು ಸೃಷ್ಟಿ ಮಾಡದ ಕಾರಣ, ಬ್ರಹ್ಮರಾಯ ಮರೀಚ್ಯಾದಿ ಋಷಿಗಳಿಗೆ ಆಜ್ಞಾಪಿಸಿದನು. ಮರೀಚಿ ಕಶ್ಯಪನ್ನ ಹಡೆದನು. ಕಶ್ಯಪಗೆ ಹದಿಮೂರು ಮಂದಿ ಹೆಂಡರು. ಅವರೆಲ್ಲ ದಕ್ಷಪ್ರಜೇಶ್ವರನ ಮಕ್ಕಳು. ಕಶ್ಯಪನ ದೆಸೆಯಿಂದ ಅದಿತಿಯಲ್ಲಿ ಇಂದ್ರಾದಿ ದೇವತೆಗಳು ಹುಟ್ಟಿದರು. ದಿತಿಯಲ್ಲಿ ದೈತ್ಯರು ಹುಟ್ಟಿದರು. ಸುರಭಿಯಲ್ಲಿ ಕಾಮಧೇನುಗಳು ಹುಟ್ಟಿದವು. ವಿನತಾದೇವಿಯಲ್ಲಿ ಗರುಡ ಮೊದಲಾಗಿ ಪಕ್ಷಿಗಳು ಹುಟ್ಟಿದವು. ಕದ್ರುದೇವಿಯಲ್ಲಿ ಸರ್ಪಗಳು ಹುಟ್ಟಿದವು. ದನೂದೇವಿಯಲ್ಲಿ ದಾನವರು ಹುಟ್ಟಿದರು. ಈ ಪ್ರಕಾರ ಮಿಥುನಸೃಷ್ಟಿ ನಡೆದು, ಕಶ್ಯಪನ ದೆಸೆಯಿಂದ ಬ್ರಹ್ಮಾಂಡ ತುಂಬಿತು. ಸರ್ವಜಗತ್ತು ಕಶ್ಯಪನಿಂದ ಪೂರ್ಣವಾಯಿತು. ಈ ಪ್ರಕಾರ ಸಂಕೋಚದಿಂದ ಸೃಷ್ಟಿ ಹೇಳಿ ಸ್ವಾಮಿ ದಶಾವತಾರ ಮಾಡಿ, ಏನು ಅದ್ಭುತ ಚರಿತ್ರೆ ತೋರಿಸಥಾನೆಂದಲ್ಲಿ ಹೇಳಥಾರೆ.

ಮೊದಲೇ ಸ್ವಾಮಿ ವರಾಹಾವತಾರ ಮಾಡಿ ಎರಡು ಪ್ರಯೋಜನ ಮಾಡಿದ್ದಾನೆ—ಮತ್ಸ್ಯಕೂರ್ಮಾವತಾರ ಎಣಿಸುವಾಗ ಮೊದಲೇ ಹೇಳಬೇಕು. ವರಾಹಕಲ್ಪಾನುಸಾರ ಹೇಳಥಾರೆ. ಯಾವ ಸೃಷ್ಟಿಯಾಗಲೀ ಸ್ವಾಮಿಗೆ ಲಯವಿಲ್ಲ. ಸೃಷ್ಟಿ ಸಂಹಾರರೂಪ ಹೇಳಿ ಇನ್ನು ಪಾಲನರೂಪ ಹೇಳಬೇಕಾಗಿ ವರಾಹಾವತಾರ ಹೇಳಥಾರೆ. ರಾಕ್ಷಸರು ಲೋಕಕ್ಕೆ ಉಪದ್ರವ ಕೊಡುತಿಹೋರು. ಅಂಥವರನ್ನು ಕೊಂದು ಸಜ್ಜನರನ್ನು ಸಂರಕ್ಷಿಸುವುದರಿಂದ ಪಾಲನೆ ಎನಿಸತದೆ. ಸ್ವಾಮಿ ತಾನು ಉತ್ಪತ್ತಿನಾಶರಹಿತನಾದರೂ ವರಾಹಾವತಾರ ವ್ಯಕ್ತಮಾಡಿದ್ದಾನೆ. ಏನು ಕಾರಣ

ಎಂದರೆ, ಬ್ರಹ್ಮಾಂಡದೊಳಗೆ ಪಂಚಾಶತ್ಕೋಟಿ ಭೂಮಿ ವ್ಯಾಪಿಸಿರಲಿಕ್ಕೆ, ಮೇರು ಮಂದರಾದಿ ಪರ್ವತಗಳ ಭಾರದಿಂದ ಹಸೀ ಭೂಮಿಯಾದಕಾರಣ ಪಾತಾಳ-ಲೋಕಕ್ಕೆ ಭೂಮಿ ಇಳದುಹೋಯಿತು. ಸ್ವಾಯಂಭುವಮನು ತಮ್ಮ ತಂದಿ ಬ್ರಹ್ಮದೇವರಿಗೆ ವಿಜ್ಞಾಪನೆ ಮಾಡಿಕೊಂಡ, 'ನೀನಂತೂ ನನಗೆ ಸೃಷ್ಟಿಮಾಡು ಎಂದು ಆಜ್ಞಾಪಿಸುತ್ತಿದ್ದಿ. ನಾನು ಎಲ್ಲಿ ಸೃಷ್ಟಿ ಮಾಡಬೇಕು?' ಹೀಂಗಂತ ಬ್ರಹ್ಮದೇವರನ್ನು ಕೇಳಲಾಗಿ ಬ್ರಹ್ಮದೇವರು, ಹಿರಣ್ಯಾಕ್ಷನ ಕೊಂದೇನು ಎಂದಲ್ಲಿ, ಆಬ್ಜನಾಭ ವೈಕುಂಠದಲ್ಲಿರಲಿಕ್ಕೆ ಸನಕಾದಿಗಳು ಮುಂದುಗಾಣದೆ ಏನು ವಿಚಾರ ಮಾಡಬೇಕೆಂದು ತಟಸ್ಥರಾಗಿ ಕುಳಿತಿರಲಿಕ್ಕೆ ಬ್ರಹ್ಮದೇವರ ನಾಸಾಪುಟದಿಂದ ಸಣ್ಣ ವರಾಹವುರಿ ಬಂತು. ಆ ವರಾಹದೇವರೇ ಆದಿಹಿರಣ್ಯಾಕ್ಷನ ಕೊಂದಾನೆ. ದಿತಿಪುತ್ರ ಹಿರಣ್ಯಾಕ್ಷನ ದಾವ ಪ್ರಕಾರ ಕೊಂದಾನೆ ಎಂದಲ್ಲಿ ಭೂಮಿ ಉದಕದೊಳಗೆ ಮುಣಗಿ ಹೋಗಿತ್ತು. ವರಾಹದೇವರು ತನ್ನ ಕೋರೆದಾಡೆ ಮ್ಯಾಲೆ ಭೂಮಿ ಇಟ್ಟುಕೊಂಡು ಪಾತಾಳಲೋಕದಿಂದ ಬರಲಿಕ್ಕೆ 'ನಮ್ಮ ಲೋಕಕ್ಕೆ ಬಂದ ಭೂಮಿ ಹ್ಯಾಂಗೆ ಒಯ್ದಿ?' ಎಂದು ಹಿರಣ್ಯಾಕ್ಷ ವರಾಹದೇವರಿಗೆ ಅಡ್ಡಗಟ್ಟಲಿಕ್ಕೆ ವೈರಿಶಿಕ್ಷಕನಾದಂಥ ವರಾಹದೇವರು ಬ್ರಹ್ಮದೇವರ ದೆಸೆಯಿಂದ ಹುಟ್ಟಿದಂಥ ಹಿರಣ್ಯಾಕ್ಷನ ತನ್ನ ಕೋರೆ-ದಾಡೆಲಿಂದ ಕೊಂದುಬಿಟ್ಟನು. ಅವನ ರಕ್ತಮಾಂಸದಿಂದ ಭೂಮಿಯನ್ನೆಲ್ಲಾ ಲೇಪಿಸಿಬಿಟ್ಟನು. ಇದರಿಂದ ಭೂಮಿಯೆಲ್ಲಾ ಗಟ್ಟಿಯಾಯಿತು. ಭೂಮಿ ಉದಕದ ಮ್ಯಾಲೆ ಸ್ಥಾಪಿಸಿದನು.

ಎರಡನೇ ಆವರ್ತಿ ದಿತಿಪುತ್ರ ಹಿರಣ್ಯಾಕ್ಷನ ಹ್ಯಾಂಗೆ ಕೊಂದನು ಎಂದಲ್ಲಿ, ಆಬ್ಜನಾಭ ವೈಕುಂಠದಲ್ಲಿರಲಿಕ್ಕೆ ಸನಕಾದಿಗಳು ಹದಿನಾಲ್ಕು ಲೋಕ ತಿರುಗುತ್ತ ಸ್ವಾಮೀ ದರ್ಶನಕ್ಕೆ ಬಂದರು. ಸ್ವಾಮಿ ರಾಣೀವಾಸದೊಳಗಿದ್ದನು. ಒಳಗೆ ಹೋಗ. ಬ್ಯಾಡೆಂದು ಜಯ ವಿಜಯ ದ್ವಾರಪಾಲಕರು ಸನಕಾದಿಗಳಿಗೆ ನಿರಾಕರಿಸಿದರು. ಸನಕಾದಿಗಳು ಜಯ ವಿಜಯರಿಗಂದದ್ದು, 'ನಾವು ಸ್ವಾಮೀ ಭೃತ್ಯರು. ನಮ್ಮ ಸ್ವಾಮಿಗೆ ಅಂಜಿಕಿ ತಿಳಿದೀರ್ಯ? ಸ್ವಾಮೀ ದರ್ಶನಕ್ಕೆ ಹೋಗಲಿಕ್ಕೆ ಹ್ಯಾಂಗೆ ನಿವಾರಿಸಿದರಿ? ನೀವು ಮೂರು ಜನ್ಮದಲ್ಲಿ ಅಸುರಸ್ವಭಾವದಿಂದ ದೈತ್ಯರಾಗಿ ಹುಟ್ಟಿರಿ' ಎಂದು ಶಾಪ ಕೊಡಲಿಕ್ಕೆ, ಬ್ರಾಹ್ಮಣಶಾಪದಿಂದ ಜಯ ವಿಜಯ, ದಿತಿ-ಪುತ್ರರಾಗಿ ಹಿರಣ್ಯಾಕ್ಷ ಹಿರಣ್ಯಕಶಿಪರಾಗಿ ಹುಟ್ಟಿದರು. ಎರಡನೇ ಜನ್ಮದಲ್ಲಿ ರಾವಣ ಕುಂಭಕರ್ಣರಾಗಿ ಹುಟ್ಟಿದರು. ಮೂರನೇ ಜನ್ಮದಲ್ಲಿ ಶಿಶುಪಾಲ ದಂತವಕ್ರರಾಗಿ ಹುಟ್ಟಿದರು ಸ್ವಾಮೀ ಕೈಯ ಸತ್ತು ಮೂಲರೂಪ ಐದಿದ್ದಾರೆ. ದಿತಿಪುತ್ರ ಹಿರಣ್ಯಾಕ್ಷ ಸವುಗ್ರ ಭೂಮಿ ಸುರಳಿ ಸುತ್ತಿಕೊಂಡು ಕದ್ದು ಒಯ್ಯಲಿಕ್ಕೆ, ಸ್ವಾಮಿ ವರಾಹನಾಮಕ ನಾರಾಯಣ ಹಿರಣ್ಯಾಕ್ಷನ್ನ ಕರ್ಣತಾಡನ ಮಾಡಿ ಮ್ಯಾಲೆಬಿದ್ದು ಸಾಯಿಕುಟ್ಟಿದನು. ಈ ಪ್ರಕಾರ ವರಾಹದೇವರು ಬ್ರಹ್ಮದೇವರ ಮಗ ಆದಿ-ಹಿರಣ್ಯಾಕ್ಷನ ಮತ್ತು ಈ ಹಿರಣ್ಯಾಕ್ಷನ್ನ ಕೊಂದನು.

ಇನ್ನು ಮತ್ಸ್ಯಾವತಾರ ಹೇಳಥಾರೆ. ಮತ್ಸ್ಯಾವತಾರ ಮಾಡಿ ಎರಡು ಪ್ರಯೋಜನ ಸಾಧಿಸಿದ್ದಾನೆ. ಬ್ರಹ್ಮದೇವರು ಸ್ವಾಮೀ ಅನುಗ್ರಹದಿಂದ ಸರ್ವಜ್ಞ-ನಾದರೂ, ಹಯಾಸುರನೆಂಬೋ ದೈತ್ಯನು ಕೇಳೋಹಾಂಗೆ ವೇದ ಹೇಳತಿದ್ದ. ಬ್ರಹ್ಮರಾಯ ದೇವರ ಧ್ಯಾನದಿಂದ ಮಗ್ನನಾಗಿ ವೇದ ಹೇಳತಿರಲಿಕ್ಕೆ, ಹಯಾಸುರ ಅಡಗಿಕೊಂಡು ವೇದ ಕೇಳಿದ. ದೈತ್ಯ ವೇದ ಕೇಳಿದ್ದರಿಂದ ವೇದವೀರ್ಯ ಕೆಟ್ಟತಾದ ಕಾರಣ—ಮಾರ್ಗ ನಡೋವಾಗ್ಗೆ ವೇದ ಹೇಳಬಾರದು. ಶೂದ್ರಸ್ಪರ್ಶವಾಗಲಿಕ್ಕೆ ವೇದ ಹೇಳಿದ ಬ್ರಾಹ್ಮಣನ ವೀರ್ಯ ಕೆಡತದೆ. ಶೂದ್ರರು ಚಂಡಾಲರು ಕೇಳೋ ಹಾಂಗೆ ವೇದ ಹೇಳಬಾರದು. ಮಂತ್ರ ಗೋಪ್ಯ ಇರಬೇಕು. ಗುಣಗಳ ಕೀರ್ತಿಸಿ ಪ್ರಕಾಶ ಮಾಡಬೇಕು. ಹೀಂಗೆ ಮಾಡಿದರೆ ವೇದವೀರ್ಯ ಮಂತ್ರಗಳು ಫಲ ಕೊಡತವೆ. ಈರೀತಿ ಮಾಡದೆಹೋದರೆ ಅವನ ಸಂಪತ್ತು ಕೆಡತದೆ ಆಯುಸ್ಸು ಕ್ಷೀಣವಾಗತದೆ.—ಬ್ರಹ್ಮದೇವರು ವೇದ ಹೇಳೋದು ಬಿಟ್ಟುಬಿಟ್ಟನು. ಅನಧ್ಯಯನ ಮಾಡಿಕೊಂಡು ಕುಳಿತಿರಲಿಕ್ಕೆ, ಕೃತಮಾಲಾ ಎಂಬೋ ನದಿಯಲ್ಲಿ ಚಾಕ್ಷುಷ ಮನ್ವಂತರದ ಕಡೆಯಲ್ಲಿ ಸತ್ಯವ್ರತರಾಯನು ನದೀಸ್ನಾನ ಮಾಡಿ ಜಲತರ್ಪಣ ಮಾಡಲಿಕ್ಕೆ ಕುಳಿತಿರುವಾಗ, ಸತ್ಯವ್ರತರಾಯನ ಕೈಯೊಳಗೆ ಸಣ್ಣ ಮೀನ ಬಂತು. ರಾಯನು ಉದಕದೊಳಗೆ ಬಿಸ್ಟಲಿಕ್ಕೆ ‘ಜಾತಿವೈರಿಗಳು, ದೊಡ್ಡ ಮೀನಗಳು ನನ್ನ ಕೊಂದಾವು’ ಎಂದು ಕೃಪೆ ಬರೋಹಾಂಗೆ ಮೀನ ಮಾತಾಡಲಿಕ್ಕೆ, ಸತ್ಯವ್ರತರಾಯ ಕಮಂಡಲದೊಳಕ್ಕೆ ಹಾಕಿದ ಮಂಥನದೊಳಗೆ ಹಾಕಿದ, ಸಣ್ಣ ಮಡುವಿನೊಳಗೆ ಹಾಕಿದ. ಅತಿ ಅಭಿವೃದ್ಧಿ ಕ್ಷಣದೊಳಗೆ ಆ ಮೀನ ಆಯಿತು. ಅದನ್ನು ಕಂಡು ಸಮುದ್ರದೊಳಗೆ ಹಾಕಿದನು. ಸ್ಥೂಲದೇಹದಿಂದ ವ್ಯಾಪಿಸಲಿಕ್ಕೆ ಹತ್ತೋಣ ಅದು ನೋಡಿ ಈ ಮೀನ ಸರ್ವೋತ್ತಮ ಇದ್ದಾನೆಂದು, ಸತ್ಯವ್ರತರಾಯ ಸ್ತೋತ್ರ ಮಾಡಲಿಕ್ಕೆ ‘ಈ ಚಾಕ್ಷುಷಮನ್ವಂತರ ಏಳುದಿನ ಉಳದದೆ. ಸಪ್ತಸಮುದ್ರ ಉಕ್ಕೇರಿ ಬಂದಾವು. ನಿನ್ನ ಸಮೀಪಕ್ಕೆ ನಾವಿ ಬಂದೀತು. ನಾ ಬಂದೇನು. ಸರ್ಪದಿಂದ ನಾವಿಗೆ, ನನ್ನ ಮೀಸಿಗೆ ತಗಲುಹಾಕು. ನಿನಗೆ ಜ್ಞಾನೋಪದೇಶ ಮಾಡೇನು,’ ಎಂದು ಹೇಳಿ ಮತ್ಸ್ಯರೂಪೀ ನಾರಾಯಣ ಅದೃಶ್ಯನಾದನು. ಆ ಮತ್ಸ್ಯದೇವರು ಹಯಾಸುರನ ಕೊಂದು, ಬ್ರಹ್ಮದೇವರಿಗೆ ವೇದೋಪದೇಶ ಮಾಡಿ ವೇದ ವೀರ್ಯವತ್ ಮಾಡಿಕೊಟ್ಟನು. ಆ ಮತ್ಸ್ಯದೇವರೇವೆ ಚಾಕ್ಷುಷಮನ್ವಂತರ ಪ್ರಳಯಕಾಲದಲ್ಲಿ ಸತ್ಯವ್ರತರಾಯನ್ನ ಸಪ್ತಋಷಿಗಳ ಸಹವಾಗಿ, ನಾವೀ ಒಳಗೆ ಕೂಡಿಸಿಕೊಂಡು ತತ್ತ್ವನಿರ್ಣಯ ಹೇಳಿದ್ದಾನೆ. ಈ ಪ್ರಕಾರ ಮತ್ಸ್ಯದೇವರು ಎರಡು ಕಾರ್ಯ ಸಾಧಿಸಿಕೊಟ್ಟನು.

ಇನ್ನು ನರಸಿಂಹಾವತಾರ ಹೇಳಥಾರೆ. ಹಿರಣ್ಯಕಶಿಪುಗೆ ಬ್ರಹ್ಮದೇವರ ವರವು ಇಹೋದು. ಜಗತ್ತಿಗೆಲ್ಲ ತಾ ವರಗಳ ಕೊಡತಿಹ. ದೇವತಿಗಳಿಗೆ ಬಹಳ ಉಪದ್ರವ

ಕೊಡತಿಹ. ದೇವತಾಸ್ತ್ರೀಯರ ಹಿಡಕೊಂಡು ಹೋಗಿ ತನ್ನ ಅಂಗಳ ಗುಡಿಸಿಸತಿಹ. ಈ ಪ್ರಕಾರ ಅಗ್ಗಳಿಕೆ ಮಾಡೋದು ಕಂಡು, ದೇವತಿಗಳೆಲ್ಲ ಬ್ರಹ್ಮರಾಯನ್ನ ಮುಂದೆ ಮಾಡಿಕೊಂಡು ಕ್ಷೀರಸಮುದ್ರಕ್ಕೆ ಹೋಗಿ ನಾರಾಯಣಗೆ ಮೊರೆ ಇಟ್ಟರು.

ಹಿರಣ್ಯಕಶಿಪುವಿಗೆ ಪ್ರಹ್ಲಾದ ಹರಿಭಕ್ತಮಗ ಇದ್ದನು. ವಿದ್ಯ ಕಲೀಲಿಕ್ಕೆ ಹಾಕಿದರೆ ನಾರಾಯಣ ಸರ್ವೋತ್ತಮನೆಂದು ನವವಿಧ ಭಕುತಿಯನ್ನೇ ಓದುತಿಹ. ಮಗನ ವಿದ್ಯ ಪುರೋಹಿತರ ಮುಖದಿಂದ ಕೇಳಿ ಪ್ರಹ್ಲಾದನಿಗೆ ನಾನಾಪ್ರಕಾರ ಭಂಗಪಡಿಸಿದ. ಹರಿಭಕ್ತನಾದಕಾರಣ ಆತಗೆ ಏನೂ ಬಾಧೆ ಆಗಲಿಲ್ಲ. 'ಎಲೋ, ನಿನ್ನ ಸ್ವಾಮಿ ಎಲ್ಲಿದ್ದಾನೆ?' ಎನಲಿಕ್ಕೆ 'ಸರ್ವವ್ಯಾಪ್ತನಾಗಿದ್ದಾನೆ.' ಎಂದ. 'ಈ ಕಂಭದಲ್ಲಿ ಇಹನೆ?' ಎನಲಿಕ್ಕೆ 'ಈ ಕಂಭದಲ್ಲಿದ್ದಾನೆ' ಎಂದ ಪ್ರಹ್ಲಾದನ ಮಾತು ಕೇಳಿ ಹಿರಣ್ಯಕಶಿಪು ಕೋಪದಿಂದ ಮುಷ್ಟೀಪೆಟ್ಟಿನಿಂದ ಕಂಭಕ್ಕೆ ಹೊಡೀಲಿಕ್ಕೆ, ಸ್ವಾಮಿ ಕಂಭದೊಳಗಿಂದ ಬ್ರಹ್ಮಾಂಡ ಒಡೆದರೆ ಎಷ್ಟು ಶಬ್ದವಾಗತದೆ ಅಂಥಾ ಘಟಘಟಾಶಬ್ದ ಮಾಡತ ತನ್ನ ಭಕ್ತ ಪ್ರಹ್ಲಾದನ ವಚನ ಸತ್ಯ ಮಾಡಬೇಕಾಗಿ, ಶುಕ್ಲಶೋಣಿತರಹಿತನೆಂದು ದೃಷ್ಟಾಂತ ತೋರಿಸಬೇಕಾಗಿ ನರಸಿಂಹಾವತಾರ ಮಾಡಿ, ಹಿರಣ್ಯಕಶಿಪುನ ಕೊಂದು ಕರುಳ ಸೀಳಿ ಮಾಲೀ ಹಾಕಿಕೊಂಡನು. ಸ್ವಾಮೀ ಎದುರಿಗೆ ದಾರೂ ನಿಂದರಲಾರರು. ಪ್ರಹ್ಲಾದನ್ನ ಮುಂದೆಮಾಡಿಕೊಂಡು, ರಮಾ ಬ್ರಹ್ಮಾದಿ ದೇವತಿಗಳು ನರಸಿಂಹನ ಸ್ತೋತ್ರ ಮಾಡಿದರು.

ಇನ್ನು ಕೂರ್ಮಾವತಾರ ಹೇಳಥಾರೆ. ದೇವೇಂದ್ರ ಐರಾವತ ಎಂಬೋ ಆನೆ ಏರಿಕೊಂಡು ದೂರ್ವಾಸನ ಆಶ್ರಮದಲ್ಲಿ ಹೋಗಲಿಕ್ಕೆ, ದೇವತಿಗಳ ಅರಸು ದೇವೇಂದ್ರ ಬರುತ್ತಾನೆಂದು ರಿಕ್ತಹಸ್ತದಿಂದ ದರ್ಶನ ತಕೋಬಾರದು ಎಂದು ಗಜಪುಷ್ಪದ ಮಾಲಾ ತಂದುಕೊಟ್ಟರೆ, ದೇವೇಂದ್ರ ಆ ಮಾಲಾ ಕೊರಳೊಳಗೆ ಹಾಕಿಕೊಳ್ಳದೆ ಆನೆ ಕುಂಭಸ್ಥಳದಲ್ಲಿ ಇಟ್ಟಿರಲಿಕ್ಕೆ ಪುಷ್ಪಮಾಲಾ ಜಿಗಳಿ ದೂರ್ವಾಸನ ಆಶ್ರಮದಲ್ಲೇ ಬಿತ್ತು. ತನ್ನ ಮಾಲಿಗೆ ಅನಾದರ ಮಾಡಿದನೆಂದು ದೂರ್ವಾಸ, ದೇವೇಂದ್ರಗೆ ಐಶ್ವರ್ಯಭ್ರಷ್ಟನಾಗೆಂದು ಶಾಪ ಕೊಡಲಿಕ್ಕೆ, ಬ್ರಾಹ್ಮಣನ ಶಾಪ ತತ್ಕಾಲಕ್ಕೇ ಫಲಿಸಿ ಹಾನಿ ತೋರಿತು. ಬಲಿಚಕ್ರೇಶ್ವರ ಬಹಳ ಪ್ರಾಬಲ್ಯವುಳ್ಳವನಾಗಿ ಸ್ವರ್ಗಕ್ಕೆ ಧಾಳಿಹಾಕಿ ಸ್ವರ್ಗಪದವಿ ಕಸಕೊಂಡನು. ದೇವತಿಗಳು ಐಶ್ವರ್ಯಭ್ರಷ್ಟರಾಗಿ ಸ್ವಾಮೀ ಸಮೀಪಕ್ಕೆ ಹೋಗಿ ಸ್ತೋತ್ರಮಾಡಲಿಕ್ಕೆ, ಕಾರ್ಯಾರ್ಥವಾಗಿ 'ವೈರಿಗಳ ಕೂಡ ಒಳಿತು ಬಳಸಿರಿ' ಎಂದು ದೃಷ್ಟಾಂತ ಕೊಟ್ಟು ಉಪಾಯ ಹೇಳಿಕೊಟ್ಟ ಪ್ರಕಾರ, ದೇವತಿಗಳೂ ದೈತ್ಯರೂ ಕೂಡ ಒಳಿತು ಬಳಸಿ ಮಂದರಪರ್ವತ ತಂದು ಕ್ಷೀರಸಾಗರದೊಳಗೆ ಮಥನಮಾಡಲಿಕ್ಕೆ, ಮಹಾರುದ್ರನ ವರಬಲದಿಂದ ಬಂಗಾರವಾಗಿರುವ ಮಂದರಪರ್ವತ, ಸಮುದ್ರದೊಳಗೆ ಮುಣಗಲಿಕ್ಕೆ, ದೇವದೈತ್ಯರ ಕಾರ್ಯ ಸಾಧಿಸಿಕೊಡಬೇಕಾಗಿ ಕೂರ್ಮಾವತಾರ ಮಾಡಿ, ಮಂದರೋದ್ಧಾರ ಮಾಡಿದ್ದಾನೆ.

ಸ್ವಾಮಿ ಆದಿಕೂರ್ಮನಾಗಿ ಮೇರು ಮಂದರಾದಿ ಪರ್ವತಗಳ ಸಹವಾಗಿ ಸಮಗ್ರ ಪಂಚಾಶತ್ಕೋಟಿ ಭೂಮಂಡಲ ಹೊತ್ತಾನೆ. ಮಂದರಪರ್ವತ ಎತ್ತಿದ್ದು ಆಶ್ಚರ್ಯವಲ್ಲ. ರುದ್ರ ಬಲ್ಲನೇ ಇಂಥಾ ಅಚಿಂತ್ಯಮಹಿಮಿ!

ಇನ್ನು ವಾಮನಾವತಾರ ಹೇಳಥಾರೆ. ಬಲಿಚಕ್ರೇಶ್ವರ ಬ್ರಹ್ಮದೇವರ ವರಬಲದಿಂದ ಅಜೇಯನಾಗಿ, ಸ್ವರ್ಗಕ್ಕೆ ಧಾಳಿ ಹಾಕಿ ಸ್ವರ್ಗೈಶ್ವರ್ಯ ಕಸಕೊಳ್ಳಲಿಕ್ಕೆ, ದೇವತಿಗಳೆಲ್ಲ ಐಶ್ವರ್ಯಭ್ರಷ್ಟರಾಗಿ ತಮ್ಮ ತಾಯಿ ಅದಿತಿ ಆಶ್ರಮಕ್ಕೆ ಹೋದರು. ಮಕ್ಕಳು ಅದೃಷ್ಟಹೀನರಾಗಿ ಬಂದರೆಂದು ನಾರಾಯಣನ ಕುರಿತು ಪಯೋವ್ರತ ಮಾಡಿ ಅದಿತಿ, ಗಂಡಗೆ ಬೇಡಿಕೊಂಡಳು. 'ನನ್ನ ಮಕ್ಕಳ ಸಾಧಿಸಿಕೊಡೋಹಾಂಗೆ ನನಗೆ ಮಗನ್ನ ಹಡೆದುಕೊಡು' ಎಂದು ಕಶ್ಯಪಗೆ ಪ್ರಾರ್ಥನೆ ಮಾಡಿದಳು. ಕಶ್ಯಪನ ಉದರದಲ್ಲಿ ಶ್ರೀನಾರಾಯಣ ಸನ್ನಿಹಿತನಾಗಿ ನಿಂತಿದ್ದ. ಆ ನಾರಾಯಣನೇವೆ ಅದಿತಿ ಉದರದಲ್ಲಿ ವ್ಯಕ್ತನಾದ. ಕಶ್ಯಪನ ಕೈಯ ಮೌಂಜಿ ಕಟ್ಟಿಸಿಕೊಂಡು, ಇಂದ್ರನ ತಮ್ಮನಾದಂಥ ಉಪೇಂದ್ರ ಬ್ರಹ್ಮಾದಿ ದೇವೋತ್ತಮ ಉತ್ಪತ್ತಿ ನಾಶರಹಿತ ಲಕ್ಷ್ಮೀಪತಿ, ಭಿಕ್ಷಕ್ಕೆ ದಂಡಕಮಂಡಲು ಹಿಡಕೊಂಡು ಬಲಿಚಕ್ರೇಶ್ವರನ ಯಜ್ಞಕ್ಕೆ ಹೋಗುವಾಗ ಭೂಮಿ ತಗ್ಗು ಬೀಳತಿಹೋದು. ಭೂಮಿ ತಾ ಕಠಿಣಳು. ಸ್ವಾಮೀ ಪಾದಕಮಲ ಅತಿ ಮೃದುವಾದ ಕಾರಣ ಭೂಮಿದೇವತಿ ಸುಪ್ರತ್ತಿಗೋಪಾದಿ ಮಾರ್ದವ ಉಳ್ಳಾಕೆ ಆಗಿ ತಗ್ಗು ಬೀಳತಿಹೋಳು. ವಾಮನದೇವರು ಬಲಿಚಕ್ರೇಶ್ವರನ ಯಜ್ಞಕ್ಕೆ ಹೋಗಿ ಯಜಮಾನನ್ನ ಬಹಳ ಹೊಗಳಿದ. ಆತನ ತಂದಿ ವಿರೋಚನಗೆ ಅಜ್ಜ ಪ್ರಹ್ಲಾದಗೆ ಮುತ್ಯಾ ಹಿರಣ್ಯಕಶಿಪುಗೆ 'ನಿಮ್ಮ ಪೂರ್ವಜರು ಇಂಥಾ ಪರಾಕ್ರಮರು ನೀನು ಬಹಳ ದಾನಶೂರ' ಎಂದು ಅನೇಕ ಪ್ರಕಾರ ಹೊಗಳಲಿಕ್ಕೆ 'ಎಲ್ಲೈ ಬ್ರಾಹ್ಮಣ ಹೊಗಳತಿದ್ದಿ ಏನು ಬೇಡತಿದ್ದಿ ಬೇಡು' ಎನಲಾಗಿ 'ವಿಶೇಷ ಬೇಡಿದರೆ ಕಳ್ಳನೆಂದಾರು ನಾ ಬ್ರಹ್ಮಚಾರಿ ಇದ್ದೀನೆ ನನ್ನ ಪಾದದಿಂದ ಮೂರು ಪಾದ ಭೂಮಿ ಕೊಟ್ಟರೆ ಸ್ವತಂತ್ರ ಭೂಮಿ ಒಳಗೆ ಕುಳಿತು ತಪಸ್ಸು ಮಾಡೀನು' ಎಂದನು. 'ಬ್ರಾಹ್ಮಣ ಅತಿ ಸ್ವಲ್ಪ ಏನಂತ ಬೇಡಿಕೊಂಡಿದ್ದಿ? ಒಂದು ದ್ವೀಪ ಬೇಡಿಕೋಬೇಕಾಗಿತ್ತು. ನನ್ನಲ್ಲಿ ದಾನ ತಕ್ಕೊಂಡಮ್ಯಾಲೆ ಮುಕ್ಕಳು ಮೊಮ್ಮಕ್ಕಳು ಆಚಂದ್ರಾರ್ಕ ಮತ್ತೊಬ್ಬರಿಗೆ ದೇಹಿ ಅಂತ ಬೇಡಬಾರದು. ವಿಶೇಷ ಬೇಡಿಕೋ' ಎಂದರೆ 'ವಿಶೇಷ ಕೊಂಡು ಏನು ಮಾಡೀನು ನಾ ಬೇಡಿದ್ದು ಕೊಡಬೇಕಾಗಿದ್ದರೆ ಕೊಡು' ಹೀಂಗಂತ ವಾಮನದೇವರು ಅನ್ನಲಿಕ್ಕೆ ಬ್ರಾಹ್ಮಣ ಚಿಕ್ಕವನಿದ್ದಾನೆ ದಾನ ಕೊಳ್ಳದೆ ಹೋದಾನೆಂದು, ತನ್ನೆ ಹೆಂಡತಿ ವಿಂಧ್ಯಾವಳೀ ಧರ್ಮಕ್ಕೆ ಅನುಕೂಲಳು, 'ಸ್ವಾಮೀ ಪಾದಪ್ರಕ್ಷಾಲನೆ ಮಾಡಬೇಕು ಉದಕ ಹಾಕಬಾ' ಎಂದು ಕರೀಲಿಕ್ಕೆ ವಿಂಧ್ಯಾವಳಿ ಮಂಗಳಸ್ನಾನ ಮಾಡಿ ವಿಚಿತ್ರವಾದಂಥ ವಸ್ತ್ರಾಭರಣಗಳಿಂದ ಯುಕ್ತಳಾಗಿ ಪುಷ್ಪಗಳ ಮುಡಕೊಂಡು ಕೈಯಲ್ಲಿ ಉದಕಪಾತ್ರಿ ತೆಗೆದುಕೊಂಡು

ಬಂದಳು. ದೈತ್ಯರ ಪುರೋಹಿತ ಶುಕ್ರಾಚಾರ್ಯ ತನ್ನ ಯಜಮಾನನಿಗೆ ಹೇಳಿದ 'ಎಲೈ ಬಲಿರಾಯ ಈ ವಟುಬ್ರಾಹ್ಮಣ ಸಾಕ್ಷಾತ್ಸರ್ವೋತ್ತಮ ಇದ್ದಾನೆ. ಮೂರು ಪಾದ ಭೂಮಿ ವ್ಯಾಜದಿಂದ ನಿನ್ನ ಐಶ್ವರ್ಯ ಕಸಕೊಂಡು ದೇವತಿಗಳಿಗೆ ಕೊಡ-ಬೇಕಾಗಿ ನಿನ್ನ ತಕ್ಕಸಲಿಕ್ಕೆ ಬಂದಾನೆ' ಹೀಂಗಂತ ಹೇಳಿದನು. 'ಸರ್ವೋತ್ತಮನ ಪ್ರೀತ್ಯರ್ಥ ನಾ ಯಜ್ಞ ಮಾಡಿದ್ದೆ. ಅಂಥಾ ಸರ್ವೋತ್ತಮನೇ ಬೇಡಲಿಕ್ಕೆ ಬಂದರ, ಏನು ಕೊಡಬಹುದು ಏನು ಕೊಡಬಾರದು! ಇಷ್ಟಾಗಿ ನನ್ನ ಆಯುಷ್ಯ ನಿತ್ಯವೆ? ರಾಜ್ಯ ಐಶ್ವರ್ಯ ಇರಲಿಕ್ಕೆ, ತಾನಾಗಿ ಸಾಯಿಥಾನೆ. ಅಥವಾ ತಾನು ಬದುಕಿರಲಿಕ್ಕೆ, ಐಶ್ವರ್ಯವಾದರೂ ಹೋಗತದೆ. ನೀನು ಪುರೋಹಿತನಾಗಿ ನನ್ನ ಹಿತಾರ್ಥ ಹೇಳತಿದ್ದಿ. ಸರ್ವೋತ್ತಮದೇವತಿ ವಿಷಯಕ್ಕೆ ನೀನು ಬ್ಯಾಡ ಎಂದು ವಿಘ್ನ ಆಚರಿಸಬ್ಯಾಡ' ಹೀಂಗಂದ ಬಲಿರಾಯನ ಮಾತು ಕೇಳಿ, ತನ್ನ ಮಾತು ಕೇಳಲಿಲ್ಲ ಎಂದು ಬಹಳ ಸಿಟ್ಟು ಬಂತು. 'ಐಶ್ವರ್ಯಭ್ರಷ್ಟನಾಗು' ಎಂದು ಶುಕ್ರಾಚಾರ್ಯ ಬಲಿರಾಯಗೆ ಶಾಪ ಕೊಟ್ಟ. ವಿಂಧ್ಯಾವಳೀ ಎಂಬೋ ಹೆಂಡತಿ ಪಾದಪ್ರಕ್ಷಾಲನೆ ಮಾಡುವಾಗ ಉದಕ ಹಾಕೋ ಸಮಯಕ್ಕೆ ಶುಕ್ರಾಚಾರ್ಯರು ಅಡ್ಡ ಬಿದ್ದರು. ಉದಕ ಬೀಳದ್ದು ಕಂಡು ಸ್ವಾಮಿ ದರ್ಪೀಲಿಂದ ಕಣ್ಣು ಚುಚ್ಚಿದ ಕಾರಣ, ಕುರುಡನಾಗಿ ತಿರುಗಿದಮ್ಯಾಲೆ ಉದಕ ಹಾಕಿದಳು. ಸರ್ವೋತ್ತಮದೇವತಿ ಪಾದ ತೊಳೆದು ಸ್ವಾಮೀ ಪಾದೋದಕ ಬಲಿರಾಯ ತನ್ನ ಕುಟುಂಬ ಸಹವಾಗಿ ಶಿರಸ್ಸಿನಲ್ಲಿ ಧರಿಸಿ, ಮೂರು ಪಾದದ ಭೂಮಿ ವಾಮನದೇವರಿಗೆ ದಾನ ಕೊಡಲಿಕ್ಕೆ ತ್ರಿವಿಕ್ರಮ-ರೂಪನಾಗಿ ಒಂದು ಪಾದದಿಂದ ಯಾವತ್ತೂ ಭೂಮಂಡಲ ವ್ಯಾಪಿಸಿಬಿಟ್ಟ, ಎರಡನೇ ಇನ್ನೊಂದು ಪಾದದಿಂದ ಸ್ವರ್ಗಾದಿ ಲೋಕ ವ್ಯಾಪಿಸಿದ. ಇನ್ನೊಂದು ಪಾದಕ್ಕೆ ಠಾವು ಇಲ್ಲ. ವಚನದಲ್ಲಿ ಕೊಟ್ಟೆನೆಂದು ಆಡಿದ್ದು ಕೊಡಲಿಲ್ಲ ಎಂದು ಗರುಡಗೆ ಹೇಳಿ ವರುಣಪಾಶದಿಂದ ಕಟ್ಟಿಹಾಕಲಿಕ್ಕೆ, 'ಸ್ವಾಮಿ ನನ್ನ ಋಣಸ್ಥನ್ನ ಮಾಡಬ್ಯಾಡ. ನನ್ನ ತಲೀಮ್ಯಾಲೆ ಪಾದ ಇಟ್ಟು ಮೂರುಪಾದ ಭೂಮಿ ಬಂತು ಅಂತ ಮಾಡಿಕೊ' ಹೀಂಗಂತ ಬಲಿರಾಯ ಬೇಡಿಕೊಳ್ಳಲಿಕ್ಕೆ ಸ್ವಾಮಿ ಭಕ್ತವತ್ಸಲ ಭಕ್ತನ್ನ ಋಣಸ್ಥನ್ನ ಮಾಡಬಾರದೆಂದು ತಲೀಮ್ಯಾಲೆ ಕಾಲುಕೊಟ್ಟ, ಮೂರು ಪಾದ ಭೂಮಿ ಬಂತು ಅಂತ ಮಾಡಿಕೊಂಡ. ಸಮಗ್ರ ಐಶ್ವರ್ಯ, ದೇವೇಂದ್ರಗೆ ಕೊಟ್ಟನು.

ಪ್ರಹ್ಲಾದ ಮೊದಲಿಗೆ ಸ್ವಾಮಿಗೆ ಬೇಡಿಕೊಂಡಿದ್ದ. 'ದೈತ್ಯರ ಕುಲದವನೆಂದು ನನ್ನ ಮೊಮ್ಮಗನ್ನ ಕೊಲ್ಲಬ್ಯಾಡ' ಎಂದು ಬೇಡಿಕೊಳ್ಳಲಾಗಿ 'ಕೊಲ್ಲೋಣದರ ಪ್ರತಿನಿಧಿ ಯಾಚನಿವೃತ್ತಿಯಲ್ಲಿ ದ್ರವ್ಯ ಕಸಕೊಂಡದ್ದರಿಂದ ಕೊಂದದ್ದಕ್ಕಿಂತಲೂ ಪಚ್ಚಾಯಿತು. ಕೊಲ್ಲದಲೇ ಐಶ್ವರ್ಯ ಕಸಕೋತೇವು' ಎಂದು ಮೊದಲಿಗೆ ಪ್ರಹ್ಲಾದಗೆ ಅಭಯ ಕೊಟ್ಟಿದ್ದ. ಆದಕಾರಣ ಬಲಿ ದೈತ್ಯನಾದರೂ ತನ್ನ ಭಕ್ತ ಜ್ಞಾನಶೂರನೆಂದು ಬಲಿರಾಯನ್ನ ಕೊಲ್ಲಲಿಲ್ಲ.

.ಇನ್ನು ಭಾರ್ಗವಾವತಾರ ಹೇಳಥಾರೆ. ಅಸುರರು ರುದ್ರದೇವರ ವರಬಲದಿಂದ ಭೂಮೀಮ್ಯಾಲೆ ಬಹುಮುಂದಿ ರಾಯರಾಗಿ ಹುಟ್ಟಿ ಬಹಳ ಅಜೇಯರಾಗಿಹೋರು. ಲೋಕಕ್ಕೆಲ್ಲ ಉಪದ್ರವ ಕೊಡುತಿಹೋರು. ಇಂಥಾ ದುಷ್ಟಕ್ಷತ್ರಿಯರ ಆಳಿಕೆ ಕಂಡು ದೇವತಿಗಳೆಲ್ಲ ಬ್ರಹ್ಮದೇವರ ಮುಂದುಮಾಡಿಕೊಂಡು ಕ್ಷೀರಸಮುದ್ರಕ್ಕೆ ಹೋಗಿ, ' ಸ್ವಾಮಿ, ಹಿಂದಕ್ಕೆ ಇಂಥಾ ಉಪಕಾರ ಮಾಡಿದ್ದಿ ' ಎಂತ ಹಿಂದಿನ ಉಪಕಾರಗಳು ನೆನೆಸುತ್ತ ಸ್ತೋತ್ರಮಾಡತಾರೆ. ' ಹಿರಣ್ಯಾಕ್ಷ ಹಿರಣ್ಯಕಶಿಪರು ಬಹಳ ಪ್ರಬಲರು. ಅಂಥಾವರನ್ನ ಕೊಂದು ನಮ್ಮ ಅರಿಷ್ಟ ಪರಿಹರಿಸಿದಿ ಇಷ್ಟಪ್ರಾಪ್ತಿಮಾಡಿಕೊಟ್ಟಿ. ಹಯಾಸುರನ ಕೊಂದಿ. ಈಗ ಮತ್ತೆ ದೈತ್ಯರ ಬಾಧಿಯಿಂದ ಬಹಳ ತಪ್ತರಾಗಿದ್ದೇವೆ. ನಮ್ಮ ಚಿಂತೀನೆಲ್ಲ ಪರಿಹರಿಸಿ, ನಮ್ಮ ಮನಸ್ಸೆಲ್ಲ ನಿನ್ನ ಕಡೆಯೂ ಎಳಕೊಂಡು ನಮ್ಮ ಹೃತ್ಕಮಲದಲ್ಲಿ ಸನ್ನಿಹಿತನಾಗಿ ನಿಂದಿರು,' ಹೀಂಗಂತ ದೇವತಿಗಳೆಲ್ಲ ಸ್ತೋತ್ರ ಮಾಡಲಿಕ್ಕೆ, ಸ್ವಾಮಿ ಭಾರ್ಗವಕುಲದಲ್ಲಿ ಜಮದಗ್ನೀ ಹೆಂಡತಿ ರೇಣುಕೆಯಲ್ಲಿ ಪರಶುರಾಮ ಅವತಾರಮಾಡಿ, ಇಪ್ಪತ್ತೊಂದು ಹೇಪೇಲಿ ಕ್ಷತ್ರಿಯರನ್ನೆಲ್ಲಾ ನಿಃಕ್ಷತ್ರಿಯರನ್ನಾಗಿ ಮಾಡಿ, ಕುರುಕ್ಷೇತ್ರದಲ್ಲಿ ತನ್ನ ಕೊಡಲಿ ತೊಳೆದ. ಕೊಡಲಿ ತೊಳೆದ ರಕ್ತದಿಂದ ಐದು ರಕ್ತಮಡುವು ಆದವು. ಇವನ್ನು ಜ್ಞಾನಿಗಳು ' ಶಮಂತ-ಪಂಚಕ ' ಎಂದು ಕರೀಥಾರೆ.

ಇನ್ನು ರಾಮಾವತಾರ ಹೇಳಥಾರೆ. ಬ್ರಹ್ಮದೇವರ ಮಗ ಪುಲಸ್ತ್ಯ ಪುಲಸ್ತ್ಯನ ಮಗ ವಿಶ್ರವಸು ವಿಶ್ರವಸುನ ಉದರದಲ್ಲಿ ಹಿರಣ್ಯಾಕ್ಷ ಹಿರಣ್ಯಕಶಿಪು ಆದಿದೈತ್ಯರು, ರಾವಣ ಕುಂಭಕರ್ಣರಾಗಿ ಹುಟ್ಟಿದರು. ದಶಶಿರ ರಾವಣ, ಬ್ರಹ್ಮದೇವರ ಕುರಿತು ಬಹುಕಾಲ ತಪಸ್ಸು ಮಾಡಿ, ಒಂದೊಂದು ತಲಿ ಹೋಮಿಸಿಬಿಡುವ. ಹೀಂಗೆ ತಲಿಗಳ ಹೋಮಿಸಿ, ಒಂದುವರೆ ತಲಿ ಉಳಿದವು. ಅವನ್ನೂ ಹೋಮಿಸಬೇಕು. ಅಷ್ಟರೊಳಗೆ ಬ್ರಹ್ಮದೇವರು ಪ್ರತ್ಯಕ್ಷರಾಗಿ, ' ಮನುಷ್ಯರು ವಾನರರ ಹೊರ್ತಾಗಿ ನಿನಗೆ ದಾರಿಂದಲೂ ಮರಣ ಬರಬ್ಯಾಡ ' ಎಂದು ವರವು ಕೊಟ್ಟರು. ಕುಂಭಕರ್ಣ, ದೇವತಿಗಳು ಇರಬಾರದ ಹಾಂಗೆ ತಪಸ್ಸು ಮಾಡತಿಹ. ವರವು ಬೇಡಿಕೊಳ್ಳಲಿಕ್ಕೆ ವಾಗ್ದೇವಿಯಿಂದ ಮೋಹಿತನಾಗಿ, ' ನಿದ್ರೆ ವರ ಕೊಡು ' ಎಂದು ಬೇಡಿಕೊಂಡ. ನಿದ್ರೈವದಿಂದ ಬೇಡಿಕೊಂಡ ಕಾರಣ ' ಹಾಂಗೆ ಆಗಲಿ ' ಎಂದು ಬ್ರಹ್ಮರಾಯ ವರವು ಕೊಟ್ಟನು. ರಾವಣ ಕುಂಭಕರ್ಣ ಖರ ದೂಷಣ ಶೂರ್ಪಣಖಿ ಮೊದಲಾದವರು ದೇವತಿಗಳಿಗೆಲ್ಲ ಬಾಧೆ ಕೊಡತಿಹೋರು. ದೇವತಾಸ್ತ್ರೀಯರ ಕೈಸೆರೆ ಕೊಂಡುಹೋಗಿ, ಸೆರೆಹಾಕತಿಹೋರು. ರಾವಣ ಲೋಕಕ್ಕೆಲ್ಲ ವಿರೋಧಿಸುತಿಹ. ದೇವತಿಗಳೆಲ್ಲ ಬಹಳ ಪೀಡಿತರಾಗಿ ಬ್ರಹ್ಮರುದ್ರರು ಕ್ಷೀರಸಮುದ್ರಕ್ಕೆ ಹೋಗಿ, ನಾಗಭೋಗ ನಾರಾಯಣನ ಸ್ತೋತ್ರಮಾಡಿದರು. 'ಎಲ್ಲೈ ಸ್ವಾಮಿ! ಜಗದುತ್ಪಾದಕನೇ! ಸರ್ವೇಶ್ವರ! ಸಕಲ ಜಗತ್ತಿಗೆ ನಿಯಾಮಕನೇ! ಸರ್ವ-

ಸ್ವತಂತ್ರ! ಸಕಲ ಜಗತ್ತಿಗೆ ನಿಯಾಮಕನೇ, ನಿನ್ನ ಆಜ್ಞಾದಿಂದ ಬ್ರಹ್ಮಾದಿಗಳು ಜಗತ್ಸೃಷ್ಟಿ ಮಾಡಥಾರೆ. ಭೂತಭವಿಷ್ಯದ್ವರ್ತಮಾನ ಬ್ರಹ್ಮಾದಿಗಳು ನಿನ್ನ ಆಜ್ಞೆ ನಡಸಥಾರೆ. ಇಂಥಾ ಬ್ರಹ್ಮದೇವರು ತನ್ನ ನೂರು ವರ್ಷ ಆಗಲಿಕ್ಕೆ ನಿನ್ನ ಆಜ್ಞೆ ಬರತದೆ. ಶಿರಸಾವಹಿಸಿಕೊಂಡು ನಿನ್ನ ಸಮೀಪಕ್ಕೆ ಬರಥಾನೆ.

'ಬ್ರಹ್ಮದೇವರ ನೂರು ವರ್ಷ ಎಂಥಾವು ಎಂದರೆ, ಸಂಖ್ಯಾ ಹೇಳಥಾರೆ. ಕ್ಷಣ ತ್ರುಟಿ ಲವ ಕಾಲ ಕಳಾ ಕಾಷ್ಟ ಮುಹೂರ್ತ ದಿವಸ ಪಕ್ಷ ಮಾಸ ಋತು ಅಯನ ವರ್ಷ ಇಂಥಾ ಮನುಷ್ಯರ ಮುನ್ನೂರ ಅರವತ್ತು ವರ್ಷ ಎಂಬೋದು ದೇವತಿಗಳಿಗೆ ಒಂದು ವರುಷ. ಅಂಥಾ ದೇವತಿಗಳ ಹನ್ನೆರಡು ಸಾವಿರ ವರುಷ ಎಂಬೋದು ಒಂದು ಮಹಾಯುಗ. ಮಹಾಯುಗ ಎಂಬೋದು ನಾಲ್ಕು ಯುಗ. ಇದಕ್ಕೆ ಹತ್ತುಸಾವಿರ ವರುಷ ಸಂಧಿಕಾಲ.' ಇದಕ್ಕೆ ವಿವರವು.

ಕೃತಯುಗ	ಒಟ್ಟು ೪,೮೦೦ ವರುಷಗಳು—ಇದರಲ್ಲಿ ೪,೦೦೦ ವರುಷಗಳು ಯುಗಕಾಲ. ೮೦೦ ವರುಷಗಳು ಸಂಧಿಕಾಲ. (ಮೊದಲಿನ ೪೦೦ ಮತ್ತು ಕಡೇದು ೪೦೦ ವರುಷಗಳು)
ತ್ರೇತಾಯುಗ	ಒಟ್ಟು ೩,೬೦೦ ವರುಷಗಳು—ಇದರಲ್ಲಿ ೩,೦೦೦ ವರುಷಗಳು ಯುಗಕಾಲ. ೬೦೦ ವರುಷಗಳು ಸಂಧಿಕಾಲ. (ಮೊದಲಿನ ೩೦೦ ಮತ್ತು ಕಡೇದು ೩೦೦ ವರುಷಗಳು)
ದ್ವಾಪರಯುಗ	ಒಟ್ಟು ೨,೪೦೦ ವರುಷಗಳು—ಇದರಲ್ಲಿ ೨,೦೦೦ ವರುಷಗಳು ಯುಗಕಾಲ. ೪೦೦ ವರುಷಗಳು ಸಂಧಿಕಾಲ. (ಮೊದಲಿನ ೨೦೦ ಮತ್ತು ಕಡೇದು ೨೦೦ ವರುಷಗಳು)
ಕಲಿಯುಗ	ಒಟ್ಟು ೧,೨೦೦ ವರುಷಗಳು—ಇದರಲ್ಲಿ ಯುಗಕಾಲ ೧,೦೦೦ ವರುಷಗಳು. ೨೦೦ ವರುಷಗಳು ಸಂಧಿಕಾಲ. (ಮೊದಲಿನ ೧೦೦ ಮತ್ತು ಕಡೇದು ೧೦೦ ವರುಷಗಳು)

ಒಟ್ಟು ೧೨,೦೦೦ ವರುಷಗಳು. ಇಂಥಾ ಸಾವಿರ ಮಹಾಯುಗವೆಂಬೋವು ಬ್ರಹ್ಮದೇವರಿಗೆ ಒಂದು ಹಗಲು. ಅಂಥಾ ಸಾವಿರ ಮಹಾಯುಗ ಒಂದು ರಾತ್ರಿ.

'ಈ ಪ್ರಕಾರ ನೂರು ವರುಷ ಆಗಲಿಕ್ಕೆ ನಿನ್ನ ಆಜ್ಞೆ ಬರತದೆ. ಬ್ರಹ್ಮಪದವಿ ಆಯಿತೆಂತ ನಿನ್ನ ನಿರೂಪ ಆಗೋಣ ಬ್ರಹ್ಮ ನಿನ್ನ ಸಮೀಪಕ್ಕೆ ಬರಥಾನೆ. ಇಂಥಾ ಬ್ರಹ್ಮಾದಿಗಳಿಗೆ ಮುಖ್ಯನಿಯಾಮಕ ನೀ ಗರ್ಭೋದಕದಲ್ಲಿ ಯೋಗನಿದ್ರೆ ಮಾಡಿರಲಿಕ್ಕೆ, ನಿನ್ನ ಕಿವಿಯ ದೆಸಿಯಿಂದ ಮಧುಕೈಟಭರು ಹೊರಟರು. ಏನು ವರವು ಬೇಡತಿದ್ದಿ ಬೇಡು ಎಂದು—ನೀ ಸರ್ವೋತ್ತಮ ದೇವತೆಯೆಂದು ತಿಳೀದೆ ಮಿಥ್ಯಾ-

ಜ್ಞಾನಿಗಳಾದಕಾರಣ—ನಿನಗೆ ವರವು ಕೊಟ್ಟರು. ಅಸುರರ ಮೋಹಿಸಬೇಕಾಗಿ ಮಧುಕೈಟಭರನ್ನ ಕೊಂದೇನು ಎಂದು ಅವರ ಕೈಯ ವರವು ಕೊಂಡಿದ್ದಿ. ಅವರ ವರಬಲದಿಂದ ಕೊಂದಾತನಲ್ಲ ನೀ ಸರ್ವಸಮರ್ಥ. ನಿನ್ನ ಆಜ್ಞಾದಿಂದ ಮುಖ್ಯ-ಪ್ರಾಣ ಅವರೊಳಗೆ ಬಲಪ್ರಧಾನನಾಗಿ ಹೊಕ್ಕಿದ್ದ. ಮಧುಕೈಟಭರು ಮನಬಂದ ಹಾಗೆ ಬೆಳೀತಿಹೋರು. ಬ್ರಹ್ಮದೇವರ ಮುಖಕಮಲದಿಂದ ಬಾಹೋಂಥಾ ವೇದಗಳ ಮಧುಕೈಟಭರು ಕೇಳಿದರು. ಬ್ರಹ್ಮದೇವರು ಅನಘ್ಯಯನ ಮಾಡಿಕೊಂಡು ಕೂಡಲಿಕ್ಕೆ, ನೀನು ಹಯಗ್ರೀವಾವತಾರ ಮಾಡಿ ಮಧುಕೈಟಭರನ್ನ ನಿನ್ನ ತೊಡೀ ಮ್ಯಾಲೆ ಹಾಕಿಕೊಂಡು ಕೊಂದು, ಬ್ರಹ್ಮದೇವರಿಗೆ ವೇದೋಪದೇಶ ಮಾಡಿದಿ. ಅವರ ರಕ್ತ ಮಾಂಸ ಮಜ್ಜ ಮೇದಸ್ಸು ಭೂಮಿಗೆ ಲೇಪಿಸಿಬಿಟ್ಟ. ಆದಕಾರಣ ಭೂಮಿ **'ಉರ್ವರಾ'** ಎಂದು ಕರೆಸಿಕೊಂಡಳು, **'ಮೇದಿನೀ'** ಎಂದು ಕರೆಸಿಕೊಂಡಳು. ಮಧುಕೈಟಭರು, ನಾರಾಯಣನ ತೊಡೀಮ್ಯಾಲೆ ಸತ್ತರು. ಅವರಿಗೆ ಗತಿಯಾಗಲಿಲ್ಲ. ಏನು ಕಾರಣವೆಂದರೆ, ಭಕ್ತಿಯಿಲ್ಲದವರಿಗೆ ನಾರಾಯಣನ ಸಂಗವಾದರೂ ಸರ್ವಥಾ ಗತಿಯಾಗದು. ಅವರು ತಮೋಯೋಗ್ಯರು ತಮಸ್ಸಿಗೆ ಹೋಗಿ ಬಿದ್ದರು.'

ಈ ಪ್ರಕಾರ ಸ್ತೋತ್ರ ಮಾಡಥಾರೆ. 'ಸ್ವಾಮೀ, ದೇವದೈತ್ಯರ ಬಲವೆಲ್ಲ ನಿನ್ನ ಅಧೀನ. ನೀನು ಜಗತ್ತಿಗೆ ಮುಖ್ಯ ತಂದೆ. ನೀನೇ ಜಗತ್ತಿಗೆ ಮುಖ್ಯಪ್ರಭು. ಅನಾದ್ಯನಂತಕಾಲದಲ್ಲಿ ನಮಗೆ ಮುಖ್ಯ ಒಡೆಯ. ನಾವು ನಿನ್ನ ಭೃತ್ಯರು. ದೈತ್ಯರಿಂದ ಬಹಳ ಉಪದ್ರಿತರಾಗಿದ್ದೀವೆ ರಕ್ಷಿಸಬೇಕು' ಎಂದು ಸ್ತೋತ್ರ ಮಾಡಲಿಕ್ಕೆ ರಾವಣ ಕುಂಭಕರ್ಣ ಮೊದಲಾದ ರಾಕ್ಷಸರ ಅಗ್ಗಳಿಕೆ ದೇವತೆಗಳ ಮುಖದಿಂದ ತಾ ಸರ್ವೇಶ್ವರ ಬಲ್ಲರೂ ಸರಿಯೆ ಕೇಳಿ, ಸ್ವಾಮಿ ಜಗತ್ಪತಿ ಹದಿನಾಲ್ಕು ಲೋಕಕ್ಕೆ ಒಡೆಯ ರಾವಮನು ಅವತಾರ ಮಾಡಿದ್ದಾನೆ. ಎಲ್ಲಿ ಅವತಾರ ಮಾಡಿದನು ಎಂದರೆ, ಕಶ್ಯಪನ ಮಗ ವಿವಸ್ವತನೆಂಬ ಸೂರ್ಯ ಅದಿತಿ ಹೊಟ್ಟೀಲಿ ಹುಟ್ಟಿದ. ಆ ವಿವಸ್ವತನೆಂಬ ಸೂರ್ಯಗೆ ಇಕ್ಷ್ವಾಕುರಾಯ ಮಗನಾಗಿದ್ದ. ಇಕ್ಷ್ವಾಕುರಾಯನ ವಂಶದಲ್ಲಿ ದಶರಥರಾಯ ಹುಟ್ಟಿದ. ಈತನ ಹೆಂಡತಿ ಕೌಸಲ್ಯಾದೇವಿಯಲ್ಲಿ ಅನಂತ ವೇದಪ್ರತಿಪಾದ್ಯ ರಘುನಾಥ, ಅವತಾರ ಮಾಡಿದ್ದಾನೆ. ದೇವತೆಗಳಿಗೆ ಬ್ರಹ್ಮರಾಯನ ಆಜ್ಞವಾಯಿತು. 'ಭೂಮಿ ಮ್ಯಾಲೆ ನಮ್ಮ ಒಡೆಯ ಅವತಾರ ಮಾಡಿದ್ದಾನೆ. ನೀವು, ನಿಮ್ಮ ನಿಮ್ಮ ಅಂಶದಿಂದ ಅವತಾರಮಾಡಿ' ಎಂದು ಹೇಳಲಿಕ್ಕೆ ಬ್ರಹ್ಮ-ರಾಯನಾಜ್ಞದಿಂದ ಕೆಲವು ದೇವತೆಗಳು, ರಾಮಾವತಾರದಕಿಂತ ಮೊದಲೇ ಹುಟ್ಯಾರೆ, ಕೆಲವು ದೇವತೆಗಳು ರಾಮಾವತಾರವಾದಮ್ಯಾಲೆ ಹುಟ್ಯಾರೆ. ಸ್ವಾಮೀ ಸೇವೆ ಮಾಡಬೇಕಾಗಿ ದಾರು ದಾರು, ಹ್ಯಾಂಗೆ ಹುಟ್ಟಿದರು ಎಂದರೆ, ಹುಟ್ಟಿದ ಪ್ರಕಾರ ಹೇಳಥಾರೆ.

ಮನುಷ್ಯರಲ್ಲಿ ದಾನವರಲ್ಲಿ ಕರಡಿ ಕಪಿಗಳಲ್ಲಿ ಹುಟ್ಯಾರೆ. ಹ್ಯಾಂಗೆ ಹುಟ್ಟಿದರು ಎಂದಲ್ಲಿ, ದೇವತೆಗಳಿಗೆಲ್ಲ ಮುಂಚಿತವಾಗಿ ಸರ್ವದೇವೋತ್ತಮ ಮುಖ್ಯಪ್ರಾಣ, ಹನುಮಂತನಾಗಿ ಹುಟ್ಟಿದ. ಕೇಸರಿ ಎಂಬ ವಾನರನ ಹೆಂಡತಿ ಅಂಜನಾದೇವಿಯಲ್ಲಿ ವಾಯುದೇವರು ಭೋಗಮಾಡಿ, ಹನುಮಂತನ್ನ ಹಡೆದನು. ರಿಕ್ಷಸಿರಸಿನ ಹೆಂಡತಿಯ ದೇವೇಂದ್ರ ಭೋಗಮಾಡಿ ವಾಲಿನ್ನ ಹಡೆದನು. ಹಾಂಗೆ ವಿವಸ್ವತನೆಂಬ ಸೂರ್ಯ, ರಿಕ್ಷಸಿರಸಿನ ಹೆಂಡತಿ ಭೋಗಮಾಡಿ ಸುಗ್ರೀವನ್ನ ಹಡೆದನು. ಸುಗ್ರೀವ ಬ್ರಹ್ಮದೇವರ ಆವೇಶದಿಂದ ಹುಟ್ಟಿದನು. ಜಾಂಬವಂತನ ಉತ್ಪತ್ತಿ ಹೇಳಥಾರೆ. ಬ್ರಹ್ಮದೇವರ ವಕ್ಷಸ್ಥಳದಿಂದ ಯಮಧರ್ಮ ಹುಟ್ಟಿದ. ಆ ಯಮಧರ್ಮನೇವೆ ಎರಡನೇ ರೂಪದಿಂದ ಬ್ರಹ್ಮದೇವರ ಬಾಯೊಳಗಿಂದ ಆದಿಸೃಷ್ಟಿಯಲ್ಲಿ ಕರಡೀರೂಪವಾಗಿ ಬಂದನು. ಯಮಧರ್ಮ ಮತ್ತೊಂದು ರೂಪದಿಂದ ವಿವಸ್ವತನೆಂಬೋ ಸೂರ್ಯನ ಹೆಂಡತಿ ಸಂಜ್ಞಾದೇವಿಯಲ್ಲಿ, ಯಮಧರ್ಮ ಹಾಂಗೆ ಯಮುನಾದೇವಿ ಹುಟ್ಟಿದ್ದಾರೆ. ರವಿಸೂನು ಯಮಧರ್ಮನು ದಕ್ಷಿಣದಿಕ್ಕಿಗೆ ಅಧಿಪತಿಯಾಗಿ ಪ್ರಾಣಿಗಳ ಪಾಪಪುಣ್ಯ ವಿಚಾರಮಾಡತ ಕಾಲಗ್ರಹದ ವ್ಯಾಪಾರ ಮಾಡಥಾನೆ. ಆದಿಸೃಷ್ಟಿಯಲ್ಲಿ ಯಮಧರ್ಮಾವತಾರ ಜಾಂಬವಂತನಾಗಿ ಹುಟ್ಟಿ ರಾಮನ ಸೇವೆ ಬಹಳ ಮಾಡಥಾನೆ. ಕೃಷ್ಣಾವತಾರದಲ್ಲಿ ತನ್ನ ಮಗಳು ಜಾಂಬವತಿಯನ್ನು ಕೃಷ್ಣಗೆ ಮದುವೆ ಮಾಡಿಕೊಟ್ಟು ದೇವರ ಅನುಗ್ರಹ ಸಂಪಾದಿಸಥಾನೆ. ಬ್ರಹ್ಮದೇವರ ಮಗ ಅತ್ರಿಋಷಿಯಲ್ಲಿ ಚಂದ್ರ ಹುಟ್ಟಿದನು. ಆ ಚಂದ್ರನು ವಾಲೀಮಗ ಅಂಗದನಾಗಿ ಹುಟ್ಟಿದ. ದೇವೇಂದ್ರನ ಹೆಂಡತಿ ಶಚೀದೇವಿ ತಾರಾದೇವಿಯಾಗಿ ಹುಟ್ಟಿದಳು. ಆಕಿಯೇ ವಾಲೀ ಹೆಂಡತಿಯಾಗಿದ್ದಾಳೆ. ಬೃಹಸ್ಪತಿ ಮೊದಲ ಸೃಷ್ಟಿಯಲ್ಲಿ ಬ್ರಹ್ಮದೇವರ ಮನಸ್ಸಿನ ದೆಸಿಯಿಂದ ಹುಟ್ಟಿದ್ದಾನೆ. ಆತ ಬ್ರಹ್ಮಪುತ್ರ ಅಂಗೀರಸನ ಮಗನಾಗಿ—ಬೃಹಸ್ಪತಿಯೇವೆ—ತಾರನಾಗಿ ಹುಟ್ಟಿದ್ದಾನೆ. ಪುಲೋಮನ ದೆಸಿಯಿಂದ ಶಚೀದೇವಿ ಹುಟ್ಟಿದಳು. ವರುಣನೆಂಬಾತ ಸುಷೇಣನಾಗಿ ಹುಟ್ಟಿದ. ಅಶ್ವಿನೀ ದೇವತೆಗಳು ಬ್ರಹ್ಮದೇವರ ದೆಸಿಯಿಂದ ಹುಟ್ಟಿದ್ದಾರೆ. ವಿವಸ್ವತನೆಂಬ ಸೂರ್ಯಗೆ ಛಾಯಾ ಸಂಜ್ಞಾ ವಡಬಾ ಹೀಂಗೆ ಮೂರು ಮಂದಿ ಹೆಂಡರು; ವಡಬಾದೇವಿಯಲ್ಲಿ ಅಶ್ವಿನೀ ದೇವತೆಗಳು ಹುಟ್ಟಿದ್ದಾರೆ. ಆ ಅಶ್ವಿನೀದೇವತೆಗಳೇ ವಿವಿದ ಮೈಂದರಾಗಿ ಹುಟ್ಟಿದ್ದಾರೆ. ಮೈಂದನಲ್ಲಿ ಇಂದ್ರನ ಆವೇಶವದೆ. ಅಗ್ನಿ ಎಂಬಾತ ನೀಲನಾಗಿ ಹುಟ್ಟಿದ್ದಾನೆ.

ಕಾಮ ಮೂಲನಾರಾಯಣನ ಮಗ. ಆತನೇ ಬ್ರಹ್ಮದೇವರಲ್ಲಿ ಹುಟ್ಟಿದ. ಕೃಷ್ಣನ ಮಗ ಪ್ರದ್ಯುಮ್ನನಾಗಿ ಹುಟ್ಟಿದ್ದಾನೆ ರುದ್ರನ ಮಗ ಷಣ್ಮುಖನಾಗಿ ಹುಟ್ಟಿದ್ದಾನೆ. ಕಾಮ ಚಕ್ರಕ್ಕೆ ಅಭಿಮಾನಿ. ಮುಖ್ಯಾಭಿಮಾನಿ ಲಕ್ಷ್ಮೀದೇವಿ ಇರಲಿಕ್ಕೆ, ಕಾಮ ಚಕ್ರಕ್ಕೆ ಅಭಿಮಾನಿ ಎಂದು ಏನುಕಾರಣ ಹೇಳಬೇಕೆಂದಲ್ಲಿ,

ಚಕ್ರಕ್ಕೆ ಮುಖ್ಯಾಭಿಮಾನಿ ದುರ್ಗಾದೇವಿ; ಅವತಾರಾಭಿಮಾನಿ ಪ್ರದ್ಯುಮ್ನನು. ಶ್ರೀದೇವಿ ಶಂಖಕ್ಕೆ ಅಭಿಮಾನಿ, ಭೂದೇವಿ ಪದ್ಮಕ್ಕೆ ಅಭಿಮಾನಿ, ಚಕ್ರಕ್ಕೆ ದುರ್ಗಾದೇವಿ, ಗದೇಗೆ ಅಭಿಮಾನಿ ವಾಯುದೇವರು. ಸರಸ್ವತೀ ವಿದ್ಯಾಭಿಮಾನಿ ಶಾರ್ಙ್ಗ ಧನುಸ್ಸಿಗೆ ಅಭಿಮಾನಿ. ನಾರಾಯಣನ ಖಡ್ಗಚರ್ಮಕ್ಕೆ ಲಕ್ಷ್ಮೀ ಅಭಿಮಾನಿ. ಪ್ರಾಣಾಪಾನವ್ಯಾನೋದಾನಸಮಾನ ಹೀಂಗೆ ಮುಖ್ಯಪ್ರಾಣರೂಪಗಳು ಐದೂ ಸ್ವಾಮೀ ಬಾಣಾಭಿಮಾನಿಗಳು. ಈ ಪ್ರಕಾರ ಆಯುಧಗಳಿಗೆ ಪುರಾತನಾಭಿಮಾನಿಗಳು ಇರಲಿಕ್ಕೆ ಕಾಮನು ಯಾಕೆ ಚಕ್ರಕ್ಕೆ ಅಭಿಮಾನಿ ಆದ ಎಂದಲ್ಲಿ, ಕಾಮ ನಾರಾಯಣನ ಮಗ ಆಗಬೇಕು. ಮಗನ ಮ್ಯಾಲಿನ ಮೋಹದಿಂದ ಚಕ್ರಕ್ಕೆ ಅಭಿಮಾನಿತ್ವ ಕೊಟ್ಟು ಇಟ್ಟನು. ಕಾಮಪುತ್ರ ಅನಿರುದ್ಧ ಮೊದಲೇ ಬ್ರಹ್ಮದೇವರ ದೆಸಿಯಿಂದ ಹುಟ್ಟಿದ್ದಾನೆ. ಕಾಮ ಮತ್ತು ಅನಿರುದ್ಧ ಇಬ್ಬರೂ ಭರತಶತ್ರುಘ್ನರಾಗಿ ಹುಟ್ಟಿದ್ದಾರೆ. ಶೇಷ, ಲಕ್ಷ್ಮಣನಾಗಿ ಸುಮಿತ್ರೆಯಲ್ಲಿ ಹುಟ್ಟಿದ್ದಾನೆ. ಕೌಸಲ್ಯಾದೇವಿಯಲ್ಲಿ ರಾಮ ಹುಟ್ಟಿದ್ದಾನೆ. ಕೈಕೇಯಿಯಲ್ಲಿ ಭರತ, ಸುಮಿತ್ರೆಯಲ್ಲಿ ಶತ್ರುಘ್ನ, ಹೀಂಗೆ ದಶರಥರಾಯಗೆ ಮೂವರು ಹೆಂಡರು ನಾಲ್ಕು ಜನ ಮಕ್ಕಳು. ಈ ನಾಲ್ವರು ಅವರೋತ್ತಮರು ಎಂದು ಕೆಲವು ಗ್ರಂಥಗಳಲ್ಲಿ ಹೇಳತವಲ್ಲ ಎಂದಲ್ಲಿ, ವಾಸುದೇವ ಸಾಕ್ಷಾತ್ ರಾಮಾವತಾರ, ಸಂಕರ್ಷಣನ ಆವೇಶದಿಂದ ಶೇಷ ಲಕ್ಷ್ಮಣನಾಗಿ, ಪ್ರದ್ಯುಮ್ನನಾಮಕ ನಾರಾಯಣನ ಆವೇಶದಿಂದ ಕಾಮ ಭರತನಾಗಿ, ಅನಿರುದ್ಧನಾಮಕ ನಾರಾಯಣನ ಆವೇಶದಿಂದ ಅನಿರುದ್ಧ ಶತ್ರುಘ್ನನಾಗಿ ಹುಟ್ಟಿದ್ದಾರೆ. ಸೂರ್ಯ ಸುಗ್ರೀವ; ಚಂದ್ರ ಅಂಗದನಾಗ್ಯಾನೆ. ಸೂರ್ಯ ಚಂದ್ರ ಸಮರಾದರೂ ಸರಿಯೇ, ಅಂಗದನಲ್ಲಿ ಇಂದ್ರನ ಆವೇಶವದೆ.

ರಘುನಾಥ ಸಂಧಾನ ಮಾಡಲಿಕ್ಕೆ ರಾವಣನ ಸಮೀಪಕ್ಕೆ ಅಂಗದನ ಕಳುಹಿದ್ದ. 'ನಮ್ಮ ಸ್ವಾಮಿ ರಘುವರ್ಯನ ಪರಾಕ್ರಮ ಎಷ್ಟಂತ ಹೇಳಲಿ. ನಮ್ಮ ತಂದೆ ವಾಲಿ ಪ್ರಾತಃಕಾಲ ಸಂಧ್ಯಾನಕ್ಕೆ ಪೂರ್ವಸಮುದ್ರಕ್ಕೆ ಹೋಗಿ ಸಂಧ್ಯಾವಂದನೆ ಮಾಡಿ ದಕ್ಷಿಣಸಮುದ್ರಕ್ಕೆ ಹೋಗಿ ಮಧ್ಯಾಹ್ನ ಸಂಧ್ಯಾವಂದನೆ ಮಾಡಿ ಪಶ್ಚಿಮಸಮುದ್ರಕ್ಕೆ ಬಂದು ಸಾಯಂಸಂಧ್ಯಾವಂದನೆ ಮಾಡಿ ಕೊನೆಯಲ್ಲಿ ಯಸ್ಯಸ್ಮೃತ್ಯಾಚ ಬಿಡಲಿಕ್ಕೆ ಉತ್ತರ ಸಮುದ್ರಕ್ಕೆ ಬಂದಿರಲಾಗಿ, ರಾವಣ ಹತ್ತುತಲೆ ಹುಳುವು ಎಂದು ತನ್ನ ಕಂಕುಳಲ್ಲಿ ಇಟ್ಟುಕೊಂಡು, ಕಿಷ್ಕಿಂಧಾಪಟ್ಟಣಕ್ಕೆ ಬಂದು ಅಂಗದನ ತೊಟ್ಟಿಲಿಗೆ ಕಟ್ಟಿದ್ದ. ಬಾಲಕತನದಲ್ಲಿ ಕಾಲಕಾಲೀಲೆ ಓದೇವಾಗ, ಹತ್ತುತಲೇ ಹುಳುವು ಸತ್ತೀತೆಂದು ನಿನ್ನ ಬಿಟ್ಟುಕೊಟ್ಟರು. ಅಂದು ಜೀವ ಉಳಿಸಿಕೊಂಡು ಬಂದು ಇದ್ದಿ. ಅಂಥ ಆ ವಾಲೀನ್ನೇ ರಘುನಾಥ ಕೊಂದಿದ್ದಾನೆ. ಎಲೇ ಮೂರ್ಖ! ನಿನ್ನ ನಾ ಬಲ್ಲೆನು' ಹೀಂಗಂತ ಅಂಗದ ಸಂಧಾನಕ್ಕೆ ಹೋಗಿರಲಾಗಿ ರಾವಣಗೆ ಅಂದಾನೆ. ಅಂಗದನಲ್ಲಿ ಇಂದ್ರನ ಆವೇಶವದೆ. ದಾರು ದಾರು ದೊಡ್ಡವರು ಅಂತ ಕರಸಿಕೋಥಾರೆ

ಅವರಲ್ಲಿ ನಾರಾಯಣನ ವಿಭೂತಿರೂಪವದೆ. ಸ್ವಾಮಿ ಸನ್ನಿಹಿತನಾಗಿ ಅವರಲ್ಲಿ ಇರಥಾನೆಂದು ತಿಳೀಬೇಕು.

ಸಕಲವನ್ನೂ ಹೇಳಬಂದಿರಿ, ಲಕ್ಷ್ಮೀ ಅವತಾರ ಯಾಕೆ ಹೇಳಲಿಲ್ಲ ಎಂದಲ್ಲಿ, ರಾಮ ಸಾಕ್ಷಾತ್ ನಾರಾಯಣನೇ. ಸೀತಾದೇವಿ ಸಾಕ್ಷಾತ್ ಲಕ್ಷ್ಮೀದೇವಿಯೇ. ಲಕ್ಷ್ಮೀನಾರಾಯಣರು ಶುಕ್ಲಶೋಣಿತರಲ್ಲ ಎಂಬೋದು ಹ್ಯಾಂಗೆ? ದೃಷ್ಟಾಂತ ನರಸಿಂಹಾವತಾರ. ಸೀತಾದೇವಿ ಅವತಾರ ದೃಷ್ಟಾಂತ ತೋರಿಸಬೇಕಾಗಿ ಸೀತಾದೇವಿ ನೇಗಿಲ ತುದಿಗೆ ಹತ್ತಿಬಂದಳು. ಸೀರಧ್ವಜನು ಯಜ್ಞ ಮಾಡಬೇಕೆಂದು ನೇಗಿಲಿನಿಂದ ಭೂಮಿ ಶೋಧಿಸಿರಲಿಕ್ಕೆ ಸೀತಾದೇವಿ ವ್ಯಕ್ತವಾದಳು. ಮಿಥಿಲಾಪಟ್ಟಣಕ್ಕೆ ರಾಯನ ಮಗಳಾದ ಕಾರಣ, ಮೈಥಿಲೀ ಎಂದು ಕರೆಸಿಕೊಂಡಳು. ಜನಕರಾಜನ ಮಗಳಾದ ಕಾರಣ, ಜಾನಕೀ ಎಂದು ನಾಮ ಬಂತು. ಇಂಥಾ ಲಕ್ಷ್ಮೀರೂಪಳಾದಂಥ ಸೀತಾದೇವಿಯು ರಾಮದೇವರ ಸೇವ ನಿಮಿತ್ತವಾಗಿ ಅವತಾರ ಮಾಡಿದಳು. ಪೂರ್ವೋಕ್ತ ಪ್ರಕಾರದಿಂದ ಆದಿಸೃಷ್ಟಿ ಅನುಸೃಷ್ಟಿಯು ಸರ್ವಾಗನು ನಿರ್ಣಯಾರ್ಥವಾಗಿ ಹೇಳಲ್ಪಟ್ಟಿತು. ಆದಿಸೃಷ್ಟಿಯಲ್ಲಿ ಹುಟ್ಟಿದವರು ಗುಣದಿಂದ ಶ್ರೇಷ್ಠರು. ಹಿಂದೆ ಹುಟ್ಟಿದವರು ಗುಣದಿಂದ ನೀಚರಾಗಿ ಹುಟ್ಟಿದ್ದಾರೆ. ಸಮಸ್ತ ಪಾಂಚರಾತ್ರಾಗನು ಸಕಲ ಶಾಸ್ತ್ರನಿರ್ಣಯ ವಿಚಾರಮಾಡಿ ಸೃಷ್ಟಿಪ್ರಕಾರ ಹೇಳೀದೆ. ಪುರಾಣಾಗಳೆಲ್ಲಿ ವಿಪರೀತ ಅಸುರಜನಮೋಹನಾರ್ಥ ಹೇಳಿದ್ದಾರೆ. ಆದಿಸೃಷ್ಟಿಯಲ್ಲಿ ಹೇಳಿದ ಪ್ರಕಾರ ತಿಳಿದುಕೋಬೇಕೆಂಬಲ್ಲಿಗೆ ಶ್ರೀಮದಾಚಾರ್ಯರು ಹೇಳಿದ ಶ್ರೀಮನ್ಮಹಾಭಾರತ ತಾತ್ಪರ್ಯನಿರ್ಣಯವನ್ನು ಪ್ರಾಕೃತದಿಂದ ವಿವರಿಸುವ 'ಸರ್ಗ ಅನುಸರ್ಗ ಪ್ರಾದುರ್ಭಾವ ನಿರ್ಣಯ' ಎಂಬಂಥ ಮೂರನೇ ಅಧ್ಯಾಯ ಸಂಪೂರ್ಣವು.

ಅಧ್ಯಾಯ ೪

ಶ್ರೀರಾಮಚರಿತೆಯಲ್ಲಿ ಅಯೋಧ್ಯಾಪ್ರವೇಶ

ಈ ನಾಲ್ಕನೇ ಅಧ್ಯಾಯದಲ್ಲಿ ಶ್ರೀಮದಾಚಾರ್ಯರು, ರಾಮಾಯಣ ಆದಿಯಿಂದ ಅಂತ್ಯಪರಿಯಂತರ ಹೇಳತಾಬಂದಾರೆ. ಮೂಲರಾಮಾಯಣ ಈ ಭೂಮಿ ಮ್ಯಾಲೆ ಎಲ್ಲಾ ಮನುಷ್ಯರೂ ಕಲೀಲಿಕ್ಕೆ ಯೋಗ್ಯರಲ್ಲ. ಆದಕಾರಣ ಶತಕೋಟಿ ರಾಮಾಯಣ ಶ್ಲೋಕ, ದೇವತೆಗಳು ಗಂಧರ್ವರು ಪಿತೃಗಳು ತಮಗೆ ಬೇಕೆಂದು ಮೂರು ಪಾಲು ಮಾಡಲಿಕ್ಕೆ, ಒಂದು ಶ್ಲೋಕ ಉಳಿಯಿತು. ಅದೂ ತಮಗೆ ಬೇಕೆಂದು ಮೂರು ಪಾಲು ಮಾಡಲಿಕ್ಕೆ 'ರಾಮ' ಎಂಬ ಎರಡಕ್ಷರಗಳು ಉಳಿದವು. **'ರಾಮರಾಮ'** ಎಂಬ ತಪಸ್ಸುಸಾಮಗ್ರಿಯಿಂದ, ವಾಲ್ಮೀಕಿ ಇಪ್ಪತ್ತನಾಲ್ಕುಸಾವಿರ ಗ್ರಂಥವಿಸ್ತಾರ ರಾಮಾಯಣ ಮಾಡಿದ್ದಾರೆ. ನರಸಿಂಹಪುರಾಣದಲ್ಲಿ, ಆದಿಪರ್ವ ಭಾರತದಲ್ಲಿ ರಾಮಚರಿತ್ರೆ ಅಸುರಜನ ಮೋಹಿಸಬೇಕಾಗಿ ಮೋಹಕ ಕಥೆ ಸಂಗ್ರಹಿಸಿ ಹೇಳಲ್ಪಟ್ಟಿದೆ—ರಾಮಾಯಣ ಶತಕೋಟಿ ಗ್ರಂಥ, ತಾವು ಶ್ರೀಮದಾಚಾರ್ಯರು ಬಲ್ಲರು, ಸರ್ವಜ್ಞಶಿಖಾಮಣಿಗಳು. ಈ ನಾಲ್ಕನೇ ಅಧ್ಯಾಯ ಆರಂಭವಾಗಿ ಒಂಭತ್ತನೇ ಅಧ್ಯಾಯ ಪರಿಯಂತರ ರಾಮಚರಿತ್ರೆ ಹೇಳಥಾ ಇದ್ದಾರೆ.

ಬಾಲಕಾಂಡ ಹೇಳಬೇಕಾಗಿ—ಸೂರ್ಯವಂಶದ ಅರಸು ದಶರಥರಾಯ ತನಗೆ ಮಕ್ಕಳಿಲ್ಲವೆಂದು ಪುತ್ರಕಾಮೇಷ್ಟಿ ಯಜ್ಞ ಮಾಡಿದ. ವಿಭಾಂಡಕನ ಮಗ ಋಷ್ಯಶೃಂಗ ಯಜ್ಞ ಮಾಡಿಸಿದನು. ಯಜ್ಞಕುಂಡದೊಳಗಿಂದ ಪರಮಾನ್ನಪಾತ್ರೆ ಬಂತು. ತನ್ನ ಮೂರು ಮಂದಿ ಹೆಂಡರಿಗೆ ವಿಭಾಗಮಾಡಿಕೊಟ್ಟನು, ಗರ್ಭ ಧರಿಸಿದರು. ಸಾಕ್ಷಾತ್ ವಾಸುದೇವ ರಾಮನಾಗಿ ಅವತಾರ ಮಾಡಿದನು. ಸಂಕರ್ಷಣನ ಆವೇಶದಿಂದ ಶೇಷ, ಲಕ್ಷ್ಮಣನಾಗಿ ಹುಟ್ಟಿದನು. ಪ್ರದ್ಯುಮ್ನನ ಆವೇಶದಿಂದ ಚಕ್ರಕ್ಕೆ ಅಭಿಮಾನಿ ಪ್ರದ್ಯುಮ್ನ, ಭರತನಾಗಿ ಹುಟ್ಟಿದನು. ಅನಿರುದ್ಧನ ಆವೇಶದಿಂದ ಶಂಖಕ್ಕೆ ಅಭಿಮಾನಿ ಅನಿರುದ್ಧ, ಶತ್ರುಘ್ನನಾಗಿ ಹುಟ್ಟಿದನು. ಸ್ವಾಮೀ ಅವತಾರ ವಾಯಿತೆಂದು ಸಮಸ್ತ ದೇವತೆಗಳು ಕಪಿಗಳಲ್ಲಿ ಕರಡಿಗಳಲ್ಲಿ ಹುಟ್ಟಿದರು.

ಸ್ವಾಮಿಗೆ ವೃದ್ಧಿ ಹ್ರಾಸಗಳಿಲ್ಲದಿದ್ದರೂ ಲೋಕರೀತಿಯಿಂದ ಬೆಳಿಯೋಪಾದಿಯಲ್ಲಿ ತೋರಿಸಿದ್ದಾನೆ. ಸ್ವಾಮಿ ಪುರುಷೋತ್ತಮ ಕ್ಷರಾಕ್ಷರ ಜೀತನಕ್ಕೆ ಒಡಿಯ ನಿರಂತರ ಅಭಿವೃದ್ಧಿ ಹ್ರಾಸ ತೋರಸ್ತಾನೆ. ಜ್ಞಾನಿಗಳ ಕಣ್ಣಿಗೆ ಶಶ್ವದೇಕಪ್ರಕಾರನಾಗಿ ತೋರಥಾನೆ. ಚಂದ್ರಮಂಡಲದೋಪಾದೇಲಿ ರಾಮನ ಮುಖಚೆಲ್ವಿಕೆ ಕಂಡು

ಸಮಸ್ತರೂ ಕೃತಕೃತ್ಯರಾದರು. ದಶರಥರಾಯಗೆ ಮಗನ ಜೆಲ್ವಿಕಿ ಕಂಡು ಬಹಳ ಸಂತೋಷ ಹೆಚ್ಚಿತು.

ವಿಶ್ವಾಮಿತ್ರನ ಯಜ್ಞವನ್ನು ರಾಕ್ಷಸರುಗಳು ಅಶುದ್ಧಗಳ ಮತ್ತು ಮೂತ್ರ ಹಾಕಿ ಕೆಡಸುತ್ತ ಇಹೋರು. ಆದಕಾರಣ ವಿಶ್ವಾಮಿತ್ರ ರಾಮಲಕ್ಷ್ಮಣರ ಕೂಡಿ-ಕೊಂಡು ಹೋಗಲಿಕ್ಕೆ ಅಯೋಧ್ಯಾಪಟ್ಟಣಕ್ಕೆ ಬಂದನು. ದಶರಥನ ಕೈಯ ಪೂಜಾ ಕೊಂಡ ವಿಶ್ವಾಮಿತ್ರ, ತಾ ದಾರು ಎಂದರೆ, ಗಾಧಿರಾಯನ ಮಗ. ಗಾಧಿರಾಯನು ಇಂದ್ರಾವತಾರ, ಚಂದ್ರವಂಶದಲ್ಲಿ ಹುಟ್ಟಿದ್ದಾನೆ. ವಿಶ್ವಾಮಿತ್ರ ಕ್ಷತ್ರಿಯನಾದರೂ ಬ್ರಾಹ್ಮಣತ್ವ ಐದಿದನು. ಅದು ಹ್ಯಾಂಗೆ ಐದಿದನು ಎಂದರೆ ಗಾಧಿರಾಯಗೆ ಗಂಡು-ಮಕ್ಕಳು ಇದ್ದಿಲ್ಲ. ಪುತ್ರಿಕಾಪುತ್ರನ್ಯಾಯದಿಂದ, ತನ್ನ ಮಗಳು ಸತ್ಯವತೀಯನ್ನು ಋಚೀಕ ಬ್ರಾಹ್ಮಣಗೆ ಮದವಿ ಮಾಡಿಕೊಟ್ಟನು. ಆ ಸತ್ಯವತಿಯ್ತು ತನ್ನ ಗಂಡ ಋಚೀಕಗೆ ಬೇಡಿಕೊಂಡಳು. 'ನನ್ನ ತಂದಿಗೆ ಮಕ್ಕಳಿಲ್ಲ. ನನಗೆ ತಮ್ಮನಾಗೋ ಹಾಂಗೆ ಮಾಡು' ಎನಲಿಕ್ಕೆ ಋಚೀಕ ಯಜ್ಞ ಮಾಡಿ ತನ್ನ ಅತ್ತೀಗೆ ಕ್ಷತ್ರಿಯ-ರಾಯರು ಹುಟ್ಟಬೇಕು, ತನ್ನ ಹೆಂಡತಿಗೆ ದೊಡ್ಡ ತಪಸ್ವಿ ಬ್ರಾಹ್ಮಣ ಹುಟ್ಟ-ಬೇಕೆಂದು ಎರಡು ಚರುಪಾತ್ರಿ ಹೋಮಶೇಷ ಇಟ್ಟು ಸ್ನಾನಕ್ಕೆ ಹೋಗಿರಲಾಗಿ, ತನ್ನ ಹೆಂಡತಿಗೆ :ದಿವ್ಯಸ್ವರೂಪವುಳ್ಳ ಪುತ್ರನಾಗಬೇಕೆಂದು ಮಂತ್ರಪೂತ ಅನ್ನ ಇಟ್ಟಿದ್ದಾನಾದೀತೆಂದು ತನಗೆ ಇಟ್ಟಂಥಾದ್ದನ್ನು ಮಗಳಿಗೆ ಕೊಟ್ಟು, ಮಗಳ ಚರು-ಪಾತ್ರಿ ಒಳಗಿನ ಅನ್ನವನ್ನು ತಾ ಭೋಜನ ಮಾಡಿದಳು. ಋಷಿಯು ತ್ರಿಕಾಲ-ದರ್ಶಿಯು ಈ ವಿಪರೀತವನ್ನು ಕಂಡು, ತನ್ನ ಹೆಂಡತೀ ಕೂಡ ಮಾತನಾಡಿದ. 'ನಿನಗೆ ಕ್ಷತ್ರಿಯ ಮಗ ಹುಟ್ಯಾನು. ಆ ಗಾಧಿರಾಯಗೆ ವಿಶ್ವಾಮಿತ್ರನೆಂಬೋ ದೊಡ್ಡ ತಪಸ್ವಿ ಮಗನಾದಾನು.' ಇಂಥಾ ವಿಶ್ವಾಮಿತ್ರನು ತನ್ನ ಮುಖವನ್ನು ಸಂರಕ್ಷಿಸ ಬೇಕಾಗಿ ದಶರಥರಾಯನ ಕೂಡ ರಾಮ ಲಕ್ಷ್ಮಣರಂಥ ಇಬ್ಬರು ಮಕ್ಕಳ ಸಹಾಯ ಬೇಡಿಕೊಂಡನು. ದಶರಥರಾಯನು ತನ್ನ ಮಕ್ಕಳ ಕೊಡದೆ ಇದ್ದರೆ ಋಷೀಶ್ವರ ಶಪಿಸಿ ಕ್ರೋಧಗೊಂಡಾನೆಂದು ಭಯಯುಕ್ತನಾಗಿ ಬಹು ಕಷ್ಟದಿಂದ ಮಕ್ಕಳ ಕೊಟ್ಟನು. ಋಷಿ ಸಿದ್ಧಾಶ್ರಮಕ್ಕೆ ಹೋಗುವಾಗ್ಗೆ ಬ್ರಹ್ಮಾದಿ ವಂದಿತನಾದಂಥ ಶ್ರೀನಾಪುದೇವರಿಗೆ, ರಾಕ್ಷಸರ ಮಾಯ ಬಹಳವೆಂದು ಮಂತ್ರೋಪದೇಶವನ್ನು ಮಾಡಿದ್ದಾನೆ.

ರಾಮ ತಾನು ಸರ್ವಜ್ಞಶಿಖಾಮಣಿ. ಸಮಸ್ತ ಅಸ್ತ್ರಾಭಿಮಾನಿ ದೇವತೆಗಳೂ ಸ್ವಾಮೀ ಕೂಡ ವಾಲಗೈಸೇವೆಂದು ದೇವರ ಪಾದಕಮಲವನ್ನು ಹುಡುಕುತ್ತಾ ಇದ್ದಾರೆ. ಈಶ ತಾ ಸರ್ವಜ್ಞ, ವಿಶ್ವಾಮಿತ್ರನಮ್ಯಾಲೆ ಅನುಗ್ರಹಾರ್ಥವಾಗಿ ಅಸ್ತ್ರೋಪದೇಶ, ಲೋಕರೀತಿಯಿಂದ ಮಾಡಿಸಿಕೊಂಡನ್ನು. ಋಷಿಯು ತನ್ನ ಸಿದ್ಧಾಶ್ರಮಕ್ಕೆ ಹೋಗುವುದಕ್ಕೆ ಪ್ರತ್ಯೇಕ ಮಾರ್ಗವಿದ್ದರೂ ಸರಿಯೆ, ತಾಟಕೀ

ಕೊಲ್ಲಿಸಬೇಕಾಗಿ ಆಕೆ ಇದ್ದಂಥ ಸ್ಥಳಕ್ಕೆ ಕೂಡಿಕೊಂಡು ಹೋದನು. ತಾಟಕೀ ಸಜ್ಜನರಿಗೆ ಕಂಟಕಳು. ಆಕೆಗೆ ಬ್ರಹ್ಮದೇವರ ವರವಿಹೋದು. ಆಕೆಯನ್ನು ಶ್ರೀರಾಮದೇವರು ತನ್ನ ಬಾಣಗಳಿಂದ ಛೇದಿಸಿಬಿಟ್ಟನು. ತಿರುಗಿ ಸಿದ್ಧಾಶ್ರಮಕ್ಕೆ ಬಂದು ವಿಶ್ವಾಮಿತ್ರನು ಯಜ್ಞ ಆರಂಭಮಾಡಿದನು. ಆರು ದಿವಸದ ವ್ಯಾಲೆ ಏಳನೇ ದಿವಸಕ್ಕೆ ಮಾರೀಚ ಮೊದಲಾದ ಅಪಾರ ದಾನವರು, ಅಶುದ್ಧ ಮೂತ್ರ ಹಾಕಬೇಕೆಂದು ಕಿಲಿಕಿಲಿ ಶಬ್ದದಿಂದ ಬಂದರು. ಶ್ರೀರಾಮನು ಸುಬಾಹುವನ್ನು ಕೊಂದುಬಿಟ್ಟನು. ಸುಬಾಹು ರುದ್ರದೇವರ ವರಬಲದಿಂದ ಮರಣರಹಿತನಾಗಿದ್ದ. ರಾಮುಬಾಣದಿಂದ ಹೊಡೆಸಿಕೊಂಡು ಸತ್ತನು. ಮಾರೀಚನು ಶ್ರೀರಾಮದೇವರ ಅಸ್ತ್ರದಿಂದ ಹಾರಿಹೋಗಿ ಗೋಕರ್ಣಸಮುದ್ರದಲ್ಲಿ ಬೀಳಲಾಗಿ ಆ ಅಸ್ತ್ರವು ಪುನಃ ದೇವರ ಸಮೀಪಕ್ಕೆ ಬಂದದ್ದಾಯಿತು. ದಾಶರಥೀರಾಯನು ಅಪಾರ ರಾಕ್ಷಸರ ಹತಗೈದು ವಿಶ್ವಾಮಿತ್ರ ಮುನಿಯ ಯಜ್ಞವನ್ನು ಸಂರಕ್ಷಿಸಿದನು.

ಇಷ್ಟಾಗಲಿಕ್ಕೆ ವಿದೇಹದೇಶದಿಂದ ಜನಕರಾಯನ ಪತ್ರಗಳು, 'ಸೀತಾನ ಸ್ವಯಂವರವಾಗತದೆ ಬನ್ನಿ' ಎಂಬ ಹಾಂಗೆ ದೇಶದೇಶಗಳಿಗೆ ಬಂದವು. ವಿಶ್ವಾಮಿತ್ರ ಮುನಿಯು ರಾಮಲಕ್ಷ್ಮಣರ ಕೂಡಿಕೊಂಡು ಅಯೋಧ್ಯಾನಗರಕ್ಕೆ ಹೋಗೋದು ಬಿಟ್ಟು ಮಿಥಿಲಾಪಟ್ಟಣಕ್ಕೆ ತೆರಳಿದನು. ಹೋಗುವಾಗ ಪ್ರತ್ಯೇಕ ಮಾರ್ಗವಿದ್ದರೂ ಸರಿಯೇ ಅಹಲ್ಯಾದೇವಿಯ ಉದ್ಧಾರ ಮಾಡಬೇಕಾಗಿ, ಶ್ರೀರಾಮಲಕ್ಷ್ಮಣರು ವಿಶ್ವಾಮಿತ್ರನ ಮುಂದುಮಾಡಿಕೊಂಡು, ಗೌತಮಋಷಿಯ ಶಾಪದಿಂದ ಶಿಲಾರೂಪಳಾಗಿ ಬಿದ್ದಂಥ ಅಹಲ್ಯಾ ಸಮೀಪಕ್ಕೆ ಹೋದರು. ಗೌತಮಋಷಿ ಶಾಪವಾಗಲಿಕ್ಕೆ ಕಾರಣವೇನೆಂದರೆ, ಗೌತಮಋಷಿ ತಪಸ್ಸು ಒಡಕವಾಗಿತ್ತು. ಸ್ತ್ರೀ ವ್ಯಭಿಚಾರಿಣಿಯಾದರೆ ಗಂಡನ ತಪಸ್ಸು ಹ್ರಾಸವಾಗಿ ಹೋಗತದೆ. ಆದಕಾರಣ ಅರ್ಧರಾತ್ರೀ ವ್ಯಾಳ್ಯಾದಲ್ಲಿ ದೇವೇಂದ್ರ ಬಂದು ಕುಕ್ಕುಟಾಕಾರ ಧ್ವನಿಗೈಲಿಕ್ಕೆ, ಬೆಳಗಾಯಿತೆಂದು ಗೌತಮಋಷಿ ಸ್ನಾನಕ್ಕೆ ಹೋಗಬೇಕೆಂದು ಹೊರಗೆ ಬಂದು ನಕ್ಷತ್ರಗಳ ಗ್ರಹಿಸಲಾಗಿ, ಇನ್ನೂ ಬೆಳಗಾಗಿಲ್ಲ ಅರ್ಧರಾತ್ರಿಯೆಂದು ತಿಳಿದು ಹಿಂದಕ್ಕೆ ಕುರಿತು ಬಂದು ನೋಡಥಾನೆ, ಸ್ವರ್ಗಾಧಿಪತಿಯು ಅಹಲ್ಯಾದೇವಿಯ ಭೋಗಿಸಿ ಭಯಗ್ರಸ್ತನಾಗಿ ಕಡೇಲಿ ನಿಂತಿದ್ದಾನೆ! ಈ ವ್ಯಭಿಚಾರ ಕಂಡು ಗೌತಮಋಷಿ ಕೋಪಾವಿಷ್ಟನಾಗಿ ತನ್ನ ಪತ್ನಿಗೆ ಆಗಲೇ 'ಪರಪುರುಷನೆಂದು ಹ್ಯಾಂಗೆ ತಿಳಿದಿದ್ದಿಲ್ಲ ನೀನು ಪಾಷಾಣವಾಗು' ಎಂದು ಶಾಪಕೊಟ್ಟನು. ಇಂದ್ರದೇವರಿಗೆ 'ಪರಸ್ತ್ರೀಯಲ್ಲಿ ಹ್ಯಾಂಗೆ ಚಿತ್ತವಿಟ್ಟಿ? ಈ ಅಪರಾಧಕ್ಕೆ ಪುರುಷತ್ವ ಹೋಗಿ ಮೇಷವೃಷಣ ಹಚ್ಚಿದರೆ ನಿನಗೆ ಸಹಸ್ರ ಭಗವಾಗಲಿ' ಎಂದು ಶಾಪ ಕೊಟ್ಟದ್ದ. ಸ್ವಾಮೀ ಅನುಗ್ರಹದಿಂದ ಪುರುಷತ್ವ ಉಳ್ಳವನಾಗಿ ಸಹಸ್ರಾಕ್ಷನಾದ. ಅಹಲ್ಯಾದೇವಿ ಕಲ್ಲಾಗಿ ಬಿದ್ದಿದ್ದಳು. ಸ್ವಾಮಿ ತನ್ನ ಅಮೃತದೃಷ್ಟಿಯಿಂದ ನೋಡಲಿಕ್ಕೆ ಮನುಷ್ಯಳಾಗಿ

ನಿಂತಳು. ಗೌತಮಗೆ 'ಅಂಗೀಕಾರ ಮಾಡು' ಎಂದನು. ಗಂಡಹೆಂಡಿರ ಮನ ಮುನಿಸು ಆಗಿದ್ದರೆ ಪ್ರಭುಗಳು, ಹಿರೇರು ಒಂದು ಮಾಡಥಾರೆ. ಹಿರೇರ ಮಾತು ಮೀರಲಾಗದೆ ಒಂದಾಗಥಾರೆ, ಮನಸ್ಸು ನಿರ್ಮಲ ಇಹೋದಿಲ್ಲ. ಹಾಂಗೆ ಗೌತಮಗೆ ಆಗಲಿಲ್ಲ. ಸ್ವಾಮೀ ಆಜ್ಞೆ ಆಗಲಿಕ್ಕೆ ಮೊದಲಕಿಂತ ಅತ್ಯಂತ ಸ್ನೇಹಮಾಡ-ಹೊಕ್ಕನು.

ತನ್ನ ಅಪರಾಧದಿಂದ ಕಲ್ಲಾಗಿ ಬಿದ್ದಾಕೆಯನ್ನು, ಏನುಕಾರಣ ಮನುಷ್ಯಳ ಮಾಡಬೇಕೆಂದಲ್ಲಿ, ಸ್ತ್ರೀಯಳ ಮಾಡೋವಲ್ಲಿ ಎರಡು ನಿಮಿತ್ತ ಹೇಳಥಾರೆ. ಅವು ಯಾವುವೆಂದರೆ, ಅಹಲ್ಯಾದೇವಿ ಸ್ವಾಮೀ ವಿನಃ ಮತ್ತೊಬ್ಬರಲ್ಲಿ ಭಕ್ತಿಯುಳ್ಳಾಕಿ ಅಲ್ಲ, ಅದು ಒಂದು ನಿಮಿತ್ತ. ಮತ್ತೊಂದು, ದೇವೇಂದ್ರ ತನ್ನ ನಿಮಿತ್ತ ಕಲ್ಲಾಗಿ ಬಿದ್ದಳೆಂದೂ ಈಕೆಗೆ ಉದ್ಧಾರ ಎಂದಾದೀತೆಂದೂ ಅಪೇಕ್ಷ ಉಳ್ಳಾತನಾಗಿ ಕಾಲ-ಪ್ರತೀಕ್ಷ ಮಾಡತಿದ್ದ. ಈ ನಿಮಿತ್ತ ಸ್ತ್ರೀಯಳ ಮಾಡಬೇಕು ಎಂಬೋದು ಎಂದಲ್ಲಿ ಮುಖ್ಯಾರ್ಥ. ತನ್ನಲ್ಲಿ ಮಾಡುವಂಥ ಭಕ್ತ್ಯತಿಶಯದ ಸಾಮರ್ಥ್ಯವನ್ನು ಪ್ರಕಾಶ ಮಾಡುವಂಥಾತನಾಗಿ ಅತ್ಯಂತ ಅನುಗ್ರಹದಿಂದ ದೇವೇಂದ್ರನ ಮನೋಬಯಕೆ ಪೂರ್ಣಮಾಡಿ, ಕಲ್ಲಾಗಿದ್ದಂಥ ಅಹಲ್ಯಾದೇವಿಯ ಸ್ತ್ರೀಯಳ ಮಾಡಿ, ಆಕೆ ಕೈಯ ಪೂಜಿವಾಡಿಸಿಕೊಂಡು ಮುಂದಕ್ಕೆ ತೆರಳಿದನು. ಪ್ರಮಾದದಿಂದ ಏನು ದೋಷ ಬಂದಿದ್ದರೂ, ಸ್ವಾಮಿಯಲ್ಲಿ ಭಕ್ತಿ ಉಳ್ಳಂಥಾವರಿಗೆ ಪರಿಹಾರವಾಗತದೆಂದು ದೃಷ್ಟಾಂತ ಕೊಟ್ಟಹಾಂಗಾಯಿತು.

ತರುವಾಯ ಮಿಥಿಲಾಪಟ್ಟಣಕ್ಕೆ ಪ್ರವೇಶವಾದನು. ಇಂದ್ರನೀಲರತ್ನ-ದೋಪಾದೇಲಿ ನೀಲಮೇಘಶ್ಯಾಮ ಹೊಳಿಯುತ್ತ, ಶ್ಯಾಮವರ್ಣ ಉಳ್ಳಂಥಾತ ಧನುರ್ಬಾಣಗಳ ಕೈಲಿ ಹಿಡಕೊಂಡು ಸಮಸ್ತರಿಗೆ ಆನಂದೋದ್ರೇಕ ಮಾಡಿಕೊಡುತ್ತ ಸ್ವಾಮಿ, ಮಿಥಿಲಾಪಟ್ಟಣಕ್ಕೆ ಪ್ರವೇಶವಾದನು. ಪಟ್ಟಣಸ್ಥರು, ಸ್ವಾಮೀ ನೋಡ-ಬೇಕೆಂದು ಹೊಡಗೆಡದು ನೋಡಲಿಕ್ಕೆ ಬಂದರು. ಸ್ತ್ರೀಯರು ವೃದ್ಧರು ಬಾಲರು ಸಮಸ್ತ ಪ್ರಾಣಿಗಳು ಬಂದು, ಕಣ್ಣುಗಳೆಂಬಂಥ ಭ್ರಮರಗಳಿಂದ ಮುಕುಂದನ ಮುಖಕಮಲಸೌಂದರ್ಯವನ್ನು ಪಾನಮಾಡಿದರು. ಅದರಿಂದ ಬಹಳ ಸುಖ ಉಳ್ಳವರಾದರು. ಮುಕ್ತಿಯಲ್ಲಿ ಮುಕ್ತಬ್ರಹ್ಮಾದಿ ಜನರುಗಳು ಹ್ಯಾಂಗೆ ಆನಂದ-ಭರಿತರಾಗಿರಥಾರೆ ಹಾಂಗೆ, ಸಮಸ್ತರೂ ಸಂತೋಷ ಉಳ್ಳವರಾದರು.

ಈ ವಾರ್ತೆ ಜನಕರಾಯ ಕೇಳಿ ಸ್ವಾಮಿಯ ದರ್ಶನ ಕೊಂಡು ಪ್ರತ್ಯುತ್ಥಾನ ಮಾಡಿದನು. ಸಹಸ್ರಾಕ್ಷನ ತಮ್ಮನಾದ ವಾಮನದೇವರಿಗೆ ಬಲಿಚಕ್ರೇಶ್ವರ ಹ್ಯಾಂಗೆ ಇದಿರುಗೊಂಡು ಪೂಜಿ ಮಾಡಿದ ಹಾಂಗೆ, ಜನಕರಾಯನು ರಾಮಚಂದ್ರದೇವರ ಪೂಜಿ ಮಾಡಿದನು. ವಿಶ್ವಾಮಿತ್ರನ ಪೂಜಿ ಮಾಡಿದನು. ಲಕ್ಷ್ಮಣಗೂ ಪೂಜಿ ಮಾಡಿ ಷೋಡಶೋಪಚಾರ ಪೂಜಿ ಮುಗಿದಮ್ಯಾಲೆ, ಸೀರಧ್ವಜ ತನ್ನ

ಮಗಳಾದಂಥ ಸೀತಾದೇವಿಯ ಸೌಂದರ್ಯಾದಿಗಳಿಗೆ ಯೋಗ್ಯನಾದಂಥ ರಾಮನೇವೆ ಅಳಿಯನಾಗಬೇಕೆಂದು ನಿಶ್ಚಯಮಾಡಿ ಸ್ವಾಮೀ ಮುಖಕಮಲ ನೋಡಲಿಕ್ಕೆ ವಿಶ್ವಾಮಿತ್ರ, ರಾಯನ ಅಭಿಪ್ರಾಯ ತಿಳಿದು 'ಶೀಘ್ರ ಅಳಿಯನ್ನ ಮಾಡಿಕೋ' ಎನಲಿಕ್ಕೆ 'ಎಲೈ ವಿಶ್ವಾಮಿತ್ರ ಬಹಳ ಚಲೋ ಮಾತನಾಡಿದಿ. ನನ್ನ ಮಗಳು ಜಾನಕಿ ಎಂಬಾಕಿ, ನಾನು ಯಜ್ಞ ಮಾಡಲಿಕ್ಕೆ ಭೂಮಿ ಶೋಧಿಸಲು, ನೇಗಿಲತುದಿಗೆ ಹತ್ತಿಬಂದಳು. ಇಂಥಾ ಸೌಂದರ್ಯಕನ್ನಿಕಿ ಕಂಡು ಅಯೋಗ್ಯರು ಅಗ್ಗಳಿಕೆ ಮಾಡಿಕೊಂಡು ಹೋದಾರೆಂದು ಪಾರ್ವತೀಪತಿ ಮಹಾರುದ್ರನ ಕುರಿತು ತಪಸ್ಸು ಮಾಡಿ, ಪಿನಾಕಧನುಸ್ಸು ಸಂಪಾದಿಸಿದ್ದೇನು. ಧನುಸ್ಸು ಹೆದೆ ಏರಿಸಿ ಕನ್ನಿಕಿ ಪಾಣಿಗ್ರಹಣ ಮಾಡಬೇಕು ಎಂಬುದಾಗಿ ನಾ ಪ್ರತಿಜ್ಞ ಮಾಡಿದ್ದೇನೆ. ನನ್ನ ಸೋಲಿಸಿ, ಜಾನಕೀ ಕೊಂಡುಹೋಗಧಾಂಗೆ ಬ್ರಹ್ಮದೇವರ ವರವನ್ನು ಸಂಪಾದಿಸಿದ್ದೇನೆ. ರಾಮಚಂದ್ರಗೆ ನನ್ನ ಮಗಳು ಕೊಡುವುದಕ್ಕೆ ಎರಡನೇ ವಿಚಾರ ಮಾಡೋದಿಲ್ಲ. ಪಾರ್ವತೀಪತಿ ಮಹಾರುದ್ರ ಕೊಟ್ಟಂಥ ಪಿನಾಕಧನುಸ್ಸು ಹೆದೆ ಏರಿಸಲಿಕ್ಕೆ ಇಂದ್ರಾದಿ ದೇವತಿಗಳಿಗೆ ಬಾರದು. ದೇವದೈತ್ಯರು ಒಬ್ಬೊಬ್ಬರಾಗಿ ಬಂದು ಈ ಪಿನಾಕಧನುಸ್ಸು ಹೆದೆ ಏರಿಸಲಾರದೆ ಮಾನಭಂಗದಿಂದ ಭ್ರಷ್ಟಸಂಕಲ್ಪರಾದರು. ಬಹುಮಂದಿ ರಾಯರು ಪರೀಕ್ಷೆಮಾಡಿ ಹೋದರು. ಧನುಸ್ಸು ಹೆದೆ ಏರಿಸಲಿಕ್ಕೆ ಶಕ್ತರಾಗಲಿಲ್ಲ. ದಿಗ್ದೇಶದ ರಾಯರು ಪಿನಾಕಧನುಸ್ಸು ಹೆದೆ ಏರಿಸಲಾರದೆ ಅಪ್ರತಿಷ್ಠಿತರಾಗಿ, ಅಶಕ್ತಿಯುಳ್ಳವರಾಗಿ ಮೋಕ್ಷಕ್ಕೆ ಹೋದರು. ಧನುಸ್ಸು ಮನುಷ್ಯರಿಂದ ತರಲಿಕ್ಕೆ ವಶವಲ್ಲ ಎಂದು ಗಾಲಿಬಂಡಿ ಮ್ಯಾಲೆ ಹಾಕಿ ರುದ್ರನ ಭೃತ್ಯರು, ಮಹಾಶ್ರಮದಿಂದ ಸಭೆಗೆ ತಂದಿದ್ದಾರೆ. ಬಲಪರೀಕ್ಷೆ ಮಾಡಿ ಹೆದೆ ಏರಿಸಿದವರಿಗೆ ನನ್ನ ಮಗಳ ಕೊಡಬೇಕು ಎಂದು ಮೊದಲು ನನ್ನ ಪ್ರತಿಜ್ಞ ಅದೆ. ನನ್ನ ಬಯಕಿ ಪೂರ್ಣಮಾಡಿ ಈ ಹೊತ್ತು ಜಾನಕೀ ಪಾಣಿಗ್ರಹಣ ಮಾಡಿಕೊಳ್ಳಿ.' ಹೀಂಗಂದ ಸೀರಧ್ವಜನ ಮಾತು ಕೇಳಿ ವಿಶ್ವಾಮಿತ್ರ ಮಾತನಾಡಿದ. 'ಅವಶ್ಯ ನಿನ್ನ ಧನುಸ್ಸು ತರಿಸು' ಎನಲಿಕ್ಕೆ ಸರ್ಪದೇಹಸದೃಶವುಳ್ಳ ಆ ಪಿನಾಕಧನುಸ್ಸನ್ನು ಸಭೆಗೆ ತಂದರು. ರಾಮಚಂದ್ರ ಲೀಲಾಮಾತ್ರದಲ್ಲಿ ಧನುಸ್ಸು ಎಡಗೈಲಿ ಹಿಡದು ಮುಗುಳುನಗೆ ನಗುತ್ತ ಹೆದೆ ಏರಿಸಲಿಕ್ಕೆ ಸ್ವಾಮೀಭಾರ ತಾಳಲಾರದೆ ನಡುಮಧ್ಯಕ್ಕೆ ಮುರಿಯಿತು. ಸ್ವಾಮಿ ಅನಂತಬಲ ಉಳ್ಳಾತ. ಐರಾವತ ಕಬ್ಬಿನ ಖಂಡಿಕೆ ಹ್ಯಾಂಗೆ ಮುರೀತದೆ ಹಾಂಗೆ ಲೀಲಾಮಾತ್ರದಲ್ಲಿ ಧನುಸ್ಸು ಮುರಿದುಬಿಷ್ಟನು. ಧನುಸ್ಸು ಹೆದೆ ಏರಿಸೋಣ ರಾಮನಿಂದ ಆದಿತೋ ಆಗದೋ ಎಂದು ವಿಶ್ವಾಮಿತ್ರಗೆ ಭಯವಿತ್ತು. ಅದೆಲ್ಲ ಪರಿಹಾರವಾಯಿತು. ಸ್ವಾಮಿ ಕಮಲದೋಪಾದೇಲಿ ಕಣ್ಣು ಚೆಲ್ವಿಕಿ ಉಳ್ಳಾತ, ಸಭೆಯೊಳಗೆ ನಿಂತಿದ್ದಾನೆ. ವಿಶಾಲ ಎದೆ ಉಳ್ಳಾತ ಇಂದ್ರನೀಲದೋಪಾದೇಲಿ ಹೊಳೀಥಾನೆ. ಮೊಲದ ರಕ್ತ ಹ್ಯಾಂಗೆ ಕೆಂಪು ಅಂಥಾ ಕುಂಕುಮ-

ಕೇಶರಗಂಧ ಹಚ್ಚಿದ್ದಾನೆ. ಪೀತಾಂಬರ ಉಟ್ಟಾನೆ. ಜನಕರಾಯ ಮಧುಪರ್ಕಪೂಜಿ ಮೊದಲಾಗಿ ಮಾಡಿದ್ದಾನೆ. ಸೀತಾದೇವಿ ಕೈಲಿ ಮಾಲಿ ಹಿಡಕೊಂಡು, ಮನೋಹರವಾದಂಥ ಹೆಜ್ಜೆಗಳ ಭೂಮಿಮ್ಯಾಲೆ ಇಡತ ಸ್ವಾಮೀ ಸಮೀಪಕ್ಕೆ ಬಂದು, ಸ್ವಾಮೀ ಕೊರಳಿಗೆ ಮಾಲಿ ಹಾಕಿದಳು. ಸೀತಾರಾಮರ ಕಂಡು ವಿದೇಹದೇಶದಲ್ಲಿದ್ದವರೆಲ್ಲ ಬಹು ಸುಖವುಳ್ಳವರಾದರು.

ದಶರಥರಾಯ ಮಕ್ಕಳ ಕಾಣದೆ ಕ್ಲೇಶಪಡುತ್ತಿದ್ದನು. ಸಂತೋಷವಾರ್ತೆ ಹೇಳಬೇಕು, ವಿವಾಹ ಮಾಡಲಿಕ್ಕೆ ನಿಬ್ಬಣ ಒರಬೇಕೆಂದು ಪತ್ರಗಳ ಕೊಂಡು ದೂತರು ಹೋದರು. ಈ ವರ್ತಮಾನ ಕೇಳಲಿಕ್ಕೆ ದಶರಥರಾಯ, ಭರತಶತ್ರುಘ್ನರನ್ನ ಕರಕೊಂಡು ಹಾಂಗೂ ಮೂರುಮಂದಿ ಹೆಂಡಿರ ಸಹವಾಗಿ, ಚತುರಂಗಸೇನೆ ಮಹರ್ಬಲದಿಂದ ಯುಕ್ತನಾಗಿ ಮಿಥಿಲಾಪಟ್ಟಣಕ್ಕೆ ಬಂದನು. ಈ ವಾರ್ತ ಜನಕರಾಯ ಕೇಳಿ ಬೀಗನ ಎದುರುಗೊಂಡು, ಬಿಡದೀಮನೆಯೊಳಗೆ ರುಕ್ಕೋತು ಮೊದಲಾದ್ದು ಸಾಮಗ್ರಿ ತುಂಬಿದನು. ನಾಂದೀಶ್ರಾದ್ಧ ಮೊದಲಾದ್ದು ಆದವ್ಯಾಲೆ, ವರನ ವಂಶಾವಳಿ ಗೋತ್ರೋಚ್ಚಾರಣೆ ಮಾಡಿದರು. ಇವಷ್ಟೂ ಕಾರ್ಯ ವಿಶ್ವಾಮಿತ್ರನಿಂದ ಆಗೇದೆ. ವಸಿಷ್ಠ ಪುರೋಹಿತ, ಗಾಧಿಸುತನ ಆಜ್ಞೆ ಕೊಂಡ. 'ನನ್ನ ಅಪ್ಪನೆ ಇದೆ ಯಾಜ್ಞೀಕ ಮಾಡಲಿ' ಎಂದು ಹೇಳಿದನು. ವಿಶ್ವಾಮಿತ್ರ ಒಬ್ಬರ ವೃತ್ತಿ ಕಸಗೊಂಬಾತನಲ್ಲ. 'ಅವಶ್ಯ ನಿನ್ನ ಪೌರೋಹಿತ್ಯ, ಯಾಜ್ಞೀಕ ನೀ ಮಾಡಿಸು' ಎನಲಿಕ್ಕೆ ವಸಿಷ್ಠ ವಿಧಿಪೂರ್ವಕದಿಂದ ವಿವಾಹ ಮಾಡಿಸಿದನು.

ಲಕ್ಷ್ಮೀನಾರಾಯಣರು ಜಗತ್ತಿಗೇ ತಾಯಿತಂದೇರು, ಎಂದಿಗೂ ವಿಯೋಗವಿಲ್ಲ. ತಾಯಿತಂದೇರ ವಿವಾಹ ನೋಡಬೇಕು ಎಂದು ಸಮಸ್ತದೇವತಿಗಳು ಸಿದ್ಧಚಾರಣರು, ಗಂಧರ್ವ ಅಪ್ಸರಸ್ತ್ರೀಯರು ಕಿನ್ನರಕಿಂಪುರುಷರು, ಸಮಸ್ತದೇವತಿಗಳು ವಿಮಾನ ಏರಿಕೊಂಡು, ವಿಮಾನಪಜ್ಜಿಗಳಿಂದ ನಾನಾ ವಾದ್ಯಗಳ ಬಾರಿಸುತ್ತ ಬಂದರು. ದೇವತಿಗಳು ಪರೀಕ್ಷೆ ಮಾಡಲಿಕ್ಕೆ ಬರಬಾರದೆಂದು ಮೊದಲಿಗೆ ಬಂದಿದ್ದಿಲ್ಲ. ದೇವತಿಗಳೆಲ್ಲ ಆಕಾಶಮಾರ್ಗ ಅಲಂಕರಿಸುತ್ತ ಹೂವಿನ ಮಳಿಗರಿಯುತ್ತಿದ್ದರು. ಕ್ಷೀರಸಮುದ್ರಮಥನಕಾಲದಲ್ಲಿ ಈ ಸಮಸ್ತ ದೇವತಿಗಳು ಹ್ಯಾಂಗೆ ನೋಡಲಿಕ್ಕೆ ಬಂದಿದ್ದರು, ಹಾಂಗೆ ಸಮಸ್ತ ಪ್ರಾಣಿಗಳು ಸೀತಾಸ್ವಯಂವರಕ್ಕೆ ಬಂದಿದ್ದರು. ರಾಯರ ಹೆಂಡಿರು ಪಟ್ಟಣಸ್ಥ ಮೊದಲಾದವರು ಸರ್ವಾಭರಣ ಇಟ್ಟುಕೊಂಡು ನೋಡಲಿಕ್ಕೆ ಬಂದರು. ಜನಕರಾಯ ಬಹಳ ಪ್ರೀತಿಯುಳ್ಳವನಾಗಿ ಅಳಿಯಗೆ ಮಗಳಿಗೆ, ಅಪಾರ ರಥಗಳು ಕುಂಜರಗಳು ದಿವ್ಯರತ್ನಗಳು ಕಾಣಿಕೆ ಕೊಟ್ಟನು. ಸ್ವಾಮಿ ಅನಂತಾನಂತ ಬ್ರಹ್ಮಾಂಡಕ್ಕೆ ಒಡಿಯ, 'ಸಮುದ್ರಾಸ್ತೃಪ್ಯಂತು ನದ್ಯಸ್ತೃಪ್ಯಂತು' ಎಂದು ಹ್ಯಾಂಗೆ ಉದಕ ಕೊಡಥಾರೆ ಹಾಂಗೆ ಹದಿನಾಲ್ಕು ಲೋಕಗಳಿಗೆ ಸ್ವಾಮಿ ದೇವೋತ್ತಮ, ಅಂಥಾತಗೆ ಮಗಳ ಕೊಟ್ಟು ಕೃತಾರ್ಥನಾದನು.

ಜನಕರಾಯ ಹೊಟ್ಟೇವುಗಳು ಊರ್ಮಿಳಾ ಎಂಬಾಕೇನ ಲಕ್ಷ್ಮಣಗೆ ಮದುವಿ ಮಾಡಿಕೊಟ್ಟನು. ಕುಶಧ್ವಜನೆಂಬಾತ ಸೀರಧ್ವಜನ ತಮ್ಮ, "ಇಕ್ಷುಮತಿ ಎಂಬ ಪಟ್ಟಣದಲ್ಲಿ ಅರಸತ್ವ ಆಳತಿದ್ದ. ಆತಗೆ ಇಬ್ಬರು ಹೆಣ್ಣುಮಕ್ಕಳು ಇದ್ದರು. ಸೂರ್ಯವಂಶದ ರಾಯರು ಸಾಕ್ಷಾತ್ ನಾರಾಯಣನ ಆವೇಶ ಅವತಾರಗಳೆಂದು ನೆಂಟಸ್ತನಕ್ಕೆ ಯೋಗ್ಯರೆಂದು ಭರತಗೆ ಮಾಂಡವೀ ಎಂಬ ಮಗಳನ್ನು ಮದುವೀ ಮಾಡಿಕೊಟ್ಟನು. ಶ್ರುತಿಕೀರ್ತೀ ಎಂಬಾಕೇನ ಶತ್ರುಘ್ನಗೆ ಮದುವೀ ಮಾಡಿಕೊಟ್ಟನು. ಮದುವಿ ಆದಮ್ಯಾಲೆ ಬೀಗೋಪಚಾರ ಕೊಂಡು ದಶರಥರಾಯ, ಚತುರಂಗಸೇನಿಯಿಂದ ಯುಕ್ತನಾಗಿ, ಸೊಸೇರು ಹೆಂಡಿರು ಮಕ್ಕಳಿ ಕೂಡಿಕೊಂಡು ಅಯೋಧ್ಯಾಪಟ್ಟಣಕ್ಕೆ ತೆರಳಿದನು. ದೇವತಿಗಳು ತಮ್ಮ ಲೋಕಕ್ಕೆ ಹೋದರು.

ದಶರಥರಾಯ ತನ್ನ ರಾಜಧಾನಿಗೆ ಹೋಗುವಾಗ ಅಯೋಧ್ಯಾದೇಶದಲ್ಲಿ ಭಾರ್ಗವಪರಶುರಾಮ ಅಡ್ಡಗಟ್ಟಿದನು. ಅನಂತಸೂರ್ಯರು ಒಂದೇ ಕಡೀಲಿ ಒದಗಿದರೆ ಎಷ್ಟು ಪ್ರಕಾಶ, ಅಂಥ ಕಾಂತಿ ಅಧಿಕಾಪರದಿಂದ ಪ್ರಕಾಶಿಸಿದನು. ಧನು· ರ್ಬಾಣ ಹಿಡಕೊಂಡು ಕೈಯಲ್ಲಿ ಚಪ್ಪಕೊಡಲಿ ಹಿಡಿದಿದ್ದಾನೆ. ರಾಘವ ಆದಿ-ಪುರುಷನೆಂದು ಲೋಕಕ್ಕೆ ತೋರಿಸಬೇಕಾಗಿ, 'ನನ್ನ ಶಾರ್ಙ್ಗಧನುಸ್ಸು ಹೆದೆ ಏರಿಸು. ಜನಕರಾಯನಲ್ಲಿ ಪಿನಾಕಧನುಸ್ಸು ಮುರದಕಾರಣ ಲೋಕದಲ್ಲಿ ನಿನ್ನ ಕೀರ್ತಿ ಪಸರಿಸಿ ಅದೆ. ನನ್ನ ಧನುಸ್ಸು ಪಿನಾಕಧನುಸ್ಸಿನೋಪಾದಿಯಲ್ಲ.' ಈ ಪ್ರಕಾರ ಸ್ಪರ್ಧೆಯಿಂದ ಕರೆಯಥಾನೆ ಎಂಬ ಹಾಂಗೆ ಅಜ್ಞಾನಿಗಳಿಗೆ ತಿಳಹಸ್ತಾನೆ. ಈ ಮಾತು ದಶರಥರಾಯ ಕೇಳಿ ಬಹಳ ನಡಗಿದ. 'ಎಲೈ ಪರಶುರಾಮನೇ, ಬಹು-ಕಾಲಕ್ಕೆ ಮಗನ ಹಡದು ಇದ್ದೀನೆ. ನಿನ್ನ ಪ್ರತಿಜ್ಞಾ, ಕ್ಷತ್ರಿಯರ ಬೀಜ ಹುರೀಬೇಕೆಂದು ಅದೆ. ಕರ್ತೃಮಕರ್ತೃಂ ಸಮರ್ಥನಾದ ನೀನು ಮನಸ್ಸಿನಲ್ಲಿ ಹಿಡಿದದ್ದು ಮಾಡಿಯೇ ಸರಿ. ನಾನು ಬಹಳ ಮುದುಕನಾಗಿದ್ದೀನೆ. ಇನ್ನು ಮಕ್ಕಳ ಹಡಿಯೋ ಸಾಮರ್ಥ್ಯ ನನಗಿಲ್ಲ. ನೀ ದಯಾಸಮುದ್ರ ಇದ್ದಿ. ನನ್ನ ಮಗನ್ನ ಬಿಟ್ಟುಕೊಡು' ಎನಲಿಕ್ಕೆ 'ನಿನಗೆ ನಾಲ್ವರು ಮಕ್ಕಳು ಇದ್ದಾರೆ. ಅವರೊಳಗೆ ರಾಮನೆಂಬೋ ಒಬ್ಬ ಮಗನ್ನ ನನ್ನ ಪಾಲಿಗೆ ಕೊಟ್ಟುಬಿಡು. ನಾ ಕೊಲ್ಲೋದಿಲ್ಲ. ಇವನ ಪರೀಕ್ಷೆ ಮಾಡಥೇನೆ. ನನಗೆ ರಾಮಗೆ ಅಜ್ಞಾನಿಗಳು ಭೇದ ತಿಳೀಥಾರೆ.' ಅಜ್ಞಾನಿಜನಕ್ಕೆ ಅಭೇದ ತಿಳಿಸ ಬೇಕಾಗಿ "ಎಲೈ ರಾಮ, ಪೂರ್ವದಲ್ಲಿ ಬಿಲ್ಲು ಎರಡು ಇದ್ದವು. ನೀ ಮುರಿದಂಥ ಪಿನಾಕಧನುಸ್ಸು ಮಹಾರುದ್ರ ತೆಗೆದುಕೊಂಡನು. ಶಾರ್ಙ್ಗಧನುಸ್ಸು ರಮಾಪತಿ ನಾರಾಯಣ ತೆಗೆದುಕೊಂಡನು. ಲೋಕದಲ್ಲಿ ಕೆಲವರು ರುದ್ರ ಸರ್ವೋತ್ತಮ-ನಂತಿಹೋರು, ಕೆಲವರು ನಾರಾಯಣ ಸರ್ವೋತ್ತಮನಂತಿಹೋರು. ಈ ಸಂಶಯ ಪರಿಹರಿಸಬೇಕಾಗಿ ಇಂದ್ರಾದಿ ದೇವತಿಗಳು 'ಸರ್ವೋತ್ತಮ ಆತನೋ ನೀನೋ, ನಿಶ್ಚಯ ತಿಳೋದಿಲ್ಲ' ಅಂತ, 'ಸರ್ವೋತ್ತಮ ನೀ, ಉಭಯತ್ರರೂ ಬಿಲ್ಲುಗಾರರು,

ಯುದ್ಧ ಮಾಡಬೇಕು. ದಾರು ಗೆದ್ದಾರು ಆತ ಸರ್ವೋತ್ತಮನೆಂದು ತಿಳಿದೇವು. ಲೋಕಕ್ಕೆ ದೃಷ್ಟಾಂತ ತೋರಿಸಬೇಕು' ಎನಲಿಕ್ಕೆ, ನಾರಾಯಣ ಶಾರ್ಙ್ಗಧನುಸ್ಸನ್ನು ಹೆದೆ ಏರಿಸಲಿಕ್ಕೆ ಶಂಕರ, ಪಿನಾಕಧನುಸ್ಸನ್ನು ಧರಿಸಿ ನಿಂತನು. ಉಭಯತ್ರರೂ ಯುದ್ಧಕ್ಕೆ ನಿಂತಮ್ಯಾಲೆ ಮಹಾರುದ್ರ, ಸ್ವಾಮೀ ಇದರಿಗೆ ನಿಂದಿರಲಾರದೆ ಪಾಷಾಣದೋಪಾದೇಲಿ ನಿಂತನು. ಏನು ಚೇಷ್ಟ ಇಲ್ಲದಲೆ ತನ್ನ ಕಣ್ಣಗಳಿಂದ ಸ್ವಾಮೀ ತೇಜಸ್ಸನ್ನು ನೋಡಲಾರದೆ ಅಲ್ಪಶಕ್ತಿ ಉಳ್ಳವನಾಗಿ ಜಡದೋಪಾದಿ ಏನೂ ಚೇಷ್ಟ ಇಲ್ಲದೆ ನಿಂತನು. ಸಮಸ್ತ ದೇವತಿಗಳು ಸಕಲ ಜಗತ್ತೂ ನಾರಾಯಣನ ಬಲ ಕಂಡು ಹೊಗಳಹೊಕ್ಕರು. ಸ್ವಾಮೀ ಪ್ರೇರಣೆ ಇಲ್ಲದೆ ಬ್ರಹ್ಮರುದ್ರಾದಿ ದೇವತಿಗಳು ಉಸುರು ಬಿಡಲಿಕ್ಕೆ ಶಕ್ತರಲ್ಲ. ಸ್ವಾಮಿ ಮಹಾರುದ್ರಗೆ ಎಚ್ಚರಿಕೆ ಕೊಟ್ಟನು. ರುದ್ರ, ತನ್ನ ಅಪರಾಧ ಕ್ಷಮಿಸೆಂದು ಸ್ವಾಮಿಗೆ ಶರಣುಹೊಕ್ಕು ಸ್ವಾಮೀನ್ನ ಪ್ರಸನ್ನೀಕರಿಸಿ ಕೊಂಡು - ತನ್ನ ಕೈಲಾಸಕ್ಕೆ ಹೋದನು. ಆ ಪಿನಾಕಧನುಸ್ಸನ್ನು, ವರಬಲದಿಂದ ಜನಕರಾಯ ಸಂಪಾದಿಸಿದ್ದ. ಅಂಥಾ ಪಿನಾಕಧನುಸ್ಸನ್ನು ಮುರದಿ ಎಂದು ನಿನಗೆ, ಲೋಕತ್ರಯದಲ್ಲಿ ಖ್ಯಾತಿ ತೋರತದೆ. ರಾಜ್ಯದ ಭೂಪತಿಗಳು ನಿನ್ನ ಕೀರ್ತಿ ಕೊಂಡಾಡಥಾರೆ. ನೀನು ಸಮರ್ಥನಾದರೆ ಈ ಶಾರ್ಙ್ಗಧನುಸ್ಸನ್ನು ಹೆದೆ ಏರಿಸು." ಹೀಂಗೆ ಮಾತನಾಡಿ ಪರಶುರಾಮ, ರಾಘವನ ಕೈಲಿ ಧನುಸ್ಸನ್ನು ಕೊಟ್ಟನು. ರಾಘವ ತಾ ಎದ್ದು ಧನುಸ್ಸನ್ನು ಕೈಲಿ ಇಸಕೊಂಡು ಲೀಲಾಮಾತ್ರದಲ್ಲಿ ಹೆದೆ ಏರಿಸಿ, ಬಾಣ ಕೂಡಿಸಿ ಬಿಗಿದನು.

ಸಮಸ್ತರ ಸಂಶಯ ಪರಿಹರಿಸಿಕೊಡುವಾತ ನಾರಾಯಣನೆಂದು ತಿಳುಹಿಸ ಬೇಕಾಗಿ, ಪರಶುರಾಮದೇವರು ರಾಮನ ಕೂಡ ಮಾತನಾಡಿದನು. 'ಇನ್ನು ಸಾಕು. ಹೆದೆ ಏರಿಸಿ ಬಾಣ ಕೂಡಿಸು. ನೀ ಸರ್ವೋತ್ತಮನಹುದು. ನನ್ನ ಉದರ ದೊಳಗೆ ತಪೋಮಯನೆಂಬ ಅಸುರ* ಬ್ರಹ್ಮದೇವರ ವರಬಲದಿಂದ ಮರಣರಹಿತ-ನಾಗಿ ಇದ್ದಾನೆ. ಆತಗೆ ಬಾಣವನ್ನು ಬಿಡು' ಎನಲಿಕ್ಕೆ ದೈತ್ಯಗೆ ಬಾಣ ಬಿಟ್ಟನು. ಅಸುರ ಪರಶುರಾಮನಲ್ಲಿ ಇರಲಿಕ್ಕೆ ಕಾರಣವೇನೆಂದರೆ ಅತುಳನಾಮಕ ದೈತ್ಯ ದೊಡ್ಡ ಅಸುರ, ಬ್ರಹ್ಮದೇವರ ಕುರಿತು ತಪಸ್ಸು ಮಾಡಿ, ಲೋಕಕ್ಕೆ ವ್ಯಾಪ್ತತ್ವ ಐದೇನು ಎನಲಿಕ್ಕೆ ಜಗದ್ಗುರು ಆದಂಥ ಬ್ರಹ್ಮರಾಯ ಸಂಖ್ಯಾಮಾಡಿ (ಯೋಚನೆಮಾಡಿ) ವರವು ಇಟ್ಟುಕೊಟ್ಟ, ನಾರಾಯಣ ಸೋತನೆಂದು ತಿಳಿದಂದು ನಿನಗೆ ಮರಣ-ವಾದೀತು ಎಂದಲ್ಲಿ, ನಾರಾಯಣಗೆ ಸೋಲೋಣ ಉಂಟೆಂದು ರಾಕ್ಷಸ ತಿಳಿದಿದ್ದ. ಜಗಕ್ಕೆ ಕಂಟಕ ಅಸುರವಧ ಆಗಬೇಕಾಗಿ, 'ಎಲೋ ರಾಕ್ಷಸ, ನಾನು ರಾಘವನಿಂದ ಸೋತೆ. ಸದ್ಯ ಬಾಣ ಬರತದೆ. ಶೀಘ್ರ ಹೊರಗೆ ಹೊರಡು' ಎಂದನು. ಪರಶು-

* ಇವನು ಹಿಂದೆ 'ಅತುಲ'ನೆಂಬ ರಾಕ್ಷಸ. ತಪಃಪ್ರಧಾನನಾದುದರಿಂದ 'ತಪೋ-ಮಯ'ನೆಂದೂ, ಲೋಕವ್ಯಾಪ್ತನಾದುದರಿಂದ 'ಲೋಕಮಯ'ನೆಂದೂ ನಾಮಗಳಿವೆ.

ರಾಮ ಸೋತನೆಂದು ತಿಳಿದು, ಆ ದೈತ್ಯ ಹೊರಗೆ ಹೊರಡಲಿಕ್ಕೆ ರಾಮನ ಬಾಣದಿಂದ ಸತ್ತನು ಆ ದೈತ್ಯ ತನಗೆ ಮೋಕ್ಷವಾಗಬೇಕೆಂದು ಮಹಾರುದ್ರನ ಕುರಿತು ತಪಸ್ಸು ಮಾಡಿದ. ನಾರಾಯಣನ ಉದರದೊಳಗಿರೋಣವೇ ಮೋಕ್ಷವೆಂದು ತಿಳದು, ನಾರಾಯಣನೇ ಪರಶುರಾಮನೆಂದು ಆತನ ಒಳಗೆ ಇರತಿದ್ದ. ಪರಶುರಾಮ ಸೋತನೆಂತ ತಿಳದು ಹೊರಗೆ ಹೊರಡಲಿಕ್ಕೆ ರಘುನಾಥನ ಬಾಣದಿಂದ ಸುಟ್ಟು ಭಸ್ಮೀಭೂತನಾದ. ಶ್ರೀರಾಮ ಪರಶುರಾಮರು ಏಕೀಭೂತರಾದರು. ವಸ್ತುಗತ್ಯ ಎರಡು ರೂಪದಲ್ಲಿ ಜಗತ್ತಿಗೆ ಲೀಲಾವಿನೋದ ತೋರಿಸಿದ್ದಾರೆ. ಈ ಲೀಲೆಗಳಿಂದ ಜನರಿಗೆ ನಿರ್ದೋಷಜ್ಞಾನ ಬಾಹೋದು. ಸಮೀಚೀನವಾದಂಥ ಜ್ಞಾನವು ನೆಲೆಗೊಂಡು ನಿಂದಿರತದೆ. ದೈತ್ಯಸಮೂಹಗಳೆಲ್ಲ ದೇವರಿಗೆ ಜಯ, ಅಪಜಯ ತಿಳದದ್ದರಿಂದ ತಮಸ್ಸಿನಲ್ಲಿ ಪ್ರವೇಶವಾಗಥಾರೆ.

ರಾಮ, ಪರಶುರಾಮರು ಏಕಾಕಾರರಾಗಿ ತಮ್ಮ ಅವತಾರ ಚೇಷ್ಟಾರೂಪಗಳ ಭಕ್ತತತಿಗಳಿಗೆ ತೋರಸಿದ್ದಾರೆ. ಪರಶುರಾಮ ಶ್ರೀರಾಮನ ಅಂತರ್ಭಾವದಿಂದ ಬಹಿರಾಗತನಾಗಿ, ತನ್ನಲ್ಲಿದ್ದ ಶಾರ್ಙ್ಗಧನುಸ್ಸನ್ನು ಸೀತಾಪತಿಗೆ ಕೊಟ್ಟು ಮಹೇಂದ್ರಾಚಲಕ್ಕೆ ತೆರಳಿದನು. ರಾಮ ಬಂದುಹೋದನೆಂಬ ವ್ಯವಹಾರವೇ ಸರಿ, ಅವತಾರವಾದರೂ ಸರ್ವತ್ರವ್ಯಾಪ್ತ. ಹೀಂಗಾಗಲಿಕ್ಕೆ ದಶರಥರಾಯನ ಸಂಶಯ ಪರಿಹಾರವಾಯಿತು. ತನ್ನ ಕುಮಾರ ಸಾಕ್ಷಾತ್ ನಾರಾಯಣನೆಂದು ಗ್ರಹಿಸಿದನು. 'ನಾನು ಇಷ್ಟು ದಿವಸ ರಾಮದೇವರು ನನ್ನ ಮಗನೆಂತ ತಿಳಿದಿದ್ದೆ. ಮೋಹಿತನಾಗಿದ್ದೆ' ಎಂದು ಆಶ್ಚರ್ಯ ಉಳ್ಳವನಾಗಿ ಅಯೋಧ್ಯಾಪಟ್ಟಣದ ರಾಜಧಾನಿಗೆ ಹೋದನು. ಶ್ರೀರಾಮದೇವರು ಜಾನಕೀದೇವಿಯಿಂದ ಯುಕ್ತನಾಗಿ ಲಕ್ಷ್ಮೀದೇವಿಯ ಕೂಡ ಅಜಿತನಾಮಕ ನಾರಾಯಣನು ದಾವ ಪ್ರಕಾರ ಕ್ಷೀರಸಾಗರದಲ್ಲಿ ಕ್ರೀಡಿಸತ ಇದ್ದಾನೆ ಹಾಂಗೆ, ಲವಣಸಮುದ್ರದಲ್ಲಿ ಜಂಬೂದ್ವೀಪದಲ್ಲಿ ಭರತಖಂಡದಲ್ಲಿ ಕ್ರೀಡೆಯನ್ನು ಮಾಡುತ್ತಾ ಇದ್ದಾನೆ.

ಶ್ರೀರಾಮದೇವರು ಬಾಲಕಾಂಡದಲ್ಲಿ ತಾಟಕೀವಧ ಮಾಡಿದ. ಮಾರೀಚ ಗೋಕರ್ಣದಲ್ಲಿ ಓಡಿಹೋಗಿ ಬಿದ್ದ. ಸುಬಾಹುವಿನ ಹತ್ಯ, ಅಹಲ್ಯಾ ಉದ್ಧಾರ ಸೀತಾ ಸ್ವಯಂವರ ಮಾಡಿಕೊಂಡಿದ್ದು ಸ್ವಾಮಿ ಸರ್ವೇಶ್ವರಗೆ ಆಶ್ಚರ್ಯವಲ್ಲ, ಮಿಕ್ಕಾದವರಿಗೆ ಆಶ್ಚರ್ಯ- ಸ್ವಾಮಿ ದುರಂತಶಕ್ತಿಯುಳ್ಳಾತ. ನಿತ್ಯಕರ್ತವ್ಯಗಳನ್ನು ಪ್ರಾಣಿಗಳು ಹ್ಯಾಂಗೆ ಮಾಡತಾ ಇದ್ದಾರೆ ಹಾಂಗೆ, ಕಡೀಮೊದಲಿಲ್ಲದೆ ಸ್ವಾಮೀ ಗುಣ ನಾಮ ಕರ್ಮ ಚರಿತ್ರ ಲೀಲಗಳು. ಆಸ್ತಿಕತನದಿಂದ ಹೇಳಿಕೇಳಬೇಕು. ಸ್ವಾಮೀ ವರ್ಣನೆಯು ಸರ್ವಕರ್ತವ್ಯ ಎಂಬಲ್ಲಿಗೆ ಶ್ರೀಮದಾಚಾರ್ಯರು ಹೇಳಿದ ಶ್ರೀಮನ್-ಮಹಾಭಾರತತಾತ್ಪರ್ಯನಿರ್ಣಯವನ್ನು ಪ್ರಾಕೃತದಿಂದ ವಿವರಿಸುವ ' ಶ್ರೀರಾಮ-ಚರಿತೇ ಅಯೋಧ್ಯಾ ಪ್ರವೇಶಃ (ಬಾಲಕಾಂಡ ಕಥಾನಿರೂಪಣಂ) ' ಎಂಬ ನಾಲ್ಕನೇ ಅಧ್ಯಾಯ ಸಂಪೂರ್ಣವು. ॥ ಶ್ರೀ ಮಧ್ವೇಶಾರ್ಪಣಮಸ್ತು ॥

ಅಧ್ಯಾಯ ೫

ಶ್ರೀರಾಮಚರಿತೇ ಹನೂಮದ್ದರ್ಶನಂ

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯದ ಈ ಐದನೇ ಅಧ್ಯಾಯದಲ್ಲಿ ಶ್ರೀಮದಾಚಾರ್ಯರು, ಅಯೋಧ್ಯಾಕಾಂಡ ಆದಬಳಿಕ ಅರಣ್ಯಕಾಂಡ ತಾತ್ಪರ್ಯ-ಪೂರ್ವಕವಾಗಿ ನಿರೂಪಿಸಿದ್ದಾರೆ. ಶ್ರೀರಾಮದೇವರು ಸರ್ವಲೋಕಗಳ ಸ್ವಸ್ಥ-ದಲ್ಲಿಟ್ಟನು. ಏನುಕಾರಣವೆಂದರೆ ಜಗತ್ತಿಗೆ ಕಂಟಕರಾದ ರಾಕ್ಷಸರ ಸಂಹಾರ ಮಾಡಿದ್ದರಿಂದ ಪ್ರಜೆಗಳಿಗೆ ಸ್ವಸ್ಥ ಇದ್ದಾಂಗೆ ಆಯಿತು. ಜಗದೀಶ್ವರನಾದಂಥ ಸ್ವಾಮಿಯು ಲಕ್ಷ್ಮೀರೂಪಳಾದಂಥ ಸೀತಾದೇವಿಯಿಂದ ಯುಕ್ತನಾಗಿ ಭೂಮಿಯಲ್ಲಿ ಪ್ರತ್ಯಕ್ಷ ಇರಲಾಗಿ, ಸರ್ವಜನರುಗಳು ನಿರಂತರದಲ್ಲಿ ಅತ್ಯಂತ ಅಭಿವೃದ್ಧವಾದ ಭಕ್ತಿಯಿಂದ ಸ್ತೋತ್ರಮಾಡತ ಸಂತೋಷವುಳ್ಳವರಾದರು. ಅರಸಾದಂಥ ದಶರಥ ರಾಯನು ವೃದ್ಧಾಪ್ಯಕಾಲ ಐದಿದಕಾರಣ, ಸಮಸ್ತವಾದಂಥ ಉಪಚಾರಗಳಿಂದ ರಾಜ್ಯಾಭಿಷೇಕವನ್ನು ರಾಮದೇವರಿಗೆ ಮಾಡಿ, ತಾನು ವಾನಪ್ರಸ್ಥ ವನವಾಸಕ್ಕೆ ಹೋಗಬೇಕೆಂದು ಮನಸ್ಸಿನಲ್ಲಿ ಮಾಡಿದ ರಾಯನ ಅಭಿಪ್ರಾಯದೋಪಾದೇಲಿ ಪ್ರಜರು ಪ್ರಧಾನಿಗಳು ಮಂಡಲಾಧಿಪತಿಗಳು, ರಾಮದೇವರಿಗೆ ರಾಜ್ಯಾಭಿಷೇಕವಾದರೆ ತಮಗೆ ಸಮ್ಮತವೆಂದು ನುಡೀಲಿಕ್ಕೆ, ದಶರಥರಾಯನು ತನ್ನ ಮನಸ್ಸಿನಲ್ಲಿ ಇದ್ದ ಹಾಂಗೆ ಸಮಸ್ತರೂ ಹೇಳುತ್ತಾ ಇದ್ದಾರೆಂದು ರಾಮದೇವರಿಗೆ ಅಭಿಷೇಕ ಮಾಡ-ಬೇಕೆಂದು ಅಯೋಧ್ಯಾಪಟ್ಟಣವನ್ನು ಅಲಂಕರಿಸಿಸಿದ.

ಕೌಸಲ್ಯಾದೇವಿ ರಾಮದೇವರಿಗೆ ಅಭಿಷೇಕವಾಗತದೆಂದು ಕೇಳಿ, ಭೂಸುರರಿಗೆ ದಕ್ಷಿಣೆಯನ್ನು ಬಹಳವಾಗಿ ಕೊಡತಾ ಇದ್ದಾಳೆ. ನಾಲ್ಕೂಕಡೀಲಿ ಕಿಲಿಕಿಲಿ ಶಬ್ದಗಳು ಆಗತವೆ. ಈ ಪ್ರಕಾರ ರಾತ್ರಿಯಲ್ಲಿ ಧ್ವನಿ ವಾದ್ಯಗಳ ಕೇಳಿ ಮಂಥರಾ—ತಾ ದಾರು ಎಂದರೆ, ಕಲಿಸ್ತ್ರೀಯು ಅಲಕ್ಷ್ಮೀ. ದೇವದಾನವರು ಕ್ಷೀರಸಮುದ್ರದಲ್ಲಿ ಮಂದರಾ-ಚಲವನ್ನಿಟ್ಟು ಮಥನ ಮಾಡುವಾಗ ವಿಷದ ಸಂಗಡ ಹೊರಟುಬಂದಳು. ಕಾಳ-ಕೂಟವಿಷಕ್ಕೆ ಅಭಿಮಾನಿಯಾಗಿ ನಿಂತಳು. ಅಲಕ್ಷ್ಮೀ ಕಾಡಿಗಿಯೋಪಾದೇಲಿ ಕಪ್ಪುವರ್ಣ ಉಳ್ಳಾಕಿ. ಸಣ್ಣ ಕಣ್ಣು ವಿಕಾರ ಮೂಗು ಕುರೂಪದಕಿಂತ ಅಧಿಕ ವಾಗಿ ಕಪ್ಪುವರ್ಣ ಉಳ್ಳಾಕಿ. ತಾನು ಕುತ್ಸಿತರೂಪಳೆಂದು ಜಗದ್ಗುರುವಾದಂಥ ಬ್ರಹ್ಮರಾಯನ ಕುರಿತು ತಪಸ್ಸು ಮಾಡಿ, ವರ ಸಂಪಾದಿಸಿ ಅಪೂರ್ವರೂಪಳು ಆದಳು. ಪುನಃ ಮುಕ್ತಿ ಬೇಕೆಂದು ತ ಪಸ್ಸು ಮಾಡಹೊಕ್ಕಲ್ಲಿ, ಅಲಕ್ಷ್ಮೀಗೆ ಪಾಪ ಪೂರ್ಣವಾಗಬೇಕೆಂದು ಬ್ರಹ್ಮರಾಯ ತಿಳಿದು ಆಕೆಯ ಕೂಡ ಮಾತ ನಾಡಿದ್ದಾನೆ. 'ಎಲೌ ಸ್ತ್ರೀಯೆ, ಭೂಮಂಡಲದಲ್ಲಿ ಕೈಕಯರಾಯನಲ್ಲಿ

ದಾಸಿಯಾಗಿ ಜನಿಸು. ಆ ರಾಯ ತನ್ನ ಮಗಳ ದಶರಥರಾಯಗೆ ವಿವಾಹಮಾಡಿ ಕೊಟ್ಟಾನು. ದಶರಥರಾಯ ರಾಮಗೆ ಪಟ್ಟಾಭಿಷೇಕ ಮಾಡ್ಯಾನು. ದಶರಥ ರಾಮಗೆ ಪಟ್ಟಾಭಿಷೇಕ ಮಾಡೋವಾಗ ಅಯೋಧ್ಯಾದಲ್ಲಿ ನೀನು ವಿಘ್ನ ಆಚರಿಸಿದರೆ ನಿನಗೆ ಗತಿಯಾದೀತು.' ಹೀಂಗಂತ ಬ್ರಹ್ಮದೇವರು ಹೇಳಿದನು. ಪಟ್ಟಣವೆಲ್ಲ ನಾಲ್ಕೂಕಡೆಗೆ ಶೃಂಗಾರವಾಗಿ ಧ್ವನಿಗೈತಾ ಅದೆ. ಕೌಸಲ್ಯಾದೇವಿ ಅನೇಕ ದಾನ-ಧರ್ಮಗಳ ಮಾಡಥಾಳೆ. ಇದನ್ನೆಲ್ಲ ಕಂಡು ತಾಳಲಾರದೆ—ಆರ್ಭಟಿಸಿ ಕೈಕೇಯಿಗೆ ಒದರಿದಳು. ಏನು ಕಾರಣ ಒದರಿದಳು ಎಂತ ಬಾಗಿಲ ತೆಗೆದು ಕೇಳಲು, ಈ ವಾರ್ತೆ ಮಂಥರಾ ಹೇಳಿದಳು. ಆ ವ್ಯಾಳ್ಯಾದಲ್ಲಿ ಸಜ್ಜೀವ ಆವೇಶದಿಂದ 'ನಮ್ಮ ಜ್ಯೇಷ್ಠಮಗ ರಾಮನಿದ್ದಾನೆ. ಅವಶ್ಯ ಪಟ್ಟಾಭಿಷೇಕ ನೂಡಬಹುದು' ಎಂದು ಸಂತೋಷ ಹಚ್ಚಿಕೊಂಡು ಪರಿತೋಷವಾರ್ತೆ ದಾಸಿ ತಂದಳು ಎಂದು ಕೈಕೇಯೀ ತನ್ನ ಕರ್ಣಾಭರಣವನ್ನು ತೆಗೆದುಕೊಟ್ಟಳು. ಆ ದಾಸಿ ಆಭರಣ ತೆಗೆದುಕೊಳ್ಳದೆ ಕೈಕೇಯೀ ಮುಖದ ಸಮೀಪಕ್ಕೆ ಈಡ್ಯಾಡಿ ಮಾತಾಡಿದಳು. 'ನೀನು ನಿನ್ನ ಸ್ವಾರ್ಥ ಏನೂ ತಿಳಿದಾಕಿ ಅಲ್ಲ. ನಿನ್ನ ಹಾನಿ ನೀನೇ ಮಾಡಿಕೊಳ್ಳತಿ, ಅದೇನೆಂದರೆ ಭರತಗೆ ರಾಜ್ಯವಿಲ್ಲ. ನಿನಗೆ ದಾಸ್ಯ ಪ್ರಾಪ್ತವಾಯಿತು. ಶೀಘ್ರ ಭರತನ ಕರಸಿ ರಾಜ್ಯಾಭಿಷೇಕ ಮಾಡಿಸು. ನಿನ್ನ ಪತಿಯಾದ ದಶರಥರಾಯನ ಕೈಯ ಮೊದಲಿಗೆ ವರ ಸಂಪಾದಿಸಿದ್ದಿ. ನಿನ್ನ ಪತಿ ಯುದ್ಧ ಮಾಡಲಿಕ್ಕೆ ಹೋಗಿದ್ದ ಕಾಲದಲ್ಲಿ, ರಣಮಂಡಲದಲ್ಲಿ ರಥದ ಗಾಲಿ ಅಚ್ಚು ಮುರೀತು. ನೀನು ನಿನ್ನ ಕೈಹಾಕಿ ರಣ-ರಂಗದಿಂದ ರಥ ಕೊಂಡುಬರಲು ನಿನಗೆ, ಅವನೀಪತಿ ತುಷ್ಟನಾಗಿ ವರವು ಬೇಡಿಕೋ ಎನಲು ಆ ಸಮಯದಲ್ಲಿ ನೀನು ವರವು ಬೇಡಿಕೊಳ್ಳಲಿಲ್ಲ. ಆ ವರವು ನೀ ಇಂದು ಬೇಡಿಕೋ. ಭರತಗೆ ರಾಜ್ಯ ಕೊಡು, ರಾಮನ್ನ ವನವಾಸಕ್ಕೆ ಕಳುಹು. ಈ ಪ್ರಕಾರ ಗಂಡನ ಕೈಯ ವರವು ಇಸಕೊ' ಎಂದಳು. ಕೈಕೇಯೀ ನಿಕೃತೀ ಆವೇಶದಿಂದ, ಪತಿ ತನ್ನ ಭೋಗಕ್ಕೆ ತಾನು ಬಂದಾನು, ಅವಶ್ಯ ವರವು ಬೇಡಿ-ಕೊಂಡೇನು ಎಂದು ಮಂಡಿಗೆ ಶುಂಠಿ ಲೇಪಿಸಿಕೊಂಡು, ಕ್ರೋಧಾಗಾರದ ಒಳಗೆ ಕೋಪದಿಂದ ಶಯನವನ್ನು ಮಾಡಿದಳು.

ಮರುದಿವಸ ಉದಯಕಾಲಕ್ಕೆ ಪುಷ್ಯನಕ್ಷತ್ರ. ರಾಮಗೆ ಪಟ್ಟಾಭಿಷೇಕ ಮಾಡಿ ಎಂದು ಪ್ರಧಾನರಿಗೆ ಹೇಳಿಕೊಟ್ಟು, ದಶರಥರಾಯ ಸ್ತ್ರೀಭೋಗ ಮಾಡಬೇಕೆಂದು ಕೈಕೇಯೀದೇವಿ ಮನಿಗೆ ಬಂದು ಸ್ವಸ್ತ್ರೀಯನ್ನು ನಾಲ್ಕೂಕಡಿಗೆ ವಿಚಾರಿಸಿ ಎಲ್ಲೂ ಕಾಣದೆ, ಕ್ರೋಧಾಯಮಾನದಿಂದ ಆರಮನಿ ಒಳಗೆ ಹೋಗಲಾಗಿ ಸ್ತ್ರೀಯ ಕಂಡು 'ನಿನಗೆ ದಾರೇನೆಂದರು? ನಿನ್ನ ಅಭಿಪ್ರಾಯವೇನು? ನನ್ನ ಮುಂದೆ ಹೇಳು', ಈ ರೀತಿಯಾಗಿ ಬಹಳ ಸಮಾಧಾನ ಮಾಡಿ ಕೇಳಲಾಗಿ ಗಂಡಗೆ ಕೈಕೇಯೀದೇವಿ ಎರಡು ವರವು ನೆನಪು ಮಾಡಿಕೊಟ್ಟಳು. 'ರಾಮನ್ನ ವನವಾಸಕ್ಕೆ ಕಳುಹು.

ಭರತಗೆ ರಾಜ್ಯ ಕೊಡು.' ಈ ಪ್ರಕಾರ ಕೈಕೇಯೀದೇವಿ ಎನ್ನಲಿಕ್ಕೆ ಸ್ತ್ರೀವಚನಾತ್ಮಕ ಬಾಣದಿಂದ ದಶರಥರಾಯ ಪೀಡಿತನಾಗಿ, ಮೂರ್ಛಾಗತನಾಗಿ ಭೂತಳದಲ್ಲಿ ಬಿದ್ದನು.

ಪುಷ್ಯನಕ್ಷತ್ರದ ಮುಹೂರ್ತದ ವ್ಯಾಳ್ಯಾ ಮೀರತದೆಂದು ರಾಜೀವಲೋಚನನಾದಂಥ ರಾಮಚಂದ್ರ, ದಶರಥರಾಯನ ಸಮೀಪಕ್ಕೆ ಬಂದು ತಾನೇ ಕೇಳಿದನು. ಗಂಟಲಶಿರ ಬಿಗಿದದೆ ಬಾಯಲ್ಲಿ ಮಾತನಾಡಲಾರ. ಆ ವ್ಯಾಳ್ಯಾದಲ್ಲಿ ಕೈಕೇಯೀ ಮಾತನಾಡಿದಳು. 'ಎಲೈ ರಾಮ, ರಾಯನ ಅಭಿಪ್ರಾಯ ಹೇಳಥೀನಿ ಕೇಳು. ನೀನು ಲಕ್ಷ್ಮಣನಿಂದ ಯುಕ್ತನಾಗಿ ಸೀತಾದೇವಿ ಸಹವಾಗಿ ವನವಾಸಕ್ಕೆ ಹೋಗಬೇಕಂತಾನೆ.' ಈ ಮಾತು ಕೇಳಿ ಗುರುಹಿರೇರ ವಚನ ಮಹಾಪ್ರಸಾದವೆಂದು ರಾಮಚಂದ್ರ ಅರಣ್ಯಕ್ಕೆ ತೆರಳಿದನು. ಹೀಂಗೆ ಹದಿನಾಲ್ಕು ಲೋಕಕ್ಕೆ ಅರಸನಾದಂಥ ಶ್ರೀ ರಘುನಾಥ ಸರ್ವಜಗಕ್ಕೆ ನಿಯಾಮಕ ಲೋಕಕ್ಕೆ ವಿಡಂಬನಿ ತೋರಿಸಬೇಕಾಗಿ, ತಾ ಸುಖಪೂರ್ಣ ಸ್ವರಮಣನಾದಂಥ ರಾಮಚಂದ್ರ, ವನಕ್ಕೆ ತೆರಳೋದಕ್ಕೆ ಮುಖ್ಯಪ್ರಯೋಜನವೇನೆಂದು ಹೇಳಥಾರೆ. ದೇವತಿಗಳಿಂದ ಮುನೀಶ್ವರರುಗಳಿಂದ ಪ್ರಾರ್ಥಿತನಾಗಿ, ಅವರ ಕಾರ್ಯ ಸಾಧಿಸಿಕೊಡಬೇಕಾಗಿ ತೆರಳಿದನು. ವನಕ್ಕೆ ತೆರಳಿದ ಪ್ರಕಾರ ಹೇಳಥಾರೆ. ಸೀತಾದೇವೇರಿಂದ ಯುಕ್ತನಾಗಿ ಸಮೀಚೀನ ಭಕ್ತಿ ಅಭಿವೃದ್ಧಿಯುಳ್ಳಂಥ ಲಕ್ಷ್ಮಣನಿಂದ ಸಹಿತನಾಗಿ ತೆರಳಲಿಕ್ಕೆ ಸಮಸ್ತ ಜಂಗಮಪ್ರಾಣಿಗಳು ರಾಮನ ವಿಯೋಗ ತಾಳಲಾರದೆ, ಶೋಕದಿಂದ ಇನ್ನು ಪಟ್ಟಣದಲ್ಲಿ ಸಹ ಇರವಲ್ಲೆವು. ರಾಮ ಎಲ್ಲಿದ್ದಾನೆ ಅದೇ ನಮ್ಮ ರಾಜಧಾನಿಯೆಂದು ತಿಳಿದು ಸಮಸ್ತ ಪ್ರಾಣಿಗಳು, ಆನಿ ಮೊದಲಾಗಿ ಇರುವು ಕಡಿಯಾಗಿ ರಾಮನ ಬಳಿವಿಡಿದು ತೆರಳಿದರು. ಪಕ್ಷಿಜಾತಿಗಳು ಕಲಕಲ ಶಬ್ದದಿಂದ ಧ್ವನಿಗೈಸಿದವು. ರಾಮನ ಬೆನ್ನತ್ತಿ ಹೋಗತಿಹೋವು. 'ಎಲೈ ಸೌಮಿತ್ರಿ, ನಮ್ಮ ರಾಮನ ಕೊಂಡುಹೋಗಬ್ಯಾಡ' ಎಂದು ಬರುತ್ತಿದ್ದರು. ಅವರಿಗೆಲ್ಲ ಬಹು ಪ್ರಕಾರ ಸಮಾಧಾನ ಮಾಡಿ ನಿಂದ್ರಿಸಿದನು. ರಾಮನ ರಥ ಗಡಗಡ ಶಬ್ದಗೈತಿಹೋದು. ತರುವಾಯದಲ್ಲಿ ತಂದಿಯಾದ ದಶರಥರಾಯ ಗೆಳೇರು ತಾಯಿ ಮೊದಲಾದ ಮತ್ತೆ ಕೆಲವು ಜನರುಗಳೆ ಬಿಟ್ಟುಕೊಟ್ಟು, ಆ ದಿವಸ ಭಾಗೀರಥೀ ತೀರಕ್ಕೆ ಹೋದನು. ಅಲ್ಲಿ ಗುಹನೆಂಬವ ಮಹಾರುದ್ರನ ಭೃತ್ಯನಿದ್ದನು. ನಮ್ಮ ಸ್ವಾಮಿಗೆ ಸ್ವಾಮಿಯಾದಂಥ ಶ್ರೀರಾಮಚಂದ್ರ ಪರದೇವತಿ ಬಂದನೆಂದು, ಅನೇಕಪ್ರಕಾರ ಅರ್ಘ್ಯ ಪಾದ್ಯಗಳಿಂದ ಪೂಜಿಯನ್ನು ಮಾಡಿ ಭಾಗೀರಥೀಯನ್ನು ದಾಟುವುದಕ್ಕೆ ನಾವಿಯನ್ನು ತಂದುಕೊಟ್ಟನು. ಸ್ವಾಮಿ ಭಕ್ತವತ್ಸಲ, ತನ್ನ ಭಕ್ತನೆಂದು ಮಹಾರುದ್ರನೋಪಾದಿ ಪೂಜೆ ಮಾಡಿಸಿಕೊಂಡು, ಆ ನಾವಿಯನ್ನು ರಘುಕುಲತಿಲಕ ಏರಿಕೊಂಡು ಭಾಗೀರಥೀ ದಾಟಿ ಪ್ರಯಾಗಕ್ಷೇತ್ರವನ್ನು ಐದಿದನು. ಅಲ್ಲಿ ಬೃಹಸ್ಪತೀಕುಮಾರ

ಭರದ್ವಾಜ ಋಷಿ, ಋಷಿಗಣದಿಂದ ಸಹಿತನಾಗಿ ಎದುರುಗೊಂಡು ಅರ್ಘ್ಯಾದಿ ಷೋಡಶೋಪಚಾರ ಪೂಜಿ ಮಾಡಿದನು. ಆ ಕ್ಷೇತ್ರದಿಂದ ಚಿತ್ರಕೂಟ ಪರ್ವತಕ್ಕೆ ಹೋಗಿ ಕೆಲವು ದಿವಸ ಇದ್ದರು.

ಆಮ್ಯಾಲೆ ಅಯೋಧ್ಯಾಪಟ್ಟಣದಲ್ಲಿ ಏನಾಯಿತೆಂದರೆ, ರಾಮಚಂದ್ರ ವನಕ್ಕೆ ಹೋಗಲಿಕ್ಕೆ, ರಘುಪತಿ ಧ್ಯಾನದಿಂದ ರಾಮರಾಯನ ವಿಯೋಗ ತಾಳಲಾರದೆ ಖೇದದಿಂದ ಸ್ವಾಮಿ ಹೋದ ಆರು ದಿವಸಕ್ಕೆ, ದಶರಥರಾಯ ದೇಹ ಬಿಟ್ಟನು. ರಾಜ್ಯದಲ್ಲಿ ಅರಾಜಕವಾದೀತೆಂದು ಪ್ರತಿನಿಧಿರಾಯನ, ತೈಲದಲ್ಲಿ ಪಾಕಮಾಡಿ ಇಟ್ಟರು. ಭರತ ತತ್ಪೂರ್ವದಲ್ಲೆ ವಿದ್ಯಾಭ್ಯಾಸ ನಿಮಿತ್ತವಾಗಿ ಸೋದರಮಾವನ ಬಳಿಗೆ ಹೋಗಿರಲು, ವಸಿಷ್ಠಸಹಿತನಾದಂಥ ಸುಮಂತ್ರನೇವೆ ಮೊದಲಾಗಿ ಉಳ್ಳಂಥ ಪ್ರಧಾನರು ರಾಯ ಸತ್ತ ವಾರ್ತೆ ಹೇಳಕೇಳಲಿಕ್ಕೆ, ರಾಯನ ಅದ್ಭುತ ವಾರ್ತೆ ಕೇಳಿ ಭರತ ಶತ್ರುಘ್ನರು ಅಯೋಧ್ಯಾಪಟ್ಟಣಕ್ಕೆ ಬಂದು, ತಮ್ಮ ತಂದಿ ಉತ್ತರಕ್ರಿಯಾ ಮಾಡಿದರು. ಭೂರಿಭೋಜನಾದಿಗಳು ಆದಮ್ಯಾಲೆ ಭರತಗೆ ರಾಜ್ಯಾಭಿಷೇಕ ಮಾಡೇವೆಂದು ಪ್ರಧಾನಿಗಳು ಆಡಲಿಕ್ಕೆ 'ನಮ್ಮ ಸ್ವಾಮಿ ರಾಮಚಂದ್ರ ವನವಾಸಕ್ಕೆ ಹೋದ ಬಳಿಕ ನಾವು ರಾಜ್ಯ ಆಳೋಹಾಂಗೆ ಇಲ್ಲ. ಎಲೈ ಕೈಕೇಯಿ, ನನ್ನ ತಾಯಿ ನೀ ಅಲ್ಲ. ನಮ್ಮ ಕುಲದೇವತಿ ರಾಮನ ದ್ರೋಹ ಮಾಡಿದಿ. ನಿನ್ನ ಉದರದಲ್ಲಿ ನಾವು ಜನಿಸಿದ್ದೇವೆ. ಇಂಥಾ ದೇಹ ಧರಿಸಲಿಕ್ಕೆ ಬಾರದು. ರಾಮನ ದ್ರೋಹ ನಮಗೆ ಬಂತು. ನಮ್ಮ ಜನ್ಮ ದಹಿಸಲಿಲ್ಲವೆ! ಇಷ್ಟು ಅನರ್ಥಕ್ಕೆ ಕಾರಣ ಪಾಪಿ ಮಂಥರಾ ಮಾಡಿದಳು' ಎಂದು ಹೇಳಿದರು. ಈ ಪ್ರಕಾರ ಭರತನ ನಿಷ್ಠೂರವಚನಗಳನ್ನು ಕೇಳಿ ಮಂಥರಾ ಓಡಿಹೋಗತಿದ್ದಳು. ಶತ್ರುಘ್ನನು ಅಕೀನ ಹಿಡತಂದು, ಬಾಯೊಳಗೆ ಧೂಳೀ ತುಂಬಿ ತಾಡನ ಹಾಕಲಿಕ್ಕೆ ಉದ್ಯುಕ್ತನಾಗಲಾಗಿ 'ಸ್ತ್ರೀವಧ ಮಾಡಿದರೆ ನಮ್ಮ ಸ್ವಾಮಿ ರಾಮಚಂದ್ರ ಮುಖವ ನೋಡದೆ ಹೋದಾನು, ಸ್ತ್ರೀವಧ ಪಾಪ' ಎಂದು ತಿಳದು 'ಈ ಸೂಕರನ ಹೊರಗೆ ಹಾಕು' ಎಂದು ಭರತ ಮಾತನಾಡಿ, ಇನ್ನು ರಾಮದೇವರಿಗೆ ಶರಣುಹೋಗಬೇಕೆಂದು ಯೋಚಿಸಿದನು.

ಶರಣಾಗತರಕ್ಷಕ ಭಕ್ತಜನಪ್ರಿಯ ತಮ್ಮ ಮಾತು ಲಾಲಿಸಿ ರಾಜ್ಯಾಭಿಷೇಕ ಮಾಡಿಸಿಕೊಂಡಾನು ಎಂದು, ತಮ್ಮ ಚತುರಂಗಸೇನಿ ಸಮೂಹದಿಂದ ಋಷಿಗಣ ಸಹವಾಗಿ ಭರತರಾಯ ಶ್ರೀರಾಮಚಂದ್ರನ ಸಮೀಪಕ್ಕೆ ಹೋಗಲಾಗಿ, ಮಾರ್ಗದಲ್ಲಿ ಗುಹನೆಂಬುವ ಮಹಾರುದ್ರನ ಭೃತ್ಯನು ಕಂಡು, ರಾಮನ್ನ ರಾಜ್ಯ ವಿರಹಿತ ಮಾಡಿ ದಂಡಯಾತ್ರಿ ನಿಮಿತ್ತ ಮಾಡಿಕೊಂಡು ರಾಮನಮ್ಯಾಲೆ ಹೋಗತಾರೆಂದು ತಿಳಿದು ಆ ಗುಹನೆಂಬಾತನು ಬಾಣ ಹೂಡಿ ಭರತಗೆ ಪ್ರಯೋಗಿಸಬೇಕೆಂದಲ್ಲಿ, ಆ ವ್ಯಾಳ್ಯಾದಲ್ಲಿ ಭರತ ಮಾತನಾಡಿದ. 'ಎಲೋ ಗುಹ! ನಾವು ರಾಮನ ದಾಸರಿದ್ದೇವೆ. ರಾಮನ ಪಾದಾರವಿಂದ ಸಮೀಪಕ್ಕೆ ಹೋಗಥೇವೆ.' ಹೀಂಗಂತ ನುಡಿಯಲು

ಗುಹನೆಂಬುವ ಮಾರ್ಗ ಕೊಟ್ಟನು. ಭರತ, ಮಾರ್ಗ ಹಿಡದು ಹೋಗಬೇಕೆಂದು ನದೀ ದಾಟಲಿಕ್ಕೆ ನಾವಿ ತಂದುಕೊಟ್ಟನು. ಋಷಿಗಣ ಸಹಿತ ನದಿ ದಾಟಿದಂಥಾತನಾಗಿ ಭರತರಾಯ ರಾಮನ ಪಾದಾಂಬುಜವ ಕಂಡು ನಮಸ್ಕಾರ ಮಾಡಿ ನಾನಾ ವಿಧದಿಂದ ಸ್ತೋತ್ರವಮಾಡಿ, ತನ್ನ ತಾಪತ್ರಯಾದಿಗಳನ್ನೆಲ್ಲ ಪರಿಹರಿಸಿಕೊಂಡು ರಾಮದೇವರ ಕೂಡ ಮಾತನಾಡಥಾನೆ. 'ಹೇ ರಾಮ! ರಾಜೀವನೇತ್ರ! ಸಕಲ ಗುಣಗಳಿಂದ ಪೂರ್ಣ, ಎಲೈ ಸ್ವಾಮೀ, ಭುವನತ್ರಯವುಳ್ಳ ಬ್ರಹ್ಮಾಂಡವೇ ನಿನ್ನ ಮನಿ. ಅಯೋಧ್ಯಾಪಟ್ಟಣ ನಿನ್ನದು ಎಂಬುದು ಏನಾಶ್ಚರ್ಯ? ಎಲೈ ಸ್ವಾಮಿ, ಐಶ್ವರ್ಯಾದಿ ಗುಣಸಮುದ್ರನೆಂದು ಸಕಲ ಜಗತ್ತಿಗೇ ನೀ ಅರಸು ಇದ್ದಿ. ಬ್ರಹ್ಮಾದಿ ಜಗತ್ತೆಲ್ಲ ನಿನ್ನ ದಾಸರು. ನಾವೂ ನಿನ್ನ ಭೃತ್ಯರು ಇದ್ದೇವೆ. ಪರಮಾನುಗ್ರಹಾರ್ಥವಾಗಿ, ಅಯೋಧ್ಯಾಪಟ್ಟಣಕ್ಕೆ ಬಂದು ಸಕಲ ಸಾಮ್ರಾಜ್ಯನಾಳಬೇಕು. ನಮ್ಮಂಥ ಭೃತ್ಯರ ಕೈಯಿಂದ ಸೇವಿ ಕೊಳ್ಳಬೇಕು. ನಮ್ಮಿಂದ ನಿನಗೇನೂ ಪ್ರಯೋಜನವಿಲ್ಲ. ದೇಶಕಾಲವ್ಯಾಪ್ತಳಾದಂಥ ಲಕ್ಷ್ಮೀದೇವಿಯು ನಿನ್ನ ಹೆಂಡತಿ. ಜಗತ್ತಿಗೆ ಗುರುವಾದಂಥ ಬ್ರಹ್ಮದೇವರು ನಿನ್ನ ಮಗ. ಬ್ರಹ್ಮಾಂಡವೇ ನಿನ್ನ ಮನಿ. ನಾವು ನಿನ್ನ ವಾಲ್ಮೀಲ್ಯಸೇವೆಂತೀವಿ. ಸಮಸ್ತ ಭೂಮಿ ಮ್ಯಾಲೆ, ನಮ್ಮ ಮ್ಯಾಲೆ, ಅನುಗ್ರಹಾರ್ಥವಾಗಿ, ಸಮಸ್ತ ಭೂಮಂಡಲ ಆಳಬೇಕು.' ಹೀಂಗಂತ ಭರತರಾಯ ನಾನಾ ಪ್ರಕಾರದಿಂದ ಪ್ರಾರ್ಥನ ಮಾಡಲಿಕ್ಕೆ, ರಾಮಚಂದ್ರ ಪ್ರತ್ಯುತ್ತರ ಕೊಡಥಾನೆ. ಏನಂತ—' ಭರತ, ದೇವತಾಕಾರ್ಯ ನಿಮಿತ್ತವಾಗಿ ನನ್ನ ಅವತಾರವಾಗಿದೆ. ರಾವಣ ಲೋಕಕ್ಕೆಲ್ಲ ಬಳಲಸಥಾನೆ. ಅಂಥಾ ದಶಶಿರ ರಾವಣನ ಕೊಲ್ಲಬೇಕಾಗೇದೆ. ಸಮಸ್ತ ದೇವತೆಗಳ ಅಪಮಾನ ಪರಿಹಾರ ಮಾಡಬೇಕಾಗಿ ಅವರಿಗೆ ಸುಖಕೊಡೋ ನಿಮಿತ್ತವಾಗಿ ಅರಣ್ಯಕ್ಕೆ ಬಂದಿದ್ದೀನಿ. ನಾನು ಸತ್ಯಸಂಕಲ್ಪ. ನನ್ನ ವಚನ ಸತ್ಯ ಮಾಡಬೇಕಾಗಿ, ಹದಿನಾಲ್ಕು ವರುಷ ವನವಾಸ ಮಾಡಿ ರಾವಣಾದಿ ರಾಕ್ಷಸರ ಕೊಂದು ದೇವತಾಕಾರ್ಯ ಸಾಧಿಸಿದ ತರುವಾಯ, ಅಯೋಧ್ಯಾಪಟ್ಟಣಕ್ಕೆ ಅವಶ್ಯ ಬಂದೇನು ಈಗಲೇ ಬಾಹೋಹಾಂಗೆ ಇಲ್ಲ.' ಈ ಪ್ರಕಾರ ರಾಮಚಂದ್ರದೇವರ ಪ್ರತ್ಯುತ್ತರ ಕೇಳಿ ಭರತನು, ರಾಮಚಂದ್ರನ ಪಾದಾಂಬುಜವ ಬಿಟ್ಟು ಹೋಗಲಾರದೆ, ಕ್ಷಣಕ್ಷಣಕ್ಕೆ ನಮಸ್ಕಾರ ಮಾಡತಿದ್ದ. ಸ್ವಾಮಿ ಪೂರ್ಣಾನಂದನ್ನ ಅಯೋಧ್ಯಾಪಟ್ಟಣಕ್ಕೆ ಬರಬೇಕೆಂದು ನಾನಾ ಪ್ರಕಾರದಲ್ಲಿ ಬೇಡಿಕೊಳ್ಳತಿಹ. ಸ್ವಾಮೀ ಆಜ್ಞೆ ಮೀರಲಿಕ್ಕೆ ಬಾರದ ಕಾರಣ 'ಎಲೈ ಸ್ವಾಮಿ, ನಿನ್ನ ವಚನ ಸತ್ಯ ಮಾಡಿ ಶೀಘ್ರ ಬರಬೇಕು' ಹೀಂಗಂತ ಭರತನು ಪ್ರಾರ್ಥಿಸಲಾಗಿ ರಾಮಚಂದ್ರದೇವರು ಭರತನ ಕೂಡ ಆಗ ಮಾತನಾಡಿದ್ದಾನೆ. 'ಎಲೈ ಭರತ, ಹದಿನಾಲ್ಕು ವರುಷ ಆದ ಬಳಿಕ ಅವಶ್ಯ ರಾಜ್ಯ ಆಳೇನು. ಲಕ್ಷ್ಮಣನಿಗೆ ಪ್ರಧಾನತ್ವ ಕೊಟ್ಟೇನು. ಈಗಲೇ ನಾ ಬಾಹೋಹಾಂಗೆ ಇಲ್ಲ. ತೆರಳಿಹೋಗು' ಎಂದು ಮಾತನಾಡಲಾಗಿ

ಸ್ವಾಮೀ ವಚನ ಮೀರಲಿಕ್ಕೆ ವಶವಲ್ಲದ ಕಾರಣ 'ಎಲೈ ಸ್ವಾಮಿ, ನಿನ್ನ ವಚನ ಸತ್ಯ ಮಾಡಿ ಶೀಘ್ರ ಬರಬೇಕು. ಬಾರದೇ ಇದ್ದರೆ ಅಗ್ನಿಕುಂಡದಲ್ಲಿ ಬಿದ್ದೇನು' ಎಂದು ಪ್ರತಿಜ್ಞೆ ಮಾಡಿದ. ಎರಡನೇ ಪ್ರತಿಜ್ಞೆ 'ರಾಮದೇವರ ನೋಡುವತನಕ ಅಯೋಧ್ಯಾಪಟ್ಟಣ ನೋಡವಲ್ಲೆ, ಪ್ರವೇಶ ಮಾಡವಲ್ಲೆ. ಪಟ್ಟಣದ ಹೊರಗೆ ನಂದಿ ಗ್ರಾಮದಲ್ಲಿ ಇದ್ದೇನು' ಎಂದು ಈ ಪ್ರಕಾರ ಪ್ರತಿಜ್ಞೆ ಮಾಡಿ ರಾಮದೇವರಿಂದ ಕೊಡಲ್ಪಟ್ಟಂಥ ಉತ್ತಮವಾದ ಬಂಗಾರದ ಹಾವುಗಿ ಶಿರಸಾ ವಹಿಸಿಕೊಂಡು ತೆರಳುವಂಥಾತನಾದನು.

ಭರತರಾಯ ತನ್ನ ತಾಯಂದಿರ ಕೂಡಿಕೊಂಡು ಋಷಿಗಣ ಸಹವಾಗಿ ಹಿಂದಕ್ಕೆ ತಿರುಗಿ ಬಂದು ಅಯೋಧ್ಯಾಪಟ್ಟಣಕ್ಕೆ ಹೋಗಲಿಕ್ಕೆ ಮನಸ್ಸು ಬಾರದೆ, 'ರಾಮ ರಾಮ' ಎಂಬ ನಾಮಸ್ಮರಣೆ ಮಾಡತ, ರಾಮದೇವರು ಎಂದು ಬಂದಾನೆಂದು ಹದಿನಾಲ್ಕುವರುಷ ಕಾಲ ನಿರೀಕ್ಷ ಮಾಡತ, ನಿತ್ಯ ಸರಸ್ವತೀನದಿಯಲ್ಲಿ ಸ್ನಾನವಮಾಡಿ, ವಿಷಯಭೋಗಗಳನ್ನೆಲ್ಲ ತುಚ್ಛೀಕರಿಸಿ ಏನೂ ಹಾಸಿಕೊಳ್ಳದೆ ಸ್ಥಂಡಿಲಶಯನ, ಗೋಮೂತ್ರದಲ್ಲಿ ಜೀವಿಸಿಕೊಂಡು ಜವಿ ತೇದು ಆಹಾರ ಮಾಡಿಕೊಂಡು, ಹದಿನಾಲ್ಕು ವರುಷಕ್ಕೆ ಸ್ವಾಮಿ ಬಾರದ ಪಕ್ಷವೇ ಅಗ್ನಿಪ್ರವೇಶವಾದೇನು' ಹೀಂಗಂತ ಸಂಖ್ಯೆ (ನಿಯಮ) ಮಾಡಿ, ರಾಮದೇವರ ಸ್ಮರಣೆ ಮಾಡಿಕೊಂಡು ಭರತರಾಯ ನಂದಿಗ್ರಾಮದಲ್ಲಿ ಸ್ವಾಮೀ ಪಾದಪೀಠಗಳ ಪೂಜಾ ಮಾಡತ ಅನುದಿನವೂ ಇರತಿಹ.

ರಾಮಚಂದ್ರ ಕೆಲವು ಕಾಲ ಚಿತ್ರಕೂಟಪರ್ವತದಲ್ಲಿ ವಾಸವಾಡಿಕೊಂಡು ಇರಲಿಕ್ಕೆ ಒಂದು ಕಾಗಿ, ಕಾಮಾತುರದಿಂದ ತನ್ನ ಚುಂಚುಪುಟದಿಂದ ಸೀತಾದೇವಿ ಸ್ತನ ಮುಟ್ಟಿತು. ಆ ಕಾಗೀ ಸ್ವರೂಪ ಏನಂದರೆ, ದೇವೇಂದ್ರನ ಮಗ ಜಯಂತ ಪ್ರಾರಬ್ಧಕರ್ಮದಿಂದಾಗಿ ಕಾಗಿಯಾಗಿ ಜನಿಸಿದ್ದ. ಪಕ್ಷಿಗಳ ಒಳಗಾಗಿ ಕಾಗಿ ಮಹಾ ಚಂಡಾಲ. ಅದಕ್ಕೆ ಬಹುಕಾಲ ಆಯುಷ್ಯ. ಅಂಥಾ ಕಾಗಿಯಲ್ಲಿ ಕುರಂಗನೆಂಬೋ ದೈತ್ಯ, ರುದ್ರನ ವರಬಲದಿಂದ ಹುಟ್ಟಿ ಆ ಕಾಗಿ ಒಳಗೆ ಹೊಕ್ಕನು. ಅವು ತಾವು ನಿರ್ಬಲವುಳ್ಳವು. ಎಷ್ಟು ಕಾಗಿ ಇದ್ದವು ಅಷ್ಟರಲ್ಲೂ ತನ್ನ ಅಂಶದಿಂದ ಇರತಿದ್ದ. ಆದಕಾರಣ ರಾಮಚಂದ್ರನು ನೋಡಿ ಹುಲ್ಲುಕಡಿ ಈಡ್ಯಾಡಿದನ್ನು. ಜನ್ಮಜರಾಮರಣ ಮರ್ದಿಸುವಂಥ ಜನಾರ್ದನನ ಕೈಯಿಂದ ಬಿಡಿಸಿ ಕೊಂಡಂಥ ತೃಣವು ಮಹಾ-ಪ್ರಕಾರ ಜ್ವಲಿಸತ ಕಾಗೀ ಬೆನ್ನಟ್ಟಿಹೋಗಲು, ಅದು ಬಹಳ ಅಂಜಿಕೆಯುಳ್ಳದ್ದಾಗಿ ಬ್ರಹ್ಮರಾಯನ ಲೋಕಕ್ಕೆ ಹೋಯಿತು. ಆ ಬ್ರಹ್ಮರಾಯನಿಂದ ಬೆನ್ನಹಾಕಿ-ಕೊಳ್ಳದ ಕಾರಣ ರುದ್ರಲೋಕಕ್ಕೆ ಹೋಯಿತು. ಆತನೂ ಬೆನ್ನಹಾಕಿಕೊಳ್ಳದ ಕಾರಣ ಸುರರಾಜ ದೇವೇಂದ್ರನ ಲೋಕಕ್ಕೆ ಹೋಯಿತು. ದಾರೂ ಬೆನ್ನಹಾಕಿ-ಕೊಳ್ಳದ ಕಾರಣ—ಬೆನ್ನಹಿಂದೆ ಹ್ಯಾಂಗೆ ಹಾಕಿಕೊಳ್ಳಥಾರೆ, ಬ್ರಹ್ಮಾದಿ ಜಗತ್ತಿಗೆ

ಅರಸಾದಂಥ ಸೀತಾರಾಮನ ದ್ರೋಹಮಾಡಿ ಬಂದದೆ. ಇಂಥಾ ಸ್ವಾಮಿದ್ರೋಹಿಗೆ ಬೆನ್ನಹಾಕಿಕೊಳ್ಳಲಿಕ್ಕೆ ಬ್ರಹ್ಮಾದಿ ದೇವತೆಗಳು ದಾರೂ ಸಮರ್ಥರಾಗಲಿಲ್ಲವು— ಪುನಃ ಕಾಗಿ ರಘುನಾಥಗೆ ಶರಣು ಬಂತು. ರಾಮದೇವರು ಕುರಂಗನೆಂಬೋ ದೈತ್ಯನ ಕಾಗಿ:ಕಣ್ಣ ಒಳಗಿಂದ ತೆಗೆದು ಕೊಂದನು. ಅಂದಾರಭ್ಯವಾಗಿ, ಬ್ರಹ್ಮಾಂಡ ದೊಳಗೆ ಕಾಗಿಗಳಿಲ್ಲ, ಏಕನೇತ್ರವಾದವು. ನುಂದೆ ಉತ್ಪೃಜಿಸುವ ಕಾಗಿಗಳೆಲ್ಲ, ಏಕನೇತ್ರ ಉಳ್ಳವಾಗಿ ಜನಿಸ್ಯಾವು. ಮೊದಲಿಗೆ ಎರಡು ಕಣ್ಣು ಇದ್ದಲ್ಲಿ ರಾಮದೇವರ ತೃಣದಿಂದ ಒಂದು ನೇತ್ರ ದಹಿಸಿತು. ತರುವಾಯದಲ್ಲಿ ದೇವೇಂದ್ರನ ಮಗ ಜಯಂತ, ವಾಯಸರೂಪ ಬಿಟ್ಟು ರಾಮದೇವರ ಕೈಯ ಅಪ್ಪಣಿ ತೆಗೆದುಕೊಂಡು ಸ್ವರ್ಗಕ್ಕೆ ಹೋದ. ಅಂದಾರಭ್ಯ ಕಾಗಿಗಳು ಏಕಾಕ್ಷಗಳಾದವು. ಈ ಪ್ರಕಾರ ಹದಿನಾರು ಶ್ಲೋಕದಿಂದ ಅಯೋಧ್ಯಾಕಾಂಡ ಮುಗಿಸಿ ಅರಣ್ಯಕಾಂಡ ಹೇಳಥಾರೆ.

ಸ್ವಾಮಿ ರಾಮಚಂದ್ರ ಮುನಿಶ್ರೇಷ್ಠರುಗಳಿಂದ ಪ್ರಾರ್ಥಿತನಾಗಿ, ಚಿತ್ರಕೂಟ ಪರ್ವತದಿಂದ ತೆರಳಿ, ದಂಡಕಾರಣ್ಯಕ್ಕೆ ಹೋಗುವಂಥಾತನಾದನು.. ಏನುಕಾರಣ ಎಂದರೆ, ಖರ-ದೂಷಣರೇವೇ ಮೊದಲಾಗಿ ಉಳ್ಳಂಥ ಅನೇಕ ರಾಕ್ಷಸರು ಮಹಾ-ರುದ್ರನ ವರಬಲದಿಂದ ಮರಣರಹಿತರಾಗಿಹೋರು. ಉದಾರ ಬಲದಿಂದ ಲೋಕಗಳಿಗೆ ಉಪದ್ರವ ಕೊಡಥಾರೆಂಬೊ ವಾರ್ತೆ ಕೇಳಿ, ರಾಕ್ಷಸರ ವಧನಿಮಿತ್ತವಾಗಿ ಸೀತಾದೇವಿ ಲಕ್ಷ್ಮಣರಿಂದ ಯುಕ್ತನಾಗಿ ದಂಡಕಾರಣ್ಯಕ್ಕೆ ಹೋದನು. ಅಲ್ಲಿ ಶರಭಂಗಋಷಿ ಬಹಳ ಜೀರ್ಣವಾಗಿಹ. ಬಹಳ ದೊಡ್ಡ ತಪಸ್ವಿ, ಸ್ವಾಮಿ ರಘುನಾಥನೆಂದು ತಿಳಿದು ತನ್ನಲ್ಲಿದ್ದಂಥ ಫಲಪುಷ್ಪಗಳಿಂದ ಮಧುಪರ್ಕಗಳಿಂದ ಅರ್ಘ್ಯ ಮೊದಲಾದ ಷೋಡಶೋಪಚಾರ ಪೂಜಿ ಮಾಡಿ ರಾಮದೇವರಿಗೆ ವರವು ಬೇಡಿಕೊಂಡನು. 'ಎಲೈ ಜಗನ್ನಾಥ! ಈ ದೇಹ ಬಹಳ ಜೀರ್ಣವಾಗೇದೆ ಸ್ನಾನ ಸಂಧ್ಯಾವಂದನಾದಿ ಕರ್ಮಗಳಿಗೆ ಅನುಕೂಲವಾಗಿ ಬಾಹೋದಿಲ್ಲ. ನಿನ್ನ ಮುಖಚೆಲ್ವಿಕೆ ನೋಡತಲೇ ನಿನ್ನ ಸ್ಮರಣೆ ಮಾಡತ ದೇಹತ್ಯಾಗ ಮಾಡಥೀನಿ ಇದರಿಂದ ದುರ್ಮರಣದೋಷವಿಲ್ಲ. ಈಗ ವಾನಪ್ರಸ್ಥಾಶ್ರಮದಲ್ಲೇ ಇದ್ದೀನಿ. ದೇಹ ಜೀರ್ಣವಾಗೇದೆಂದು ಅಗ್ನಿಪ್ರವೇಶ ವಾಗಿ ಭಸ್ಮೀಭೂತ ಮಾಡಬೇಕು. ಅಥವಾ ಸರ್ಪದ ಹುತ್ತದೊಳಗೆ ಕೈಹಾಕಿ ಸರ್ಪನ ಕೈಯ ಕಚ್ಚಿಸಿಕೊಂಡು ಮೃತವಾಗಬೇಕು, ಅಥವಾ ಪಾಷಾಣ ಧರಿಸಿ-ಕೊಂಡು ನದೀ ಪ್ರವೇಶವಾಗಬೇಕು. ಹೀಂಗೆ ಶಾಸ್ತ್ರವದೆ. ಸ್ವಾಮಿ, ನಿನ್ನ ಆಜ್ಞ ವಾಗಬೇಕು' ಎಂದು ಕೇಳಲು 'ಹಾಂಗೆ ಆಗಲಿ' ಎಂದು ರಾಮದೇವರು ಆಜ್ಞೆಕೊಟ್ಟವ್ಯಾಲೆ ಶರಭಂಗಋಷಿ, ತನ್ನ ಔಪಾಸನ ಅಗ್ನಿ ಪುಟವಾಡಿ ಅಗ್ನಿ ಯೊಳಗೆ ಭಸ್ಮೀಭೂತನಾಗಿ ಮೋಕ್ಷಮಾರ್ಗ ಐದಿದನು. ತರುವಾಯ ಶ್ರೀರಾಮ-ಲಕ್ಷ್ಮಣರು ದಂಡಕಾರಣ್ಯಕ್ಕೆ ಹೋಗಥಾರೆ. ಸೀತಾದೇವಿ ತಾ ಮುಂದ ಮುಂದ ಹೋಗಥಾಳೆ.

ತುಂಬರನೆಂಬೋ ಗಂಧರ್ವ, ಕುಬೇರಶಾಪದಿಂದ ವಿರಾಧನಾಗಿ ಉತ್ಪನ್ನನಾಗಿದ್ದ. ಧನಪತಿಯ ಶಾಪವಾದ ಕಾರಣವೇನೆಂದಲ್ಲಿ, ಆತನ ಅರಿಕೆಲ್ಲದಲೇ ಕದ್ದು, ಊರ್ವಶೀಯೆಂಬೋ ಅಪ್ಸರಸ್ತ್ರೀಯ ಭೋಗಿಸಿದ. ಆ ಕಾರಣದಿಂದ ವಿರಾಧನಾಗಿ ಹುಟ್ಟಿದ. ಮುಂದೆ ಕೃಷ್ಣಾವತಾರದಲ್ಲಿ ಸಂಜಯನಾಗಿ ಉತ್ಪನ್ನನಾಗಿದ್ದಾನೆ. ಆ ವಿರಾಧನು ಮಾರ್ಗದಲ್ಲಿ ಕುಳಿತು ತನ್ನ ತೋಳುಗಳಿಂದ ಮಾರ್ಗಸ್ಥರನ್ನೆಲ್ಲ ಹಿಡಿದು ತನ್ನ ಬಾಯೊಳಗೆ ಹಾಕಿಕೊಂಬುವ. ತತ್ಪ್ರಕಾರದಿಂದ ರಾಮಲಕ್ಷ್ಮಣರ, ಒಂದು ಕೈಯಲ್ಲಿ ಹಿಡಿದನು. ರಾಮದೇವರು ಈ ವಿಪರೀತ ಕಂಡು ವಿರಾಧನ ಎರಡು ತೋಳುಗಳ ಛೇದಿಸಿ ಬಿಲದೊಳಗೆ ಹಾಕಿ, ಅವನ ಆಯುಷ್ಯವು ತೀರಿ ಅವನೇ ಹೋಗಲಿ ಎಂದು ಸೀತಾಲಕ್ಷ್ಮಣರ ಸಹ ರಾಮದೇವರು ಮುಂದಕ್ಕೆ ತೆರಳಿದರು. ಈ ಬೆಟ್ಟದಲ್ಲಿ ಅಗಸ್ತ್ಯಋಷಿಯು ಇವರ ಕಂಡವನಾಗಿ, ಷೋಡಶೋಪಚಾರ ಪೂಜೆಗಳಿಂದ ಪೂಜಿಯಂ ಗೈದು ತನ್ನಲ್ಲಿದ್ದ ಶಾರ್ಙ್ಗಧನುಸ್ಸನ್ನು ರಾಮದೇವರಿಗೋಸ್ಕರ ಕೊಟ್ಟನು. ಆ ದೇವೇಂದ್ರ ತಾ ಸ್ವರ್ಗದಲ್ಲಿರಲಿಕ್ಕೆ ಅಗಸ್ತ್ಯಋಷೀಶ್ವರನಿಗೋಸ್ಕರ ಕೊಟ್ಟಿದ್ದ, ಸಹಸ್ರಾಕ್ಷನ ಆಜ್ಞೆವಿತ್ತು. ರಘುಪತಿದೇವರಿಗೆ ಋಷೀಶ್ವರನು ಶಾರ್ಙ್ಗ-ಧನುಸ್ಸು ಕೊಟ್ಟನು. ದೇವರು ಈ ಧನುಸ್ಸು ತೆಗೆದುಕೊಂಡು ದಂಡಕಾರಣ್ಯಕ್ಕೆ ಹೋಗಥಾನೆ.

ರಾವಣನ ತಂಗಿ ಆದಂಥ ಶೂರ್ಪನಖೀಯು ತನ್ನ ಪತಿಯು (ವಿದ್ಯುಜ್ಜಿಹ್ವ) ಯುದ್ಧದಲ್ಲಿ ತೀರಿದ ಕಾರಣ, ದಿವ್ಯಸ್ವರೂಪ ಗಂಡನ ಹುಡಕಬೇಕಾಗಿ ಖರ ದೂಷಣ ತ್ರಿಶಿರ ಮೊದಲಾದ ಹದಿನಾಲ್ಕು ಸಾವಿರ ರಾಕ್ಷಸರಿಂದ ಯುಕ್ತಳಾಗಿ ಮಾರ್ಗ ವಿಚಾರಿಸತ ತಿರಗಹತ್ತಿದಳು. ಶೂರ್ಪನಖೀ ಮೊದಲ ಗಂಡನು ಏನಾದನು ಎಂದರೆ, ರಾವಣ ಪರಚಕ್ರ* ಕೂಡ ಯುದ್ಧಮಾಡತಿರಲಾಗಿ ಯುದ್ಧಮಾಡಿ ಶೂರ್ಪನಖೀ ಗಂಡನು ಪರಚಕ್ರರೊಳಗಿಂದ ಒರಥಾನೆ. ದಾವನೆಂದು ಈತನ ಸ್ವರೂಪ ತಿಳಿಯದೆ ರಾತ್ರೀವ್ಯಾಳ್ಯಾದಲ್ಲಿ ರಾವಣ ಕೊಂದನು. ಪ್ರಮಾದಾಧಿಕದಿಂದ ಸತ್ತನು. ಶೂರ್ಪ-ನಖೀ ತನ್ನ ಗಂಡ ಸತ್ತನೆಂದು ಬಹಳ ದುಃಖ ಮಾಡಿದಳು. ಆ ವ್ಯಾಳ್ಯಾದಲ್ಲೆ ತನ್ನ ತಂಗಿನ್ನ ರಾವಣ ಸಮಾಧಾನ ಮಾಡಿದ. 'ಸತ್ತಾತ ಬರಲರಿಯ. ವ್ಯರ್ಥ ಏನು ಕಾರಣ ಶೋಕ ಮಾಡತಿ? ಹದಿನಾಲ್ಕು ಲೋಕದೊಳಗೆ ದಾವಾತ ನಿನ್ನ ಮನಸ್ಸಿಗೆ ಬರಥಾನೆ ಆತನ ಗಂಡನ ಮಾಡಿಕೊ' ಅಂದನು. ಹದಿನಾಲ್ಕುಸಾವಿರ ರಾಕ್ಷಸಬಲ ಕೊಟ್ಟನು. ಬಲದಿಂದ ಯುಕ್ತಳಾಗಿ ಗಂಡನ ಹುಡುಕುವ ತಾತ್ಪರ್ಯದಿಂದ ರಾಮ-ದೇವರ ಸಮೀಪಕ್ಕೆ ಬಂದಳು. 'ರಾಕ್ಷಸಾಧಿಪ ರಾವಣನ ಆಜ್ಞೆದಿಂದ ಖರ ದೂಷಣ ತ್ರಿಶಿರ ಮೂರು ಮಂದಿ ಅಣ್ಣತಮ್ಮಂದಿರು, ರಾಕ್ಷಸರ ಬಲಸಹಿತಳಾಗಿ ಗಂಡನ ಹುಡುಕತ ಬಂದಳು. ಆ ದಂಡಕಾರಣ್ಯದಲ್ಲಿ ರಾಮದೇವರ ಕಂಡಳು. ಲಕ್ಷ್ಮಣ ದೂರದಲ್ಲಿದ್ದಾನೆ ಸೀತಾ, ರಾಮದೇವರು ಒಂದೇಕಡಿ ಕುಳಿಥಾರೆ. ಶೂರ್ಪನಖೀ

ರಾಮದೇವರ ಸಮೀಪಕ್ಕೆ ಹೋಗಿ 'ನನಗೆ ಗಂಡನಾಗು' ಎಂತ ಮಾತನಾಡಿದಳು. ಅಯೋಗ್ಯಳು, ಸ್ವಾಮಿ ಸರ್ವೇಶ್ವರಗೆ ಹ್ಯಾಂಗೆ ಬಯಸಿದಳು ಎಂದರೆ, ಅಂಧಕಾರ ಸೂರ್ಯನ ಬಯಸೋಣ, ಹ್ಯಾಂಗೆ ಸೂರ್ಯಗೂ ಅಂಧಕಾರಕ್ಕೂ ಸಂಯೋಗವಿಲ್ಲ ಹಾಂಗೆ ತಿಳೀಬೇಕು. ರಾಮಚಂದ್ರ ಶೂರ್ಪನಖೀ ಕೂಡ ಮಾತನಾಡಥಾನೆ. 'ಎಲೈ, ನೀನಾರು ನನ್ನ ಬಯಸಿ ಬಂದಿ? ನಿನ್ನ ಸಂಪಾದಿಸಿದರೆ ಈ ಜಾನಕೀಗೆ ಏನು ಮಾಡಲಿ? ಜನಕರಾಯನ ಪುತ್ರಿ ಈ ಜಾನಕೀ ಒಂಭತ್ತು ವರುಷದಾಕಿ ಇದ್ದಾಳೆ. ಯಜ್ಞನಿಮಿತ್ತ ಭೂಶೋಧನ ಮಾಡುವಾಗ್ಗೆ ನೇಗಿಲ ತುದಿಗೆ ಹತ್ತಿ ಬಂದಾಳೆ. ಅಯೋನಿಜಳಾದಂಥಾಕಿಯನ್ನು ಬಿಡಲಿಕ್ಕೆ ಕೂಡದು.' ಹೀಂಗೆ ಶೂರ್ಪನಖೀ ಕೂಡ ಮಾತನಾಡಿ, ಸ್ವಾಮಿ, ಜಾನಕೀ ಕೂಡ ಮಾತನಾಡಥಾನೆ. 'ನಿನ್ನ ಮ್ಯಾಲೆ ಮತ್ತೊಬ್ಬ ಸ್ತ್ರೀ ನನ್ನ ಬಯಸಿ ಬಂದಾಳೆ.' ಹೀಂಗೆ ಸೀತಾ ಕೂಡ ವಿನೋದವಚನಗಳಾಡಿ, ಪುನಃ ಶೂರ್ಪನಖೀ ಕೂಡ ಮಾತನಾಡಿದ. 'ನನಗೆ ಹೆಂಡತಿ ಸೀತಾ ಇದ್ದಾಳೆ. ನನ್ನ ತಮ್ಮ ಲಕ್ಷ್ಮಣಗೆ ಹೆಂಡತಿ ಇಲ್ಲ. ಬಹಳ ಚೆಲುವ. ನನ್ನಂತೆ ಸುಂದರನಿದ್ದಾನೆ. ನೀನು ಲಕ್ಷ್ಮಣನಲ್ಲಿ ಹೋಗು' ಎನಲಿಕ್ಕೆ, 'ನನ್ನ ಹೆಂಡತೀನ ಮಾಡಿಕೋ' ಎಂದು ಲಕ್ಷ್ಮಣನ ಸಮೀಪಕ್ಕೆ ಹೋದಳು. ರಾಮನಾಜ್ಞೆಯಿಂದ, ದುಷ್ಟಚರಿತ್ರೆಯುಳ್ಳ ಶೂರ್ಪನಖೀ ಕಿವೀ ಮೂಗು ಛೇದಿಸಿಬಿಟ್ಟನು.

ಏನುಕಾರಣ ಛೇದಿಸಬೇಕೆಂದರೆ, ಸಮಸ್ತ ರಾಕ್ಷಸರ ಸಂಹಾರ ಮಾಡೋದಕ್ಕೆ ಶೂರ್ಪನಖೀಯನ್ನು ನಿಮಿತ್ತಕಾರಣಳ ಮಾಡಬೇಕೆಂದು ಈ ಪ್ರಕಾರ ಚರಿತ್ರ ಮಾಡಿದನು. ಮೊರದಗಲದಷ್ಟು ಉಗುರ ಉಳ್ಳಾಕಿ, ನಾಸಿಕ ಛೇದಿಸಿಕೊಂಡು ಬಹಳ ದುಃಖ ಉಳ್ಳಾಕಿಯಾಗಿ ಈ ಅವಸ್ಥೀನೆಲ್ಲ ಖರ ದೂಷಣರ ಮುಂದೆ ಹೇಳಿದಳು. ಅವರಿಗೆ ರಾವಣನ ಆಜ್ಞೆ ಇಹೋದು. ಅದೇ ಕ್ಷಣದಲ್ಲಿ ಹದಿನಾಲ್ಕು ಸಾವಿರ ರಾಕ್ಷಸರೊಳಗೆ ಖರ ದೂಷಣ ತ್ರಿಶಿರ ಮೂರು ಮಂದಿ ಮಹಾಪ್ರಬಲರು ಮುಂಬಿಗರು ರಾವಣಗೆ ಬಂಧುಗಳಾಗಬೇಕು ಭಯಂಕರ ಬಲವುಳ್ಳವರು ಶೂರ್ಪನಖೀಗೆ ಬಂಧುಗಳು, ಇವರೇ ಮೊದಲಾಗಿ ಹದಿನಾಲ್ಕು ಸಾವಿರ ರಾಕ್ಷಸರು ಒಬ್ಬರಿಂದ ಸಂಹರಿಸಲಿಕ್ಕೆ ಶಕ್ತರಲ್ಲದೆ ಇದ್ದಂಥವರು, ತಮ್ಮ ರಾಕ್ಷಸರ ಮಾಯದಿಂದ ರಾಮ-ಲಕ್ಷ್ಮಣರ ಮ್ಯಾಲೆ ಬರಲಿಕ್ಕೆ, ಸ್ವಾಮಿ ಶಾರ್ಙ್ಗಧನುಸ್ಸು ಕೈಯಲ್ಲಿ ಹಿಡಕೊಂಡು ಸಮಸ್ತ ರಾಕ್ಷಸರನ್ನು ಕೊಂದನು. ಖರ ದೂಷಣ ತ್ರಿಶಿರ ಮಹಾಪ್ರಬಲರೂ ಸತ್ತರು. ಇದರಿಂದ ಸಮಸ್ತ ಮುನಿಜನಕ್ಕೆ ಬಹಳ ಸುಖವಾಯಿತು. ಈ ವಾರ್ತೆ ರಾವಣಗೆ ಅರಿಕೆ ಆಗಬೇಕೆಂದು ಸಾಕ್ಷೀಭೂತಕ್ಕೆ <u>ಅವಿಕಂಪನೆಂಬ</u> ರಾಕ್ಷಸನ ಕಳುಹಿದನು. ರಾಮದೇವರಿಂದ ಮುನೀಶ್ವರರಿಗೆ ಅಭಯ ಕೊಡಲ್ಪಟ್ಟಿತು.

ರಾಕ್ಷಸಾಧಿಪನಾದ ರಾವಣ, ತಂಗಿಯಾದಂಥ ಶೂರ್ಪನಖೀ ಹಾಂಗೆ ಅವಿಕಂಪ ರಾಕ್ಷಸನ ಮುಖದಿಂದ ಉತ್ತಮನಾದಂಥ ರಾಮದೇವರ ಬಲವನ್ನು ಕೇಳಿ ಚಿಂತಿ

ಮಾಡುವಂಥಾತನಾದನು. ಶೂರ್ಪನಖೀ ತನ್ನ ನಾಸಿಕ ಕರ್ಣ ಛೇದಿಸಿಕೊಂಡಾಕಿ ತನ್ನ ಅಣ್ಣ ರಾವಣನ ಕೂಡ ಮಾತನಾಡಿದ್ದಾಳೆ. 'ರಾಮನ ಸ್ತ್ರೀ ಮಹಾ ಸುಂದರಳಿದ್ದಾಳೆ. ಆ ಸ್ತ್ರೀಯಳನ್ನು ನೀನು ಕೊಂಡುಬಂದರೆ ಬದುಕೇನು, ಇಲ್ಲವೇ ಸತ್ತೇನು.' ಈ ಪ್ರಕಾರ ಮಾತನಾಡಲಿಕ್ಕೆ ಶೂರ್ಪನಖೀ ಮಾತು ಕೇಳಿ ತನ್ನೊಳಗೆ ತಾನೇ, ರಾವಣ ಕಾರ್ಯ ವಿಚಾರ ಮಾಡಿ, ಶೀಘ್ರ ಸಮುದ್ರತೀರದಲ್ಲಿದ್ದ ಗೋಕರ್ಣ ಕ್ಷೇತ್ರಕ್ಕೆ ಹೋದನು. ಆ ಕ್ಷೇತ್ರದಲ್ಲಿ ಮಾರೀಚನು ತಪಸ್ಸು ಮಾಡತಿದ್ದ. ರಾಘವನ ಬಾಣಕ್ಕೆ ಅತ್ಯಂತ ಅಂಜಿ ಮೋದಲಿಗೆ, ಹೋಗಿ ಸಮುದ್ರತೀರದಲ್ಲಿರತಿದ್ದ. ಇಂಥಾ ಮಾರೀಚನ್ನ ರಾವಣ ಕಂಡನು. ರಾವಣನಿಂದ ಪ್ರಾರ್ಥಿತನಾದ. ರಾವಣನು ಅಂದ 'ಎಲೊ ಮಾರೀಚ, ನಿನ್ನ ತಪಸ್ಸು ಸಾಕುಮಾಡು. ಮೃಗನಾಗಿ ಹೋಗಿ ಸೀತಾ-ದೃಷ್ಟಿಗೆ ಬೀಳು. ಮೃಗನ ಬೆನ್ನಟ್ಟಿ ರಾಮ ಹೊರಗೆ ಬಂದರೆ, ನಾನು ಸೀತಾ ಕೊಂಡು ಲಂಕಾಪಟ್ಟಣಕ್ಕೆ ಹೋದೇನು. ಈ ಪ್ರಕಾರ ರಾಮನ ವಂಚಿಸು ಎಂದು ರಾವಣ ಹೇಳಲಿಕ್ಕೆ, ಮಾರೀಚ, ರಾಮಬಾಣ ವೇಗವನ್ನು ತಾನು ಬಲ್ಲ. ಆದಕಾರಣ ರಾವಣನ ಕೂಡ ಮಾತನಾಡಿದ. 'ರಾಮಚಂದ್ರ ಬಹಳ ಪ್ರಬಲನಿದ್ದಾನೆ. ಈ ಭೂಮಿಯಲ್ಲಿ ರಾಮನ ಸಂಗಡ ವಿರುದ್ಧ ಮಾಡಲಿಕ್ಕೆ ನೀನು ಸಮರ್ಥನಾಗೋದಿಲ್ಲ. ನಾನು ವ್ಯರ್ಥ ಸತ್ತೇನು. ಯಾಕಂತಿ, ರಾಮನ ಬಾಣದ ಸಂಸ್ಪರ್ಶದಿಂದ ಅಂಜಿ ವಿಶ್ವಾಮಿತ್ರನ ಯಜ್ಞ ಕೆಡಿಸಲಾರದೆ ಅಂದಾರಭ್ಯ ಈ ಸಮುದ್ರತೀರದಲ್ಲಿದ್ದೀನಿ' ಎಂದು ಈ ಪ್ರಕಾರ ಮಾರೀಚ ಮಾತನಾಡಿದ. ರಾವಣ ಬಹಳ ಕೋಪಾವಿಷ್ಟನಾಗಿ, ತನ್ನ ಮಾತು ಕೇಳವಲ್ಲ ಎಂದು ಖಡ್ಗ ಉಚ್ಚಿಕೊಂಡು ನಿಂದರಲಿಕ್ಕೆ, ಮಾರೀಚ ಮಾತನಾಡಿದ. 'ರಾವಣ ನೀನು ಬಹಳ ಪಾಪಿ. ನಿನ್ನ ಅಂಜಿಕೆಯಿಂದ ರಘು-ವರ್ಯನ ಸಮೀಪ ಕುರಿತು ಹೋದೇನು.' ಇನ್ನು ವಂಚನಿ ಪ್ರಕಾರ ಹೇಳಥಾರೆ.

ಬಹು ರತ್ನಗಳಿಂದ ವಿಚಿತ್ರವಾದ ಸುವರ್ಣಮೃಗರೂಪದಿಂದ ಮಾರೀಚ ಸೀತಾದೇವಿ ಸಮೀಪದಲ್ಲಿ ಬಹು ಆವರ್ತಿ ಸಂಚರಿಸುವಂಥಾತನಾದನು. ನಿತ್ಯವಾದ ಉತ್ತಮವಾದ ಗುಣವುಳ್ಳಂಥ ಸೀತಾದೇವಿಯು ಅತ್ಯಂತವಾಗಿ ರಾವಣಾದಿ ರಾಕ್ಷಸರ ಸಂಹಾರಾರ್ಥ ಹಾಂಗೆ ಅಜ್ಞಾನಿಜನ ಮೋಹನಾರ್ಥವಾಗಿ ರಾಮನ ಕೂಡ ಮಾತ್ರ-ನಾಡಿದಳು. 'ಹೇ ದೇವ! ಅಂಬುಜಾಕ್ಷ, ಕ್ರೀಡಾದಿ ಗುಣವಿಶಿಷ್ಟನಾದಂಥ ಸ್ವಾಮಿಯೇ! ನೀನು ಈ ಮುಂದೆ ಸುಳಿದಾಡುವ ಮೃಗವನ್ನು ನನಗೆ ಕ್ರೀಡಾರ್ಥ ವಾಗಿ ಹಿಡಿದು ತಂದುಕೊಡು. ಒಂದು ಪಕ್ಷಕ್ಕೆ ಬಾಣದಿಂದ ಸತ್ತರೆ ಅದರ ಚರ್ಮ ಚಿತ್ರಾಸನಕ್ಕೆ ಬಂದೀತು' ಎಂದು ಈ ಪ್ರಕಾರ ಸೀತಾದೇವಿ ಮಾತನಾಡುತ್ತಿರಲಾಗಿ ಆಲಸ್ಯವಾಡದಲೆ ರಾಮದೇವರು ಮೃಗ ಬೆನ್ನಟ್ಟಿದನು. ಧನುರ್ಬಾಣ ಕೈಯಲ್ಲಿ ಹಿಡಕೊಂಡು ಹೋದನು. ಕಾಮುಪುರುಷ ಹೆಂಡತಿ ಮಾತು ಹ್ಯಾಂಗೆ ಕೇಳಥಾನೆ ಹಾಂಗೆ ಸ್ವಾಮಿ ಅಲ್ಲ. ರಘುವರ್ಯ ಅಸುರನನ್ನು ಕೊಲ್ಲಬೇಕಾಗಿ, ಛದ್ಮದಿಂದ

ಮೃಗರೂಪ ಧರಿಸಿದ ಮಾರೀಚನೆಂದು ತಿಳಿದು ಬಾಣದಿಂದ ಕೊಂದುಬಿಟ್ಟನು. ಕ್ರೀಡಾನಿಮಿತ್ತ ಮೃಗವನ್ನು ತಂದುಕೊಡು ಎಂದಲ್ಲಿ ಮೃಗವನ್ನು ಏನುಕಾರಣ ಕೊಲ್ಲಬೇಕೆಂದು ಶಂಕಾ ಬಂದರೆ ಪರಿಹರಿಸಥಾರೆ. ಸ್ವಾಭಾವಿಕ ಮೃಗವಲ್ಲ ಛದ್ಮ-ಮೃಗ ಎಂದು ತಿಳಿದು ಕೊಂದುಬಿಟ್ಟನು. ರಾಮದೇವರ ಉತ್ತಮ ಬಾಣದಿಂದ ಹೊಡೆಸಿಕೊಂಡು ಭೂಮಿಮ್ಯಾಲೆ ಬೀಳುವಾಗ ಪಾಪಾತ್ಮಕನಾದ ಮಾರೀಚನು ದುಃಖದಿಂದ ಲಕ್ಷ್ಮಣನ ಕುರಿತು ಒದರಿದನು. ಏನಂತ—'ಹೋ ಲಕ್ಷ್ಮಣಾ' ಎಂದು ದೊಡ್ಡಧ್ವನಿಯಿಂದ ಕೂಗಿದನು. ಏನು ಕಾರಣವೆಂದರೆ ಲಕ್ಷ್ಮಣ ಬಾಹೋದರಿಂದ ರಾವಣಗೆ ಸಾವಕಾಶವಾಗಬೇಕಾಗಿ ಒದರಿದನು. ಮಾರೀಚ ಸತ್ತನು. ಈ ಮಾತು ಸೀತಾದೇವಿ ಕೇಳಿ 'ರಾಮಗೆ ಅಕ್ಷೇಮವಾಗಿದ್ದೀತು ಎಲೈ ಲಕ್ಷ್ಮಣ ರಾಮ ಎಲ್ಲಿದ್ದಾನೆ ಅಲ್ಲಿಗೆ ಹೋಗಿ ಶೀಘ್ರ ರಾಮನ ವಾರ್ತಿ ತಿಳಿ' ಎನಲಿಕ್ಕೆ, 'ಎಲೌ ತಾಯಿ ಅಮ್ಮಾ, ನಮ್ಮ ಸ್ವಾಮಿ ಹದಿನಾಲ್ಕು ಲೋಕಕ್ಕೆ ಅರಸು. ಮುಖ್ಯ ನಮ್ಮ ಒಡಿಯಗೆ ಅಕ್ಷೇಮವುಂಟಿ! ಇಂಥಾ ಮಾತು ಆಡಬ್ಯಾಡ' ಎನಲಿಕ್ಕೆ 'ನಿನ್ನ ಮನಸ್ಸಿನಲ್ಲಿ ರಾಮ ಸಾಯಬೇಕು ನೀ ನನಗೆ ಪತಿಯಾಗಬೇಕು ಹೀಂಗೆ ಸಂಕಲ್ಪ ಮಾಡಿದ್ದೀಯಾ ಏನು?' ಈ ಪ್ರಕಾರ ನುಡಿದ ಸೀತಾದೇವಿಯ ಉಗ್ರವಚನ ಕೇಳಿ ಲಕ್ಷ್ಮಣ ಧನುರ್ಬಾಣಗಳ ಕೈಲಿ ತಕ್ಕೊಂಡು ರಾಮದೇವರು ಪೋದ ಮಾರ್ಗದಲ್ಲಿ ಹೋಗಿದ್ದ ಅದೇ ಮಾರ್ಗ ಹಿಡಿದುಕೊಂಡು ಹೋದನು.

ಈ ಪ್ರಕಾರ ಚರಿತ್ರ ಮಾಡಿದ್ದರಿಂದ ಸೀತಾರಾಮರಿಗೆ ಅಜ್ಞಾನ ಬಂತಲ್ಲ ಎಂದಲ್ಲ, ಸರ್ವ ಪುರಾಣಗ್ರಂಥ ತಾತ್ಪರ್ಯದರ್ಶನದಿಂದ ಪರಿಹರಿಸಥಾರೆ. ರಾಮ ಅಸುರನ ಬೆನ್ನಟ್ಟಿ ಅಜ್ಞಾನಿಯೋಪಾದಿಯಲ್ಲಿ ಹೋದಾತನಲ್ಲ. ಹಾಂಗೆ ಸೀತಾದೇವಿ ತನ್ನ ಗಂಡನ ಚಿತ್ತವೃತ್ತಿ ಬಲ್ಲಾಕಿ. ಆದಕಾರಣ ಅಸುರಜನ ಮೋಹಿಸಬೇಕಾಗಿ ಇಂಥಾ ಉಗ್ರಮಾತಾಡಿದಳಲ್ಲದೆ, ಸೀತಾರಾಮರಿಗೆ ಅಜ್ಞಾನಾದಿ ದೋಷಗಳಿಲ್ಲ. ಸೀತಾದೇವಿ ದೇವರ ಅನುಗ್ರಹಕ್ಕೆ ಪಾತ್ರಳಾದಕಾರಣ ಸಕಲ ಜಗತ್ತಿನಲ್ಲಿ ಆಗೋ ವ್ಯಾಪಾರ ಅಭಿಪ್ರಾಯ ಒಲ್ಲಳು ಸರಿಯೆ, ಬ್ರಹ್ಮಾದಿಗಳ ಒಡಿಯನಾದಂಥ ಸ್ವಾಮಿ ಅವತಾರಗಳಲ್ಲಿ ಸಾವ ದಾವ ಪ್ರಕಾರ ಲೀಲಾಗಳ ತೋರಸಥಾನೆ ಸರ್ವೋತ್ತಮನ ಚಿತ್ತಗತ ಅಭಿಪ್ರಾಯ ತಿಳಿದು, ಅದೇ ಪ್ರಕಾರ ಲಕ್ಷ್ಮೀದೇವಿಯು ನಾರಾಯಣನ ಅನುಸರಿಸಿ ಅದೇ ಪ್ರಕಾರ ಲೀಲ ತೋರಿಸಥಾಳೆ. ಈ ರೀತಿ ಲೋಕಕ್ಕೆ ವಿಡಂಬನ ತೋರಿಸಥಾನೆ. ಪರಮಾತ್ಮನಾದಂಥ ನಾರಾಯಣಗೆ, ಲಕ್ಷ್ಮೀದೇವಿಗೆ ಅಣುಮಾತ್ರ ಅಜ್ಞಾನಾದಿ ದೋಷಗಳ ತಿಳಿಯಬಾರದು. ಲಕ್ಷ್ಮೀ-ನಾರಾಯಣರು ತಮ್ಮ ಉತ್ಕೃಷ್ಟವಾದ ಸಾಮರ್ಥ್ಯ, ಜಗತ್ತಿಗೆ ತಮ್ಮ ಮನಬಂದಹಾಂಗೆ ತೋರಸಥಾರೆ. ಲಕ್ಷ್ಮೀ-ನಾರಾಯಣರ ಕಡೆಗಣ್ಣ ನೋಟದಿಂದ ಸೃಷ್ಟಿ ಪಾಲನ ಸಂಹಾರ ಅನಾದ್ಯನಂತ ಕಾಲದಲ್ಲಿ ಪ್ರವಾಹರೂಪದಿಂದ ಆಗತಿರತದೆ. ಮೋಕ್ಷಪ್ರದನಾದ ನಾರಾಯಣ ತನ್ನ

ಭಕ್ತರ ಅನಾದಿಕಾಲದ ಸಂಸಾರರೋಗ ಪರಿಹರಿಸಿ ಮೋಕ್ಷಾದಿ ಪುರುಷಾರ್ಥ ಕೊಡಥಾನೆ. ಇಂಥಾ ಸರ್ವೇಶ್ವರ, ಅಜ್ಞಾನಿಯೋಪಾದಿ ಆಪತ್ತು ಅನುಭವಿಸಥಾನೆಂಬೋ ಹಾಂಗೆ ಪ್ರತ್ಯಕ್ಷ ಏನುಕಾರಣ ತೋರಿಸಥಾನೆಂದಲ್ಲಿ, ಜಗತ್ತಿಗೆ ವಿಡಂಬನ ದುಷ್ಟಜನ ಮೋಹನಾರ್ಥವಾಗಿ ದೇವತಿಗಳು, ಮನುಷ್ಯರು ಅನುಭೋಗಿಸಥಾರೆ ಎಂದು, ಲಕ್ಷ್ಮೀ-ನಾರಾಯಣರು ಲೋಕಕ್ಕೆ ಅಣಕವಾಡಿ ತೋರಿಸಿದ್ದಾರೆ. ಈ ಪ್ರಕಾರ ತಾತ್ಪರ್ಯ ಹೇಳಿ, ಇನ್ನು ಕಥಾಭಾಗ ಹೇಳಥಾರೆ.

ರಾವುನ ಪ್ರವೃತ್ತಿ ತಿಳಿಯಬೇಕಾಗಿ ಸೀತಾದೇವಿಯ ಉಗ್ರವಚನ ಲಕ್ಷ್ಮಣ ಕೇಳಿ, ಧನುರ್ಬಾಣ ಕೊಂಡು ರಾವುನ ಸವೀಪಕ್ಕೆ ಹೋದವ್ಯಾಲೆ ಸೀತಾದೇವಿ, ತನ್ನ ಪರ್ಣಶಾಲಿಯೊಳಗೆ ರಾವುನ ಗುಣಗಳೇ ಧ್ಯಾನವಾಡುತ್ತಿರಲಾಗಿ ಆ ಸ್ಥಳಕ್ಕೆ ರಾವಣ ಬಂದಾನೆ. ರಾವಣ ದಾವ ರೂಪದಿಂದ ಬಂದನೆಂದರೆ ತನ್ನ ಅಸುರರೂಪ ಬಿಟ್ಟುಕೊಟ್ಟು ಕಪಟರೂಪದಿಂದ ಸನ್ಯಾಸಿಯಾಗಿ ಸೀತಾದೇವೀ ಸವೀಪಕ್ಕೆ ಬರಲಾಗಿ ಅಶಕ್ಯಶಕ್ತಿಯುಳ್ಳಂಥ ಸೀತಾದೇವಿ ಆ ಕ್ಷಣದಲ್ಲಿ ರಾವಣನ್ನ ಕೊಲ್ಲಲಾಪಳೆ. ಆದರೂ ಭಾವಿಕಾರ್ಯ ಬಲ್ಲಾಕೆಯಾದ್ದರಿಂದ, ರಾವಣ ಬರಲಿಕ್ಕೆ ಅದೃಶ್ಯಳಾದಳು. ಬ್ರಹ್ಮಾದಿ ಜಗತ್ತಿಗೆ ತಿಳಿಯಲಿಕ್ಕೆ ಶಕ್ಯಳಲ್ಲ. ಭಿಕ್ಷುಕನಾದಂಥ ರಾವಣನ ಕಣ್ಣಿಗೆ ವಿಷಯಳಾಗಬಲ್ಲಳೆ! ಆದಕಾರಣ ಆ ಕ್ಷಣದಲ್ಲಿ ತನ್ನ ರೂಪವಾದಂಥ ತದಾಕಾರ ಸೀತಾ ಪ್ರತಿಕೃತಿ ನಿರ್ಮಾಣ ಮಾಡಿ ಆ ಸ್ಥಳದಲ್ಲಿಟ್ಟು ಸೀತಾದೇವಿ ಕೈಲಾಸಕ್ಕೆ ಹೋಗಿಹಾಳೆ. ಕೈಲಾಸಕ್ಕೆ ಹೋಗಲಿಕ್ಕೆ ಕಾರಣವೇನೆಂದಲ್ಲಿ, ಪಾರ್ವತೀ-ಪರಮೇಶ್ವರರು ಬಹುಕಾಲ ತಪಸ್ಸು ಮಾಡಿದ್ದರು. ತಾವು ಅಚ್ಚ ಲಕ್ಷ್ಮೀ-ಪೂಜಿ ಮಾಡೇವೆಂದು ತಪಸ್ಸು ಮಾಡಿದ್ದ ಕಾರಣ, ಅವರ ಕೈಯ ಪೂಜಿ ಕೊಳ್ಳಬೇಕಾಗಿದ್ದು ಕೈಲಾಸಕ್ಕೆ ಹೋಗಿ, ಸೀತಾದೇವಿಯು ಉಮಾ-ಮಹೇಶ್ವರರ ಕೈಯ ಪೂಜಿ ಮಾಡಿಸಿಕೊಳ್ಳಲ್ಪಟ್ಟಂಥ ಪಾದಕಮಲ ಉಳ್ಳಾಕಿಯಾಗಿ ವಾಸವನ್ನು ಮಾಡಿದಳು.

ಸೀತಾದೇವಿ ತನ್ನ ಪ್ರತಿಬಿಂಬ ಮಾಡಿಟ್ಟು ಹೋಗಿದ್ದಳು. ಪ್ರತಿಬಿಂಬ ಜಡವಲ್ಲವೆ, ವಚನಾದಿ ವ್ಯವಹಾರ ಹ್ಯಾಂಗೆ ಕೂಡೀತು ಎಂದಲ್ಲಿ ಆ ಸೀತಾಪ್ರತಿಕೃತಿಯೊಳಗೆ, ದೇವೇಂದ್ರ ತಾನು ಸೇವಿ ಮುಟ್ಟಿಸಬೇಕಾಗಿ ಪ್ರವಿಷ್ಟನಾದನು. ಏನು ಕಾರಣವೆಂದರೆ ಚೇಷ್ಟಾವ್ಯವಹಾರ ಪ್ರವೃತ್ತಿ ನಿಮಿತ್ತವಾಗಿ ನಮಸ್ಕಾರಾದಿ ಪೂಜಿ ತೆಗೆದುಕೊಳ್ಳಲಿಕ್ಕೆ ಯೋಗ್ಯವಾದಂಥ, ಹಾಂಗೆ ರಾವಣಗೆ ಅತಿದ್ರೋಹ ಪ್ರಾಪ್ತ್ಯರ್ಥವಾಗಿ ಸೀತಾಸನ್ನಿಧಾನದಿಂದ ಯುಕ್ತವಾದಂಥ ಪ್ರತಿಮೆಯಲ್ಲಿ ಇಂದ್ರ ಪ್ರವೇಶ ಮಾಡಿದನು. ದೇವೇಂದ್ರ ಸೀತಾಪ್ರತಿಕೃತಿಯಲ್ಲಿ ಪ್ರವೇಶವಾಗಲಾಗಿ ಚೇಷ್ಟಾವ್ಯವಹಾರ ಪ್ರವೃತ್ತಿಗಳಾದವು. ಅಂಥಾ ಸೀತಾ ಪ್ರತಿಕೃತಿಯ ಅಸುರಶ್ರೇಷ್ಠನಾದಂಥ ರಾವಣ ಆಕಾಶಮಾರ್ಗದಿಂದ ಕೊಂಡು ಹೋಗಲಾಗಿ ಮಾರ್ಗದಲ್ಲಿ ಜಟಾಯು

ಎಂಬೋ ಪಕ್ಷಿ, ರಾವಣ ಹೋಗೋದು ಕಂಡನು. 'ಸೀತಾದೇವೀನ್ನ ಖೇಚರ-ಮಾರ್ಗದಿಂದ ರಾವಣ ಕೊಂಡುಹೋಗಥಾನೆ. ನನ್ನ ಗೆಳಿಯ ದಶರಥರಾಯಗೆ ಸೊಸಿ ಆಗಬೇಕು. ನನ್ನ ಗೆಳಿಯನ ಸೊಸಿಯನ್ನು ಕೊಂಡು ಹೋಗಥಾನೆ' ಎಂದು ತನ್ನ ಸರ್ವಶಕ್ತಿ ಮೀರಿ ಚುಂಚುಪುಟದಿಂದ ರಾವಣನ ಕೂಡ, ಸೀತಾ ನಿಮಿತ್ತವಾಗಿ ಅತಿ ಪ್ರಯಾಸದಿಂದ ಯುದ್ಧ ಮಾಡಿದನು. ಸೀತಾದೇವೇರ ತೆಗೆದುಕೊಂಡು ಹೋಗೋದರಲ್ಲಿ ನಿವಾರಿತನಾದ ರಾವಣ, ಜಟಾಯು ಎಂಬ ಹೆಸರುಳ್ಳಂಥ ರಾಮ-ಭಕ್ತನಾದ ಪಕ್ಷಿಯನ್ನು ಹತಪ್ರಾಯನ್ನ ಮಾಡಿ ಮುಂದಕ್ಕೆ ಸೀತಾದೇವೀ ಕೊಂಡು ಹೋಗಥಾನೆ. ಮಾರ್ಗದಲ್ಲಿ ಹನುಮಂತ ಕಂಡ. ತಮ್ಮ ಒಡತಿ, ಬ್ರಹ್ಮಾದಿ ಜಗತ್ತಿಗೆ ತಾಯಿಯಾದಂಥ ಸೀತಾದೇವಿಯ ರಾವಣ ಕೊಂಡುಹೋಗಥಾನೆಂದು ತನ್ನ ಸಾಮರ್ಥ್ಯದಿಂದ ಹನುಮಂತ, 'ರಾವಣನಮ್ಯಾಲೆ ಬರಲಾಗಿ ಸುಗ್ರೀವ ನಿವಾರಿಸಿದ. ಅದೇ ನಿಮಿತ್ತ ಮಾಡಿಕೊಂಡು ರಾವಣನ ಸಂಹಾರ ಏನುಕಾರಣ ಮಾಡಲಿಲ್ಲ, ಸುಗ್ರೀವ ಏನುಕಾರಣ ನಿವಾರಿಸಿದನು ಎಂದಲ್ಲಿ, ರಾವಣ ಮಹಾ ಸಮರ್ಥನಿದ್ದಾನೆ ಅವನ ಕೂಡ ಯುದ್ಧಕ್ಕೆ ಹೋಗಬ್ಯಾಡ ಎನಲಾಗಿ ಹನುಮಂತ ಸುಗ್ರೀವನ ಮಾತಿನ ಮ್ಯಾಲೆ ನಿಂತನಲ್ಲ ಅದಕ್ಕೆ ಸಾಲ್ಮು ನಿಮಿತ್ತ ಹೇಳಥಾರೆ. ~~ಹನುಮಂತ ದೇವತಾಕಾರ್ಯ ಬಲ್ಲ. ಮುಂದೆ ಅಪಾರ ಅಸುರರು ಸಾಯುಬೇಕಾಗೇದೆ.~~ ಅದಲ್ಲದೆ ಜಯ-ವಿಜಯರಿಗೆ ಸನಕಾದಿಗಳ ಶಾಪವಾಗೇದೆ. ಮೂರು ಜನ್ಮದಲ್ಲಿ ತಾನೇ ಕೊಂದೇನೆಂದು ದೇವರ ವಚನವದೆ. ಸ್ವಾಮಿ ಮಾಡೋ ಕಾರ್ಯ ಭೃತ್ಯರು ಮಾಡಬಾರದೆಂದು ಸುಗ್ರೀವನ ಮಾತು ಮನ್ನಿಸಿದ್ದು. ರಾವಣನ ತಾ'ಕೊಲ್ಲಲಾಪ. ದೇವರು ಮಾಡುವ ಕಾರ್ಯವನ್ನು ತಾನು ಮಾಡಬಾರದೆಂದು ಮಾಡಿದ್ದಿಲ್ಲ. ಸೀತಾ ನಿಮಿತ್ತ ಸೇತುವಿ ಕಟ್ಟಿ ರಾಮದೇವರು ರಾವಣಾದಿ ರಾಕ್ಷಸರ ಕೊಲ್ಲ-ಬೇಕಾಗೇದೆ. ಸ್ವಾಮೀ ಕೀರ್ತಿ, ಜಗತ್ತಿನೊಳಗೆ ರಾಮಾಯಣದಿಂದ ಪಸರಿಸ-ಬೇಕಾಗೇದೆ. ಆದಕಾರಣ ಸುಗ್ರೀವ ಬ್ಯಾಡ ಅಂದದ್ದೀ ನಿಮಿತ್ತ ಮಾಡಿಕೊಂಡು ರಾವಣನ ಸಮೀಪಕ್ಕೆ ಹೋಗದೆ, ಹನುಮಂತ ಸುಮ್ಮನೆ ನಿಂತನು. ರಾವಣ, ತರುವಾಯ ಸೀತಾ ಪ್ರತಿಕೃತಿ ಕೊಂಡು ಲಂಕಾಪಟ್ಟಣಕ್ಕೆ ಹೋದನು. ಲಂಕೆಗೆ ಒಯ್ದು ಅಶೋಕವನದಲ್ಲಿ ಸೀತಾ ಪ್ರತಿಕೃತಿ ಇಟ್ಟನು. ಮುಂದೆ ರಾಮನ ಪ್ರವೃತ್ತಿ ಹೇಳಥಾರೆ.

ಸ್ವಾಮಿ ಸರ್ವೋತ್ತಮ ದೇವತಿ, ಲೋಕಕ್ಕೆ ಅಣಕಮಾಡಿ ತೋರಿಸಬೇಕಾಗಿ ಕಾಮುಕಪುರುಷ ಹೆಂಡತಿ ಮಾತು ಈ ರೀತಿ ಕೇಳಥಾನೆಂದು ತೋರಿಸಬೇಕಾಗಿ ಮಾರೀಚನ ಬೆನ್ನಟ್ಟಿಹೋಗಿ, ಅತ್ಯಂತ ದುಷ್ಟನಾದಂಥ ರಾಕ್ಷಸನ ಕೊಂದು ರಾಮ-ಲಕ್ಷ್ಮಣರು ತಮ್ಮ ಪರ್ಣಶಾಲಿಗೆ ಬರಥಾರೆ. ತನ್ನ ಹೆಂಡತಿಯಾದ ಸೀತಾದೇವಿ ಕಾಣಿಸೋದಿಲ್ಲ. ಸ್ವಾಮಿ ಜಗದಂತರ್ಯಾಮಿ ಸಕಲ ಸ್ಥಾವರ ಜಂಗಮ ಪ್ರಾಣಿಗಳ

ಪ್ರವೃತ್ತಿ ತಾ ಬಲ್ಲನು ಸರಿಯೆ, ಚೇತನಾಚೇತನಕ್ಕೆ ಒಡಿಯನಾದಂಥ ರಮಾಪತಿ ತನ್ನ ಹೆಂಡತಿ ಸೀತಾದೇವಿ ತನ್ನ ಹತ್ತಿರಲೇ ಇದ್ದರೂ ಹೆಂಡತಿ ಕಾಣದೆ, ಅಜ್ಞಾನಿಜನಕ್ಕೆ ಅಣಕವಾಡಿ ತೋರಿಸಬೇಕಾಗಿ ಶೋಕ ಮೋಹ ಬಹಳ ಮಾಡಿ ತೋರಿಸಿದ್ದಾನೆ. ಅನಂತ ಜೀವರಾಶಿಗೆ ಸ್ವಾಮೀ ವಿಯೋಗವಿಲ್ಲ. ದೇಶತಃ ಕಾಲತಃ ವ್ಯಾಪ್ತಳಾದಂಥ ಲಕ್ಷ್ಮೀದೇವಿಗೆ ವಿಯೋಗವಿಲ್ಲದಿದ್ದರೂ, ಅಜ್ಞಾನಿಗಳು ಹೆಂಡತಿ ಹೋಗಾಡಿಸಿ-ಕೊಂಡು ಪ್ರಲಾಪ ಮಾಡುವಂತೆ ಅಣಕ ಮಾಡಿದ್ದಾನೆ. 'ನನ್ನ ಹೆಂಡತಿ ಸೀತಾ-ದೇವೀನ್ನ ಕಂಡಿದ್ರಾ್ಯ' ಎಂದು ನಾನಾ ವೃಕ್ಷಗಳಿಗೆ ಬಳ್ಳಿಗಳಿಗೆ ಪುಷ್ಪಗಳಿಗೆ ಗಿರಿಗಳಿಗೆ ಪಕ್ಷಿಗಳಿಗೆ ಕೇಳತಾ, ಹುಡಕತಾ, ಹೆಂಡತಿ ವಿಯೋಗದುಃಖ ಅಜ್ಞಾನಿಜನಕ್ಕೆ ತೋರಿಸತಾ ಹೋಗಲಾಗಿ ಮಾರ್ಗದಲ್ಲಿ, ಸೀತಾದೇವಿ ರಕ್ಷಿಸೇನೆಂತ ಇಚ್ಛೈವಾಡಿ ಜಟಾಯು ಪಕ್ಷಿಯು ಯುದ್ಧವಾಡಿ, ವೈರಿಯಾದ ರಾವಣನ ಬಾಣದಿಂದ ಹೊಡೆಸಿ ಕೊಂಡು ಹೋಗಲ್ಪಟ್ಟ ಸಾಮರ್ಥ್ಯದಿಂದ ನಿಶ್ಚೇತನದಿಂದ ಬಹಳ ವ್ಯಥೆಯಿಂದ ಬಿದ್ದಂಥ ಪಕ್ಷಿಯ ಕಂಡನು. ಜಟಾಯು ಪಕ್ಷಿ, ರಾಮ ಬಂದನೆಂದು ಶರಣುಹೊಕ್ಕು ನೂತನಾಡಿದ. 'ಎಲೈ ಸ್ವಾಮಿ, ನೀನು ನನ್ನ ಗೆಳೆಯನ ಮಗನಾಗಬೇಕು. ಸೀತಾದೇವಿಯ ರಾವಣ ಕೊಂಡುಹೋಗಲಾಗಿ, ದೇವಿಯನ್ನು ರಕ್ಷಿಸೇನೆಂದು ನನ್ನ ಶಕ್ತಿಮೀರಿ ಯುದ್ಧ ಮಾಡಿದೆ. ರಾವಣಾಸುರ ಮಹಾ ಪ್ರಬಲನಾದ ಕಾರಣ ಸೀತಾ ಕೊಂಡುಹೋದ' ಈ ಪ್ರಕಾರ ಸೀತಾ ವಾರ್ತೆ ಹೇಳಿ 'ರಾಮರಾಮ' ಎಂದು ಸ್ಮರಣೆ ಮಾಡತಲೇ ಪ್ರತ್ಯಕ್ಷ ಸ್ವಾಮೀ ಎದುರಿಗೆ ಪ್ರಾಣತ್ಯಾಗಮಾಡಿದನು. ಈ ಪ್ರಕಾರ ಪಕ್ಷಿಮುಖದಿಂದ ಸುದ್ದಿ ಕೇಳಿ, ಸತ್ತಂಥ ಜಟಾಯುಪಕ್ಷಿ ತನ್ನ ಶರಣ ಸೀತಾನಿಮಿತ್ತ ಪ್ರಾಣತ್ಯಾಗ ಮಾಡಿದ್ದಾನೆ. ಅಲ್ಲದೆ ತಮ್ಮ ತಂದಿಗೆ ಗೆಳೆಯನಾಗ-ಬೇಕು. ಆದಕಾರಣ ರಾಮ, ಲಕ್ಷ್ಮಣನ ಕೂಡಿ ಜಟಾಯು ಪಕ್ಷಿಗೆ ಅಗ್ನಿಸಂಸ್ಕಾರ ಮಾಡಿ ತನ್ನ ಉತ್ತಮಲೋಕಕ್ಕೆ ಕಳುಹಿ, ಲಕ್ಷ್ಮಣನಿಂದ ಯುಕ್ತನಾಗಿ ಮತ್ತೆ ಕೆಲವು ಆಶ್ರಮಗಳಲ್ಲಿ ಸಂಚಾರ ಮಾಡತ, ಮುಂದಕ್ಕೆ ಬರಥಾನೆ.

ಮಾರ್ಗದಲ್ಲಿ ಕಬಂಧನೆಂಬ ರಾಕ್ಷಸನ ಕೈಯೊಳಗೆ ಸಿಕ್ಕರು. ಆ ಕಬಂಧ ರಾಕ್ಷಸ ಬ್ರಹ್ಮದೇವರ ವರಬಲದಿಂದ ಮಹಾ ಪ್ರಬಲನಾಗಿ ಎರಡೂ ಕೈಗಳ ಹರಿ-ಬಿಟ್ಟಿಹ. ತನ್ನ ಕೈಯೊಳಗೆ ದಾರು ಸಿಕ್ಕಾರು, ಅವರನ್ನೆಲ್ಲ ತನ್ನ ಬಾಯೊಳಗೆ ಹಾಕಿಕೊಳ್ಳತಿಹ. ಈ ರೀತಿ ಸರ್ವಪ್ರಾಣಿಗಳಿಗೆ ಮೃತ್ಯುರೂಪನಾಗಿ ಇರತಿರಲಿಕ್ಕೆ ದೇವೇಂದ್ರ ಅವನ ತಲೀ ಮ್ಯಾಲೆ ವಜ್ರಾಯುಧ ಹಾಕಲಾಗಿ, ಆ ಕಬಂಧನ ತಲೀ ಹೊಟ್ಟೆಯೊಳಗೆ ಬಿದ್ದುಹೋಯಿತು. ಆದರೂ ತನ್ನ ಪ್ರವೃತ್ತಿ ಬಿಡದೆ ತನ್ನ ಕೈಯೊಳಗೆ ಸಿಕ್ಕಿದವರನ್ನೆಲ್ಲ ತನ್ನ ಬಾಯೊಳಗೆ ಹಾಕಿಕೊಂಬ. ಲಕ್ಷ್ಮಣನಿಂದ ಸಹಿತನಾದ ರಾಮದೇವರು, ಅವನ ಎರಡು ತೋಳೂ ಬಾಣಗಳಿಂದ ಕಡಿದು-ಬಿಟ್ಟನು. ಲಕ್ಷ್ಮಣನಿಂದ ದಹನ ಮಾಡಿಸಿದನು. ಪೂರ್ವದಲ್ಲಿ ಹ್ಯಾಂಗೆ ದೇವೇಂದ್ರನ

ಭೃತ್ಯನಾಗಿದ್ದನೋ ಅದೇ ಪ್ರಕಾರ ಮಾಡಿದನು. ಈ ಕಬಂಧ ಪೂರ್ವದಲ್ಲಿ ದಾರು ಎಂದರೆ ದನು ಎಂಬ ಗಂಧರ್ವ, ತ್ರಿಜಟೆಯೆಂಬ ರಾಕ್ಷಸಿಯಲ್ಲಿ ಹುಟ್ಟಿದ. ಸರ್ವೋತ್ತಮ ದೇವತಿ ರಾಮನ ಸ್ಪರ್ಶವಾಗಲಿಕ್ಕೆ ರಾಕ್ಷಸಜನ್ಮ ಹೋಗಿ ದನು ಎಂಬ ಗಂಧರ್ವನಾಗಿ, ಪೂಜಾಸಾಧನದ್ರವ್ಯಗಳಿಂದ ರಘುಪತಿ ಪೂಜಿ ಮಾಡಿ ತನ್ನ ಗಂಧರ್ವಲೋಕಕ್ಕೆ ಹೋದ.

ಸ್ವಾಮಿ, ಗಂಧರ್ವನ ಕೈಯ ಪೂಜಿಗೊಂಡು ಮುಂದಕ್ಕೆ ಹೋಗಥಾನೆ. ಮಾರ್ಗದಲ್ಲಿ ಶಬರೀ ಎಂಬ ಸ್ತ್ರೀ—ಶಬರಜಾತಿಯಲ್ಲಿ ಹುಟ್ಟಿದ್ದಳು. ಅದರಿಂದ ಅದೇ ಸ್ತ್ರೀಹೆಸರು ಉಳ್ಳಂಥ ಸ್ತ್ರೀಯು—ರಾಮದೇವರನ್ನು ಕಂಡು ಈತನೇ ಸರ್ವೋತ್ತಮ ದೇವತಿ ಸಾಕ್ಷಾತ್ ನಾರಾಯಣನೆಂದು ತಿಳಿದು, ಸ್ವಾಮಿ ಮುಂದೆ ಅಗ್ನಿಪ್ರವೇಶವನ್ನು ಮಾಡಿ ದೇಹತ್ಯಾಗ ಮಾಡಿದಳು. ರಾಮದೇವರು ಸ್ವಸ್ಥಾನಕ್ಕೆ ಕಳುಹಿದರು. ಆ ಶಬರಿಯು ಪೂರ್ವದಲ್ಲಿ ಮಾತಂಗಋಷಿ ಮುಖದಿಂದ ರಾಘವ ಇಲ್ಲಿಗೆ ಬರಥಾನೆಂದು ಕೇಳಿದ್ದಳು. ಆತನ ಆಶ್ರಮದಲ್ಲಿ ಮಾರ್ಗ ನೋಡತ ಕುಳಿತು ರಾಮದೇವರನ್ನು ಕಂಡು, ಈ ಪಾಪಿದೇಹ ತ್ಯಾಗಮಾಡೇನೆಂದು ಬಹುಕಾಲ ಬಯಕೆಯುಳ್ಳಾಕೆಯಾಗಿ ಭಯರಹಿತಳಾಗಿ ಇದ್ದಳು. ಶಬರೀ ಎಂದು ವನದಲ್ಲಿ ಪ್ರಸಿದ್ಧಳಾದಂಥಾಕೆ, ಆಕೀ ಮ್ಯಾಲೆ ದೇವರ ಅನುಗ್ರಹವಾಗಲಿಕ್ಕೆ ಕಾರಣವೇನು, ಪೂರ್ವದಲ್ಲಿ ಆಕೆ ದಾರೆಂದರೆ, ಉತ್ತಮರೂಪಳಾದ ಅಪ್ಸರಸ್ತ್ರೀ. ಆಕೆಗೆ ಈ ರೂಪ ಬರಲಿಕ್ಕೆ ಕಾರಣವೇನೆಂದರೆ, ದೇವೇಂದ್ರಗೆ ತನ್ನ ಹಾವಭಾವ ವಿಲಾಸಗಳನ್ನು ತೋರಿಸಲಾಗಿ ಶಚೀದೇವಿಗೆ ಸಿಟ್ಟು ಬಂತು. 'ನಾನು ನಿಜಸ್ತ್ರೀ ಇರಲಿಕ್ಕೆ ನನ್ನ ಗಂಡಗೆ ಹಾವಭಾವ ವಿಲಾಸಗಳ ತೋರಿಸಬೇಕೆ' ಎಂದು ಕೋಪದಿಂದ ಶಾಪ ಕೊಟ್ಟಳು. ಅದರಿಂದ ಶಬರಜಾತಿಯಲ್ಲಿ ಹುಟ್ಟಿದಳು. ಸ್ವಾಮಿ ರಘುನಾಥ ತನ್ನ ದರ್ಶನಮಾತ್ರದಿಂದ, ಶಬರೀ ಜನ್ಮ ಪರಿಹರಿಸಿ ದಿವ್ಯರೂಪ ಉಳ್ಳಾಕೆಯನ್ನು ಮಾಡಿ, ಅಪ್ಸರಸ್ತ್ರೀನ ಅವಳ ಲೋಕಕ್ಕೆ ಕಳುಹಿದನು.

ಅಲ್ಲಿಂದ ರಾಮಲಕ್ಷ್ಮಣರು ಋಷ್ಯಮೂಕಪರ್ವತಕ್ಕೆ ಬರಲಾಗಿ ಹನುಮಂತ ದೇವರು ಒಬ್ಬ, ಶ್ರೀರಾಮ ಸಾಕ್ಷಾತ್ ಸರ್ವೋತ್ತಮ ಬ್ರಹ್ಮಾದಿ ಜಗತ್ತಿಗೆ ಸ್ವಾಮಿ ಎಂದು ಚೆನ್ನಾಗಿ ತಿಳಿದನು. ಸುಗ್ರೀವನ ಪರಿಗ್ರಹ ಮಾಡಿ, ವಾಲಿಯನ್ನು ಸಂಹಾರ ಮಾಡಥಾನೆಂದು ಮುಂದಿನ ಕಥಾ ಹೇಳಲ್ಪಡತದೆ. ಇಂದ್ರಾವತಾರನಾದ ವಾಲಿ ಉತ್ತಮ. ಈತನ ಪಕ್ಷಪಾತದಿಂದ ಸೂರ್ಯನವತಾರನಾದಂಥ ಅಧಮ ಸುಗ್ರೀವನ್ನ ಕೊಲ್ಲಬೇಕು. ಅದು, ಬಿಟ್ಟು, ಏನುಕಾರಣ (ವಾಲಿಯನ್ನು ಕೊಲ್ಲಬೇಕೆಂದು) ಮಾಡಿದನೆಂದರೆ, ಪರಿಹರಿಸಥಾರೆ. ಪರಿಗ್ರಹಣ ಮಾಡೋದರಲ್ಲಿ ಉತ್ತಮತ್ವವು ಪ್ರಯೋಜನವಿಲ್ಲ. ಉಚ್ಚತ್ವವಾಗಲಿ ನೀಚತ್ವವಾಗಲಿ, ಮುಖ್ಯಪ್ರಾಣದೇವರು ದಾರನ್ನ ಪರಿಗ್ರಹಣ ಮಾಡಥಾರೆ, ಅದೇ ಪ್ರಕಾರ ಮಾಡೋಣವೇ ದೇವರಿಗೆ

ಮುಖ್ಯಕಾರಣ. ಏಕೆಂದರೆ, ಮುಖ್ಯಪ್ರಾಣನ ವ್ಯಾಲಿ ಸ್ವಾಮಿಯ ಪ್ರೀತಿ ಬಹಳ ಇದೆ. ದೇಹಧಾರಿಗಳಾದಂಥ ಸರ್ವಸ್ಥಾವರ ಜಂಗಮ ಜಗತ್ತಿನಲ್ಲಿ ಹರಿ, ಮುಖ್ಯ-ಪ್ರಾಣ ಇಬ್ಬರೂ ಇದ್ದಾರೆ. ಎಲ್ಲಿ ಮುಖ್ಯಪ್ರಾಣ ಪ್ರವರ್ತಿಸಥಾನೆ ಅಲ್ಲಿ, ಹರಿ ಪ್ರವರ್ತಿಸಥಾನೆ. ಒಬ್ಬರ ಬಿಟ್ಟು ಒಬ್ಬರು ಪ್ರವರ್ತಿಸುವವರಲ್ಲ. ಇದಕ್ಕೆ ಪ್ರಮಾಣವದೆ ಅಂತ ಹೇಳಥಾರೆ. **'ಕಸ್ಮಿನ್ನಹಮುತ್ಕ್ರಂತೇ ಉತ್ಕ್ರಮಿಷ್ಯಾಮಿ। ಕಸ್ಮಿನ್ನಹಸ್ಥಿತೇ ಸ್ಥಾಸ್ಯಾಮಿ। ಸ ಪ್ರಾಣಮಸೃಜತ।'** ಇತ್ಯಾದಿ ವೇದ-ವಾಕ್ಯಗಳಲ್ಲಿ ಪ್ರಸಿದ್ಧವಾಗೇದೆ. 'ಕಸ್ಮಿನ್ನಹ'ವೆಂಬ ವೇದವಾಕ್ಯ ಉಪನಿಷತ್‌ನಲ್ಲಿ ಪ್ರಸಿದ್ಧವಾಗೇದೆ. ದೇವಸ್ಥನಾದಂಥ ಹರಿಯು, ವಾಯುರೂಪನಾದಂಥ ಮುಖ್ಯ-ಪ್ರಾಣದೇವರು ಪ್ರವರ್ತಿಸಿದ ಪ್ರಕಾರ ಹ್ಯಾಂಗೆ ಮಾಡಥಾನೋ, ಅವತಾರಗಳಲ್ಲಿಯೂ ಹಾಂಗೇ ಮಾಡಥಾನೆ. ರಾಮಕೃಷ್ಣಾದ್ಯವತಾರಗಳಲ್ಲಿ ಮುಖ್ಯಪ್ರಾಣದೇವರು ಹ್ಯಾಂಗೆ ಮಾಡಥಾನೆ ಅದಕ್ಕೆ ದೇವರು ಅಂಗೀಕಾರಬಡಥಾನೆ. ಅದರಿಂದ ಹನುಮಂತದೇವರು ಸುಗ್ರೀವನ ಸ್ವೀಕಾರ ಮಾಡಿದ ಕಡಿಯಿಂದ, ಸುಗ್ರೀವನ ಸಂರಕ್ಷಣೆ ಮಾಡಿದ. ವಾಲಿಯನ್ನ ಹನುಮಂತ ಸ್ವೀಕಾರ ಮಾಡದ ಕಾರಣ ಸುಗ್ರೀವನಕಿಂತ ವಾಲಿ ಉತ್ತಮನಾದರೂ ಸಂಹಾರ ಮಾಡಿದ. ಭಕ್ತಜನಪ್ರಾಣ, ಮುಖ್ಯಪ್ರಾಣ ದಾರ

ಕಡೀಲಿಹಾನೆ ಆ ಕಡಿಯಲ್ಲಿ ತಾನು ಆಗಬೇಕು ಹೀಂಗೆ ತನ್ನ ಸಂಕಲ್ಪ.

ವಾಲಿ, ಇಂದ್ರಾವತಾರ; ಸುಗ್ರೀವ ಸೂರ್ಯಾವತಾರ; ಮುಂದೆ ಕೃಷ್ಣಾವ-ತಾರದಲ್ಲಿ ವಾಲಿ ಅರ್ಜುನನಾಗಿ ಹುಟ್ಟಿದ್ದಾನೆ. ಸುಗ್ರೀವ ಕರ್ಣನಾಗಿ ಹುಟ್ಟಿದ್ದಾನೆ. ವಾರುತಿ ಅವತಾರನಾದ ಭೀಮಸೇನ ಅರ್ಜುನನ ವಹಿಸಿಕೊಂಡಕಾರಣ, ಕೃಷ್ಣ-ರೂಪನಾದಂಥ ನಾರಾಯಣ ಅರ್ಜುನಗೆ ಸಾರಥಿಯಾಗಿ ತಾನು ರಕ್ಷಿಸಿನ್ದಾನೆ. ಸುಗ್ರೀವನವತಾರನಾದ ಕರ್ಣನ್ನ ಭೀಮು ವಹಿಸದ ಕಾರಣ, ಅರ್ಜುನನ ವೈರಿಯಾದ ಕರ್ಣನ್ನ ಕೊಲ್ಲಿಸಿ ಅರ್ಜುನನ್ನ ರಕ್ಷಿಸಿದ್ದಾನೆ. ಹನುಮಂತನಾದರೋ ಉತ್ತಮನಾದ ವಾಲಿಯನ್ನು ವಹಿಸದೆ ಸೂರ್ಯನವತಾರನಾದ ಸುಗ್ರೀವನ್ನ ಏನುಕಾರಣ ವಹಿಸ-ಬೇಕೆಂದಲ್ಲಿ, ಸುಗ್ರೀವ ವಾಲಿಗಿಂತ ಮುಂದಾಗಿ ಬಂದು ಅನ್ಯೋನ್ಯಭಾವದಿಂದ ಶರಣುಹೊಕ್ಕ. ತಾನು ಶರಣಾಗತರ ಪಾಲಕನಾದ ಕಾರಣ ಸುಗ್ರೀವನ್ನ ವಹಿಸಿ ಕೊಂಡು, ಸ್ವಾಮಿ ತಾ ರಮೇಶ, ತನ್ನ ಅಚ್ಛಿನ್ನ ಭಕ್ತ ಹನುಮಂತ, ವಾಲಿಯನ್ನು ವಹಿಸದ ಕಾರಣ ಸ್ವಾಮಿ ಸುಗ್ರೀವನ್ನ ವಹಿಸಿ, ಶತ್ರು ವಾಲಿಯನ್ನು ಸಂಹರಿ-ಸಿದ್ದಾನೆ. ವಾಲಿ ಪಶ್ಚಾತ್ತಾಪದಿಂದ ಹನುಮಂತಗೆ ಮೊರಿಹೊಕ್ಕದ್ದರಿಂದ, ಕೃಷ್ಣಾವ-ತಾರದಲ್ಲಿ ಅರ್ಜುನನಾಗಿ ಹುಟ್ಟಿದ್ದಾನೆ. ರಾಮಾವತಾರದಲ್ಲಿ ದೇವತೆಗಳ ಅವತಾರರಾದ ಸರ್ವಕಪಿಗಳು ಸುಗ್ರೀವನ್ನಾಶ್ರಯಿಸಲಿಕ್ಕೆ ಕಾರಣರಾದರು. ಕೃಷ್ಣಾವತಾರದಲ್ಲಿ ಭೀಮಸೇನ ಅರ್ಜುನನನ್ನೇ ವಹಿಸಿದ್ದರಿಂದ, ಸಕಲ ದೇವತೆಗಳು ಅರ್ಜುನನನ್ನೇ ಆಶ್ರಯಿಸಿದರು. ಸ್ವಾಮಿ ರಘುನಾಥ, ತನಗೆ ಶರಣು ಬರಲಿಲ್ಲೆಂದು ಸುಗ್ರೀವನ್ನ

ವಹಿಸಿಕೊಂಡು ವಾಲಿಯನ್ನು ಕೊಂದಾತನಲ್ಲ. ಹನುಮಂತನವ್ಯಾಲೆ ಅನುಗ್ರಹಾರ್ಥವಾಗಿ ಸುಗ್ರೀವನ ಸಂರಕ್ಷಣಾರ್ಥವಾಗಿ, ಲಕ್ಷ್ಮಣನಿಂದ ಸಹಿತನಾಗಿ ಋಷ್ಯಮೂಕ ಪರ್ವತಕ್ಕೆ ಬಂದನು. ಸೀತಾದೇವೇರನ್ನ ತೆಗೆದುಕೊಂಡು ಹೋದ ರಾವಣನ ಸಂಹಾರ ಮಾಡಬೇಕಾಗಿ, ಕಪಿಗಳ ಸಹಾಯ ಬೇಡಿಕೊಂಬೋದಕ್ಕೆ ಸುಗ್ರೀವನಲ್ಲಿಗೆ ಬಂದ ಎಂದು ಪುರಾಣಗಳಲ್ಲಿ ಮೋಹಕ ಕಥೆ ಹೇಳತದೆ.

ದಾವ ಶ್ರೀರಾಮನ ಪಾದಕಮಲಗಳಲ್ಲಿ ವಿದ್ಯಮಾನವಾದಂಥ ಧೂಳಿಯು, ಲಕ್ಷ್ಮೀದೇವಿ ಶಿರಸಾ ಧರಿಸಿದ್ದಾಳೆ ಹಾಂಗೆ ಬ್ರಹ್ಮ ರುದ್ರ ದೇವೇಂದ್ರ ಮೊದಲಾಗಿ ಉಳ್ಳ ದೇವತಿಗಳು ಕಿರೀಟಗಳಿಂದ ಯುಕ್ತವಾದ ಮೌಳಿ ಧರಿಸಿದ್ದಾರೆ. ಸರ್ವರಿಗೂ ಈಶ ಸರ್ವೋತ್ತಮನಾದಂಥ ಪರಿಪೂರ್ಣವಾದ ಅನಂತಶಕ್ತಿಯುಳ್ಳಂಥ ಶ್ರೀರಾಮದೇವರಿಗೆ, ಶತ್ರುವಾದ ರಾವಣನ ಸಂಹಾರ ಮಾಡೋದಕ್ಕೆ ಕಪಿಸೇನಾ ಸಹಾಯದಿಂದ ಏನಾಗುವುದು! ಹನುಮಂತನ ವ್ಯಾಲೆ ಅನುಗ್ರಹಾರ್ಥವಾಗಿ ಬಂದನು. ಕಪಿಸೇನಿ ವ್ಯಾಲೆ ದಯಮಾಡಿ ಕಪಿಗಳ ಕೂಡಿ ರಾವಣನ ವ್ಯಾಲೆ ಹೋದನಲ್ಲದೆ ತನ್ನ ಕಣ್ಣುನೋಟದಿಂದ, ಸೃಷ್ಟಿ ಪಾಲನೆ ಸಂಹಾರ ಮಾಡುವಂಥ ಸ್ವಾಮಿಗೆ ಕಪಿಗಳ ಸಹಾಯದಿಂದ ಏನಾಗುವುದು! ತನ್ನ ಲೀಲ ಜಗತ್ತಿಗೆ ತೋರಿಸಬೇಕಾಗಿ, ತನ್ನ ಚರಿತ್ರ ನೋಡಿ ಜಗತ್ತೆಲ್ಲ ಆಶ್ಚರ್ಯಪಡಬೇಕೆಂದು ಕ್ರೀಡಿಯಿಂದ ಋಷ್ಯಮೂಕ ಪರ್ವತಕ್ಕೆ ಬಂದು ವಾಲಿಯನ್ನು ಕೊಂದು, ಸುಗ್ರೀವನ ಮನೋಬಯಕಿ ಪೂರ್ಣ ಮಾಡಿದ್ದಾನೆ. ಈ ಪ್ರಕಾರ ಸ್ವಾಮೀ ಅದ್ಭುತ ಚರಿತ್ರ ಹೇಳಿ, ಕಥಾಸಂಗತಿ ಹೇಳಥಾರೆ.

ರಾಮ ಲಕ್ಷ್ಮಣರು ಧನುರ್ಬಾಣದಿಂದ ಯುಕ್ತರಾಗಿ ಋಷ್ಯಮೂಕಪರ್ವತಕ್ಕೆ ಬರಲಾಗಿ, ಸೂರ್ಯನವತಾರನಾದ ಸುಗ್ರೀವ ಬಹಳೀ ಅಂಜಿ 'ವಾಲಿ, ತಾನು ಇಲ್ಲಿಗೆ ಬರಲಿಕ್ಕೆ ಸಮರ್ಥನಲ್ಲ, ಆದಕಾರಣ ಕ್ಷತ್ರಿಯಶ್ರೇಷ್ಠರನ್ನ, ನಮ್ಮನ್ನ ಕೊಲ್ಲಲಿಕ್ಕೆ ಕಳುಹಿಸಿದ್ದಾನಾಗಿದ್ದೀತು' ಎಂದು ಕ್ಲೇಶದಿಂದ ಸುಗ್ರೀವ, ಕಪಿಗಳ ಸಹವಾಗಿ ಹತ್ತೂ ದಿಕ್ಕಿಗೆ ಓಡಿಹೋಗತಿರಲಾಗಿ, ಹನುಮಂತದೇವರು ಶೀಘ್ರ ಕಪಿಶ್ರೇಷ್ಠನಾದಂಥ ಸುಗ್ರೀವಗೆ ಅಭಯ ಕೊಟ್ಟು ಸ್ವಸ್ಥಳದಲ್ಲಿಟ್ಟು, ಹಾಂಗೆ ಕಪಿಗಳನ್ನೆಲ್ಲ ನಿವಾರಿಸಿ ನೀವು ಓಡಿಹೋಗಬ್ಯಾಡಿರೆಂದು ನಿಂದರಿಸಿ 'ಈ ರಾಮದೇವರು ಸಾಕ್ಷಾತ್ ಸರ್ವೋತ್ತಮ ಅನಂತಗುಣಪರಿಪೂರ್ಣ ಸಾಕ್ಷಾತ್ ತಂದಿಯೇವೇ, ಉಪಚಾರ ಮಾತ್ರವಲ್ಲ ಸಾಕ್ಷಾತ್ ಬ್ರಹ್ಮದೇವರ ತಂದಿ' ಎಂದು ಹೇಳಿ, ಈ ಅಭಿಪ್ರಾಯದಿಂದ ಹನುಮಂತದೇವರು ಅದ್ಭುತವೇಷ ಬಿಟ್ಟು ಸಣ್ಣ ವೇಷದಿಂದ ಸ್ವಾಮೀ ಪಾದಕಮಲದಲ್ಲಿ ಬಿದ್ದು ನಮಸ್ಕಾರ ಮಾಡಿದನು ಎಂಬಲ್ಲಿಗೆ, ಶ್ರೀಮದಾಚಾರ್ಯರು ಹೇಳಿದ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯವನ್ನು ಪ್ರಾಕೃತದಿಂದ ವಿವರಿಸುವ 'ಶ್ರೀರಾಮಚರಿತೇ ಹನೂಮದ್ದರ್ಶನಂ' ಎಂಬ ಐದನೇ ಅಧ್ಯಾಯ ಸಂಪೂರ್ಣವು.

ಶ್ರೀ ಮಧ್ವೇಶಾರ್ಪಣಮಸ್ತು

ಅಧ್ಯಾಯ ೬

ಸಮುದ್ರ ತರಣ ನಿಶ್ಚಯಃ

ಈ ಆರನೇ ಅಧ್ಯಾಯದಲ್ಲಿ, ಕಿಷ್ಕಿಂಧಕಾಂಡ ಮೂಲರಾಮಾಯಣಾರ್ಥ, ಶ್ರೀಮದಾಚಾರ್ಯರು ಹೇಳಥಾರೆ. ಋಷ್ಯಮೂಕಪರ್ವತದಲ್ಲಿ, ಹನುಮಂತ ರಾಮಚಂದ್ರನ ಕಂಡು ಅನಾದಿಕಾಲದ ನಮ್ಮ ಒಡಿಯ ಬಂದನೆಂದು ನಮಸ್ಕಾರ ಮಾಡಲಿಕ್ಕೆ, ಸ್ವಾಮಿ ರಾಮಚಂದ್ರ ಕಮಲದೋಪಾದಿ ಕಣ್ಣು ಚಲ್ವಿಕೆಯುಳ್ಳಾತ ತನ್ನ ಪಾದದಲ್ಲಿ ಬಿದ್ದಂಥ ಹನುಮಂತನ್ನ, ಜ್ಞಾನಾನಂದಪೂರ್ಣ ಚಕ್ರಾಂಕವುಳ್ಳ ಭಕ್ತರಿಗೆ ಅಭೀಷ್ಟ ಕೊಡುವಂಥ ಕೈಕಮಲಗಳಿಂದ ಶಿರಸ್ಸು ಹಿಡಿದೆಬ್ಬಿಸಿ, ಲೋಕ-ರೀತಿಯಲ್ಲಿ ತಾನು ಏನೂ ಅರಿಯನೆಂಬೋ ಹಾಂಗೆ 'ಭೃತ್ಯ, ನೀ ದಾರು?' ಎಂದು ಹನುಮಂತನ ಕೇಳಿದ. ಹನುಮಂತ ಮಾತನಾಡಥಾನೆ. 'ಸ್ವಾಮಿ, ನೀನು ಸರ್ವಜ್ಞಶಿಖಾಮಣಿ ಸರ್ವವನ್ನೂ ಬಲ್ಲವನಾದರೂ, ನಿನ್ನ ಅನುಜ್ಞೆ ಆದರೆ ಹೇಳಥೇನೆ. ಈತ ಸುಗ್ರೀವನಿದ್ದಾನೆ ವಾಲಿಗೆ ತಮ್ಮನಾಗಬೇಕು. ವಾಲೀಕೈಯಿಂದ ಹೊರಗೆ ಹಾಕಿಸಿಕೊಂಡು ಋಷ್ಯಮೂಕ ಪರ್ವತಕ್ಕೆ ಬಂದ್ಹಾನೆ.' ಹೀಂಗಂತ ಹೇಳಿ 'ಸ್ವಾಮಿ, ನಾವು ನಿನ್ನ ಭಕ್ತರು ಇರಲಿಕ್ಕೆ ಈ ಕೋಮಲ ಪಾದದಿಂದ ಭೂಮಿ ಮ್ಯಾಲೆ ನಡಿಯಲಿಕ್ಕೆ ತಕ್ಕುದಲ್ಲ. ಜಗತ್ತಿಗೆ ಅರಸು ಇದ್ದಿ. ನನ್ನ ಹೆಗಲಮ್ಯಾಲೆ ಕೂಡ್ರಬೇಕು,' ಎಂದು ಸ್ತೋತ್ರ ಮಾಡಿಸಿಕೊಂಡು, ಮುಗುಳುನಗೆ ನಗತ ಅತಿಪ್ರೇಮದಿಂದ ಲಕ್ಷ್ಮಣನಿಂದ ಸಹಿತನಾದಂಥಾತನಾಗಿ ಹೆಗಲಮ್ಯಾಲೆ ಕುಳಿತ್ತನು. ಹನುಮಂತ ಷಡ್ಗುಣೋಪೇತನಾದಂಥ ಭಗವಂತನ್ನ ಬಲದ ಹೆಗಲಮ್ಯಾಲೆ, ಲಕ್ಷ್ಮಣನ್ನ ಎಡದ ಹೆಗಲಮ್ಯಾಲೆ ಕೂಡಿಸಿಕೊಂಡು ಸುಗ್ರೀವನ ಸಮೀಪಕ್ಕೆ ನಡೆದನು. ಸ್ವಾಮಿ ವಾಯುವಾಹನನಾಗಿ ತೆರಳಿದನು. ಮುಖ್ಯಪ್ರಾಣದೇವರು, ಜೀವನ್ನ ಕೈಯಲ್ಲಿ ಹಿಡಕೊಂಡು ಸ್ವಾಮಿಯನ್ನ ಹೆಗಲಮ್ಯಾಲೆ ಕೂಡ್ರಿಸಿಕೊಂಡು ದೇಹವಿಯೋಗ ಮಾಡಿಸಿ ಯಾತನಾಶರೀರ ಮೊದಲಾದಲ್ಲಿ ಹ್ಯಾಂಗೆ ಹೋಗಥಾನೆ ಹಾಂಗೆ, ಹನುಮಂತ ಸಾಕ್ಷಾತ್ ಮುಖ್ಯಪ್ರಾಣ, ಜೀವನಸ್ಥಳದಲ್ಲಿ ಲಕ್ಷ್ಮಣ, ಸಾಕ್ಷಾತ್ ಸ್ವಾಮಿ ರಾಮಚಂದ್ರ, ಈ ಪ್ರಕಾರ ಸುಗ್ರೀವನ ಸಮೀಪಕ್ಕೆ ಹನುಮಂತ-ದೇವರು ಕೂಡಿಕೊಂಡು ಹೋಗಿ, ಸುಗ್ರೀವಗೆ ಬಹುಕಾಲದಿಂದ ಇದ್ದಂಥ ದುಃಖವನ್ನು ಪರಿಹರಿಸಿ, ಶ್ರೀರಾಮದೇವರ ಕೂಡ ಗೆಳೆತನ ಕಟ್ಟಿಸಿ, ಶ್ರೀರಾಮ-ಚಂದ್ರ, ತಮ್ಮ ಸ್ವಾಮಿ ಜಗತ್ತಿಗೆ ಒಡಿಯನಿದ್ದಾನೆಂದು ಸುಗ್ರೀವನ ಕೂಡ ಮಾತನಾಡಿದನು.

ಗೆಳೆತನ ಕಟ್ಟಬೇಕಾದರೆ ರಾಮ ಸುಗ್ರೀವರಿಗೆ ಹ್ಯಾಂಗೆ ಸಮತ್ವ ಕೂಡೀತು ಎಂದಲ್ಲಿ, ಸಮತ್ವ ಕೂಡದು. ಲೋಕದೃಷ್ಟಾಂತ ಹೇಳಥಾರೆ. ಸುಗ್ರೀವ ವಾಲೀ ಕೂಡ ಹೊರಗೆ ಹಾಕಿಸಿಕೊಂಡು, ಋಷ್ಯಮೂಕಪರ್ವತಕ್ಕೆ ಬಂದಾನೆ. ರಾಮಚಂದ್ರ ಮಲತಾಯಿ ಕೈಕೇಯೀ ಇಂದ ಹೊರಗೆ ಹಾಕಿಸಿಕೊಂಡು ಅರಣ್ಯಕ್ಕೆ ಬಂದಾನೆ. ರಾಮನ ಹೆಂಡತೀನ್ನ ರಾವಣ ಒಯ್ದ, ಸುಗ್ರೀವನ ಹೆಂಡತೀನ್ನ ವಾಲಿ ಕೊಂಡ್ಹೋಗಿದ್ದಾನೆ. ಉಭಯರೂ ಹೆಂಡಿರ ಹೋಗಾಡಿಸಿಕೊಂಡು ರಾಜ್ಯೈಶ್ವರ್ಯ ಕಳಕೊಂಡು ಧನವಿಲ್ಲದೆ ವನಾಂತರ ಸೇರ್ಯಾರೆ, ರಾಜ್ಯಲಕ್ಷ್ಮೀ ಬಯಸಥಾರೆ. ಹೀಂಗನಲಿಕ್ಕೆ ದೃಷ್ಟಾಂತ ಸಮ ತೋರಿಸಥಾರೆ. ರಾಮ ಪರಮೇಶ್ವರ, ತನ್ನ ಭ್ರೂವಿಲಾಸದಿಂದ ಬ್ರಹ್ಮರುದ್ರಾದಿಗಳಿಗೆ ಐಶ್ವರ್ಯ ಕೊಡಥಾನೆ. ಗೆಳೆತನ ಕಟ್ಟಬೇಕಾದರೆ ಒಂದು ಸಾಕ್ಷಿ ಬೇಕು. ಆದಕಾರಣ ಅಗ್ನಿಮುಖದಲ್ಲಿ ಸುಗ್ರೀವನ್ನ ಕೈಹಿಡಕೊಂಡು, ಏಳಾವರ್ತಿಯಲ್ಲಿ ಪ್ರದಕ್ಷಿಣೆ ಮಾಡಿ, ರಾಮ ಸುಗ್ರೀವರು ಗೆಳೆತನ ಕಟ್ಟಿದರು. ರಾಮ ಸುಗ್ರೀವರಿಗೆ ಸಮ ಬಾರದು. ರಾಮ ಶಶ್ವದೇಕಪ್ರಕಾರನಾಗಿ ಲಿಂಗದೇಹ ಭಂಗಮಾಡಿ, ಮೋಕ್ಷಾದಿ ಪುರುಷಾರ್ಥ ಕೊಡಥಾನೆ. ಉಭಯತ್ರರಿಗೂ ಗೆಳೆತನ ಆದಮ್ಯಾಲೆ ತಮ್ಮ ಸುಖದುಃಖ ಹೇಳಿಕೋಬೇಕಲ್ಲ—ದೇವಶ್ರೇಷ್ಠನಾದಂಥ ರಘುನಾಥ ಸುಗ್ರೀವನಿಗೆ ಕೇಳಥಾನೆ. ' ರಾಜಧಾನಿ ಕಿಷ್ಕಿಂಧಾಪಟ್ಟಣ ಬಿಟ್ಟು ಇಲ್ಲಿಗೆ ಏನುಕಾರಣ ಬಂದಿ ? ' ಎಂತಃ ' ಸ್ವಾಮಿ, ನನ್ನ ಅಪರಾಧ ಏನೂ ಇಲ್ಲ. ಅತ್ಯಲ್ಪ ಅಪರಾಧಕ್ಕೆ ನನ್ನ ಅಣ್ಣ ವಾಲಿ ನನಗೆ ಬಹಳ ಶಿಕ್ಷಿಸಿದ್ದಾನೆ. ನಾವು ಋಕ್ಷಶಿರಸ್ಸಿನ (ಋಕ್ಷರಜಸ್) ಮಕ್ಕಳು. ವಾಲಿ ಹಿರೇಪಟ್ಟಕ್ಕೆ ಯೋಗ್ಯ ತಾನು ಸಿಂಹಾಸನಪದವಿ ಆಳಹೊಕ್ಕನು. ಯುವರಾಜ್ಯದಲ್ಲಿ ನನಗೆ ಅಭಿಷೇಕ ಮಾಡಿದನು. ಹೀಂಗೆ ಬಹು ಕಾಲ ಇರಲಿಕ್ಕೆ, **ಮಾಯಾವಿ** ಎಂಬ ಕೋಣನ ಸದೃಶ ದೈತ್ಯ, ವಾಲೀ ಕೂಡ ಯುದ್ಧಕ್ಕೆ ಬಂದನು. ವಾಲೀ ಎದುರಿಗೆ ನಿಂದರಲಾರದೆ ಬೆನ್ನುಕೊಟ್ಟು ಓಡಲಿಕ್ಕೆ, ಆ ದೈತ್ಯನ್ನ ಕೊಲ್ಲಬೇಕಾಗಿ ವಾಲಿ, ಬೆನ್ನಟ್ಟಿ ಪಾತಾಳಲೋಕಕ್ಕೆ ಹೋದನು. ಬಿಲದ್ವಾರದಿಂದ ಬಂದಾನೆಂದು ನನ್ನ ಕಾಯಲಿಕ್ಕೆ ಇಟ್ಟನು. ಒಂದು ವರುಷ ಸರಿಯುಂತರ ಮಾರ್ಗ ನೋಡಿದೆ. ರಕ್ತ ಚಿಮ್ಮಿ ಮ್ಯಾಲಕ್ಕೆ ಬಂತು. ನಾನು ತಿಳಿಯದೆ ವಾಲಿಗೆ ಅಕ್ಷೇಮವಾಯಿತೆಂದು ತಿಳಿದು, ಬಿಲದ್ವಾರಕ್ಕೆ ಒಂದು ಪರ್ವತ ನಿಲ್ಲಿಸಿ ಬಹಳ ಖಿನ್ನನಾಗಿ ಕಿಷ್ಕಿಂಧಾಪಟ್ಟಣಕ್ಕೆ ಬರಲಾಗಿ, ಪ್ರಧಾನರೆಲ್ಲ ಕೂಡಿ ನನಗೆ ಪಟ್ಟಾಭಿಷೇಕ ಮಾಡಿದರು. ವಾಲಿ, ಮಾಯಾವಿದೈತ್ಯನ್ನ ಕೊಂದು ನನ್ನ ಒದರಥಾನೆ, ನಾನು ಇಲ್ಲ, ಬಿಲದ್ವಾರಕ್ಕೆ ಗುಂಡು ಆನಿಸೇದೆ. ಗುಂಡು ಹಾರ-ಹೊಡದು, ಪಟ್ಟಣಕ್ಕೆ ಬಂದು 'ನನಗೆ ಅಕ್ಷೇಮ ಚಿಂತಿಸಿ, ನೀ ರಾಜ್ಯ ಆಳಬೇಕೆಂದು ಮನಸ್ಸು ಇಟ್ಟೆ' ಎಂದು ನನ್ನ ಮ್ಯಾಲೆ ಕೋಪಾವಿಷ್ಟನಾಗಿ ನನ್ನ ಹೆಂಡತಿಯನ್ನ ಕಸಗೊಂಡು, ನನಗೆ ಹೊರಗೆಹಾಕಿದ. ಜೀವದರಶಿ ಕೊಂದಾನೆಂದು, ವಾಲಿಗೆ ಅಂಜಿ,

ಈ ಋಷ್ಯಮೂಕಪರ್ವತಕ್ಕೆ ಬಂದು ಇದ್ದೇನೆ. ಇಲ್ಲಿಗೆ ವಾಲಿ ಬರಧಾಂಗೆ ಋಷಿ-ಶಾಪವಾಗೇದೆ.” ಹೀಂಗಂತ ತನ್ನ ದುಃಖವನ್ನೆಲ್ಲ ರಾಮುನ ಮುಂದೆ ಸುಗ್ರೀವ ಹೇಳಲಾಗಿ ರಾಮುದೇವರು ಸುಗ್ರೀವನ ಮಾತು ಕೇಳಿ, ‘ವಾಲಿ ನಿನ್ನ ಮ್ಯಾಲೆ ಆಗ್ಗಳಿಕೆ ಮಾಡ್ಯಾನಲ್ಲ, ವಾಲಿಯನ್ನು ಕೊಂದು ನಿನಗೆ ರಾಜ್ಯ ಆಗೋಹಾಂಗೆ ಮಾಡೇನು. ನಿನ್ನ ಹೆಂಡತಿ ನಿನ್ನ ಸಮೀಪಕ್ಕೆ ಬಂದಾಳು.’ ಹೀಂಗಂತ ಮಾತ ನಾಡಲಿಕ್ಕೆ ಸುಗ್ರೀವ, ಬಹಳ ಹರ್ಷವುಳ್ಳವನಾಗಿ ‘ಈ ಕಾರ್ಯ ನೀನು ಸಾಧಿಸಿ ಕೊಟ್ಟರೆ ನಿನ್ನ ಹೆಂಡತೀನ ರಾವಣ ಒಯ್ದಾನಲ್ಲ ಅವನ್ನ ಕೊಂದು, ಸೀತಾ-ದೇವಿಯನ್ನ ತಂದುಕೊಟ್ಟೇನು.’ ಹೀಂಗಂತ ರಾಮು-ಸುಗ್ರೀವರುಗಳಿಗೆ ಮಾತು-ಗಳಾದವು.

ವಾಲಿಯನ್ನು ಕೊಲ್ಲೋದಕ್ಕೆ ಸಮರ್ಥನಿದ್ದಾನೋ, ಇಲ್ಲೋ ಎಂಬೋ ಸಂಶಯವನ್ನ ಪರಿಹರಿಸಿಕೊಳ್ಳಲಿಕ್ಕೆ, ವಾಲಿಗೆ ತಿಳಿಯದೆ ಪರೀಕ್ಷೆ ಮಾಡಬೇಕೆಂದು, ರಾಮುನ ಕೂಡ ಸುಗ್ರೀವ ಮಾತನಾಡಿದನು. ‘ದುಂದುಭಿ ಎಂಬ ರಾಕ್ಷಸನ್ನ ವಾಲಿ ಕೊಂದ. ಆ ದೈತ್ಯನ ಶರೀರ ಈಡ್ಯಾಡಲಿಕ್ಕೆ, ಒಂದು ಗಾವುದ ಪರಿಯಂತರ ಹೋಗಿ ಈ ಋಷ್ಯಮೂಕಪರ್ವತದಲ್ಲಿ ಬಿದ್ದದೆ. ಈ ದೈತ್ಯನ ಶರೀರ ಈಡ್ಯಾಡಿದ ಪಕ್ಷವೇ, ವಾಲಿಯನ್ನ ಕೊಲ್ಲಲಿಕ್ಕೆ ನಿನ್ನಲ್ಲಿ ಸಾಮರ್ಥ್ಯವಿದೆಯೆಂದು ತಿಳೀಥೇನೆ.’ ಹೀಂಗೆ ಸುಗ್ರೀವನ ಮಾತು ಕೇಳಿ ರಾಮುದೇವರು ಬಿದ್ದ ದೈತ್ಯನ ಶರೀರವನ್ನು ನೋಡಿ ಅತಿ ಲೀಲೆಯಿಂದ ಅಂಗುಷ್ಠದಲ್ಲಿ ಚಿಮ್ಮಲಿಕ್ಕೆ ನೂರು ಗಾವುದ ಮ್ಯಾಲೆ ಹೋಗಿ ಭೂಮಿ ಸೀಳಿ, ರಸಾತಳದಲ್ಲಿದ್ದಂಥ ದೈತ್ಯರನ್ನು ಕೊಂದಿತು.

ದೈತ್ಯರು ಎಂಥಾವರು ಎಂದರೆ, ಬ್ರಹ್ಮ-ರುದ್ರದೇವರ ವರಬಲದಿಂದ ಅವಧ್ಯ-ರಾದಂಥ ದೈತ್ಯರುಗಳು, ಬಿದ್ದಂಥ ಸಮಗ್ರ ಶವದಿಂದ ಹೊಡೆಸಿಕೊಂಡು ಸತ್ತರು. ಇದರಿಂದ ಸುಗ್ರೀವಗೆ ಸಮಾಧಾನವಾಗದು. ಪುನಃ ವಾಲಿ ಬಲಾನೆಲ್ಲ ನೆನೆಸಿಕೊಂಡು, ಅಂಜಿಕೆಯುಳ್ಳವನಾಗಿ ವಾಲೀ ಬಲದಕಿಂದ ಅತ್ಯಧಿಕ ಬಲಪರೀಕ್ಷೆ ಮಾಡಬೇಕೆಂದು ಗೆಳೆಯನಾದಂಥ ರಾಮುನ ಕೂಡ ಮಾತನಾಡಥಾನೆ. ‘ಈ ಶವ ರಕ್ತಮಾಂಸದಿಂದ ಯುಕ್ತವಾಗಿದ್ದಿಲ್ಲ. ಬಹಳ ದಿವಸವಾಗಿತ್ತು. ಕಟ್ಟಿಗಿ ಅಪ್ಪಂದೆ ಒಣಗಿತ್ತು. ಇದು ಚಿಮ್ಮಿದ್ದು ದೊಡ್ಡ ತನವಲ್ಲ. ಮತ್ತೆ ಬಲಪರೀಕ್ಷೆ ಮಾಡಥೇನೆಂತೀನಿ.’ ವಜ್ರ ನೋಡ ಲಾಗಿ ಕಠಿಣತರವಾದ ಏಳು ತಾಳಾವುರ, ದೈತ್ಯಾತ್ಮಕವಾದಂಥಾವನ್ನು ತೋರಿಸಿ, ‘ಈ ತಾಳಾವುರದ ಮಧ್ಯದಲ್ಲಿ, ಒಂದು ಒಂದು ವೃಕ್ಷ ಹಿಡದು ಅಲ್ಲಾಡಿಸೋಣ ವಾಲಿ ಸಮರ್ಥನಾಗದೆ, ಒಂದು ಎಲಿ ಮಾತ್ರ ಛೇದಿಸೇನೆಂದು ಉತ್ಸಾಹದಿಂದ ಉದ್ಯೋಗ ಮಾಡುವ. ಪರಂತು ಒಂದು ಎಲಿ ಛೇದಿಸೋವಲ್ಲಿ ಸಮರ್ಥನಾಗಲಿಲ್ಲ. ನೀನು ಎತಲಾನಿಕೆ, ಈ ಡೊಂಕು ಏಳು ತಾಳಾವೃಕ್ಷಗಳನ್ನು ಒಂದು ಬಾಣದಿಂದ ಛೇದಿಸಿದ ಪಕ್ಷವೇ, ನೀನು ಬಲದಿಂದ ವಾಲೀ ವಧಿಗೆ ಕಾರಣನೆಂದು ನಾವು

ತಿಳಿಯಥೇನೆ.' ಈ ಪ್ರಕಾರ ಸುಗ್ರೀವ ಮಾತನಾಡಲಾಗಿ, ವಾಲಿಯನ್ನು ನೋಡಲಾಗಿ ಸ್ವಲ್ಪವಾದರೂ ಬಲವಿದ್ದರೆ ವಾಲಿಯನ್ನು ಕೊಲ್ಲೋಣ ನಿಶ್ಚಯವಾಯಿತು. ಇಷ್ಟೊಂದು ಬಲ ಏನುಕಾರಣ ಪರೀಕ್ಷೆ ಮಾಡಬೇಕೆಂದಲ್ಲ, 'ಅತಿ ಬಲಾಢ್ಯನಾದ ವೈರಿ ಗೆಲ್ಲೋದಕ್ಕೆ ಅವನಕಿಂತ ನಾಲ್ಕುಮಡಿ ಬಲತನ ಇರಬೇಕು. ಅವನ ಕೊಲ್ಲೋದಕ್ಕೆ ನೂರುಮಡಿ ಬಲತನದಿಂದಿರಬೇಕು. ಈ ಪ್ರಕಾರ ನೀತಿಮಾರ್ಗವದೆ. ಆದಕಾರಣದಿಂದ ಇಂದ್ರನ ಮಗನಾದಂಥ ವಾಲಿಯು, ಎರಡು ಬಾಹುಗಳಿಂದ ಒಂದು ಎಲಿ ಛೇದಿಸಲಿಕ್ಕೆ ಶಕ್ಯವಲ್ಲದಂಥ, ಏಳು ತಾಳಾಮರಗಳ ಛೇದಿಸಿ ಶೀಘ್ರದಿಂದ ನನ್ನ ಸಂಶಯ ಪರಿಹರಿಸು' ಎಂದು ಸುಗ್ರೀವನಾಡಿದ ಮಾತು ಕೇಳಿ ರಾಮದೇವರು, ಬ್ರಹ್ಮದೇವರ ವರಬಲದಿಂದ, ಸಪ್ತಪುರುಷರು ಅವಧ್ಯರೂಪ ಉಳ್ಳಂಥಾವರಾಗಿ, ಚಲನಿ ಇಲ್ಲದಂಥ ಬ್ರಹ್ಮಪದವಿ ಇಚ್ಛಿಸಿ ಮನುಷ್ಯಜನ್ಮ ಧರಿಸಿ ತಪಸ್ಸು ಮಾಡಿದರೆ ಚಂಚಲ ಮನಸ್ಸುಳ್ಳವರಾದೇವೆಂದು ತಾಳಾವೃಕ್ಷ-ರೂಪದಿಂದ ತಪಸ್ಸು ಮಾಡುವಂಥ, ದಿತಿಮಕ್ಕಳಾದಂಥ ದೈತ್ಯರೆಂದು ನಿಶ್ಚಯವಾಗಿ ತಿಳಿದು, ೀ ಕ್ಷಣದಲ್ಲಿ ಛೇದಿಸುವಂಥಾತನಾದನು. ಆ ಸಮಯದಲ್ಲಿ ರಾಘವನ ಹಸ್ತಲಾಘವವನ್ನು ವರ್ಣಿಸಥಾರೆ. ಅನಂತಬಲವುಳ್ಳಾತ ರಾಮದೇವರು ಧನುಃ-

---

ಶ್ರೇಷ್ಠವಾದಂಥ ಶಾರ್ಙ್ಗಧನುಸ್ಸಿನಲ್ಲಿ ಬಾಣ ಇಟ್ಟು, ದಕ್ಷಿಣ ಭುಜದಿಂದ ಬಿಗಿದು ತೀಕ್ಷ್ಣವಾದಂಥ ಬಾಣವನ್ನು ಬಿಡತಿರಲಾಗಿ, ಆ ಬಾಣದ ಧ್ವನಿಮಾತ್ರದಿಂದ, ಏಳು ತಾಳಾಮರಗಳು ಪುಡಿಪುಡಿ ಆದವು. ಹಸ್ತಲಾಘವದಿಂದ ಬಿಟ್ಟ ರಾಮಬಾಣವು ಮತ್ತೆ ಕೆಲವು ಪ್ರಯೋಜನ ಮಾಡಿತಂತ್ರ ಹೇಳಥಾರೆ. ಅವ್ಯಾಹತ ಷಡ್ಗುಣೈಶ್ವರ್ಯ ಸಂಪನ್ನನಾದಂಥ ರಾಮದೇವರಿಂದ ಬಿಡಿಸಿಕೊಂಡಂಥ ಒಂದೇ ಬಾಣ ಏಳು ತಾಳಾ-ಮರಗಳನ್ನೆಲ್ಲ ಸುಟ್ಟು ಭಸ್ಮ ಮಾಡಿ, ಪರ್ವತಗಳಿಂದ ಯುಕ್ತವಾದ ಭೂಮಿ ಸೀಳಿ, ಅತಳಾದಿ ಲೋಕ ಪ್ರಾರಂಭ ಮಾಡಿಕೊಂಡು, ಪಾತಾಳ ಪರಿಯಂತರ ಏಳು ಲೋಕವನ್ನು ಸೀಳಿ ಏಳು ಲೋಕದಲ್ಲಿ ಬ್ರಹ್ಮದೇವರ ವರಬಲದಿಂದ ಅವಧ್ಯರಾದಂಥ ಕುಮುದಿನಾಮಕ ಸಮಸ್ತ ರಾಕ್ಷಸರೆನ್ನು ಶೀಘ್ರದಿಂದ ಸುಟ್ಟು ಭಸ್ಮ ಮಾಡಿ, ಪುನಃ ರಾಮದೇವರ ಬತ್ತಳಿಕೆಯೊಳಗೆ ಪ್ರವೇಶ ಮಾಡಿತು. ಕುಮುದಿನಾಮಕ ದೈತ್ಯರು, ಪಾತಾಳಲೋಕದಲ್ಲಿ ಹತವಾದದ್ದು ಸುಗ್ರೀವಗೆ ಅರಿಕೆಲ್ಲ. ಒಂದು ಬಾಣ ಸ್ವಾಮೀ ಕೈಯ ಬಿಡಿಸಿಕೊಂಡು, ಏಳು ತಾಳಾವೃಕ್ಷ ಕೆಡಹಾಕಬೇಕಲ್ಲದೆ ದೈತ್ಯರನ್ನು ಏನುಕಾರಣ ಕೊಲ್ಲಬೇಕು ಎಂದಲ್ಲಿ, ಸ್ವಾಮೀ ಬಾಣ ಅಚಿಂತ್ಯಮಹಿಮಿ ಉಳ್ಳದ್ದು. ದೀವಿಗೆಯನ್ನು ಒಂದು ಪದಾರ್ಥ ನೋಡಲು ತಂದರೆ, ಸಕಲ ಪದಾರ್ಥ ತೋರಿಸಿ-ಕೊಡತದೆ, ಇದಾದರೂ ರಾಮಬಾಣ, ಅನಂತಬಲವುಳ್ಳಂಥ ನಾರಾಯಣ ಮಾಡುವ ವ್ಯಾಪಾರಕ್ಕೆ ಆಶ್ಚರ್ಯಬಡಹತ್ತದು. ಏಕೆಂದರೆ, ಸ್ವಾಮೀ ಪ್ರೇರಣೆಯಿಂದ, ಲಕ್ಷ್ಮೀ ಬ್ರಹ್ಮ ವಾಯು ರುದ್ರ ಗರುಡ ಇಂದ್ರ ಸೂರ್ಯ ಚಂದ್ರರಿಂದ ಸಹಿತವಾಗಿ,

ಜಗತ್ತಿನಲ್ಲಿ ವ್ಯಾಪಾರ ಪ್ರವರ್ತಿಸತದೆ. ಅಂಥಾ ಸ್ವಾಮಿಗೆ ಇದು ಆಶ್ಚರ್ಯವಲ್ಲ. ರವಾಬ್ರಹ್ಮಾದಿ ಜಗತ್ತು ಉಸುರು ಬಿಡುವ ವ್ಯಾಪಾರ ಸ್ವಾಮೀ ಅಧೀನ. ಇಂಥಾ ಕಾರ್ಯ ಮಾಡೋಣ ಅನ್ಯರಿಗೆ ಸುಲಭವಲ್ಲ. ಸ್ವಾಮಿ ಮಾಡುವ ಕರ್ಮ, ಸ್ವಾಮಿಗೆ ಹೊರ್ತಾಗಿ, ರವಾ ಬ್ರಹ್ಮಾದಿಗಳು ಮಾಡಲಾರರು, ಅವರಿಗೆ ಅಸಾಧ್ಯ. ಸ್ವಾಮಿ ಮಾಡುವ ಕಾರ್ಯ ಅಸಾಧ್ಯವೆಂದು ಆಶ್ಚರ್ಯಬಡಹತ್ತದು.

ಏಳು ತಾಳಾವೃಕ್ಷಗಳು, ಭಗವಂತನ ಬಾಣದಿಂದ ಬೀಳಲಿಕ್ಕೆ ಸುಗ್ರೀವ, ಸ್ವಾಮೀ ಬಲ ಕಂಡು ಆಶ್ಚರ್ಯವುಳ್ಳಾತನಾಗಿ ರಾಮದೇವರ ಮುಂದೆಮಾಡಿಕೊಂಡು, ಋಷ್ಯಮೂಕಪರ್ವತದಿಂದ ಕಿಷ್ಕಿಂಧಾನಗರಕ್ಕೆ ಹೋಗಥಾನೆ. ಹೋಗೋವಂಥ ಸುಗ್ರೀವಗೆ ಮಹದ್ಭಯವಾಗಥದೆ ಎಂದು ಸೂಚಿಸಥಾರೆ. ರಾಮದೇವರ ಪ್ರೇರಣೆಯಿಂದ ಕಿಷ್ಕಿಂಧಾನಗರದಲ್ಲಿ ನಿಂತು ದೊಡ್ಡ ಧ್ವನಿ ಮಾಡಲಿಕ್ಕೆ, ಸುಗ್ರೀವನ ಧ್ವನಿ ಕೇಳಿ, 'ನನ್ನ ವೈರೀ ಧ್ವನಿ ಬಿಲದೊಳಗ್ಹಿಂದ ಕೇಳತದೆ' ಎಂದು ವಾಲಿ ಹೊರಗೆ ಹೊರಡತಿರಲಿಕ್ಕೆ, ತಾರಾದೇವಿ ಬೇಡಿಕೊಂಡಳು. 'ರಾಮನ ಸಹಾಯ ಕೊಂಡು ಸುಗ್ರೀವ ಬಂದಾನೆ.' ಹೋಗೊ ಕಾಲದಲ್ಲಿ ಹೋಗಬೇಡವೆಂದು ಹೆಂಡತಿಯಾದವಳು, 'ಕಾರ್ಯೇಷು ಮಂತ್ರಿ' ಎಂತ ಇದ್ದಕಾರಣ, ಮಂತ್ರಿ ಪ್ರಕಾರ ಹೇಳಿದಳು. ಸ್ತ್ರೀಯರಿಗೆ ಇಷ್ಟು ಯಾತಕ್ಕೆ ಮಾತೆಂದು ಹೆಂಡತಿಗೆ ನಿವಾರಿಸಿಕೊಂಡು ವಾಲಿ, ಹೊರಗೆ ಹೊರಟನು. ರಾಮ, ಸುಗ್ರೀವಗೆ ಸಹಾಯವಾದ್ದು ತಾರಾದೇವಿ ತಾ ಏನು ಬಲ್ಲಳು ಎಂದು ಶಂಕಾ ಬಂದರೆ, ಅಂಗೆದನ ಮುಖದಿಂದ ಕೇಳಿದ್ದಳು. 'ಸುಗ್ರೀವಗೆ ರಾಮ ಸಹಾಯನಾದ. ಸುಗ್ರೀವನ ಸಂಗಡ ಅನುಸಂಧಾನ ಮಾಡಬೇಕು' ಎಂದು ಅಂಗದ, ತಾಯೀ ಕೂಡ ಮಾತನಾಡಿದ್ದ. ಅದರಿಂದ ಗಂಡಗೆ ನಿವಾರಿಸಿದಳು. ಕೇಳದೆ, ಬಿಲರೂಪಪಟ್ಟಣದ್ವಾರದಿಂದ ಹೊರಗೆ ಹೊರಟು ಸುಗ್ರೀವನ ಎದುರಿಗೆ ಬಂದ. ಯುದ್ಧ ಮಾಡಿ, ಮುಷ್ಟೀಪೆಟ್ಟಿನಿಂದ ಸುಗ್ರೀವಗೆ ಹೊಡೆಯಲಿಕ್ಕೆ, ವಾಲೀ ಪೆಟ್ಟು ತಾಳಲಾರದೆ ತಾನು ಅಶಕ್ತನಾದಕಾರಣ ಹಿಂದಕ್ಕೆ ಓಡಿಬಂದ.

ಈ ಪ್ರಕಾರ ಸುಗ್ರೀವ ಅವಸ್ಥಿಪಡತಿರಲಿಕ್ಕೆ, ವಾಲಿಯನ್ನು ಏನುಕಾರಣ ಕೊಲ್ಲಲಿಲ್ಲ ಉಪೇಕ್ಷೆ ಮಾಡಿದ ಎಂದರೆ,‖ ರಾಮದೇವರು ಧರ್ಮ ವಿಚಾರಿಸಿ, ಲೋಕಕ್ಕೆ ಧರ್ಮ ತೋರಿಸಬೇಕಾಗಿ, ಪ್ರಥಮ ಕಕ್ಷಿಯಲ್ಲಿ ವಾಲಿಯನ್ನು ಕೊಲ್ಲಲಿಲ್ಲ. ಸುಗ್ರೀವ, ಸ್ವಾಮೀ ಸಮೀಪಕ್ಕೆ ಬಂದು ತನ್ನ ದುಃಖವನ್ನೆಲ್ಲ ಹೇಳಿದ. 'ನಿನ್ನ ಭರವಸೆಯಿಂದ ಹೋದೆ ಪೆಟ್ಟು ತಿಂದೆ' ಎನಲಿಕ್ಕೆ ಸ್ವಾಮಿ ಸುಗ್ರೀವನ ಕೂಡ ಮಾತನಾಡಥಾನೆ. 'ಯುದ್ಧದಲ್ಲಿ, ನೀವು ಅಣ್ಣ-ತಮ್ಮಂದಿರು ಒಂದೇ ಪ್ರಕಾರ ಕಾಣಸಥೀರಿ, ನನ್ನ ಬಾಣ ವ್ಯರ್ಥವಾಗದು, ಕೊಂದುಬಿಟ್ಟೀತು. ನಿನಗೆ ತಾಕಿದರೆ ಅನರ್ಥಕ್ಕೆ ಕಾರಣ. ಅದರಿಂದ, ನಿನ್ನ ಗುರ್ತು ತಿಳಿಯದೇ ಬಾಣ ಎಸೆಯಲಿಲ್ಲ' ಎಂದು ಆಡಿದನು. ಈ ರೀತಿ ರಾಮದೇವರು ಮಾತಾಡಿದ್ದು ಲೋಕಕ್ಕೆ ವಿಡಂಬನೆ

ಮಾಡಿ ತೋರಿಸಿದ್ದಾನೆ. ಏಕೆ ವಿಡಂಬನೆ ತೋರಿಸಬೇಕು ಎಂದರೆ, ಸಕಲ ಜಗತ್ತಿನಲ್ಲಿ ಆಗುವಂಥ ಜೇಷ್ಟ ಬಲ್ಲಾತಗೆ ಇದು ತಿಳಿದೇ ಇದ್ದಾನೆಂದು ಏನು ಹೇಳಬೇಕು! ಆದರೂ ಸುಗ್ರೀವ ಅಣ್ಣನಮ್ಯಾಲೆ ಒಮ್ಮೆಗಾದರೂ ಸ್ನೇಹವೇ ಮಾಡ್ಯಾನು. ನಿರಪರಾಧಿಯಾದ ವಾಲಿಯನ್ನ ಕೊಲ್ಲಬಾರದೆಂದು ಲೋಕಕ್ಕೆ ಧರ್ಮಾಧರ್ಮ ತೋರಿಸಲಿಕ್ಕೆ ಸುಮ್ಮಗಿದ್ದನು. ಈ ಪ್ರಕಾರ ವಿನೋಧ ಪ್ರಾಪ್ತಿಯಾಗಿರಲಾಗಿ ಹ್ಯಾಂಗೆ ಸ್ನೇಹ ಇಚ್ಛಿಸ್ಯಾನು ಎಂದಲ್ಲಿ, ಅಣ್ಣ ತಮ್ಮಂದಿರಲ್ಲಿ ಬಂದ ದ್ವೇಷ ಬಹುಕಾಲ ನಿಂದರೋದಲ್ಲ. ಬಹುಕಾಲ ದ್ವೇಷ ಇದ್ದರೂ ಒಬ್ಬರಿಗೊಬ್ಬರು ಬೇಡಿಕೊಳ್ಳದಿದ್ದ ಕಾಲಕ್ಕೂ, ಪಶ್ಚಾತ್ತಾಪದಿಂದ ಕೋಪ ಹೋಗತದೆ. ಅಣ್ಣ-ತಮ್ಮಂದಿರ ಕೋಪ ಅಂತ್ಯಕಾಲದಲ್ಲಾದರೂ ಪ್ರಾಯಃ ಹೋಗತದೆ. ಅಂತ್ಯಕಾಲದಲ್ಲಿ ನಿಶ್ಚಯವಾಗಿ ಹೋಗತದೆ ಎನಬಾರದೆ, 'ಪ್ರಾಯಃ' ಶಬ್ದ ಏನುಕಾರಣ ಬಂತು ಎಂದಲ್ಲಿ ಅಂತ್ಯ-ಕಾಲದಲ್ಲಾದರೂ ಕರ್ಣಗೆ ಕೋಪ ಹೋಗಲಿಲ್ಲ. ಆದ್ದರಿಂದ 'ಪ್ರಾಯಃ' ಎಂದು ಹೇಳಿದರು. ಅಣ್ಣ-ತಮ್ಮಂದಿರೊಳಗೆ, ಒಬ್ಬಗೆ ಮರಣ ಪ್ರಾಪ್ತವಾಗತಿರಲಾಗಿ, ಮತ್ತೊಬ್ಬಗೆ ಕ್ಲೇಶ ಬರೋ ಅಂಥಾದ್ದು ಆಗತದೆ. ಆದಕಾರಣ, ಪ್ರಥಮ ಕಪ್ಪಿಯಲ್ಲಿ ಶೀಘ್ರ ವಾಲಿಯನ್ನು ಕೊಲ್ಲಬಾರದೆಂದು ಸುಮ್ಮಗಿದ್ದನು. ಯಾಕೆ ವಾಲಿ-ಸುಗ್ರೀವರು ದೀರ್ಘದ್ವೇಷವುಳ್ಳವರೆಂದು ತಿಳಿಯದೆ, ಸುಮ್ಮನಿದ್ದನೆನಬಾರದೆ ಎಂದಲ್ಲಿ, ರಾಮದೇವರಿಗೆ ವಿಶೇಷಣ ಹೇಳಥಾರೆ. ನಮ್ಮ ಸ್ವಾಮಿಗೆ ದೋಷವುಂಟೆ! ನಿತ್ಯನಿರಸ್ತದೋಷವುಳ್ಳಾತ. ಹಾಂಗಾದರೆ ದೀರ್ಘದ್ವೇಷಿಗಳೆಂದು ತಿಳಿದೇ ಇದ್ದರೆ ಏನುಕಾರಣ ಎಂದರೆ, ಶಂಕಾ ಪರಿಹರಿಸಥಾರೆ. ಸರ್ವಜ್ಞಶಿಖಾಮಣಿಯಾದಂಥ ರಾಮದೇವರು ವಾಲಿ-ಸುಗ್ರೀವರು ದೀರ್ಘದ್ವೇಷವುಳ್ಳವರು, ವಿಪತ್ಕಾಲಕ್ಕೆ ಕ್ಲೇಶ ಬರಲಿಕ್ಕಿಲ್ಲ ತಮ್ಮನ ಹೆಂಡತಿ ರುಮಾದೇವಿಗೆ ಅಪಹಾರ ಮಾಡಿಕೊಂಡಾನೆಂದು ತಾ ಬಲ್ಲ. ಪ್ರಥಮ ಕಪ್ಪಿಯಲ್ಲಿ ಏನುಕಾರಣ ಕೊಲ್ಲಲಿಲ್ಲ ಎಂದಲ್ಲಿ ಅಣ್ಣ-ತಮ್ಮಂದಿರ ವಿಷಯದಲ್ಲಿ ದ್ವೇಷ ಹುಟ್ಟಿರಲಾಗಿ, ಅವರ ಸಂಬಂಧಿಗಳಾದಂಥವರು ಶೀಘ್ರ ಏಕಾಏಕಿ ಕೊಲ್ಲೋದಿಲ್ಲ ಎಂದು, ಲೋಕಧರ್ಮ ತೋರಿಸಬೇಕಾಗಿ ಕೊಲ್ಲಲಿಲ್ಲ. ವಾಲಿಯನ್ನು ಕೊಂದರೆ, ಸುಗ್ರೀವಗೆ ಕೋಪ ಬರಲಿಕ್ಕಿಲ್ಲ ಎಂದು ತಾ ಬಲ್ಲ. ಭಾವಿಕಾರ್ಯ ಬಲ್ಲವನಾದರೂ, ಧರ್ಮ ತೋರಿಸೋ ನಿಮಿತ್ತ, ವಾಲೀನ್ನ ಕೊಲ್ಲದೆ ಸುಮ್ಮಗಿದ್ದನು. ವಾಲಿ-ಸುಗ್ರೀವ ಒಂದೇ ರೂಪದಲ್ಲಿದ್ದರೂ ಗುರ್ತು ತಿಳಿಯಲಿಲ್ಲ ಎನಬಾರದೆ ಎಂದಲ್ಲಿ, ಸಕಲ ಜೀವರಿಗೆ ಬುದ್ಧಿ ಹುಟ್ಟಿಸೋದಕ್ಕೆ ದಾವಾತ ಪ್ರೇರಕನೋ, ದಾವಾತನ ಪ್ರೇರಣೆಯಿಂದ ಜ್ಞಾನೋತ್ಪತ್ತಿ ಆಗತದೋ, ಅಂಥ ಜಗದೀಶ್ವರನಾದಂಥ, ಉತ್ತಮನಾದಂಥ ನಾರಾಯಣಗೆ, ಈ ವಾಲಿ-ಸುಗ್ರೀವರ ಗುರ್ತು ತಿಳಿಯೋದರಲ್ಲಿ ಅಜ್ಞಾನ ಎಲ್ಲಿಯದು! ವಾಲೀ ಪೆಟ್ಟಿನಿಂದ ತಿರುಗಿ ಬಂದ ಸುಗ್ರೀವಗೆ ದಾವ ಪ್ರಕಾರ ಭರವಸೆ ಹೇಳಬೇಕೋ ಆ ರೀತಿ ದೃಢವಾಗೋ ಹಾಂಗೆ

ಹೇಳಿ, ವಾಲಿ ಮ್ಯಾಲೆ ವಜ್ರಸದೃಶ ಬಾಣ ತೆಗೆದು ಬಿಡಲಿಕ್ಕೆ ಉದ್ಯುಕ್ತನಾದನು. ತಾನು ಆಡಿದ ಮಾತು ನಿರ್ವಾಹಾರ್ಥವಾಗಿ ಹನುಮಂತಗೆ ಹೇಳಿ, ಸುಗ್ರೀವನ ಕೊರಳಿಗೆ ಗಜಪುಷ್ಪಮಾಲಿ ಹಾಕಿಸಿ, ವಾಲೀ ಕೂಡ ಯುದ್ಧಕ್ಕೆ ಕಳುಹಿದನು.

ಸುಗ್ರೀವ ಹೋಗಿ ಮತ್ತೆ ಧ್ವನಿ ಮಾಡಲಿಕ್ಕೆ, ಕೋಪಾವಿಷ್ಟನಾಗಿ ವಾಲಿ, ಸುಗ್ರೀವನ ಎದುರಿಗೆ ಬಂದನು. ಶ್ರೀರಾಮದೇವರು ಅದೃಶ್ಯನಾಗಿ ದೂರದಲ್ಲಿ ನಿಂತು ಬಿಡಲ್ಪಟ್ಟಂಥ, ಅಸದೃಶ ಬಾಣದಿಂದ ಹೊಡೆಸಿಕೊಂಡು ಬಹಳ ಪೀಡಿತನಾಗಿ, ಇಂದ್ರಾತ್ಮಜನಾದಂಥ ವಾಲಿಯು, ನಷ್ಟಬಲವುಳ್ಳವನಾಗಿ, ಪರ್ವತದೋಪಾದಿ ಬಿದ್ದನು. ವಾಲಿಯನ್ನು ಹೊಡೆಯಲಿಕ್ಕೆ, ಸ್ವಾಮಿ ಅದೃಶ್ಯನಾದ ಎಂಬೋದು ಪುರಾಣದಲ್ಲಿ ಹೇಳತದೆ. 'ಎತಲಾನಿಕೆ ನನ್ನ ಕಂಡರೆ' ಎಂದು ಅಡಗಿಕೊಂಡು ಕೊಂದನೆಂದು ಅನ್ಯಜನರು ತಿಳೀಥಾರೆಂಬ ವಾಕ್ಯಕ್ಕೆ ಪರಿಹರಿಸಥಾರೆ. 'ವಾಲಿ ನನ್ನ ಭಕ್ತ ನನ್ನ ಕಂಡಮಾತ್ರದಲ್ಲಿ ಘಟ್ಯಾಗಿ ಪಾದ ಹಿಡಿದಾನು' ಎಂದು ಪಾದ ಐದಿದರೂ ಕೊಲ್ಲಬಾರದೆ ಎಂದಲ್ಲಿ, ಪಾದಾಕ್ರಾಂತರಾದಂಥವರನ್ನು ಕೊಲ್ಲುವುದು ಯುಕ್ತವಲ್ಲ. ಹಾಂಗಾದರೆ ಭಕ್ತನಾದಂಥ ವಾಲಿಯನ್ನು ಏನುಕಾರಣ ಕೊಂದ. ನೆಂದರೆ ರಾಜ್ಯ ಅಪೇಕ್ಷೆಯುಳ್ಳ ಸುಗ್ರೀವನಿಂದ, ವಾಲೀ ವಧಾರ್ಥವಾಗಿ ಪ್ರಾರ್ಥನೆ ಮಾಡಿಸಿಕೊಂಡಿದ್ದ. ಆದಕಾರಣ ಮೊದಲು ಶರಣುಹೊಕ್ಕವರನ್ನು ಕಾಯಬೇಕು, ಅವರ ಕಾರ್ಯ ಮಾಡಿಕೊಡಬೇಕು. ವಾಲಿ ಬಂದು ಶರಣಾಗತನಾದ ತರುವಾಯ ಕೊಲ್ಲೋಣ ಪ್ರಶಸ್ತವಲ್ಲ. ಅದರಿಂದ ಉಭಯ ಸಂರಕ್ಷಣಾರ್ಥವಾಗಿ ಅದೃಶ್ಯದಿಂದ ಕೊಂದನಲ್ಲದೆ ಭೀತಿಯಿಂದ ಅದೃಶ್ಯನಾದಾತನಲ್ಲ. ಅಂಜಿಕೆ ಇಲ್ಲದಿದ್ರೆ ಯಾಕೆ ಅದೃಶ್ಯನಾಗಬೇಕೆಂದಲ್ಲಿ, ಸಕಲ ಲೋಗರಿಗೆ ಪ್ರೇರಕ ದಾವಾತನೋ, ದಾವಾತ ನಿತ್ಯಪರಿಪೂರ್ಣ ನಾಶ ಇಲ್ಲದೆ ಉತ್ಕೃಷ್ಟ ಬಲವುಳ್ಳಾತನೋ, ಅಂಥಾ ರಾಮದೇವರು ದೃಷ್ಟಿಗೋಚರನಾದರೆ ಈ ಕಪಿ ಏನೂ ಮಾಡಲಾರದು. ಇದಲ್ಲದೆ ಮಹಾರುದ್ರ-ದೇವರು ವಾಲಿಗೆ, 'ದಾವಾತ ನಿನ್ನ ದೃಷ್ಟಿಗೆ ಗೋಚರನಾಗಿ ಯುದ್ಧ ಮಾಡ್ಯಾನು, ಆತನ ಬಲ ನಿನಗೆ ಆಗಲಿ' ಎಂದು ವರ ಕೊಟ್ಟಿದ್ದ. ಈ ನಿಮಿತ್ತ ಅಡಗಿಕೊಂಡು ಹೊಡದ, ಎಂದು ಶಂಕಾ ಬಂದರೆ ಹೇಳಥಾರೆ. ಸ್ವಯಂವರಕಾಲದಲ್ಲಿ ಪಿನಾಕಧನುಸ್ಸನ್ನು ಮುರುದು, ತುಣುಕುತುಣುಕು ಮಾಡಿದ ತಾನು, ರುದ್ರನ ವರಕ್ಕೆ ಅಂಜಲಾಪನೆ! ವಾಲಿ ತನ್ನ ಭಕ್ತ, ಶರಣುಬಂದಾನೆಂದು, ಅಡಗಿಕೊಂಡು ಹೊಡದನು. ಆಗ ರಾಮದೇವರು, ವಾಲೀ ಸಮೀಪಕ್ಕೆ ಹೋಗಿ, ಮೇಘಗಂಭೀರವಾಕ್ಯದಿಂದ ಬದಿಕೇ-ನೆಂಬ ಇಚ್ಛೆ ಇದ್ದರೆ ಬದಕಿಸೇನೆಂದು ಮಾತನ್ನಾಡಿದ. ರಾಮನ ವಾಕ್ಯ ಕೇಳಿ, ವಾಲಿ ಮಾತನಾಡಥಾನೆ. 'ಹೇ ಪುರುಷೋತ್ತಮ! ಅಣಿಮಾದಿ ಯೋಗಸಿದ್ಧಿ-ಯುಳ್ಳಂಥ ಜ್ಞಾನಿಗಳು, ಮರಣಕಾಲದಲ್ಲಿ ನಿನ್ನ ಸ್ಮರಣೆ ನಾಮೋಚ್ಚಾರಣೆ ಇಚ್ಛೈಸತಿರಥಾರೆ. ನನ್ನ ಭಾಗ್ಯ ಎಷ್ಟಂತ ಹೇಳಲಿ ಸಾಕ್ಷಾತ್ ಪರದೇವತಿ

ಕೈಯ ಮರಣವಾಗೋಣ! ನೀನು ದೃಷ್ಟಿಗೋಚರನಾಗಿದ್ದಿ. ನಿನ್ನ ಎದುರಾಗಿ ಮರಣ ಐದೋ ಸುಖ ಬಿಟ್ಟು ಬದುಕಿ ಏನು ಪ್ರಯೋಜನ! ಇಂಥಾ ಮರಣ ವಾನರಗೆ ಎಂದಿಗೆ ಆಗಬೇಕು! ಇದೇ ದೊಡ್ಡ ಸುಖ' ಎಂದು ಸ್ವಾಮೀ ಸ್ವರೂಪ ನೋಡತಾ ಕಳೇವರ ತ್ಯಾಗ ಮಾಡಿದ. ಮರಣವಾಗಧಾಂಗೆ ದೇವೇಂದ್ರ ಮಾಲಿ ಕೊಟ್ಟಿದ್ದ. ಇಂದ್ರ ಕೊಟ್ಟಂಥ ಮಾಲಿ ತೆಗೆದು ಸ್ವಾಮೀ ಪಾದಕ್ಕೆ ಅರ್ಪಿಸಿ, 'ಸುಗ್ರೀವಗೆ ಕೊಡು' ಎಂದು ಹೇಳಿ, ಸ್ವಾಮೀ ಮುಖಚಲ್ವಿಕೆ ನೋಡತಾ ದೇಹ-ತ್ಯಾಗ ಮಾಡಿದ.

ಸುಗ್ರೀವ ಅಂಗದನ ಮುಂದೆ ಮಾಡಿಕೊಂಡು, ವಾಲಿಯ ಉತ್ತರಕರ್ಮ, ಭೂರಿಭೋಜನ ಮಾಡಿಸಿದನು. ತರುವಾಯ ಸುಗ್ರೀವಗೆ ರಾಜ್ಯಾಭಿಷೇಕವಾಯಿತು. ಯುವರಾಜ್ಯದಲ್ಲಿ ಅಂಗದಗೆ ಪಟ್ಟ ಕಟ್ಟಿದರು. ಸುಗ್ರೀವ ತನಗೆ ಪಟ್ಟಾಭಿಷೇಕವಾದ ವ್ಯಾಲೆ ರಾಮುಗೆ ಬೇಡಿಕೊಂಡ. 'ವನದಲ್ಲಿ ಏನು ಕೆಲಸವದೆ, ರಾಜಧಾನಿ ಕಿಷ್ಕಿಂಧಾಪಟ್ಟಣಕ್ಕೆ ಬರಬೇಕು' ಎಂದು ಪ್ರಾರ್ಥನೆ ಮಾಡಿದ. 'ನಮಗೆ ಹದಿನಾಲ್ಕು ವರ್ಷ ವ್ರತವದೆ. ನಾವು ವನವಾಸಿಗಳು ಪಟ್ಟಣದೊಳಗೆ ಇರಬಾರದು.' ಹೀಂಗಂತ ಸುಗ್ರೀವಗೆ ಸಮಾಧಾನ ಮಾಡಿ, ರಾಮ-ಲಕ್ಷ್ಮಣರು ಪರ್ವತಶ್ರೇಷ್ಠ-ವಾದಂಥ ಮಾಲ್ಯವಂತ ಪರ್ವತದಲ್ಲಿ, ಶ್ರಾವಣಾದಿ ನಾಲ್ಕು ತಿಂಗಳು ವಾಸ ಮಾಡಿದರು. ಮಳಿಗಾಲದಲ್ಲಿ ದಂಡಯಾತ್ರೆ ಮಾಡಲಿಕ್ಕೆ ಕೂಡದು ಎಂದು ಪರ್ವತದಲ್ಲಿ ನಿಂತರು. ಸುಗ್ರೀವ ರಾಜಧಾನಿಯಲ್ಲಿ ಐಶ್ವರ್ಯವುದದಿಂದ ವಿಷಯಾ-ಸಕ್ತನಾಗಿ, ರಾಮುನ ಮರತುಬಿಟ್ಟ. ಸ್ವರೂಪೋತ್ತಮಳಾದಂಥ ತನ್ನ ಅಣ್ಣನ ಹೆಂಡತಿಯಲ್ಲಿ, ತನ್ನ ಸ್ತ್ರೀಯಲ್ಲಿ ಭೋಗದಿಂದ ಐಶ್ವರ್ಯವುದದಿಂದ ಕುರುಡನಾಗಿ, ವಿಷಯಾಸಕ್ತನಾದ. ಬುದ್ಧಿವಂತರೊಳಗೆಲ್ಲ ಶ್ರೇಷ್ಠನಾದ ಶ್ರೀರಾಮದೇವರ ಪಾದದಲ್ಲಿ ಭಕ್ತಿಯುಳ್ಳಂಥ ಹನುಮಂತ ತನ್ನ ಗೆಳಿಯನ ಉನ್ಮತ್ತತನ ಕಂಡು ತನ್ನ ಗೆಳಿಯ ಸ್ವಾಮೀ ಕೋಪಕ್ಕೆ ವಿಷಯನಾಗಬಾರದೆಂದು ಶೀಘ್ರ ಸನ್ಮಾರ್ಗಕ್ಕೆ ತರಬೇಕೆಂದು 'ಎಲೋ ಮೂರ್ಖ! ಸ್ವಾಮೀ ರಘುನಾಥವರ್ಯನ್ನ ಮರತ್ಯಾ? ನಿನ್ನ ಕಾರ್ಯ ಗೆದ್ದುಕೊಂಡು ಸ್ವಾಮೀ ಕಾರ್ಯ ಮರತುಕೊಂಡಿದ್ದಿ. ಇನ್ನೂ ಕಪಿಸೇನೆ ಒದಗಿಸ ಲಿಲ್ಲ. ನಾಲ್ಕು ತಿಂಗಳಾಯಿತು ರಾಮುದರ್ಶನ ತಕ್ಕೊಳ್ಳಲಿಲ್ಲ. ವಿಷಯಭೋಗದಲ್ಲಿ ತೊಡಗಿ ಹೊರಗೆ ಹೊರಡಲಿಲ್ಲ. ಸ್ವಾಮಿ ನಮ್ಮಿಂದ ಪೂಜ್ಯ; ನೀನು ಬಹಳ ಉನ್ಮತ್ತನಾಗಿ ಸೊಕ್ಕಿದ್ದಿ. ಸ್ವಾಮೀ ಪೂಜಿ ಮಾಡದಿದ್ದರೆ ನಾನು ನಿನ್ನ ಬಲಾತ್ಕಾರದಿಂದ ಚೆನ್ನಾಗಿ ದಂಡಿಸಬೇಕಾದೀತು.' ಈ ರೀತಿ ಹನುಮಂತದೇವರು ಸುಗ್ರೀವನ ಸಮ್ಮುಖದಲ್ಲಿ ಇಂಥಾ ಉಗ್ರ ವಚನಗಳಾಡಲಿಕ್ಕೆ, ಸುಗ್ರೀವ ಕೇಳಿ ಬಹಳ ಭಯ-ಗ್ರಸ್ತನಾದ. 'ನೀ ಹಿರಿಯ, ನನ್ನ ಪ್ರಾಣಪ್ರಿಯಸಖನಿದ್ದಿ. ನೀನು ಏನು ಮಾಡಿದ್ದು ಮಾಡು. ನಾ ನಿನ್ನ ಭಕ್ತನಿದ್ದೀನಿ' ಎಂದು ಇಂಥಾ ದೈನ್ಯವಚನಗಳ ಸುಗ್ರೀವ

ಆಡಲಿಕ್ಕೆ, ಸಮರ್ಥನಾದಂಥ ಹನುಮಂತ ಸುಗ್ರೀವನ ಸಂಗಡ ಮಾತನಾಡೋ ಪ್ರಕಾರ ಆಡಿ, ಸಮಸ್ತ ದ್ವೀಪಗಳಲ್ಲಿ ಜಂಬೂದ್ವೀಪ ರಮಣಕ ಸಿಂಹಳದ್ವೀಪಗಳೇ ಮೊದಲಾಗಿದ್ದಂಥ ಸಪ್ತದ್ವೀಪಗಳಲ್ಲಿದ್ದಂಥ ವಾನರರನ್ನು ಕರಸಿದನು. ಹಾಂಗಾದರೆ ಉಪದ್ವೀಪಗಳಿಂತ ಭಾರತ ಮೊದಲಾಗಿ ಉಳ್ಳಂಥ ಪುರಾಣಗಳಲ್ಲಿ ಹೇಳತವೆ. ಈ ದ್ವೀಪಗಳಿರಲಿಕ್ಕೆ ಏಳು ದ್ವೀಪಗಳಿಂತ ಏನು ಕಾರಣ ಹೇಳಬೇಕು ಎಂದಲ್ಲಿ, ಲಂಕಾ-ದ್ವೀಪದಲ್ಲಿ ರಾಕ್ಷಸಾಕ್ರಾಂತದಿಂದ ಕಪಿಗಳು ಹೋಗೋದಿಲ್ಲ. ಅದರಿಂದ ಅದರ ವ್ಯತಿರಿಕ್ತವಾಗಿ ಈ ಅಭಿಪ್ರಾಯದಿಂದ ಏಳೇ ದ್ವೀಪಗಳಿಂತ ಹೇಳಿದರು. ಸಕಲ ಕಪಿಗಳ ಕೂಡಿಸೋ ನಿಮಿತ್ತ ತೀವ್ರ ಮಾರ್ಗ ಹೋಗುವಂಥ ಕಪಿಗಳ ಸರ್ವಸ್ಥಳಿಗಳಿಗೆ ಕಳುಹಿಸಿಕೊಟ್ಟನು. ಸಪ್ತದ್ವೀಪಗಳಿಗೂ ಕಳುಹಿಸಿದ್ದೇನೆಂದಲ್ಲಿ, ಲವಣಸಮುದ್ರ ನೂರು ಯೋಜನ, ತಾರನೇ ಮೊದಲಾಗಿದ್ದಂಥ ಕಪಿಗಳು ಹಾರೋದರಲ್ಲಿ ಶಕ್ತರಾಗ ಲಿಲ್ಲ. ಕಿಷ್ಕಿಂಧಾದಲ್ಲಿ ಇದ್ದ ಕಪಿಗಳು, ತಾರಾದಿಗಳ ನೋಡಲಿಕ್ಕೆ ಅಸಮರ್ಥರು. ಇಂಥಾ ಕಪಿಗಳು ಸಪ್ತಸಮುದ್ರ ಹಾರಿ ದ್ವೀಪಗಳಿಗೆ ಹೋಗೋಣ, ಮಧ್ಯೆಮಧ್ಯೆ ಪರ್ವತಗಳ ಹಾರಿಹೋಗಿ, ಕಪಿಗಳ ತರೋ ಶಕ್ತಿ ಹ್ಯಾಂಗೆ ಅಲ್ಲಿದ್ದ ಕಪಿಗಳು ಸಮುದ್ರ ಹಾರಿಬರೋ ಶಕ್ತಿ ಹ್ಯಾಂಗೆ ಎಂದರೆ, ' ಮುಂದಿನ ಕಾರ್ಯಾನುಸಾರದಿಂದ ಕಪಿಗಳಿಗೆ ಆ ಶಕ್ತಿಯು ಸ್ವಾಮಿ ಕಡೆಯಿಂದ ಕೊಡಲ್ಪಟ್ಟಿತು ' ಎಂದು ಟಿಪ್ಪಣಿಕಾರರು ವ್ಯಾಖ್ಯಾನ ಮಾಡಿದ್ದಾರೆ.

ಸುಗ್ರೀವನ ಸ್ವೀಕಾರಪೂರ್ವಕದಿಂದ ಹನುಮಂತನಿಂದ ಕಳುಹಿಸಿ-ಕೊಡಲ್ಪಟ್ಟಂಥ ವಾನರರು, ಸಮಸ್ತ ಪರ್ವತಗಳಲ್ಲಿದ್ದಂಥ ಸರ್ವ ಕಪಿಗಳನ್ನೂ ಕೂಡಿಕೊಂಡು ಆಲಸ್ಯಮಾಡದಲೆ ಬಂದರು. ಅದೇ ಸಮಯದಲ್ಲಿ ರಾಮಚಂದ್ರ-ದೇವರು ಲಕ್ಷ್ಮಣಗೆ ಆಜ್ಞಾಪಿಸಿದ. ವಿಷಯಭೋಗಾಸಕ್ತಿಯಿಂದ ಉನ್ಮತ್ತ ನಾಗಿದ್ದಂಥ ಸುಗ್ರೀವಗೆ ಹನುಮಂತ ಶಿಕ್ಷಿಸಿದ್ದು ತಾನು ಬಲ್ಲರೂ ಸರಿಯೆ, ಸಮರ್ಥ ನಾದಂಥ ರಾಮದೇವರು ' ನನ್ನ ವಾಕ್ಯಗಳ ಸುಗ್ರೀವಗೆ ಶೀಘ್ರ ಹೋಗಿ ಹೇಳು ' ಎಂದು ಕಳುಹಿಸಿದನು. ವಾಕ್ಯಗಳು ಎಂಥಾವೆಂದರೆ ' ಸೀತಾನ್ನ ಹುಡುಕಿತರೋಂಥ ನನ್ನ ಕಾರ್ಯ ಮರತುಬಿಟ್ಟು ಉನ್ಮತ್ತನಾಗಿದ್ದಿ. ಇನ್ನು ದಾಕ್ಷಿಣ್ಯ ನೋಡೋ ಹಾಂಗೆ ಇಲ್ಲ. ವಾಲಿಯನ್ನ ದಾವ ಮಾರ್ಗದಲ್ಲಿ ಕಳುಹಿಸಿಕೊಟ್ಟಿ, ಅದೇ ಮಾರ್ಗ ದಿಂದ ನಿನ್ನ ಕಳುಹಿಸಿ ಕೊಟ್ಟೀನು. ಸ್ವಾರ್ಥಬುದ್ಧಿಯುಳ್ಳವ ತನ್ನ ಕಾರ್ಯ ಸಾಧಿಸಿಕೊಂಡವ್ಯಾಲೆ, ಬಹುಶಃ, ಪ್ರತ್ಯುಪಕಾರ ಮಾಡೋದರಲ್ಲಿ ಇಚ್ಛೆ ಮಾಡೋದಿಲ್ಲ.' ಹೀಂಗಂತ ಪೂಜ್ಯನಾದಂಥ ರಾಮದೇವರು ಚೆನ್ನಾಗಿ ಆಜ್ಞಾಪಿಸಿ ಸುತ್ತಿರಲಾಗಿ, ಧನುರ್ಬಾಣಗಳಿಂದ ಸಹಿತನಾಗಿ ಲಕ್ಷ್ಮಣನು ಕಿಷ್ಕಿಂಧಾಪಟ್ಟಣಕ್ಕೆ ಹೋದನು.

ಸುಗ್ರೀವ ಬಾಹೋ ಅಂಥಾ ಲಕ್ಷ್ಮಣನನ್ನ ಕಂಡು ಬಹಳೇ ಅಂಜಿದನು. ರಾಮ ಏನು ದಂಡಿಸ್ಯಾನೋ ಎಂದು, ಲಕ್ಷ್ಮಣಗೆ ಬೇಡಿಕೊಂಡು ಸಮಾಧಾನ ಮಾಡಿ 'ರಾಮನ ಪ್ರೀತಿ ನನ್ನ ಮ್ಯಾಲೆ ಆಗೋಹಾಂಗೆ ಮಾಡು' ಎಂದು ಲಕ್ಷ್ಮಣನಿಂದ ಸಹಿತನಾಗಿ ಬಹಳ ಅಂಜಿಕೆಯಿಂದ ರಾಮಚಂದ್ರದೇವರ ಪಾದಗಳ ಸಮೀಪವನ್ನು ಕುರಿತು ತೀವ್ರ ಐದಿದನು. 'ನಮ್ಮ ಸ್ವಾಮಿ ದೊಡ್ಡ ದಯಾಳು-ವಿದ್ದಾನೆ. ಲೇಶಮಾತ್ರ ಅಂಜಬ್ಯಾಡ. ಮನಸ್ಸಿನ ಶಂಕ ಬಿಡು' ಎಂದು ಹನುಮಂತ ನಿಂದ ಮೃದುವಚನಗಳಾಡಿಸಿಕೊಂಡು ಭಯರಹಿತನಾಗಿ ಕಪಿಗಳಿಗೆ ಅರಸಾದಂಥ ಸುಗ್ರೀವ, ಕಪಿಶ್ರೇಷ್ಠರುಗಳಿಂದ ಬರುತ್ತಿರಲಾಗಿ, ರಘುನಾಥ ಸುಗ್ರೀವನನ್ನ ನೋಡಿ ಸಂತೋಷವುಳ್ಳವನಾದನು. ಸ್ವಾಮಿಗೆ ನೂತನ ಸಂತೋಷವಿಲ್ಲ ಶಶ್ವದೇಕಪ್ರಕಾರ ಆನಂದಸಮುದ್ರನಾಗಿರಥಾನೆ. ಸಮರ್ಥನಾದಂಥ ರಾಮದೇವರು ಸಂಭ್ರಮದಿಂದ ಯುಕ್ತನಾಗಿ, ಪಾದಕಮಲದಲ್ಲಿ ಬಿದ್ದ ಸುಗ್ರೀವನ್ನ ಶೀಘ್ರದಿಂದ ಎತ್ತಿ ಆಲಿಂಗನ ಮಾಡಿಕೊಂಡನು. ಸುಗ್ರೀವ ಜಗದೀಶನಾದಂಥ ರಾಮದೇವರ ಸಮೀಪದಲ್ಲಿ ಸ್ವಾಮೀ ಅನುಜ್ಞೆಯಿಂದ ಕುಳಿತಂಥಾತನಾಗಿ, ಶೀಘ್ರ ಸೀತಾದೇವಿ ಹುಡುಕೋ ನಿಮಿತ್ತ ವಾನರರನ್ನು ಕಳುಹಿಸಿಕೊಟ್ಟನು. ಸ್ವಾಮಿ ವಿಶ್ವವ್ಯಾಪಕ ಸೀತಾದೇವಿ ಲಂಕಾದಲ್ಲಿ ಅಶೋಕವನವಲ್ಲಿದ್ದಾಳೆಂಬೋದು ಬಲ್ಲರೂ ಸರಿಯೆ, ರಾಜನೀತಿ ತೋರಿಸಬೇಕಾಗಿ ಸುಗ್ರೀವಗೆ ಆಜ್ಞಾಪಿಸಿದ.

ಸುಗ್ರೀವ, ಸ್ವಾಮಿ ಆಜ್ಞಾ ಶಿರಸಾವಹಿಸಿಕೊಂಡು ಪೂರ್ವ ದಕ್ಷಿಣ ಪಶ್ಚಿಮ ಉತ್ತರ ದಿಕ್ಕುಗಳಿಗೆ ಕಪಿಗಳನ್ನು ಕಳುಹಿಸಿಕೊಡತ ಇರಲಾಗಿ ಸಮರ್ಥನಾದಂಥ ರಾಮದೇವರು, ಹನುಮಂತನ ಕೂಡ ಮಾತನಾಡಥಾನೆ. 'ಎಲೈ ಹನುಮಂತ, ನನ್ನ ಕಾರ್ಯ ಸಾಧಿಸುವುದರಲ್ಲಿ ನೀನೇ ಶ್ರೇಷ್ಠ. ನಿನ್ನ ವಿನಾ ಒಬ್ಬಾನೊಬ್ಬನೂ ಸಮರ್ಥ-ನಾಗೋದಿಲ್ಲ. ಆದಕಾರಣ ನೀನು ನನ್ನ ಮುದ್ರಿಕೆ ತೆಗೆದುಕೊಂಡು ದಕ್ಷಿಣದಿಕ್ಕಿಗೆ ಹೋಗು,' ಎಂದು, ಕ್ಷರಾಕ್ಷರ ಪುರುಷರಿಗೆ ಉತ್ತಮನಾದಂಥ ರಘುನಾಥನಿಂದ ನುಡಿಸಿಕೊಂಡ ಆ ಹನುಮಂತ ವೃದ್ಧನಾದಂಥ ಜಾಂಬವಂತ ಅಂಗದನ ಕೂಡಿ-ಕೊಂಡು ದಕ್ಷಿಣದಿಕ್ಕಿಗೆ ಹೋದನು. ಕಪಿಗಳಿಗೆ ಒಂದು ತಿಂಗಳೊಳಗೆ ಬರಬೇಕೆಂದು ಸುಗ್ರೀವನಾಜ್ಞಾ ಇಹೋದು. ಆದರಿಂದ ಸುಗ್ರೀವನ ಶಾಸನ ಮೀರಲೊಶವಲ್ಲ, ಚಂಡಶಾಸನನಿದ್ದಾನೆ. ಒಂದು ತಿಂಗಳೊಳಗೆ ಬಾರದಿದ್ದರೆ ಉಗ್ರದಂಡನೆ ಮಾಡ್ಯಾ-ನೆಂದು ಪೂರ್ವ ಪಶ್ಚಿಮ ಉತ್ತರ ದಿಕ್ಕಿಗೆ ಹೋದರು. ಸೀತಾಶೋಧನೆ ತಿಳೀದಕಾರಣ ಮೂರು ದಿಕ್ಕಿನವರು ತಿರುಗಿ ಬಂದರು. ರಾಮದೇವರಿಂದ ಕಳುಹಿಸಿಕೊಂಡಂಥ ಹನುಮಂತ ಜಾಂಬವಂತ ಅಂಗದನೇವೆ ಮೊದಲಾದ ಕಪಿಗಳು ತಿಂಗಳೊಳಗೆ ಬರಲಿಲ್ಲಾದ ಕಾರಣ, ಬಹುಶಃ ಕಾರ್ಯ ಮಾಡಿಕೊಂಡು ಬಂದಾರೆಂದು ಸುಗ್ರೀವ ತಿಳಿದನು. ದಕ್ಷಿಣದಿಕ್ಕಿಗೆ ಹೋದವರು ಏನುಕಾರಣ ಬರಲಿಲ್ಲ ಎಂದಲ್ಲಿ, ಸಮಸ್ತ

ಪರ್ವತಗಳೊಳಗೆ ಶ್ರೇಷ್ಠವಾದಂಥ, ಐದಲಿಕ್ಕೆ ಶಕ್ಯವಲ್ಲದಂಥ ವಿಂಧ್ಯಗಿರಿಯನ್ನು ಪ್ರವೇಶ ಮಾಡಿದರು. ಸೀತಾದೇವಿಯನ್ನು ಹುಡುಕುವಂಥ ಕಪಿಶ್ರೇಷ್ಠರಿಗೆ ಒಂದು ತಿಂಗಳೊಳಗೆ ಬರಬೇಕಂತ ಆಯಕಟ್ಟು ಮಾಡಿದಂಥ ಸುಗ್ರೀವನ ಮಾತು ಮೀರಿ-ಹೋಯಿತು. ತರುವಾಯ ವಿಂಧ್ಯಗಿರಿಯಲ್ಲಿ ಅದ್ಭುತವಾದಂಥ ಬಿಲವನ್ನು ಐದಿದರು. ಬಿಲ ಎಂಥಾದ್ದು ಎಂದರೆ ದೈತ್ಯಬಡಿಗ್ಯಾ ಮಯನಿಂದ ನಿರ್ಮಿತವಾದಂಥಾದ್ದು. ಅದರಿಂದ ಉತ್ತಮ ವಿಚಿತ್ರವಾದಂಥಾದ್ದು. ಬಿಲವನ್ನು ನೋಡಿ ಬೃಹಸ್ಪತೀ ಅವ-ತಾರನಾದಂಥ, ಅಂಗದನ ಸೋದರಮಾವನಾದ ತಾರ ಎಂಬ ಕಪಿ ಮಾತನಾಡಥಾನೆ. 'ತಿಂಗಳೊಳಗೆ ಬರಬೇಕೆಂಬೋ ಸುಗ್ರೀವನಾಜ್ಞ ಮೀರಿಹೋಯಿತು; ಆತನು ಅತಿ ಕ್ರೂರನು, ಬಹು ಹಿಂಸಕನು. ನಾವು ಸುಗ್ರೀವನ ಸಮೀಪಕ್ಕೆ ಹೋಗೋದರಲ್ಲಿ ಸಮರ್ಥರಲ್ಲ. ನಾವು ಸರ್ವರೂ ಈ ಬಿಲದಲ್ಲಿ ಸುಖದಲ್ಲಿ ವಾಸಮಾಡುವ. ನೀನು ಅರಸಾಗು. ಕಪಿಸೇನೆಯಿಂದ ಯುಕ್ತರಾಗಿ ಇರೋ ಬನ್ನಿ. ನಾವು ಸರ್ವರೂ ವಾನರಾಧಿಪನಾದಂಥ ಸುಗ್ರೀವನ ಸಮೀಪಕ್ಕೆ ಹೋಗವಲ್ಲೆವು. ಏಕೆಂದರೆ ಈ ಬಿಲ ದಲ್ಲಿದ್ದವರಿಗೆ ಸುಗ್ರೀವ ಏನು ಮಾಡ್ಯಾನು. ನಮ್ಮಗಳಿಗೆ ರಾಮ-ಲಕ್ಷ್ಮಣರಿಂದ ಏನು ಪ್ರಯೋಜನ? ರಾಮ-ಲಕ್ಷ್ಮಣರು ಪ್ರಬಲರಿದ್ದಾರೆಂದೀಯ ಇಂಥಾ ಪರ್ವತಕ್ಕೆ ಬಂದು ಈ ಬಿಲ ಹುಡುಕುವುದಕ್ಕೆ ಒಬ್ಬರೂ ಸಮರ್ಥರಲ್ಲವು. ಇಷ್ಟಾಗಿ ನೀನು ಹೋದರೆ ನನ್ನ ಅಣ್ಣನ ಮಗ ಪ್ರಧಾನಿಯೆಂದು ಬಹುಮಾನ ಮಾಡ್ಯಾನೆ! ನಿನ್ನ ಕೊಂದಾನು. ಇನ್ನು ನನ್ನನ್ನೇ ಮೊದಲಾದವರನ್ನು ಕೊಂದಾನೋ, ಕೊಲ್ಲನೋ ಎಂತ ಏನು ಹೇಳಬೇಕು. ಆದಕಾರಣ ಚೆನ್ನಾಗಿ ನನ್ನ ಬುದ್ಧಿ ಕೇಳು' ಎಂದು ಅಂಗದನ ಕುರಿತು ಹೇಳಿದನು.

ಈ ಪ್ರಕಾರ ಸೋದರಮಾವನ ಮಾತು ಕೇಳಿ ಚಂದ್ರನವತಾರನಾದಂಥ ಅಂಗದ ಮಾತನಾಡಥಾನೆ. 'ಭಲಾ ಮಾವ! ಛಲೋ ಉಪಾಯ ಹೇಳಿಕೊಟ್ಟೆ! ಮರ್ಯಾದಿ ಮೀರದಂಥ ನಮ್ಮಗಳಿಗೆ ಕ್ಷಮಾಪಣಿ ಮಾಡಲಿಕ್ಕಿಲ್ಲ. ಏನುಕಾರಣ ಎಂದಲ್ಲಿ ರಾಜ್ಯದ ನಿಮಿತ್ತ ರಾಮಗೆ ಹೇಳಿ ಅತಿಹಿಂಸಕನಾದ ಸುಗ್ರೀವ ತಮ್ಮ ಅಣ್ಣನ ಕೊಲ್ಲಿಸಿದ. ರಾಜ್ಯೈಶ್ವರ್ಯ ಬಂದರೂ ಸರಿ ಅಪಾರ ಹೆಂಡಿರನ್ನ ಮಾಡಿಕೊಂಡು, ವಿಷಯಭೋಗದಲ್ಲಿರಬಾರದೆ. ಅತ್ತಿಗೆ ಎಂಬಾಕಿ ತನ್ನ ತಾಯೀ ಸಮಾನ, ನಮ್ಮ ತಾಯಿಗೆ ಭೋಗಸ್ತಾನೆ. ಬಹಳ ಬಲಿಷ್ಠನಾದಂಥವ ಇದರ ಹೊರ್ತು ರಾಮನ ಆಶ್ರಯಿಸಿದ್ದಾನೆ. ಇಂಥಾ ಸುಗ್ರೀವನಾಜ್ಞ ಮೀರಿದಂಥ ನಮ್ಮಗಳನ್ನ ಹ್ಯಾಂಗೆ ಕೊಲ್ಲದೇ ಇದ್ದಾನು. ನಿಮ್ಮನ್ನೂ ಕೊಂದಾನು ನಮ್ಮನ್ನೂ ಕೊಂದಾನು. ಇನ್ನು ಕಿಷ್ಕಿಂಧಾನಗರಕ್ಕೆ ಹೋಗಬಾರದು, ಎಂದು ವಾಲೀಮಗ ಅಂಗದ ಮಾತನಾಡಲಿಕ್ಕೆ, ಜಾಂಬವಂತ ಮೊದಲಾದ ಕಪಿಸೇನೆ ಏಕಮತ ಉಳ್ಳದ್ದಾಗಿ, 'ನೀನು ದಾವ ಪ್ರಕಾರ ಮಾತನಾಡಿದಿ ಅದೇ ಪ್ರಕಾರವಾಗಲಿ' ಎಂದು ಮಾತನಾಡಿ, ಅಂಗದಗೆ ಛತ್ರಾ

ಎತ್ತಬೇಕಂತ ಏಕಬುದ್ಧಿ ಉಳ್ಳಂಥ ಕಪಿಗಳ ಚೇಷ್ಟಾನೆಲ್ಲ ಹನುಮಂತ ಕಂಡು ಮಾತನಾಡಥಾನೆ. 'ಅಂಗದಗೆ ರಾಜ್ಯಪ್ರಾಪ್ತಿ ಆಗಬೇಕಾಗಿ ತಾರನಿಂದ ನುಡಿಯಲ್ಪಟ್ಟಂಥ ವಾಕ್ಯವು ನನಗೆ ತಿಳಿಯಿತು.: ಸರ್ವಥಾ ಆಗುವುದಿಲ್ಲ. ಏನುಕಾರಣವೆಂದರೆ, ರಾಮಕಾರ್ಯಕ್ಕೆ ವಿರೋಧವಾಕ್ಯವು. ನಾನು ವಾಯುಕುಮಾರನಿದ್ದೀನೆ. ನಾನು ಪ್ಲವಿಸೋಹಾಂಗಿಲ್ಲ. ನೀವು ಇಷ್ಟೂ ಮಂದಿ ಕೂಡಿ ಸಾನು ದಾನ ಭೇದ ದಂಡ ಚತುರ್ವಿಧ ಉಪಾಯ ಮಾಡಿದರೂ ನನ್ನ ಬುದ್ಧಿ ಶೆಳಕೊಂಬೋಅಲ್ಲಿ ಯತ್ನ ಮಾಡಿದರೂ ಶಕ್ತರಾಗುವುದಿಲ್ಲ. ಏಕೆಂದರೆ ಸನ್ಮಾರ್ಗದಲ್ಲಿದ್ದಂಥ ನನ್ನನ್ನು ಶಕ್ತಿಯಿಂದಲೂ ಸರ್ವ ಉಪಾಯದಿಂದಲೂ ಶೆಳಕೊಂಡು, ನಿಮ್ಮ ಬುದ್ಧಿಯೊಳಗೆ ಕೆಡವಿಕೊಂಬೋಣದರಲ್ಲಿ ಶಕ್ತರಾಗೋದಿಲ್ಲ. ನೀವಿಷ್ಟೂ ಮಂದಿ ಒಬ್ಬಳಿಯಾಗಿ ಬಂದರೂ ನನ್ನ ದಂಡಿಸೋದರಲ್ಲಿ ಸಮರ್ಥರಾಗುವುದಿಲ್ಲ. ದುರಂತಶಕ್ತಿ ಉಳ್ಳಂಥಾ ರಘುನಾಥಗೆ ನಿಮ್ಮ ಬಲವು ಅವಧ್ಯವಲ್ಲವು. ಪ್ರಳಯಕಾಲದಲ್ಲಿ ಈ ಪಂಚಾಶತ್ಕೋಟಿ ಬ್ರಹ್ಮಾಂಡ ಸುಟ್ಟುಬಿಡಥಾನೆ. ಇಂಥಾ ಸ್ವಾಮಿ, ನಿಮ್ಮ ಬಿಡಬಲ್ಲನೆ! ನಾನು ಆಡುವಂಥ ಮಾತು, ಆದರದಿಂದ ನಿಮಗೆ ಸಮ್ಮತವಾಯಿತೇ, ನನಗೆ ಮಹಾಸಂತೋಷ. ಎತಲಾನಿಕೆ ಸಮ್ಮತವಾಗದೆ ಹೋಯಿತೇ ಅನ್ಯಾಯಮಾರ್ಗದಲ್ಲಿ ಪ್ರವರ್ತರಾದಂಥ ನಿಮ್ಮಗಳ, ಬಲವತ್ತಿನಿಂದ ಚೆನ್ನಾಗಿ ಶಿಕ್ಷಿಸಿ, ಸನ್ಮಾರ್ಗಪ್ರವರ್ತಕರನ್ನ ಮಾಡ್ಯೇನು.' ಹೀಂಗೆ, ಹನುಮಂತ ಮಾತನಾಡಲಿಕ್ಕೆ, ಅತಿ ಭೀತಿಯುಳ್ಳವರಾಗಿ ಮೂಕಸ್ವಭಾವವನ್ನು ಐದಿದರು.

ಈ ಗೌಪ್ಯ ಮಾತು ದಾರು ಹೇಳಿದರೋ ಎಂದು ಬಹಳಾಶ್ಚರ್ಯಯುಕ್ತರಾಗಿ ಬಹಳ ಆಂಜಿಕೆಯುಕ್ತರಾಗಿ ಸರ್ವ ಕಪಿಗಳೂ ಹನುಮಂತನ ಬಳಿವಿಡಿದು ನಡೆದರು. ಗಂಭೀರ ಬುದ್ಧಿಯುಳ್ಳಂಥ ಹನುಮಂತದೇವರು ಮಹೇಂದ್ರಪರ್ವತ ಐದಿದರು. ಅಲ್ಲಿ ಸಮುದ್ರ ಅಡ್ಡಬಿದ್ದದೆ, ಹಾರಲಿಕ್ಕೆ ಶಕ್ಯವಲ್ಲ. ದಡದ ಪರಿಮಿತಿ ತಿಳಿಯಲಿಕ್ಕೆ ವಶವಲ್ಲ. ಇಂಥಾ ಕಪಿಸೇನೆ ಒಮ್ಮಿಂದೊಮ್ಮೆ ಸಮುದ್ರವನ್ನು ಕಂಡು ಬಹಳ ಬಳಲಲ್ಪಟ್ಟಂಥವರಾಗಿ ಹುಡುಕೋ ಆಸಿ ನಿಂತೀತೆಂದು ನಿಶ್ಚಯಿಸಿ, ನಿರಶನವ್ರತ ಮಾಡೋದರಲ್ಲಿ ಬುದ್ಧಿಮಾಡಿದರು. ಪ್ರಾಯೋಪವಿಷ್ಟರಾದಂಥ ಕಪಿಗಳು ಸಂಸಾರದಿಂದ ಕಡೆಗೆ ಮಾಡಿ ಮುಕ್ತಿಯನ್ನು ಕೊಡುವಂಥ ರಾಮಕಥ ಹೇಳತಾ, ಜಟಾಯು ಪಕ್ಷಿ ಮರಣವನ್ನು ಹೇಳಲು ಆ ಜಟಾಯುಪಕ್ಷಿ ಅಣ್ಣ ಸಂಪಾತಿ ಕೇಳಿದನು. ಸಂಪಾತಿ ಅಲ್ಲಿರಲಿಕ್ಕೆ ಕಾರಣವೇನೆಂದರೆ ಸಂಪಾತಿ ಜಟಾಯುಪಕ್ಷಿ ಅಣ್ಣ, ಸೂರ್ಯನ ಸಾರಥಿ ಅರುಣನ ಮಕ್ಕಳು. ತಮ್ಮ ಬಲಾಬಲಗಳು ಪರೀಕ್ಷ ಮಾಡಬೇಕಾಗಿ, ಇಬ್ಬರೂ ಆಕಾಶಮಂಡಲಕ್ಕೆ ಹಾರಿದರು. ಸೂರ್ಯಮಂಡಲದ ಸಮೀಪಕ್ಕೆ ಹೋದರು. ಜಟಾಯುಪಕ್ಷೀ ವೇಗ ಹೆಚ್ಚಿತು. ಸೂರ್ಯನ ಕಿರಣದಿಂದ ತಮ್ಮ ಸುಡಥಾನೆಂದು ಸಂರಕ್ಷಣಾರ್ಥವಾಗಿ ಸಂಪಾತಿ ತನ್ನ ಎರಡೂ ಪಖಗಳಿಂದ ನ್ಯರಳು

ಮಾಡಲಿಕ್ಕೆ ಸೂರ್ಯನ ಕಿರಣಗಳಿಂದ ಪಕ್ಷಗಳು ಸುಟ್ಟು, ಭೂಮೀ ವ್ಯಾಳಿ ಬಿದ್ದನು. ಹಾರಲಿಕ್ಕೆ ಶಕ್ತಿಯಿಲ್ಲದೆ ಹೋಗಿ ಬಹುಕಾಲ ಸಮುದ್ರತೀರದಲ್ಲಿರಲಿಕ್ಕೆ, ಸಂಪಾತಿಗೆ ಸೂರ್ಯಕಿರಣದಿಂದ ಸುಟ್ಟಂಥ ಪಕ್ಷಿಗಳು ರಾಮಕಥಾ ಕೇಳಲಿಕ್ಕೆ ಬಿಗುರಿಬಂದವು. ಪಕ್ಷಿ, ಬಿಗರಲಿಕ್ಕೆ ಕಪಿಸೇನಿ ಸಮೀಪಕ್ಕೆ ಬಂದು ' ಜಟಾಯು ಸತ್ತಾತ ದಾರು ?' ಹೀಂಗಂತ ಕೇಳಲಿಕ್ಕೆ, ಪೂರ್ವಕಥಾನೆಲ್ಲ ಪುನಃ ಹೇಳಿದರು. ಸಕಲ ವೃತ್ತಾಂತ ಕೇಳಿ, ' ನಮ್ಮ ತಮ್ಮಗೆ ರಾಮ ಸಂಸ್ಕಾರ ಮಾಡಿ ದಿವ್ಯಗತಿ ಕೊಟ್ಟಾನೆ. ಇನ್ಯಾಕೆ ನಾನು ದುಃಖಬಡಲಿ ?' ಎಂದು ಸಂಪಾತಿ ಹೇಳಿ ಸಮಾಧಾನವಾದ. " ಸೀತಾ ಶೋಧನಿ ದೆಸಿಯಿಂದ ಬಂದಿದ್ದೀವೆ ಎಂದು ಹೇಳಿ-ಕೊಳ್ಳುತ್ತಿದ್ದೀರಿ. ನನ್ನ ಮಗ ಸುಪಾರ್ಶ್ವ ಸೀತಾದೇವಿಯ ರಾವಣ ತೆಗೆದುಕೊಂಡು ಹೋಗಿದ್ದು ಇಟ್ಟ ಸ್ಥಳ ಕಂಡುಬಂದು ನನ್ನ ಮುಂದೆ ಹೇಳಿದ್ದಾನೆ. ' ಇಲ್ಲಿಗೆ ನೂರು ಯೋಜನ ಲಂಕಾಪಟ್ಟಣವದೆ. ಜನಕರಾಯನ ಪುತ್ರಿ ಜಾನಕಿಯನ್ನು ಅಶೋಕವನದಲ್ಲಿಟ್ಟಿದ್ದಾನೆ. ರಾಮಸ್ಮರಣಿ ಮಾಡತಾ ಕುಳಿತಿದ್ದಂಥ ಸೀತಾದೇವೀನ ಪ್ರತ್ಯಕ್ಷ ಕಂಡುಬಂದೀನಿ ' ಎಂದು ಹೇಳಿದ " ಎಂತ ಸಂಪಾತಿ ಕಪಿಶ್ರೇಷ್ಠರ ಮುಂದೆ ಮಾತನಾಡಿದನು.

ತರುವಾಯ ಆ ಕಪಿಗಳು ಬ್ರಹ್ಮದೇವರ ಮಗನಾದಂಥ ಜಾಂಬವಂತನ ಕುರಿತು ಲಂಕಾಪಟ್ಟಣಕ್ಕೆ ಹಾರುವುದರಲ್ಲಿ ದಾರುದಾರಿಗೆ ಎಷ್ಟೆಷ್ಟು ಬಲವದೆ ಎಂದು ಹೇಳಿಕೊಂಡರು ಎಂದಲ್ಲಿ, ಹತ್ತು ಯೋಜನ ಆರಂಭ ಮಾಡಿಕೊಂಡು ಕ್ರಮದಿಂದ ಹತ್ತು ಹತ್ತು ಯೋಜನ ಹೆಚ್ಚಾಗಿ, ಸಮುದ್ರ ಹಾರೋ ವಿಷಯದಲ್ಲಿ ತಮ್ಮಗಳ ಬಲ ಹೇಳಿಕೊಂಡರು. ಈ ಪ್ರಕಾರ, ಹೆಚ್ಚು ಹೆಚ್ಚು ಹಾರುವುದರಲ್ಲಿ ನೀಲ ಮೈಂದ ವಿವಿದನೇ ಮೊದಲಾಗಿ ಉಳ್ಳಂಥ ಬಲವಂತರು, ಎಂಬತ್ತು ಯೋಜನದಕಿಂತ ಹೆಚ್ಚು ಹಾರುವುದರಲ್ಲಿ ಶಕ್ತರಾಗುವುದಿಲ್ಲ. ದಾರುದಾರು ಎಷ್ಟೆಷ್ಟು ಹಾರಿದರು ಎಂದಲ್ಲಿ, ಗಜ ಹತ್ತು ಯೋಜನ; ಗವಾಕ್ಷ ಇಪ್ಪತ್ತು ಯೋಜನ; ಶರಭ ಮೂವತ್ತು ಯೋಜನ; ನೀಲ ನಲವತ್ತು ಯೋಜನ; ಗಂಧಮಾದನ ಐವತ್ತು ಯೋಜನ; ಮೈಂದ ಅರುವತ್ತು ಯೋಜನ; ವಿವಿದ ಎಪ್ಪತ್ತು ಯೋಜನ; ತಾರ ಎಂಬತ್ತು ಯೋಜನ; ಈ ಪ್ರಕಾರ ಗಜನ ಆರಂಭವಾಗಿ ತಾರ ಕಡೆಯಾಗಿ, ಎಂಭತ್ತು ಯೋಜನದಕಿಂತ ಹೆಚ್ಚು ಹಾರುವುದರಲ್ಲಿ ಸಮರ್ಥರಾಗಲಿಲ್ಲ.

ಆ ವ್ಯಾಳ್ಯಾದಲ್ಲಿ ಯಮಧರ್ಮನವತಾರ, ಆದಿಸೃಷ್ಟಿಯಲ್ಲಿ ಬ್ರಹ್ಮದೇವರ ಸೀನಿನಿಂದ ದಾವಾತ ಉದ್ಭವಿಸಿದ್ದಾನೆ ಆ ಜಾಂಬವಂತ, ತನಗೆ ತೊಂಭತ್ತು ಯೋಜನ ಹಾರಿಹೋಗೋ ಸಾಮರ್ಥ್ಯ ಅದೆ ಎಂದು ಹೇಳಿಕೊಂಡು, ' ಸ್ವಾಭಾವಿಕ ಇಷ್ಟುಹಾರಿಕೆ ಎಂತ ತಿಳಕೊಬ್ಯಾಡಿ' ಎಂದು ಪುನಃ ಜಾಂಬವಂತ ಮಾತನಾಡಥಾನೆ. ' ನಮ್ಮ ಸ್ವಾಮಿ, ವಾಮನಾವತಾರ ಮಾಡಿ ಬಲಿಚಕ್ರೇಶ್ವರನ ದೆಸಿಯಿಂದ ಮೂರು

ಪಾದ ಭೂಮಿ ವ್ಯಾಜದಿಂದ ಲೋಕಗಳ ಅಪಹರಿಸುತ್ತ ಇರಲಾಗಿ, ಶ್ರೀವಾಮನ ತ್ರಿವಿಕ್ರಮನಾಗಿ ಬ್ರಹ್ಮಾಂಡಕ್ಕೆ ಒಂದು ಪಾದ ನೀಡಿ ಮತ್ತೊಂದು ಪಾದದಿಂದ ಭೂಮಿ ವ್ಯಾಪಿಸಿ ಮತ್ತೊಂದು ಪಾದಕ್ಕೆ ಸ್ಥಳವಿಲ್ಲದೆ ಬಲೀ ಶಿರಸ್ಸಿನಲ್ಲಿ ಪಾದವಿಟ್ಟ ಪಾತಾಳಕ್ಕೆ ಇಳುಹಿದ ವಾರ್ತೆ ಕೇಳಿ, ಆ ವ್ಯಾಳ್ಯಾಧಲ್ಲಿ ಸಂತೋಷಶಬ್ದವನ್ನು, ನಾರಾಯಣನಿಂದ ಮೂರು ಲೋಕವೂ ತೆಗೆದುಕೊಳ್ಳಲ್ಪಟ್ಟಿತೆಂತ ದೊಡ್ಡ ಧ್ವನಿ ಮಾಡುವಂಥ ನನ್ನಿಂದ ಮೂರೂ ಲೋಕವು ಭ್ರಾಂತವಾಯಿತು. ಆ ಸಮಯದಲ್ಲಿ ಸಂತೋಷದಿಂದ ದೇವರ ಕೀರ್ತಿ ಕೊಂಡಾಡತ ಹಾರತ ಜಿಗೀತ ಬರಲಿಕ್ಕೆ ನನ್ನ ಮೊಳಕಾಲಿಗೆ ಮೇರುಪರ್ವತದ ಕೋಡುಗಲ್ಲು ತಗಲಿತು. ಅದರಿಂದ ಕಾಲು ಅಲುಗದೆ, ಮೊದಲಷ್ಟು ಹಾರೋದಿಲ್ಲ. ಪೂರ್ವದಲ್ಲಿ ಸ್ವಾಭಾವಿಕ ತೊಂಭತ್ತಾರು ಯೋಜನ ಹಾರತಿದ್ದೆ. ಕಾಲು ನೊಂದದರಿಂದ ಶಕ್ತಿ ಕಡಿಮೆಯಾಯಿತು. ಸದ್ಯ ತೊಂಭತ್ತು ಯೋಜನ ಹಾರಥೀನಿ' ಎಂದು ಹೇಳಿದ. ತರುವಾಯದಲ್ಲಿ, ಕುಮಾರನಾದಂಥ ಅಂಗದ ಪ್ರಧಾನಿ ಮಾತನಾಡಥಾನೆ. 'ಈ ಸ್ಥಳದಿಂದ ನೂರು ಯೋಜನ ಹಾರೇನು. ತಿರುಗಿ ಬರೋಣ ನನಗೆ ತಿಳಿಯದು, ಹಾರಿಹೋದ ತರುವಾಯ ಕಾರ್ಯ ಮಾಡುವುದು ನನ್ನಿಂದಾಗದು' ಎಂದು ಅಂಗದ ಮಾತನಾಡಿದ ತರುವಾಯ ಜಾಂಬವಂತ ಸಮಸ್ತರಾದಂಥ ಕಪಿಗಳಿಂದ ನೂರು ಯೋಜನ ಹೋಗಿ ಬಾಹೋಣ ಪೂರ್ತಿ ಇಲ್ಲವೆಂದು, ಶ್ರುತವಾದಂಥ ರಾವಣನ ಬಲ ನೋಡಿ ರಾಕ್ಷಸಾಧಿಪನಾದಂಥ ರಾವಣನ ಪಟ್ಟಣಕ್ಕೆ ಅತ್ಯಂತವಾಗಿ ಹೋಗೋದಕ್ಕೆ ಅಶಕ್ತಿಯನ್ನು ನೋಡಿ ತನ್ನೊಳಗೆ ತಾನು ಆಲೋಚನಿ ಮಾಡಿಕೊಂಡು ಮಾತನಾಡಥಾನೆ. 'ಈ ದಾವ ಸಂಪಾತಿಪಕ್ಷಿಯು ಈ ಸ್ಥಳದ ದೆಸಿಯಿಂದ ನೂರು ಯೋಜನ ವ್ಯವಧಾನದಲ್ಲಿ ಇರೋಂಥ ಚಿತ್ರಕೂಟಪರ್ವತವು ,ಲಂಕೇಗೆ ಪ್ರಾಕಾರವಾಗೇದೆ. ಇದರ ಹೊರ್ತು, ಮಾರ್ಗದಲ್ಲಿ ಕೆಲವು ವಿಘ್ನಗಳು ಬಹಳ ಅವಂತ ಹೇಳತದೆ.' ಕಪಿನಾಯಕರ ಬಹಳ ಬಳಲಿಕೆ ಕೇಳತ ಬರಲಿಕ್ಕೆ, ಸಂಪಾತಿ ನೋಡಿ ಮಾತನಾಡಿದ. 'ನಿಮ್ಮ ಗರ್ವ ಪರಿಹಾರವಾಗಬೇಕಾಗಿ, ನಿಮ್ಮ ದುರ್ಬಲತನ ಪ್ರಕಾಶವಾಗಬೇಕಾಗಿ ಮುಖ್ಯ-ಪ್ರಾಣ ಸುಮ್ಮನಿದ್ದಾನೆ. ಬಲಿಷ್ಠತನದಲ್ಲಿ ವಾಯುಕುಮಾರ ನಿಸ್ಸೀಮನಿದ್ದಾನೆ. ಆತನ ವಿನಾ ಕಾರ್ಯವಾಗದು' ಎಂದು ಸಂಪಾತಿ ನುಡಿದನು. ಜಾಂಬವಂತ ಆ ಮಾತು ಕೇಳಿದನು. ಆದಕಾರಣದಿಂದ 'ಹನುಮಂತ ಒಬ್ಬನೇ ಸಮರ್ಥನು. ಆತನಿಂದ ಮತ್ತೊಬ್ಬರು ಸಮರ್ಥರಿಲ್ಲ' ಎಂದು ಈ ಪ್ರಕಾರ ಮಾತನಾಡಿ, ಜಾಂಬವಂತನು ವಾಯುಕುಮಾರನಾದಂಥ ಹನುಮಂತದೇವರ ಕೂಡ ಮಾತನಾಡಥಾನೆ. 'ಈ ಕಾರ್ಯ ಮಾಡೋವಲ್ಲಿ ನೀ ಒಬ್ಬನೇ ಸಮರ್ಥ. ಈ ಕಪಿಸೇನಿ ಬಂದ ಕೆಲಸವಾಗಲಿಲ್ಲ. ಸುಗ್ರೀವನಾಜ್ಞೆ ಮೀರಿತು. ಸಮಸ್ತರೂ ತಮ್ಮ ಪ್ರಾಣ-ತ್ಯಾಗ ಮಾಡಥೇವೆಂಥಾರೆ. ಆದರಿಂದ, ಈ ಕಾರ್ಯ ಮಾಡಿ, ಶೀಘ್ರ ಕಪಿಗಳ ಸಂರಕ್ಷಣಿ ಮಾಡು' ಎಂದು ಬೇಡಿಕೊಂಡನು.

ಈ ಕಾರ್ಯವು ಹನುಮಂತದೇವರಿಗೆ ಬೇಕಾದದ್ದು. ಜಾಂಬವಂತನಿಂದಲೂ ಸ್ತೋತ್ರಮಾಡಿಸಿಕೊಂಡು ಹನುಮಂತದೇವರು ವಾನರಗಳ ದುರ್ಬಲತನ ಪ್ರಕಟ ಮಾಡಿಕೊಟ್ಟು ಪರಿಪೂರ್ಣ ಶಕ್ತಿಯುಳ್ಳಂಥ ರಾಮದೇವರ ಧ್ಯಾನಮಾಡಿ ರಾಮನ ಆಜ್ಞಾದಂತೆ ಮಾಡೋದಕ್ಕೆ, ಶೀಘ್ರದಿಂದ ಬೆಳೆದನು. ಹನುಮಂತನ ನೋಡಲಿಕ್ಕೆ ಬಲದಲ್ಲಿ ಶ್ರೀಲಕ್ಷ್ಮೀನಾರಾಯಣರ ಹೊರ್ತು ದಾರೂ ಇಲ್ಲ. ಇಂಥಾ ಮುಖ್ಯ-ಪ್ರಾಣನ ಮಗ ಹನುಮಂತದೇವರು ಸಮುದ್ರ ಹಾರಲಿಕ್ಕೆ ಉದ್ಯುಕ್ತನಾದನೆಂಬಲ್ಲಿಗೆ, ಶ್ರೀಮದಾಚಾರ್ಯರು ಹೇಳಿದ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯವನ್ನು ಪ್ರಾಕೃತದಿಂದ ವಿವರಿಸುವ ' ಸಮುದ್ರತರಣನಿಶ್ಚಯಃ ' ಎಂಬ ಆರನೇ ಅಧ್ಯಾಯ ಸಂಪೂರ್ಣವು.

ಶ್ರೀ ಮಧ್ವೇಶಾರ್ಪಣಮಸ್ತು

ಅಧ್ಯಾಯ ೭

ಶ್ರೀರಾಮಚರಿತೇ ಸುಂದರಕಾಂಡ ಕಥಾನಿರೂಪಣಂ

(ಹನೂಮತ್ಪ್ರತಿಯಾನಂ)

ಈ ಏಳನೇ ಅಧ್ಯಾಯದಲ್ಲಿ—ವಾಯುಕುಮಾರನಾದಂಥ ಹನುಮಂತದೇವರು ಸಮುದ್ರಹಾರಬೇಕೆಂದು ಇಚ್ಛೆಯುಳ್ಳವನಾಗಿ ನಿತ್ಯವ್ಯಾಪ್ತನಾದಂಥ ಷಡ್ಗುಣೈಶ್ವರ್ಯಗುಣಸಂಪನ್ನನಾದಂಥ ಬ್ರಹ್ಮಾದಿಗಳಿಗೆ ಈಶನಾದಂಥ ಬಲವೀರ್ಯದಲ್ಲಿ ಮಹಾರ್ಣವನಾದಂಥ ರಾಮದೇವರಿಗೆ ನಮಸ್ಕಾರ ಮಾಡಿ, ಸ್ವಾಮೀ ಸ್ಮರಣೆ ಮಾಡತ ಪರ್ವತಶ್ರೇಷ್ಠವಾದಂಥ, ಮಹೇಂದ್ರಪರ್ವತವನ್ನು ಪಾದಗಳಿಂದ ಮೆಟ್ಟಿ ಜಿಗಿದು ಹಾರಿದನು. ಹಾರೋ ಸಮಯದಲ್ಲಿ ಸಮುದ್ರ ಕದಡೋ ಅಂಥಾದ್ದಾಯಿತು. ಮಹಾಬಲಿಷ್ಠ ಹನುಮಂತದೇವರ ವಾಯುವೇಗದಿಂದ ಶೆಳಸಿಕೊಳ್ಳಲ್ಪಟ್ಟಂಥ ಸಮುದ್ರನು, ಜಲಚರಪ್ರಾಣಿಗಳ ಸಮೂಹದಿಂದ ಯುಕ್ತನಾಗಿ ಅನುಸರಿಸಿ ಹೋಗ-ಥಾನೋ ಎಂಬೋಪಾದಿ ತೋರತಿಹೋದು! ಹಾಂಗೆ ವೃಕ್ಷಗಳಿಂದ ಸಮನ್ವಿತ ವಾದಂಥ ಮಹೇಂದ್ರ ಪರ್ವತವೂ ಹಾಂಗೇ ತೋರತಿಹೋದು! ಪೂರ್ವದಲ್ಲಿ ವಾಯುದೇವರ ಕೈಯಿಂದ ಬಿಸ್ಟಿಸಿಕೊಂಡಂಥ ಮೈನಾಕಪರ್ವತವೂ ವಾಯು-ದೇವರ ಶ್ರಮ ಪರಿಹಾರಾರ್ಥವಾಗಿ, ಉದಕದಿಂದ ಮೇಲಕ್ಕೆ ಎದ್ದಿತು. ಆ ಗಿರಿ ದಾರು ಸಮುದ್ರದೊಳಗೆ ಏನುಕಾರಣ ಇತ್ತು ಎಂದಲ್ಲಿ, ಮಹಾರುದ್ರದೇವರ ಮೈದುನ, ಪಾರ್ವತೀ ತಮ್ಮನಾಗಬೇಕು. ಆ ಪರ್ವತ, ದೇವೇಂದ್ರ ಪಖ ಛೇದಿಸೋ ಸಮಯದಲ್ಲಿ ವಾಯುದೇವರಿಗೆ ಶರಣುಹೊಕ್ಕ. ಆ ವಾಯುದೇವರಿಂದ ತನ್ನ ಪಖಗಳ ಉಳಿಸಿ-ಕೊಂಡು, ದೇವೇಂದ್ರಗೆ ಅಂಜಿ ಸಮುದ್ರದೊಳಗೆ ಬಿಸ್ಟಿಸಿಕೊಳ್ಳುವಂಥಾತ ನಾಗಿದ್ದನು. ಅನೇಕ ಕೋಡುಗಲ್ಲುಗಳಿಂದ ಯುಕ್ತನಾಗಿ, ಮೈನಾಕಪರ್ವತವು ಹನುಮಂತನ ವಿಶ್ರಮಾರ್ಥವಾಗಿ ಸಮುದ್ರವನ್ನು ಛೇದಿಸಿ ಏಳುವಂಥಾದ್ದಾಯಿತು. ಆ ಹನುಮಂತದೇವರು ವಿಶ್ರಾಂತಿಗಾಗಿ ಇಚ್ಛೆ ಮಾಡಲಿಲ್ಲ ಏನುಕಾರಣ ಎಂದಲ್ಲಿ ಶ್ರಮರಹಿತನಾದಂಥಾತ. ಅದೇನು ಕಾರಣ ಎಂದರೆ, ಅಪರಿಮಿತಪರಾಕ್ರಮವುಳ್ಳಂಥ ಹನುಮಂತದೇವರಿಗೆ ಶ್ರಮ ಎಲ್ಲಿಯದು!

ಮೈನಾಕಪರ್ವತಾಭಿಮಾನಿಯಾದ ಪುರುಷಾಕಾರವನ್ನು ಆಲಿಂಗನ ಮಾಡಿ ಪೂಜೆ ತೆಗದುಕೊಂಡು ಮುಂದಕ್ಕೆ ಹೋಗಲಿಕ್ಕೆ, ದೇವತೆಗಳಿಂದ ವರವು ಕೊಟ್ಟು ಕಳುಹಿಸಲ್ಪಟ್ಟಂಥ ಸುರಸಾ ಎಂಬ ನಾಗಜನನಿಯನ್ನು ಕಂಡನು. ಆಕೆಗೆ ವರವು ಕೊಟ್ಟ ಪ್ರಕಾರ ಹೇಳತ್ತಾರೆ. ಹನುಮಂತದೇವರ ಸ್ವಕೀಯವಾದಂಥ ಬಲ ಪರೀಕ್ಷ

ಮಾಡಬೇಕೆಂದು ದೇವತಿಗಳಿಂದ ವರವು ಕೊಡಲ್ಪಟ್ಟಿತು. 'ನೀನು ದಾವ ದಾವುದು ಭಕ್ಷಿಸೇನಂತ ಇಚ್ಛೆ ಮಾಡತಿದ್ದಿ ಅದು, ಭಕ್ಷಿಸೋವರಲ್ಲಿ ಯೋಗ್ಯ ಳಾಗು' ಎಂದು ವರವು ಕೊಟ್ಟುಕಳುಹಿದಂಥ ನಾಗಜನನಿಯ ಬಾಯೊಳಗೆ ಪ್ರವೇಶ ಮಾಡಿ ಆ ಕ್ಷಣದಲ್ಲಿ ಅದೇ ಬಾಯೊಳಗಿಂದ ಹೊರಗೆ ಹೊರಟು, ದೇವತಿಗಳು 'ಕೊಟ್ಟಂಥ ವರ ಸತ್ಯಮಾಡಿದ' ಎಂದು ಸಂತೋಷಪಟ್ಟರು. ದೇವತಿಗಳಿಗೆ ಸ್ನೇಹಿತನಾದಂಥ ಹನುಮಂತದೇವರ ಉತ್ಕೃಷ್ಟಬಲವನ್ನು ನೋಡಲೋಸುಗ, ದೇವತಿಗಳು ಬಂದು ನೋಡಿ ಪುಷ್ಪವೃಷ್ಟಿಯನ್ನು ಕರೆದು ಸಂತೋಷಪಡಿಸಿದರು. ಆ ದೇವತಿಗಳಿಂದ ಆದರ ಮಾಡಿಸಿಕೊಂಡು ಆಕಾಶಮಾರ್ಗದಿಂದ ಮುಂದಕ್ಕೆ ಹೋಗಲಿಕ್ಕೆ, ಸಿಂಹಿಕಾ ಎಂಬಂಥ ಹೆಸರುಳ್ಳ ಛಾಯಾಗ್ರಹ ರಾಕ್ಷಸಿಯನ್ನು ಕಂಡನು. ಬ್ರಹ್ಮದೇವರು ಆ ರಾಕ್ಷಸಿಗೆ ಲಂಕಾಪಟ್ಟಣ ರಕ್ಷಿಸೋದರಲ್ಲಿ 'ಲಂಕಾ-ಪ್ರವೇಶವಾದೇವೆಂಬೋ ಸಮಸ್ತರುಗಳನ್ನು ನುಂಗಿಬಿಡು, ದಾರಿಂದಲೂ ವಧ್ಯಳಾಗ ಬ್ಯಾಡ' ಎಂದು ಸಾಮರ್ಥಿಯನ್ನು ಕೊಟ್ಟಿದ್ದನು. ಆ ಛಾಯಾಗ್ರಾಹಿಯು ಹನುಮಂತದೇವರ ಛಾಯಾವನ್ನು ನುಂಗಿದಳು. ಹನುಮಂತನು ಆಕೀ ಶರೀರ ದೊಳಗೆ ಪ್ರವೇಶ ಮಾಡಿ ಶೀಘ್ರದಿಂದ ಸೀಳಿಬಿಟ್ಟನು. ಹಾಂಗಾದರೆ ಬ್ರಹ್ಮದೇವರ ವರವು ಉಲ್ಲಂಘನ ಮಾಡಿ, ಏನುಕಾರಣ ಸೀಳಿದನು ಎಂದಲ್ಲಿ, ಲೋಗರಿಗೆ ತನ್ನ ಅಪರಿಮಿತ ಸಾಮರ್ಥಿಯನ್ನು ತೋರಿಸಬೇಕಾಗಿ, ಬ್ರಹ್ಮದೇವರ ವರಬಲದಿಂದ ಅತ್ಯಂತ ರಕ್ಷಿತೆಯಾದಂಥ ರಾಕ್ಷಸಿಯನ್ನು ಸಂಹಾರ ಮಾಡಿದನು. ಆ ಹನುಮಂತನ ರೂಪವಾಗಿದ್ದಂಥ ತ್ರಿಕೂಟಪರ್ವತದ ಕೋಡಗಲ್ಲುಮೇಲೆ ಹಾರಿ ಅಲ್ಲಿ ಕುಳಿತು ಸಮಗ್ರ ಲಂಕಾಪಟ್ಟಣವನ್ನು ನೋಡಿ ಹಾರೋ ಸಮಯದಲ್ಲಿ, ಅತಿ ಅಭಿವೃದ್ಧವಾದ ಸ್ವರೂಪವಿದ್ದವನು, ಸಂಕೋಚರೂಪವುಳ್ಳಂಥಾತನಾದನು, ಬೆಕ್ಕಿನ ಸ್ವರೂಪ ಉಳ್ಳಾತನಾಗಿ ರಾತ್ರಿ ವ್ಯಾಳ್ಯಾದಲ್ಲಿ ಲಂಕಾಪಟ್ಟಣ ಪ್ರವೇಶ ಮಾಡಬೇಕೆಂದು ಇಚ್ಛೆ-ಯುಳ್ಳಾತನಾಗಿ ಹೋಗಲಿಕ್ಕೆ, ಲಂಕೀ ಎಂಬೋ ನಾಮವುಳ್ಳ ಲಂಕಾಭಿಮಾನಿ ದೇವತಿಯ ಕಂಡನು. ಆ ಲಂಕಾಭಿಮಾನಿ ದೇವತ್ತಿಯು, 'ಎಲ್ಲಿಗೆ ಹೋಗಥೀಯ' ಎಂದು ತಡೆಗಟ್ಟಲಿಕ್ಕೆ ಹನುಮಂತದೇವರು ತನ್ನ ಮುಷ್ಟಿಪೆಟ್ಟಿನಿಂದ ಹೊಡೆದು, ಹಿಟ್ಟುಹಿಟ್ಟು ಮಾಡಲಿಕ್ಕೆ, ಬಹಳ ಭಯಗ್ರಸ್ತಳಾಗಿ ಒಳಕ್ಕೆ ಹೋಗೆಂದು ಮಾರ್ಗ ಬಿಡಲಿಕ್ಕೆ ಶೀಘ್ರದಿಂದ ಲಂಕಾಪಟ್ಟಣ ಪ್ರವೇಶ ಮಾಡಿದನು. ಲಂಕೀಗೆ ಬ್ರಹ್ಮ-ದೇವರ ವರ ಇಹೋದು. 'ಲಂಕಾಪಟ್ಟಣಕ್ಕೆ ಒಂದು ಕಪಿ ಎಂದು ಬಂದೀತೋ ಅಂದು ಲಂಕಾಪಟ್ಟಣಕ್ಕೆ ಆಳಿವು ಬಂದೀತೆಂದು ತಿಳಿ:' ಹೀಂಗೆಂದು ಬ್ರಹ್ಮ-ದೇವರು ಹೇಳಿದ್ದ. ಬ್ರಹ್ಮದೇವರ ವರ ನೆನಸಿ, ಹನುಮಂತನ ಕೈಯ ಹೊಡಿಸಿ ಕೊಂಡು ಮಾರ್ಗ ಬಿಟ್ಟಳು.

ಸರ್ವೇಶ್ವರ ಸಕಲವನ್ನು ಬಲ್ಲರೂ ಸರಿಯೆ, ಹ್ಯಾಂಗೆ ತಾ ಏನೂ ಅರಿಯನು ಎಂಬೋಹಾಂಗೆ ಲೋಕಕ್ಕೆ ವಿಡಂಬನಿ ತೋರಸಥಾನೋ ಹಾಂಗೆ, ಸ್ವಾಮೀ ಭೃತ್ಯರು ತಾವು ಬಲ್ಲರೂ ಸರಿಯೇ ವಿಡಂಬನಿ ತೋರಸಥಾರೆ. ಲಂಕಾಸಟ್ಟಣದ ಒಳಗೆ ಹೊರಗೆ ಹುಡಕತಾ ಬರಲಿಕ್ಕೆ, ಸ್ತ್ರೀಪುರುಷರು ನಗ್ನರಾಗಿ ಬಿದ್ದಿಹೋರು. ತಾ ಬ್ರಹ್ಮಚಾರಿ ನಗ್ನಸ್ತ್ರೀ ನೋಡಬಹುದೇ ಎಂದಲ್ಲಿ, ಸರ್ವ ಪ್ರಾಣಿಗಳ ಅಂತರ್-ನಿಯಾಮಕನಾಗಿರಥಾನೆ. ಇಂಥಾ ಕುಟಿಲಸ್ತ್ರೀಯರಲ್ಲಿ ಮನಸ್ಸು ಎರಗಿಸಬಲ್ಲನೆ! ಬಹು ಸ್ಥಳಗಳ ನೋಡಿ ಹುಡಕತಾ ಬರಲಿಕ್ಕೆ, ಅಶೋಕವನದೊಳಗೆ ಶಿಂಶುಪಾ-ವೃಕ್ಷದ ಕೆಳಗೆ ಕುಳಿತಂಥ ಸೀತಾ ಪ್ರತಿಕೃತಿಯನ್ನು ಕಂಡನು. ನರಲೋಕ ವಿಡಂಬನಿ ಮಾಡುವಂಥ ರಾಮದೇವರ ಅಭಿಪ್ರಾಯವನ್ನು ತಿಳಿದು, ತಾನೂ ರಾಮದೇವರ ವಿಡಂಬನಾನುಸಾರವಾಗಿ ದೈತ್ಯರ ಮೋಹಿಸೋದಕ್ಕೆ ವಿಡಂಬನಿ ಮಾಡಿ, ಸೀತಾ ಪ್ರತಿಕೃತಿಯ ಕೂಡ ಆಲೋಚನಿ ಮಾಡಿ ಸ್ವಾಮಿ ದಾವ ಪ್ರಕಾರ ಚೇಷ್ಟ ಮಾಡಥಾನೆ, ಅದೇ ಪ್ರಕಾರ ಚೇಷ್ಟದಿಂದ ಯುಕ್ತಳಾದಂಥ ಸೀತಾ ಪ್ರತಿಕೃತಿಗೆ ಆಲೋಚನಿ ಮಾಡಿದ ತರುವಾಯ ರಾಮದೇವರು ಕೊಟ್ಟಂಥ ಮುದ್ರಿಕೆ ವಿಶ್ವಾಸಾರ್ಥವಾಗಿ ಕೊಟ್ಟನು. ಇನ್ನು ಚೂಡಾಮಣಿ ಕೊಡಬೇಕಲ್ಲ—ಸೀತಾ-ದೇವೇರ ಚೂಡಾಮಣಿ ಈ ಪ್ರತಿಕೃತಿಗೆ ಹ್ಯಾಂಗೆ ಬಂತು ಎಂದು ಶಂಕಾ ಬಂದರೆ ಪರಿಹರಿಸಥಾರೆ. ಸೀತಾದೇವೇರಿಗೆ ಎಷ್ಟು ಆಭರಣಗಳಿದ್ದಾವೆ ಅಷ್ಟೂ ಆಭರಣಗಳು ಪ್ರತಿಕೃತಿಯಲ್ಲಿದ್ದಾವೆ. ಹಾಂಗಾದರೆ ಸೀತಾದೇವಿಗೆ ಆಭರಣಗಳು ಇಲ್ಲಧಾಂಗಾಯಿ ತಲ್ಲ ಎಂದಲ್ಲಿ, ಆಭರಣಗಳು ಎರಡು ರೂಪವಾದವು. ಸೀತಾದೇವಿಯಲ್ಲಿದ್ದ ಆಭರಣ ಬ್ಯಾರೆ ಪ್ರತಿಕೃತಿಯಲ್ಲಿದ್ದ ಆಭರಣಗಳು ಬ್ಯಾರೆ ಎಂದು ತಿಳೀಬಾರದು. ಎರಡೂ ಆಭರಣ ಒಂದೇ ಅಂತ ತಿಳೀಬೇಕು. ಸೀತಾ ಪ್ರತಿಕೃತಿಯು ತನಗೆ ರಾಮದೇವರು ಅಭಯಹಸ್ತ ಕಳುಹಿದನೆಂದು ಮುದ್ರಿಕೀ ತಲೀ ಮ್ಯಾಲೆ ಇಟ್ಟುಕೊಂಡು, ತಾನು ರಾಮದೇವರಿಗೆ ನಮಸ್ಕಾರ ಮಾಡಬೇಕಲ್ಲ, ದಿವ್ಯವಾದಂಥ ತನ್ನ ಚೂಡಾರತ್ನವನ್ನು 'ಸ್ವಾಮೀ ಪಾದಕ್ಕೆ ಸಮರ್ಪಿಸು' ಎಂದು ಹನುಮಂತನ ಕೈಯಲ್ಲಿ ಕೊಟ್ಟಳು. ಈ ಪ್ರಕಾರ ಹನುಮಂತದೇವರಿಂದ ಹಾಂಗೆ ಸೀತಾಪ್ರತಿಕೃತಿಯಿಂದ ಏನುಕಾರಣ ತೋರಸಲ್ಪಟ್ಟಿತು? ರಾಕ್ಷಸರ ಮೋಹನಾರ್ಥ ಎಂದೀರೀ, ಸಮಸ್ತ ರಾಕ್ಷಸರು ಮಲಗಿದ್ದರು. ಹಾಂಗಾದರೆ ಅವರ ಸ್ವಭಾವವು ಹಾಂಗೇ ಎಂದೀಯ, ದೈತ್ಯರ ಮೋಹಿಸಥಾರೆಂಬೋದಕ್ಕೆ ವ್ಯರ್ಥತ್ವ ಬಂದೀತು. ಆದಕಾರಣ ವಿಡಂಬನಿ ಮಾಡಲಿಕ್ಕೆ ಏನು ಕಾರಣವೆಂದಲ್ಲಿ, ಆ ರಾಕ್ಷಸರು ವಿಡಂಬನಿ ಕಾಣದಿದ್ದರೂ ಸರಿಯೆ ವ್ಯರ್ಥವಲ್ಲ. ಅದೇನೆಂದರೆ ಸ್ವರ್ಗಲೋಕದಲ್ಲಿ ಸಂಚಾರ ಮಾಡುವಂಥ ಋಷಿಗಳೇ ಮೊದಲಾದ ಸಮಸ್ತರು ಕಂಡರೂ, ಅವರಿಗೆ ನಿಮಿತ್ತವೇನು ಎಂದಲ್ಲಿ, ಈ ವಿಡಂಬನಿ ಅವರಿಗೆ ವಿನೋದ ಮಾತ್ರ. ಇದಿಷ್ಟು ಬುದ್ಧಿ ಉತ್ಪಾದನಾರ್ಥವಾಗಿ ಸರ್ವತ್ರದಲ್ಲಿ

ಇದ್ದು ನೋಡುವಂಥ ಕಲಿ ಮೊದಲಾದ ರಾಕ್ಷಸರ ವಂಚನಿ ಮಾಡೋದರಗೋಸ್ಕರ, ಇದಿಷ್ಟೂ ಸತ್ಯವೆಂದು ಮಿಥ್ಯಾಜ್ಞಾನಿಗಳ ಉಪಪಾದನಾರ್ಥವಾಗಿ ವಿಡಂಬನಿ ಮಾಡಲ್ಪಟ್ಟಿತು.

ರಾಮದೇವರನ್ನುಜ್ಞೆ ತೆಗೆದುಕೊಂಡು ಸಮುದ್ರ ಹಾರಿ ಸೀತಾಪ್ರತಿಕೃತಿಗೆ ಉಂಗುರ ಕೊಡೋಣ ಚೂಡಾಮಣಿ ತೆಗೆದುಕೊಂಬೋಣ ಇವೇ ಮೊದಲಾದ ಸಮಸ್ತ ಕಾರ್ಯ ಮಾಡಿ, ಭಯರಹಿತನಾದಂಥ ಹನುಮಂತದೇವರು ಬುದ್ಧಿವಂತರೊಳಗೆಲ್ಲ ಶ್ರೇಷ್ಠ—ಇದನ್ನೆಲ್ಲ ರಾತ್ರಿ ವ್ಯಾಳ್ಯಾದಲ್ಲಿ ರಾಕ್ಷಸರು ದಾರೂ ಕಾಣಲಿಲ್ಲ ಅದರಿಂದ—ತನ್ನ ಪರಾಕ್ರಮ ರಾಕ್ಷಸರಿಗೆ ತೋರಿಸಬೇಕೆಂದು ನಿಶ್ಚಯಮನಸ್ಸು ಮಾಡಿದನು. ತನ್ನ ಪರಾಕ್ರಮ ಪ್ರಕಾರ ತೋರಸಥಾನೆ. ಆ ತರುವಾಯದಲ್ಲಿ ಸಣ್ಣ ರೂಪವಿದ್ದು ಸ್ಥೂಲಶರೀರ ಧರಿಸಿ ಸೀತಾಪ್ರತಿಕೃತಿ ಇದ್ದಂಥ ಶಿಂಶುಪಾವೃಕ್ಷ ಒಂದು ಉಳಿಸಿ, ಅಶೋಕವನ ಎಂತ ಹೆಸರುಳ್ಳಂಥ ರಾವಣನ ವನ ಸಮಗ್ರ ಕೆಡಿಸಿ ಸಮರ್ಥನಾದಂಥ ಹನುಮಂತದೇವರು ಶೀಘ್ರದಿಂದ ರಾಕ್ಷಸರ ಸಂಹಾರ ಮಾಡಬೇಕೆಂದು ಇಚ್ಛೆಯುಳ್ಳಂಥಾತನಾಗಿ, ಅತ್ಯಂತವಾಗಿ ಪುನಃಪುನಃ ದೊಡ್ಡ ಧ್ವನಿಯು ಹ್ಯಾಂಗೆ ಆಗೋದೋ ಹಾಂಗೆ ಸಿಂಹನಾದವನ್ನು ಮಾಡಿ ವನದ ಬಹಿರ್ದ್ವಾರದ ವ್ಯಾಲೆ ಏರಿದನು. ಸಮಸ್ತ ರಾಕ್ಷಸರೂ ಭಯವುಳ್ಳವರಾದರು. ತರುವಾಯ ರಾವಣನು ವಿಲಕ್ಷಣವಾದ ಕಪಿಶ್ರೇಷ್ಠ ಹನುಮಂತನ ದೆಸೀಂದ ಸ್ವವನ ನಾಶವಾದ ಚೇಷ್ಟಾವನ್ನು ಕೇಳಿ, 'ಶೀಘ್ರದಿಂದ ಕಪಿಯನ್ನು ಹಿಡತನ್ನಿ' ಎಂದು ಆಜ್ಞಾಪಿಸಿ ಬಹುಮಂದಿ ಕಿಂಕರರುಗಳನ್ನು ಕಳುಹಿಸಿಕೊಟ್ಟನು.

ರಾವಣನಿಂದ ಪ್ರೇರಿತರಾದಂಥ ಭೃತ್ಯರುಗಳು ಮಹಾರುದ್ರನ ವರಬಲದಿಂದ ಮರಣರಹಿತರಾದವರೂ, ಒಬ್ಬೊಬ್ಬನ ಮುಂದೆ ನಡೆವಂಥ ರಾಕ್ಷಸರೂ—ಎಂಭತ್ತು ಸಹಸ್ರ ಸೇನಿ ಸಂಖ್ಯಾ ಹೇಳಥಾರೆ, ಎಂಭತ್ತುಕೋಟಿ ಸೇನಾನಾಯಕರೂ ಭಲ್ಲಾ-ಯುಧಗಳಿಂದ ಯುಕ್ತರಾಗಿ—ಇಂಥಾ ಮಹದ್ಬಲವು ದೇವತಿಗಳಿಗೆ ಅಂತರಾತ್ಮ-ನಾದಂಥ ಸೂತ್ರನಾಮಕ, ವಾಯುಕುಮಾರನಾದ ಹನುಮಂತನ ಸುತ್ತುಗಟ್ಟಿದರು. ಈ ಬಲದ ಆಯುಧಗಳಿಂದ ಹೊಡಿಸಿಕೊಂಡ ಹನುಮಂತದೇವರು ಸಮಸ್ತ ರಾಕ್ಷಸರ ಬಲವನ್ನು ತನ್ನ ಆಂಗೈಪೆಟ್ಟಿನಿಂದ ಹೊಡೆದು, ಪುಡಿಪುಡಿ ಮಾಡಿದನು. ಈ ವಾರ್ತೆ ರಾವಣ ಕೇಳಿ ಬಹಳ ಕೋಪಾವಿಷ್ಟನಾಗಿ, ಪ್ರಹಸ್ತ ಮೊದಲಾದ ಪ್ರಧಾನಿ ಮುಕ್ಕಳು ಏಳು ಮುಂದಿ ಪರ್ವತಕ್ಕೆ ಸಮಾನವಾದಂಥವರೂ ರುದ್ರನ ವರಬಲದಿಂದ ಗರ್ವಿಷ್ಟ-ರಾದವರೂ ಇಂಥಾವರನ್ನ ಕಳಿಸಿಕೊಡಲಿಕ್ಕೆ, ಹನುಮಂತದೇವರು ತನ್ನ ಪಾದ ಗಳಿಂದ ಒರಸಿ ಬಿಟ್ಟನು. ಆ ತರುವಾಯದಲ್ಲಿ ಸೇನಿ ಮುಂಭಾಗದಲ್ಲಿ ನಡೆವಂಥ ಸಮೀಚೀನವಾದಂಥ ರುದ್ರನ ವಾಕ್ಯಗಳಿಂದ ಅತಿ ಗರ್ವಿಷ್ಟರಾದಂಥ, ದುರ್ದರ್ಶ ವಿರೂಪಾಕ್ಷ ಯೂಥಪಾಕ್ಷ ಸುಕರ್ಣ ಪ್ರಸೇನ ಎಂದು ಹೆಸರುಳ್ಳ ಐದು ಮುಂದಿಗಳನ್ನು

ಕೊಂದು, ರಾವಣನ ಸಮಸ್ತವಾದಂಥ ಸೇನೆಯಲ್ಲಿ ಮೂರರಲ್ಲಿ ಒಂದುಪಾಲು ಕೊಂದನು.

ರಾಕ್ಷಸಾಧಿಪ ರಾವಣನು, ಹನುಮಂತನ ಅಸದೃಶ ಬಲವನ್ನು ಕೇಳಿ, ತನ್ನ ಬಲಕ್ಕೆ ಸಮಬಲವುಳ್ಳಂಥ ಅಕ್ಷಕುಮಾರ ಎಂದು ಹೆಸರುಳ್ಳಂಥ, ತನ್ನ ಮಗನನ್ನ ಯುದ್ಧಕ್ಕೆ ಕಳುಹಿದನು. ಆ ಅಕ್ಷಕುಮಾರನು ಸಾಕ್ಷಾತ್ ವಾಯುಕುಮಾರನಾದಂಥ ಹನುಮಂತದೇವರ ಮ್ಯಾಲೆ ತೀಕ್ಷ್ಣವಾದ ಬಾಣಗಳು ಅಭಿಮಂತ್ರಿಸಿ ಹಾಕಿದನು. ಈತನ ಬಾಣಗಳ ಮಳಿಯಿಂದ ಹನುಮಂತನ್ನ ಅಲ್ಲಾಡಿಸೋಣ ಆಗಲಿಲ್ಲ. ಹನುಮಂತನು ಮಂಡೋದರೀ ಮಗನಾದ ಅಕ್ಷಕುಮಾರನ್ನ ನೋಡಿ ಇವನು ರಾವಣನ ಮಗ, ರಾಕ್ಷಸಾಧಿಪನ ಮೂರರಲ್ಲಿ ಒಂದು ಭಾಗ ಅಂತ ತಿಳಿದು ಆಲೋಚನಿ ಮಾಡಿದನು. 'ರಾವಣನ್ನಿಡಬೇಕು. ರಾಮದೇವರ ಭಾಗ, ಮತ್ತೊಬ್ಬರಿಂದ ಕೊಲ್ಲಲ್ಪಡಬಾರದು. ಇಂದ್ರಜಿತನ ನಾ ಕೊಂದರೆ ಸಮಸ್ತ ಕಪಿಗಳು ಇಂದ್ರಜಿತನ ಸಾಮರ್ಥಿ ಕಾಂಬೋದಿಲ್ಲ. ರಾವಣ ಇಂದ್ರಜಿತ ಅಕ್ಷ-ಕುಮಾರ ಈ ಮೂರು ಮಂದಿಯೊಳಗೆ ಅಕ್ಷಕುಮಾರನ ನಾನು ಕೊಂದೇನು' ಎಂದು ತನ್ನೊಳಗೆ ತಾನೇ ಆಲೋಚನಿ ಮಾಡಿ, ಅವನ್ನ ಶೀಘ್ರದಿಂದ ಎರಡುಕಾಲು ಹಿಡದು ವ್ಯಾಲಕ್ಕೆ ಹಾರಿಸಿ ಹನುಮಂತದೇವರು ಚಕ್ರದೋಪಾದಿ ತಿರುಗಿಸೋಣದ ರಿಂದ, ಮೃತಪ್ರಾಯನಾದ ಅಕ್ಷಕುಮಾರನ್ನ ಭೂಮಿವ್ಯಾಲೆ ಕ್ಷಣಮಾತ್ರದಲ್ಲಿ ಅಪ್ಪಳಿಸಿಬಿಟ್ಟನು. ಇವನು ಮೃತನಾದ ವಾರ್ತಿ ರಾವಣ ಕೇಳಿ, ಕ್ಲೇಶದಿಂದ ಬಹಳ ಸಂತಪ್ತನಾಗಿ, ಅಕ್ಷಕುಮಾರನ ಅಣ್ಣನಾದಂಥ ಇಂದ್ರಜಿತನ ಕಳುಹಿಸಿಕೊಟ್ಟನು. ಆ ಇಂದ್ರಜಿತನೂ ಉತ್ತಮವಾದಂಥ ಮಂತ್ರಗಳಿಂದ ಅಭಿಮಂತ್ರಿಸಿ ಬಿಟ್ಟಂಥ ಬಾಣ ಗಳನ್ನು, ವಾನರೋತ್ತಮನಾದ ಹನುಮಂತನ ಮ್ಯಾಲೆ ಹಾಕಿದನು. ಆ ಬಾಣಗಳು ತಗುಲಿದ ಕಾಲಕ್ಕೂ ಹನುಮಂತನ ಅಲ್ಲಾಡಿಸೋದರಲ್ಲಿ ಸಮರ್ಥವಾಗಲಿಲ್ಲ. ಆ ಬಾಣದಿಂದ ಮಣಿದುಬಾರನೆಂದು, ದಾರಿಂದಲೂ ಸಹಿಸಲಿಕ್ಕೆ ಶಕ್ಯವಲ್ಲದೆ ಇದ್ದಂಥ ಬ್ರಹ್ಮಾಸ್ತ್ರವನ್ನು ಅಭಿಮಂತ್ರಿಸಿ ಬಿಟ್ಟನು. ಆ ಬ್ರಹ್ಮಾಸ್ತ್ರದಿಂದ ಹೊಡಿಸಿಕೊಂಡ ಕಾಲಕ್ಕೂ ಪರಿವಿ ಮಾಡಲಿಲ್ಲ. ಮನಸಾ ಆಲೋಚನಿ ಮಾಡಥಾನೆ. 'ಬ್ರಹ್ಮದೇವರ ವರಗಳು ನನ್ನಿಂದ ಅನೇಕ ಮೀರಲ್ಪಟ್ಟವು. ದೈತ್ಯದಾನವರಿಗೆ ಬ್ರಹ್ಮದೇವರ ವರ-ಬಲಗಳು ಖರೆ ಕಾಣಿಸಬೇಕು. ಈ ಅಸ್ತ್ರ ಉಲ್ಲಂಘನ ಮಾಡಿದರೆ ಬ್ರಹ್ಮರುದ್ರಾದಿಗಳು ಮುನ್ನಿಸದೇ ಹೋದಾರು. ಅದರಿಂದ ಬ್ರಹ್ಮದೇವರ ಅಸ್ತ್ರ ನನ್ನಿಂದ ಮುನ್ನಿಸಲಿಕ್ಕೆ ತಕ್ಕಂಥಾದ್ದು' ಎಂದು 'ಈ ಸಮಯದಲ್ಲಿ ನಾನು ಮುನ್ನಿಸೇನು' ಎಂದು ಆಲೋಚನಿ ಮಾಡಿದನು. ಒಂದು ಪ್ರಯೋಜನ ಹೇಳಥಾರೆ. "ನನ್ನ ಹಿಡದದರಿಂದ ರಾಕ್ಷಸರ ಸಮೂಹವು, ನನ್ನ ಏನು ಮಾಡೀತು! ಈ ರಾಕ್ಷಸರೂ ಅಂದಾರು 'ಈ ರಾಮದೂತ ಒಂದು ರಾವಣನ ಕಾಣದೆ ಕಳ್ಳತನದಲ್ಲಿ ಹೋದ' ಎಂದು. ಹೀಂಗೆ ಆಗಬಾರದು.

ರಾವಣನ ಕಂಡು ಅವಗೆ ತಕ್ಕ ಮಾತಾಡಿ ತುಚ್ಛೀಕರಿಸಿ ಸ್ವಾಮೀ ಬಳಿಗೆ ಹೋಗ-ಬೇಕು. ಈ ರಾಕ್ಷಸರು ತೆಗೆದುಕೊಂಡುಹೋದರೆ ರಾವಣನ ಕಾಣಥೇನೆ.” ಈ ಪ್ರಕಾರ ಎರಡು ಆಲೋಚನಿ ತಿಳಿದು ಸುಮ್ಮಗೆ ನಿಂತನು. ಆ ನಿಂತಂಥ ಹನುಮಂತ ದೇವರನ್ನ ರಾಕ್ಷಸರುಗಳು ಬ್ರಹ್ಮಾಸ್ತ್ರ ವ್ಯತಿರಿಕ್ತ ಮತ್ತೆ ಕೆಲವು ಪಾಶಗಳಿಂದ ಶೀಘ್ರ ಕಟ್ಟಿದರು. ಇಂದ್ರಜಿತನ ಬ್ರಹ್ಮಾಸ್ತ್ರವೀರ್ಯ ಕೆಟ್ಟುಹೋಯಿತು.

ತರುವಾಯ ಆ ರಾಕ್ಷಸರುಗಳು ಹನುಮಂತನನ್ನ ಹಿಡಕೊಂಡು, ನಿಶಾ-ಚರೇಶನಾದ ರಾವಣನ ಸಮೀಪಕ್ಕೆ ತಂದರು. ರಾವಣ ಹನುಮಂತನ ಕೇಳಥಾನೆ. ಎಲೋ ಕಪಿಯೇ! ಏತಕ್ಕೆ ಬಂದಿದ್ದಿ? ಏನು ಕಾರಣ ನಿನ್ನಿಂದ ಅಶೋಕವನ ನಾಶನಾದಿ ಪ್ರಯೋಜನ ಮಾಡಲ್ಪಟ್ಟಿತು?’ ಈ ಪ್ರಕಾರ ನುಡಿಸಿಕೊಂಡು ಹನು. ಮಂತದೇವರು, ಪಾಪಿ ಕೂಡ ಮಾತನಾಡಬೇಕಲ್ಲ ಎಂದು ರಘುನಾಥ ದಾವ ದಿಕ್ಕಿನಲ್ಲಿದ್ದಾನೆ, ಆ ದಿಕ್ಕಿಗೆ ನಮಸ್ಕಾರ ಮಾಡಿ ಮಾತನಾಡಥಾನೆ. ‘ಅಪರಿಮಿತ ಪರಾಕ್ರಮ ಉಳ್ಳಂಥ ರಾಮದೇವರ ಭೃತ್ಯ ನಾ ವಾಯುಕುಮಾರ. ನಿನ್ನ ಕುಲ ನಾಶ ಮಾಡುವಲ್ಲಿ ಸಮರ್ಥ, ಹೀಂಗೆ ತಿಳಕೊ. ನಮ್ಮ ಸ್ವಾಮಿ ರಾಮದೇವರ ಹೆಂಡತಿ ಸೀತಾದೇವಿಯ ಶೀಘ್ರ ಬಿಟ್ಟುಕೊಟ್ಟಿಯಾ ಒಳಿತಾಯಿತು. ಇಲ್ಲವೆ ನಿನ್ನ ಪುತ್ರ ಮಿತ್ರ ಬಾಂಧವರ ಸಹಿತವಾಗಿ ವಿನಾಶ ಐದತಿ. ಮನುಷ್ಯರು ನಮ್ಮ ಆಹಾರ ನೆಂದು ಗರ್ವ ಮಾಡಬ್ಯಾಡ. ರಘುನಾಥನ ಬಾಣ ದಾರೂ ಧರಿಸಲಾರರು. ನಿನಗೆ ವರವು ಕೊಟ್ಟ ಬ್ರಹ್ಮರುದ್ರಾದಿ ದೇವಶ್ರೇಷ್ಠರೂ ಸಹವಾಗಿ, ರಾಮಬಾಣ ಧರಿಸೋದರಲ್ಲಿ ಸಮರ್ಥರಾಗೋದಿಲ್ಲ. ಅಲ್ಪಬುದ್ಧಿಯುಳ್ಳ ನೀನು ಧರಿಸಲಾರಿ ಎಂದು ಏನು ಹೇಳಬೇಕು. ಅಚಿಂತ್ಯ ಕರ್ಮಚೇಷ್ಟ ಉಳ್ಳಂಥ ರಾಮದೇವರ ಕೋಪವ್ಯಾಳ್ಯಾದಲ್ಲಿ ಮುಂದೆ ನಿಂದ್ರೋದರಲ್ಲಿ, ಸುರಾಸುರ ನಾಗಲೋಕದ ಪುರುಷ ರೊಳಗೆ ‘ದಾವ ಪುರುಷ ಶಕ್ತನಾದಾನು!’ ಈ ಪ್ರಕಾರ ಹನುಮಂತ ಮಾತ-ನಾಡಲಿಕ್ಕೆ, ರಾವಣಗೆ ಬಹಳ ಕೋಪ ಬಂತು. ಈ ಕಪೀನ್ನ ಕೊಲ್ಲಬೇಕಂತ ಉದ್ಯುಕ್ತನಾದ. ತನ್ನ ವೈರೀನ್ನ ಕೊಲ್ಲಬೇಕಲ್ಲದೆ ದೂತನ್ನ ಕೊಲ್ಲಬಾರದೆಂದು ವಿಭೀಷಣ ರಾವಣಗೆ ಬೇಡಿಕೊಂಡು, ಕೊಲ್ಲೋದು ನಿವಾರಿಸಿದನು. ಕಪಿಗೆ ಅಂಗ-ನ್ಯೂನ ಮಾಡಬೇಕೆಂದು ಬಾಲಕ್ಕೆ ಬೆಂಕಿ ಹಚ್ಚರಿ ಎಂದು ರಾಕ್ಷಸರಿಗೆ ರಾವಣ ಆಜ್ಞಾಪಿಸಿದನು. ತರುವಾಯ ರಾಕ್ಷಸರು ಅಶೇಷ ವಸ್ತ್ರಗಳ ತಂದು ಬಾಲಕ್ಕೆ ಸುತ್ತಿ ಬೆಂಕಿ ಹಚ್ಚಿದರು. ಅಗ್ನಿಯೂ ಹನುಮಂತದೇವರ ಬಾಲ ಸುಡಲಿಲ್ಲ. ಏಕೆಂದರೆ ಅಗ್ನಿ, ವಾಯೂಗೆ ಸಖನಾಗಬೇಕು. ಅದರಿಂದ ಬಾಲ ಸುಡಲಿಲ್ಲ. ವ್ಯಥೆರಹಿತ ನಾದಂಥ ಉತ್ಕೃಷ್ಟಬಲವುಳ್ಳಂಥ ಹನುಮಂತದೇವರು, ಲಂಕಾಪಟ್ಟಣ ಸುಡ-ಬೇಕೆಂದು ಕುತೂಹಲದಿಂದ, ಬಾಲಕ್ಕೆ ವಸ್ತ್ರ ಸುತ್ತೋಣ ಮೊದಲಾದ, ರಾಕ್ಷಸರುಗಳ ಚೇಷ್ಟನೆಲ್ಲ ಸಹಿಸಿಕೊಂಡು ಬಾಲವನ್ನು ತಿರಗಿಸಿ ಸಮಗ್ರ ಪಟ್ಟಣ

ವನ್ನೂ ಸುಡಬೇಕೆಂಬೋ ಬುದ್ಧಿಯಿಂದ ಸುಮ್ಮಗಿದ್ದನು. ತನ್ನ ಬಾಲದಲ್ಲಿದ್ದಂಥ ಅಗ್ನಿಯಿಂದ ಸಮಗ್ರ ಲಂಕಾಪಟ್ಟಣವನ್ನು ಸುಟ್ಟು ಭಸ್ಮ ಮಾಡಿದನು. ಇದೇನು ದೊಡ್ಡ ಪರಾಕ್ರಮ ಮಾಡಿದ ಎಂದಲ್ಲಿ, ವಿಶ್ವಕರ್ಮನಿಂದ ನಿರ್ಮಿತವಾದಂಥ ಲಂಕಾ ಪಟ್ಟಣವನ್ನು ಹನುಮಂತದೇವರು ಅಗ್ನಿಯಿಂದ ಸುಟ್ಟುಬಿಟ್ಟನು. ಸುವರ್ಣರತ್ನ-ಗಳಿಂದ ನಿರ್ಮಿತವಾದಂಥ ಸಮಸ್ತ ಪಟ್ಟಣವನ್ನು ಹಾಂಗೆ, ರಾಕ್ಷಸೋತ್ತಮರ ಸಹವಾಗಿ ಸುಟ್ಟು ಸಂತೋಷದಿಂದ ಯುಕ್ತನಾಗಿ ಸಿಂಹನಾದ ಮಾಡಿದನು.

ಇನ್ನು ಹನುಮಂತದೇವರ ಚರಿತ್ರೆ ಮುಗಿಸಥಾರೆ. ಹನುಮಂತದೇವರು ಇಂದ್ರಜಿತನಿಂದ ಸಿಕ್ಕಾತನಾಗಿ, ರಾವಣನನ್ನು ತೃಣಸಮಾನ ಮಾಡಿದ. ತಂದಿ-ಮಕ್ಕಳು ನೋಡತಿರಲಿಕ್ಕೆ ಲಂಕಾಪಟ್ಟಣ ಸುಟ್ಟು, ಭಸ್ಮಮಾಡಿ ಹೋಗುವಂಥಾತ-ನಾದನು. ಇತ್ತಲಾಗಿ ಕಪಿಸೇನಿ ಬಹಳ ಚಿಂತಾತುರವಾಗಿ, ಸುಗ್ರೀವ ಉಗ್ರದಂಡನಿ ಮಾಡ್ಯಾನು ದಿವಸ ಮೀರಿಹೋಯಿತು. ಬಂದ ಕಾರ್ಯವಾಗಲಿಲ್ಲ, ಹಾರಿಹೋದ ಹನುಮಂತ ಬರಲಿಲ್ಲ. ಸುಗ್ರೀವಗೆ ಏನಂತ ಮಾರಿ ತೋರಿಸಬೇಕೆಂದು ಪ್ರಾಯೋಪ-ವೇಶಕ್ಕೆ ಕುಳಿತಿಹೋರು. ವ್ಯರ್ಥ ದಿವಸ ಕಳೇಬಾರದೆಂದು ರಾಮಗಾಯನ ಮಾಡತಿಹೋರು. ಹನುಮಂತದೇವರು ಪುನಃ ಸಮುದ್ರ ಒಂದು ಹಾರಿಕೇಲೆ ಹಾರಿ ಕಪಿಗಳ ಸಮೀಪಕ್ಕೆ ಬಂದನು. ಸ್ವಜಾತಿ ಆದಂಥ ಅಂಗದನೇ ಮೊದಲಾದ ಕಪಿ-ಗಳಿಂದ, ಪೂಜಾಸಾಧನದ್ರವ್ಯಗಳಿಂದ ಪೂಜಿ ಮಾಡಿಸಿಕೊಂಡನು.

ಕಪಿಗಳೆಲ್ಲ ಹನುಮಂತ ಹೋದ ಕಾರ್ಯ ಸಾಧಿಸಿಕೊಂಡು ಸೀತಾದೇವಿ ಚೂಡಾರತ್ನ ತೆಗೆದುಕೊಂಡು ಬಂದಾನೆಂದು ಬಹು ಸಂತೋಷದಿಂದ ಹಾರತಾ ಕುಣೀತಾ ಕಪಿಸೇನಿ ಕಿಷ್ಕಿಂಧಾಪಟ್ಟಣಕ್ಕೆ ನಡೆದರು. ಕಿಷ್ಕಿಂಧಾಪಟ್ಟಣದ ಸಮೀಪ ದಲ್ಲಿ ಕಪಿಗಳ ಅರಸಾದ ಸುಗ್ರೀವನ ವನವಿತ್ತು. ಸುಗ್ರೀವನ ಸೋದರಮಾವ ಜೇನುತುಪ್ಪ ಒದಗಿಸಿ ಸುಗ್ರೀವಗೆ ಕೊಡತಿಹ. ಈ ಕಪಿಗಳೂ ವನದೊಳಗೆ ಹೊಕ್ಕು ದಿವ್ಯವಾದಂಥ ಮಧುಪಾನ ಮಾಡಿದರು. ಈ ವರ್ತಮಾನ ಸುಗ್ರೀವ ಕೇಳಿ ಬಹಳಕ್ಕೆ ಕೃತಕಾರ್ಯರಾಗಿ ಬಂದಿದ್ದಾರಾದೀತು ಎಂದು ಸಂತೋಷದಿಂದ ಮಾರ್ಗಪ್ರತೀಕ್ಷ ನಮಾಡತ ಕುಳಿತಿರಲಿಕ್ಕೆ, ಇವರುಗಳು ಸಮರ್ಥನಾದಂಥ ರಾಮದೇವರ ಸಮೀಪವನ್ನು ಕುರಿತು ಬಂದರು. ಬ್ರಹ್ಮಾದಿಗಳಿಗೆ ಈಶನಾದಂಥ ಅನಂತಗುಣಗಳಿಂದ ಮನೋಹರ ನಾದಂಥ ರಾಮದೇವರ ಸಮೀಪಕ್ಕೆ ಬಂದು ಕಪಿಶ್ರೇಷ್ಠರಿಂದ ಯುಕ್ತನಾಗಿ, ಸೀತಾ-ಪ್ರತಿಕೃತಿಯಿಂದ ಕೊಡಲ್ಪಟ್ಟಂಥ ಚೂಡಾರತ್ನವನ್ನು ಸ್ವಾಮೀ ಪಾದಗಳಲ್ಲಿ ಸಮರ್ಪಿಸಿ, ರಾಮದೇವರಿಗೆ ಅತಿಭಕ್ತಿಯಿಂದ ಸರ್ವಾವಯವಗಳಿಂದ ನಮಸ್ಕಾರ ಮಾಡಿದನು. ರಾಮದೇವರು, ಭಕ್ತಿಪೂರ್ಣನಾದಂಥ ಹನುಮಂತದೇವರಿಗೆ ಏನು ಕೊಟ್ಟರೂ ಸಹಜವೇ ಎಂದು ಆಲಿಂಗನ ಮಾಡಿ, 'ನಿನಗಿಂತ ಹೆಚ್ಚು ನನಗೆ ದಾರೂ ಇಲ್ಲ. ನೀ ನನ್ನ ಸೇವಿ ಕೊಟ್ಟ' ಎಂದು ಬಹಳ ಸಂತೋಷದಿಂದ ರಾಮದೇವರು

ಹನುಮಂತನ ಅಪ್ಪಿಕೊಂಡು, ಆಲಿಂಗನವ್ಯಾಜದಿಂದ ತನ್ನನ್ನೇ ಕೊಟ್ಟನು. ಹನುಮಂತನ ಮ್ಯಾಲೆ ಬಹಳ ಪ್ರೀತಿ ಮಾಡಿದನು ಎಂಬಲ್ಲಿಗೆ, ಶ್ರೀಮದಾಚಾರ್ಯರು ಹೇಳಿದ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯವನ್ನು ಪ್ರಾಕೃತದಿಂದ ವಿವರಿಸುವ 'ಸುಂದರಕಾಂಡ ಕಥಾನಿರೂಪಣಂ (ಹನೂಮತ್ಪ್ರತಿಯಾನಂ)' ಎಂಬ ಏಳನೇ ಅಧ್ಯಾಯವು ಸಂಪೂರ್ಣವು.

ಶ್ರೀ ಮಧ್ವೇಶಾರ್ಪಣಮಸ್ತು

ಅಧ್ಯಾಯ ೪

ಶ್ರೀರಾಮಚರಿತೇ ಯುದ್ಧಕಾಂಡಕಥಾನಿರೂಪಣಂ

ಈ ಎಂಟನೇ ಅಧ್ಯಾಯದಲ್ಲಿ—ಶ್ರೀರಾಮದೇವರು ಹನುಮಂತಗೆ, 'ಸೀತಾ-ಪ್ರತಿಕೃತಿ ನೋಡಿ ಬಾ' ಎಂದು ಹೇಳಿದರೆ ಸಮರ್ಥನಾದಂಥ ಹನುಮಂತದೇವರು ಸಮುದ್ರ ಹಾರಿ ಲಂಕೆಗೆ ಹೋಗಿ ರಾವಣನ ಬಲ ಮೂರನೇದರಲ್ಲಿ ಒಂದು ಪಾಲು ಸಂಹಾರಮಾಡಿ ರಾವಣನ ಮಗ ಅಕ್ಷಕುಮಾರನ ಕೊಂದು ಜಯಶೀಲನಾಗಿ ಲಂಕಾ ಪಟ್ಟಣ ಸುಟ್ಟುಬಂದು ತನ್ನ ಒಡೆಯನಿಗೆ ವಿಜ್ಞಾಪನೆ ಮಾಡಲಿಕ್ಕೆ ರಘುನಾಥ ಕೇಳಿ ಹನುಮಂತಗೆ ಬಹಳ ಪ್ರೀತಿಮಾಡಿ ಲಂಕಾಪಟ್ಟಣಕ್ಕೆ ಹೋಗುವುದಕ್ಕೆ ಇಚ್ಛೈಸಿ ಪ್ರಯಾಣಾಭಿಮುಖನಾದನು. ತರುವಾಯ ವಾಯುಕುಮಾರನಾದಂಥ ಹನುಮಂತನವ್ಯಾಲೆ ಏರಿಕೊಂಡು, ಅಂಗದನವ್ಯಾಲೆ ಏರಿಕೊಂಡಂಥ ಲಕ್ಷ್ಮಣನಿಂದ ಯುಕ್ತನಾಗಿ, ಸೂರ್ಯನ ಮಗನಾದಂಥ ಸುಗ್ರೀವನ ಸಹ ಸಮಸ್ತ ಕಪಿಸೇನಿ ಕೂಡಿಕೊಂಡು ತೆರಳಿದನು. ದಕ್ಷಿಣ ದಿಕ್ಕಿನಲ್ಲಿದ್ದ ಸಮುದ್ರಕ್ಕೆ ಹೋಗಿ ಕ್ರೀಡಾದಿ ಗುಣವಿಶಿಷ್ಟನಾದಂಥ ರಾಮದೇವರು, ಸಮುದ್ರತೀರದಲ್ಲಿ ದರ್ಭಶಯನನಾಗಿ ಮಲಗಿಕೊಂಡನು.

ರಾಮಾಯಣದಲ್ಲಿ ಮೋಹಕ ಕಥ ಹೇಳತದೆ. 'ಸಮುದ್ರಕ್ಕೆ ಸೇತು ಕಟ್ಟ' ಎಂತ ಸ್ವಾಮೀ ಸ್ವಪ್ನದಲ್ಲಿ ಬಂದು ವರುಣ ಹೇಳಿದನೆಂದು ಹೇಳತದೆ. ಹಾಂಗಲ್ಲ, ದರ್ಭ ಎಂಬುದು ತೃಣರಾಜ ಪೂರ್ವದಲ್ಲಿ ಕುರಂಗನೆಂಬೋ ದೈತ್ಯ, ಕಾಗೀ ಕಣ್ಣಿನಲ್ಲಿ ಆಶ್ರಯಿಸಿ ಬಂದಿಹ. ತೃಣ ಅಭಿಮಂತ್ರಿಸಿ ಬಿಡಲಿಕ್ಕೆ, ಕಾಗೀ ಕಣ್ಣಿನಲ್ಲಿದ್ದಂಥ ದೈತ್ಯನ್ನ ಕೊಂದು ಕಾಗಿ ಒಂದು ಕಣ್ಣು ಕಳೆಯಿತು. ಆದಕಾರಣ ದರ್ಭಶಯನ-ನಾದನು. ಮಲಗಿಕೊಂಡ ತರುವಾಯ ಏನು ಮಾಡಿದನು ಎಂದರೆ ಅಚಿಂತ್ಯ ಶಕ್ತಿಯುಳ್ಳಾತ ಜಗತ್ತಿಗೆ ಧರ್ಮೋಪದೇಶ ಮಾಡುವುದರಲ್ಲಿ ಮುಖ್ಯಗುರುವಾದಂಥ ರಾಮದೇವರು ಪ್ರಥಮದಲ್ಲಿ ಮೃದುತ್ವ ತೋರಿದನು. ಸ್ವಾಮಿ ಮತ್ಯೆಂಥಾತ ಧರ್ಮಿಷ್ಠತನದಲ್ಲಿ ಪ್ರಸಿದ್ಧನಾದಂಥಾತ. ಇಂಥಾ ರಾಮದೇವರು ಸಮುದ್ರನಾಥನ ದೆಸೆಯಿಂದ ಮಾರ್ಗ ಬೇಡಿಕೊಳತ ಮಲಗಿಕೊಂಡನು. ತರುವಾಯ ರಾಕ್ಷಸಾಧಿಪನಾದಂಥ ರಾವಣನ ತಮ್ಮ ವಿಭೀಷಣನೆಂಬುವ ರಾಮದೇವರ ಸಮೀಪಕ್ಕೆ ಬಂದನು. ಏನುಕಾರಣ ಎಂದಲ್ಲಿ ರಘುನಾಥನ ಪಾದದಲ್ಲಿ ಅತ್ಯಂತ ಭಕ್ತಿಯುಳ್ಳವ ಧರ್ಮಶೀಲನಾದಂಥಾವ. ತನ್ನ ಅಣ್ಣ ರಾವಣಗೆ 'ರಾಮನ ಭೃತ್ಯ ಹನುಮಂತ ಮಾತ್ರ ಒಬ್ಬ ಬಂದು ವನನಾಶನಾದಿ ಕಾರ್ಯಮಾಡಿ ಹೋದ. ಇಂಥಾ ಭೃತ್ಯರು ಅಪಾರ ಇದ್ದಾರೆ. ವೈರತ್ವ ಬಿಟ್ಟುಕೊಟ್ಟು ಶೀಘ್ರ ಸೀತಾದೇವಿಯ ಬಿಟ್ಟು ಕಳುಹು,' ಎಂದು ಅನೇಕ

ಪ್ರಕಾರ ನೀತಿಗಳ ಹೇಳಲಿಕ್ಕೆ ರಾವಣಗೆ ಬಹಳ ಕೋಪ ಬಂತು. ' ಇವ ನನ್ನ ತಮ್ಮನಲ್ಲ ವೈರಿಪಕ್ಷವಾಗಿ ಮಾತನಾಡಥಾನೆ ' ಎಂದು ಲಂಕಾಪಟ್ಟಣದಿಂದ ಹೊರಗೆ ಹಾಕಿದನು.

ವಿಭೀಷಣ ರಾವಣನಿಂದ ಹೊರಕ್ಕೆ ಹಾಕಿಸಿಕೊಂಡು ಆಕಾಶಮಾರ್ಗದಿಂದ ' ರಾಮನ ಭೃತ್ಯನಿದ್ದೀನಿ. ನನ್ನ ಕೊಲ್ಲಬ್ಯಾಡಿ ' ಎಂದು ಒದರತ್ತೇ ರಘುನಾಥಗೆ ಶರಣುಬಂದನು. ಜಾಂಬವಂತ ಸುಗ್ರೀವ ಸೇನಾಪತಿಯಾದಂಥ ನೀಲ ಹಾಂಗೆ ಮೈಂದ ವಿವಿದ ಅಂಗದ ತಾರ ಸುಷೇಣ ಇವರೇ ಮೊದಲಾಗಿ ಉಳ್ಳಂಥ ಸಮಸ್ತ ಕಪಿಗಳು ರಾಮದೇವರ ಕುರಿತು ಘಟ್ಯಾಗಿ ಮಾತನಾಡಥಾರೆ. ' ಈ ವಿಭೀಷಣನು ವೈರೀ ಮನಿಯಿಂದ ಬಂದಾನೆ. ಮ್ಯಾಲೆ ರಾವಣನ ತಮ್ಮನಿದ್ದಾನೆ. ಸರ್ವಥಾ ಸ್ವೀಕಾರ ಮಾಡಲಿಕ್ಕೆ ಯೋಗ್ಯನಲ್ಲ ' ಎಂದು ದೃಢ ಮಾತಾಡಿದರು. ಅದೇ ಸಮಯದಲ್ಲಿ ಬಲದೇವತಿ, ವಾಯುಕುಮಾರನಾದಂಥ ಹನುಮಂತದೇವರು ಮಾತನಾಡಥಾನೆ. 'ಅವಶ್ಯ ಈ ವಿಭೀಷಣನ ಸ್ವೀಕಾರ ಮಾಡಬಹುದು. ಏನುಕಾರಣ ಎಂದರೆ ಶರಣಾಗತ ನಾಗಿದ್ದಾನೆ, ಮ್ಯಾಲೆ ರಾಮನ ಪಾದದಲ್ಲಿ ಭಕ್ತಿಯುಳ್ಳವ. ಇನ್ನು ರಾವಣ ಮರಣ ಐದಿದನಂತ ತಿಳಿದು, ಅವನ ಮರಣಾನಂತರದಲ್ಲಿ ತಾನು ರಾಜ್ಯ ಅನುಭವಿಸಬೇಕೆಂದು ಇಚ್ಛಾ ಉಳ್ಳವನಾಗಿ ಇಲ್ಲಿಗೆ, ನಮ್ಮ ಸ್ವಾಮೀ ಸಮೀಪಕ್ಕೆ ಬಂದಿದ್ದಾನೆ. ಅದರಿಂದ ಸ್ವೀಕಾರ ಮಾಡಬೇಕು ' ಎಂದು ಮಾತನಾಡಲಾಗಿ ಬ್ರಹ್ಮಾದಿಗಳಿಗೆ ಈಶನಾದಂಥ ರಾಮದೇವರು, ಆ ಹನುಮಂತನ ವಚನ ಕೇಳಿ, ಸ್ವೀಕಾರ ಮಾಡಿದನು.

ಹಾಂಗೇವೆ ಹನುಮಂತ, ವಿಭೀಷಣನ ಸ್ವೀಕಾರ ಮಾಡಿದ್ದರಿಂದ, ಸ್ವಾಮಿ ರಘುನಾಥ ತಾನು ಸ್ವೀಕಾರ ಮಾಡಿ ಮಾತನಾಡಥಾನೆ. ' ನನ್ನ ಪಾದಗಳಲ್ಲಿ ಶರಣಾಗತನಾದಂಥ ವಿಭೀಷಣನ್ನ ಘಟ್ಯಾಗಿ ಸ್ವೀಕಾರ ಮಾಡಥೀನಿ. ಏನು ಕಾರಣದಿಂದ ಎಂದರೆ ಪಾದಾಕ್ರಾಂತರಾದವರನ್ನ ಪರಿಗ್ರಹಣ ಮಾಡಬೇಕೆಂದು ಸರ್ವದಾ ನನ್ನ ವ್ರತವದೆ' ಎಂದು ಮಾತನಾಡಿ ವೈರಿ ಮನಿಯಿಂದ ಬಂದಾನೆಂಬಂಥ ಕಪಿಗಳ ಶಂಕ ಪರಿಹರಿಸಥಾನೆ. ' ದೇವತಾಗಣದಿಂದ ಸಹಿತನಾದಂಥ ಬ್ರಹ್ಮ ಹಾಂಗೆ, ದೈತ್ಯರು ಮಿಕ್ಕಾದ ಸಮಸ್ತ ಜನರೂ ಒಂದಾಗಿ ಬಂದರೂ ನನ್ನ ಅಂಗುಷ್ಠ ಅಲ್ಲಾಡಿಸೋದರಲ್ಲಿ ಸಮರ್ಥರಾಗೋದಿಲ್ಲ. ಈ ರಾಕ್ಷಸನಾದರೂ ಶುದ್ಧಾಂತಃಕರಣ ವುಳ್ಳಾತ. ಮ್ಯಾಲೆ ನನ್ನಲ್ಲಿ ಭಕ್ತಿಯುಳ್ಳಾತ ಎಂದು ತಿಳೀಥೀನಿ.' ಹೀಂಗಂಥ ಮಾತನಾಡಿ ' ಶರಣು ಬಂದಾನೆ ಅವಶ್ಯ ಬರಲಿ ' ಎಂದು ವಿಭೀಷಣಗೆ ಕರದು ತನ್ನ ಭೃತ್ಯರೊಳಗೆ ಕೂಡಿಸಿದನು. ತರುವಾಯ ಲಂಕಾಪಟ್ಟಣದ ರಾಜ್ಯಾಭಿಷೇಕ ಮಾಡಿದನು. ಇನ್ನೂ ಸಮುದ್ರ ದಾಟಲಿಲ್ಲ ಲಂಕಾಪಟ್ಟಣ ತನ್ನ ವಶವಾಗಲಿಲ್ಲ, ರಾಜ್ಯದಲ್ಲಿ ಹ್ಯಾಂಗೆ ಅಭಿಷೇಕ ಮಾಡಿದನು ಎಂದರೆ ಸಮೀಚೀನವಾದಂಥ ಅನಂತ ಬಲರಾಶಿಯಾದಂಥ ರಾಮದೇವರು ಸಜ್ಜನರಿಗೆ ಕಂಟಕನಾದಂಥ ರಾವಣನ್ನ ಒಂದು

ಹುಲ್ಲುಕಡ್ಡಿಗೆ ಬಗೆದೇ ರಾಕ್ಷಸಾಧಿಪನಾದಂಥ ರಾವಣನ ತಮ್ಮಗೆ ಲಂಕೆ ಕೊಟ್ಟನು. ಅರಸತ್ವ ಆಳಿ ಆಯುಷ್ಯ ಇಲ್ಲದೆ ಸತ್ತುಹೋಗಥಾನೆ, ಹಾಂಗಾಗಲಿಲ್ಲ. ಲಂಕಾರಾಜ್ಯ ಆಳಬೇಕಾಗಿ ವಿಭೀಷಣಗೆ ರಾಜ್ಯಾಭಿಷೇಕ ಮುಂಚೆ ಮೂಡಿ ತರುವಾಯದಲ್ಲಿ ಕಲ್ಪ-ಪರಿಯಂತರ ಆಯುಷ್ಯ ಕೊಟ್ಟನು. ರಾಕ್ಷಸರು ಮಣಿದುಬಾಹೋಹಾಂಗೆ ವರವು ಕೊಟ್ಟನು. ರಾಜ್ಯಾಂತೇ ನರಕ ಹೇಳತದೆ. ಆದ್ದರಿಂದ ಆಯುಷ್ಯಾಂತದಲ್ಲಿ ತನ್ನ ಸಮಾಧಿಯಾದಂಥ ದಿವ್ಯಲೋಕವನ್ನು ಕೊಟ್ಟನು. ರಘುನಾಥ ಮೂರುದಿವಸ ಹೋದ ಕಾಲಕ್ಕೂ ಮಾರ್ಗ ಕೊಡದೆ ಇದ್ದಂಥ ಸಮುದ್ರನ್ನ ನೋಡೋಗೋಸ್ಕರ ಕೋಪ ಮಾಡಿದನು. ಹ್ಯಾಂಗೆ ಮಾಡಿದನೆಂದರೆ ಕಣ್ಣು ಕೆಂಪಗೆ ಮಾಡಿ ತನ್ನ ಕಡೆಗಣ್ಣ ನೋಟದಿಂದ ಸಮುದ್ರನ್ನ ನೋಡಿದನು. ಸಮುದ್ರನು, ಉತ್ತಮನಾದಂಥ ರಾಮದೇವರ ಕೋಪದಿಂದ ಯುಕ್ತವಾದಂಥ ಕೆಂಪುಕಣ್ಣು ನೋಟದಿಂದ ಹೊಡೆಸಿಕೊಂಬೋದರಿಂದ, ಜಲಚರರೂಪರಾದಂಥ ದೈತ್ಯರು ಸತ್ತರು. ತಕ್ಷಣದಲ್ಲಿ ಉದಕವು ಶೋಷಿಸಿತು ನೀರು ಇಲ್ಲಥಾಂಗಾಯಿತು. ಆಗ ಮೂಲರೂಪಿಯಾದಂಥ ವರುಣ, ಶಿರಸ್ಸಿನಮ್ಯಾಲೆ ರತ್ನವೇ ಮೊದಲಾದಂಥ ಪೂಜಾಸಾಧನದ್ರವ್ಯಗಳ ಹೊತ್ತುಕೊಂಡು ಶ್ರೀರಾಮದೇವರ ಪಾದಸಮೀಪಕ್ಕೆ ಬಂದು ಮಾತನಾಡಥಾನೆ.

'ಹೇ ಪ್ರಭೋ! ಹೇ ಮಾನ್ಯ! ದೇಶತಃ ಕಾಲತಃ ಗುಣತಃ ಪರಿಪೂರ್ಣತ್ವದಿಂದ ಪ್ರಸಿದ್ಧನಾದಂಥಾತ! ನಿನ್ನನ್ನು ಮೂರ್ಖಾಂತಃಕರಣವುಳ್ಳಂಥ ನಾನು ತಿಳಿಯಲಿಲ್ಲ. ನೀನು ಮತ್ಸ್ಯಂಥಾತ, ಆದಿಪುರುಷನಾದಂಥಾತ. ಜಗತ್ತಿಗೇ ಮುಖ್ಯ ಸ್ವಾಮಿಯಾದಂಥಾತ ಸತ್ತ್ವಗುಣದಿಂದ ದೇವಗಣಗಳ ಸೃಷ್ಟಿ ಮಾಡಥಿದ್ದಿ. ರಜೋಗುಣದಿಂದ ಮನುಷ್ಯಸೃಷ್ಟಿ ಮಾಡಥಿದ್ದಿ. ಮೂರನೇದಾದಂಥ ತಮೋಗುಣದಿಂದ ಅಸುರರನ್ನ ಹುಟ್ಟಿಸಥಿದ್ದಿ. ಸ್ವಾಮಿ ನನ್ನ ಅಪರಾಧ ಕ್ಷಮಿಸಬೇಕು. ನಿನ್ನ ಮನಸ್ಸು ಹ್ಯಾಂಗೆ ಬರತದೆ ಹಾಂಗೆ ಲಂಕಾಪಟ್ಟಣಕ್ಕೆ ಹೋಗು. ವಿಶ್ರವಸ ಋಷೀಶ್ವರನ ರೇತೋತ್ಪನ್ನನಾದಂಥ ಮೂರು ಲೋಕಕ್ಕೇ ಆಕ್ರೋಶಕರನಾದಂಥ ರಾವಣನನ್ನು ಜಯಿಸು. ಪರಮ ಸಮರ್ಥನಾದಂಥ ರಾಮನೇ, ಸೀತಾಪ್ರತಿಕೃತಿಯನ್ನು ಸ್ವೀಕಾರ ಮಾಡು. ಪಾದಗಳಿಂದ ನಡೆದು ಹೋಗುವುದಕ್ಕೆ ಈ ಸಮುದ್ರದಲ್ಲಿ ಸೇತು ಕಟ್ಟು. ಏನುಕಾರಣ ಕಟ್ಟಬೇಕು ಎಂದೀ. ನಿನ್ನ ಕೀರ್ತಿ ಪಸರಿಸಲಿ. ಸೇತುದರ್ಶನದಿಂದ ಪ್ರಾಣಿಗಳು ಪಾಪದಿಂದ ಮುಕ್ತರಾಗಲಿ. ದಿಗ್ವಿಜಯ ಮಾಡತ ಒಂದಂಥ ರಾಯರುಗಳು ನಿನ್ನ ಪರಾಕ್ರಮ ಕೊಂಡಾಡಲಿ' ಎಂದು ಸ್ತೋತ್ರ ಮಾಡುವಂಥ ಸಮುದ್ರನನ್ನು ನೋಡಿ ಶೀಘ್ರದಿಂದ ಅನುಗ್ರಹಮಾಡಿ ಸ್ವೀಕರಿಸಿದನು. ಆ ಸಮುದ್ರನಿಗೋಸ್ಕರ ಕೊಟ್ಟಂಥ ಬಾಣವು ದೈತ್ಯರಾದಂಥ ಅಂತ್ಯಜರಲ್ಲಿ, ಅವರು ಎಂಥವರೆಂದರೆ, ಮಹಾರುದ್ರನ ವರಬಲದಿಂದ ಮರಣರಹಿತರಾದಂಥಾವರು, ದುರ್ಜಯರಾದಂಥಾವರು ಇಂಥಾ ಅಪಾರ ದೈತ್ಯರಲ್ಲಿ ಬಿಟ್ಟುಕೊಟ್ಟ ಶೀಘ್ರದಿಂದ ಸುಟ್ಟು ಭಸ್ಮ ಮಾಡಿದನು.

ತಡುವಾಯ ಸಮುದ್ರತೀರದಲ್ಲಿ ಸವಳುಭೂಮಿ ಎಂದು ಪ್ರಸಿದ್ಧವಾದಂಥಾದ್ದು, ಅಂಥಾ ಸವಳುಭೂಮಿಯನ್ನ ಫಲೋಮಾಡಿ, ಆ ಭೂಮಿಯೊಳಗೆ ನಾನಾ ವೃಕ್ಷಗಳು ನಾನಾ ಫಲಗಳು ಚೆನ್ನಾಗಿ ಹ್ಯಾಂಗೆ ಆಗೋವ್ದೊ ಹಾಂಗೆ ಮಾಡಿದನು. ಏನುಕಾರಣ ಮಾಡಿದನೆಂದರೆ ರಾಮದೇವರ ಅಮೋಘ ಚೇಷ್ಟವು ಸಂಸಾರಕ್ಕೆ ಶತ್ರುವಾದಂಥಾದ್ದು. ಈತ ಏನು ಮಾಡುವ ಚೇಷ್ಟವೂ ವ್ಯರ್ಥವಾದಂಥಾದ್ದಲ್ಲ. ಏತಾದೃಶ ಚರಿತ್ರ ಶ್ರವಣ ಮಾಡಿದಂಥ ಅಧಿಕಾರಿಗಳನ್ನ ಸಂಸಾರದಿಂದ ಕಡಿಗೆ ಮಾಡ್ಯಾನು ಎಂಬೋ ಅಭಿಪ್ರಾಯದಿಂದ ಮಾಡಿದನು. ದೇವತಿಗಳ ಬಡಗ್ಯಾ ವಿಶ್ವಕರ್ಮನವತಾರ, ವಿಶ್ವಕರ್ಮನಿಂದ ಹುಟ್ಟಿದಂಥ ನಳನಾಮಕ ಕಪಿ ಹಾಂಗೆ ಮಿಗಿಲಾದ ಕಪಿಶ್ರೇಷ್ಠರುಗಳಿಂದ ಚಲುವಾದ ವೃಕ್ಷಗಳು ಉಳ್ಳಂಥ ವಿಚಿತ್ರವಾದ ಅನೇಕ ಕೋಡುಗಲ್ಲುಗಳಿಂದ ಸಹಿತವಾದಂಥ ಪರ್ವತಗಳಿಂದ ಹತ್ತು ಯೋಜನ ಅಡ್ಡಗಲ, ನೂರು ಯೋಜನ ಉದ್ದ ಸಮುದ್ರಕ್ಕೆ ಸೇತು ಕಟ್ಟಿ, ಸುಗ್ರೀವ ನೀಲ ಹನುಮಂತನೇವ ಮೊದಲಾದ ಅನೇಕ ಕಪಿಗಳಿಂದ ಸಹಿತನಾಗಿ ವಿಭೀಷಣನ ಮುಂದುಮಾಡಿಕೊಂಡು ಮಾರ್ಗ ತೋರಿಸಿದ ಪ್ರಕಾರ ಹನುಮಂತ ಸುಟ್ಟ ಲಂಕಾ-ಪಟ್ಟಣ ಸಮೀಪಕ್ಕೆ ಹೋದನು.

ವಿಭೀಷಣ ಮಾರ್ಗ ತೋರಿಸಿದನು. ತಾವೇ ಮಾರ್ಗ ಅರಿಯರೇ ಎಂದಲ್ಲಿ, ಹನುಮಂತ ಹೋಗಿ ಲಂಕಾ ಸುಟ್ಟುಬಂದಾನೆ. ತಾವು ಮಾರ್ಗ ಅರಿಯದೆ ವಿಭೀಷಣನ ಮುಂದುಮಾಡಿದವರಲ್ಲ, ಲೋಕರೀತಿ ತೋರಸ್ತಾರೆ. ಹತ್ತು ಮುಖ-ವುಳ್ಳಂಥ ರಾವಣ, ಉತ್ತಮನಾದಂಥ ಮುಖ್ಯಬಲಾತ್ಮಕನಾದಂಥ ಅನಂತಪರಾಕ್ರಮ ಉಳ್ಳಂಥ ದೇಶತಃ ಕಾಲತಃ ಗುಣತಃ ಪರಿಚ್ಛೇದಶೂನ್ಯನಾದಂಥ ರಾಮದೇವರು ಬಂದ ವರ್ತಮಾನ ಕೇಳಿ, ಭಯದ್ದಸಿಯಿಂದ ಅತ್ಯಂತ ಧೈರ್ಯಭ್ರಷ್ಟಹೃದಯ-ವುಳ್ಳವನಾಗಿ ಮಾಡೋ ಕಾರ್ಯ ಮುಂದುಗಾಣದೆ ವಿವೇಕಶೂನ್ಯನೋಪಾದಿ ಭ್ರಾಂತಿಯುಳ್ಳವನಾದನು. ರಘುನಾಥ ರಾಜನೀತಿ ತೋರಿಸಬೇಕಾಗಿ, ವಾಲೀ ಮಗ ಅಂಗದನ್ನ ಸಂಧಾನನಿಮಿತ್ತ ರಾವಣನ ಸಮೀಪಕ್ಕೆ ಕಳುಹಿದನು. ಅಂಗದ ಹೋಗಿ ಮಾತಾಡಿದ್ದಾನೆ. 'ನಮ್ಮ ತಂದಿ ವಾಲಿ, ನಿನ್ನ ಕೈಸೆರಿ ತಂದು ನನ್ನ ತೊಟ್ಟಿಲು ಕಾಲಿಗೆ ಕಟ್ಟಿದ್ದ. ನಾನು ಬಾಲಕತನದಲ್ಲಿ ಕಾಲುಮ್ಯಾಲೆ ಈಡ್ಯಾಡಲಿಕ್ಕೆ ಕಾಲುಪೆಟ್ಟು ತಾಕೆ ಬಾಯಿಬಿಡತಿದ್ದಿ. ಹತ್ತು ತಲಿ ಹುಳವು ಸತ್ತೀತು ಬದುಕಿಕೊಳ್ಳಲಿ ಎಂದು, ನಿನ್ನ ಜೀವದಾನ ಬಿಟ್ಟುಕೊಟ್ಟನು. ಅಂಥಾ ಬಲಿಷ್ಠನಾದಂಥ ವಾಲೀನ್ನ ರಾಮಚಂದ್ರ ಲೀಲಾಮಾತ್ರದಲ್ಲಿ ಕೊಂದನು. ನಮ್ಮ ಸ್ವಾಮಿಗೆ ಹನುಮಂತ ಮೊದಲಾಗಿ ನಮ್ಮಂಥ ಭೃತ್ಯರು ಅಪಾರ ಇದ್ದಾರೆ. ಲಂಕೆಗೆ ಕ್ಷೇಮ ನಿನಗೂ ಕ್ಷೇಮ ಬಯಸಬೇಕಂತ ಜಗನ್ಮಾತಾ ನಮ್ಮ ಒಡಿಯನ ಹೆಂಡತಿ ಸೀತಾದೇವಿಯನ್ನು ಶೀಘ್ರ ಬಿಟ್ಟುಬಿಡು. ಇಲ್ಲವೇ ತೀವ್ರ ವಿನಾಶ ಐದಿ.' ಹೀಂಗಂತ ಹೇಳಿ ಅಂಗದ ಹಾರಿಬಂದು ಸುದ್ದಿ ಹೇಳಿದನು.

ಉತ್ಕೃಷ್ಟವಾದ ಕಪಿಸೈನ್ಯದಿಂದ ಯುಕ್ತನಾಗಿ ಉದಾರಗುಣವುಳ್ಳಂಥ, ಬ್ರಹ್ಮಾದಿಗಳಿಗೆ ಈಶನಾದಂಥ ರಾಮದೇವರು, ರಾಕ್ಷಸಾಧಿಪನಾದಂಥ ರಾವಣನ ಲಂಕಾಪಟ್ಟಣದ ನಾಲ್ಕೂ ಬಾಗಿಲುಗಳನ್ನು ಸುತ್ತುಗಟ್ಟಿದನು. ರಾವಣನು ಬಾಗಿಲುಗಳನ್ನು ತಡೆಗಟ್ಟಿಸಿದ ಸಮಯದಲ್ಲಿ, ಪಶ್ಚಿಮದಿಕ್ಕಿಗೆ, ದುಷ್ಟನಾದಂಥ, ದೇವೇಂದ್ರನ ವೈರಿಯಾದಂಥ, ಇಂದ್ರಜಿತನ ಕಳುಹಿದನು. ಹಾಂಗೆ ಪೂರ್ವದಿಕ್ಕಿಗೆ ತನ್ನ ಪ್ರಧಾನಿ ಪ್ರಹಸ್ತನ ಕಳುಹಿದನು. ದಕ್ಷಿಣದಿಕ್ಕಿಗೆ ವಜ್ರದಂಷ್ಟ್ರನ ಕಳುಹಿದನು. ಉತ್ತರದಿಕ್ಕಿಗೆ ಸ್ವತಃ ರಾವಣ ಬಂದನು. ಅವ್ಯಾಹತ ಷಡ್ಗುಣೈಶ್ವರ್ಯಸಂಪನ್ನನಾದಂಥ ರಾಮದೇವರು ಭೃತ್ಯರಿಂದ ಕಾರ್ಯ ಕೈಕೊಳ್ಳಬೇಕಾಗಿ ವೈರಿಗಳ ಸೇನಿ ದಾವ ಪ್ರಕಾರ ಬಂದದೆಂದು ವಾರ್ತಿ ತರಿಸಿ ಇಂದ್ರಜಿತನ ಕೊಲ್ಲೋದಕ್ಕೆ ಹನುಮಂತನ್ನ ಕಳುಹಿದನು. ಪ್ರಹಸ್ತನ ಕೊಲ್ಲೋದಕ್ಕೆ ನೀಲನ್ನ ಕಳುಹಿದನು. ವಜ್ರದಂಷ್ಟ್ರನ ಸಂಹಾರ ಮಾಡಲಿಕ್ಕೆ ವಾಲೀ ಮಗ ಅಂಗದನ್ನ ಕಳುಹಿದನು. ನೀಲ ಅಂಗದರ ಮಧ್ಯದಲ್ಲಿ ಸುಗ್ರೀವನ ಕಳುಹಿ ತಾನು ಧನುಸ್ಸಿಗೆ ಹೆದೆಏರಿಸಿ ರಾವಣ ದಾವ ದಿಕ್ಕಿಗಿಹಾನೆ, ಆ ದಿಕ್ಕು ಕುರಿತು ನಿಂದರುವಂಥಾತನಾದನು. ಇಂಥಾತನಾಗಿ ಧನುಸ್ಸಿನಲ್ಲಿ ಬಾಣ ಕೂಡಿಸಿ ಹಾಂಗೆ ಖಡ್ಗದಿಂದ ಸಹಿತನಾದಂಥಾತನಾಗಿ ದೇದೀಪ್ಯವಾನನಾದಂಥ ಪುರುಷೋತ್ತಮನು ನಿಂತುಕೊಂಡನು. ಹನುಮಂತನ ಪರಾಕ್ರಮ ಇಂದ್ರಜಿತು ತಾ ಬಲ್ಲ. ಹನುಮಂತದೇವರ ಎದುರಿಗೆ ನಿಂದರಲಾರದೆ ಕೈಗೆ ಸಿಕ್ಕದೆ, ಹನುಮಂತನ ಬಲ ನೆನಸಿಕೊಂಡು ಶೀಘ್ರ ಓಡಿದನು. ನೀಲನೂ ವಿಭೀಷಣನೂ ಕೂಡಿ ಯಥಾಕ್ರಮದಿಂದ ಕಲ್ಲುಗಳಿಂದ ಶಕ್ತ್ಯಾಯುಧದಿಂದ ಪ್ರಹಸ್ತನ್ನ ಯಮಲೋಕಕ್ಕೆ ಕಳುಹಿದರು. ಆ ಪ್ರಹಸ್ತ ನೀಲನಿಂದ ವಶನಲ್ಲದ ಕಾರಣ ನೀಲಸಹಿತನಾಗಿ ವಿಭೀಷಣನು ಶಕ್ತ್ಯಾಯುಧದಿಂದ ಹೊಡೆದನು. ಆ ಪ್ರಹಸ್ತ ಸಾಯತಿರಲಾಗಿ ಅಂಗದನು ವಜ್ರದಂಷ್ಟ್ರನ ಕೊಂದನು. ಹ್ಯಾಂಗೆ ಕೊಂದನು ಎಂದರೆ ಭೂಮಿವ್ಯಾಲಿ ಕೆಡಹಿ ಪಾದಗಳಿಂದ ವಜ್ರದಂಷ್ಟ್ರನ ಶಿರಸ್ಸು ಮರ್ದಿಸಿದನು. ಅಪಾರ ರಾಕ್ಷಸರು ಸತ್ತರು, ಅಪಾರ ಓಡಿಹೋದರು. ರಾವಣನಿಂದ ಕಳುಹಿಸಿಕೊಳ್ಳಲ್ಪಟ್ಟಂಥ ಧೂಮ್ರಾಕ್ಷನು ಪಶ್ಚಿಮದ್ವಾರದಿಂದ ಹನುಮಂತನ ಎದುರಿಗೆ ಬಂದನು. ರುದ್ರನ ವರಬಲದಿಂದ ರಕ್ಷಿತನಾಗಿದ್ದನು. ಹನುಮಂತನು, ದುರಂತಶಕ್ತಿಯಿಂದ ಸುಟ್ಟು ಭಸ್ಮ ಮಾಡಿದನು. ರಾವಣನಿಂದ ಯುದ್ಧಕ್ಕೆ ಹೋಗು ಎಂದು ನುಡಿಸಿಕೊಂಡ, ರುದ್ರನ ವರಬಲದಿಂದ ಗರ್ವಿಷ್ಟನಾದಂಥ ಅಕಂಪನೆಂಬೋ ರಾಕ್ಷಸನು, ಕ್ಷಣಮಾತ್ರದಲ್ಲಿ ಹನುಮಂತನಿಂದ ಸತ್ತನು. ರಾಮರಾವಣರ ಯುದ್ಧದಲ್ಲಿ ಶಸ್ತ್ರಾಸ್ತ್ರಗಳ ಶಬ್ದದಿಂದ ಎರಡನೇ ಶಬ್ದ ಕೇಳಧಾಂಗಾಯಿತು. ಅಕಂಪ ಸತ್ತ ವಾರ್ತಿಯ ಅಶೇಷ ಕಪಿಗಳು ರಘುಪ್ರವೀರನಿಂದ ನುಡಿಸಿಕೊಂಡು ಚೆನ್ನಾಗಿ ದಗದಗಾಯಮಾನವಾಗಿ ಉರುಉರುವಂಥ ಕೊಳ್ಳಿಗಳ ತೆಗೆದುಕೊಂಡು, ರಾತ್ರಿ ವ್ಯಾಳ್ಯಾದಲ್ಲಿ ಲಂಕಾ

ಪಟ್ಟಣವನ್ನು ಸುಟ್ಟರು. ತರುವಾಯ ರಾವಣನು ಬಹಳ ಕೋಪಾವಿಷ್ಟನಾಗಿ ನಿಕುಂಭ ಕುಂಭ ಎಂದು ಹೆಸರುಳ್ಳ ಪ್ರಸಿದ್ಧರಾದಂಥ ಕುಂಭಕರ್ಣನ ಮಕ್ಕಳನ್ನು ಯುದ್ಧಕ್ಕೆ ಕಳುಹಿದನು. ' ಕಪಿಗಳಿಲ್ಲ ಪಟ್ಟಣ ಸುಡಥಾರೆ. ಶೀಘ್ರದಿಂದ ಹೊರಗೆ ಹಾಕಿರಿ ' ಎಂದು ಕಳುಹಿದನು. ನಿಕುಂಭ ಕುಂಭರು ಬಹುಕಾಲದಿಂದ ಯುದ್ಧ ಅಪೇಕ್ಷಿಸಿದ್ದರು. ಆದ್ದರಿಂದ ಬಹುಸಂತೋಷವುಳ್ಳವರಂಗಿ ರಣಕ್ಕೆ ಬಂದು ಸಮಸ್ತ ಕಪಿಗಳನ್ನು ಪಟ್ಟಣದಿಂದ ಹೊರಗೆ ಓಡಿಸಿದರು. ಇಬ್ಬರು ಮಕ್ಕಳಲ್ಲಿ ಕುಂಭನೆಂಬವ, ಬ್ರಹ್ಮದೇವರ ಮಗ ಜಾಂಬವಂತ, ತಾರ ನೀಲ್ಲ ವಿವಿದ ಮೈಂದ ಅಂಗದನೇ ಮೊದಲಾದಂಥ ಸರ್ವ ಕಪಿಗಳನ್ನೂ ಗೆದ್ದು ಸೂರ್ಯನ ಮಗನಾದಂಥ ಸುಗ್ರೀವನ ಸಂಗಡ ಅತಿಯುದ್ಧವನ್ನು ಮಾಡಿ ಪಾಪಿಷ್ಠನಾದಂಥ ಅಸುರನು, ಶೀಘ್ರ ಯಮಲೋಕಕ್ಕೆ ಹೋಡನು.

ಕುಂಭ ಸತ್ತ ತರುವಾಯ ಅವನ ಅಣ್ಣ ನಿಕುಂಭನು ಸ್ಥೂಲವಾದಂಥ ಮಹಾತೀಕ್ಷ್ಣವಾದಂಥ ಪರ್ವತಶ್ರೇಷ್ಠವನ್ನು ಸೀಳುವಂಥ ಪರಿಘಾಯುಧ ತೆಗೆದು ಕೊಂಡು, ಸೂರ್ಯಾತ್ಮಜನ ಕುರಿತು ಬಂದನು. ಸುಗ್ರೀವನು ಬಹಳ ಭೀತಿಯುಳ್ಳವನಾಗಿ ಹಿಂದಕ್ಕೆ ನೂರು ಧನುಸ್ಸಿನ ಪ್ರಮಾಣ ಹಾರಿದನು. ಸನುರ್ಧ-

---

ನಾದಂಥ ನಿಕುಂಭನು ಶೀಘ್ರದಿಂದ ಪರಿಘಾಯುಧವನ್ನು ಭುಜಗಳಿಂದ ತಿರುಗಿಸು ವಾಗ ನಾಲ್ಕು ದಿಕ್ಕು ವಿದಿಕ್ಕು ಸೂರ್ಯ ಚಂದ್ರ ಮೊದಲಾದವರು ತಿರಗುತಿಹೋರು. ಹಾಂಗೆ, ದೇವತೆಗಳು ನಿಕುಂಭನ ಉತ್ಕೃಷ್ಟವಾದಂಥ ಬಲ—ಮಹಾರುದ್ರನಿಂದ ಕೊಡಲ್ಪಟ್ಟಂಥ ವರವನ್ನು—ನೋಡಿ, ದಾರಮ್ಯಾಲೆ ಹಾಕ್ಯಾನೋ ಎಂದು ಚಿಂತಿಯಿಂದ ಯುಕ್ತರಾದರು. ಅವನ ಮುಂಭಾಗದಲ್ಲಿ ಹನುಮಂತ ಬಂದು ನಿಂತು ತನ್ನ ಹೃದಯದೇಶವನ್ನು ತೋರಿಸಿ, ಮಾತನಾಡಥಾನೆ. ' ಈ ಕಪಿಗಳಿಂದ ನಿನಗೆ ಪ್ರಯೋಜನವೇನು? ನನ್ನ ಹೃದಯದೇಶದಲ್ಲಿ ನಿನ್ನ ಆಯುಧ ಹಾಕು ' ಎನಲಿಕ್ಕೆ ಆ ರಾಕ್ಷಸೋತ್ತಮನು ರುದ್ರನ ವರಬಲದಿಂದ ಅಮೋಘವಾದಂಥ ಪರಿಘಾಯುಧವನ್ನು ಹನುಮಂತನ ವಕ್ಷಸ್ಥಳದಲ್ಲಿ ಹಾಕಿದನು. ಆ ಅಮೋಘವಾದಂಥ ಆಯುಧವು ಹನುಮಂತನ ಎದಿಗೆ ತಾಕಿ ಪುಡಿಪುಡಿ ಆಯಿತು. ದೇವೇಂದ್ರನ ವಜ್ರಾಯುಧ ಗರುಡನ ಮ್ಯಾಲೆ ಹಾಕಿದರೆ ಹ್ಯಾಂಗೆ ವ್ಯರ್ಥವಾಯಿತು ಹಾಂಗೆ, ಪರಿಘವೂ ವ್ಯರ್ಥವಾಯಿತು.

ದೇವೇಂದ್ರನ ವಜ್ರಾಯುಧ ವ್ಯರ್ಥವಾದದ್ದು ಎಲ್ಲಿ ಕಂಡಿದ್ದೀರಿ ಎಂದರೆ ವಿನತಾದೇವಿ ಕದ್ರುದೇವಿ ಉಚ್ಚೈಶ್ರವಕುದರಿ ಕರೇದೋ ಬಿಳೇದೊ ಎಂದು ಜೂಜನಾಡಿದರು. ವಿನತಾದೇವಿ ಬಿಳೇದು ಎಂದಳು. ಕದ್ರೂದೇವಿ ಕರೇದು ಎಂದಳು. ಉಚ್ಚೈಶ್ರವಕುದರಿ ಕಪ್ಪು ಆದರೆ ತನ್ನ ದಾಸಿಯಾಗಬೇಕು ಎಂಬೋ ಹಾಂಗೆ ಆಯಕಟ್ಟು ಮಾಡಿದಳು. ಇದ್ದರಿಂದ ಮಕ್ಕಳಿಗೆ ಆಜ್ಞಾಪಿಸಿದಳು. ' ನೀವು ಕಾಳೀ-

ಸರ್ಪಗಳಿದ್ದೀರಿ. ಉಚ್ಚೈಶ್ರವ ಕುದರಿಗೆ ಮುತ್ತಿಕೊಂಡು ದೇಹವೆಲ್ಲ ಕಪ್ಪುಮಾಡಿ' ಎನಲಿಕ್ಕೆ ಕೆಲವು ಸರ್ಪಗಳು ತಾಯೀ ಮಾತು ಕೇಳಿ ಕುದರಿಗೆ ಮುತ್ತಿಕೊಂಡವು. ಕೆಲವು ತಾಯೀ ಮಾತು ಕೇಳದ ಕಾರಣ 'ಜನಮೇಜಯರಾಯನ ಯಜ್ಞದಲ್ಲಿ ಸುಟ್ಟು ಸಾಯರಿ' ಎಂದು ಶಾಪ ಕೊಟ್ಟಳು.

ಉಚ್ಚೈಶ್ರವ ಕುದರಿ ಕಪ್ಪಾದ ಕಾರಣ ಗರುಡನ ತಾಯಿ ವಿನತಾದೇವಿಗೆ ದಾಸತ್ವ ಪ್ರಾಪ್ತವಾಯಿತು. ತಮ್ಮ ದಾಸೀ ಮಗನೆಂದು ಗರುಡನಮ್ಯಾಲೆ ಕುಳಿತು ದ್ವೀಪಾಂತರಕ್ಕೆ ಹೋಗೋವು. ಹ್ಯಾಂಗೆ ಬಹುಕಾಲ ಇರಲಿಕ್ಕೆ ತಮ್ಮ ದಾಸತ್ವ ಹ್ಯಾಂಗೆ ಹೋದೀತೆಂದು ಗರುಡ, ಸರ್ಪಗಳ ಕೇಳಲಾಗಿ ಅಮೃತ ತಂದುಕೊಟ್ಟರೆ ದಾಸೀತ್ವ ಹೋದೀತೆಂದವು. ಈ ಮಾತು ಗರುಡ ಕೇಳಿ, ದೇವೇಂದ್ರನ ಲೋಕಕ್ಕೆ ಹೋಗಿ ಅಮೃತ ಕೊಂಡುಬರಬೇಕೆಂದು ಮಾಡಿದ. ಅಲ್ಲಿ ಸರ್ಪಗಳ ಕಾವಲು. ಸರ್ಪಗಳ ದೃಷ್ಟಿ ಬೀಳಲಿಕ್ಕೆ ಸುತ್ತು ನೂರು ಯೋಜನ ಸುಟ್ಟು ಭಸ್ಮವಾಗಬೇಕು. ಅಂಥಾ ಕಾವಲುಗಾರರು ಬಹುಮಂದಿ ಇರಲಿಕ್ಕೆ, ಗರುಡ ತನ್ನ ಚುಂಚುಪುಟದಿಂದ ಕೊಂದು ತನ್ನ ಸಾಮರ್ಥಿಯಿಂದ ಅಮೃತಕಲಶ ಕೊಂಡುಬರಲಿಕ್ಕೆ, ದೇವೇಂದ್ರ ಬೆನ್ನಟ್ಟಿ ಬಂದು ವಜ್ರಾಯುಧವನ್ನು ಗರುಡನಮ್ಯಾಲೆ ಬಿಷ್ಟನು. ದಧೀಚಿಋಷಿಯ ಲೀಲಾಮಂತ್ರಪೂತದಿಂದ ವಜ್ರಾಯುಧ ಆಗೇದೆ. ಬಾಹ್ಮಣನ ಅಸ್ಥಿಗೆ ಮನ್ನಣೆ ಆಗಬೇಕಾಗಿ, ತನ್ನ ಪಖದ ಒಂದು ಗರಿ ಕಿತ್ತುಬಿಷ್ಟನು. ಗರುಡನ ಸಾಮರ್ಥಿ ಕಂಡು ದೇವೇಂದ್ರ ಮಾತನಾಡಿದನು. 'ಬಲಿಷ್ಠತನದಲ್ಲಿ ಅಮೃತ ಒಯ್ತಿದ್ದಿ. ಸರ್ಪಗಳು ಮಹಾ ಹೀನರು. ಅಮೃತ ಕುಡದು ಅಮರರಾದಾರು. ಅಮೃತ, ಸರ್ಪಗಳಿಗೆ ದಕ್ಕಧಾಂಗೆ ಮಾಡು' ಎನಲಿಕ್ಕೆ ಒಳ್ಳೀದೆಂದು 'ಅಮೃತ ಕೊಂಡುಬಂದೀನಿ. ನೀವು ಶುದ್ಧರಾಗಿ ಅಮೃತ ಸೇವಿಸಬೇಕು. ಸಮುದ್ರಸ್ನಾನ ಮಾಡಿ ಒಂದು ಅಮೃತ ಕುಡೀರಿ' ಎಂದು ದರ್ಭೀಮ್ಯಾಲೆ ಅಮೃತಕಲಶ ಇಟ್ಟು ತನ್ನ ತಾಯೀ ದಾಸೀತ್ವ ಪರಿಹಾರಮಾಡಿಕೊಂಡು ಹೋದ. ಆಮ್ಯಾಲೆ, ಸರ್ಪಗಳು ಸ್ನಾನಮಾಡಿ ಬಾಹೋ ಅಷ್ಟಕ್ಕೆ ದೇವೇಂದ್ರ ಆಕಾಶಮಾರ್ಗದಿಂದ ಬಂಸು, ಆ ಅಮೃತಕಲಶ ಒಯ್ದನು. ಸರ್ಪಗಳು ಬಹಳ ದುಃಖಿಷ್ಟರಾಗಿ ಅಮೃತ ತಮಗೆ ದಕ್ಕಲಿಲ್ಲವೆಂದು ಬಹಳ ಪ್ರಲಾಪಮಾಡಿ, ಅಮೃತ ಇದ್ದಂಥ ಸ್ಥಳದ ದರ್ಭಿ ನೆಕ್ಕಲಿಕ್ಕೆ ಎರಡು ನಾಲಿಗಿ ಆದವು. ವಜ್ರಾಯುಧದಿಂದ ಗರುಡನಿಗೆ ಏನೂ ಆಗಲಿಲ್ಲ.

ನಿಕುಂಭನ ಆಯುಧವು ಚೂರುಚೂರು ಆಗುತ್ತಿರಲಾಗಿ ನಿಕುಂಭ, ಹನುಮಂತನ ಸಮೀಪಕ್ಕೆ ಬಂದು ಆತನನ್ನು ಹಿಡಿದು ತನ್ನ ಹೆಗಲಮ್ಯಾಲೆ ಕೂಡಿಸಿಕೊಂಡು ಹೊರಟನು. ಹನುಮಂತದೇವರು ಅವನ ಕುತ್ತಿಗಿ ಹಿಡದು, ತಾನು ಬಿಡಿಸಿಕೊಂಡು ಆ ರಾಕ್ಷಸನ್ನ ಭೂಮಿಮ್ಯಾಲೆ ಕೆಡಹಿದನು. ಪ್ರಭಂಜನಾತ್ಮಜನಾದ ಹನುಮಂತದೇವರು ಯುದ್ಧಾಖ್ಯ ಯಜ್ಞದಲ್ಲಿ, ಲಕ್ಷ್ಮೀಪತಿಯಾದಂಥ ರಾಮ-

ದೇವರು ದೇವತ್ತಿ, ತಾನು ಯಜಮಾನ, ನಿಕುಂಭನಾಮಕನ ಪಶುವನ್ನು ಮಾಡಿ ಸಂಹಾರ ಮಾಡಿದನು. ನಿಕುಂಭ ಸಾಯಲಿಕ್ಕೆ ದೇವತ್ತಿಗಳು ತುಷ್ಟರಾಗಿ ಸ್ವಾಮೀ-ಮ್ಯಾಲೆ ಮಂದಾರ ಪಾರಿಜಾತಹೂವಿನ ಮಳಿಗರೆದರು. ತರುವಾಯ ಸುಪ್ತಘ್ನ ಯಜ್ಞಕೋಪ ಶಕುನಿ ದೇವತಾಪನಿ ವಿದ್ಯುಜಿಂಹ ಪ್ರಮೂಥಿ ಶುಕ ಸಾರಣ ಹೀಂಗೆ ಎಂಟುಮಂದಿ, ರಾವಣನಿಂದ ಪ್ರೇರಿತರಾಗಿ ಕಪಿಶ್ರೇಷ್ಠರ ಮರ್ದಿಸತ ಬರಲಿಕ್ಕೆ, ಬ್ರಹ್ಮದೇವರ ವರಬಲದಿಂದ ಅವಧ್ಯರಾಗಿದ್ದರೂ ರಾಮದೇವರು ಕೊಂದುಬಿಟ್ಟನು. ಇವರೂ ಸಾಯಲಿಕ್ಕೆ ರಾವಣನ ಆಜ್ಞಾದಿಂದ ಯುದ್ಧೋನ್ಮತ್ತ ಮತ್ತ ನರಾಂತಕ ದೇವಾಂತಕ ತ್ರಿಶಿರ ಅತಿಕಾಯ ಹೀಂಗೆ ಆರುಮಂದಿ ಯುದ್ಧಕ್ಕೆ ಬಂದರು. ರಾವಣನ ಮಗ ನರಾಂತಕ, ಶ್ರೇಷ್ಠವಾದಂಥ ಕುದರಿ ಏರಿಕೊಂಡು ಯುದ್ಧಕ್ಕೆ ಕಾಂತಿಯಿಂದ ಯುಕ್ತವಾದಂಥ ಪ್ರಾಸಾಖ್ಯಾಯುಧ ಕೈಲಿ ಹಿಡಕೊಂಡು, ಕಪಿಗಳ ಕುರಿತು ಬಂದನು. ಕಪಿಗಳ ಸೈನ್ಯ ಸುಡತಾ ಬಾಹೋಂಥ ನರಾಂತಕನ ನೋಡಿ, ಶೀಘ್ರದಿಂದ ವಾಲೀ ಮಗನಾದಂಥ ಬಲಿಷ್ಠ ಅಂಗದನು ಹಾರಿಬಂದು ಅವನ ಮುಂದೆ ತನ್ನ ಎದಿ ತೋರಿಸದನು. ರಾಕ್ಷಸನಾದಂಥ ನರಾಂತಕನು ಅಂಗದನ ಎದಿಗೆ ಉತ್ತಮವಾದಂಥ ಪ್ರಾಸಾಖ್ಯಾಯುಧದಿಂದ ಹೊಡೆದನು. ಅಂಗದನ ಸಾಮರ್ಥ್ಯದಿಂದ ಆ ಆಯುಧವು ಎರಡು ತುಣುಕಾಯಿತು. ಅಂಗದ ತನ್ನ ಮುಷ್ಟ್ಯಾಘಾತದಿಂದ ಕುದರಿಯ ಮಾರೀ ಮ್ಯಾಲೆ ಹೊಡೆಯಲಿಕ್ಕೆ ಎರಡೂ ಕಣ್ಣುಗಳು ಕಳಚಿಬಿದ್ದವು. ಆ ಕ್ಷಣವೇ ಕುದರಿಯೂ ಸತ್ತಿತು. ನರಾಂತಕನು ಕಾಲುನಡಿಗೀಲೆ ಕತ್ತಿ ತೆಗೆದುಕೊಂಡು ಅಂಗದನ ಎದುರಿಗೆ ಯುದ್ಧಕ್ಕೆ ಬರಲಿಕ್ಕೆ, ಅವನ ಕತ್ತಿ ಕಸಕೊಂಡು ಕೊಂದು ಬಿಟ್ಟನು. ನರಾಂತಕ ರಾವಣನ ದೆಸಿಯಿಂದ ದಾರಲ್ಲಿ ಹುಟ್ಟಿದನು ಎಂದರೆ, ರಾವಣ ಗಂಧರ್ವನ ಮಗಳ ಹಿಡತಂದು ರಾಣೀವಾಸದೊಳಗೆ ಇಟ್ಟುಕೊಂಡಿದ್ದ. ರಾವಣನ ವೀರ್ಯದಿಂದ ಗಂಧರ್ವಕನ್ನಿಕೆಯಲ್ಲಿ ಹುಟ್ಯಾನೆ. ನರಾಂತಕ ಸಾಯಲಿಕ್ಕೆ ಅವನ ಅಣ್ಣ ದೇವಾಂತಕ, ತಮ್ಮ ಸತ್ತ ದುಃಖದಿಂದ ಕೋಪಾವಿಷ್ಟನಾಗಿ ಶೀಘ್ರದಿಂದ ಬಾಣಗಳ ಮಳಿಗರೆಯತ ಬಂದನು. ಜಾಂಬವಂತ ಮೊದಲಾದ ಸಮಸ್ತ ಕಪಿಗಳು ಭಯದ್ದೆಸಿಯಿಂದ ನಾಲ್ಕೂ ದಿಕ್ಕಿಗೆ ಓಡಿಹೋದರು. ಆ ದೇವಾಂತಕನು, ಯಮ-ದಂಡಕ್ಕೆ ಸದೃಶವಾದಂಥ ಬಾಣದಿಂದ ಅಂಗದನ ಎದಿಗೆ ಹೊಡಿಯಲಿಕ್ಕೆ, ಮೂರ್ಛಾ-ಗತನಾಗಿ ಭೂಮಿಮ್ಯಾಲೆ ಬಿದ್ದನು. ಅಂಗದ ಬೀಳಲಿಕ್ಕೆ ಸೂರ್ಯನ ಮಗ ಸುಗ್ರೀವ, ಅಲ್ಲಾಡುವಂಥ ವೃಕ್ಷಗಳಿಂದ ಸಹಿತವಾದಂಥ ಪರ್ವತವನ್ನು ತೆಗೆದುಕೊಂಡು ಅಭಿ-ಮುಖನಾಗಿ ನಿಂತು ರಾಕ್ಷಸನಮ್ಯಾಲೆ ಈಡ್ಯಾಡಿದನು. ಆ ರಾಕ್ಷಸನು ತನ್ನ ಮೈ-ಮ್ಯಾಲೆ ಬೀಳುವಂಥ ಪರ್ವತವನ್ನು ನೋಡಿ ದೂರದಿಂದಲೇವೇ ಬಾಣದಿಂದ ಹೊಡೆದು ಚೂರುಚೂರು ಮಾಡಿ ಮತ್ತೂ ಒಂದು ಯವ್ವುದಂಡಕ್ಕೆ ಸದೃಶವಾದಂಥ ಬಾಣ ತೆಗೆದುಕೊಂಡು, ದೇವಾಂತಕನು ಕಿವಿಪರ್ಯಂತರ ಸೆಳದು ಸುಗ್ರೀವನ ಎದಿಗೆ

ಹೊಡಿಯಲಿಕ್ಕೆ ಮೂರ್ಛೆಯಿಂದ ಭೂತಳದಲ್ಲಿ ಬಿದ್ದನು. ಸುಗ್ರೀವ ಬೀಳಲಿಕ್ಕೆ ಹನುಮಂತ ದೇವಾಂತಕನ ಆಸದೃಶ ಪರಾಕ್ರಮವನ್ನು ನೋಡಿ ಕೇಶವ ಕೈಟಭಾ-ಸುರಗೆ ಹ್ಯಾಂಗೆ ಯುದ್ಧಕ್ಕೆ ಕರದ, ಹಾಂಗೆ ಯುದ್ಧಕ್ಕೆ ಬಾ ಎಂದು ಕರಿಯಲಿಕ್ಕೆ, ಧನುರ್ಬಾಣದಿಂದ ಯುಕ್ತನಾಗಿ ಯುದ್ಧಕ್ಕೆ ಬಾಹೋ ರಾಕ್ಷಸನ್ನ ನೋಡಿ ಕುದರಿ ಸಾರಥಿ ಸಹವಾಗಿ ಪುಡಿಪುಡಿ ಮಾಡಿ ಬಿಲ್ಲ ಛೇದಿಸಿ ಬಿಷ್ಟನು. ಬಿಲ್ಲು ಮುರಿಯಲಿಕ್ಕೆ ಖಡ್ಗ ತೆಗೆದುಕೊಂಡು ಮುಂದೆ ಬಾಹೋಂಥ ವೈರಿಯ ಕೂದಲ ಹಿಡಿದು ಹನುಮಂತದೇವರು ರುದ್ರನ ವರಬಲದಿಂದ ಮರಣರಹಿತನಾದಂಥ ದೇವಾಂತಕನ ಕೊಂದು ದೇವತಿಗಳ ಕೈಯ ಪುಷ್ಪವೃಷ್ಟಿಗರೆಸಿಕೊಂಡು ಕಪಿಗಳಿಂದ, ಸಂತೋಷದಿಂದ ನೋಡಿಸಿಕೊಂಬೋ ಆಂಥಾತನಾದನು.

ಬ್ರಹ್ಮದೇವರ ವರಬಲದಿಂದ ಮೂರು ಶಿರಸ್ಸುಳ್ಳವನಾದ್ದರಿಂದ ತ್ರಿಶಿರಸನೆಂದು ಕರೆಸಿಕೊಂಬೋಂಥ ರಾಕ್ಷಸ, ಸಮಸ್ತ ಕಪಿಗಳ ಓಡಿಸತ ಬರಲಿಕ್ಕೆ ಹನುಮಂತದೇವರು ಅವನ ತಲಿ ಇಲ್ಲಧಾಂಗೆ ಮಾಡಿದನು. ದಾವ ಪ್ರಕಾರ ಕೊಂದನು ಎಂದರೆ, ಅವನ ರಥ ಧನುಸ್ಸು ಛೇದಿಸಿ ಕತ್ತಿ ಕಸಕೊಂಡು ಶಿರಸ್ಸು ಇಳುಹಿದನು. ಯುದ್ಧೋನ್ಮತ್ತ ಮತ್ತು ಮತ್ತ ಇಬ್ಬರೂ ಅಣ್ಣತಮ್ಮಂದಿರು. ಪಾರ್ವತೀ ವರಬಲದಿಂದ ಗರ್ವಿಷ್ಟರಾದಂಥಾವರು. ಸರ್ವ ಕಪಿಗಳ ಮರ್ದಿಸತ ಬರಲಿಕ್ಕೆ, ಹನುಮಂತದೇವರು ಮುಷ್ಟಿಪ್ರಹಾರದಿಂದ ಕೊಂದು ಬಿಷ್ಟನು. ಆರುಮಂದಿಯೊಳಗೆ ಐದುಮಂದಿ ಮರಣ ಹೇಳಿ, ಉಳದಂಥ ಒಬ್ಬ ಅತಿಕಾಯನ ಮರಣಪ್ರಕಾರವನ್ನು ಹೇಳಥಾರೆ. ಅತಿರಥನಾದಂಥ ಅತಿಕಾಯನು ಬ್ರಹ್ಮದೇವರಿಂದ ಕೊಡಲ್ಪಟ್ಟಂಥ ರಥ ಏರಿಕೊಂಡು ಸರ್ವ ಕಪಿಗಳ ಮರ್ದನ ಮಾಡತಾ ಕಾಲಾಗ್ನಿಯೋಪಾದಿ ಪ್ರಕಾಶವಾನನಾಗಿ, (ಗಂಧರ್ವಸ್ತ್ರೀಯಲ್ಲಿ ರಾವಣನಿಂದ ಹುಟ್ಟಿದಂಥ ಅತಿಕಾಯನು) ಯುದ್ಧಮಂಡಲದಲ್ಲಿ ಸಂಚಾರಮಾಡಹೊಕ್ಕನು. ಅತಿಕಾಯಗೆ 'ಕುಂಭಕರ್ಣ' ಎಂದು ಸಂಜ್ಞಾವದೆ ಎಂತ ಹೇಳಥಾರೆ. ಅದು ಹ್ಯಾಂಗೆಂದರೆ, ಈ ಅತಿಕಾಯಗೆ ಸ್ಥೂಲಶರೀರ, ಕೊಡದಾಕಾರ ಕಿವಿ ಆದ್ದರಿಂದ ಕುಂಭಕರ್ಣನೆಂಬೋ ನಾಮವದೆ. ಅತಿಕಾಯನು ಸುಗ್ರೀವ ಮೊದಲಾದ ಸರ್ವ ಕಪಿಗಳನ್ನು ಗೆದ್ದು ಬಲದಿಂದ ರಾಮದೇವರ ಕುರಿತು ಹೋಗುನಂಥಾತನಾದನು. ಮಹಾಮೇಘದೋಪಾದಿ ಬಾಣಗಳ ಮಳಿಗರೆಯತ ಬರತಿಹೋನು. ಮೇಘದ ಸಾಮ್ಯ ಹ್ಯಾಂಗೆಂದರೆ, ಮೇಘಕಾಂತಿಯೋಪಾದಿಯಲ್ಲಿ ಕಾಂತಿಯುಳ್ಳವ, ಸಿಡಿಲಂತೆ ಧ್ವನಿಯುಳ್ಳವ, ಮಿಂಚಿನೋಪಾದಿ ರಥವುಳ್ಳವ. ಇಂಥಾ ಅತಿಕಾಯನೆಂಬ ಮೇಘವನ್ನು, ಧನುರ್ಬಾಣಗಳಿಂದ ಯುಕ್ತನಾದ ಲಕ್ಷ್ಮಣನು, ವಾಯು ಮೇಘವನ್ನು ಹ್ಯಾಂಗೆ ನಿವಾರಿಸತದೆ ಹಾಂಗೆ ರಾಮದೇವರ ಸಮೀಪಕ್ಕೆ ಹೋಗೋ ಅತಿಕಾಯನನ್ನು ನಿವಾರಿಸಿದನು. ಮಹಾಪರಾಕ್ರಮಶಾಲಿಯಾದ ಲಕ್ಷ್ಮಣ ಅತಿಕಾಯ ಇಬ್ಬರೂ ದೇವೇಂದ್ರನ ವಜ್ರಾಯುಧಕ್ಕೆ ಸಮ

ವೇಗವುಳ್ಳಂಥ ಬಾಣಗಳ ಮಳೆಗರೆದರು. ಅತಿವೇಗದಿಂದ ಮಂತ್ರಗಳ ಅಭಿಮಂತ್ರಿಸಿ ಬಾಣಗಳಿಂದ ತಮ್ಮ ಅಭ್ಯಾಸ ಸಾಮರ್ಥ್ಯದಿಂದ ಆಕಾಶಮಂಡಲವನ್ನು ಅಂಧಕಾರ-ಪೂರ್ಣ ಮಾಡಿದರು. ಸಮರ್ಥನಾದಂಥ ಲಕ್ಷ್ಮಣನು, ಅತಿಕಾಯನ ಅಸ್ತ್ರಗಳನ್ನು ಪ್ರತಿಅಸ್ತ್ರಗಳಿಂದ ನಿವಾರಿಸಿ ಮಹಾದ್ಭುತವಾದಂಥ ಬಾಣಗಳಿಂದ ಅವನ ಎರಡು ಬಾಹುಗಳು ಶಿರಸ್ಸನ್ನು ಇಳಹಿದನು. ಅತಿಕಾಯನು ನಾಲ್ಕು ಬಾಹು ಎರಡು ಶಿರಸ್ಸನ್ನು ಉಳ್ಳವನಾದನು. ಲಕ್ಷ್ಮಣ ಕಡಿದವೆಲ್ಲ ದ್ವಿಗುಣಸ್ತಿಹೋವು. ಎಷ್ಟಂತ ಕಡಿದು ಬಿಷ್ಟಾನೆ! ಬಹಳ ಒಳಲಿ ಲಕ್ಷ್ಮಣ ನಿಂದಿರಲಿಕ್ಕೆ ಸಕಲ ಲೋಕಾಂತರ್ಯಾಮಿಯಾದಂಥ ವಾಯುದೇವರು ಅಶರೀರವಾಕ್ಯದಿಂದ ಹೇಳಿದರು. 'ಎಲ್ಯೆ ಸುಮುಖನಾದ ಲಕ್ಷ್ಮಣನೇ ಇವಗೆ ಬ್ರಹ್ಮದೇವರ ವರವಸೆ, ಬ್ರಹ್ಮಾಸ್ತ್ರ ವಿನಾ ಮತ್ತೊಂದು ಅಸ್ತ್ರದಿಂದ ವಧ್ಯನಲ್ಲ' ಎಂದು ಹೇಳಿದರು. ರಾವಣನ ಮಗ ಅತಿಕಾಯ ಕೇಳದ ಹಾಂಗೆ ಕಾಣಿಸಿಕೊಳ್ಳದೆ ಲಕ್ಷ್ಮಣನ ಕಿವಿಯೊಳಗೆ ಹೇಳಿ, ಅಂತರಿಕ್ಷವನ್ನು ಐದಿದರು. ತರುವಾಯ ದೇವೋತ್ತಮನಾದಂಥ ರಾಮದೇವರ ತಮ್ಮನಾದ ಲಕ್ಷ್ಮಣ, ಬ್ರಹ್ಮಾಸ್ತ್ರ ಹೂಡಿ ಅತಿಕಾಯನ ವ್ಯಾಲೆ ಹಾಕಿದನು. ಆ ಬ್ರಹ್ಮಾಸ್ತ್ರದಿಂದ ಅಸ್ತ್ರಜ್ಞರೊಳಗೆ ಶ್ರೇಷ್ಠನಾದಂಥ ಅತಿಕಾಯನು ರಥಸಹವಾಗಿ ಸುಟ್ಟು ಭಸ್ಮವಾದನು.

ಈ ವಾರ್ತೆ ರಾವಣ ಕೇಳಿ, ಮಕ್ಕಳು ಬಹಳ ಪ್ರಬಲರು ಸತ್ತರೆಂದು ತಾನೇ ಯುದ್ಧಾರ್ಥ ಹೋಗುವುದಕ್ಕೆ ಇಚ್ಛಾವಾಡಿದನು. ಧನುಸ್ಸು ಹೆದೆ ಏರಿಸಿ ರಾವಣ ಉದ್ಯುಕ್ತನಾಗಲಿಕ್ಕೆ, ಧನುರ್ಧಾರಿಗಳೊಳಗೆ ಶ್ರೇಷ್ಠನಾದಂಥ ಖರಾತ್ಮಜ—ದಂಡಕಾರಣ್ಯದಲ್ಲಿ ಸತ್ತಂಥ ಖರನ ಮಗ—ಮಕರಾಕ್ಷ ಮಾತಾಡಥಾನೆ. 'ನೀನು ಅರಸು ರಾಜಾಧಿರಾಜ ನಮ್ಮಂಥ ಭೃತ್ಯರು ಇರಲಿಕ್ಕೆ ಅರಸು ಯುದ್ಧಕ್ಕೆ ಹೋಗೋದು ನೀತವಲ್ಲ, ರಾಮ ನಮ್ಮ ತಂದೀನ್ನ ಬಾಣದಿಂದ ಕೊಂದಾನೆ. ನಮ್ಮ ತಂದಿಗೆ ವೈರಿ ಇದ್ದಾನೆ. ನನಗೆ ಅಪ್ಪಣಿ ಕೊಡು. ಯುದ್ಧಕ್ಕೆ ಹೋಗಿ, ಲಕ್ಷ್ಮಣನಿಂವ ಸಹಿತನಾದ ರಾಮನನ್ನೂ ಸಮಸ್ತ ಕಪಿಶ್ರೇಷ್ಠರನ್ನೂ ಕೊಂದು, ನಿನಗೆ ಈ ಹೊತ್ತು ಹ್ಯಾಂಗೆ ಸಂತೋಷವಾಗೋದು ಹಾಂಗೆ ಮಾಡೇನು' ಎಂದು ಖರನ ಮಗ, ಗಂಧರ್ವಗೆ ಹುಟ್ಟಿದ ಹಾಂಗೆ ಬಳ್ಳಿಟ್ಟು ಬೊಗಳಲಿಕ್ಕೆ, ಮೂರ್ಖ ಅಂತಃಕರಣವುಳ್ಳ ರಾವಣನು, ಬಹಳ ಸಂತೋಷಪಟ್ಟು, 'ನನ್ನ ಭಾರ ವಹಿಸಿಕೊಳ್ಳಕಿದ್ದಿ. ಎಲೋ ಮಕರಾಕ್ಷ ಶೀಘ್ರ ಕಾರ್ಯ ಸಾಧಿಸು. ಜಯಶೀಲನಾಗಿ ಬಾ' ಎಂದು ಕಳುಹಲಿಕ್ಕೆ, ಸಮರ್ಥನಾದಂಥ ಮಕರಾಕ್ಷನು ಬರತಲೇ ಸುಗ್ರೀವ ಮೊದಲಾದ ಕಪಿಶ್ರೇಷ್ಠರನ್ನು ಓಡಿಸಿ ಲಕ್ಷ್ಮಣ ಹಾಕಿದಂಥ ಬಾಣಸಮೂಹವನ್ನು ಗಣಿಸಿ ಮಾಡದೆ ರಾಮದೇವರನ್ನು 'ಯುದ್ಧಕ್ಕೆ ಬಾ' ಎಂದು ಕರೆದು ಮಾತನಾಡಥಾನೆ. 'ದಂಡಕಾರಣ್ಯಾಶ್ರಮದಲ್ಲಿರಲಿಕ್ಕೆ ಧನುರ್ಧಾರಿಗಳೊಳಗೆ ಶ್ರೇಷ್ಠನಾದಂಥ ನಮ್ಮ ತಂದೀನ್ನ

ಛದ್ಮದಿಂದ ಕೊಂದಿ ಹೊರ್ತು ಪರಾಕ್ರಮದಿಂದ ಕೊಲ್ಲಲಿಲ್ಲ. ಅದರ ಫಲ ನಾನು ನಿನಗೆ ತೋರಿಸಥೀನಿ' ಎಂದು ಮಾತನಾಡಿ, ಬ್ರಹ್ಮದೇವರ ವರಬಲದಿಂದ ಅವಧ್ಯನಾದ ಮಕರಾಕ್ಷನು ಬಾಣಸಮೂಹವನ್ನು ಬಿಟ್ಟ. ಅವನ ದುರ್ಬುದ್ಧಿಯನ್ನು ಕಂಡು ಅಪ್ರಮೇಯನಾದಂಥ ರಾಮದೇವರು ನಕ್ಕು, ಈ ಮಕರಾಕ್ಷನ ಬಾಣಗಳ ಬಾಣಗಳಿಂದ ನಿವಾರಿಸಿ, ವಜ್ರಕ್ಕೆ ಸದೃಶವಾದ ಬಾಣದಿಂದ ಉತ್ತಮವಾದ ಕುಂಡಲಗಳಿಂದ ಪ್ರಕಾಶಮಾನವಾದಂಥ ವಿರಾತ್ಮಜನ ಶಿರಸ್ಸನ್ನು ಕಡದುಬಿಟ್ಟನು. ಅವನ ಸಂಗಡ ಬಂದ ರಾಕ್ಷಸರು, ವೃಕ್ಷಗಳಿಂದ ಪಾಷಾಣಗಳಿಂದ ಕಪಿವೀರರ ಕೈಯ ಹೊಡೆಸಿಕೊಂಡು ಹೋದರು. ಮಕರಾಕ್ಷ ರಾವಣನ ಮುಂದೆ ತನ್ನ ಬಲಿಷ್ಠತನ ಪೊಗಳಿಕೊಂಡಿದ್ದ. ಅವನು ರಾಮನ ಬಾಣದಿಂದ ಸತ್ತಮ್ಯಾಲೆ, ರಾವಣ ತನ್ನ ಧನುಸ್ಸಿಗೆ ಹೆದೆ ಏರಿಸಿಕೊಂಡು ಬಲದಿಂದ ಯುಕ್ತನಾದನು. ಬಲ ಎಷ್ಟೆಂದರೆ ಸಹಸ್ರಕೋಟಿ ಹತ್ತು ಸಾವಿರ ಸೈನ್ಯದಿಂದ ಯುಕ್ತನಾಗಿ ಯುದ್ಧಕ್ಕೆ ಬಂದನು. ರಾವಣನ ಸೈನ್ಯದಿಂದ ಕಪಿಸೈನ್ಯ ಅನೇಕ ಪ್ರಕಾರ ಆಯುಧಗಳ ಸಮೂಹದಿಂದ ಭಂಗಪಟ್ಟು ಹತ್ತೂದಿಕ್ಕಿಗೆ ಓಡಿಹೋದವು. ಅದೇ ಸಮಯದಲ್ಲಿ ಕಪಿಗಳಿಗೆ ಅರಸಾದಂಥ ಸುಗ್ರೀವ, ಅಂಗದ ಮೊದಲಾದವರು ಶೀಘ್ರದಿಂದ ನಿಶಾಚರರ, ಮರ್ದನ ಮಾಡಿದರು.

ಗಜ ಗವಾಕ್ಷ ಗವಯ ಆರಿಷ್ಟ ಗಂಧಮಾದನ ಈ ಐದುಮಂದಿ ಪೂರ್ವದಲ್ಲಿ ಪ್ರಾಣಾಪಾನವ್ಯಾನೋದಾನಸಮಾನ, ಪಂಚ ಮರುತ್ತುಗಳು, ನಲವತ್ತೊಂಭತ್ತು ಮರುತ್ತುಗಳೊಳಗೆ ಶ್ರೇಷ್ಠರು. ಕುಬೇರನಿಂದ ಹುಟ್ಟಿದ್ದಾರೆ. ಮೂಲಕುಬೇರನಿಂದ ಹುಟ್ಟಿದ್ದಿಲ್ಲ. ಇವರು ಐದುಮಂದಿಗೆ ತಂದಿ, ಕುಬೇರನವತಾರ ಕತ್ಥನನೆಂಬೋ ಕಪಿ. ಆ ಕತ್ಥನನೆಂಬೋ ಕಪಿಯಿಂದ, ಈ ಐದುಮಂದಿ ಕಪಿಗಳು ಹುಟ್ಟಿದ್ದಾರೆ. ಗಜನೇವೇ ಮೊದಲಾದಂಥ ಕಪಿಗಳು, ತಂದಿ ಕತ್ಥನನಿಂದ ಸಹಿತರಾಗಿ ರಾವಣನ ಬಲ, ಹಿಂಸವಾಡಹೊಕ್ಕರು. ಆರು ಕಪಿಗಳನ್ನೂ ರಾವಣ ಅಮೋಘ ವೇಗವುಳ್ಳಂಥ ಬಾಣಗಳಿಂದ ಕ್ಷಣಮಾತ್ರದಲ್ಲಿ ಭೂಮಿಮ್ಯಾಲೆ ಕೆಡಹಿದನು. ತರುವಾಯ ಅಶ್ವಿನೀಪುತ್ರರು ವಿವಿಧ ಮೈಂದ ಹಾಂಗೆ ಜಾಂಬವಂತ, ಈ ಮೂರುಮಂದಿ ಕೂಡಿ ಪರ್ವತಗಳಿಂದ ರಾವಣನ್ನ ಹೊಡೆದರು. ರಾವಣ ಮೂರು ಬಾಣಗಳಿಂದ ಪರ್ವತ ಚೂರುಚೂರು ಮಾಡಿ, ಪುನಃ ಮೂರುಮಂದಿಗೆ ಹೊಡೆದು ಭೂತಳದಲ್ಲಿ ಕೆಡಹಿದನು. ಇಷ್ಟಾಗಲಿಕ್ಕೆ ವಾಲೀ ಮಗ ಅಂಗದ ರಾವಣನ ಎದುರಿಗೆ ಬಂದನು. ದೊಡ್ಡ ಕಲ್ಲು ತೆಗೆದುಕೊಂಡು ಬಾಹೋ ಅಂಥಾ ಅಂಗದಗೆ ರಾಕ್ಷಸ ಎದಿಗೆ ಬಾಣದಿಂದ ಹೊಡೆದನು. ಅಂಗದನು ಚೆನ್ನಾಗಿ ಹೊಡೆಸಿಕೊಂಡು ಮೂರ್ಛಿತನಾಗಿ ಬಿದ್ದನು. ಪುಥಣಿಯ ಬಿಲ್ಲು ಬಾಣಗಳಿಂದ ಪುಡಿಪುಡಿ ಮಾಡಿ ಸುಗ್ರೀವನ ಕೊರಳ ಕುಣಿಕಿಗೆ ಬಾಣದಿಂದ ಹೊಡೆದನು. ಅತ್ಯಂತವಾಗಿ ಹೊಡೆಸಿಕೊಂಡು ಭೂತಲದಲ್ಲಿ ಬಿದ್ದನು. ರಾವಣನ ಎದುರಿಗೆ ನಿಂದರಲಾರದೆ ಕಪಿಸೇನಿ ಓಡಲಿಕ್ಕೆ, ಹನುಮಂತ-

ದೇವರು ಶೇಷನ ಶರೀರಕ್ಕೆ ಸಮವಾದಂಥ ತನ್ನ ತೋಳನ್ನ ಎತ್ತಿಕೊಂಡು ಮುಷ್ಟೀಲಿಂದ ರಾವಣನ ಎದಿಗೆ ಹೊಡಿಯಲಿಕ್ಕೆ, ರಾವಣನು ಹತ್ತು ಮುಖದಿಂದ ರಕ್ತಕಾರತ ಭೂಮಿಮ್ಯಾಲೆ ಬಿದ್ದನು. ಒಂದಿಷ್ಟು ಎಚ್ಚರವಾದ ಮ್ಯಾಲೆ ರಾವಣನು ಹನುಮಂತನ್ನ ಬಹಳ ಪೊಗಳಹೊಕ್ಕನು. ' ವೈರಿಯಾದರೂ ಗುಣ ತೆಗೆದುಕೊಳ್ಳ-ಬೇಕು. ನಿನಗೆ ಸಮನಾದಂಥ ಪುರುಷನು ಒಂದಾನೊಂದು ದೇಶದಲ್ಲಿ ಒಂದಾನೊಂದು ಕಾಲದಲ್ಲಿ ಇಲ್ಲ. ಯಾಕೆ ಎಂದಿ, ಈ ಪ್ರಕಾರ ನನ್ನನ್ನು ದಾರೂ ಅವಸ್ಥಿ ಬಡಿಸಿದ್ದಿಲ್ಲ. ನನ್ನಂಥಾವಗೆ ಈ ಅವಸ್ಥಿ ಬಡಿಸಿದಿ. ಇದರಿಂದ ನಿನಗೆ ಸಮಾನನಾದಂಥ ಪುರುಷನು ಇಲ್ಲ ' ಎಂದು ರಾವಣನು ಮಾತನಾಡಲಿಕ್ಕೆ, ರಾವಣಗೆ ಮತ್ತಷ್ಟು ಕೋಪೋದ್ರೇಕ ವಾಗಬೇಕಾಗಿ ಪುನಃ ಹನುಮಂತ ಮಾತನಾಡಥಾನೆ. ' ಈ ಬಲವು ಅತ್ಯಲ್ಪ ತೋರಿಸಿದಕಾರಣ ಜೀವದಿಂದ ಉಳದಿ. ಎತಲಾನಿಕೆ ಸಮಗ್ರಬಲದಿಂದ ಹೊಡದಿದ್ದರೆ, ನೀನು ಬದುಕೋಣ ದುರ್ಲಭವಾಗೋದು. ನಮ್ಮ ಸ್ವಾಮೀ ಕೈಯಿಂದ ಸಾಯಬೇಕು ' ಎಂದು ಮಾತನಾಡಲಿಕ್ಕೆ, ಪುನಃ ರಾವಣ ಮಾತನಾಡ-ಥಾನೆ. ' ನನ್ನ ಕಡಿಯಿಂದಲೂ, ಸಮರ್ಥನಾದಂಥ ನೀನು ಮುಷ್ಟೀಪೆಟ್ಟು ತೆಗೆದುಕೋ ' ಎಂದು ಹನುಮಂತಗೆ ಹೊಡದನು. ಮುಷ್ಟೀಪೆಟ್ಟಿನಿಂದ ಸ್ವಲ್ಪ ಥರಥರಿಸುವ ಶರೀರವುಳ್ಳ ಪುರುಷನೋಪಾದಿ ನಿಂತನು. ವಿಹ್ವಲಾಂಗನೋಪಾದಿ ನಿಂತದ್ದು ಕಂಡು ಹನುಮಂತ ತನಗೆ ಹೊಡದಾನೆಂದು ಎದುರಿಗೆ ನಿಂದರಲಾರದೆ ತನಗೆ ಹೋಗುವದಕ್ಕೆ ಅವಕಾಶ ಇದೇ ಸಮಯವೆಂಬ ಅಭಿಪ್ರಾಯದಿಂದ, ಅಗ್ನೀ ಮಗನಾದ ನೀಲನ ಸಮೀಪಕ್ಕೆ ಹೋದನು. ಹನುಮಂತದೇವರು ಹೋಗಬ್ಯಾಡ-ವೆಂದು ನಿವಾರಿಸಿದ ಕಾಲಕ್ಕೂ ಹೋದನು. ಬಾಹೋ ಅಂಥಾ ರಾವಣನ್ನ ನೀಲ ಚೆನ್ನಾಗಿ ನೋಡಿ, ಅವನ ಧನುರ್ಬಾಣಗಳ ಮ್ಯಾಲೆ ಕೂಡ್ರುವ ಅಲ್ಲಿಂದ ಹಾರಿ ಧ್ವಜಾಗ್ರದ ಮ್ಯಾಲೆ ಕೂಡ್ರುವ ರಥದ ಮ್ಯಾಲೆ ಕೂಡ್ರುವ ಕುದರಿಗಳ ಮ್ಯಾಲೆ ಕೂಡ್ರುವ ಹತ್ತು ತಲೀ ಮ್ಯಾಲೆ ಕೂಡ್ರುವ. ಈ ಪ್ರಕಾರ ಕುಳಿತಲ್ಲೆ ಕೂಡ್ರದೆ ಸಂಚಾರಮಾಡಹೊಕ್ಕನು. ಹೀಂಗೆ ಮಾಡುವಂಥ ನೀಲನಿಂದ ತಾನು ಸಮರ್ಥ-ನಾದರೂ ರಾವಣ ಹುಚ್ಚಿಟ್ಟು ಕೈಗೆ ಸಿಗಲಿಲ್ಲವೆಂದು, ಶೀಘ್ರದಿಂದ ಅಗ್ನ್ಯಸ್ತ್ರ ಬಿಟ್ಟುಕೊಟ್ಟನು.

ನೀಲನು, ಹುತಾಶನ ಮಂತ್ರದಿಂದ ಮಂತ್ರಿಸಿದಂಥ ಬಾಣದಿಂದ ಭೂಮೀ ಮ್ಯಾಲೆ ಬಿದ್ದನು. ಪರ್ಯಂತು ಮಂತ್ರದೇವತಾವಹ್ನಿಯು ನೀಲನ ಸುಡಲಿಲ್ಲ. ಏನು ಕಾರಣ ಎಂದಲ್ಲಿ, ನೀಲ, ಅಗ್ನಿ ಅವತಾರನಾದ್ದರಿಂದ ಸುಡಲಿಲ್ಲ. ನೀಲ ತನ್ನ ವಶವಾಗದ ಕಾರಣ ಕ್ಷುದ್ರನ ಕೂಡ ಯುದ್ಧ ಮಾಡಬಾರದು. ಕ್ಷುದ್ರನ ಸಂಗಡ ಯುದ್ಧ ಮಾಡಿದ್ದರಿಂದ ಕೀರ್ತಿ ಬಾಹೋದಿಲ್ಲ ಎಂದು, ದೊಡ್ಡ ಪ್ರಬಲನ ಸಂಗಡ ಯುದ್ಧ ಮಾಡಬೇಕಾಗಿ ರಘುನಾಥನ ಎದುರಿಗೆ ಬಂದನು. ಶೀಘ್ರದಿಂದ ಲಕ್ಷ್ಮಣ

'ನಮ್ಮ ಸ್ವಾಮೀ ಭೃತ್ಯ ನಾ ಇದ್ದೀನಿ. ಮುಂದಕ್ಕೆ ಹೋಗಬ್ಯಾಡ' ಎಂದು ನಿವಾರಿಸಿದನು. ಧನುರ್ಧಾರಿಗಳ ಮಧ್ಯದಲ್ಲಿ ಶ್ರೇಷ್ಠನಾದಂಥ ಲಕ್ಷ್ಮಣ ರಾವಣ ಇಬ್ಬರೂ ಕವಚಗಳು ಸೀಳುವಂಥ ಬಾಣಗಳಿಂದ ಪರಸ್ಪರ ಹೊಡದಾಡಿದರು. ಲಕ್ಷ್ಮಣ ನಿವಾರಿಸಿದ ನಿಮಿತ್ತ ಅತ್ಯಂತ ಕೋಪದಿಂದ ಯುಕ್ತನಾಗಿ ಅಮೋಘ-ವಾದಂಥ ಉಗ್ರಬಾಣವನ್ನು — ಬ್ರಹ್ಮದೇವರಿಂದ ಕೊಡಲ್ಪಟ್ಟಂಥಾದ್ದು — ಕಿವಿ ಪರ್ಯಂತರ ಎಳದು ಲಕ್ಷ್ಮಣನ ಲಲಾಟಮಧ್ಯದಲ್ಲಿ ಬಿಟ್ಟನು. ಲಕ್ಷ್ಮಣನು ಬಾಣದಿಂದ ಅತ್ಯಂತವಾಗಿ ಹೊಡೆಸಿಕೊಂಡು ಮೂರ್ಛಾಗತನಾಗಿ ಬಿದ್ದನು. ಲಕ್ಷ್ಮಣನ ಕೈಸೆರಿ ಹಿಡಕೊಂಡು ಹೋದೇನೆಂದು ರಾವಣ ರಥದಿಂದಿಳಿದು ಕ್ಷಣಮಾತ್ರದಲ್ಲಿ ಲಕ್ಷ್ಮಣನ ಸಮೀಪಕ್ಕೆ ಬಂದು ಬಾಹುಬಲದಿಂದ ಹಿಡದು ಎತ್ತೋದಕ್ಕೆ ಇಚ್ಛಾಮಾಡಿದನು. ಲಕ್ಷ್ಮಣಗೆ ಸ್ವಲ್ಪ ಎಚ್ಚರಿಕೆಯಾಯಿತು. ಇನ್ನು ಚಂಚಲಶರೀರನಾಗಿದ್ದರೂ ನಾರಾಯಣನ ಅಂಶದಿಂದ ಯುಕ್ತವಾದಂಥ ತನ್ನ ಮೂಲರೂಪ, ಶೇಷನ ಸ್ಮರಿಸಲಿಕ್ಕೆ ಬಹಳ ಬಲವುಳ್ಳವನಾದ. ರಾವಣ ಲಕ್ಷ್ಮಣನ ಅಲ್ಲಾಡಿಸೋದಕ್ಕೆ ಸಮರ್ಥನಾಗಲಿಲ್ಲ. ದಶಶಿರನು ತನ್ನ ಇಪ್ಪತ್ತು ಬಾಹುಗಳಿಂದ ಹಿಡದು ಸಮರ್ಥನಾದ ಲಕ್ಷ್ಮಣನ ದಾವ ವ್ಯಾಳ್ಯಾದಲ್ಲಿ ಅಲ್ಲಾಡಿಸಿದನೋ ಆದೇ ಕ್ಷಣದಲ್ಲಿ, ಮೇರು ಮಂದರಾದಿ ಸಮಸ್ತ ಪರ್ವತಗಳು ಸಮಸ್ತ ಸಮುದ್ರಗಳು ಸಪ್ತ ದ್ವೀಪಾಂತರ ಭೂಮಿ ಅಲ್ಲಾಡಿದವು. ಪರಂತು ಲಕ್ಷ್ಮಣ ಅಲ್ಲಾಡಲಿಲ್ಲ. ಇಂಥಾದ್ದೇನು ಲಕ್ಷ್ಮಣನ ಪ್ರಬಲತ್ವ ಎಂದರೆ ಸಹಸ್ರ ಶಿರಸ್ಸುಳ್ಳ ಶೇಷಾತ್ಮಕನಾದಂಥ ಲಕ್ಷ್ಮಣನಲ್ಲಿ, ಒಂದು ಶಿರಸ್ಸಿನಲ್ಲಿ ಪಾತಾಳ ಮೊದಲಾದ ಹದಿನಾಲ್ಕು ಲೋಕ ಪರ್ವತಗಳನ್ನು ಸಾಗರಗಳ ಸಹಿತವಾದಂಥ ಪಂಚಾಶತ್ಕೋಟಿ ಬ್ರಹ್ಮಾಂಡ, ನಿಶ್ಚಯದಿಂದ ಸಾಸವೀ-ಕಾಳಿನೋಪಾದಿ ಲಘುವಾಗಿರತದೆ. ಖೇದ ಎಲ್ಲೀದು! ಪ್ರಸಿದ್ಧನಾದಂಥ ಲಕ್ಷ್ಮಣನ್ನ ಬಲಾತ್ಕಾರದಿಂದ ಎತ್ತೋಡಕ್ಕೆ ದಾವ ಒಬ್ಬಾನೊಬ್ಬನು ಸಮರ್ಥನಾದಾನು! ಸರ್ವಥಾ ಸಮರ್ಥನಾಗೋದಿಲ್ಲ. ರಾವಣ ತನ್ನ ಶಕ್ತಿ ಮೀರಿ ರಾಮನ ತಮ್ಮನಾ ನಂಥ ಲಕ್ಷ್ಮಣನ್ನ ಪೂರ್ವದೋಪಾದಿ ಪುನಃ ಎಳೀಲಿಕ್ಕೆ ತೀವ್ರವೇಗವುಳ್ಳಂಥ ಸಮಸ್ತ ಜೀವರುಗಳಿಗೆ ಅಧಿಪತಿಯಾದಂಥ ವಾಯುದೇವರ ಅಪರಾವತಾರನಾದಂಥ ಹನು-ಮಂತದೇವರು ಹಾರಿಬಂದು ರಾವಣನ ಮುಂದೆ ನಿಂತನು. ಹನುಮಂತದೇವರು ಕೋಪದಿಂದ ವಜ್ರಸದೃಶ ಮುಷ್ಟೀಪೆಟ್ಟಿನಿಂದ ರಾವಣಗೆ ಹೊಡದನು. ರಾವಣ ಇಪ್ಪತ್ತು ತೋಳೂ ಪಸರಿಸಿಕೊಂಡು, ಹತ್ತೂ ಮುಖದಿಂದ ರಕ್ತಕಾರತ ಸತ್ತವ-ನೋಪಾದಿ ಮೂರ್ಛಿತನಾಗಿ ಬಿದ್ದನು.

ಹನುಮಂತ ರಾವಣನ ಕೆಡಹಿ ಲಕ್ಷ್ಮಣನ ತೆಗೆದುಕೊಂಡು, ಶೇಷಶಾಯಿ ನಾರಾಯಣನ ಅವತಾರನಾದಂಥ ರಾಮದೇವರ ಸಮೀಪಕ್ಕೆ ಬಂದನು. ಲಕ್ಷ್ಮಣನ ಎತ್ತಲಿಕ್ಕೆ ಹನುಮಂತನೇ ಸಮರ್ಥ ಏನುಕಾರಣ ಎಂದಲ್ಲಿ, ಶೇಷ ಗರುಡ ರುದ್ರ

ಮೊದಲಾದ ಜೀವರಾಶಿಗಳಲ್ಲಿ ಅಂತರ್ನಿಯಾಮಕನಾಗಿ ಚೇಷ್ಟಗಳ ಮಾಡಸಥಾನೆ. ಇಂಥಾ ವಾಯು ಅವತಾರನಾದಂಥ ಹನುಮಂತ, ಲಕ್ಷ್ಮಣನ್ನ ಎತ್ತಿದ್ದು ಆಶ್ಚರ್ಯವಲ್ಲ. ರಾಮಚಂದ್ರ ಲಕ್ಷ್ಮಣನ ಮ್ಯಾಲೆ ಅನುಗ್ರಹಮಾಡಿ ಅಮೃತ-ದೃಷ್ಟಿಯಿಂದ ನೋಡಿ ಕೈಕಮಲಗಳಿಂದ ಸರ್ವಶರೀರದ ಮ್ಯಾಲೆ ನ್ಯಾವರಿಸಲಿಕ್ಕೆ ಶ್ರಮ ಪರಿಹಾರವಾಯ್ತು. ಲಲಾಟಮಧ್ಯದಲ್ಲಿ ನೆಟ್ಟಂಥ ಬಾಣ ಶ್ರೀ ರಘುನಾಥ ಕಿತ್ತಲಿಕ್ಕೆ ಎದ್ದು ನಿಂತನು. ರಾಹುಮುಖದಿಂದ ನಿವರ್ತನಾದಂಥ ಚಂದ್ರನು ಹ್ಯಾಂಗೆ ಸ್ವಚ್ಛನಾಗಿ ತನ್ನ ಕಳಿಕಾಂತಿಯಿಂದ ಪೂರ್ಣನಾಗಿ ಶೋಭಿಸಥಾನೋ ಹಾಂಗೆ ಶೋಭಿಸಿದನು. ಲಕ್ಷ್ಮಣಗೆ ಸಮಾಧಾನ ಮಾಡಿ ದುಷ್ಟಜನಮರ್ದಕನಾದ ಜನಾರ್ದನ ಶೇಷನ ಶರೀರಸನ್ನಿಭವಾದಂಥ ಶಾರ್ಙ್ಗಧನಸ್ಸು ಹಿಡಕೊಂಡು ಬರಥಾನೆ. ರಾವಣ ನಿಶ್ಚೇಷ್ಟನಾಗಿ ಬಿದ್ದಾನೆ. ಬಿದ್ದವಗೆ ಕೊಲ್ಲಬಾರದು. ಸುರರ ಧರ್ಮ ತೋರಿಸಬೇಕಾಗಿ, ರಾವಣಗೆ ಎಚ್ಚರಿಕೆ ಕೊಟ್ಟು ಯುದ್ಧ ಮಾಡಬೇಕೆಂದು, 'ಎಲೋ ರಾವಣ! ಧನಸ್ಸು ಹೆದೆ ಕ್ಕೂಡಿಸು. ಸನ್ನದ್ಧನಾಗಿ ಯುದ್ಧಕ್ಕೆ ಬಾ' ಎಂದು ಕರೆದನು. ರಾವಣ ಪುನಃ ತನ್ನ ರಥ ಏರಿಕೊಂಡು ಧನುರ್ಬಾಣಗಳಿಂದ ಯುಕ್ತನಾಗಿ ರಘುನಾಥನ ಸಮೀಪಕ್ಕೆ ಬಂದು, ಅಸ್ತ್ರಜ್ಞರೊಳಗೆ ಶ್ರೇಷ್ಠನಾದ ಕಾರಣ ಬಾಣಗಳಿಂದ ಸರ್ವದಿಕ್ಕುಗಳಲ್ಲಿ ಅಂಧಕಾರ ಮಾಡಿದನು. ಆ ವ್ಯಾಳ್ಯಾದಲ್ಲಿ ಹನುಮಂತದೇವರು ರಾಕ್ಷಸಾಧಿಪನಾದಂಥ ರಾವಣನು ರಥದ ಮ್ಯಾಲೆ ಕೂತಿರಲಾಗಿ, ನಮ್ಮ ಒಡಿಯ ಸ್ವಾಮಿ ರಘುನಾಥ, ವೈರಿ ಎದುರಿಗೆ ಭೂಮೀ ಮ್ಯಾಲೆ ನಿಂತು ಯುದ್ಧ ಮಾಡಬಾರದೆಂಬೋ ಅಭಿಪ್ರಾಯದಿಂದ ರಾಮದೇವರನ್ನ ತನ್ನ ಹೆಗಲ ಮ್ಯಾಲೆ ಕೂಡಿಸಿಕೊಂಡು ರಾಕ್ಷಸನ ಎದುರಿಗೆ ಬಂದು ನಿಂತನು. ರಾಮದೇವರು ಹನುಮಂತನ ಭಕ್ತ್ಯತಿಶಯವನ್ನು ಕಂಡು ನಕ್ಕಂಥಾತನಾಗಿ, ರಾವಣನ ಕುದರಿ ಸಾರಥಿ ಕೊಂದು ಬಿಟ್ಟನು. ಹಾಂಗೆ ರಥ ಧ್ವಜ ಪುಡಿಪುಡಿಮಾಡಿ ಛತ್ರ ಚಾಮರ ಧನು ಖಡ್ಗ ಮೊದಲಾದ ಅನೇಕ ಆಯುಧಗಳ ಹಾಂಗೂ ಕಿರೀಟಗಳ ಕಡಿದುಬಿಟ್ಟನು. ರಾವಣ ಭ್ರಷ್ಟಸಂಕಲ್ಪನಾಗಿ ಬಹಳ ಖಿನ್ನನಾದ; ಮುಂದೆ ಯೋಚನಿ ಸೂಚಿಸದು. ವಿವೇಕಶೂನ್ಯನಾದಂಥ ರಾವಣನ್ನ ನೋಡಿ ಪುನಃ ರಾಮದೇವರು ಮಾತನಾಡ ಥಾನೆ. 'ಶೀಘ್ರ ಮನಿಗೆ ಹೋಗಿ ಸಮಸ್ತ ವಿಷಯಭೋಗಗಳ ಅನುಭವಿಸಿ ತುಷ್ಟಿ ಬಡಿಸಿಕೊಂಡು ಮರಣಗೋಸ್ಕರ ಶೀಘ್ರದಿಂದ ತಿರಗಿ ಬಾ' ಎಂದು ಮಾತಾಡಲಿಕ್ಕೆ, ರಾವಣ ಮಾರ ತಗ್ಗಿಸಿದಂಥಾತನಾಗಿ ಮನಿಗೆ ಬಂದನು. ಸಾಯಲಿಕ್ಕೆ ಉಳ್ಳಂಥ ತನ್ನ ಪ್ರಧಾನೇರ ಕೂಡ ಆದ್ಯಂತ ವೃತ್ತಾಂತ ಯುದ್ಧದ ಪ್ರಸಂಗ ರಾಮನ ಕೈಯ್ಯ ಪೆಟ್ಟು ತಿಂದು ಬಂದದ್ದು ಹೀಂಗೆ ಬಹಳ ದುಃಖ ಹೇಳಲಾಗಿ, ಪ್ರಧಾನೇರು ಒಂದು ಉಪಾಯ ರಚಿಸಿದರು. 'ಕಪಿಗಳು ಕಾಲಗತಿ ನೋಡಲಿಕ್ಕೆ ಬಹಳ ಪ್ರಬಲರಾಗಿದ್ದಾರೆ, ಮನುಷ್ಯರಿಂದ ಸೋತು ಬರಥೀವಿ. ಅದೃಷ್ಟ ತಿರಗೇದೆ. ಇದಕ್ಕೆ ಒಂದು

ಉಪಾಯವದೆ. ನಿಮ್ಮ ತಮ್ಮ ಕುಂಭಕರ್ಣನಿದ್ದಾನೆ. ಆರುತಿಂಗಳು ನಿದ್ರಿಗೈದು ಎಚ್ಚತ್ತು, ಮದ್ಯ ಮಾಂಸ ಮೊದಲಾದವು ಸೇವಿಸಿ ಮಲಗಿಕೊಳ್ಳಥಾನೆ. ಈಗ್ಗೆ ನಿದ್ರಿಗೈದಿದ್ದಾನೆ. ಇನ್ನೂ ಆರು ತಿಂಗಳು ಪೂರ್ಣ ಇಲ್ಲ. ಈಗ ನಮಗೆ ಆಪತ್ಕಾಲ ಬಂದದೆ. ನಿದ್ರಾಭಂಗ ಮಾಡಿದರೂ ದೋಷವಿಲ್ಲ. ಮಲಗಿದಂಥ ಕುಂಭಕರ್ಣನ ಎಬ್ಬಿಸಬೇಕು' ಎಂದು ಬುದ್ಧಿ ಮಾಡಿದರು.

ಪ್ರಧಾನೇರಿಗೆ ಆಪ್ಪಣೆ ಆಯಿತು. ಕುಂಭಕರ್ಣನ್ನ ಗಾಢನಿದ್ರೆಯಿಂದ ಶೀಘ್ರ ಎಚ್ಚರಿಸೋಕಾರಣ, ಕೋಡಗಲ್ಲುಗಳಿಂದ ಖಡ್ಗಗಳಿಂದ ಚಪ್ಪಕೊಡಲಿಗಳಿಂದ ಹಾಕತಿಹೋರು. ಆನಿಗಳಿಂದ ತುಳಿಸಿದರು. ದೇಹದ ಮ್ಯಾಲೆ ಬೆಂಕಿ ಚೆಲ್ಲಿದರು. ಕಿವಿ ಮೂಗಿನ ಹೊದರದೊಳಗೆ ನೀರುಗಳ ತುಂಬಿದರು. ಆಪಾರ ವಾದ್ಯಗಳ ಬಾರಿಸಿ ಎಚ್ಚರಿಸತಿಹೋರು. ಎಚ್ಚರಿಸಲಿಕ್ಕೆ ಹತ್ತುಸಾವಿರ ಸೈನ್ಯ ಮಿಳಿತವಾಗಿಹೋದು. ಮೂಗಿನ ಶ್ವಾಸದಿಂದ ಒಳಗೆ ಹೋಗೋರು ಶ್ವಾಸ ಹೊರಗೆ ಬಿಡಲಿಕ್ಕೆ ಉಸಿರಿನ ಗಾಳಿಯಿಂದ ದೂರ ಹೋಗಿ ಬೀಳತಿಹೋರು. ನಾನಾ ಉಪಾಯಗಳಿಂದ ಸಮೀಪಕ್ಕೆ ಹೋಗಿ ಮಹಾ ಪ್ರಯತ್ನದಿಂದ, ಮಲಗಿದ್ದಂಥ ಕುಂಭಕರ್ಣನ್ನ ಎಬ್ಬಿಸಿದರು. ಮೊದಲಿಗೇ ಪರ್ವತಸದೃಶ ಮಾಂಸ ಭಕ್ಷ್ಯಭೋಜ್ಯಗಳ ರಾಶಿಗಳ ಮಾಡಿ ಪಾನಕ್ಕೆ ರಕ್ತದ ಮಡುವುಗಳು ಮಾಡಟ್ಟು ಎಬ್ಬಿಸಿದರು. ಎದ್ದುಕುಳಿತು ಮುಂದಿಟ್ಟಂಥ ಮಾಂಸ ಭಕ್ಷ್ಯಭೋಜ್ಯಗಳ ಭಕ್ಷಣೆಮಾಡಿ ತೃಪ್ತನಾದನು. ತರುವಾಯ ಕುಂಭಕರ್ಣನ್ನ ಪರಮ ಆದರದಿಂದ ಸಭಾಸ್ಥಳಕ್ಕೆ ಕೂಡಿಕೊಂಡುಬಂದರು. ರಾವಣ ಕುಂಭಕರ್ಣನ ಕೂಡ ಮಾತನಾಡಥಾನೆ. 'ರಾಮನೆಂಬಾತ ಯಃಕಶ್ಚಿತ್ ಮನುಷ್ಯ ವನದಲ್ಲಿ ಶೂರ್ಪನಖೀ ಕರ್ಣ ನಾಸಿಕ ಛೇದಿಸಿ ಖರ ದೂಷಣ ಮೊದಲಾದ ಹದಿನಾಲ್ಕು ಸಾವಿರ ರಾಕ್ಷಸರ ಕೊಂದ ಕಾರಣ ರಾಮನ ಹೆಂಡತಿ ಸೀತಾದೇವಿಯನ್ನು ಕೊಂಡುಬಂದು ಅಶೋಕವನದಲ್ಲಿಟ್ಟಿದ್ದೀನಿ. ಸೀತಾನಿಮಿತ್ತ ಹನುಮಂತ ಸಮುದ್ರಹಾರಿ ಬಂದು ವನ ಕೆಡಿಸಿ ಅಕ್ಷಕುಮಾರನ ಕೊಂದು ಮೂರರಲ್ಲಿ ಒಂದು ಭಾಗ ಸೈನ್ಯ ಸಂಹರಿಸಿ ಲಂಕಾ ಸುಟ್ಟುಹೋಗಿ ರಾಮಗೆ ಈ ವಾರ್ತೆ ಹೇಳಲಿಕ್ಕೆ ಕಪಿಸೇನಿಯಿಂದ ಯುಕ್ತನಾಗಿ ಸಮುದ್ರಕ್ಕೆ ಸೇತು ಕಟ್ಟಿ ಇಲ್ಲಿಗೆ ಬಂದಿದ್ದಾನೆ. ಅಪಾರ ರಾಕ್ಷಸರನ್ನ ಕೊಂದು ನನ್ನ ಮಕ್ಕಳನೆಲ್ಲ ಕೊಂದುಹಾಕಿದ. ಅನರ್ಥ ಪ್ರಾಪ್ತವಾಗೇದೆ. ನೀನು ದೊಡ್ಡ ಪ್ರಬಲನಿದ್ದಿ. ನೀನು ಜೀವದಲ್ಲಿರಲಿಕ್ಕೆ ಈಗ ರಾಮನೆಂಬೋ ಮನುಷ್ಯನ ಕೈಯಿಂದ ಪರಾಜಿತನಾಗಿದ್ದೀನಿ. ಈ ರಾಮನ ಕೊಂದು ನನಗೆ ಪ್ರೀತಿಯುಂಟುಮಾಡು.' ಹೀಂಗನಲಿಕ್ಕೆ ಕುಂಭಕರ್ಣ, ಆದ್ಯಂತ ವರ್ತಮಾನ ಕೇಳಿ ಅಣ್ಣನಾದಂಥ ರಾವಣನ ನಿಂದಸ್ತಾನೆ. 'ಎಲೋ ಪಾಪಿ! ನೀನು ಏನು ಅನುಚಿತಕರ್ಮ ಮಾಡಿದಿ! ಸೀತಾರಾಮರು ಜಗತ್ತಿಗೇ ತಾಯಿತಂದೇರು. ಜಗನ್ಮಾತೆಯಾದ ಸೀತಾದೇವಿಯ ಕೊಂಡುಬಾಹೋಣ, ಅಮೋಘವೀರ್ಯವುಳ್ಳ

ರಾಘವನ ಕೂಡ ವಿರೋಧ ಆಚರಿಸೋಣ, ಇದೆಲ್ಲ ಕ್ಲೇಶಕ್ಕೆ ಕಾರಣವಾದಂಥಾದ್ದು. ಬಲಾಧಿಕನ ಸಂಗಡ ಒಂದಾನೊಂದು ಕಾಲಕ್ಕೂ ವಿರೋಧ ಕಟ್ಟಿಕೊಂಬೋಣ ಪ್ರಶಸ್ತವಲ್ಲ. ರಾಮದೇವರು ಅತಿ ಬಲಾಢ್ಯನಿದ್ದಾನೆ. ಇದು ನಾ ಬಲ್ಲೆ' ಹೀಂಗೆಂದು ಶುಭಜೀವನಾವೇಶದಿಂದ ಕುಂಭಕರ್ಣ ಮಾತನಾಡಲಿಕ್ಕೆ ರಾವಣ ಮಾತನಾಡಥಾನೆ. 'ಈಗ ಆಪತ್ಕಾಲವದೆ. ನನ್ನ ಗುಣದೋಷ ಎಣಿಸಬ್ಯಾಡ. ನನ್ನಿಂದ ಅನ್ಯಾಯ ಮಾಡಲ್ಪಟ್ಟರೂ, ನೀನು ಸಂರಕ್ಷಣೆ ಮಾಡಬೇಕು. ಸಂರಕ್ಷಣೆ ಮಾಡದೆಹೋದರೆ ನಿನ್ನಿಂದ ಪ್ರಯೋಜನವೇನು? ಅರಸರುಗಳು ಕದಾಚಿತ್ ಅನ್ಯಾಯ ಮಾಡಥಾರೆ. ಏನುಕಾರಣ ಮಾಡಥಾರೆ ಎಂದಲ್ಲಿ ನಿನ್ನಂಥ ಬಲಾಧಿಕ ಬಂಧುಜನ ನೋಡಿ ಅವರ ಭರವಸಿಯಿಂದ ಮಾಡಥಾರೆ. ನೀ ದೊಡ್ಡವನಿದಿ. ನನಗೆ ಬಂದಂಥ ಭಯ ಪರಿಹರಿಸು' ಎಂದು ತಮ್ಮನ ಪ್ರೊಗಳಲಿಕ್ಕೆ ಅಸುರಾವೇಶ ಬಂತು.

ಅಣ್ಣನಾದಂಥ ರಾವಣನಿಂದ ಹೀಂಗೆ ನುಡಿಸಿಕೊಂಡು, ಯುದ್ಧಕ್ಕೆ ಹೊರಟನು. ಉತ್ತಮವಾದ ತ್ರಿಶೂಲಾಯುಧ ತೆಗೆದುಕೊಂಡು ಐದು ಯೋಜನ ಉನ್ನತವುಳ್ಳಂಥ, ಲಂಕಾಪ್ರಾಕಾರವಾಗಿದ್ದಂಥ ತ್ರಿಕೂಟಪರ್ವತವನ್ನು ದಾಟಿ, ದಾವ ವ್ಯಾಳ್ಯಾದಲ್ಲಿ ರಣರಂಗಕ್ಕೆ ಬಂದನು ಅದೇ ವ್ಯಾಳ್ಯಾದಲ್ಲಿ ಕಪಿವೀರರು ಭಯ-ದ್ವೆಸಿಯಿಂದ ಸೇತು ದಾಟಿ ಶೀಘ್ರ ಓಡಿಹೋದರು. ಕಪಿವೀರರ ಮಧ್ಯದಲ್ಲಿ ವಸು-ರೂಪಾಂಶರಾದಂಥ ಶತಬಲ ಪನಸ ಎಂಬ ಎರಡು ಕಪಿಗಳು ತರುವಾಯ ಕೋಣಾಧಿಪತಿಯಾದಂಥ ನಿರಋತೀ ಅವತಾರ, ಮಹಾಪರಾಕ್ರಮಿಯಾದಂಥ ದುರ್ಮುಖನೆಂಬ ಕಪಿ ಹಾಂಗೆ ನಾಲ್ವತ್ತೊಂಭತ್ತು ಮರುತ್ತುಗಳೊಳಗೆ ಶ್ರೇಷ್ಠರಾದ ಮರುತಾಂಶದಿಂದ ಯುಕ್ತರಾದ ಸಂಪಾತಿ ಶ್ವೇತ ಕೇಸರಿ ಎಂಬ ಕಪಿಗಳು ಹೀಂಗೆ ಆರು ಮಂದಿ ಕಪಿಗಳನ್ನ ಕುಂಭಕರ್ಣ ತನ್ನ ಬಾಯಿಯೊಳಗೆ ಹಾಕಿಕೊಂಡನು. ಮಹಾಪರಾಕ್ರಮಿಯಾದಂಥ ಕುಂಭಕರ್ಣನು, ಕುಮುದ ಜಯಂತ ಎಂಬ ಎರಡು ಕಪಿಗಳನ್ನು ಅಂಗೈಯಿಂದ ಒರೆಸಿ, ಹಿಟ್ಟುಹಿಟ್ಟು ಮಾಡಿದನು. ನಳ ಹಾಂಗೆ ಗಜನೇ ಮೊದಲಾದಂಥ ಐದು ಕಪಿಗಳು ತಾರ ನೀಲ ಹೀಂಗೆ ಎಂಟುಮಂದಿ ಕೈಗಳಲ್ಲಿ ಪರ್ವತಗಳು, ವೃಕ್ಷಗಳು ಹಿಡಕೊಂಡು ಬರಲಿಕ್ಕೆ, ಮುಷ್ಟೀಪೆಟ್ಟಿನಿಂದ ಹೊಡದು ಕೆಡಹಿದನು. ಆವ್ಯಾಲೆ ಅಂಗದ ಜಾಂಬವಂತ ಸುಗ್ರೀವ ಮೂರುಮಂದಿ ಕಪಿಗಳು ಪರ್ವತದಿಂದ ಹೊಡದರು. ಆ ಪರ್ವತಗಳು, ಕುಂಭಕರ್ಣನ ಶರೀರಕ್ಕೆ ತಾಕಿ ಪುಡಿಪುಡಿ ಆದವು. ಬಲಶಾಲಿಯಾದ ಕುಂಭಕರ್ಣಗೆ ಲೇಶಮಾತ್ರ ವ್ಯಥಿ ಆಗಲಿಲ್ಲ. ಸೂರ್ಯನ ಮಗ ಸುಗ್ರೀವ, ದೊಡ್ಡ ಪರ್ವತ ತೆಗೆದುಕೊಂಡು ಒಂದು ಕುಂಭ-ಕರ್ಣನ ವ್ಯಾಳೆ ಹಾಕಿದನು. ಕುಂಭಕರ್ಣ ಅದೇ ಪರ್ವತ ತೆಗೆದುಕೊಂಡು ಸುಗ್ರೀವಗೆ ಹೊಡದನು. ಪರ್ವತದಿಂದ ಹೊಡಸಿಕೊಂಡು, ಮೂರ್ಛಾಗತನಾಗಿ ಬಿದ್ದನು. ಮತ್ತು ಹಾಂಗೆ ಕುಂಭಕರ್ಣ, ಕೋಪದಿಂದ ಯುಕ್ತನಾಗಿ ಅಂಗೈ

ಪೆಟ್ಟಿನಿಂದ ಅಂಗದಗೆ ಜಾಂಬವಂತಗೆ ಹೊಡಿಯಲಿಕ್ಕೆ ಅವರು ಮೂರ್ಛಾಗತರಾಗಿ ಭೂತಳದಲ್ಲಿ ಬಿದ್ದರು. ತರುವಾಯ ಬಲಿಷ್ಠನಾದಂಥ ಕುಂಭಕರ್ಣನು ಸುಗ್ರೀವನ್ನ ಕೈಸೆರಿ ಕೊಂಡುಹೋದನು.

ಹನುಮಂತದೇವರು ಅತಿಸೂಕ್ಷ್ಮದೇಹ, ನೊಣದೋಪಾದಿ ಧರಿಸಿಕೊಂಡು ಕುಂಭಕರ್ಣನ ಅನುಸರಿಸಿ ಹೋದನು. ಹನುಮಂತದೇವರು ಅನುಸರಿಸಿಹೋಗಲಿಕ್ಕೆ ನಿಮಿತ್ತವೇನು ಎಂದಲ್ಲಿ, 'ದಾವ ವ್ಯಾಳ್ಯಾದಲ್ಲಿ ಸುಗ್ರೀವನ್ನ ಕುಂಭಕರ್ಣ ಪೀಡಿಸ್ಯಾನು, ಆ ವ್ಯಾಳ್ಯಾದಲ್ಲಿ ಸುಗ್ರೀವನ್ನ ನಾನು ಬಿಡಿಸಿಕೊಂಡೇನು. ಅಥವಾ ಬಿಡಿಸಿಕೊಂಬೋಣ ಅವನಿಂದಲೇ ಶಕ್ಯವಾಯಿತೇ ಒಳಿತಾಯಿತು.' ಈ ಅಭಿ-ಪ್ರಾಯದಿಂದ ಹನುಮಂತದೇವರು ಅನುಸರಿಸಿ ಹೋಗುತ್ತಿರಲಾಗಿ, ಕುಂಭಕರ್ಣ ಪಟ್ಟಣಪ್ರವೇಶ ಮಾಡಿದ. ಅಲ್ಲಿ ರಾವಣನೇ ಮೊದಲಾದ ಸಮಸ್ತ ಬಂಧುಜನರಿಂದ ಪೂಜಿಸಿಕೊಂಡು ಹಾಂಗೆ ಶೀತಳೋದಕ ಪುಷ್ಪಗಳಿಂದ ಸರ್ವಾಂಗಗಳಲ್ಲಿ ಅಭಿಷೇಕ ಮಾಡತಿರಲಾಗಿ ಅದೇ ಅಭಿಷೇಕದಿಂದ ಅಭಿಷಿಕ್ತನಾಗಿ, ಕಪಿಗಳಿಗೆ ಅರಸಾದಂಥ ಸುಗ್ರೀವನು ಯುದ್ಧಕ್ಕೆ ಬಂದನು. ಶ್ರಮಪರಿಹಾರವಾಗಲಾಗಿ ಕುಂಭಕರ್ಣನ್ನ ನಾಲ್ಕೂ ಕಡೀಲಿ ವಂಚಿಸಿ ಹಲ್ಲುಗಳಿಂದ ಮೂಗು ಕಡಿದನು. ಶೀಘ್ರದಿಂದ ಮ್ಯಾಲಕ್ಕೆ ಹಾರಿದನು. ಆ ಹಾರೋ ಅಂಥ ಸುಗ್ರೀವಗೆ ಅಂಗೈಪೆಟ್ಟಿನಿಂದ ಹೊಡಿಯಲಿಕ್ಕೆ ಭೂಮೀ ಮ್ಯಾಲೆ ಬಿದ್ದನು. ಭೂಮೀ ಮ್ಯಾಲೆ ಬಿದ್ದ ಸುಗ್ರೀವನ್ನ ಅಂಗೈಗಳಿಂದ ಒರಸಹೊಕ್ಕನು. ಒರಸೋ ಸಮಯದಲ್ಲಿ, ಅಂಗುಲಿಗಳ ಛಿದ್ರದಿಂದ ಜುಣುಗಿ ಹೊರಗೆ ಹೊರಟನು. ಪುನಃ ಕೋಪದಿಂದ ಸುಗ್ರೀವಗೆ, ಕುಂಭಕರ್ಣ ತ್ರಿಶೂಲದಿಂದ ಹೊಡದನು. ವಾಯುಕುಮಾರನಾದಂಥ ಹನುಮಂತದೇವರು, ಸುಗ್ರೀವಗೆ ತ್ರಿಶೂಲದಿಂದ ಅಪ್ಪೇವುವಾದೀತೆಂದು, ಕಪೀಶನ ಮ್ಯಾಲೆ ಹಾಕಿದ ಅವೋಘ ಶೂಲವನ್ನು ತೀವ್ರ ಕಸಗೊಂಡು ಮೊಳಕಾಲಿಗೆ ಹಚ್ಚಿ ಶೀಘ್ರದಿಂದ ತುಣುಕು ಮಾಡಿದನು. ಕುಂಭಕರ್ಣನ್ನ ನೋಡಿ ದೃಢಧ್ವನಿಯಿಂದ ಸಿಂಹನಾದ ಮಾಡಿದನು. ಆಮ್ಯಾಲೆ ಕುಂಭಕರ್ಣ ಘಟ್ಯಾಗಿ ಮುಷ್ಟಿ ಮಾಡಿ ಮುಷ್ಟಿಪೆಟ್ಟೀಲಿಂದ, ಹನು-ಮಂತನ ಎದಿಗೆ ಹೊಡದನು. ಪುನಃ ಹನುಮಂತ ಅವನ ಪೆಟ್ಟನ್ನು ಗಣನಾ ಮಾಡದೆ ಸಿಂಹನಾದ ಮಾಡಿ ಹಸ್ತತಳದಿಂದ ಕುಂಭಕರ್ಣನ ವಕ್ಷಸ್ಥಳದಲ್ಲಿ ಹೊಡದನು. ಹೊಡಸಿಕೊಂಡಂಥ ಕುಂಭಕರ್ಣ ಭೂತಳದಲ್ಲಿ ಬಿದ್ದು ಎಚ್ಚರಿಕೆಯುಳ್ಳವನಾಗಿ ರಾಮದೇವರು ಇದ್ದ ಸ್ಥಳವನ್ನು ಕುರಿತು ಹೊರಟುಹೋದನು. ಬಾಹೋ ಕಾಲಕ್ಕೆ ಹನುಮಂತದೇವರು ಆಲೋಚನಿ ಮಾಡಥಾನೆ. 'ಮತ್ತೊಬ್ಬರಿಂದ ವಧಿಗೆ ಯೋಗ್ಯನಲ್ಲ. ಈ ಕುಂಭಕರ್ಣನ್ನ ಸ್ವತಃ ರಾಮನೇ ಕೊಂದು ಕೀರ್ತಿ ಪ್ರಕಾಶ ಮಾಡಲಿ. ಇನ್ನು ಕುಂಭಕರ್ಣನ್ನ ಕೊಲ್ಲೋದಕ್ಕೆ ನಾ ಸಮರ್ಥ ಆದರೂ, ರಾಮದೇವರ ಕೀರ್ತಿ ಪ್ರಕಾಶ ಆಗಬೇಕು. ಆದ್ದರಿಂದ ಈ ಕುಂಭಕರ್ಣನ ನಾನು

ಕೊಲ್ಲಬಾರದು. ಇನ್ನೂ ಒಂದು ನಿಮಿತ್ತ—ನಾರಾಯಣನ ದ್ವಾರಪಾಲಕರು ಜಯ-ವಿಜಯರು. ಪೂರ್ವದಲ್ಲಿ ದೇವರಿಂದ ಇವರಿಗೆ ವರವು ಕೊಡಲ್ಪಟ್ಟಿದೆ.' ವರವು ಕೊಟ್ಟ ಪ್ರಕಾರ ಹೇಳಥಾರೆ. "'ಮೂರು ಜನ್ಮಗಳಲ್ಲಿ, ವೀರ್ಯದಲ್ಲಿ ಪೂರ್ಣರಾಗಿ ಇಬ್ಬರೂ ನನ್ನಿಂದಲೇ ವಧ್ಯರಾಗಿ' ಎಂದು ಕೇಶವನಿಂದ ಜಯ-ವಿಜಯರಿಗೆ ನುಡಿಯಲ್ಪಟ್ಟಿದೆ. ಆದಕಾರಣದಿಂದ ಕೊಲ್ಲವಲ್ಲ. ಎತಲಾನಿಕೆ ಇವನ ಕೊಂದೇನೆ ರಾಮದೇವರು ಅನುಗ್ರಹ ಮಾಡದೇಹೋದಾನು. ಇದು ನನಗೆ ಧರ್ಮವಲ್ಲ. ದೇವರ ಪ್ರೀತಿ ಮಾಡ್ಲೋಣವೇ ನನ್ನ ಧರ್ಮ" ಎಂದು ಈ ಪ್ರಕಾರ ಆಲೋಚನಿ ಮಾಡಿ, ಕುಂಭಕರ್ಣನ ಕೊಲ್ಲದೆ, ಸುಗ್ರೀವಸಹಿತನಾಗಿ ಕಪಿಶ್ರೇಷ್ಠರು ಎಲ್ಲಿಹಾರೋ ಅಲ್ಲಿಗೆ ಹೋದನು.

ಕುಂಭಕರ್ಣ, ಹನುಮಂತನಿಂದ ಒಡಿಸಿಕೊಂಡಾತನಾಗಿ ಸಮುಸ್ತ ಕಪಿಗಳ ಭಕ್ಷಣಿ ಮಾಡತಲೇ, ರಾಮದೇವರ ಸಮೀಪಕ್ಕೆ ಬಂದನು. ಆ ಕುಂಭಕರ್ಣನಿಂದ ನುಂಗಲ್ಪಟ್ಟಿಂಥ ಕಪಿಶ್ರೇಷ್ಠರು ಅವನ ಶರೀರದ ಇಂದ್ರಿಯಛಿದ್ರದಿಂದ ಹೊರಗೆ ಹೊರಟರು. ಕೆಲವು ಕಪಿಗಳು ರೋಮಕೂಪದಿಂದ ಹೊರಗೆ ಹೊರಟವರಾಗಿ, ಪರ್ವತದ ಮ್ಯಾಲೆ ಹ್ಯಾಂಗೆ ಸಂಚಾರ ಮಾಡತಿದ್ದವೋ ಹಾಂಗೆ, ಕುಂಭಕರ್ಣನ ದೇಹದ ಮ್ಯಾಲೆ ಸಂಚಾರ ಮಾಡತಿಹೋರು. ಕುಂಭಕರ್ಣ ತನ್ನ ದೇಹ ಅಲ್ಲಾಡಿಸಲಿಕ್ಕೆ, ಸಮುಸ್ತ ಕಪಿಗಳೂ ಬೀಳತಿಹೋರು. ಆನಿಗಳಿಗೆ ಮಕ್ಷಕಗಳು ಮುತ್ತಿದಹಾಂಗೆ ಮುತ್ತಿಹೋರು. ತಾ ಒಬ್ಬನೇ ಯುಧ್ಧಾರ್ಥವಾಗಿ ರಾಮನ ಸಮೀಪಕ್ಕೆ ಬಂದನು. ಬಾಹೋ ವ್ಯಾಳ್ಯಾದಲ್ಲಿ ತನ್ನ ಸೈನ್ಯವೆಂದು ತಿಳಿಯದಲೆ, ಅಪಾರ ರಾಕ್ಷಸರನ್ನ ನುಂಗತಲೇ ಬರತಿಹ. ಸರ್ವರ ರಕ್ತಪಾನ ಮಾಡಿ ಬಾಹೋ ಅಂಥಾತನಾದನು. ಲಕ್ಷ್ಮಣ ಬಾಹೋ ಅಂಥ ಕುಂಭಕರ್ಣನ್ನ ಬಾಣದ ಮಳಿಗಳಿಂದ ನಿವಾರಿಸಿದನು. ಕುಂಭಕರ್ಣನು ಲಕ್ಷ್ಮಣನ್ನ ಗಣನಿ ಮಾಡದೆ ಪರ್ವತ ಕಿತ್ತುಕೊಂಡು ರಾಮನ ಸಮೀಪಕ್ಕೆ ಬಂದು 'ಶೀಘ್ರ ಯುದ್ಧಕ್ಕೆ ಬಾ' ಎಂದು ಕರೆದನು. ಸಮರ್ಥನಾದಂಥ ರಾಮದೇವರು ಸುಘೋರವಾದಂಥ ಧನುಸ್ಸು, ದೇವೇಂದ್ರನ ವಜ್ರಾಯುಧಕ್ಕೆ ಸಮವೇಗ ಉಳ್ಳಂಥ ಬಾಣವನ್ನು ತೆಗೆದುಕೊಂಡು ಆ ಕುಂಭಕರ್ಣಗೆ ಹೊಡದನು. ಎಷ್ಟು ಬಲ ವ್ಯಕ್ತವಾಡಿ ಖರ ದೂಷಣರ ಕೊಂದಿದ್ದ, ಅಷ್ಟು ಬಲದಿಂದ ಕುಂಭಕರ್ಣನು ಬೀಳಲಿಲ್ಲ. ತರುವಾಯ ತನ್ನಲ್ಲಿ ಶಕ್ತಿರೂಪದಿಂದ ಇರೋ ಬಲದಲ್ಲಿ ಏಕದೇಶಬಲ ವ್ಯಕ್ತವಾಡಿ, ನಗುವಂಥಾತನಾಗಿ ಉತ್ತಮ ಬಾಣವನ್ನ ಬಿಟ್ಟನು. ನಿತ್ಯವಾದ ಬಲವುಳ್ಳಂಥ ರಾಮದೇವರಿಗೆ, ಇಲ್ಲಿ ಶಕ್ತಿರೂಪದಿಂದ ಇದ್ದಂಥ ಬಲವು ಪೂರ್ಣವಾಡಬೇಕು. ಖರ ದೂಷಣರ ಕೊಂದದಕಿಂತ ಹೆಚ್ಚು ಶಕ್ತಿ ತೋರಿಸಿದನು. ರಘುನಾಥನ ಬಲದಿಂದ ಎರಡು ತೋಳುಗಳು ಕಡಿದುಬಿದ್ದವು. ಪುನಃ ಎರಡು ಬಾಣಗಳಿಂದ ಎರಡು ಕಾಲುಗಳು ಕಡಿದು ಬಿಷ್ಟನು. ತರುವಾಯ ಒಂದು

ಬಾಣದಿಂದ ಕುಂಭಕರ್ಣನ ಶಿರಸ್ಸು ಕಡದು ಐದು ತುಂಡು ಮಾಡಿ ಶೀಘ್ರ ಸಮುದ್ರೋದಕದಲಿ ಬಿಸುಟುಕೊಟ್ಟನು. ನಿಶಾಚರೇಶನಾದಂಥ ಕುಂಭಕರ್ಣನ, ಮಹಾಪರ್ವತಕ್ಕೆ ಸದೃಶವಾದಂಥ ಶರೀರ ಬೀಳಲಿಕ್ಕೆ, ಸಮುದ್ರ ಉಕ್ಕೇರಿತು. ಕುಂಭಕರ್ಣ ಸಾಯಲಿಕ್ಕೆ ದೇವತೆಗಳು ಬಹಳ ಸಂತೋಷದಿಂದ ರಾವಣನ ಸ್ತೋತ್ರ ಮಾಡಿ ದೇವರ ಶಿರಸ್ಸಿನ ಮ್ಯಾಲೆ ಪುಷ್ಪವೃಷ್ಟಿ ಕರದು ಸಂತುಷ್ಟರಾದರು. ಈತನ ಶರೀರ ಸಮುದ್ರದೊಳಗೆ ಬಿದ್ದದರಿಂದ ಅಭಿವೃದ್ಧವಾಗಲಿಕ್ಕೆ ಕಾರಣವೇನೆಂದಲ್ಲಿ, ಕುಂಭಕರ್ಣ ಬಾಲತ್ವ ಆರಂಭ ಮಾಡಿಕೊಂಡು ಮೂರುಲಕ್ಷ ಯೋಜನ ಪ್ರಮಾಣದ ತನಕ ಬೆಳೆದಿದ್ದ. ಲಂಕಾಪಟ್ಟಣದೊಳಗೆ ವಾಸಮಾಡಿಕೊಂಡಿರಬೇಕಾಗಿ ವರಬಲದಿಂದ ಸಂಕೋಚರೂಪವುಳ್ಳವನಾದ. ಮರಣಕಾಲಕ್ಕೆ ತನ ಪೂರ್ವರೂಪ ತಗೆದುಕೊಂಡದ್ದರಿಂದ, ಸಮುದ್ರದೊಳಗೆ ಬೀಳಲಿಕ್ಕೆ ಅಭಿವೃದ್ಧನಾದ. ಸಮುದ್ರ ಒಂದು ಲಕ್ಷ ಯೋಜನ, ಕುಂಭಕರ್ಣ ಮೂರು ಲಕ್ಷ ಯೋಜನ; ಸಮುದ್ರ ಹ್ಯಾಂಗೆ ಹಿಡಿಯಿತು ಎಂದಲ್ಲಿ, ಐದು ತುಂಡುಮಾಡಿ ಬಿಟ್ಟನು. ಕುಂಭಕರ್ಣ ಸಾಯಲಿಕ್ಕೆ ಸಮಸ್ತ ರಾಕ್ಷಸರು ಕಪಿಗಳ ಕೈಯಿಂದ ಹೊಡಿಸಿಕೊಂಡು ಸತ್ತರು. ಉಳಿದಂಥ ರಾಕ್ಷಸರು ರಾವಣನ ಸಮೀಪಕ್ಕೆ ಹೋಗಿ ಕುಂಭಕರ್ಣ ಸತ್ತ ಸುದ್ದಿ ಹೇಳಿದರು. ತಮ್ಮನು ಸತ್ತ ವಾರ್ತೆ ಕೇಳಿ ದುಃಖದಿಂದ ತಪ್ತನಾಗಿ, ರಾವಣ ಮೂರ್ಛೆಯಿಂದ ಭೂತಳದಲ್ಲಿ ಬಿದ್ದನು. ತನ್ನ ಬದುಕೋ ಆಸಿ ಬಿಟ್ಟುಕೊಟ್ಟನು. ಬಹಳ ಭಯವುಳ್ಳವನಾಗಿ ಮುಂದುಗಾಣದೆ ಬುದ್ಧಿಭ್ರಮಿತನಾಗಿರಲಿಕ್ಕೆ, ಇಂದ್ರಾದಿ ದೇವತೆಗಳ ಗೆದ್ದಂಥ ಇಂದ್ರಜಿತು ಮಾತನಾಡಥಾನೆ. 'ಅರಸೇ ಏಕಕಾರಣ ಚಿಂತಿ ಮಾಡತಿದ್ದಿ? ಶತ್ರುವಾದಂಥ ರಾವಣನ ಕೊಲ್ಲೋದಕ್ಕೆ ನನ್ನ ಶೀಘ್ರ ಕಳಿಸು' ಎನಲಿಕ್ಕೆ, 'ಕುಂಭಕರ್ಣನಂಥಾವ ರಾವಣನ ಬಾಣದಿಂದ ಸತ್ತುಹೋದ. ನಿನ್ನಿಂದ ಏನು ಆದೀತು!' ಎನಲಿಕ್ಕೆ, 'ಪೂರ್ವದಲ್ಲಿ ದೇವೇಂದ್ರನ ಸೋಲಿಸೀನಿ. ಈತನಂತೂ ನರರಾಜಪುತ್ರ, ಈ ರಾವಣನಿಂದ ಏನುಕಾರಣ ಕ್ಲೇಶಪಡತಿದ್ದಿ?' ಎಂದು ಈ ಪ್ರಕಾರ ಮಾತನಾಡಿ ಇಂದ್ರಜಿತು ಅಗ್ನಿಯಲ್ಲಿ ಅವದಾನ ಕೊಟ್ಟು ರುದ್ರನ ಪೂಜಿ ಮಾಡಿ ರಥಾ ಏರಿಕೊಂಡು ಧನುಸ್ಸು ಹೆದೆ ಏರಿಸಿ, ಬಾಣಗಳಿಂದ ಪೂರ್ಣವಾದಂಥ ರಥದಿಂದ ಸಹಿತನಾಗಿ ಅಂತರಿಕ್ಷಮಾರ್ಗದಿಂದ ಅಪ್ರತ್ಯಕ್ಷನಾಗಿ ಬಂದನು. ಶಿವನ ವರಬಲದಿಂದ ಸಮಸ್ತ ಕಪಿವೀರರ ಸಮೂಹವನ್ನು ನಾಗಪಾಶದಿಂದ ಕಟ್ಟಿ ಬಿಟ್ಟನು.

ಪೂರ್ವದಲ್ಲಿ, ನಾರಾಯಣನು ದಾವ ವ್ಯಾಳ್ಯಾದಲ್ಲಿ 'ಭೂಮೀ ಮ್ಯಾಲೆ ಅವತಾರ ಮಾಡಿರಿ' ಎಂದು ದೇವತೆಗಳಿಗೆ ಆಜ್ಞಾಪಿಸಿದನೋ ಅದೇ ವ್ಯಾಳ್ಯಾದಲ್ಲಿ ಗರುಡನು ನಾರಾಯಣನ ಕೂಡ ಮಾತಾಡಿದನು. 'ನನಗೂ ನಿನ್ನ ಸೇವಿ ಆಜ್ಞಾಪಿಸಬೇಕು' ಎನಲಿಕ್ಕೆ ಬ್ರಹ್ಮದೇವರಿಗೆ ಗರುಡಗೆ ಮತ್ತೊಂದು ಅವತಾರ ಇಲ್ಲದ ಕಾರಣ, ಸ್ವಾಮಿ, ಗರುಡನ ಕೂಡ ಮಾತನಾಡಥಾನೆ. 'ಭೂಮೀ ಮ್ಯಾಲೆ

ಉಪಕಾರ ಮಾಡಬ್ಯಾಡ. ನಾನು ನಿನ್ನ ಸೇವಿ ಮತ್ತೊಂದು ಪ್ರಕಾರದಿಂದ ತೆಗೆದುಕೊಂಡೇನು. ಸೇವಿ ಮಾಡಿದ್ದರಿಂದ ನಿನಗೆ ಕೀರ್ತಿ ಹ್ಯಾಂಗೆ ಬಾಹೋದು ಹಾಂಗೆ, ನಿನ್ನಿಂದ ಮಾಡತಕ್ಕ ಸೇವಿ ದಾಪುದೋ, ಅಂಥಾ ಸೇವಿ ತೆಗೆದುಕೊಂಡೇನು' ಎಂದು ಮಾತನಾಡಿದ. ಸೇವಿ ಪ್ರಕಾರವು ಹೇಳಥಾರೆ. 'ದಾವ ವ್ಯಾಳ್ಯಾದಲ್ಲಿ ರಾವಣನ ಮಗ ಇಂದ್ರಜಿತು, ರುದ್ರನ ವರಬಲದಿಂದ ಲಕ್ಷ್ಮಣನ ಸಹಿತವಾಗಿ ಕಪಿವೀರರ, ನಾಗಪಾಶದಿಂದ ಕಟ್ಟಿಹಾಕ್ಯಾನು, ಅದೇ ವ್ಯಾಳ್ಯಾದಲ್ಲಿ ನೀ ಬಂದು ಸಮಸ್ತ ಕಪಿವೀರರನ್ನು ನಾಗಪಾಶದಿಂದ ಬಿಡಸು. ಈ ನಾಗಪಾಶ ಬಿಡಸೋದರಲ್ಲಿ ನಾ ಸಮರ್ಥ. ಲಕ್ಷ್ಮಣ ಹನುಮಂತ ಸಮರ್ಥರು ಸರಿಯೆ. ನಿನ್ನ ಪ್ರೀತ್ಯರ್ಥವಾಗಿ ಬಿಡಿಸೋದಿಲ್ಲ. ಎಲೈ ಗರುಡನೇ ಈ ಆಜ್ಞೆ ನೀ ಮಾಡು' ಎಂದು ಈ ಪ್ರಕಾರ ನಾರಾಯಣ ಮಾತನಾಡಿದ್ದ. ಪೂರ್ವದಲ್ಲಿ ತನ್ನಿಂದ ವಚನ ಕೊಡಲ್ಪಟ್ಟಿತ್ತು. ಅದಕಾರಣದಿಂದ ರಾಮದೇವರು ಒಮ್ಮಿಂದೊಮ್ಮಿಗೂ ಬಿಡಿಸಲಿಲ್ಲ. ಲಕ್ಷ್ಮಣನೂ ಬಿಡಿಸಲಿಲ್ಲ ಹನುಮಂತನೂ ಬಿಡಿಸಲಿಲ್ಲ. ಹನುಮಂತ ಲಕ್ಷ್ಮಣರಿಂದ ಸಹಿತರಾದಂಥ ಕಪಿವೀರರ ನಾಗಪಾಶದಿಂದ ಕಟ್ಟಿಹಾಕಿ, ಇಂದ್ರಜಿತು ತನ್ನ ತಂದಿಯಾದ ರಾವಣನ ಸಮೀಪಕ್ಕೆ ಹೋದನು. ರಾಕ್ಷಸಾಧಿಪನಾದಂಥ ರಾವಣ ಬಹಳ ಸಂತೋಷದಿಂದ ತನ್ನ ಮನೋಭೀಷ್ಟಪೂರ್ಣಮಾಡಿದಂಥ ಇಂದ್ರಜಿತನ ಸ್ತೋತ್ರಮಾಡಿದನು. ತರುವಾಯ ಪಕ್ಷಿರಾಜನಾದಂಥ ಗರುಡನು, ನಾರಾಯಣನಾಜ್ಞೆ ಸ್ಮರಿಸುವಂಥಾತನಾಗಿ ತ್ವರದಿಂದ ಲಂಕಾಪಟ್ಟಣವನ್ನು ಕುರಿತು ಬಂದನು. ಅತ್ಯಂತವಾದ ಗರುಡನ ಪಕ್ಷದ ಗಾಳೀಸ್ಪರ್ಶದಿಂದ ನಾಗಪಾಶಗಳು ಕಡದುಬಿದ್ದವು. ಗರುಡ ಕೊರಳೊಳಗೆ ಪುಷ್ಪಮಾಲಿಗಳ ಹಾಕಿಕೊಂಡಾನೆ. ಆಭರಣಗಳು ಇಟ್ಟುಕೊಂಡಾನೆ. ಕುಂಕುಮ-ಕೇಸರಿ ಗಂಧ ಹಚ್ಚಿಕೊಂಡಾನೆ. ಇಂಥಾ ಗರುಡನು ಪರಮಾತ್ಮನಾದಂಥ ರಾಮದೇವರಿಗೆ ನಮಸ್ಕಾರ ಮಾಡಿ ಪುನಃ ತನ್ನ ಸ್ಥಳಕ್ಕೆ ಹೋದನು.

ತರವಾಯ ಕಪಿಶ್ರೇಷ್ಠರು ವೃಕ್ಷಗಳನ್ನು ಪರ್ವತಗಳನ್ನು ಹಿಡಕೊಂಡು ಬಲಿಷ್ಠರಾದಂಥಾವರು ಸಂತೋಷದಿಂದ ಸಿಂಹನಾದ ಮಾಡಿದರು. ಇಂದ್ರಜಿತನಿಂದ ಸಹಿತನಾದಂಥ ರಾವಣನು ಕಪಿಶ್ರೇಷ್ಠರ ಸಿಂಹನಾದವನ್ನು ಕೇಳಿ ಲಂಕಾಪಟ್ಟಣದಲ್ಲಿ ಭೀತಿಯಿಂದ ನಡುಗಿದನು. ರಾವಣ ಇಂದ್ರಜಿತನ ಕೂಡಿ ಚಿಂತನಿ ಮಾಡಥಾನೆ. 'ನಾಗಪಾಶದಲ್ಲಿ ರಾಮನನ್ನೂ, ಕಪಿಸೇನಿನೆಲ್ಲ ಕಟ್ಟಿಬಂದಿದ್ದೀನೆಂದು ಹೇಳಿದಿ. ಸಮಸ್ತ ಕಪಿಗಳು ನಾಗಪಾಶದಿಂದ ಬಿಡಿಸಿಕೊಂಡು ಯುದ್ಧಕ್ಕೆ ಬರಥಾರೆ. ಇದಕ್ಕೆ ಮುಂದೆ ವಿಚಾರವೇನು?' ಎಂದು ಚಿಂತನಿ ಮಾಡಲಿಕ್ಕೆ, 'ಶಿವನ ಪೂಜಿ, ಅಗ್ನಿಯಲ್ಲಿ ಹೋಮ, ಜೆನ್ನಾಗಿ ವಿಧಿಪೂರ್ವಕವಾಗಿಲ್ಲದಿದ್ದೀತು. ಇನ್ನು ನನ್ನ ಸಾಮರ್ಥ್ಯ ನೋಡು' ಎಂದು ಪುನಃ ವಿಧಿಪೂರ್ವಕದಿಂದ ಅಗ್ನಿ ಹೋಮಿಸಿ ಶಿವನ್ನ ತುಷ್ಟಿಬಡಿಸಿ, ರಥ ಏರಿಕೊಂಡು ಆಕಾಶಮಾರ್ಗದಿಂದ ಅದೃಶ್ಯನಾಗಿ ಬಂದನು.

ರುದ್ರದೇವರ ವರಬಲದಿಂದ ಅತಿವೀರ್ಯವುಳ್ಳವನಾದ್ದರಿಂದ ಸತತ ಬಾಣದ ಮಳೆಗರೆದನು. ಪುನಃ ಬ್ರಹ್ಮಾಸ್ತ್ರ ಬಿಡಲಿಕ್ಕೆ, ಇಂದ್ರಜಿತನ ಬಾಣಗಳಿಂದ ಪೀಡಿತರಾಗಿ ಲಕ್ಷ್ಮಣನಿಂದ ಸಹಿತರಾಗಿ ಕಪಿಗಳು ಮೂರ್ಛೆಯಿಂದ ಭೂತಳದಲ್ಲಿ ಬಿದ್ದರು. ಇಲ್ಲಿ ಲಕ್ಷ್ಮಣ ಬಿದ್ದದ್ದು ಅಸ್ತ್ರಾನುಸರಣ ಮಾತ್ರ. ಆಚಾರ್ಯರು ಹಾಂಗೆ ಹೇಳಥಾರೆ. ದುರಂತಶಕ್ತಿಯುಳ್ಳಂಥ ವಾಯುದೇವರ ಸ್ವರೂಪನಾದ ಹನುಮಂತದೇವರನ್ನು ಒಂದಾನೊಂದು ಅಸ್ತ್ರಗಳೂ ಒಂದಾನೊಂದು ದೇಶದಲ್ಲೂ ಒಂದಾನೊಂದು ಕಾಲದಲ್ಲೂ ಸ್ಪರ್ಶಮಾಡೋದಿಲ್ಲ. ವಿಭೀಷಣ ಏನು ಮಾಡಿಕೊಂಡಿದ್ದ ಎಂದಲ್ಲೆ ಲಂಕಾಪಟ್ಟಣದಲ್ಲಿ ರಾಕ್ಷಸರುಗಳ ವ್ಯಾಪಾರ ತಿಳೀಬೇಕೆಂಬೋ ಇಚ್ಛೆಯಿಂದ, ಕಪಿಸೇನಿ ಬಾಣಗಳಿಂದ ಹೊಡಸಿಕೊಂಡು ಬೀಳದಕಿಂತ ಮೊದಲೇ ಲಂಕಿಗೆ ಹೋಗಿದ್ದ. ಸರ್ವರೂ ಮೂರ್ಛಿತರಾದ ಸಮಯದಲ್ಲಿ ಬಂದನು. ಬಂದ ವಿಭೀಷಣ ಮೂರ್ಛಾಗತರಾಗಿ ಬಿದ್ದಂಥ ಸರ್ವಕಪಿಗಳನ್ನೂ ನೋಡಿ, ಹಾಂಗೆ ವಿನಾಕುಲನಾದಂಥ (ವ್ಯಾಕುಲರಹಿತನಾದ, ಶಾಂತನಾದ) ಒಬ್ಬ ಹನುಮಂತ ದೇವರನ್ನ ಕಂಡನು. ವಿಭೀಷಣ ಹನುಮಂತದೇವರನ್ನ ಕೂಡಿಕೊಂಡು ಬ್ರಹ್ಮದೇವರ ಮಗನಾದಂಥ ಜಾಂಬವಂತನ ಸಮೀಪಕ್ಕೆ ಬಂದನು. ಮೂರ್ಛಾಗತನಾದಂಥ ಜಾಂಬವಂತಗೆ ಶೀತೋದಕದಿಂದ ಪ್ರೋಕ್ಷಣೆಮಾಡಿ ಎಬ್ಬಿಸಿ, 'ಬದುಕಿದೀಯಾ' ಎಂದು, ವಿಭೀಷಣ ಕೇಳಲಿಕ್ಕೆ, ಮಂದವಾಕ್ಯದಿಂದ ಜಾಂಬವಂತ 'ಬದುಕೀನಿ' ಎಂದು ಪುನಃ ಮಾತನಾಡಥಾನೆ. 'ಹನುಮಂತ ಬದುಕ್ಯಾನೋ ಇಲ್ಲೋ? ಹನುಮಂತ ಬದುಕಿದರೆ ನಾವೆಲ್ಲ ಸರ್ವರೂ ಬದುಕಿದವರೇವೆ. ಹನುಮಂತ ಸತ್ತಿದ್ದರೆ ನಾವೆಲ್ಲ ಸತ್ತವರೇವೆ.' ಹೀಂಗೆ ಜಾಂಬವಂತ ಮಾತಾಡಲಿಕ್ಕೆ, ಹನುಮಂತದೇವರು 'ನಾನೂ ಬದುಕೀನಿ' ಎಂತ ಮಾತನಾಡಿದನು. ತರುವಾಯ ಜಾಂಬವಂತ ಹನುಮಂತನ ಕೂಡ ಮಾತನಾಡಥಾನೆ. 'ಮೇರುಪರ್ವತದ ಸಮೀಪದಲ್ಲಿ ಗಂಧಮಾದನ ಎಂದು ಹೆಸರುಳ್ಳ ಪರ್ವತವದೆ. ಆ ಪರ್ವತದಲ್ಲಿ ನಾಲ್ಕು ಔಷಧಗಳವೆ, ನಿನ್ನಿಂದ ತರಲಿಕ್ಕೆ ತಕ್ಕಂಥಾವು. ಆ ನಾಲ್ಕು ಔಷಧಗಳು ದಾವ ದಾವುವು ಎಂದರೆ, ಮೃತಸಂಜೀವಿನಿ—ಸತ್ತಂಥಾ ಪ್ರಾಣಿಗಳ ಬದುಕಿಸೋ ಅಂಥಾದ್ದು. ಈದ್ದರಿಂದ ಅದರ ನಾಮ ಉಳ್ಳದ್ದು; ಕಡಿಮಿ ಮೂರು ಔಷಧಗಳ ನೋಡಲಿಕ್ಕೆ, ಉತ್ತಮವಾದಂಥಾದ್ದು: ಎರಡನೇದು ಸಂಧಾನುಕರಣಿ—ಅವಯವಗಳು ಪೂರ್ವದಲ್ಲಿದ್ದ ಪ್ರಕಾರ ಕೂಡಿಸೋ ಅಂಥಾದ್ದು, ಆದ್ದರಿಂದ ಅದರ ನಾಮವೂ ಅಂಥಾದ್ದು. ಮೂರನೇದು, ವಿಶಲ್ಯಕರಣಿ—ಶರೀರದಲ್ಲಿ ನಟ್ಟಂಥ ಅಂಬುಗಳು ಉಚ್ಚಿ ಬೀಳಿಸೋ ಅಂಥಾದ್ದು, ಆದ್ದರಿಂದ ಅದರ ನಾಮ ಉಳ್ಳದ್ದು. ನಾಲ್ಕನೇದು, ಸವರ್ಣಕರಣಿ—ಬಾಣದ ಪೆಟ್ಟಿನಿಂದ ಶರೀರದ ವರ್ಣ ಕೆಟ್ಟಿರತದೆ; ಪೂರ್ವದ ವರ್ಣ ಮಾಡುವಂಥಾದ್ದು, ಆದ್ದರಿಂದ ಅದರ ನಾಮ ಉಳ್ಳದ್ದು.' ಈ ಪ್ರಕಾರ ಜಾಂಬವಂತ ಮಾತನಾಡಲಿಕ್ಕೆ, ಹನುಮಂತದೇವರು ಆ ಕ್ಷಣದಲ್ಲಿ

ಗಂಧಮಾದನ ಪರ್ವತವನ್ನು ಕುರಿತು ಹಾರಿ, ಆಂತರಿಕ್ಷವಾರ್ಗದಿಂದ ರಾಮದೇವರಿಂದ ಬಿಡಲ್ಪಟ್ಟಂಥ ಬಾಣವು ಹ್ಯಾಂಗೋ, ಹಾಂಗೆ ಹೋದನು. ತನ್ನನ್ನು ನೋಡಿ ಅಡಗಿಕೊಂಡಂಥ ಓಷಧಗಳನ್ನು ತಿಳದು, ಹನುಮಂತದೇವರು ಕೋಪದಿಂದ ನೂರು ಯೋಜನ ಅಡ್ಡಗಲವುಳ್ಳಂಥ ಔಷಧೀ ಗಂಧಮಾದನ ಪರ್ವತದ ಏಕದೇಶವನ್ನು ಕಿತ್ತಿ, ಒಂದೇ ಕರದಿಂದ ಇದರ ಭಾರ ಎಷ್ಟೆಂದು ಪರೀಕ್ಷೆ ಮಾಡಥಾನೋ ಎಂಬೋ ಹಾಂಗೆ, ಚಂಡಿನೋಪಾದಿ ಹಾರಿಸಿಕೋತ, ವಾಯುದೇವರ ಕುಮಾರನಾದಂಥ ಹನುಮಂತದೇವರು ಉಗ್ರವೇಗದಿಂದ ಆಕಾಶಕ್ಕೆ ಹಾರಿದನು. ಚಕ್ರಧಾರಿಯಾದಂಥ ನಾರಾಯಣನು ಮೂರು ಪಾದಗಳಿಂದ ಹ್ಯಾಂಗೆ ಹಾರಿದನೋ ಹಾಂಗೆ, ಹಾರಿದನು. ಹನುಮಂತದೇವರು, ಕಣ್ಣಿವಿ ಹಾಕುವ ಮಾತ್ರದಿಂದ, ಕಪಿವೀರರು ಎಲ್ಲಿ ಬಿದ್ದಿದ್ದರು ಅಲ್ಲಿಗೆ ಬಂದನು. ಸಮಸ್ತರಾದಂಥ ಕಪಿಶ್ರೇಷ್ಠರು ಆ ಪರ್ವತದ ಗಾಳಿಯಿಂದ ಕ್ಷಣ-ಮಾತ್ರದಲ್ಲಿ ಎದ್ದು ಕುಳಿತರು. ರಾಮದೇವರ ತಮ್ಮನಾದಂಥ ಲಕ್ಷ್ಮಣ, ಹಾಂಗೆ ಸುಗ್ರೀವ ಮೊದಲಾದ ಸಮಸ್ತ ಕಪಿಗಳು, ಉಗ್ರ ಪರಾಕ್ರಮ ಉಳ್ಳಂಥ ಹನುಮಂತ-ದೇವರ ಪೂಜಿ ಮಾಡಿದರು. ದೇವತಾಶ್ರೇಷ್ಠರು ಬಹಳ ಸಂತೋಷದಿಂದ ಯುಕ್ತರಾಗಿ ಹನುಮಂತನ ಶಿರಸ್ಸಿನಮ್ಯಾಲೆ ಪುಷ್ಪವೃಷ್ಟಿಗರೆದರು. ಹನುಮಂತದೇವರು, ದೇವತಿಗಳಿಂದ ಗಂಧರ್ವರುಗಳಿಂದ ಮಹರ್ಷಿಗಳಿಂದ ಸ್ತೋತ್ರವಮಾಡಿಸಿಕೊಂಡನು. ರಾಮ-ದೇವರ ಕೈಯಿಂದ ಲಾಲಿತನಾದನು. ಪುನಃ ನೂರು ಯೋಜನ ಉಳ್ಳಂಥ ಪರ್ವತವನ್ನು ಲಂಕಾದಲೇ ನಿಂತಂಥಾತನಾಗಿ, ಮೊದಲಿನ ಸ್ಥಳಕ್ಕೆ ಬಿಸ್ಟುಕೊಟ್ಟನು. ಹನುಮಂತದೇವರ ಉಗ್ರವೇಗದಿಂದ ಬಿಸ್ಟಿಸಿಕೊಂಡಂಥ ಪರ್ವತವು, ಸ್ವಸ್ಥಳದಲ್ಲಿ ಸರ್ವದಾ ಅಪ್ಪಿಗಿ ಇಲ್ಲದೆ ಹ್ಯಾಂಗೆ ಇತ್ತು ಹಾಂಗೆ, ಮೊದಲಿದ್ದ ಪ್ರಕಾರ ಸಂಬಂಧವಾಯಿತು. ಅಪ್ಪಿಗಿ ಹಚ್ಚಿದ ಹಾಂಗೆ ಆಗಲಿಲ್ಲ. ಸ್ವಾಮಿಭಕ್ತ ಹನುಮಂತನ ಮಹಿಮಿ, ರಾಮನ ಮಹಿಮಿ ಎಷ್ಟು ಹೇಳಬೇಕು !

ಪುನಃ ಸರ್ವಕಪಿಗಳು ವೃಕ್ಷಗಳ ಪರ್ವತಗಳ, ಕೈಯ್ಯಲ್ಲಿ ಹಿಡಕೊಂಡು ಯುದ್ಧಾರ್ಥವಾಗಿ ದೃಢಧ್ವನಿ ಮಾಡತ ನಿಂತರು. ಪುನಃ ಎದ್ದುನಿಂತಂಥ ಕಪಿಗಳನ್ನು ನೋಡಿ ಇಂದ್ರಜಿತನು ಭಯಗ್ರಸ್ತನಾದನು. ಎರಡು ಖ್ಯಾಪಿಲೆ ಸಾಧಿಸದೆ ಕೈಗೂಡಿಬರಲಿಲ್ಲಾದಕಾರಣ, ಪುನಃ ಅಗ್ನಿಯಲ್ಲಿ ಹೋಮಿಸಿ ರುದ್ರನ ಪೂಜಿ ಮಾಡಿ, ಅಪ್ರತ್ಯಕ್ಷನನ್ನು ಐದಿಡನು. ಇಂದ್ರಜಿತು ಸಮ್ಮೋಹನಾಸ್ತ್ರದಿಂದ ಸರ್ವಕಪಿಗಳ ಕಪ್ಟಿಹಾಕಿದನು. ತರುವಾಯ ಲಕ್ಷ್ಮಣ ಮಾತಾಡಿದನು ಪೂರ್ವದಲ್ಲಿ ಲಕ್ಷ್ಮಣನ ಸಹ ಕಪ್ಟಿಹಾಕಿದ್ದನೆಂದು ಹೇಳಿದ್ದಿರಿ. ಈಗ ಮಾತನಾಡತಾನೆಂದರೆ ವಿರೋಧ ಬರತದೆ ಎಂದರೆ ಲಕ್ಷ್ಮಣ ಹ್ಯಾಂಗೆ ಮಾತನಾಡಿದ ಎಂದರೆ, ರಾಮ-ದೇವರ ಅಭಿಪ್ರಾಯ ತಿಳಿದು ಅಸ್ತ್ರ ಅನುಸರಿಸಿಕೊಂಡಹಾಂಗೆ ಇದ್ದ. ಕಡಿಮಿ ಕಪಿಗಳ ಹಾಂಗೆ ಕಪ್ಟಿಸಿಕೊಂಡಿದ್ದಿಲ್ಲ. ಆದ್ದರಿಂದ ಪೂರ್ವದಲ್ಲಿ ಲಕ್ಷ್ಮಣನ

ಸಹವಾಗಿ ಕಟ್ಟಿದ್ದನು ಎಂದು ಹೇಳಲ್ಪಟ್ಟಿತು. ಲಕ್ಷ್ಮಣ ತನ್ನೊಳಗೆ ತಾ ವಿಚಾರ ಮಾಡಿದ. ಸ್ವಾಮಿ, ಗರುಡನ ಕೈಯ ನಾಗಪಾಶ ಬಿಡಿಸಿ, ಸೇವಿ ತೆಗೆದುಕೊಂಡಾತ. ಔಷಧನಿಮಿತ್ತ ಐವತ್ತುಸಹಸ್ರ ಯೋಜನದಲ್ಲಿದ್ದ ಪರ್ವತ ತರಿಸಿ ಹನುಮಂತನ ಪರಾಕ್ರಮ ಕಪಿಸೇನಿಗೆ ಪ್ರತ್ಯಕ್ಷ ತೋರಿಸಿದ. ಈ ವ್ಯಾಳ್ಯಾದಲ್ಲಿ ಇಂದ್ರಜಿತನ್ನ ತನ್ನ ಕೈಯ ಕೊಲ್ಲಿಸಬೇಕೆಂದು ಸ್ವಾಮಿ ಅಭಿಪ್ರಾಯವದೆಂದು ತಿಳಿದು ಲಕ್ಷ್ಮಣ, ರಾವಮನ ಕೂಡ ವಿಜ್ಞಾಪನ ಮಾಡಿದ್ದಾನೆ. 'ಸ್ವಾಮಿ, ನಿನ್ನ ಆಜ್ಞೆದಿಂದ ದುಷ್ಟ-ಬುದ್ಧಿಯುಳ್ಳಂಥ ಬಾಂಧವರಿಂದ ಸಹಿತನಾದಂಥ ಇಂದ್ರಜಿತನ್ನ ಬ್ರಹ್ಮಾಸ್ತ್ರದಿಂದ ಕೊಂದೇನು' ಎನ್ನಲಿಕ್ಕೆ ರಘುನಾಥ ಮಾತನಾಡಥಾನೆ. 'ಭಯದಿಂದ ಅಡಗಿದವನ ವ್ಯಾಲೆ ಬ್ರಹ್ಮಾಸ್ತ್ರ ಬಿಡಲಿಕ್ಕೆ ಶಕ್ಯವಾಗೋದಿಲ್ಲ. ಬ್ರಹ್ಮಾಸ್ತ್ರ ಹಾಕಬಾರದೆ ಎಂದಿ, ಸರ್ವಥಾ ಹಾಕಬಾರದು: ಅದೃಶ್ಯನಾದವನ ವ್ಯಾಲೆ ಬ್ರಹ್ಮಾಸ್ತ್ರ ಪ್ರಯೋಗ ಮಾಡಿದರೆ ತಿರುಗಿಬಂದು ನಿನಗೇ ಹೊಡದೀತು. ಅದರಿಂದ ಬ್ರಹ್ಮಾಸ್ತ್ರದಿಂದ ಅಭಿ-ಮಂತ್ರಿಸದೆ ಸಾಧಾರಣ ಬಾಣಮಾತ್ರದಲ್ಲಿ ರಸಾತಳದಲ್ಲಿ ಅಡಗಿಕೊಂಡಿರಲಿ, ಸತ್ಯ-ಲೋಕದಲ್ಲಿ ಅಡಗಿಕೊಂಡಿರಲಿ ಕೊಂದೇನು. ಅಡಗಿಕೊಂಡವನ್ನ ಬಾಣಮಾತ್ರದಿಂದ ಹೊಡದರೆ ದೋಷವಿಲ್ಲ. ನೀನು ಬಾಣಮಾತ್ರದಿಂದ ಹೊಡಯಲಿಕ್ಕೆ ಶಕ್ಯ ನಾಗೋದಿಲ್ಲ. ಭಯದಿಂದ ಅಡಗಿಕೊಂಡವನ ವ್ಯಾಲೆ ಬ್ರಹ್ಮಾಸ್ತ್ರ ಹಾಕಬಾರದು' ಎಂದು ಮಾತನಾಡಿದನು. ರಾಮದೇವರು ಇಂಥಾ ಸಮರ್ಥನಾದರೂ ಮೊದಲೇ ಎರಡಾವರ್ತಿ ಏನುಕಾರಣ ಸುಮ್ಮಗಿದ್ದನು ಎಂದಲ್ಲಿ, ಸಮರ್ಥನಾದರೂ ಗರುಡನ ಬಲ ಹಾಂಗೆ ಹನುಮಂತದೇವರ ಒಲ ಪ್ರಕಾಶಮಾಡುವಂಥಾತನಾಗಿ ಎರಡಾವರ್ತಿ ಬ್ರಹ್ಮದೇವರು ವರವು ಕೊಟ್ಟಿದ್ದಕಾರಣ, ಇಂದ್ರಜಿತನ ಅಸ್ತ್ರಗಳ ಮನ್ನಿಸಿ ಸುಮ್ಮಗಿದ್ದನು. ದುರಂತಶಕ್ತಿಯುಳ್ಳಂಥ ರಘುನಾಥ ಕೈಯಲ್ಲಿ ಬಾಣ ತೆಗೆದು ಕೊಂಡನು. ಈ ರಾವಮನಿಂದ ತಾನು ಕಾಣಿಸಿಕೊಳ್ಳಲ್ಪಟ್ಟೇನೆಂದು ತಿಳಿದು ದುಷ್ಟನಾದಂಥ ಇಂದ್ರಜಿತ, ರಾವಮದೇವರ ಅತಿ ಭಯಂಕರ ಬಲವನ್ನು ಕಂಡು ದೇವೋತ್ತಮನಿಂದ, 'ಇವನನ್ನು ಕೊಂದೇನು' ಎಂದು ನಿಶ್ಚಯ ಮಾಡಲ್ಪಟ್ಟದ್ದನ್ನು ನೋಡಿ ಸತ್ತೇನಲ್ಲ, ಬದುಕೇನೆಂಬೋ ಇಚ್ಛೆಯಿಂದ ಓಡಿಹೋದನು. ಇಂದ್ರಜಿತ ಬೆನ್ನುಕೊಟ್ಟು ಓಡಲಿಕ್ಕೆ, ರಾಕ್ಷಸರೆಲ್ಲ ಹಾಹಾಕಾರ ಮಾಡಿದರು. ರಘುನಾಥಗೆ ದೇವತಿಗಳೆಲ್ಲ 'ವಿಭೀಷಣ' ಎಂದು ಸ್ತೋತ್ರ ಮಾಡಿದರು. ಕಪಿಸೇನಿಯೆಲ್ಲ ಮೋಹ ನಾಸ್ತ್ರದಿಂದ ಮೋಹಿತರಾಗಿ ಬಿದ್ದಾರೆ. ಎಬ್ಬಿಸೋ ನಿಮಿತ್ತ, ರಘುನಾಥ ಸೈನ್ಯದ ವ್ಯಾಲೆ ವಿಜ್ಞಾನಾಸ್ತ್ರ ಬಿಡಲು ಅದರ ವೀರ್ಯದಿಂದ ರಾಕ್ಷಸನ ಸಮ್ಮೋಹನಾಸ್ತ್ರ ಕೆಟ್ಟುಹೋಯಿತು. ಸಮಸ್ತ ಕಪಿಗಳೂ ಎಚ್ಚರ ಉಳ್ಳವರಾಗಿ, ಸಿಂಹನಾದ ಮಾಡತ ದೊಡ್ಡ ಪರ್ವತಗಳ ಹಿಡಕೊಂಡು, ಶ್ರೀರಾವಮದೇವರ ಸ್ತೋತ್ರವಾಡಿ ಎದ್ದು ನಿಂತರು.

ಪರಾಕ್ರಮಿಯಾದಂಥ ರಾಮದೇವರು, ಕೈಯಲ್ಲಿ ಧನುಸ್ಸು ಹಿಡಕೊಂಡು, ದೇವತಿಗಳಿಂದ ಪುಷ್ಪವೃಷ್ಟಿ ಕರೆಸಿಕೊಂಡು ಸ್ತೋತ್ರಮಾಡಿಸಿಕೊಳ್ಳತ ನಿಂತನು. ಅನಂತರದಲ್ಲಿ ರಾವಣನ ಮಗನಾದಂಥ ಇಂದ್ರಜಿತು, ನಿಕುಂಭಿಳಾ ಲಂಕಾಪ್ರದೇಶ ವಿಶೇಷ ಶಿವಸ್ಥಾನವನ್ನು ಐದಿ, ಅಲ್ಲಿ ಯಜ್ಞಮಾಡಹೊಕ್ಕನು. ಸಮರ್ಥನಾದಂಥ ರಾಮದೇವರ ಕೂಡ ವಿಭೀಷಣ ಮಾತನಾಡಥಾನೆ. 'ದುರ್ಮತಿಯಾದಂಥ ಇಂದ್ರಜಿತನ ಸಂಹಾರ ಮಾಡೋದಕ್ಕೆ ಈಗಲೇ ಕಳುಹಬೇಕು. ಏನುಕಾರಣ ಎಂದರೆ, ಈಗ ರುದ್ರನಿಗೋಸ್ಕರ ಹವನ ಮಾಡಥಾನೆ. ಎತಲಾನಿಕೆ, ಅಗ್ನಿಯಲ್ಲಿ ಶಿವನ ಪೂಜಿ ಮುಗಿಸಿದ, ಅದರಿಂದ ವಧಿಗೆ ಶಕ್ಯನಲ್ಲ. ಇಂದ್ರಜಿತಗೆ ಬ್ರಹ್ಮನಿಂದ ಅಂಥ ವರವು ಕೊಡಲ್ಪಟ್ಟಿದೆ. ಅದೇನೆಂದರೆ, ಅಗ್ನಿಯಲ್ಲಿ ಪೂಜಿ ಮಾಡಿ ಯುದ್ಧಕ್ಕೆ ಹೋದರೆ ದಾರಿಂದಲೂ ಸಾಯಬ್ಯಾಡ್ದೆಂದು ವರವು ಪ್ರಸಿದವಾಗೇದೆ' ಎಂತ ಮಾತನಾಡಲಿಕ್ಕೆ, ಲಕ್ಷ್ಮಣಗೆ ಆಜ್ಞೆ ಕೊಟ್ಟನು. ಏನಂತ ಆಜ್ಞೆ ಕೊಟ್ಟನು ಎಂದಲ್ಲಿ, 'ನನ್ನ ನೋಡಲಿಕ್ಕೆ ಆ ಕ್ಷಣದಲ್ಲಿ ಓಡಿಹೋದ ಇಂದ್ರಜಿತನ್ನ ಕೊಲ್ಲೋದರಲ್ಲಿ ಇಚ್ಛಾ ಮಾಡಲಿಲ್ಲ. ಇಂದ್ರಜಿತ ಬಲರಹಿತನಾದಂಥಾವ. ಛದ್ಮದಿಂದ ಬರಥಾನೆ. ನನ್ನಿಂದ ವಧಿಗೆ ಯೋಗ್ಯನಲ್ಲ' ಎಂಬ ಅಭಿಪ್ರಾಯದಿಂದ, ಸ್ವಾಮಿ ತಾನು ಸಮರ್ಥ, ದುಷ್ಟಜನಮರ್ದಕನಾದಂಥಾತನು, ಇಂದ್ರಜಿತನ ಕೊಲ್ಲೋದಕ್ಕೆ ತಮ್ಮನಾದ ಲಕ್ಷ್ಮಣಗೆ ಆಜ್ಞಾಪಿಸಿದ. ಹನುಮಂತ, ಸುಗ್ರೀವ ಮೊದಲಾದ ಕಪಿಶ್ರೇಷ್ಠರ ಕೂಡಿಕೊಂಡು ಧೀರನಾದಂಥ ಲಕ್ಷ್ಮಣನು, ಇಂದ್ರಜಿತನ ಕೊಲ್ಲೋದಕ್ಕೆ ಹೋದನು. ಇಂದ್ರಜಿತ ಮಾಡಿದಂಥ ಯಜ್ಞಕ್ಕೆ ಲಕ್ಷ್ಮಣ, ಕಪಿಗಳಿಂದ ಕೂಡಿ ವಿಘ್ನ ಮಾಡಿದನು. ಕೆಲವು ಕಪಿಗಳು ತುಸ್ಪ, ಕೆಲವರು ತಂಡುಲ ಮೊದಲಾದ ಹೋಮದ್ರವ್ಯ ಎತ್ತಿಕೊಂಡುಹೋದರು. ಅಶುದ್ಧ, ಮೂತ್ರಗಳ ಹಾಕಿ ಹೋಮ ಕೆಡಸಿ ಬಿಟ್ಟರು. ನಿಷ್ಠುರ ವಚನಗಳಾಡಿದರು. ಇಂದ್ರಜಿತ ಪೂರ್ಣಾಹುತಿ ಹಾಕದೆ, ಯುದ್ಧದಲ್ಲಿ ಇಚ್ಛೆಯುಳ್ಳವನಾಗಿ ಧನುರ್ಬಾಣಗಳ ಹಿಡಕೊಂಡು ರಥ ಏರಿಕೊಂಡು ಬಹಳ ಕೋಪದಿಂದ ಗರ್ಜನಿ ಮಾಡತ ಶೀಘ್ರದಿಂದ ಲಕ್ಷ್ಮಣನ ಸಮೀಪಕ್ಕೆ ಬಂದನು. ಲಕ್ಷ್ಮಣನೂ ಇಂದ್ರಜಿತನೂ ಅಸ್ತ್ರ ಬಲ್ಲವರೊಳಗೆ ಶ್ರೇಷ್ಠರು. ಶರೀರವಿನಾಶಕರವಾದಂಥ ಬಾಣಗಳಿಂದ ಪರಸ್ಪರವಾಗಿ ಹೊಡದಾಡಿದರು. ಸರ್ವ-ದಿಕ್ಕುಗಳನ್ನೂ ಬಾಣಗಳಿಂದ ಮುಚ್ಚಿಬಿಟ್ಟರು. ಲಕ್ಷ್ಮಣನು, ಉತ್ತಮವಾದಂಥ ಬಾಣಗಳಿಂದ ಇಂದ್ರಜಿತನ ಅಸ್ತ್ರಗಳ ನಿವಾರಿಸಿ, ಶತ್ರುವಿನ ಚಂಚಲವಾದಂಥ ಕುಂಡಲಗಳ ಕಾಂತಿಯಿಂದ ಪ್ರಕಾಶಮಾನವಾದ ಶಿರಸ್ಸು ಕಡಿದು ಬಿಟ್ಟನು. ದೇವತಿಗಳು, ತಮ್ಮ ವೈರಿ ಸಾಯಲಿಕ್ಕೆ, ಲಕ್ಷ್ಮಣನ ಮ್ಯಾಲೆ ಮಂದಾರ ಪಾರಿಜಾತಹೂವಿನ ಮಳಿಗರೆದು ಸ್ತೋತ್ರ ಮಾಡಿದರು. ಉಳಿದ ರಾಕ್ಷಸರು ತಮ್ಮ ಜೀವ ಉಳಿಸಿಕೊಂಡು ಹೋದರು. ಅತ್ಯಾಪ್ತನಾದಂಥ ಮಗ ಸತ್ತ ವರ್ತಮಾನ ಕೊಂಡುಹೋಗಿ ರಾವಣಗೆ ಹೇಳಿದರು.

ರಾವಣ ಅಸಹ್ಯ ದುಃಖಕರವಾದ ತನ್ನ ಮಗನ ಮರಣವಾರ್ತೆ ಕೇಳಿ 'ಇಂದ್ರಜಿತ ಇಂದ್ರಾದಿ ದೇವತಿಗಳ ಕೈಸೆರಿ ಹಿಡಕೊಂಡು ಬರತಿದ್ದ. ಅಂಥಾ ಪ್ರಬಲ ಮಗ ಮನುಷ್ಯನಿಂದ ಸತ್ತನಲ್ಲ!' ಎಂದು ನಿಟ್ಟುಸಿರುಹಾಕತ ಅವನ ಪರಾಕ್ರಮ ಮರಳಿ ಮರಳಿ ನೆನಸಿ, 'ಮನುಷ್ಯನ ಕೈಯಿಂದ ಸಾಯಬಹುದೆ!' ಹೀಂಗೆಂದು ದುಃಖದಿಂದ ಅನೇಕ ಪ್ರಕಾರ ಪ್ರಲಾಪ ಮಾಡಿ 'ಇನ್ನು ನಾನು ಒದುಕಿ ಏನು ಪ್ರಯೋಜನ! ನಾನೂ ಸತ್ತೀನು' ಎಂದು ಯುದ್ಧಕ್ಕೋಸ್ಕರ ನಿಶ್ಚಯ ಬುದ್ಧಿ ಮಾಡಿದನು. ಏನುಕಾರಣ ಎಂದಲ್ಲಿ, ಮರಣ ನಿಶ್ಚಯವು ಆಗೇದೆ. ಅದರಿಂದ ತಾನೂ ಮರಣ ನಿಶ್ಚಯ ಮಾಡಿ ಮರಣಾಭಿಮುಖನಾದ ರಾವಣನು ಯುದ್ಧಕ್ಕೋಸ್ಕರ ಸನ್ನದ್ಧನಾಗತಲೇ, ಶೀಘ್ರದಿಂದ ಉತ್ಕೃಷ್ಟವಾದಂಥ ಬಲವನ್ನು ಕಳುಹಿದನು. ಸಂಖ್ಯ ಹೇಳಥಾರೆ—ಮೂವತ್ತು ಸಾವಿರ ಮಹೌಘ, ಆರು ಸಹಸ್ರ ಅಕ್ಷೋಹಿಣಿ ಸೈನ್ಯ, ಕ್ರಮದಿಂದ ರಾವಣ ಕಳುಹಿಕೊಟ್ಟನು. 'ಶೀಘ್ರ, ರಾವುನ ಸಮೀಪಕ್ಕೆ ಹೋಗಿ, ಸನ್ನದ್ಧನಾಗು ಎಂದು ಹೇಳಿರಿ. ನಾನು ಸನ್ನದ್ಧನಾಗೀನಿ.' ಈ ಅಭಿಪ್ರಾಯದಿಂದ ಕಳುಹಿಕೊಟ್ಟನು. ರಾವಣನಿಂದಾಜ್ಞಾಪ್ತರಾಗಿ, ಬ್ರಹ್ಮದೇವರ ವರಬಲದಿಂದ ಸೋಲದೆ ಇದ್ದಂಥಾವರು ಮತ್ತೆ ಎಂಥಾವರು ಎಂದರೆ, ಪ್ರಳಯ-

---

ಕಾಲದಲ್ಲಿ ಸಮುದ್ರಕ್ಕೆ ಸದೃಶವಾಗಿ ಇರೋ ಅಂಥಾ ಬಲವನ್ನು ನೋಡಿ ಅತ್ಯಂತ ಖಿನ್ನ ಮನಸ್ಸುಳ್ಳವರಾಗಿ ಕಪಿಶ್ರೇಷ್ಠರು, ನಾಲ್ಕೂ ಕಡಿಗೆ ಓಡಿಹೋದರು.

ಇಷ್ಟು ಸೇನಿ ಲಂಕಾಪಟ್ಟಣದಲ್ಲಿ ಹ್ಯಾಂಗೆ ಇತ್ತು, ಸುಗ್ರೀವ ಮೊದಲಾದ ಕಪಿಗಳು ನೋಡತಲೇ ಹ್ಯಾಂಗೆ ಓಡಿಹೋದರು ಎಂದಲ್ಲಿ, ಪೂರ್ವದಲ್ಲಿ ಬ್ರಹ್ಮ-ದೇವರು ವರವು ಕೊಟ್ಟಿದ್ದ. 'ಈ ಭೂಮೀವ್ಯಾಲಿ ಸ್ವಲ್ಪ ಸ್ಥಳದಲ್ಲಿ ವಾಸಮಾಡಿ-ಕೊಂಡು ಇಹೋದಕ್ಕೆ ಶಕ್ತಿಯಾಗಲಿ. ದಾರಿಂದಲೂ ಸೋಲಬ್ಯಾಡಿರಿ' ಎಂದು ವರವು ಕೊಟ್ಟಿದ್ದ. ಆದ್ದರಿಂದ ಸುಗ್ರೀವ ಮೊದಲಾದ ಕಪಿಗಳು ಮಹದ್ಬಲವನ್ನು ನೋಡಲಿಕ್ಕೆ ಶಕ್ತರಾಗಲಿಲ್ಲ. ವರಬಲದಿಂದ ಇಷ್ಟು ಸೈನ್ಯ ಲಂಕೆಯೊಳಗೆ ಇತ್ತು.. ತರುವಾಯ ರಾಮದೇವರು, ಧನುರ್ಬಾಣಗಳ ಹಿಡಕೊಂಡು ರಾಕ್ಷಸರ ಸಮೂಹ ಸರ್ವತ್ರದಲ್ಲಿ ಕೊಂದನು. ಸರ್ವತ್ರದಲ್ಲಿ ಹ್ಯಾಂಗೆ ಕೊಂದನು ಎಂದಲ್ಲಿ, ದಿಕ್ಕು-ವಿದಿಕ್ಕುಗಳಲ್ಲಿ ಸರ್ವತ್ರದಲ್ಲಿ ಕಾಣಿಸಿಕೊಂಡಂಥಾತನಾಗಿ ಅನಂತರೂಪಗಳಾದ.

ರಾಮಃ ಪುರಸ್ತಾತ್ ಪರತೋಪಿ ರಾಮೋ।
ರಾಮಃ ಪರಂ ದಿಕ್ಷು ವಿದಿಕ್ಷು ರಾಮಃ॥
ರಾಮೈರನಂತೈರತಿವಿಶ್ವರೂಪೋ।
ನಿಘ್ನನ್ನರಾರ್ತಿ ವಿರರಾಜ ರಾಮಃ॥

ಈ ಪ್ರಕಾರ ಅನಂತ ರಾಮರೂಪಗಳಿಂದ ರಾಕ್ಷಸರುಗಳ ಕೊಂದು ಬಿಟ್ಟನು. ರಘುನಾಥ ಕ್ಷಣಮಾತ್ರದಲ್ಲಿ ಸರ್ವಸೈನ್ಯ ಸಂಹಾರ ಮಾಡಲಿಕ್ಕೆ ಸ್ವಾಮೀ ಪರಾಕ್ರಮ

ಕಂಡು, ತಮ್ಮಂಥ ಭೃತ್ಯರು ಕೆಲಸಕ್ಕೆ ಬಾರದೇಹೋದೇವೆಂದು, ಕಪಿಸೇನೆ ಬಹಳ ನಾಚಿಕೆಯುಳ್ಳವರಾಗಿ ಸ್ವಾಮೀ ಸಮೀಪಕ್ಕೆ ಬಂದು ಅನೇಕ ಪ್ರಕಾರ ಪೂಜೆ ಮಾಡಿ ಸ್ವಾಮೀ ಪರಾಕ್ರಮ ಅನೇಕ ಪ್ರಕಾರ ಕೊಂಡಾಡಿದರು. ದೇವತಾಶ್ರೇಷ್ಠರು ಮಂದಾರ ಪಾರಿಜಾತಹೂವಿನ ಮಳ್ಳಿಗರೆದರು. ದೇವರು ಅಸದೃಶ ಸಮರ್ಥನೆಂದು ಸ್ತೋತ್ರ ಮಾಡಿದರು. ನಿಶಾಚರೇಶನಾದ ರಾವಣ, ಉಳಿದ ಸೈನ್ಯದಿಂದ ಮರಣಕ್ಕೋಸ್ಕರ ಮಹಾ ಆಯುಧಗಳ ಹಿಡಕೊಂಡು ಯುದ್ಧಕ್ಕೆ ಬಂದನು. ವಿರೂಪನೇತ್ರ, ಯೂಪನೇತ್ರ, ಮಹಾಪಾರ್ಶ್ವ, ಮಹೋದರ ಹೀಂಗೆ ನಾಲ್ವರು ಪ್ರಧಾನೇರು, ಮರಣ ಮುಂದೆನೂಡಿಕೊಂಡಂಥ ರಾವಣನ ಸೈನ್ಯದಿಂದ ಮಿಳಿತರಾಗಿ ಸುತ್ತುಗಟ್ಟಿಕೊಂಡು ಯುದ್ಧಕ್ಕೆ ಬಂದರು. ತರುವಾಯ ಕಪಿಗಳು ಪರ್ವತಪಾಷಾಣಗಳಿಂದ ಮಳಿಗರೆಯು ವಂಥಾವರಾಗಿ ರಾವಣನ ಸೈನ್ಯ ಸರ್ವವನ್ನೂ ಕೊಂದುಬಿಟ್ಟರು. ಕೊಲ್ಲೋ ಅಂಥಾ ಕಪಿಗಳ ನೋಡಿ ಪರಾಕ್ರಮಿಯಾದಂಥ ಮಹೋದರ ಎಂಬ ಪ್ರಧಾನಿ, ಶೀಘ್ರದಿಂದ ಬಂದನು. ಎದುರಿಗೆ ಓಡಿಬಾಹೋ ಅಂಥಾ ಮಹೋದರನ ಕಂಡು, ಸತ್ತಂಥ ಕುಂಭಕರ್ಣನೇ ಬದುಕಿಬಂದನೆಂದು ತನ್ನೊಳಗೆ ತಾವೇ ಮಾತನಾಡಿಕೊಂಡು, ಕಪಿಶ್ರೇಷ್ಠರು ಸರ್ವರೂ ಓಡಿಹೋದರು. ಆ ವ್ಯಾಕ್ಯಾದಲ್ಲಿ ವಾಲೀಮಗ ಅಂಗದ, ಮಹೋದರನ ಸಮೀಪಕ್ಕೆ ಬಾಹೋ ಅಂಥಾತನಾದ. ಸಮರ್ಥನಾದಂಥ ಅಂಗದ, ಕಪಿಗಳಿಗೆ 'ಏನುಕಾರಣ ಓಡಿಹೋಗತೀರಿ ಓಡಬ್ಯಾಡಿರಿ ಇವ ಕುಂಭಕರ್ಣನಲ್ಲ, ಮಹೋದರನಿದ್ದಾನೆ. ಅಂಜಿಸೋಣ ಮಾತ್ರವೇ ಹೊರ್ತು ಯುದ್ಧಕ್ಕೆ ತಕ್ಕವನಲ್ಲ' ಎಂದು ಈ ಪ್ರಕಾರ ಒದರತಲೇ ಹಾರತ ಬಂದು ಮಹೋದರನ ಮುಂಭಾಗದಲ್ಲಿ ನಿಂತನು. ಬಾಣ ಮಳಿಗರೆವಂಥ ಮಹೋದರನ ಕುತ್ತಿಗಿ ಹಿಡದು ಭೂತಳದಲ್ಲಿ ಕೆಡಹಿ ಪಾದಗಳಿಂದ ಮರ್ದಿಸಲು, ಅಂಗದನಿಂದ ಗಿಜಿಗಿಜಿ ಆಗಿ ಕೊಲ್ಲಲ್ಪಟ್ಟನು. ಅನಂತರದಲ್ಲಿ ಮಹಾಪಾರ್ಶ್ವನೆಂಬ ಪ್ರಧಾನಿ, ಬಾಣದ ಮಳಿಗರೆಯತ ಅಂಗದನ ಸಮೀಪಕ್ಕೆ ಬಂದನು. ಬರಲಿಕ್ಕೆ, ಅಂಗದ ಅವನ ಕೈಯೊಳಗಿದ್ದ ಧನುಸ್ಸು ಕಸಗೊಂಡು ಕೂದಲ ಹಿಡಿದು ಭೂಮೀಮ್ಯಾಲೆ ಕೆಡಹಿ ಎಡದ ಹೆಗಲ ಆರಂಭ ಮಾಡಿಕೊಂಡು ಬಲದ ಹೊಟ್ಟೆಯ ಪರ್ಯಂತರ ಸೀಳಿದನು. ಜನಿವಾರ ಹ್ಯಾಂಗೆ ಇರತದೆ ಹಾಂಗೆ ಸೀಳಿ, ಎರಡು ಹೋಳು ಮಾಡಿದನು. ಮಹಾಪಾರ್ಶ್ವ ಸತ್ತುಬಿದ್ದನು. ಅನಂತರದಲ್ಲಿ ವಿರೂಪನೇತ್ರ ಯೂಪನೇತ್ರ ಇಬ್ಬರೂ ಆಯುಧ ಹಿಡಕೊಂಡು ಅಂಗದನ ಮ್ಯಾಲೆ ಬಂದರು. ಬಾಣಮಯ ಪಂಜರದಿಂದ ಆಕಾಶ ಮುಚ್ಚಿಬಿಟ್ಟರು ವಿರೂಪನೇತ್ರ ಯೂಪನೇತ್ರ ಇವರ ಶರಪಂಜರದಿಂದ ಕಟ್ಟಿಸಿಕೊಂಡು ಅಲ್ಲಾಡಿಸೋದರಲ್ಲಿ ಶಕ್ತರಾಗಲಿಲ್ಲ. ಕಪಿಗಳಿಗೆ ಅರಸಾದಂಥ ಸುಗ್ರೀವ, ದೊಡ್ಡ ಪರ್ವತ ಕಿತ್ತುಕೊಂಡು ಇಬ್ಬರ ಶರೀರದಮ್ಯಾಲೆ ಹಾಕಿದನು. ಅತಿಭಯವುಳ್ಳ ಸುಗ್ರೀವನಿಂದ ಹಾಕಲ್ಪಟ್ಟಂಥ ಪರ್ವತದಿಂದ ಇಬ್ಬರೂ ಪುಡಿಪುಡಿಯಾದರು.

ಹೀಂಗೆ ನಾಲೋರು ಪ್ರಧಾನೇರು ಸಾಯಲಿಕ್ಕೆ, ರಾವಣ ಬಹಳ ಅಧೈರ್ಯವುಳ್ಳವನಾಗಿ, ಇನ್ನು ಮರಣವೇ ಸರಿಯೆಂದು ತಿಳದುಕೊಂಡು, ತಾನೇ ಯುದ್ಧಕ್ಕೆ ಬಂದು ನಿಂತುಕೊಂಡು ಸುಗ್ರೀವನ ಎದೀಮ್ಯಾಲೆ ಬಾಣ ಹಾಕಲಿಕ್ಕೆ, ಅವನು ಮೂರ್ಛಾಗತನಾಗಿ ಭೂಮೀಮ್ಯಾಲೆ ಬಿದ್ದನು ರಾವಣ ಅಪಾರ ಕಪಿಸೇನಿಗೆ ಬಾಣದಿಂದ ಹೊಡೀತ ರಾಮದೇವರ ಎದುರಿಗೆ ಬರಲಿಕ್ಕೆ, ಲಕ್ಷ್ಮಣ ಯುದ್ಧ ಮಾಡಲಿಕ್ಕೆ ಸ್ವಾಮೀ ಸಮೀಪಕ್ಕೆ ಹೋಗಗೊಡದೆ, ಬಾಣಸಮೂಹದಿಂದ ತಡಿಗಟ್ಟಿದನು. ಬಲಿಷ್ಠನಾದ ರಾವಣನು, ಕೋಪದಿಂದ ಯಮದಂಡಕ್ಕೆ ಸದೃಶವಾದಂಥ ಶಕ್ತ್ಯಾಯುಧ—ಬ್ರಹ್ಮದೇವರಿಂದ ದೈತ್ಯರ ಬಡಿಗ್ಯಾ ಮಯನೆಂಬವಗೆ ಕೊಡಲ್ಪಟ್ಟಿತ್ತು. ತನ್ನ ಮಗಳು ಮಂಡೋದರಿ, ರಾವಣಗೆ ಮದುವಿ ಮಾಡಿಕೊಡುವಾಗ್ಯೆ ವರದಕ್ಷಿಣಿ ಸಂಗಡ ವಿವಾಹಕಾಲದಲ್ಲಿ ರಾವಣಗೆ ಮಯನು ಕೊಟ್ಟಿದ್ದ ಅಂಥಾ ಶಕ್ತ್ಯಾಯುಧ—ತೆಗೆದುಕೊಂಡು ಲಕ್ಷ್ಮಣನ ಮ್ಯಾಲೆ ಬಿಟ್ಟನು. ಸಮರ್ಥನಾದ ಲಕ್ಷ್ಮಣನು ಶಕ್ತ್ಯಾಯುಧದಿಂದ ಸೀಳಲ್ಪಟ್ಟ ಹೃದಯವುಳ್ಳವನಾಗಿ, ಅತ್ಯಂತ ಮೂರ್ಛಿತನಾಗಿ ಬಿದ್ದನು. ಅದೇ ವ್ಯಾಳ್ಯಾದಲ್ಲಿ ಮುಖ್ಯಪ್ರಾಣನ ಮಗನಾದಂಥ ಹನುಮಂತದೇವರು, ಅತಿ ಸ್ಥೂಲವಾದಂಥ ಪರ್ವತ ಕಿತ್ತುಕೊಂಡು ಬಂದು ಶೀಘ್ರದಿಂದ ರಾವಣನ ಎದೀಮ್ಯಾಲೆ ಹಾಕಿದನು. ರಾವಣ, ಶೀಘ್ರದಿಂದ ರಕ್ತಪ್ರವಾಹ ಹತ್ತುಮುಖದಿಂದ ಕಾರತ ಪರ್ವತಪೆಟ್ಟಿನಿಂದ ಅತಿ ವ್ಯಥಿಯುಳ್ಳವನಾಗಿ ಭೂತಳದಲ್ಲಿ ಬಿದ್ದನು. ಲಕ್ಷ್ಮಣಗೆ ಶಕ್ತಿ ನಷ್ಟವಹೋದು. ಶಕ್ತಿಸಹವಾಗಿ ಲಕ್ಷ್ಮಣನ ಕೊಂಡು ಹನುಮಂತ, ರಘುನಾಥನ ಸಮೀಪಕ್ಕೆ ಬಂದನು. ರಾಮ ತನ್ನ ಕರಕಮಲದಿಂದ ಶಕ್ತ್ಯಾಯುಧ ಕಿತ್ತುಕೊಂಡು, ಶೀಘ್ರ ಎಚ್ಚರದ ಕಾರಣ ಸಮರ್ಥನಾದಂಥ ರಾಘವ, ಪುನಃ ಉತ್ತಮವಾದಂಥ ಔಷಧ ತಾಹೋದಕ್ಕೆ, ಮುಖ್ಯಪ್ರಾಣನ ಮಗನಾದಂಥ ಹನುಮಂತನ ಕಳುಹಿಕೊಟ್ಟನು. ಹನುಮಂತದೇವರು ಪುನಃ ಗಂಧಮಾದನ ಪರ್ವತ ತೆಗೆದುಕೊಂಡು ಬಂದನು. ಆ ಪರ್ವತದಲ್ಲಿದ್ದ ಔಷಧಿಗಳ ಗಂಧಮಾತ್ರದಿಂದ ಲಕ್ಷ್ಮಣ ಎದ್ದುಕುಳಿತನು. ಪೂರ್ವದೋಪಾದಿ ಉತ್ಕೃಷ್ಟ ಬಲವುಳ್ಳಾತನಾದನು. ಅನಂತಗುಣಾರ್ಣವ ಸರ್ವಸಮರ್ಥನಾದಂಥ ರಾಮದೇವರು, ಮುಗುಳುನಗೆಯಿಂದ ಯುಕ್ತನಾಗಿ ವಾಯುಕುಮಾರನಾದ ಹನುಮಂತದೇವರನ್ನ ಚೆನ್ನಾಗಿ ಆಲಿಂಗನ ಮಾಡಿಕೊಂಡು ತನ್ನ ಭಕ್ತನಹುದೆಂದು ಸ್ತೋತ್ರಮಾಡಿದನು. ಅನಂತಪರಾಕ್ರಮವುಳ್ಳ ರಘುನಾಥ ತಾ ಸಮರ್ಥನಾದರೂ ಸರಿಯೇ, ಹನುಮಂತನ ಕೈಯ ಸೇವಿ ತೆಗೆದುಕೋಬೇಕೆಂದು ಈ ಪ್ರಕಾರ ಮಾಡಿದನು.

ಹನುಮಂತದೇವರು ಲಂಕೆಯಲ್ಲಿ ನಿಂತುಕೊಂಡು ಉತ್ತಮವಾದಂಥ ಗಂಧಮಾದನ ಪರ್ವತ ಐವತ್ತು ಸಹಸ್ರ ಯೋಜನ ವ್ಯವಧಾನದಲ್ಲಿ, ಮೊದಲು ದಾವ ಪ್ರಕಾರ ಇತ್ತೋ ಅದೇ ಪ್ರಕಾರ ಇಹೋಹಾಂಗೆ, ಪರ್ವತ ಅದೇ ಸ್ಥಳಕ್ಕೆ ಬಿಟ್ಟು-

(1) ಸಂಜೀವಿನೀ ಪರ್ವತ ತಂದದ್ದು
ಇಲ್ಲಿ—ವಿಶದ ಸಾರ.

ಕೊಟ್ಟನು. ಆ ಪರ್ವತವು ಹನುಮಂತದೇವರ ಬಾಹುವೇಗದಿಂದ, ಪೂರ್ವದಲ್ಲಿ ಹ್ಯಾಂಗೆ ಸಂಬಂಧವಾಗಿತ್ತು ಅದೇಯೋಪಾದಿ ಸಂಬಂಧವಾಯಿತು. ಸತ್ತಂಥ ಕಪಿಗಳು ಪರ್ವತಗಂಧಮಾತ್ರದಿಂದ ಬದುಕಿದರು. ಸತ್ತವರೆಲ್ಲ ಬದುಕಿದರೆಂದು ಹೇಳುವಲ್ಲಿ, ಔಷಧಕ್ಕೆ ವೈಷಮ್ಯ ನೈಷ್ಫಲ್ಯ ಇಲ್ಲ. ಮೃತಸಂಜೀವಿನಿ ಗಾಳಿಯಿಂದ ಸತ್ತ ರಾಕ್ಷಸಸೇನಿ ಏನುಕಾರಣ ಬದುಕಲಿಲ್ಲ ಎಂದಲ್ಲಿ, ರಾಮದೇವರ ಆಜ್ಞೆದಿಂದ ರಾಕ್ಷಸರ ಎಳದೊಯ್ದು ಸಮುದ್ರದೊಳಗೆ ಹಾಕಿದ್ದರು. ಮೀನ ಮೊಸಳಿ ತಿಂದು ಜೀರ್ಣ ಮಾಡಿದವು. ಅದರಿಂದ ರಾಕ್ಷಸರ ಸೇನಿ ಬದುಕಲಿಲ್ಲ. ವಾನರರು ರೋಗ ಗಳಿಂದ ರಹಿತರಾದರು. ಸತ್ತಂಥವರು ಮೃತಸಂಜೀವನದಿಂದ ಬದುಕಿದರು. ಸಂಧಾನಕರಣಿಯಿಂದ ಛೇದಿಸಿದಂಥ ಅವಯವಗಳು ಮೊದಲೋಪಾದಿ ಸಂಬಂಧ ವಾದವು. ವಿಶಲ್ಯಕರಣಿಯಿಂದ ಅಂಬುಗಳು ಉಚ್ಚಿದವು. ಸವರ್ಣಕರಣಿಯಿಂದ ಮೊದಲೋಪಾದಿ ವರ್ಣವಾಯಿತು. ಈ ಔಷಧಿಗಳ ಸಾಮರ್ಥಿಯಿಂದ ಸಮಸ್ತ ಕಪಿಗಳು ಪೂರ್ವದೋಪಾದಿ ಎಚ್ಚರವುಳ್ಳವರಾದರು.

ತರುವಾಯ ಪುರುಷೋತ್ತಮನಾದ ಸರ್ವಸಮರ್ಥನಾದಂಥ ರಾಮದೇವರ ಮ್ಯಾಲೆ, ಆಯುಧಗಳ ಮಳಿಗರೆಯತ ವಿಮಾನ ಏರಿಕೊಂಡು ರಾವಣ ಬಂದನು. ರಘುನಾಥ ಧನುಸ್ಸು ತೆಗೆದುಕೊಂಡು ರಾವಣನ ಎದುರಿಗೆ ಬಂದನು. ತಮ್ಮ ಸ್ವಾಮಿ ಕಾಲುನಡಿಗಿಯಲ್ಲಿ ಯುದ್ಧ ಮಾಡಬಾರದೆಂದು, ದೇವೇಂದ್ರ ತನ್ನ ರಥ ಕಳುಹಿಕೊಟ್ಟನು. ಆಯುಧದಿಂದ ಪೂರ್ಣವಾದ ರಥವನ್ನು ಮಾತಳಿ ಎಂಬ ಸಾರಥಿ ಕೊಂಡುಬಂದನು. ಲಕ್ಷ್ಮಣಾಗ್ರಜನಾದಂಥ ರಘುನಾಥ ಶೀಘ್ರದಿಂದ ರಥ ಏರಿಕೊಂಡು, ಲೋಗರುಗಳ ಅಭಯದಗೋಸ್ಕರ ಶೀಘ್ರದಿಂದ ರಾಕ್ಷಸಾಧಿಪನಾದಂಥ ರಾವಣನ ಸಮೀಪಕ್ಕೆ ಬಂದನು. ರಾವಣ ಎಂಥವನೆಂದರೆ ದಾವ ಲೋಗರುಗಳನ್ನೂ ದಂಡಿಸುವಂಥಾವ. ರಾಮದೇವರು ಸಹಸ್ರಕಿರಣಗಳಿಂದ ಯುಕ್ತನಾದ ಸೂರ್ಯ-ನೋಪಾದಿ ಉದಯಸತಾ ಸಿಂದಿರಲಿಕ್ಕೆ, ರಾವಣನೆಂಬ ಗಾಢಾಂಧಕಾರ ಪರಿಹಾರ ವಾಯಿತು. ನಿಶಾಚರೇಶನಾದಂಥ ರಾವಣನು ರಾಮನ್ನ ನೋಡಿ ಮಂತ್ರಗಳಿಂದ ಅಭಿಮಂತ್ರಿಸಿ ಬಾಣಗಳ ಬಿಟ್ಟನು. ರಘುನಾಥ ಸ್ವಕೀಯ ಬಾಣಗಳಿಂದ ರಾಕ್ಷಸನ ಬಾಣಗಳನ್ನು ಛೇದಿಸಿಬಿಟ್ಟನು. ಅವನ ಹತ್ತೂ ತಲೀನು ಕೆಡಹಿಬಿಟ್ಟನು. ರಾವಣ ಹಿಂದಕ್ಕೆ ಹತ್ತುಸಹಸ್ರ ವರ್ಷ ತಪಸ್ಸು ಮಾಡಿ ಕಡಿದ ತಲಿ ಚಿಗರೋಹಾಂಗೆ ಬ್ರಹ್ಮದೇವರಿಂದ ವರವು ಪಡೆದಿದ್ದ. ಆದ್ದರಿಂದ ಕಡಿದ ತಲಿ ಮತ್ತೆ ಚಿಗತವು, ಬ್ರಹ್ಮದೇವರ ವರ ಸತ್ಯ ಮಾಡಬೇಕಾಗಿ. ಒಂದು ಬಾಣದಿಂದ ಸೀಳೆಲ್ಪಟ್ಟ ಹೃದಯ ವುಳ್ಳವನಾಗಿ ಹತ್ತೂ ಮುಖದಿಂದ ರಕ್ತಕಾರತ ಶೀಘ್ರ, ವಿಮಾನದಿಂದ ಕೆಳಗೆಬಿದ್ದನು.

ಮೂರು ಲೋಕಕ್ಕೆ ವೈರಿಯಾದ ರಾವಣ ಸಾಯಲಿಕ್ಕೆ, ಬ್ರಹ್ಮದೇವರು, ಶಿವ ಇಂದ್ರಾದಿ ಲೋಕಪಾಲಕರಿಂದ ಯುಕ್ತನಾಗಿ ಜಗತ್ತಿಗೆ ಆಧಾರನಾದಂಥ ರಾಮ-

ದೇವರ ಎರಡು ಪಾದಕಮಲಗಳ ಐದಿ, ಭಯಭರಿತ ಭಕ್ತಿಯಿಂದ ಸಾಷ್ಟಾಂಗ ನಮಸ್ಕಾರ ಮಾಡಿ, ಜಗತ್ತಿಗೆ ಪಿತಾಮಹನಾದ ಬ್ರಹ್ಮದೇವರು ಎರಡೂ ಕೈ ಮುಗಿದುಕೊಂಡು, ಗುಣಾಭಿರಾಮನಾದಂಥ ತನ್ನ ತಂದಿಯಾದಂಥ ರಾಮದೇವರ ಸ್ತೋತ್ರ ಮಾಡಥಾನೆ. 'ಅಜಿತನಾಮಕ ಪರಮಾತ್ಮನೇ! ಜಯ ಜಯ! ನೀನು ಎಂಥಾತ, ಸಕಲ ಜಗತ್ತಿನ ಅಭಿಪ್ರಾಯ ಬಲ್ಲಾತ. ಶರಣಾಗತರಾದಂಥ ನಮ್ಮ ಪಾಲನಿ ಮಾಡತಿದ್ದಿ. ಇಂಥಾ ನಿನಗೋಸ್ಕರ ನಮಸ್ಕಾರ ಮಾಡಥೀನಿ. ಈ ಜಗತ್ತಿಗೆ ಮುಖ್ಯಸ್ವಾಮಿ ನೀನೇವೆ ಸ್ತುತ್ಯನು. ನಿನಗೆ ದೇಶತಃ ಕಾಲತಃ ಆದಿ ಅಂತ್ಯವಿಲ್ಲ. ನಿನ್ನ ಗುಣಗಳು ಅನಂತ, ಪ್ರತ್ಯೇಕ ಪ್ರತ್ಯೇಕ ಒಂದೊಂದು ಗುಣಗಳಿಗೆ ಅನಂತತ್ವ ಅದೆ. ನಿನ್ನ ಗುಣಗಳಿಗೆ ದೇಶದಲ್ಲಿ ಕಾಲದಲ್ಲಿ ಆದಿ ಅಂತ್ಯವಿಲ್ಲ ನಾಶವಿಲ್ಲ.' ಇದನ್ನೆ ಸ್ಪಷ್ಟ ಮಾಡಥಾರೆ. 'ನಿನ್ನ ಗುಣಗಳು ಒಂದಾನೊಂದೂ ತಮ್ಮಿಂದ ತಾವೇ ಹುಟ್ಟೋಣವಿಲ್ಲ ಪರರಿಂದ ಹುಟ್ಟೋಣವೂ ಇಲ್ಲ ನಾಶವೂ ಇಲ್ಲ. ಅನಾದ್ಯನಾದಿ ಸರ್ವರಿಗೆ ಮುಖ್ಯ ಆಧಾರ ನೀನೇವೆ. ಪ್ರಳಯಕಾಲದಲ್ಲಿ ಸರ್ವ ಜಗತ್ತು ನಿನ್ನ ಉದರದೊಳಗೆ ಇಟ್ಟುಕೊಂಡು ವಟಪತ್ರಶಯನನಾಗಿರತಿದ್ದಿ. ಕ್ಷರಾಕ್ಷರ ಪುರುಷರುಗಳಿಗೆ ಉತ್ತಮನಾದಂಥಾತ ನೀನೇವೆ. ಸಮಸ್ತ ದೇವತಿಗಳೂ ಬ್ರಹ್ಮರುದ್ರೇಂದ್ರಾದ್ಯರು ನಿನ್ನ ಭೃತ್ಯರು. ಅಗ್ನಿದೆಸಿಯಿಂದ ಹೊರಡುವ ಕಿಡಿಗಳೂ ಪವನವೇಗಗಳೂ ಸೂರ್ಯ-ಕಿರಣಗಳೂ ಉದಕದ ತೆರಿಗಳೂ ಹ್ಯಾಂಗೆ, ಹಾಂಗೆ ನಾನೇ ಮೊದಲಾದಂಥ ಶಿವ ಮೊದಲಾದ ದೇವತಿಗಳು ಪ್ರಳಯಕಾಲದಲ್ಲಿ ಹೋಗಥಾರೆ, ಸೃಷ್ಟಿಕಾಲದಲ್ಲಿ ಬರಥಾರೆ. ಮುಕ್ತಿಯಲ್ಲಿ ಇಹೋ ಬ್ರಹ್ಮರುಗಳು, ಈ ಸಂಸಾರದಲ್ಲಿ ಇಹೋ ಬ್ರಹ್ಮರುಗಳು ಮೊದಲಾದ ಸರ್ವಸಮಸ್ತರೂ, ಈಶಾದಿಗಳಿಗೆ ಈಶನಾದಂಥ ಸ್ವಾಮಿಯೇ, ನಿನ್ನ ಅಧೀನ ಇದ್ದಾರೆ. ಮೂಗು ಪೋಣಿಸಿದ ಎತ್ತು ಒಡಿಯನ ಅಧೀನ ಹ್ಯಾಂಗೆ ಇರತದೋ ಹಾಂಗೆ ನಾವು ಸರ್ವಸಮಸ್ತರೂ ನಿನ್ನ ಅಧೀನವಾಗಿದ್ದೇವು. ನಿನ್ನ ಗುಣಗಳ ಸಮೂಹವನ್ನು ಸರ್ವದಾ ಸ್ತೋತ್ರ ಮಾಡಿದ ಕಾಲಕ್ಕೂ ಕಡಿ ಕಾಂಬೋದಿಲ್ಲ. ಹೇ ಸಮರ್ಥ! ಈ ರಾಕ್ಷಸನಾದ ರಾವಣನ ಕೊಂದು ಸಮಸ್ತ ದೇವತಿಗಳ ಪಾಲನಿ ಮಾಡಿದ್ದು ಆಶ್ಚರ್ಯವಲ್ಲ. ಈ ರಾಕ್ಷಸನ ಕೊಂದದ್ದು ನಿನಗೆ ಅಲ್ಪ, ಅನ್ಯರಿಂದ ಅಸಾಧ್ಯ. ಇವನ ಕೊಲ್ಲೋಣ ದೇವತಿಗಳ ಪಾಲನಿ ಮಾಡೋಣ ಈ ಎರಡೂ ಕಾರ್ಯ ನಮ್ಮ ಮ್ಯಾಲೆ ಅನುಗ್ರಹಾರ್ಥವಾಗಿ ಮಾಡಿದಿ. ಇದಕ್ಕೆ ಪ್ರತ್ಯುಪಕಾರ ನಮ್ಮಿಂದ ಏನು ಆದೀತು!'

ಈ ರೀತಿ ನಮಸ್ಕಾರ ನಮಸ್ಕಾರವೆಂದು ಬ್ರಹ್ಮರಾಯ ಸ್ತೋತ್ರ ಮಾಡಲಿಕ್ಕೆ ರುದ್ರದೇವರು, ಅಸುರಾವೇಶದಿಂದ 'ನಾನು ರಾವಣಗೆ ವರವು ಕೊಟ್ಟಿದ್ದೆ. ನನ್ನ ವರವು ಆನಾದರ ಮಾಡಿ ರಾವಣನ್ನ ಹ್ಯಾಂಗೆ ಕೊಂದಿ? ನನ್ನ ಕೂಡ ಯುದ್ಧಕ್ಕೆ ಬಾ' ಎಂದು ಸ್ವಾಮಿಯನ್ನು ಕರೆಯಲಿಕ್ಕೆ ಬಹಳ ಒಳ್ಳೇದೆಂದು ರುದ್ರನ ಎದುರಿಗೆ

ಬಾಣಗಳ ಕೊಂಡು ಹೆದೆ ಏರಿಸಿ ಟಂಕಾರ ಮಾಡಲಿಕ್ಕೆ, ಭೂಕಂಪವಾಯಿತು. ಭೂಕಂಪ ಕಂಡು ಮೂರ್ಛಿತನಾಗಿ ಭೂತಳದಲ್ಲಿ ರುದ್ರ ಬಿದ್ದು ಅಸುರಾವೇಶ ಹೋಗೋಣ, 'ಸರ್ವೋತ್ತಮ ದೇವತೆಗೆ ನಾನು ಯುದ್ಧಕ್ಕೆ ಕರದೆ. ನಾನು ಬಹಳ ದ್ರೋಹಿ ಸರ್ವಾಪರಾಧ ಮಾಡಿದೆ ಕ್ಷಮಿಸಬೇಕು' ಎಂದು, ಸ್ವಾಮೀ ಪಾದಗಳಲ್ಲಿ ಬಿದ್ದು, ನಮಸ್ಕಾರ ಮಾಡಿ ಪುನಃ ಸ್ತೋತ್ರ ಮಾಡಥಾನೆ. 'ನನ್ನ ಮನಸ್ಸು ಸರ್ವದಾ ನಿನ್ನ ಪಾದಮೂಲದಲ್ಲಿ ಎರಗೋ ಹಾಂಗೆ ಮಾಡು' ಎಂದು ಸ್ವಾಮಿಗೆ ಬೇಡಿಕೊಂಡ. ತರುವಾಯ, ದೇವತಿಗಳು ಸ್ತೋತ್ರ ಮಾಡಥಾರೆ. 'ರಾವಣನ ದೆಸೆಯಿಂದ ಬಹಳ ಕ್ಲೇಶಬಡತಿದ್ದಿವು. ಇಂಥವನ್ನ ಕೊಂದು ನಮ್ಮನ್ನ ಸಂರಕ್ಷಣೆ ಮಾಡಿದಿ. ಎಲ್ಲೈ ಕಮಲೇಕ್ಷಣ! ನಾವೇನು ಉಪಕಾರ ಮಾಡೇವು! ನಾವು ಸರ್ವದೂ ನಿನ್ನ ಭೃತ್ಯರು. ನಿನ್ನ ಹೊರ್ತು ನಮಗೆ ದಾರೂ ಗತಿ ಇಲ್ಲ. ಸರ್ವಾಪತ್ಕಾಲದಲ್ಲಿ ಪಾಲನಿ ಮಾಡು.' ಹೀಂಗೆಂದು ಇಂದ್ರಾದಿ ದೇವತಿಗಳು ಸ್ತೋತ್ರ ಮಾಡಿದ ತರುವಾಯ, ಅಶೋಕವನದೊಳಗೆ ಶಿಂಶುಪಾವೃಕ್ಷದ ಕೆಳಗೆ ರಾಮಸ್ಮರಣೆ ಮಾಡತಿದ್ದ ಸೀತಾಪ್ರತಿಕೃತಿಯನ್ನು, ಅಂದಣದಲ್ಲಿ ಕೂಡಿಸಿಕೊಂಡು ವಿಭೀಷಣ ಕೊಂಡುಬಂದ. ಮೂಲಸೀತಾ, ಪಾರ್ವತೀಪರಮೇಶ್ವರರಿಂದ ಪೂಜಿಗೊಳ್ಳಲು

ಕೈಲಾಸಕ್ಕೆ ಹೋಗಿದ್ದಳು. ಒಂದು ರೂಪದಲ್ಲಿ ದೇವರ ಸಮೀಪದಲ್ಲಿದ್ದಳು. ತನ್ನಂತೆ ಪ್ರತಿಕೃತಿ ಮಾಡಿ ಸನ್ನಿಧಾನದಲ್ಲಿಟ್ಟಿದ್ದಳು. ಆ ಪ್ರತಿಕೃತಿಯಲ್ಲಿ ದೇವೇಂದ್ರ ಪ್ರವಿಷ್ಟನಾಗಿದ್ದ. ಇಂಥಾ ಸೀತಾಪ್ರತಿಕೃತಿ, ಶುದ್ಧಳೆಂದು ಲೋಕಕ್ಕೆ ತಿಳುಹಬೇಕಾಗಿ ಶಪಥವ್ಯಾಜದಿಂದ 'ಅಗ್ನಿಕುಂಡದೊಳಗೆ ಹಾಕು ಎದ್ದು ಬರಲಿ' ಎಂದನು. ಕಪಿಗಳು ಸ್ವಾಮೀ ಆಜ್ಞೆದಿಂದ ಕುಂಡ ತೋಡಿ ಅನೇಕ ಕಾಷ್ಠಗಳ ಹಾಕಿ ಅಗ್ನಿ ಪುಟತ್ವ ಮಾಡಿದರು. ಸೀತಾ ಪ್ರತಿಕೃತಿ ಅಗ್ನಿಪ್ರವೇಶ ಮಾಡಲಿಕ್ಕೆ, ಪ್ರಾಕೃತದೇಹ ನಿರ್ಮಾಣ ಮಾಡಿದಳು. ಅದೇ ದೇಹ ಅಗ್ನಿಯೊಳಗೆ ಸುಟ್ಟುಹೋಯಿತು. ಇಂದ್ರ ತನ್ನ ಮೂಲರೂಪ ಐದಿದನು. ಕೈಲಾಸದಲ್ಲಿದ್ದ ಸೀತಾದೇವಿ ಅಗ್ನಿಯೊಳಗಿಂದ ಹೊರಟುಬಂದಳು. ಸೀತಾದೇವಿಯನ್ನು ಅಗ್ನಿದೇವರು ತಂದು ಸಮರ್ಪಿಸಲಿಕ್ಕೆ, ರಘುನಾಥ ತೆಗೆದುಕೊಂಡನು. ರಾಮದೇವರು ಮಹಾರುದ್ರನ ಆಲಯದಲ್ಲಿದ್ದಂಥ ಸೀತಾದೇವಿ ಎಂತ ತಿಳದು, ಅಗ್ನಿಯಿಂದ ಕೊಡಲ್ಪಟ್ಟಂಥ ಸೀತಾದೇವಿಯ, ರಘುನಾಥ ಐದಿ ಬಹಳ ಸಂತೋಷಪಟ್ಟನು. ಸೀತಾದೇವಿ ಸ್ವಾಮಿಯನ್ನ ಐದಿ ಬಹಳ ಸಂತೋಷ ಐದಿದಳು.

ಯುದ್ಧದಲ್ಲಿ ಸತ್ತಂಥವರ ಅವಯವಗಳು ಛೇದಿಸಿದವರನ್ನ ಸುಷೇಣ ಎಬ್ಬಿಸಿದನೆಂದು ಪುರಾಣಗಳಲ್ಲಿ ಹೇಳತದೆ. ಆ ವಿರೋಧವಾಕ್ಯಗಳ ಪರಿಹರಿಸಥಾರೆ. ಗಂಧಮಾದನ ಪರ್ವತ ಹನುಮಂತ ಎರಡಾವರ್ತಿ ತಂದು ಕಪಿಗಳ ಎಬ್ಬಿಸಿದ ತರುವಾಯ, ತಾರಾದೇವಿ ತಂದಿ ಸುಷೇಣನ ವೈದ್ಯಕರ್ಮ ಪ್ರಕಟಿಸಬೇಕಾಗಿ, ಕಪಿಗಳ ಗಾಯವೆಲ್ಲ ನೀಟುಮಾಡು ಎನಲಿಕ್ಕೆ, ಸ್ವಾಮಿ ಆಜ್ಞೆ ಶಿರಸಾ ಧರಿಸಿ, ವೈದ್ಯ-

ಶ್ರೇಷ್ಠನಾದ ಸುಷೇಣ ತನ್ನ ವೈದ್ಯದಿಂದ ನೆಟ್ಟಗೆ ಮಾಡಿದ. ಸುಷೇಣನಿಂದ, ಸತ್ತಂಥಾವರನ್ನೆಲ್ಲ ಹ್ಯಾಂಗೆ ಬದುಕಿಸೋಣವಾಗತದೆ ಎಂದಲ್ಲಿ, ಸ್ವಾಮಿ ಯಮ-ಲೋಕದಿಂದ ಮೃತರಾದ ವಾನರಗಳ ಜೀವಗಳ ತರಿಸಿದನು. ಸ್ವಾಮಿ, ಬ್ರಹ್ಮ ಮೊದಲಾದ ಸಮಸ್ತ ದೇವತಿಗಳಿಗೆಲ್ಲ 'ನಿಮ್ಮ ಲೋಕಕ್ಕೆ ಹೋಗಿರಿ' ಎಂದು. ಅನುಜ್ಞೆ ಕೊಟ್ಟನು. ಅಲ್ಲಿಗೆ ದೇವೇಂದ್ರನ ಸಂಗಡ ದಶರಥರಾಯ ಬಂದಿದ್ದ. ಮಗನ ಕಂಡು 'ರಘುನಾಥ, ನಿನ್ನ ವಿಯೋಗ ತಾಳಲಾರದೆ ದೇಹ ವಿಯೋಗ ಮಾಡಿದೆ. ನಿನ್ನ ಸಮೀಪದಲ್ಲಿದ್ದೇನೆ' ಎನಲಿಕ್ಕೆ, ನನ್ನ 'ನಾಮಸ್ಮರಣೆ ಮಾಡತ ಪರಲೋಕದಲ್ಲಿರಹೋಗಿರಿ' ಎಂದು ದಶರಥರಾಯನ್ನ ಕಳುಹಿದನು.

ಕಪಿಸೇನಿಯೆಲ್ಲ ಸತ್ತಂಥಾದ್ದು ಬದುಕೋಣ, ತಾನು ಅಯೋಧ್ಯಾಪಟ್ಟಣಕ್ಕೆ ಹೋಗೋ ಇಚ್ಛಾ ಮಾಡಿದನು. ವಿಭೀಷಣನಿಂದ ಕೊಡಲ್ಪಟ್ಟಂಥ ಪುಷ್ಪಕವಿಮಾನ ಏರಿಕೊಂಡು, ಹನುಮಂತ ಸುಗ್ರೀವ ವಿಭೀಷಣ ಅಂಗದ ಮೊದಲಾದ ಸಮಸ್ತ ಸೇನಿಯಿಂದ ಯುಕ್ತನಾಗಿ ಶೀಘ್ರವಾಗಿ ಸ್ವಕೀಯವಾದಂಥ ಅಯೋಧ್ಯಾಪಟ್ಟಣಕ್ಕೆ ತೆರಳಿದನು. ಅಂದಿಗೆ ಹದಿನಾಲ್ಕು ವರುಷವಾಯಿತು. ಭರತ, ರಾಮನ ಮಾರ್ಗ ನೋಡಿ ಸ್ವಾಮಿ ಬರಲಿಲ್ಲೆಂದು ಅಗ್ನಿಕುಂಡದೊಳಗೆ ತನ್ನ ದೇಹ ಹಾಕಿಕೊಳ್ಳತಿದ್ದ. ರಾಮ ಹನುಮಂತಗೆ ಆಜ್ಞಾಪಿಸಿ, 'ಶೀಘ್ರವಾಗಿ ಹೋಗಿ ಭರತಗೆ ರಾಮ ಬಂದನೆಂದು ಹೇಳು. ನೆನ್ನ ಕಾಣದೆ ಅಗ್ನಿಕುಂಡದೊಳಗೆ ಬೀಳಬೇಕಾಗೇದೆ. ತ್ವರದಿಂದ ಹೋಗು' ಎನಲಿಕ್ಕೆ, ಐವತ್ತುಸಾವಿರ ಯೋಜನ ಗಂಧಮಾದನ ಪರ್ವತಕ್ಕೆ ಲೀಲಾಮಾತ್ರದಲ್ಲಿ ಬಂದಾತಗೆ, ಅಯೋಧ್ಯಕ್ಕೆ ಹೋಗಿ ಭರತಗೆ ಸುದ್ದಿ ಮುಟ್ಟಿಸೋಣ ಆಶ್ಚರ್ಯವಲ್ಲ. ರಾಮನ ಆಜ್ಞೆ ಶಿರಸಾವಹಿಸಿಕೊಂಡು ಲೀಲಾಮಾತ್ರದಲ್ಲಿ ಅಯೋಧ್ಯಾಪಟ್ಟಣಕ್ಕೆ ಬರಲಾಗಿ, ರಾಮದೇವರ ಕಾಣಲಿಲ್ಲವೆಂದು ಅಗ್ನಿಪ್ರವೇಶವಾಗತಿದ್ದ ಭರತನ ಕಂಡು 'ಬಂದ ರಾಮ' ಎಂದು ಹೇಳಿ, ಅಗ್ನಿಯಲ್ಲಿ ಬೀಳುವಂಥಾದ್ದು ನಿವಾರಿಸಿ, 'ಶ್ರೀರಾಮದೇವರು ಬಂದರು ಬಂದರು ಅಗ್ನಿಯೊಳಗೆ ಬೀಳಬ್ಯಾಡ' ಎಂದು ಹನುಮಂತ ಹೇಳಲಿಕ್ಕೆ, ಆ ಭರತ ರಾಮನ ವರ್ತಮಾನ ಕೇಳಿ ಬಹಳ ಸಂಭ್ರಮ ಭರಿತನಾಗಿ 'ನಮ್ಮ ಸ್ವಾಮೀನ್ನ ತೋರಿಸಬಾ' ಎಂದು ಹನುಮಂತನ ಮುಂದು-ಮಾಡಿಕೊಂಡು ಪಟ್ಟಣಸ್ಥರು, ಕೌಸಲ್ಯಾದೇವಿ ಮೊದಲಾದ ತಾಯಂದಿರನ್ನು ಕೂಡಿಕೊಂಡು ಶತ್ರುಘ್ನನಿಂದ ಯುಕ್ತನಾಗಿ ರಾಮದೇವರ ಸಮೀಪಕ್ಕೆ ಬಂದು, ಆನಂದಬಾಷ್ಪಗಳಿಂದ ಸಹಿತವಾದಂಥ ಕಣ್ಣುಗಳಿಂದ ಭರತನು ನಮಸ್ಕಾರ ಮಾಡಿದನು. ಸ್ನೇಹದಿಂದ ಯುಕ್ತನಾಗಿ ಪಾದದಲ್ಲಿ ಬಿದ್ದಂಥ ಭರತನನ್ನು ಸ್ವಾಮಿ, ತನ್ನ ಕರಕಮಲಗಳಿಂದ ಎತ್ತಿ ಆಲಿಂಗನ ಮಾಡಿಕೊಂಡು, ಶತ್ರುಘ್ನನ ಅಪ್ಪಿ-ಕೊಂಡನು. ಉಳಿದ ಸಮಸ್ತರನ್ನೂ ವಯಾನುಸಾರ ಮನ್ನಿಸಿದನು. ಕರಸ್ಪರ್ಶ ಕೆಲವರಿಗೆ ಮಾಡಿದನು. ಈ ಪ್ರಕಾರ ಸರ್ವರನ್ನೂ ಸಂಭಾವಿಸಿ ಅಯೋಧ್ಯಾಪಟ್ಟಣ ಪ್ರವೇಶ ಮಾಡಿ, ವಸಿಷ್ಠಾದಿ ಋಷಿಗಳಿಂದ ರಾಜ್ಯಾಭಿಷೇಕ ಮಾಡಿಸಿಕೊಂಡನು.

ತರುವಾಯ ಅವರವರ ಯೋಗ್ಯತಾನುಸಾರ ಸುಗ್ರೀವನೇ ಮೊದಲಾದಂಥ ಕಪಿಶ್ರೇಷ್ಠರುಗಳಿಗೆ ಬಹುಮಾನ ಮಾಡಿಸಿ, ಜಗದೀಶ್ವರನಾದಂಥ ರಾಮದೇವರು ಮಾತನಾಡಥಾನೆ. 'ನೀವು ಸಹುಸ್ತರೂ ನಿಮ್ಮ ನಿಮ್ಮ ಮನೋವಾಕ್ಕಾಹಿತವಾಗಿ, ದೇಹವನ್ನು ನನ್ನದು ಮಾಡಿ ಸೇವಿ ಮಾಡಿದ್ದೀರಿ, ಸುಕೃತಾಂಶರು. ಆದಕಾರಣ, ಮನೋವಾಕ್ಕಾಯದಿಂದ ಯುದ್ಧದಿಂದ ಅನೇಕ ಜನ್ಮಗಳಲ್ಲಿ ನನ್ನ ಪೂಜಿ ಮಾಡಿದ್ದೀರಿ. ಸರ್ವದಾ ಸರ್ವಸಜ್ಜನರುಗಳಿಂದ ಮಾಡಲಿಕ್ಕೆ ತಕ್ಕಂಥ ಸೇವಿ, ತ್ರಿಕರಣಪೂರ್ವಕ ಶುದ್ಧವಾದಷ್ಟು ಪೂಜಿ ನಾನು ತೆಗೆದುಕೊಂಡೆ. ನಾನು ಅವರಿಗೆ ಪ್ರತ್ಯುಪಕಾರ, ಮುಕ್ತಿ ಕೊಡೋಣವೇ ಸರಿ. ನೀವು ಮಾಡಿದ ಸೇವಿಗೆ ತೃಪ್ತ-ನಾದೆನು. ಮುಕ್ತಿ ಕೊಡೋಣವಾದೀತು. ಹನುಮಂತಗೆ ಮುಕ್ತಿಕೊಡೋಣವೆಂದು ತಿಳೀಬ್ಯಾಡಿ. ಅದೇನು ಕಾರಣವೆಂದಲ್ಲಿ, ಒಂದು ನಿಮಿತ್ತ ಸ್ವಾಭಾವಿಕಭಕ್ತ, ಹ್ಯಾಂಗೆ ಎಂದಲ್ಲಿ ಆತನ ಭಕ್ತಿ ಎಂಥಾದ್ದು, ಮೋಕ್ಷಾದಿ ಪುರುಷಾರ್ಥದಿಂದ ರಹಿತ-ವಾದಂಥಾದ್ದು. ಆದಕಾರಣದಿಂದ ಸ್ವಾಭಾವಿಕ ಭಕ್ತನಾನ. ಈತಗೆ ಸರಿಯಾದಂಥಾ ವರು ಮತ್ತೊಬ್ಬರಿಲ್ಲ ಆದ್ದರಿಂದ ಹನುಮಂತನೆಂದು ವಿಶೇಷತ್ವವದೆ. ಏನುಕಾರಣ ವೆಂದಲ್ಲಿ, ನನ್ನ ಭಕ್ತಿಯಲ್ಲಿ ಜ್ಞಾನದಿಂದ ವರದಿಂದ ಆವೇಶದಿಂದ ರಹಿತವಾದಂಥ ಬಲಾಧಿಕ್ಯದಿಂದ ಸ್ಥಿರದಲ್ಲಿ ಧೈರ್ಯದಲ್ಲಿ ಇವಷ್ಟೂ ಈತಗೆ ಸ್ವಾಭಾವಿಕದಿಂದಲೇ ಬಂದಂಥಾವು. ವರಾವೇಶದಿಂದ ರಹಿತವಾದಂಥಾವು. ಉತ್ತಮತ್ವದಲ್ಲಿ ತೇಜಸ್ಸಿನಲ್ಲಿ ಸುಮತಿಯಲ್ಲಿ ಶಮೆದಮೆಯಲ್ಲಿ ಈತನ ಸಮಾನರಾದವರು ದಾರೂ ಇಲ್ಲ. ಗರುಡ ಶೇಷ ರುದ್ರಾದಿಗಳು ಈತಗೆ ಸಮರಲ್ಲ. ಏನುಕಾರಣವೆಂದಲ್ಲಿ; ಈ ಹನುಮಂತನ ಉತ್ಕೃಷ್ಟಗುಣಗಳ ಐಶೋದಕ್ಕೆ, ಗರುಡ ಶೇಷ ರುದ್ರರು ಸಹಸ್ರಾಂಶದಲ್ಲಿ ಸಮ ಬಾರರು. ಸರ್ವಾಧಿಕಾರಿಗಳಿಗೆ ಉತ್ತಮನಾದ ಪ್ರಯುಕ್ತ ನಾನೇ ಸ್ವಾಮಿಯಾಗಿ ಸತ್ಯಲೋಕಾಧಿಪತ್ಯವು ಕೊಟ್ಟೀನಿ. ಇದೇವೇ ನನ್ನ ಸಹಭೋಗ. ನಾವಿಬ್ಬರೂ ರಾವಣನನ್ನ ಈಗಮಾತ್ರ ಗೆದ್ದವರಲ್ಲ. ಪೂರ್ವದಲ್ಲಿ ರಾವಣ, ಬ್ರಹ್ಮದೇವರ ವರ-ಬಲದಿಂದ ಮೂರು ಲೋಕ ಗೆದ್ದೂ, ಒಂದಾನೊಂದು ಕಾಲದಲ್ಲೂ ಒಬ್ಬಾನೊಬ್ಬ ಪುರುಷನೂ ಗೆಲ್ಲಲಾಗಲಿಲ್ಲ. ಹಾಂಗಾದರೆ ವಾಲಿ, ರಾವಣನ್ನ ಏನುಕಾರಣ ಗೆದ್ದಾ-ನೆಂದರೆ, ಇಂದ ನ ಮಗ ವಾಲಿ, ಕಪಿ. ಇದರ ಹೊರ್ತು ನಾರಾಯಣನ ಆವೇಶ ಇದ್ದದ್ದರಿಂದ ಕೈಸೆರಿಕೊಂಡು ಹೋಗಿ ಅಂಗದನ ತೊಟ್ಟಿಲಿಗೆ ಕಟ್ಟಿದ್ದ. ಅಂಗದನ ಕಾಲಪೆಟ್ಟಿನಿಂದ ಹತ್ತುತಲಿ ಹುಳ ಸತ್ತೀತೆಂದು ಬಿಟ್ಟುಕೊಟ್ಟಿದ್ದ. ಬ್ರಹ್ಮದೇವರು ಕಪಿಗಳ ವಿನಾ ಉಳಿದವರನ್ನ ಗೆಲ್ಲು ಎಂದು ವರವು ಕೊಟ್ಟಿದ್ದ. ಹಾಂಗಾದರೆ ಕಾರ್ತ-ವೀರ್ಯಾರ್ಜುನ ಏನುಕಾರಣ ಗೆದ್ದ ಎಂದರೆ, ಈತಗೂ ನಾರಾಯಣನ ವರಾವೇಶ ಇದ್ದದ್ದರಿಂದ ರಾವಣನ ಹಿಡಕೊಂಡು ಹೋಗಿದ್ದ. ವಿಶ್ರವಸನು ತನ್ನ ಮಗನ ಬಿಡಿಸಿಕೊಂಡು ಹೋಗಿದ್ದ. ಬ್ರಹ್ಮರಾಯನು ಮನುಷ್ಯ ಕಪಿ ವ್ಯತಿರಿಕ್ತ ಸರ್ವರನ್ನೂ

ಗೆಲ್ಲು ಎಂದು ವರವು ಕೊಟ್ಟಿದ್ದ. ಆದ್ದರಿಂದ ಕಾರ್ತವೀರ್ಯಾರ್ಜುನ ರಾವಣನ್ನ ಗೆದ್ದಿದ್ದ. ಹಾಂಗಾದರೆ ನನ್ನಿಂದ ಹ್ಯಾಂಗೆ ಸೋತ ಎಂದಲ್ಲಿ, ನಾನು ಬ್ರಹ್ಮದೇವರ ತಿರಸ್ಕಾರ ಮಾಡಿ ಯುದ್ಧಾರ್ಥವಾಗಿ ಬಲಿಚಕ್ರೇಶ್ವರನ ಕುರಿತು ಬಂದಂಥ ರಾವಣನ್ನ ಗೆದ್ದೆ, ನನ್ನ ಅತಿಸಾಮರ್ಥ್ಯ, ವರವು ಇದ್ದ ಕಾರಣದಿಂದ.' ಇದನ್ನೇ ಸ್ಪಷ್ಟವಾಡಿ ಹೇಳಥಾರೆ. ' ಪೂರ್ವದಲ್ಲಿ ಬಲಿಚಕ್ರೇಶ್ವರನಿಗೆ, ನಿನ್ನ ದ್ವಾರಪಾಲಕನಾಗಿರಥೀನಿ ' ಎಂದು ನನ್ನಿಂದ ವರವು ಕೊಡಲ್ಪಟ್ಟಿತ್ತು. ಆದ್ದರಿಂದ ದ್ವಾರಪಾಲಕನಾಗಿದ್ದೀನಿ. ರಾಕ್ಷಸನಾದ ರಾವಣನ್ನ ಪಾದಾಂಗುಟದಿಂದ ಚಿಮ್ಮಲಿಕ್ಕೆ ಹತ್ತುಸಹಸ್ರ ಯೋಜನ ಹೋಗಿ ಬಿದ್ದ. ಪುನಃ ನನ್ನ ಯುದ್ಧಕ್ಕೆ ಕರೆಯಲಿಕ್ಕೆ, ಕಪಿಲನಾಮಕನಾದಂಥ ನಾನು, ಒಂದೇ ಮುಷ್ಟಿಪೆಟ್ಟಿನಿಂದ ಭೂತಳದಲ್ಲಿ ಕೆಡಹಿದೆನು. ನನ್ನ ಮಗನಾದ ವಾಯುವೂ ಮೂರುಕೋಟಿ ರೂಪವುಳ್ಳವ, ರಾವಣನನ್ನ ಗೆದ್ದಾನೆ. ಈ ಕಾರಣ ದಿಂದ ನಾವಿಬ್ಬರೂ ಸ್ವಭಾವದಿಂದ ಬಲವಂತರು. ಹಾಂಗಾದರೆ ರಾವಣ ಕೈಲಾಸ ಪರ್ವತ ಕಿತ್ತುವಾಗ್ಗೆ ರಾವಣನ್ನ, ರುದ್ರ ಹ್ಯಾಂಗೆ ಗೆದ್ದ ಎಂದಲ್ಲಿ, ರಾವಣ ಲಂಕಾ ದಿಂದ ಕೈಲಾಸಕ್ಕೆ ಶಿವಪೂಜೆಗೆ ಒರಬೇಕಾಗತದೆಂದು, ಪರ್ವತ ಲಂಕೆಗೆ ಒಯ್ಯ-ಬೇಕೆಂದು ಕಿತ್ತು ತರಲಿಕ್ಕೆ, ನನಗೆ ರುದ್ರನು ಶರಣುಬಂದನು. ನನ್ನ ವರದ ದೆಸಿಯಿಂದ ರಾವಣನ್ನ ಗೆದ್ದನು. ನನ್ನಿಂದ ರುದ್ರಗೆ ಏನುಕಾರಣ ವರವು ಕೊಡಲ್ಪಟ್ಟಿತು ಎಂದಲ್ಲಿ, ದೇವತೆಗಳಿಂದ ಸಹ ರಾವಣನ್ನ ಗೆಲ್ಲೋಣವಾಗದ ಪ್ರಯುಕ್ತ, ಗೆಲ್ಲೋದರ ನಿಮಿತ್ತ ನನ್ನನ್ನು ವರವು ಬೇಡಿದ್ದರಿಂದ, ನನ್ನ ವರದ ದೆಸಿಯಿಂದ ರಾವಣನ್ನ ಗೆದ್ದನು.

' ನಾನು ವಾಯುದೇವರು ಸ್ವಭಾವಬಲವುಳ್ಳವರು. ವಾಯುದೇವರೇ ಹನು-ಮಂತನಾಗಿ ಅವತರಿಸ್ಯಾನೆ. ವಾಯುದೇವರ ದೆಸಿಯಿಂದ ರುದ್ರ ಇಂದ್ರಾದಿ ದೇವತಿ ಗಳು, ಕಾಷ್ಠದೋಪಾದಿ ಜಡರಾದರು. ಅದು ಹ್ಯಾಂಗೆ ಎಂದಲ್ಲಿ, ಅಂಜನಾದ್ರಿಯಲ್ಲಿ ಹನುಮಂತ ಅಂಜನಾದೇವಿಯಲ್ಲಿ ಹುಟ್ಟಲಿಕ್ಕೆ, ಬಾಲಕಗೆ ಸ್ತನ್ಯಪಾನ ಸಾಲದ ಕಾರಣ ಅಂಜನಾದೇವಿ ಫಲ ತರಲಿಕ್ಕೆ ವನಕ್ಕೆ ಹೋದಳು. ಸೂರ್ಯಗ್ರಹಣ ಬಂತು— ಗ್ರಂಥಾಂತರದಲ್ಲಿ ಸೂರ್ಯನನ್ನು, ಹನುಮಂತ ಹಣ್ಣೆಂದು ಲಕ್ಷಯೋಜನದ ಮ್ಯಾಲೆ ಹಾರಿದನೆಂದು ಹೇಳಿದೆ. ಹಾಂಗಲ್ಲ—ಸಜ್ಜನರಿಗೆ ನಿರ್ಬಂಧ ಆದಕಾರಣ ಬಂದಂಥ ಅರಿಷ್ಟ ಪರಿಹರಿಸಬೇಕಾಗಿ ಇಪ್ಪತ್ತೇಳು ದಿವಸದ ಬಾಲಕ, ಲಕ್ಷಯೋಜನ ಮ್ಯಾಲೆ ಹಾರಿ ರಾಹುವನ್ನ ಕೊಂಡೇನಂತ ಹೋದ. ರಾಹು ಇಂದ್ರನ ಬೆನ್ನುಬಿದ್ದ. ದೇವೇಂದ್ರ ವಿಚಾರ ಮಾಡದೆ ಹನುಮಂತನ ಮ್ಯಾಲೆ ವಜ್ರಾಯುಧ ಬಿಟ್ಟ. ಹನುಮಂತ ಮೂರ್ಛಿಯೋಪಾದಿ ಬಿದ್ದನು. ತನ್ನ ಮಗ ಬಿದ್ದನೆಂದು ವಾಯು-ದೇವರು ತನ್ನ ತೊಡಿಮ್ಯಾಲೆ ಕೂಡ್ರಿಸಿಕೊಂಡು ಸಮಸ್ತ ಪ್ರಾಣಿಗಳ ಶ್ವಾಸೋ-ಚ್ಛ್ವಾಸ ಎಳಕೊಂಡನು. ರುದ್ರಾದಿಗಳು ಕಾಷ್ಠಸದೃಶ ದೇಹವುಳ್ಳವರಾದರು.

ಬ್ರಹ್ಮ ವಾಯು ಸಮೀಪಕ್ಕೆ ಬಂದು ಬಹಳವಾಗಿ ಬೇಡಿಕೊಂಡು, ಸವಿಾಧಾನ ಮಾಡಿ ಮಕ್ಕಳು ಅನ್ಯಾಯ ಮಾಡಿದರೆ ಹಿರೇರಾದವರು ಕ್ಷಮಿಸಬೇಕೆಂದು ಕೇಳಿಕೊಳ್ಳಲಿಕ್ಕೆ, ಹನುಮಂತಗೆ ವಜ್ರಾಯುಧದಿಂದ ಏನೂ ಆಗಲಿಲ್ಲ. ಗಲ್ಲದಮ್ಯಾಲೆ ಈಡ್ಯಾಡಲಿಕ್ಕೆ ತುಟಿ ಸಹ ಸೀಳಲಿಲ್ಲ. ಆದ್ದರಿಂದ **ಹನುಮಂತ**ನೆಂದು ಬ್ರಹ್ಮರಾಯ ನಾಮಕರಣ ಮಾಡಿದನು. ಆದಕಾರಣದಿಂದ ಸರ್ವ ಅಧಿಕಾರಿಗಳೊಳಗೆ ಉತ್ತಮನಾದ ಕಾರಣದಿಂದ ಬ್ರಹ್ಮಪದವಿಯನ್ನು ಐದಲಿ. ಅಲ್ಲಿ ಇದ್ದು ನನ್ನ ಆಜ್ಞೆ ಸೃಷ್ಟಿ ಸಂರಕ್ಷಣಾದಿ ಕರ್ಮಗಳು, ಹಾಂಗೆ ಮೋಕ್ಷಾಧಿಕಾರಿಗಳಾದ ಯೋಗ್ಯ ಜನಕ್ಕೆ ಮುಕ್ತಿ ಕೊಟ್ಟು ತಾನೂ ಮುಕ್ತನಾಗಿ ತನ್ನಿಂದ ಸಹಿತರಾದಂಥ ಮುಕ್ತರಿಗೆ ಸುಖಬಡಿಸಿಕೊಳತ ಇರಲಿ. ಹನುಮಂತನ ಸೇವಿಯಿಂದ ತೃಪ್ತನಾಗಿ ಸಹಭೋಜನ ಕೊಟ್ಟೀನಿ' ಎಂದನು. ಹೀಂಗೆ ಪುರಾಣಗಳಲ್ಲಿ ಹೇಳೀದೆ. ಬ್ರಹ್ಮಪದವಿ ಕೊಟ್ಟ ಎಂದರೆ, ಸಹಭೋಜನಕ್ಕೆ ವಿರೋಧ ಬಂತಲ್ಲ ಎಂದಲ್ಲಿ, ಸಹಭೋಜನ ಶಬ್ದಾರ್ಥ ಬ್ರಹ್ಮಪದವಿಗೆ ಹೇಳಥಾರೆ. 'ನನಗೆ ಏನು ಅನುಭೋಗಗಳವೆ ಅವಷ್ಟೂ ಉತ್ಪತ್ತಿ ನಾಶರಹಿತವಾದಂಥಾವು. ಈ ಜಗದ್ವಿಷಯದಲ್ಲಿ, ಏನು ವ್ಯಾಪಾರ ಸಮೂಹಗಳು ಸತ್ಯಲೋಕ ಹಾಂಗೆ ಮುಕ್ತಿಯಲ್ಲಿ ಅವೆ, ಇವಿಷ್ಟೂ ಬ್ರಹ್ಮವೆ. ಈ ಕಾರಣದಿಂದ ಬ್ರಹ್ಮಪದವಿಗೆ ಸಹಭೋಜನ ನಾವುವದೆ. ಎಲೈ ಹನುಮಂತನೇ! ಏತಾದೃಶವಾದಂಥ ನನ್ನ ಸಹಭೋಜನವು ನಿನಗೆ ನನ್ನಿಂದ ಕೊಡಲ್ಪಟ್ಟಿತು, ಸಂಸಾರದಲ್ಲಿ ಮುಕ್ತಿಯಲ್ಲಿ ಕೊಡಲ್ಪಟ್ಟಿತು.'

ಈ ಪ್ರಕಾರ ರಾಮದೇವರು ಮಾತನಾಡಲಿಕ್ಕೆ ಮತ್ತೆ ಹನುಮಂತ ನಮಸ್ಕಾರ ಮಾಡಿ ಎರಡೂ ಕೈಗಳ ಮುಗಿದು ನಮ್ರತೆಯಿಂದ ಸ್ಥಿರವಾದಂಥ ಭಕ್ತಿಯಿಂದ ಮಾತನಾಡಥಾನೆ. 'ಎಲೈ ಸ್ವಾಮಿಯೇ! ನಿನ್ನ ಪಾದಕಮಲ ಸುಗಂಧವನ್ನು ಭೋಜನ ಮಾಡುವವರಿಗೆ, ಧರ್ಮ ಅರ್ಥ ಕಾಮ ಮೋಕ್ಷ ಈ ನಾಲ್ಕು ಪುರುಷಾರ್ಥಗಳೊಳಗೆ ದುರ್ಲಭವಾದುದು ದಾವುದೂ ಅಲ್ಲ. ಹೇ ಭೂಮನ್! ಎಲೈ ಪರಿಪೂರ್ಣನೇ! ಸರ್ವ ಪುರುಷಾರ್ಥವೂ ಸುಲಭವೆ. ನಿನ್ನ ಪಾದಕಮಲದಲ್ಲಿ ಸೇವಿಯಿನಾ ಇನ್ನೊಂದು ಪುರುಷಾರ್ಥ ಬೇಡಿಕೊಂಬುವನಲ್ಲ. ನೀ ಎಂಥಾತ! ಅನುಪಚಾರದಿಂದ ಪರವು ಸ್ವತಂತ್ರನು. ಉತ್ಕೃಷ್ಟಶಕ್ತಿಯೂ ನೀನೇವೆ. ರವಾಬ್ರಹ್ಮಾದಿಗಳಿಗೆ ನಿನ್ನ ಗುಣಗಳ ಎಣಿಸಲಿಕ್ಕೆ ಶಕ್ತಿ ಇಲ್ಲದ ಗುಣಸಮುದ್ರನು ನೀನೇವೆ' ರವಾ ಬ್ರಹ್ಮಾದಿಗಳಿಂದ ಅನ್ಯಗುಣಾರ್ಣವ ಎಂಬೋದೆ ಸ್ಪಷ್ಟವಾಡಥಾರೆ. 'ರವಾಬ್ರಹ್ಮರುದ್ರಾದಿಗಳು ನಿನ್ನ ಗುಣಗಳ ವರ್ಣಿಸಿದ ಕಾಲಕ್ಕೂ ಅನಂತಾನಂತ ಕಾಲಕ್ಕೂ ಕೊನೀ ಐದೋದಿಲ್ಲ. ಆದಕಾರಣ, ನೀನು ಪರಿಪೂರ್ಣ ಸುಜ್ಞಾನಸ್ವರೂಪನಾದಂಥಾತ. ಹಾಂಗೆ ಸರ್ವದಾ ನಿರ್ದೋಷಗುಣಾರ್ಣವ. ತನ್ನಿಮಿತ್ತವಾಗಿ ನಿನ್ನ ಭಕ್ತಿಯೇ ಸರ್ವಜನರಿಗೆ ಜೀವನಫಲ. ದಾವ ಪುರುಷನು ಸರ್ವದಾ

ನಿನ್ನ ಗುಣ, ಕ್ರಮದಿಂದ ಯುಕ್ತವಾದಂಥ ಕಥಾಶ್ರವಣವನ್ನು ಕೇಳಥಾನೋ ಸದಾ ನಿನ್ನ ಪಾದದಲ್ಲಿ ರತಿ ದಾವಾತಗೋ ಅವ, ಅಚಲಭಕ್ತಿ ಇದ್ದವ. ಏತಾದೃಶನಾದಂಥ ಪುರುಷನೇ ಲೋಕದಲ್ಲಿ ಬದುಕಿದವ. ಜೀವನಕ್ಕೆ ಫಲ ಇದೇವೆ. ಇದು ಬಿಟ್ಟು ಅನ್ಯ ಕಥಿಗಳ ಕೇಳೋಣವಲ್ಲ. ನೂರು ವರ್ಷ ಬದುಕಲ್ಯಾಕೆ, ಅವನ ಜನ್ಮ ವ್ಯರ್ಥ. ಇದರಿಂದ ಅನ್ಯಕಥಿಗಳ ಕೇಳೋಣವಾಗಬ್ಯಾಡ. ಒಮ್ಮೆನ್ನೊಮ್ಮೆಗೂ ನಿನ್ನಲ್ಲಿ ಭಕ್ತಿ ಇಲ್ಲದೆ, ದ್ರವ್ಯಸಂಪತ್ತಿನಿಂದ ಬದುಕೋಣವಾಗಬ್ಯಾಡ. ಜೀವನ ಇದ್ದದ್ದಕ್ಕೆ ನಿಷ್ಫಲಂಕತ್ವದಿಂದ ಇರಬೇಕು. ಆದಕಾರಣದಿಂದ ಸರ್ವಪುರುಷಾರ್ಥ-ಗಳಿಂಲಗೂ ಆ ಜೀವನವೇ ಅಧಿಕವಾದಂಥಾದ್ದು. ಅಂಥಾ ಜೀವನವೇ ನನಗಿರಲಿ. ಅದನ್ನೇ ಬೇಡಿಕೊಳ್ಳಥೀನಿ. ಹೇ ಈಶಾ! ಎಲೈ ಸ್ವಾಮಿಯೇ! ನನಗೆ ನಿನ್ನಲ್ಲಿ ಭಕ್ತಿಯು ಕ್ಷಣಪ್ರತಿಕ್ಷಣದಲಿ ಅಭಿವೃದ್ಧವಾಗಲಿ. ಮುಕ್ತಿಪರಿಯಂತರ ಹ್ರಾಸವಾಗೋಣ ಬ್ಯಾಡ. ಹ್ರಾಸಕ್ಕೆ ಕಾರಣ ದಾವದು ಎಂದರೆ, ನಿಷಿದ್ಧ ರಾಗಾದಿ ದೋಷಗಳು. ಅವುಗಳಿಂದ ವರ್ಜಿತವಾಗಿ ಅಭಿವೃದ್ಧವಾಗಲಿ. ನಿರುಪಾಧಿಕವಾದಂಥ ಹ್ರಾಸದಿಂದ ವರ್ಜಿತವಾದಂಥ ಭಕ್ತಿ ಹಾಂಗೆ ಅನುಗ್ರಹ, ಈ ಎರಡು ಸರ್ವ ಪುರುಷಾರ್ಥ.' ಹೀಂಗೆಂದು ಹನುಮಂತ ಪ್ರಾರ್ಥನ ಮಾಡಲಾಗಿ, ಶ್ರೀರಾಮ-

---

ದೇವರು ಹನುಮಂತಗೆ ಭಕ್ತಿ ಅನುಗ್ರಹ ಎರಡೂ ಕೊಟ್ಟನು. ಹಾಂಗೆ ಬ್ರಹ್ಮ-ಪದವಿಯಲ್ಲಿ ಇದ್ದಂಥ ಭೋಗಾದಿ ಸಕಲ ಶೋಭನವನ್ನೂ ಕೊಟ್ಟನು. ತರುವಾಯ ಅತ್ಯಂತ ದಯಾಸಮುದ್ರಾಂತಃಕರಣದಿಂದ ಹನುಮಂತನ್ನ ಅಪ್ಪಿಕೊಂಡನು.

ಯತ್ರಯತ್ರ ರಘುನಾಥಕೀರ್ತನಂ
ತತ್ರತತ್ರಕೃತವಸ್ತಕಾಂಜಲಿಮ್ ।
ಭಾಷ್ಪವಾರಿ ಪರಿಪೂರ್ಣಲೋಚನಂ
ಭಾವಯಾಮಿ ಪವಮಾನನಂದನಮ್ ॥

ರಾಮಕಥಿಯಾಗಲಿಕ್ಕೆ, ಹನುಮಂತ ಎರಡೂ ಕೈಗಳ ಮುಗಿದುಕೊಂಡು ಆನಂದಬಾಷ್ಪಗಳ ಉದರಿಸತ ಕಥಿ ಕೇಳಥಾನೆ. ಕಿಂಪುರುಷಖಂಡದಲ್ಲಿ ರಾಮಕಥೆ ತಾನು ಹೇಳಥಾನೆ. ನಿರ್ವ್ಯಾಜ ನಿಶ್ಚಯ ಭಕ್ತಿಯುಳ್ಳಂಥ ಸ್ವಾಮೀ ವಿಷಯಕ ಜ್ಞಾನ ಭಕ್ತಿ ಮಾಡಥಾನೆ. ಇಂಥಾ ಹನುಮಂತದೇವರ ಮ್ಯಾಲೆ ಸ್ವಾಮಿ ತಾನು ಅನುಗ್ರಹ ಮಾಡಿದನು. ಅನಂತರದಲ್ಲಿ ಸುಗ್ರೀವ ಮೊದಲಾದ ಸಮಸ್ತ ಕಪಿಗಳಿಗೆ ಅವರವರಿಗೆ ತಕ್ಕ ಬಹುಮಾನ ಮಾಡಿದನು. ಭಕ್ತರು ಸ್ವಾಮಿ ಕೈಯ ಆದರಿಸಿ-ಕೊಂಡರು ಎಂಬಲ್ಲಿಗೆ, ಶ್ರೀಮದಾಚಾರ್ಯರು ಹೇಳಿದ ಶ್ರೀಮನ್ಮಹಾಭಾರತ-ತಾತ್ಪರ್ಯನಿರ್ಣಯವನ್ನು ಪ್ರಾಕೃತದಿಂದ ವಿವರಿಸುವ 'ಶ್ರೀರಾಮಚರಿತೇ ಪುನ-ರಯೋಧ್ಯಾಪ್ರವೇಶಃ (ಯುದ್ಧಕಾಂಡ ಕಥಾನಿರೂಪಣಂ)' ಎಂಬ ಎಂಟನೇ ಅಧ್ಯಾಯವು ಸಂಪೂರ್ಣವು.

ಶ್ರೀ ಮಧ್ವೇಶಾರ್ಪಣಮಸ್ತು

ಅಧ್ಯಾಯ ೯

ಶ್ರೀರಾಮಚರಿತೇ ಉತ್ತರಕಾಂಡಕಥಾ ನಿರೂಪಣಂ
(ಶ್ರೀರಾಮ ಸ್ವಧಾಮ ಪ್ರವೇಶಃ)

ಈ ಒಂಭತ್ತನೇ ಅಧ್ಯಾಯದಲ್ಲಿ ಉತ್ತರಕಾಂಡದ ಕಥ ತಾತ್ಪರ್ಯಪೂರ್ವಕ ಶ್ರೀಮದಾಚಾರ್ಯರು, ಮೂಲರಾಮಾಯಣ ಬಲ್ಲವರಾದಕಾರಣ ಹೇಳಥಾರೆ.

ರಾಜ್ಯ ಪ್ರಾಪ್ತಿಯಾದ ತರುವಾಯ ಅವ್ಯಾಹತಷಡ್ಗುಣೈಶ್ವರ್ಯಸಂಪನ್ನ ನಾದಂಥ ಶ್ರೀರಾಮದೇವರು ಲಕ್ಷ್ಮಣನಕೂಡ ಮಾತನಾಡಥಾನೆ. 'ನೀನು ಪ್ರಧಾನಿಪಟ್ಟ ಆಳು' ಎನಲಿಕ್ಕೆ, ಲಕ್ಷ್ಮಣ ಅಣ್ಣನಾದಂಥ ರಘುವರ್ಯನಕೂಡ ಮಾತನಾಡಥಾನೆ 'ನಿನ್ನ ಪಾದಾರವಿಂದದ ಸೇವಿ ವಿನಾ ಮತ್ತೊಂದು ಪುರುಷಾರ್ಥ ಸ್ವೀಕಾರ ಮಾಡವಲ್ಲೆ. ನನಗೆ ನಿನ್ನ ಪಾದಸೇವಿಯಲ್ಲಿ ಅತ್ಯಂತವಾಗಿ ಮನಸ್ಸು ಆಗೋಹಾಂಗೆ ಮಾಡು. ನಿನ್ನ ಸೇವಿ ಹೊರ್ತು ಮತ್ತೊಂದು ಸೇವಿ 'ನಿರೂಪಿಸಿ-ಕೊಂಬೋಲ್ಲಿ ಶಕ್ತನಾಗೋದಿಲ್ಲ. ಇಂಥಾ ಅನುಗ್ರಹಮಾಡು. ಒಬ್ಬಾನೊಬ್ಬ ಪುರುಷರುಗಳಲ್ಲಿ ಒಮ್ಮಿನ್ನೊಮ್ಮಿಗೂ ಅನುಗ್ರಹ ಆಗೋಣ ಇಲ್ಲ. ಆದಕಾರಣ ನನ್ನ ಮ್ಯಾಲೆ ಪರಮಾನುಗ್ರಹ ಮಾಡಿ ಸರ್ವದಾ ನಿನ್ನ ಪಾದಸೇವಿ ಕೊಡು' ಎನಲಿಕ್ಕೆ, ರಾಮದೇವರು ತನ್ನ ಪಾದಸೇವಿ ಕೊಟ್ಟು ಚೆನ್ನಾಗಿ ಅಪ್ಪಿಕೊಂಡನು. ಸಮರ್ಥ ನಾದಂಥ ರಾಘವನು ಯುವರಾಜ್ಯ ಪಾರುಪತ್ಯದಲ್ಲಿ ಭರತನ್ನ ಇಟ್ಟು, ಸಮಸ್ತ ಧರ್ಮಗಳಿಂದ ರಾಜ್ಯಪ್ರತಿಪಾಲನ ಮಾಡಿದನು.

ರಾಮದೇವರು ರಾಜ್ಯ ಪಾರುಪತ್ಯ ಮಾಡತಾ ಇರಲಾಗಿ, ಭೂಮಿಯು ಗುಣಾಧಿಕವಿಷಯಗಳಲ್ಲಿ ಸತ್ಯಲೋಕ ಸದೃಶವಾಯಿತು. ಸಮಸ್ತ ಜನರು ನಾರಾಯಣಪರಾಯಣರಾದರು. ಒಬ್ಬಾನೊಬ್ಬ ಪುರುಷನೂ ವರ್ಣಾಶ್ರಮಕ್ಕೆ ಹಾಸಿಬಾರದಹಾಂಗೆ ನಡದನು. ಸಮಸ್ತ ಪ್ರಾಣಿಗಳೂ ತಮ್ಮ ತಮ್ಮ ಯೋಗ್ಯತಾನು-ಸಾರದಿಂದ ಉತ್ತಮರು, ಜ್ಞಾನಭಕ್ತಿವೈರಾಗ್ಯಾದಿ ಗುಣಗಳಿಂದ ಯುಕ್ತರಾದರು. ಸರ್ವಲೋಗರು ಜ್ವರ, ಮಂಡೆಶೂಲೆ ಮೊದಲಾದ ಸಮಸ್ತ ರೋಗಗಳಿಂದ ರಹಿತ ರಾದರು. ತ್ರೇತಾಯುಗದಲ್ಲಿ ಮುನ್ನೂರು ವರುಷ ಆಯುಷ್ಯವಾದರೆ, ಸರ್ವರೂ ಸಹಸ್ರವರುಷ ಆಯುಷ್ಯವುಳ್ಳವರಾದರು. ಬಹುದಿವಸ ಬದುಕಿದರು. ದರಿದ್ರ ರಾಗಿದ್ದಿಲ್ಲ, ಧನಧಾನ್ಯಸಮೃದ್ಧಿಯುಳ್ಳವರಾಗಿದ್ದರು. ಸಮಸ್ತರೂ ಮುಪ್ಪಿನಿಂದ ರಹಿತರಾದರು. ಯಾವಜ್ಜೀವಪರಿಯಂತ ಬಲ, ಸಹನ, ಭಕ್ತಿ, ದ್ರವ್ಯಬಲ, ಸ್ವಾಮಿತ್ವತ್ವಬಲ ಈ ಪ್ರಕಾರ ನಿತ್ಯವಾದಂಥ ಬಲಯುತರಾಗಿದ್ದರು. ನ್ಯಾಯದಿಂದ ದ್ರವ್ಯಗಳಿಸಿ, ಧರ್ಮಕ್ಕೆ ವೆಚ್ಚಮಾಡೋರು. ಸರ್ವಾಭೀಷ್ಟಗಳಿಂದ ಪರಿಪೂರ್ಣರಾಗಿ,

ರೋಗಾದಿ ದೋಷಗಳಿಂದ ರಹಿತರಾಗಿಹೋರು. ಬಹಳ ಸುಖದಿಂದ ಇಹೋರು. ಒಬ್ಬಾನೊಬ್ಬನಾದರೂ ಕುರೂಪಿಯಿದ್ದಿಲ್ಲ. ತಮ್ಮ ಕಳಕಾಂತಿಗಳಿಂದ ಪೂರ್ಣರಾಗಿ, ಸಮೀಚೀನರೂಪದಿಂದ ಯುಕ್ತರಾಗಿ, ನಿತ್ಯಮಹೋತ್ಸವದಿಂದ ಬಹಳ ಮಂಗಳಕರವುಳ್ಳವರಾದರು. ಸಮಸ್ತ ಪ್ರಾಣಿಗಳೂ ಮನೋವಾಕ್ಕಾಯಗಳಿಂದ ಸರ್ವದಾ ನಾರಾಯಣ ಸರ್ವೋತ್ತಮನೆಂದು ಪೂಜಿ ಮಾಡತಿಹೋರು. ಮಿಗಿಲಾದ ಬ್ರಹ್ಮಾದಿ ದೇವತಿಗಳನ್ನು ಸರ್ವೋತ್ತಮತ್ವದಿಂದ ಪೂಜಿ ಮಾಡತಿದ್ದಿಲ್ಲ. ಭೂಮಿಯು ಸಮಸ್ತ ಫಲಗಳಿಂದ, ಸೌಂದರ್ಯರತ್ನ, ಬಾಲಕರತ್ನ, ಐಶ್ವರ್ಯರತ್ನಗಳಿಂದ ಪೂರ್ಣವಾಗಿಹೋಳು. ಯಥೇಷ್ಟ ಬೆಳಸು ಭೂಮೀವ್ಯಾಲೆ ಬೆಳೀತಿಹೋದು. ಇಂದಿಗೆ ಹ್ಯಾಂಗೆ, ನಾಳಿಗೆ ಹ್ಯಾಂಗೆ ಮಾಡಲಿ ಎಂದು ಲೇಶಮಾತ್ರ ಚಿಂತಿ ಮಾಡತಿದ್ದಿಲ್ಲ. ಅಕಳುಗಳು ಯಥೇಷ್ಟ ಕರೀತಿಹೋವು. ಸಮಸ್ತ ಗಂಧಗಳು ಘ್ರಾಣೇಂದ್ರಿಯ ವಿಷಯದಲ್ಲಿ ಅತಿ ಪ್ರಿಯವಾಗಿಹೋವು. ರಾಮ, ರಾಜ್ಯ ಆಳುವಾಗ ಸಮಸ್ತ ರಸಗಳು ರಸನೇಂದ್ರಿಯ ವಿಷಯದಲ್ಲಿ ಮನೋಹರವಾದವು, ಸಮಸ್ತ ಶಬ್ದಗಳೂ ಶ್ರವಣೇಂದ್ರಿಯ ವಿಷಯದಲ್ಲಿ ಅತಿ ಪ್ರಿಯವಾದವು, ಸ್ಪರ್ಶಗಳು ಸ್ಪರ್ಶೇಂದ್ರಿಯ ವಿಷಯದಲ್ಲಿ ಅತಿ ಪ್ರಿಯವಾದವು. ದ್ರವ್ಯ ಹೋಗಾಡಿಸಿಕೊಂಡಿದ್ದಿಲ್ಲ. ಒಬ್ಬ ಪುರುಷನಾದರೂ ಅಧರ್ಮದಲ್ಲಿ ರತನಾಗಿದ್ದಿಲ್ಲ, ದುರಾಚಾರವಿದ್ದಿಲ್ಲ. ದಾವ ಪ್ರಾಣಿಗಳೂ ಅಪ್ರತಿಷ್ಠಿತರಾಗಿದ್ದಿಲ್ಲ. ಒಬ್ಬರಾದರೂ ಸಂತಾನರಹಿತರಾಗಿದ್ದಿಲ್ಲ, ದುಷ್ಟಸಂತಾನರಾಗಿದ್ದಿಲ್ಲ. ಋತುಕಾಲದಲ್ಲಿ ಸ್ನಾನಮಾಡಿ ಅಮೋಘವೀರ್ಯದಲ್ಲಿ ಸತ್ಪುತ್ರರ ಪಡೆದವರು. ಅವರು ಎಂಥವರು, ಗುಣಸಂಪತ್ತುಳ್ಳವರು. ಹೆಂಡಿರು ಪಾತಿವ್ರತ್ಯ ಉಳ್ಳವರು. ಕರ್ಕಶೀ ಹೆಂಡತಿ ದಾರಿಗೂ ಇದ್ದಿಲ್ಲ. ಸ್ತ್ರೀಯರುಗಳಿಗೆ ವೈಧವ್ಯವಿದ್ದಿಲ್ಲ. ಪುರುಷರಿಗೆ ಸ್ತ್ರೀವಿಯೋಗವಿದ್ದಿಲ್ಲ. ಒಬ್ಬಾನ್ನೊಬ್ಬ ಪುರುಷನಿಗೆ ಅನಿಷ್ಟವಿದ್ದಿಲ್ಲ. ಅವರು ಮನೋಬಯಕೆ ಮಾಡಿದ್ದಕ್ಕೆ ಹಾನಿಗಳಿದ್ದಿಲ್ಲ. ಸಮಸ್ತ ಪ್ರಾಣಿಗಳು ಪುತ್ರ, ಪೌತ್ರ, ಧನಧಾನ್ಯ ಸಮೃದ್ಧರಾಗಿಹೋರು. ಸ್ತ್ರೀಪುರುಷರಿಗೆ ವಿಯೋಗವಿದ್ದಿಲ್ಲ. ಹಿರೇರ ಮುಂಪೆ ಬಾಲಕರು ಮೃತರಾಗತಿದ್ದಿಲ್ಲ. ಜನಾರ್ದನನು ರಾಜ್ಯಪರಿಪಾಲನಿ ಮಾಡುವಾಗ, ಉತ್ಕೃಷ್ಟ ಧರ್ಮದಿಂದ ರಾಜ್ಯಪರಿಪಾಲನಿ ಮಾಡತಿರಲಾಗಿ, ದಾವ ಪ್ರಾಣಿಗಳೂ ಪ್ರವಾಸಮಾಡಿ ಕಷ್ಟಪಡತಿದ್ದಿಲ್ಲ. ಮಂಚ, ಸುಪ್ಪತ್ತಿಗಿ ಮ್ಯಾಲೆ ಶಯನಿಸಿ ಪರಿಮಳಗಂಧ ಹಚ್ಚಿಕೊಂಡು, ದಿವ್ಯ ಪುಷ್ಪಮಾಲೆಗಳು ಹಾಕಿಕೊಂಡು, ಸ್ತ್ರೀಪುರುಷರು ಯುಕ್ತರಾಗಿಹೋರು. ಪ್ರಾಣಿಮಾತ್ರ ಕದನ್ನ, ಕೆಟ್ಟ ವಸ್ತ್ರದಿಂದ ಇದ್ದಿಲ್ಲ. ಮೃಷ್ಟಾನ್ನ ಉಂಡು ನವನವ ದಿವ್ಯ ವಸ್ತ್ರಗಳ ಉಟ್ಟು ಕೊಂಡು ಸುಖದಿಂದಿಹೋರು. ರಾಮದೇವರು, ಬ್ರಹ್ಮ, ರುದ್ರ, ಇಂದ್ರಾದಿ ದೇವತಿಗಳು, ನಲವತ್ತೊಂಭತ್ತು ಮರುತ್ತುಗಳು, ಸೂರ್ಯ ಚಂದ್ರ ಸಿದ್ಧ ಚಾರಣರು, ಗಂಧರ್ವ ಕಿನ್ನರ ಕಿಂಪುರುಷ ಸಮಸ್ತರೂ, ಅವರವರ ಕಿರೀಟರತ್ನಗಳಿಂದ ಪ್ರಘಟನ

ವಾದಂಥ ಪಾದಪೀಠಗಳುಳ್ಳಂಥಾತನಾಗಿ, ದೇವತಿಗಳು, ಮನುಷ್ಯರು, ವಾನರರ ಸಹದಿಂದ ಪೂಜಿಸಾಡಿಸಿಕೊಳ್ಳಲ್ಪಟ್ಟ ಚರಣವುಳ್ಳವನಾಗಿ, ರಮೇಶ ಕ್ರೀಡಿಸಿದನು.

ಸರ್ವೇಶ್ವರನ ಅನುಸರಿಸಿ ಇಹೋ ಅಂಥಾ ಲಕ್ಷ್ಮಿಯು, ಸೀತಾ ಎಂಬ ನಾಮವುಳ್ಳಾಕೆಯಾಗಿ ಸ್ಮರಮಣನಾದ ರಾಮನ ಕೂಡ ರಮಿಸಿದಳು. ಸೀತಾದೇವಿ ಎಂಥಾಕೆ ಎಂದರೆ, ಹಾವಭಾವ ವಿಲಾಸ ಸುಲಕ್ಷಣಗಳು ಸ್ಥಿರವಾಗಿ ಉಳ್ಳಾಕೆ. ಉತ್ತಮೋತ್ತಮವಾದಂಥ ನಿಜಭಾವಗುಣಗಳಿಂದ ಪೂರ್ಣಳಾದಂಥ ಸೀತಾದೇವಿಯು ಅನೇಕ ಪ್ರಕಾರ ಕ್ರೀಡಿಸಿದಳು. ಸ್ಮರಮಣನಾದರೂ, ಉತ್ತಮನಾದಂಥ ರಾಮದೇವರು ಸೀತಾದೇವಿಯ ಮ್ಯಾಲೆ ಅನುಗ್ರಹಾರ್ಥವಾಗಿ ನಿರಂತರದಲ್ಲಿ ಕ್ರೀಡಿಸಿದನು. ಎಂಥಾತ ಎಂದರೆ, ಸರ್ವದಾ ಉತ್ಕೃಷ್ಟ ಆನಂದಾತಿಶಯದಿಂದ ಪೂರ್ಣಸ್ವರೂಪನಾದಂಥಾತ. ರಘುನಾಥ ಪೂರ್ಣಚಂದ್ರಕಾಂತಿಯಿಂದ, ದೋಷರಹಿತವಾದಂಥ ರಾತ್ರಿಯಲ್ಲಿ ಸುಪುಷ್ಪಗಳಿಂದ ಯುಕ್ತವಾದಂಥ ಅಶೋಕವನದಲ್ಲಿ, ಪ್ರಕಾಶವಾನನಾಗಿ ಅನೇಕ ಪ್ರಕಾರ ಸೀತಾದೇವೇರ ಕೂಡ ಕ್ರೀಡಿಸಿದನು. ಸೀತಾರಾಮರು ಕ್ರೀಡಿಸುವಾಗ, ಸ್ನೇಹಬುದ್ಧಿಯಿಂದ ಸುಸ್ವರವುಳ್ಳಂಥ ಗಂಧರ್ವರು, ಚಾರಣರು, ಅಪ್ಸರಸ್ತ್ರೀಯರಿಂದ ಸಹಿತರಾಗಿ ಗಾನಮಾಡತಿಹೋರು. ದೇವೇಂದ್ರನ ಸಹಿತರಾಗಿ ಮುನಿಗಳು ಸ್ತೋತ್ರಮಾಡತಿಹೋರು. ಸರ್ವದಾ ವಿಸ್ಮರಣದಿಂದ ರಹಿತರಾಗಿ ಅರಸರುಗಳು, ರಾಘವನ ದರ್ಶನಕ್ಕೆ ನಿತ್ಯ ಬಾಹೋರು. ಅಮೋಘ ವೀರ್ಯ ಉಳ್ಳಂಥ ರಘುನಾಥ ಸಮಸ್ತ ಶತ್ರುಗಳ ಗೆದ್ದು ಹದಿಮೂರುಸಾವಿರ ವರುಷ ಏಕಪ್ರಕಾರ ರಾಜ್ಯವಾಳಿದನು. ಲಕ್ಷ್ಮೀಪತಿಯಾದ, ನಿರಂತರ ಸುಖವಾರಿಧಿಯಾದಂಥ, ಸಾಕಲ್ಯದಿಂದ ತಿಳಿಯಲಿಕ್ಕೆ ಶಕ್ಯನಲ್ಲದೆ ಇದ್ದಂಥ ರಾಮದೇವರು, ಸ್ಥಾವರಜಂಗಮ ಜಗತ್ತಿಗೆ ಚಂದ್ರನೋಪಾದಿ ಆನಂದವನ್ನು ಕೊಟ್ಟು, ಈ ಪ್ರಕಾರ ಜಗತ್ತಿಗೆ ಸುಖ ಕೊಡತ ರಾಜ್ಯ ಆಳಲಿಕ್ಕೆ, ಇಂದ್ರ ಹುತಾಶನ ಇಬ್ಬರೂ ಒಂದೇ ಕಾಲದಲ್ಲಿ ಸೀತಾದೇವಿ ಉದರದಲ್ಲಿ ಹುಟ್ಟಿದರು. ಇಂದ್ರನವತಾರ ಕುಶ, ಅಗ್ನಿ ಅವತಾರ ಲವ, ಇಬ್ಬರೂ—ಅವಳೀ ಜವಳಿ—ಬಲವಂತರು, ಗುಣದಿಂದ ಶ್ರೇಷ್ಠರು. ರಾಮನ ಸದೃಶ ಔದಾರ್ಯ ಉಳ್ಳವರು. ಶತ್ರುಘ್ನ ರಾಮಚಂದ್ರಗೆ ಬೇಡಿಕೊಂಡ, 'ನನ್ನ ಕೈಯ ಸೇವಿ ಕೊಂಡು ಕೃತಾರ್ಥನ್ನ ಮಾಡು' ಎಂದಲ್ಲಿ 'ಮಧುನ ಮಗ ಲವಣಾಸುರನ್ನ ಕೊಂದು ಮಧುರಾಪಟ್ಟಣ ಕಟ್ಟಿಸು.' ಕೃಷ್ಣಾವತಾರ ಮಧುರಾದಲ್ಲಿ ತಾನೇ ಮಾಡಾನೆಂದು, ದಿಗ್ವಿಜಯ ಮಾಡಲಿಕ್ಕೆ ಹೋಗೆಂದು ಶತ್ರುಘ್ನಗೆ ತನ್ನ ಬಾಣ ಕೊಟ್ಟನು. ಉಗ್ರಭಯಂಕರವಾದಂಥ ರಾಮಬಾಣದಿಂದ ಲವಣಾಸುರನ್ನ ಸುಟ್ಟು ಭಸ್ಮಮಾಡಿ, ಅದೇ ಸ್ಥಳದಲ್ಲಿ ಶತ್ರುಘ್ನ, ಮಧುರಾಪಟ್ಟಣ ನಿರ್ಮಾಣ ಮಾಡಿಸಿದನು. ಭರತ ಒಂದು ಸೇವಿ ಬೇಡಿಕೊಳ್ಳಲಿಕ್ಕೆ, ಶೈಲುಷ್ಟಗಂಧರ್ವನಿಂದ ಮೂರು ಕೋಟಿ ರಾಕ್ಷಸರು ಹುಟ್ಯಾರೆ, ಅವರನ್ನೆಲ್ಲ ಕೊಂದುಬಿಡೆಂದನು.

ಸ್ವಾಮೀ ಆಜ್ಞೆಯ ಮ್ಯಾಲೆ ಮೂರುಕೋಟಿ ರಾಕ್ಷಸರನ್ನ ಕೊಂದನು. ಅದರ ತರುವಾಯ ಕರ್ಮದ ಫಲ ತನಗೆ ಅಪೇಕ್ಷವಿಲ್ಲದಿದ್ದರೂ, ಸಜ್ಜನರಿಗೆ ಧರ್ಮ-ಶಿಕ್ಷಾರ್ಥವಾಗಿ ಮುಖ್ಯಪ್ರಯೋಗಯುಕ್ತಿಯಿಂದ, ಲೋಕರೀತಿಯಿಂದ, ಯಜ್ಞವನ್ನು ಸ್ವಾಮಿ ತನ್ನ ಕುರಿತು ತಾನೇ ಮಾಡಿಕೊಂಡನು. ತ್ರಿಗುಣಾತ್ಮಕ ದಕ್ಷಿಣೆ ಕೊಟ್ಟು, ಬ್ರಹ್ಮರುದ್ರಾದಿಗಳು ಯಜ್ಞಕಾಲದಲ್ಲಿ ಕೆಲಸಗಳ ಮಾಡತಿಹೋರು. ರಘುನಾಥ ರಾಜ್ಯ ಆಳುವ ಕಾಲದಲ್ಲಿ ಒಬ್ಬ ಶೂದ್ರ ತಲಿ ಕೆಳಗಾಗಿ ಅಗ್ನಿಜ್ವಾಲಿ, ಮುಖಕ್ಕೆ ತಾಕೋಹಾಂಗೆ ತಪಸ್ಸು ಮಾಡಲಿಕ್ಕೆ—ಅಯೋಗ್ಯರು ತಪಸ್ಸು ಮಾಡ ಬಾರದು ಜ್ವಾಲಾಮುಖವಾಗಬಾರದು—ಅದರಿಂದ ಒಬ್ಬ ಬ್ರಾಹ್ಮಣನ ಮಗ ಸತ್ತ. ನೀನು ಅರಸುತನ ಮಾಡಲಿಕ್ಕೆ ಹಿರೇರ ಮುಂದೆ ಬಾಲಕನು ಸತ್ತನೆಂದು, ಬಾಲಕನ ತಂದಿಯು ದುಃಖ ಹೇಳಿಕೊಳ್ಳಲಾಗಿ, ಸ್ವಾಮಿ ಶೂದ್ರನ್ನ ಕೊಂದಾನೆ. ಶೂದ್ರ ದಾರು ಎಂದರೆ, ಪೂರ್ವದಲ್ಲಿ ಜಂಘನಾಮಕ ಅಸುರ, ಪಾರ್ವತೀ ಕುರಿತು ತಪಸ್ಸು ಮಾಡಿ ಕಲ್ಪಪರಿಯಂತರ ಆಯುಷ್ಯ ಪಡಕೊಂಡು, ಶೂದ್ರನಾಗಿ ಹುಟ್ಟಿ ಸಮಸ್ತರನ್ನೂ ಕೊಂದು ಮಹಾರುದ್ರನ ಪದವಿ ಆಳಬೇಕೆಂದು ಇಚ್ಛೆ ಮಾಡಿ, ಕುಬುದ್ಧಿಯಿಂದ ತಪಸ್ಸು ಮಾಡತಿದ್ದ. ಅದಕಾರಣ ತನ್ನ ವ್ಯತಿರಿಕ್ತ ಮತ್ತೊಬ್ಬರಿಂದ

ವ್ಯರಣವಾಗದ ಶೂದ್ರನ ಕೊಂದು, ಬ್ರಾಹ್ಮಣನ ಮಗನ ಬದುಕಿಸಿದನು.

ಸ್ವಾಮಿ ದಿಗ್ವಿಜಯ ಮಾಡತ ಹೋಗಲಿಕ್ಕೆ, ಮಾರ್ಗದಲ್ಲಿ ಶ್ವೇತರಾಯನಿಂದ ಕೊಡಲ್ಪಟ್ಟಂಥ ಮಾಲಿಕೇ, ಅಗಸ್ತ್ಯನ ಕೈಯಿಂದ ಕೊಡಲ್ಪಟ್ಟಂಥಾದ್ದು, ರಾಮದೇವರು ತೆಗೆದುಕೊಂಡನು. ಶ್ವೇತರಾಯ ಮಾಲಿಕೆ ದಾನಮಾಡಲಿಕ್ಕೆ ಕಾರಣವೇನೆಂದರೆ, ಶ್ವೇತರಾಯ ಯಜ್ಞ ಆರಂಭಿಸಿ ಬಂದ ಬ್ರಾಹ್ಮಣರಿಗೆ ಭೋಜನ-ಸಾಮಗ್ರಿಗೂ, ದಕ್ಷಿಣೆಗೂ ದ್ರವ್ಯ ಕೊಡುವ. ಅನ್ನದಾನ ಇಲ್ಲದೆ ಯಜ್ಞ ಮಾಡಿದನು. ಆದ್ದರಿಂದ ಸ್ವರ್ಗದಲ್ಲಿ ದ್ರವ್ಯರಾಶಿಯಮ್ಯಾಲೆ ಕುಳಿತನು. ಸುವರ್ಣ ರತ್ನಮಾಲಿಗಳು ಹಾಕಿಕೊಂಡು, ಹಸಿವಿಯಿಂದ ಪೀಡಿತನಾಗಿ, ಅನ್ನ ಕೊಟ್ಟಿಲ್ಲಾದ ಕಾರಣ, ತನ್ನ ಅಪರಾಧದಿಂದ ತನ್ನ ತೊಡೀಮಾಂಸ ತಾನೇ ತಿನ್ನತಿಹ. ದೇಹಕ್ಕೆ ವ್ಯಥಿ ಬಹಳಾಗೋದು. ತನ್ನ ದುಷ್ಕರ್ಮ ಕಳೆಯಬೇಕೆಂದು, ಸರ್ವಲೋಕಗಳ ತಿರಗತ, ಸತ್ಯಲೋಕಕ್ಕೆ ಹೋಗಿ ಬ್ರಹ್ಮರಾಯನ ಕೇಳಿದ. 'ಕ್ಷುಧದಿಂದ ಬಹಳ ಪೀಡಿತನಾಗೀನಿ. ನನ್ನ ಕ್ಷುಧ ಹ್ಯಾಂಗೆ ಶಾಂತವಾದೀತು?' ಎನಲಿಕ್ಕೆ, 'ಅನ್ನ ಇಲ್ಲದೆ ಯಜ್ಞಮಾಡಿದಿ. ನಿನ್ನ ಕ್ಷುಧನಿವಾರಣಾರ್ಥವಾಗಿ ನಿನ್ನ ಕೊರಳೊಳಗಿನ ಮಾಲಿಕೆ, ಅಗಸ್ತ್ಯನ ಕೈಯಿಂದ ಶ್ರೀರಾಮಗೆ ಕೊಡಿಸು' ಎಂದು ನುಡಿದಂಥ ಬ್ರಹ್ಮರಾಯನ ಅಭಿಪ್ರಾಯ ಹೇಳಥಾರೆ. ಸಾಕ್ಷಾತ್ ಶ್ವೇತರಾಯನ ಕೈಯಿಂದ ಮಾಲಿಕೆ ಕೊಡಿಸಬಾರದೆ ಎಂದರೆ, ರಾಯ ಕ್ಷುದ್ರಬಯಕಿ, ಹಸಿವೀ ಪರಿಹಾರಾರ್ಥವಾಗಿ ಬೇಡಿಕೊಂಡಿದ್ದ. ಆತಗೆ ಅಷ್ಟೇ ಫಲ ಕೊಡಬೇಕು. ಸಾಕ್ಷಾತ್ತಾಗಿ ಕೊಟ್ಟರೆ

ಮಹಾಫಲಕ್ಕೆ ಪಾತ್ರನಾದಾನು. ಅಷ್ಟು ಯೋಗ್ಯತಿ ರಾಯಗಿಲ್ಲ. ಆದಕಾರಣ 'ಅಗಸ್ತ್ಯನ ಕೈಯಿಂದ ಕೊಡಸು' ಎಂದು ಬ್ರಹ್ಮರಾಯ ಆಜ್ಞಾಪಿಸಿದ್ದ. ತನ್ನಿಮಿತ್ತ ಶ್ವೇತರಾಯ ಅಗಸ್ತ್ಯಗೆ ಮಾಲಿಕೆ ಕೊಟ್ಟಿದ್ದ. ದುಷ್ಟಜನಮರ್ದಕನಾದಂಥ ರಾಮ ದೇವರು, ಅಗಸ್ತ್ಯನ ಕರಪಲ್ಲವದಿಂದ ಸಮರ್ಪಿಸಲ್ಪಟ್ಟಂಥ ಮಾಲಿಕೆ, ಈ ಕುಂಭ. ಸಂಭವ ತನ್ನ ಭಕ್ತನೆಂದು ತಿಳಿದು, ಸ್ವೀಕಾರಮಾಡಿದನು. ಶ್ವೇತರಾಯನ ಕ್ಷುಧ ಶಾಂತವಾಯಿತು. ಅಗಸ್ತ್ಯನಿಂದ ಸ್ತೋತ್ರ ಮಾಡಿಸಿಕೊಂಡು ಸ್ವಾಮಿ ಅಯೋಧ್ಯಾ ಪಟ್ಟಣಕ್ಕೆ ಬಂದನು.

ತರುವಾಯ ಕೆಲವು ಅಸುರರು ಸುರಾಣಕರೆಂದು ಪ್ರಸಿದ್ಧರಾಗಿದ್ದರು. ಅವರು ಎಂಥಾವರೆಂದರೆ, ಉತ್ಕೃಷ್ಟವಾದಂಥ ಪ್ರಥಿತಪೌರುಷವುಳ್ಳವರು. ಮಹಾ-ತಪಸ್ಸು ಮಾಡಿ ಬ್ರಹ್ಮದೇವರನ್ನ ಐದಿ ಮಾತನಾಡಿದರು. 'ಹೇ ಉದಾರ ಸದ್ಗುಣಾ! ನಾವು ಭೂಮೀಮ್ಯಾಲೆ ಹುಟ್ಟಿ ಅಪಾರ ಪಾಪಗಳ ಮಾಡೇವು. ಪಾಪದ ಲೇಪ ನಮಗೆ ಆಗೋದು ಬ್ಯಾಡ. ನಿಶ್ಚಯವಾಗಿ ನಮಗೆ ಮೋಕ್ಷ ಆಗಲಿ' ಅಂತ ವರವು ಬೇಡಲಿಕ್ಕೆ, ರಾಕ್ಷಸರು ಆಡಿದಂಥ ಮಾತುಗಳ ಕೇಳಿ, ಸಮರ್ಥನಾದಂಥ ಬ್ರಹ್ಮದೇವರು ಮಾತನಾಡಥಾನೆ. 'ನೀವು ಮಾಡಿದಂಥ

ಬಹಳ ಪಾಪವು, ಎಷ್ಟೊತ್ತು ಪರಿಯಂತರವೂ ಲಕ್ಷ್ಮೀದೇವಿಗೂ ಆಕೆಯ ಪತಿ ಯಾದಂಥ ಸದ್ಗುಣಾರ್ಣವ ನಾರಾಯಣಗೂ ವಿಯೋಗ ತಿಳಿಯುವುದಿಲ್ಲವೋ, ಅಷ್ಟೊತ್ತು ಪರಿಯಂತರ ಪಾಪದ ಲೇಪವಿಲ್ಲ. ಎತಲಾನಿಕೆ, ಲಕ್ಷ್ಮೀನಾರಾಯಣ ರಿಗೆ ವಿಯೋಗ ತಿಳಿದ ಪಕ್ಷವೇ, ನೀವು ಮಾಡಿದಂಥ ಬಹಳ ಪಾಪವು ನಿಮ್ಮ ಮಾರ್ಗಕ್ಕೆ (ಅಪೇಕ್ಷಿತವಾದ ಮೋಕ್ಷಕ್ಕೆ) ವಿರೋಧವಾಗಲಿ.' ಹೀಂಗಂತ ವರವು ಕೊಡಲಿಕ್ಕೆ, ಆ ಅಸುರರು ಈ ಪ್ರಕಾರ ಮಾತನಾಡಿದ್ದು ಕೇಳಿ ಶೀಘ್ರ ಮೋಕ್ಷಕ್ಕೆ ಹೋಗಬೇಕಂತ ಲವಲವಿಕೆಯುಳ್ಳವರಾಗಿ ಮೋಕ್ಷಸಾಧನ ಸಂಪತ್ತು ಇಚ್ಛೆ ಯುಳ್ಳವರಾಗಿ, ರಾಮದೇವರು ರಾಜ್ಯ ಆಳತಿರಲಿಕ್ಕೆ, ಅಯೋಧ್ಯಾಪಟ್ಟಣದ ಸಮೀಪದಲ್ಲಿ ಸುತ್ತಮುತ್ತ ಅಶೇಷರು ಹುಟ್ಟಿದರು. ಆ ಸುರಾಣಕ ದೈತ್ಯರು ಅನಾದಿಕಾಲದಲ್ಲಿ ಮಾಡಿದಂಥ ಪಾಪಸಂಗ್ರಹನಿಮಿತ್ತ ಮೋಕ್ಷಮಾರ್ಗ ಐದೋದಕ್ಕೆ ಯೋಗ್ಯರಲ್ಲಾದ ಕಾರಣ, ಜನಕರಾಯನ ಮಗಳಾದಂಥ ಸೀತಾದೇವಿಯು ಸ್ವ-ಸ್ವರೂಪಭೂತವಾದಂಥ ಮಾಯದಿಂದ ದುರ್ಗಾರೂಪಳಾಗಿ ಮೋಹಿಸಿದಳು, ಮೋಕ್ಷಮಾರ್ಗಚ್ಯುತರನ್ನಾಗಿ ಮಾಡಿದಳು. ಈ ದೈತ್ಯರ ಮನೋಬಯಕೆ ಸ್ವಾಮಿ ತಾ ಬಲ್ಲ. ಸೀತಾಗೆ ಆಜ್ಞಾಪಿಸಿದ 'ಈ ದೈತ್ಯರು ಮೋಕ್ಷ ಇಚ್ಛೈಸಿ ಸಾಧನ-ಸಂಪತ್ತು ಮಾಡಥಾರೆ ಅಯೋಗ್ಯರಿದ್ದಾರೆ. ಇವರ ಜ್ಞಾನ ತಿರಸ್ಕಾರ ಮಾಡು' ಎನಲಿಕ್ಕೆ, ದೇವರ ಆಜ್ಞಾದಿಂದ ದುರ್ಗಾರೂಪಳಾಗಿ ತನ್ನ ಮಾಯದಿಂದ ಮೋಹಿಸಲಿಕ್ಕೆ, ಮಿಥ್ಯಾಜ್ಞಾನಪ್ರಾಪ್ತಿಯಿಂದ ರಾಮದೇವರಲ್ಲಿ ದೋಷಾರೋಪಣೆ

ಮಾಡಿದರು. 'ರಘುನಾಥ, ರಾಕ್ಷಸನಾದಂಥ ರಾವಣನಿಂದ ಅಪಹೃತಳಾದಂಥ ಜಾನಕೀಯನ್ನ ಪುನಃ ಆಳಥಾನೆ' ಎಂದು ಅನೇಕ ಪ್ರಕಾರದಿಂದ ನಿಂದವಾಡ ಹೊಕ್ಕರು. ಹಾಂಗಾದರೆ ಪ್ರಕೃತವೇನು ಎಂದರೆ ಹೇಳಥಾರೆ. ಬ್ರಹ್ಮದೇವರ ವಾಕ್ಯ— 'ಎಷ್ಟು ಹೊತ್ತು ಪರಿಯಂತರವೂ ಲಕ್ಷ್ಮೀನಾರಾಯಣರಿಗೆ ವಿಯೋಗ ತಿಳೋದಿಲ್ಲವೋ' ಎಂಬ ಮಾತು ನಿಶ್ಚಯವಾಡಿ, ಅಸುರಸ್ವಭಾವರಾದಂಥ ಸುರಾಣಕರನ್ನು ಅಂಧಂತವಸ್ಸಿಗೆ ಕೆಡಹಬೇಕಾಗಿ, ನಿರಂತರದಲ್ಲಿ ಸೀತಾದೇವೇರಿಂದ ಯುಕ್ತ ನಾಗಿದ್ದರೂ ರಾಮದೇವರು, ಅಜ್ಞಾನಿಜನಕ್ಕೆ ಹ್ಯಾಂಗೆ ಪ್ರತ್ಯಕ್ಷವಾಗಿ ತೋರೋದೊ ಹಾಂಗೆ, ಸೀತಾದೇವಿಯು, ಹೊರಗೆ ಹಾಕಿದ ಹಾಂಗಾದನು. ಅದೇ ಭ್ರಾಂತಿಯಿಂದ ವಿಯೋಗ ತಿಳದು, ಅಸುರರು ಅಂಧಂತವಸ್ಸನ್ನು ಐದಿದರು.

ಅಜ್ಞಾನಿಗಳಿಗೆ ಪ್ರತ್ಯಕ್ಷವಾಗಿ ತೋರಿದ ಪ್ರಕಾರ ಹೇಳಥಾರೆ. ರಾಮದೇವರು ಜನಕರಾಯನ ಮಗಳಾದಂಥ ಸೀತಾದೇವಿಯನ್ನು, ತಾ ಮಾಡುವ ಯಜ್ಞದ ಬದಿಗೆ ಕರೆದನು. ಆ ಯಜ್ಞಭೂಮಿಯಲ್ಲಿ ನಿಂತು ಶಪಥ ಮಾಡಥಾಳೆ. 'ನಾನು ಎತ್ತ-ಲಾನಿಕೆ ಪರಮೇಷ್ಠಿಳಾಗಿದ್ದೇನೆ, ನನ್ನನ್ನು ಈ ಭೂಮಿ ನುಂಗಲಿ' ಎಂಬ ಶಪಥ-ವ್ಯಾಜದಿಂದ ಅಗ್ನಿಕುಂಡದೊಳಗೆ ಬೀಳಲಿಕ್ಕೆ, ಭೂಮಿ ಒಳಕೊಂಡಳೋ ಎಂಬೋ ಪ್ರಕಾರದಿಂದ ಅಜ್ಞಜನರ ಕಣ್ಣಿಗೆ ಅದೃಶ್ಯಳಾಗಿ, ರಾಮದೇವರ ಸಮೀಪದಲ್ಲೇವೇ ಇದ್ದಳು. ಈ ವಂಚನೆ ಏನುಕಾರಣ ಮಾಡಬೇಕೆಂದರೆ, ಆ ರಾಕ್ಷಸರಿಗೆ ಸಮ್ಯಕ್-ಜ್ಞಾನದಿಂದ ಮೋಕ್ಷವಾದೀತು. ಅಯೋಗ್ಯರಿಗೆ ಸಮ್ಯಕ್‌ಜ್ಞಾನದಿಂದ ಮೋಕ್ಷವಾಗ ಬಾರದು. ಮೋಕ್ಷಮಾರ್ಗಕ್ಕೆ ವಿರೋಧವಾಗಲಿ ಎಂಬ ಬ್ರಹ್ಮರಾಯನ ವಾಕ್ಯ ಸುಳ್ಳಾಗಬಾರದು. ಆದ್ದರಿಂದ, ದೈತ್ಯರಿಗೆ ಅಂಧಂತವಸ್ಸನ್ನು ಪ್ರಾಪ್ತ್ಯರ್ಥವಾಗಿ ಸೀತಾರಾಮರು ಈ ಪ್ರಕಾರ ವಂಚನೆ ಮಾಡಿದರು. ಹಾಗಾದರೆ ಬ್ರಹ್ಮದೇವರ ವಚನ ಸುಳ್ಳಾದಾಕ್ಷಣ ದೋಷವೇನಂದರೆ, ಈ ಪ್ರಕಾರ ನಟನೆ ಏನುಕಾರಣ ಮಾಡ ಬೇಕೆಂದಲ್ಲಿ, ನಾರಾಯಣ ತಾನೇವೆ ಜಗದ್ಗುರುವಾದಂಥ ಬ್ರಹ್ಮರಾಯನ ಹುಟ್ಟಿಸಿದನು. ಆ ಗುರುತ್ವದಿಂದ ಸಜ್ಜನರ ವಿಷಯದಲ್ಲಿ ಬ್ರಹ್ಮದೇವರು ಕೊಟ್ಟಂಥ ವಾಕ್ಯವು ಒಮ್ಮಾನೊಮ್ಮಿಗೂ ಸುಳ್ಳುಮಾಡುವುದಿಲ್ಲ. ಅಸಜ್ಜನರ ವಿಷಯದಲ್ಲಿ ಮೋಕ್ಷವಾಗಲಿ ಎಂದು ವರ ಕೊಟ್ಟಿದ್ದರೆ, ಬ್ರಹ್ಮರಾಯನ ಮಾತು ಸುಳ್ಳು ಮಾಡಥಾನೆ. ಅಸಜ್ಜನರಾದ ಅಸುರರಿಗೆ ಐಹಿಕಫಲ, ಅಜೇಯತ್ವ, ಅವಧ್ಯತ್ವ, ಸಾರ್ವಭೌಮತ್ವವಿಷಯಕವಾದಂಥ ಬ್ರಹ್ಮದೇವರ ಕೆಲವು ವಚನ ಕೆಡಸ್ತಾನೆ, ಕೆಲವು ಮನ್ನಿಸ್ತಾನೆ.

ಐಹಿಕಫಲಕ್ಕೆ ಯೋಗ್ಯರಾದ ಅಸುರರ ಅಹಿತವಿಷಯದಲ್ಲಿ ಬ್ರಹ್ಮರಾಯನ ವಚನ ಏನುಕಾರಣ ಮರೀಥಾನೆಂದರೆ, ಬ್ರಹ್ಮದೇವರಿಗಿಂತಲೂ ತಾ ಉತ್ತಮ ಸರ್ವೋತ್ತಮನೆಂದು ನಿಶ್ಚಯ ತಿಳಿಸಬೇಕಾಗಿ; ಸಮರ್ಥನಾದಂಥ ವಾಯುನೂ

ಬ್ರಹ್ಮದೇವರ ವರ ಮುರೀಥಾನೆ. ಅದೇನುಕಾರಣವೆಂದರೆ ದೇವರ ಆಜ್ಞಾದಿಂದ, ತಾನು ಭಾವಿಬ್ರಹ್ಮನೆಂದು ನಿಶ್ಚಯ ತಿಳಿಸಬೇಕಾಗಿ ಸಮರ್ಥನಾದ ವಾಯುದೇವರೂ ಬ್ರಹ್ಮದೇವರ ವಚನ ಕೆಲವು ಮುರೀಥಾನೆ. ನಾರಾಯಣ, ವಾಯುದೇವರು ಹೊತ್ತು, ಮತ್ತೊಬ್ಬ ಪುರುಷನು ಬ್ರಹ್ಮದೇವರ ವರ, ಶಾಪಗಳು ಒಂದಾನೊಂದು ಕಾಲದಲ್ಲಿ, ಒಂದಾನೊಂದು ದೇಶದಲ್ಲಿ, ಮುರೋ ಅಂಥಾ ಸಮರ್ಥನಿಲ್ಲ. ನಾರಾಯಣ, ವಾಯುದೇವರು ಇಬ್ಬರೂ ಅಯೋಗ್ಯರಿಗೆ ತಕ್ಕ ಫಲ, ಯೋಗ್ಯರಿಗೆ ತಕ್ಕ ಫಲ ಕೊಡಥಾರೆ. ರುದ್ರಾದಿಗಳ ವಚನ ಸುಳ್ಳು ಮಾಡಥಾರೆ. ಕದಾಚಿತ್ ಫಲಕ್ಕೆ ಯೋಗ್ಯರಾಗಿದ್ದರೆ, ಅಧಿಕಾರಾನುಸಾರ ಫಲ ಕೊಟ್ಟು, ಒಂದು ಕಡೇಲಿ ರುದ್ರನ ವರ ಸತ್ಯ ಮಾಡಥಾರೆ. ಅಯೋಗ್ಯಫಲ ಅಪೇಕ್ಷಿಸಿದ್ದರೆ, ಯೋಗ್ಯರಾಗಿದ್ದರೂ ಸುಳ್ಳು ಮಾಡಥಾರೆ. ಒಬ್ಬಾನೊಬ್ಬ ಪುರುಷಗೆ ನಾರಾಯಣನ ವರವು ಒಂದಾನೊಂದು ದೇಶದಲ್ಲಿ, ಒಂದಾನೊಂದು ಕಾಲದಲ್ಲಿ ಸುಳ್ಳು ಆಗೋದಿಲ್ಲ. ನಾರಾಯಣನಿಂದ ಕೊಡಲ್ಪಟ್ಟ ವರವು, ಒಬ್ಬನಿಂದಲೂ ಸುಳ್ಳುಮಾಡೋಣ ವಾಗೋದಿಲ್ಲ. ಮಹಾರುದ್ರ ವೃಕಾಸುರಗೆ ವರವು ಕೊಟ್ಟ. ವರಬಲ ಪರೀಕ್ಷ ಮಾಡೇನೆಂದು ರುದ್ರನ ತಲೀಮ್ಯಾಲೆ ಕೈಯಿಟ್ಟೀನೆಂದು ಬಂದ. ನಾರಾಯಣೇ-

---

ರೂಪದಿಂದ ವೃಕಾಸುರ ಮೋಹಿತನಾಗಿ, ನರ್ತನ ಮಾಡುವಾಗ್ಗೆ, ತನ್ನ ತಲೀ ಮ್ಯಾಲೆ ತನ್ನ ಕೈ ಇಟ್ಟುಕೊಂಡು ಸತ್ತನು. ಸರ್ವದಾ ನಾರಾಯಣನ ರಾಮ-ಕೃಷ್ಣಾದ್ಯವತಾರಗಳು ಇದೇ ನಿಮಿತ್ತವಾಗಿ ಆಗತವೆ. ರುದ್ರನ ವರಭಂಗ ಮಾಡೋದರಗೋಸ್ಕರ, ತನ್ನ ವರವು ಸ್ಥಾಪನಿ ಮಾಡೋ ನಿಮಿತ್ತ ಅವತಾರ ಮಾಡಥಾನೆ. ಆದಕಾರಣದಿಂದ ಪರಲೋಕವಿಷಯಕವಾದಂಥ ಬ್ರಹ್ಮದೇವರ ವಚನ ಸುಳ್ಳುಮಾಡದೆ, ಅದೇ ಪ್ರಕಾರ ನಟನಿ ಮಾಡಿದ್ದು ಮುಗಿಸಿ ತೋರಸಥಾರೆ. ಅವತಾರದಲ್ಲಿ, ಮೂಲದಲ್ಲಿ ಲಕ್ಷ್ಮೀನಾರಾಯಣರಿಗೆ ವಿಯೋಗವಿಲ್ಲ. ಸೀತಾ-ದೇವಿಯು ಲೋಗರ ದೃಷ್ಟಿ ಅನುಸರಿಸಿ ಭೂಮಿಯೊಳಗೆ ಪ್ರವೇಶಮಾಡಿ, ಸೂರ್ಯ-ಪ್ರಭಿಗೆ ಸೂರ್ಯಗೆ ಹ್ಯಾಂಗೆ ವಿಯೋಗವಿಲ್ಲವೋ ಹಾಂಗೆ, ರಾಮನ ವಿಯೋಗ ವಿಲ್ಲದೆ ಸೀತಾದೇವಿ, ತನ್ನ ತುರುಬಿನಿಂದ ಸ್ವಾಮೀ ಪದರಜ ವಾಲ್ಮೈಸತಿಹೋಳು. ಈ ಪ್ರಕಾರ ಸೀತಾದೇವಿಯಿಂದ ಲಾಲಿತವಾದ ಪಾದಪಲ್ಲವಗಳುಳ್ಳ ರಘುನಾಥ, ಪುನಃ ಉತ್ತಮವಾದಂಥ ಅಶ್ವಮೇಧಾದಿ ಯಜ್ಞಗಳ, ಉತ್ತಮ ಕಲ್ಪಗಳಿಂದ ತನ್ನ ಕುರಿತು ತಾನು, ಅರಸರುಗಳ ಶಿಕ್ಷಣಾರ್ಥವಾಗಿ ಮಾಡಿದನು. ತಾನು ಅಕಾಮುಕ ನಾದರೂ ಸೀತಾದೇವೇರ ಮ್ಯಾಲೆ ಅನುಗ್ರಹಾರ್ಥವಾಗಿ ಕ್ರೀಡಿಸಿದನು. ರಾಮಾ-ಯಣದಲ್ಲಿ, ಯಜ್ಞ ಮಾಡುವ ವ್ಯಾಳ್ಯಾದಲ್ಲಿ ಸೀತಾದೇವಿ ಅಗ್ನಿಯೊಳಗೆ ಹೋಗಿದ್ದಳು. ಆದಕಾರಣ ಕುಶಗ್ರಂಥಿಯಿಂದ ಸೀತಾಪ್ರತಿಮಿ ಮಾಡಿ ಅಶ್ವಮೇಧ ಯಜ್ಞ ಮಾಡಿದನೆಂದು ಮೋಹಕ ಕಥ ಹೇಳತದೆ. ಜನಕರಾಯನ ಮಗಳಾದಂಥ

ಸೀತಾದೇವಿಯು ಭೂಮಿ ಪ್ರವೇಶವಾದ ತರುವಾಯ ಏಳುನೂರ ವರುಷ ರಾಮಗೆ ದೃಶ್ಯಳಾಗಿ, ಮಿಗಿಲಾದ ಪ್ರಾಣಿಗಳ್ಗೆ ಅಪ್ರತ್ಯಕ್ಷಳಾಗಿ ಕ್ರೀಡಿಸಿದಳು. ರಾಮಾವತಾರ ಚರಿತ್ರ ವಿಸ್ತಾರದಿಂದ ಹೇಳಿ, ಇನ್ನು ಉಪಸಂಹಾರ ಮಾಡಥಾರೆ.

ದುಷ್ಟಜನಮರ್ದಕನಾದಂಥ ನಾರಾಯಣನ ಅವತಾರಗಳು ಅನಂತ. ಆದಕಾರಣದಿಂದ ಒಬ್ಬಾನೊಬ್ಬ ಪುರುಷನೂ ಮನಸಾ ಸ್ಮರಣೆ ಮಾಡುವುದರಲ್ಲಿ ಶಕ್ತನಾಗುವುದಿಲ್ಲ. ದೇಶತಃ ಕಾಲತಃ ವ್ಯಾಪ್ತಳು ಲಕ್ಷ್ಮೀದೇವಿ, ಸ್ವಾಮೀ ಮಹಿಮಿ ತಿಳೀಲಾರದೆ ಹಿಂದಕ್ಕೆ ಆಗಥಾಳೆ. ಇಂಥಾ ಲಕ್ಷ್ಮೀನಿವಾಸ, ಈ ಭೂಮಿಯನ್ನು ಸತ್ಯಲೋಕಸದೃಶ ಮಾಡಿ, ಏಕಪ್ರಕಾರ ಹದಿಮೂರುಸಾವಿರ ವರುಷ ಅಳುತ್ತಿರ ಲಾಗಿ, ಭೂಮೀಮ್ಯಾಲೆ ಇಂಥಾ ಗುಣಗಳ ನೋಡಿ ದೇವೇಂದ್ರ ಮೊದಲಾದಂಥ ದೇವತಿಗಳು, ಭೂಮಿಯನ್ನು ಅಪೇಕ್ಷಿಸಿ ತಮ್ಮ ಸ್ವರ್ಗಾದಿ ಲೋಕವನ್ನು ದಾರೂ ಅಪೇಕ್ಷಿಸದೆ ಹೋದಾರೆಂದು, ಬ್ರಹ್ಮದೇವರ ಸಮೀಪಕ್ಕೆ ಹೋಗಿ ವಿಜ್ಞಾಪನೆ ಮಾಡಿಕೊಂಡರು. 'ನಮ್ಮ ಸ್ವರ್ಗಾದಿ ಲೋಕವನ್ನು ದಾರೂ ಆದರ ಮಾಡರು. ನಿನ್ನ ಸತ್ಯಲೋಕವನ್ನು ದಾರೂ ಆದರ ಮಾಡರು.' ಈ ರೀತಿ ದೇವತಿಗಳು ಭೂಮಿ ಗುಣಗಳ ಹೇಳಲಿಕ್ಕೆ, ಸ್ವಾಮಿ ಬ್ರಹ್ಮದೇವರು ಕೇಳಿ, ತನ್ನೊಳಗೆ ತಾನು

ವಿಚಾರಮಾಡಿದನು. 'ಸ್ವಾಮೀ ಅವತಾರ ಸಮಾಪ್ತವಾಗಬೇಕಾಗೇದೆ; ರಾವಣಾದಿ ಖಳರ ಕೊಂದು ಭೂಭಾರ ಇಳುಹಿದನು; ಇನ್ನು ಪರಂಧಾಮಕ್ಕೆ ಬರಬೇಕಾಗೇದೆ.' ಈ ರೀತಿ ವಿಚಾರಮಾಡಿ ಬ್ರಹ್ಮದೇವರು, ರಘುನಾಥ ತನ್ನ ಲೋಕಕ್ಕೆ ಬರಬೇಕಾಗಿ ಪ್ರಾರ್ಥನ ಮಾಡೋದರಗೋಸ್ಕರ 'ರಾಮನ ಸಮೀಪಕ್ಕೆ ಹೋಗು' ಎಂದು ರುದ್ರನ ಕಳುಹಿಕೊಟ್ಟನು. ಮಹಾರುದ್ರನು ಸಮರ್ಥನಾದಂಥ ರಘುವರ್ಯನ ಸಮೀಪಕ್ಕೆ ಬಂದು ಸ್ತೋತ್ರ ಮಾಡಿದನು. ಇನ್ನು ಸ್ತೋತ್ರಪ್ರಕಾರ ಹೇಳಥಾರೆ. 'ಸ್ವಾಮಿ ನಿನ್ನ ಕೂಡ ಏಕಾಂತ ಮಾಡಬೇಕಾಗೇದೆ' ಎನ್ನಲು ಒಳಗೆ ದಾರನ್ನೂ ಬಿಡದಂತೆ ಲಕ್ಷ್ಮಣನ್ನ ದ್ವಾರದಲ್ಲಿಟ್ಟು ರಾಮಚಂದ್ರ ರುದ್ರನಕೂಡ ಏಕಾಂತಕ್ಕೆ ಕುಳಿತನು. ಕಾಲಾಭಿಮಾನಿಯಾದಂಥ ರುದ್ರ, ಜಗತ್ಸೃಷ್ಟಿಸುವಂಥ ಬ್ರಹ್ಮನ ಮಾತು ಹೇಳಥಾನೆ. "ತಮ್ಮ ಲೋಕಗಳ ನೋಡಲಿಕ್ಕೆ ಭೂಮಿಯು ಗುಣಗಳಿಂದ ವಿಶೇಷವಾಯಿತು. ಇದರಿಂದ ತಮ್ಮತಮ್ಮ ಲೋಕಗಳಿಗೆ ಹೆಚ್ಚಿಗಿ ಬಯಸದ್ದರಿಂದ, ಬ್ರಹ್ಮದೇವರು ದೇವತಿಗಳಿಂದ ಸಹಿತನಾಗಿ ನಿನ್ನನ್ನು ಪ್ರಾರ್ಥನ ಮಾಡಥಾನೆ. ನಿನ್ನ ಪ್ರಾರ್ಥನೆಯಿಂದ ನನಗೆ ಏನು ಪ್ರಯೋಜನವೆಂದೀ, ಕಮಲ-ಸಂಭವ ನಿನ್ನ ಮಗ, ನಾನು ಆತನ ಮಗ, ಆದ್ದರಿಂದ ನಾ ನಿನ್ನ ಮೊಮ್ಮಗ. ಸಣ್ಣವನಾಡಿದ ಮಾತು ಎತಲಾನಿಕೆ ಅಯೋಗ್ಯವಾಗಿತ್ತೆ, ಹ್ಯಾಂಗಾದರೂ ಸರಿಯೆ, ಗುಣಾಧಿಕರಾದಂಥವರು ಸಂಭಾವಿಸಥಾರೆ. ಆದಕಾರಣದಿಂದ 'ಈ ಭೂಲೋಕ ಬಿಟ್ಟು ಪರಂಧಾನುಕ್ಕೆ ಬರಬೇಕು; ನಮ್ಮ ವಚನ ಲಾಲಿಸಿ ದೊಡ್ಡವರನ್ನ ಮಾಡ

ಬೇಕಾಗಿತ್ತೆ, ನಿನ್ನ ಮನಿಗೆ ನೀ ಚಿತ್ತೈಸಬೇಕು' ಎಂತ ಬ್ರಹ್ಮರಾಯ ಹೇಳಿದನು" ಎಂದು ನಮಸ್ಕಾರ ಮಾಡಿ, 'ನಿನ್ನನ್ನು ಪ್ರಾರ್ಥನಿ ಮಾಡಥೀನಿ. ದಾವ ಕಾರ್ಯ ಮಾಡಬೇಕಾಗಿ ನಿನ್ನನ್ನೇ ಪ್ರಾರ್ಥನಿ ಮಾಡಿದರೂ, ನಿಜರೂಪದಿಂದ ರಾಮ ಎಂಬ ಅವತಾರ ಮಾಡಿ ನಿನ್ನಿಂದ ಅಶೇಷಕಾರ್ಯವು ಸಾಧಿಸಲ್ಪಟ್ಟಿತು. ಇನ್ನು ಉಳದಂಥ ಕಾರ್ಯಗಳು ಇಲ್ಲ. ದೇವತಿಗಳಿಗೆ ಸಂತೋಷ ಮಾಡುವಂಥಾತನಾಗಿ ಈ ಭೂಲೋಕದ ದೆಸಿಯಿಂದ ನಿನ್ನ ಲೋಕವಾದಂಥ ವೈಕುಂಠಕ್ಕೆ ಶೀಘ್ರ ಬರಬೇಕು' ಎಂದು ಪ್ರಾರ್ಥನಿ ಮಾಡಿದನು. ಏಕಾಂತದಲ್ಲಿ, ಅವ್ಯಾಹತ ಷಡ್ಗುಣೈಶ್ವರ್ಯಸಂಪನ್ನನಾದಂಥ ರಾಮದೇವರು, ಅಶೇಷವಚನಗಳನ್ನು ಕೇಳಿ 'ಹಾಂಗೆ ಆಗಲಿ' ಎಂದು ಮಾತನಾಡಿದನು.

ಆ ತರುವಾಯ ರುದ್ರಾವತಾರನಾದಂಥ <u>ದೂರ್ವಾಸ</u>, ಈ ಅಯೋಧ್ಯಾ ಪಟ್ಟಣದಲ್ಲಿ ಇದ್ದಂಥ ರಘುನಾಥನ ಕುರಿತು ಶೀಘ್ರದಿಂದ ಬಂದನು. ಎಂಥಾತನಾಗಿ ಬಂದನೆಂದರೆ 'ಶರೀರದಲ್ಲಿ ಬಹಳ ಹಸಿವಿ ಆಗೇದೆ. ನನಗೆ ಭೋಜನ ಮಾಡಿಸು' ಎಂದು ಬಹು ಆವರ್ತಿಲಿ ಒದರತಾ ಬಂದನು. 'ಮಾಡಿ ಇಟ್ಟ ಅನ್ನ ಕೊಡ ಬಾರದು. ಮುಂದೆ ಸ್ವಯಂಪಾಕ ಮಾಡಬಾರದು. ಈಗಲೇ ನಿಂತ ಪೆಟ್ಟಿಲೆ ಅನ್ನ ಕೊಡಬೇಕು' ಎಂದ ದೂರ್ವಾಸನ ವಚನ ಕೇಳಿ, ತನ್ನ ಅಂಗೈಯಿಂದ ಅನ್ನ ಕೊಡು ಎನಲಿಕ್ಕೇ ಹುಟ್ಟಿದಂಥ ಉತ್ಕೃಷ್ಟವಾದಂಥ, ಚತುರ್ಗುಣಯುಕ್ತವಾದಂಥ ಭಕ್ಷ್ಯ, ಭೋಜ್ಯ, ಲೇಹ್ಯ, ಪೇಯಗುಣೋಪೇತವಾದಂಥ ಅಮೃತ-ಸದೃಶವಾದಂಥ ಅನ್ನವನ್ನು ಕೊಟ್ಟನು. ಮಾಡಿ ಇಟ್ಟ ಅನ್ನ, ಮುಂದೆ ಮಾಡಿದ ಅನ್ನ ಕೊಡಬಾರದೆಂಬ ಅಸಂಭಾವಿತ ಮಾತನಾಡಿದ ಕಾಲಕ್ಕೂ, ಬೇಡಿದ ಸಮಯದಲ್ಲಿ ಹುಟ್ಟಿದಂಥ ಅನ್ನವನ್ನು ಕೊಟ್ಟ. ತರುವಾಯ ದೂರ್ವಾಸಮುನಿ ಬಹಳ ಸಂತುಷ್ಟನಾಗಿ ಭೋಜನ ಮಾಡಿದನು. ದೂರ್ವಾಸ ತನ್ನ ಮನೋಭಯಕೆ ಪೂರ್ಣವಾಯಿತೆಂದು ತೃಪ್ತನಾಗಿ ಸ್ವಾಮೀನ್ನ ಪೊಗಳತ ಪೊಗಳತ, ದಿಗ್ದೇಶಾಂತರದಲ್ಲಿ ಸ್ವಾಮೀ ಕೀರ್ತಿ ಮೆರೆಸತ, 'ಒಬ್ಬಾನೊಬ್ಬನೂ ನನ್ನಿಂದ ಬೇಡಲ್ಪಟ್ಟಂಥ ವರವು ಕೊಡೋದರಲ್ಲಿ ಸಮರ್ಥನಾಗಲಿಲ್ಲ' ಎಂದು ಸರ್ವರ ಕುರಿತು ಕೋಪ ಮಾಡತಿದ್ದ, ಇಂಥಾ ಪ್ರತಿಜ್ಞೆಯುಳ್ಳಂಥ ದೂರ್ವಾಸಮುನಿಯು ಹೋದ. ಅವ್ಯಾಹತ ಷಡ್ಗುಣೈಶ್ವರ್ಯಸಂಪನ್ನನಾದಂಥ ರಘುನಾಥನು, ಋಷಿಪ್ರತಿಜ್ಞೆ ಹ್ರಾಸ ಮಾಡಿದನು. ಈ ಪ್ರಕಾರ ದೂರ್ವಾಸನ್ನ ದಾರೂ ತೃಪ್ತಿಬಡಿಸಲಾರರು. ಕುಂತೀ-ದೇವಿ ಕನ್ಯಾವಸ್ಥೆಯಲ್ಲಿರಲಿಕ್ಕೆ, ಚಾತುರ್ಮಾಸ್ಯ ನಾಲ್ಕು ತಿಂಗಳು ಸಂಕಲ್ಪ ಕೂಡ್ರಲಿಕ್ಕೆ ದೂರ್ವಾಸ ಬಂದಿರಲು, ದೂರ್ವಾಸನ ವರಬಲದಿಂದ ಏನು ಬೇಡಿದ್ದುದು ಒದಗಿಬಾಹೋದು. ಅದರಿಂದ ತುಷ್ಟಿಬಡಿಸಿದ್ದಾಳೆ. ಸ್ವಾಮಿ, ರಾಮಾವತಾರದಲ್ಲಿ ದೂರ್ವಾಸಗೆ ಅಂಗೈಯೊಳಗೆ ಹ್ಯಾಂಗೆ ಅನ್ನ ಕೊಟ್ಟು ಗೆದ್ದನೋ ಹಾಂಗೆ,

ಕೃಷ್ಣಾವತಾರದಲ್ಲಿ ಸ್ವಬಲದಿಂದ ದೂರ್ವಾಸನ್ನ ಗೆದ್ದಾನೆ. ಅದು ಎಲ್ಲಿಂದರೆ, ಪಾಂಡವರು ಹನ್ನೆರಡು ವರುಷ ವನವಾಸ ಹೋಗಿರಲಿಕ್ಕೆ, ಅರ್ಧರಾತ್ರಿಯಲ್ಲಿ ತನ್ನ ಶಿಷ್ಯಗಣ ಸಹವಾಗಿ ಅನ್ನಾರ್ಥಿಯಾಗಿ ಬರಲು, ಭೀಮಸೇನ 'ಸ್ನಾನವಾಡಿ ಬನ್ನಿ' ಎಂದನು. 'ಅಕ್ಷಯಪಾತ್ರಿ ತೊಳದು ಇಟ್ಟದೆ. 'ಬ್ರಾಹ್ಮಣ ವಿಮುಖನಾಗಿ ಹೋದಾನಲ್ಲ ಇನ್ನು ಹ್ಯಾಂಗೆ ಮಾಡಲಿ!' ಎಂದು, ದ್ರೌಪದೀ ಕೃಷ್ಣನ ಸ್ಮರಣೆ ಮಾಡಲಿಕ್ಕೆ, ಭಕ್ತವತ್ಸಲ, ಭಕ್ತರ ಪಂಥ ಗೆಲ್ಲಿಸಬೇಕಾಗಿ ದ್ವಾರಕಿಯಿಂದ ಬಂದನು. ಏನಿಕೆ ಅಕ್ಷಯಪಾತ್ರಿಗೆ ಹತ್ತಿ ಅದೆ ಎಂದರೆ, ಶಾಖದಳ ನಿರ್ಮಿತ ಮಾಡಿ ಭೋಜನ ಮಾಡಿಸಿದನು. ಯಥೇಷ್ಟ ಭೋಜನ ಮಾಡಿ ಕುಳಿಥಾರೆ. ಪುನಃ ಭೋಜನಕ್ಕೆ ಕರೆಯಲಿಕ್ಕೆ ಬಂದರು. ಬ್ರಾಹ್ಮಣರು ನಾಚಿದರು. ಆಂದೊವ್ಮಿ ದೂರ್ವಾಸನ್ನ ಗೆದ್ದಾನೆ. ದೂರ್ವಾಸ, ಮೂರುಸಾವಿರ ಸನ್ಯಾಸಿಗಳ ಸಹವಾಗಿ ಚಾತುರ್ಮಾಸ್ಯಕ್ಕೆ ಕುಳಿತಿರಲಾಗಿ, ಹಂಸಡಿಭಿಕರು ಬಂದು ಮೂರುಸಾವಿರ ಸನ್ಯಾಸಿಗಳ ಕೌಪೀನ ಕಾಷಾಯವಸ್ತ್ರ ಕಸಕೊಂತು, ದಂಡಕಮಂಡಲು ಮುರಿಹೆಟ್ಟಿಹೋದವ್ಯಾಲಿ, ದೂರ್ವಾಸಮುನಿ ಕೃಷ್ಣಗೆ ಶರಣುಬಂಧನು. ಮೂರುಸಾವಿರ ಸನ್ಯಾಸಿಗಳಿಗೆ ಕೌಪೀನ ಕಾಷಾಯವಸ್ತ್ರ ದಂಡಕಮಂಡಲು ಕೊಟ್ಟು, ಹಂಸಡಿಭಿಕರ ಕೊಂದಾನೆ.

ಇಂಥಾ ಸ್ವಾಮಿ ತನ್ನ ಆಂಗೈಯಿಂದ ಅನ್ನ ಕೊಟ್ಟದ್ದು ಆಶ್ಚರ್ಯವಲ್ಲ.

ಮುನಿರೂಪ ಧರಿಸಿದಂಥ ಶಿವನು ಹೋಗುತ್ತಿರಲಾಗಿ, ರಮಾಪತಿ ಅಲ್ಲಿಗೆ ಬಂದು ಲಕ್ಷ್ಮಣನ್ನ ಕರದನು. ಲಕ್ಷ್ಮಣನ್ನ ಬಾ ಎಂದು ಕರದ ನಿಮಿತ್ತ ಹೇಳಥಾರೆ. ಏಕಾಂತಕ್ಕೆ ರಾಮದೇವರು ದಾವ ವಾಕ್ಯಾದಲ್ಲಿ ರುದ್ರನ ಕೂಡ ಆಲೋಚನಿ ಮಾಡಲಿಕ್ಕೆ ಹೋಗಿದ್ದನೋ ಅದೇ ವ್ಯಾಕ್ಯಾದಲ್ಲಿ, ಲಕ್ಷ್ಮಣನ್ನ ದ್ವಾರಪಾಲಕನ ಮಾಡಿ, 'ಎತಲಾನಿಕೆ ಏಕಾಂತದಲ್ಲಿ ದಾರಾದರೂ ಪ್ರವೇಶ ಮಾಡಿದ ಪಕ್ಷವೇ ನಿನ್ನ ಕೊಂದೇನು' ಎಂದು ದ್ವಾರಪಾಲಕನ್ನಾಗಿ ಇಟ್ಟಿದ್ದ. ಅವರು ಏಕಾಂತದಲ್ಲಿ ಆಲೋಚನಿ ಮಾಡೋ ಸಮಯದಲ್ಲಿ ಬಂದಂಥಾ ದೂರ್ವಾಸ ಮುನಿಯನ್ನು ಕಂಡು, ಲಕ್ಷ್ಮಣ ತನ್ನೊಳಗೆ ತಾನೇ ಆಲೋಚನಿ ಮಾಡಿದ. ಏನೆಂದರೆ, 'ಪ್ರತಿಜ್ಞಾಪೂರ್ವಕ ಬಂದಂಥ ದೂರ್ವಾಸನು ರಾಮದೇವರನ್ನು ಐದಿ, ಪ್ರತಿಜ್ಞಾ ಭಂಗ ಮಾಡಿಕೊಳ್ಳಲಿ. ಎತಲಾನಿಕೆ ಒಳಗೆ ಬಿಡದೆ ಹೋದೇನೆ, ರಘುನಾಥನಲ್ಲಿಗೆ ಹೋದರೆ ಅನ್ನ ಹುಟ್ಟಲಿಲ್ಲ ಎಂದು ಬ್ರಾಹ್ಮಣ, ದೇಶದೇಶದಲ್ಲಿ ಅಪಕೀರ್ತಿ ನಿಶ್ಚಯದಿಂದ ಮಾಡ್ಯಾನು. ಶ್ರೀ ರಘುನಾಥ ನನ್ನ ಕೊಂದೇನೆಂದು ಪ್ರತಿಜ್ಞಾ ಮಾಡಿದ ಕಾಲಕ್ಕೂ, ವಾತ್ಸಲ್ಯದಿಂದ ನನ್ನ ಪಾಲಿ ದಯವೇ ಮಾಡ್ಯಾನು' ಎಂದು ಹೀಂಗೆ ಲಕ್ಷ್ಮಣ ನಿಶ್ಚಯ ಮಾಡಿ, ಸ್ವಾಮಿಗೆ ಕೀರ್ತಿ ಬರಲಿ ಎಂದು ದೂರ್ವಾಸನ್ನ ಏಕಾಂತಸಮಯದಲ್ಲಿ ಒಳಗೆ ಬಿಟ್ಟನು. ರಾಮದೇವರು ಕೊಂದೇನೆಂದು ಏನು ಕಾರಣ ಪ್ರತಿಜ್ಞಾ ಮಾಡಿದ್ದ ಎಂದಲ್ಲಿ, ಲಕ್ಷ್ಮಣನ್ನ ಶೇಷ-

ಲೋಕಕ್ಕೆ ಕಳುಹಿಸಬೇಕು, ತಾನು ತನ್ನ ಲೋಕಕ್ಕೆ ಹೋಗಬೇಕೆಂಬೋ ಅಭಿ-ಪ್ರಾಯದಿಂದ ಕೊಂದೇನೆಂದ್ದು ಪ್ರತಿಜ್ಞೆ ಮಾಡಿದ್ದ. ಕೊಲ್ಲಲಿಲ್ಲ ಏನುಕಾರಣ ಎಂದಲ್ಲಿ, ಈ ಪ್ರತಿಜ್ಞೆ ಸ್ವಲೋಕಕ್ಕೆ ಹೋಗೋದಕ್ಕೆ ಕಾರಣವಾದಂಥಾದ್ದು. ಈ ಅಭಿಪ್ರಾಯದಿಂದ ರಾಮದೇವರು ಕೊಂದೇನೆಂದು ಪ್ರತಿಜ್ಞೆ ಮಾಡಿದ್ದ. ಅತ್ಯಂತ ಬಂಧುವಾದಾತಗೆ ಏನು! ಕೊಂದಾನು! ಪ್ರೀತ್ಯಸ್ಥರಿಗೆ ಹೊರಗೆ ಹಾಕೋಣವೇ ಕೊಲ್ಲೋಣ. ೀದಕಾರಣ ಲಕ್ಷ್ಮಣಗೆ 'ಶೀಘ್ರ ನಿನ್ನ ಲೋಕಕ್ಕೆ ಹೋಗು' ಎಂದು ಮಾತನಾಡಿದನು. ಈ ಪ್ರಕಾರ ನುಡಿಸಿಕೊಂಡಾತನಾಗಿ ಲಕ್ಷ್ಮಣನು, ಲೋಗರ ಸಂಹಾರವೆಂಬ ಭಯದ ಅಂಧಕಾರವನ್ನು ಪರಿಹರಿಸುವ ರಘುನಾಥನ ಧ್ಯಾನಮಾಡತ, ತನ್ನ ಮೂಲರೂಪವಾದ ಶೇಷರೂಪವನ್ನು ಐದಿದನು. ಶೇಷನ ಸ್ವರೂಪ ಎಂಥಾದ್ದು ಎಂದರೆ, ಸಹಸ್ರ ಮುಖಕಮಲಗಳಿಂದ ಯುಕ್ತವಾದಂಥಾದ್ದು. ಶೇಷ ಎಂದು ನಾಮವುಳ್ಳ ದಿವ್ಯ ಮಹಾಸರ್ಪಾಕೃತಿಯಿಂದ, ಒನಿಕೆ ನೇಗಿಲ ಧರಿಸಿಕೊಂಡು, ಕ್ಷೀರಸಾಗರದಲ್ಲಿ ನಾರಾಯಣಗೆ ಹಾಸಿಗಿಯಾದಂಥ ಶೇಷನ ಸ್ವರೂಪವನ್ನು ಐದಿದನು. ಸ್ವಾಮೀ ಹಾಸಿಗಿ ಮುಂದಾಗಿ ಹೋಗಬೇಕು. ಆದ-ಕಾರಣ ಸ್ವಾಮೀ ಕೈಯ ಹೋಗೆನಿಸಿಕೊಂಡು ರಾಮನ ಸ್ಥಾನವಾದ ವೈಕುಂಠಕ್ಕೆ ಹೋದನು. ಲಕ್ಷ್ಮಣಗೆ ಸಹಸ್ರಮುಖವೆಂತ ದೃಷ್ಟಾಂತ ಕೊಟ್ಟರು.

ಲಕ್ಷ್ಮಣ ಹೋದ ತರುವಾಯ ರಘುನಾಥ ಸಮಸ್ತ ಜನರುಗಳಿಂದ ಸಹಿತನಾಗಿ, ವೈಕುಂಠವೆಂದು ಹೆಸರುಳ್ಳಂಥ ತನ್ನ ಮನೀ ಕುರಿತು ಹೋಗೋದರ ಗೋಸ್ಕರ ಬುದ್ಧಿ ಮಾಡಿದನು, ಹಾಂಗೆ ಭೇರಿತಾಡನದಿಂದ ಪ್ರಸಿದ್ಧ ಮಾಡಿಸಿದನು. 'ಲೋಕದಲ್ಲಿದ್ದಂಥ ಸ್ಥಾವರ ಜಂಗಮ ಪ್ರಾಣಿಗಳು ನಾಶರಹಿತವಾದಂಥ ಮೋಕ್ಷ-ಪದವಿಯನ್ನು, ದಾರು ಇಚ್ಛೆ ಮಾಡುತ್ತಿದ್ದೀರಿ ಅವರಷ್ಟೂ ಮಂದಿ ಇದೇ ಕ್ಷಣದಲ್ಲಿ ನನ್ನನ್ನು ಐದಿರಿ' ಎಂದು ಭೇರಿತಾಡನ ಮಾಡಿಸಿದನು. ಭೇರಿತಾಡನ ಸುಶಬ್ದವನ್ನು ಕೇಳಿ, ಈ ಲೋಕದಲ್ಲಿ ದಾರುದಾರು ಮೋಕ್ಷಪದವಿ ಇಚ್ಛೈಸತಿದ್ದರೋ ಅವರಷ್ಟೂ, ಸ್ವಾಮಿ ಪರಂಧಾಮಕ್ಕೆ ಹೋಗಥಾನೆಂದು, ತೃಣ ಆರಂಭವಾಡಿ-ಕೊಂಡು ಇರುವು ಕಡಿಯಾಗಿ ಸರ್ವ ಪ್ರಾಣಿಗಳೂ, ಶ್ರೀರಾಮದೇವರ ಸಮೀಪಕ್ಕೆ ಬಂದರು. ಹಾಂಗಾದರೆ ಸ್ವಬಲರಹಿತವಾದಂಥ ತೃಣಾದಿಗಳಿಗೆ ಗಮನ ಹ್ಯಾಂಗೆ ಕೂಡೀತ್ತು ಎಂದಲ್ಲಿ, ರಾಮನ ಆಜ್ಞೆಯಿಂದ ತೃಣಾದಿಗಳಿಗೆ ಗಮನಶಕ್ತಿ ಆಯಿತು. ಸಂಸಾರದಲ್ಲಿ ಇನ್ನೂ ಬಹುಕಾಲ ಅನುಭವಿಸಿ, ಕಲ್ಪಾಂತದಲ್ಲಿ ಮೋಕ್ಷಕ್ಕೆ ಹೋಗ-ಬೇಕಾದಂಥಾವರು, ಹಾಂಗೆ ನಿತ್ಯಸಂಸಾರಿಗಳು, ತಮೋಯೋಗ್ಯರು ಮುಕ್ತಿಪದವಿಯನ್ನು ಇಚ್ಛೈಸಲಿಲ್ಲ. ಈಶನಾದಂಥ ರಾಮದೇವರು, ಸಂಸಾರದಲ್ಲಿ ಬಹುಕಾಲ ಅನುಭೋಗಿಸುವಂಥ ದೀರ್ಘಭವಿಗಳಿಗೆ ಪ್ರಜೆಗಳ ಮಾಡಿ, ಕುಶಗೆ ರಾಜ್ಯಾಭಿಷೇಕ ಮಾಡಿ ಲವಗೆ ಪ್ರಧಾನಿಪಟ್ಟದಲ್ಲಿಟ್ಟನು. ಸ್ವಾಮಿ ಪರಂಧಾಮಕ್ಕೆ ತೆರಳಥಾನೆಂದು

ಸುದ್ದಿ ಕೇಳಿ, ಸೂರ್ಯಾತ್ಮಜನಾದಂಥ ಸುಗ್ರೀವ, ವಾಲೀಮಗ ಅಂಗದಗೆ ಕಪಿ-ರಾಜ್ಯದಲ್ಲಿ ಅಭಿಷೇಕ ಮಾಡಿ, ರಾವುನ ಸಮೀಪಕ್ಕೆ ಬಂದನು. ತರುವಾಯ ರಘುನಾಥ, ವಾಯುನಂದನನಾದಂಥ ಹನುಮಂತನ ಅಪ್ಪಿಕೊಂಡು ಮಾತನಾಡಥಾನೆ. 'ನಾನ್ತು ಸರ್ವದಾ ನಿನ್ನ ದೃಷ್ಟಿಗೆ ಗೋಚರನಾದೇನು. ನೀನು ದಾವ ಸ್ಥಳದಲ್ಲಿದ್ದೀ, ನಾನು ಅಲ್ಲೀ ಇರಥಾ ಬಂದೇನು, ಇದಕ್ಕೆ ಎರಡನೇ ಸಂಶಯವಿಲ್ಲ. ನಿನ್ನಿಂದ ಸರ್ವದಾ ಉತ್ತಮೋತ್ತಮವಾದಂಥ ಮಹತ್ತಾದ ತಪಸ್ಸು ಮಾಡಲ್ಪಟ್ಟದೆ. ನಿನ್ನಿಂದ ಬಹುಕಾಲ ತಪಸ್ಸು ಮಾಡಲ್ಪಟ್ಟದ್ದು ನನಗೆ ಅತಿ ಪ್ರೀತಿಕರವಾದಂಥಾದ್ದು. ನನ್ನ ಚಿತ್ತದ ಅಭಿಪ್ರಾಯ ನೀ ಬಲ್ಲಾತನಾದಕಾರಣ, ರಾವಣ ಕುಂಭಕರ್ಣರನ್ನು ಕೊಲ್ಲುವ ಸಾಮರ್ಥಿ ನಿನಗೆ ಇದ್ದರೂ, ನನ್ನ ಪ್ರೀತ್ಯರ್ಥವಾಗಿ ಅವರನ್ನ ನೀ ಕೊಲ್ಲಲಿಲ್ಲ. ವಕ್ರಬುದ್ಧಿ ಮನಸ್ಸು ಇದ್ದಾತನಲ್ಲ. ನನ್ನಲ್ಲಿ ನಿರ್ವ್ಯಾಜ ಭಕ್ತಿಯುಳ್ಳಾತ. ನನ್ನ ಪ್ರೀತ್ಯರ್ಥವಾಗಿ ಕಲ್ಪಪರಿಯಂತ ಆಯುಷ್ಯ ಉಳ್ಳಂಥಾವನಾಗಿ, ಹೇಳತಾ ಕೇಳತಾ, ದೈನಂದಿನ ಕಲ್ಪಪರಿಯಂತ ಬದುಕು. ಇದೇ ನನಗೆ ಅತಿ ಪ್ರೀತಿಯಾದಂಥಾದ್ದು. ಕ್ಷೀರಸಾಗರದಲ್ಲಿದ್ದಂಥ ನನ್ನ ಮನಿ ಶ್ವೇತದ್ವೀಪ, ಹಾಂಗೆ ವೈಕುಂಠ, ಅನಂತಾಸನಕ್ಕೆ ಈ ಕಪಿದೇಹದಿಂದಲೇವೆ ಸ್ವೇಚ್ಛಾನುಸಾರದಿಂದ ಮನಬಂದಹಾಗೆ ಬರತಾ ಬಾ. ಅಮುಕ್ತಸ್ಥಳ ಶ್ರೀಭಾಗ ದುರ್ಗಾಭಾಗ ಅಲ್ಲಿಪರಿಯಂತ ಯಥೇಷ್ಟ ಭೋಗಗಳಿಂದ, ದೇವೇಂದ್ರ ಮೊದಲಾದ ದೇವತಿಗಳಿಂದ, ಹಾಂಗೆ ದೇವಗಂಧರ್ವರುಗಳಿಂದ ವಾಲ್ಮೈಸಿಕೊಳತಾ ನಿರ್ದುಷ್ಟವಾದಂಥ ಯಶಸ್ಸು ಉಳ್ಳಾತನಾಗಿ, ಸರ್ವದಾ ನಾನಾ ಭೋಗ ಭೋಗಸ್ತಾ, ನನ್ನ ಸಮೀಪದಲ್ಲಿ ಕ್ರೀಡಸ್ತಾ ಬಾ. ನೀನು ಏನು ಬಯುಸತಿ, ಸಕಲವೂ ತತ್ಕಾಲಕ್ಕೆ ಫಲಿತವಾಗಲಿ. ನಿನ್ನ ಇಷ್ಟಕರಾದವರಿಗೆ ಒಂದಾನೊಂದು ದೇಶದಲ್ಲಿ, ಕಾಲದಲ್ಲಿ ವ್ಯರ್ಥವಾಗಬ್ಯಾಡ. ಪುನಃಪುನಃ ಪ್ರತಿದಿವಸದಲ್ಲಿ ನಿನ್ನಿಂದ ನನಗೆ ಪ್ರೀತಿಯೇ ಆದೀತು, ಅಪ್ರೀತಿ ಎಂದಿಗೂ ಆಗದು.'

ಹೀಂಗೆ ರಘುನಾಥ ಮಾತನಾಡಲಿಕ್ಕೆ, ಜಗತ್ತಿಗೆ ನಾಥನಾದಂಥ ರಾವುನ ಕೂಡ ಹನುಮಂತ ಮಾತನಾಡಥಾನೆ. 'ಎಲೈ ಸ್ವಾವಿು, ನಿರಂತರದಲ್ಲಿ ಕೆಡುಕು ಇಲ್ಲದೆ ನಿನ್ನ ವಿಷಯಕವಾದಂಥ ಭಕ್ತಿ ಕೊಡು. ನಿನ್ನ ಪಾದಕಮಲಗಳಲ್ಲಿ ಸರ್ವಾಧಿಕಾರಿಗಳ ಭಕ್ತಿ ನೋಡಲಿಕ್ಕೆ ಉತ್ತಮವಾದಂಥ ಭಕ್ತಿ ಕೊಡು. ಸರ್ವದಾ ಮುಕ್ತಿಪರಿಯಂತ ಅಭಿವೃದ್ಧವಾದ ಭಕ್ತಿಸಮುದ್ರದಲ್ಲಿ ನಾ ಕ್ರೀಡಿಸೇನು. ಸರ್ವಾಧಿಕಾರಿಗಳಗಿಂತಲೂ ಅಧಿಕವಾದ ಭಕ್ತಿ ಕೊಡು.

ನಮೋ ನಮೋ ನಮೋ ನಮಃ ನತಸ್ಮಿಷೇ ಸದಾ ಪದಮ್ ।
ಸಮಸ್ತ ಸದ್ಗುಣಾವೃತಂ ನಮಾವಿು ತೇ ಪದಂ ಪುನಃ ॥

ಈ ಶ್ಲೋಕದಲ್ಲಿ, ಹನುಮಂತ ಅತ್ಯಾದರದಲ್ಲಿ ದೇವಾದಿದೇವನಾದಂಥ ರಘುನಾಥಗೆ

ನಮಸ್ಕಾರ ಮಾಡಥಾನೆಂದು ಹೇಳಥಾರೆ. 'ನಿನ್ನ ಪಾದಗಳಿಗೆ ನಮಸ್ಕಾರ ಮಾಡಥೀನಿ. ಸಮಸ್ತ ಸದ್ಗುಣಗಳಿಂದ ಉತ್ಕೃಷ್ಟವಾದಂಥ ನಿನ್ನ ಪಾದಗಳಿಗೆ ಪುನಃಪುನಃ ನಮಸ್ಕಾರ ಮಾಡಥೀನಿ' ಎಂದು ಹನುಮಂತ ಮಾತಾಡಲಿಕ್ಕೆ, ಪುಷ್ಕರೇಕ್ಷಣನಾದಂಥ ರಘುವೀರ, ಹನುಮಂತಗೆ 'ಹಾಂಗೆ ಆಗಲಿ' ಎಂದು ಶಿರಸ್ಸಿನ ಮ್ಯಾಲೆ ಅಭಯಹಸ್ತ ಇಟ್ಟು ಮಾತನಾಡಿ, ತನ್ನ ಮನಿಯಾದಂಥ ವೈಕುಂಠಕ್ಕೆ ತೃಣಾದಿಗಳಿಂದ ಸಹವಾಗಿ ತೆರಳಿದನು. ತೃಣಾದಿಗಳೆಂದದ್ದಕ್ಕೆ ವಿಸ್ತಾರ ಮಾಡಥಾರೆ. ಪಕ್ಷಿಗಳು, ವನದಲ್ಲಿ ಸಂಚಾರ ಮಾಡುವಂಥ ಮೃಗಗಳು, ಎರಳಿಗಳೇ ಮೊದಲಾದಂಥಾವು, ಬಳ್ಳಿಗಳೇ ಮೊದಲಾಗಿ ಗಿಡಗಳು, ಇರುವಿಗಳೇ ಮೊದಲಾಗಿ ಸರ್ವ ಕ್ರಿಮಿಗಳು, ಗಾರ್ದಭ ಮೊದಲಾದ ಸರ್ವ ಪಶುಗಳು, ಆ ಕಾಲದಲ್ಲಿ ಸರ್ವವೂ ಪರಂಧಾಮಕ್ಕೆ ತೆರಳಿದವು. ಇನ್ನು ಮನುಷ್ಯರು, ವಾನರಗಳು, ಸುಜೀವರುಗಳು ಮೊದಲಾದವರು ಹೋದರೆಂಬುವುದು ಏನು ಹೇಳಬೇಕು. ಹಾಂಗಾದರೆ ಜ್ಞಾನದಿಂದ ಮೋಕ್ಷವಾಗತದೆಂದು ಸ್ಮೃತಿಗಳು ಹೇಳತವೆ, ಜ್ಞಾನ-ರಹಿತವಾದಂಥ ತೃಣಾದಿಗಳಿಗೆ ಮೋಕ್ಷ ಹ್ಯಾಂಗಾಯಿತು ಎಂದರೆ, ಸರ್ವದಾ ರಾಮಧ್ಯಾನದಿಂದ ಸಮೀಚೀನ ತತ್ತ್ವಜ್ಞಾನಿಗಳೇ ಆದಕಾರಣದಿಂದ, ತೃಣ ಖಗಾದಿಗಳು ಅದೇ ಕಾಲಕ್ಕೆ ವೈಕುಂಠಕ್ಕೆ ತೆರಳಿದರು.

ಸಮರ್ಥನಾದಂಥ ರಾಮದೇವರು, ಸಮಸ್ತ ಪ್ರಾಣಿಗಳ ಕೂಡಿಕೊಂಡು, ಪುಷ್ಪಕವಿಮಾನ ಏರಿಕೊಂಡು, ಅನಂತಾನಂತ ಸೂರ್ಯರು ಒಂದೇ ಕಡಿ ಸೇರಿದರೆ ಎಷ್ಟ ಕಾಂತಿಯೋ ಅಷ್ಟ ಕಾಂತಿಯಿಂದ ಪ್ರಕಾಶಮಾನನಾಗಿ, ಸ್ವಾಮಿ ಉತ್ಕೃಷ್ಟ ಜ್ಞಾನಾನಂದಾದಿ ಸದ್ಗುಣಪರಿಪೂರ್ಣ, ಸಹಸ್ರಸೂರ್ಯಪ್ರಕಾಶಕ್ಕೆ ಸದೃಶವಾದ ಕಿರೀಟವನ್ನು, ಅತ್ಯಪೂರ್ವವಾದ, ನೀಲವರ್ಣವಾದ ಕುರುಳುಗೂದಲಿ ಭಾರದಿಂದ ಯುಕ್ತವಾದಂಥ ಶಿರಸ್ಸಿನಲ್ಲಿ ಧರಿಸಿದಂಥ, ನಿರ್ದುಷ್ಟವಾದಂಥ ಮುಖಚಲುವಿಕಿ, ಕೆಂಪುಕಮಲದೋಪಾದಿ ಕಣ್ಣುಗಳುಳ್ಳಾತ; ಸಮೀಚೀನವಾದ ಮಿಂಚಿನೋಪಾದಿ ಕೂದಲುಗಳುಳ್ಳಾತ; ಮುಗುಳುನಗೆಯಿಂದ ಯುಕ್ತನಾಗಿ, ಹವಳದ ಕೆಂಪಿ ನೋಪಾದಿ ಅಧರವುಳ್ಳಾತ—ಅಧರ ಎಂಥಾದ್ದು, ಸಮಸ್ತ ವೇದವಾಕ್ಯಗಳೆಂಬ ರಸದಿಂದ ಯುಕ್ತವಾದಂಥಾದ್ದು—ಸೂರ್ಯರುಗಳ ಸಮೂಹದೋಪಾದಿ ಕೌಸ್ತುಭ ದಿಂದ ಶೋಭಿತವಾದ ಕೊರಳುಗಳುಳ್ಳಾತ, ಪುಷ್ಟೋನ್ನತ ಉತ್ಕೃಷ್ಟ ದೋಷ-ರಹಿತ ಜಗತ್ಪೋಷಣೆ ಮಾಡುವಂಥ ಎರಡು ಸ್ಕಂಧಗಳುಳ್ಳಾತ; ಸುವೃತ್ತದಿಂದ ದೀರ್ಘವಾದಂಥ, ಅತ್ಯಂತ ಪುಷ್ಟದಿಂದ ಒಪ್ಪುವಂಥ, ಭುಜದ್ವಯದಿಂದ ಒಪ್ಪು ವಂಥ ಅಲಂಕೃತ ಆಜಾನುಬಾಹುವುಳ್ಳಾತ. ಜಗತ್ತಿನಲ್ಲಿದ್ದ ಸರ್ವ ಅಚೇತನಗಳ ಮರ್ದಿಸಿ, ಸರ್ವ ಪದಾರ್ಥದಲ್ಲಿ ಸಾರಭೂತವಾದಂಥ, ಮೊಸರ ಕಡದು ಬೆಣ್ಣಿ ಹ್ಯಾಂಗೆ ನಿರ್ಮಾಣ ಮಾಡಥಾರೆ, ಹಾಂಗೆ ಆದಿಸೃಷ್ಟಿಯಲ್ಲಿ ನಾರಾಯಣನಿಂದ

ಮಾಡಲ್ಪಟ್ಟಿತು, ಅಂಥಾ ಬಾಣವನ್ನು ಬಲಕೈಯಲ್ಲಿ ಹಿಡಕೊಂಡಿದ್ದಾನೆ. ಪ್ರಯೋಜನವೇನೆಂದರೆ, ಸಾಕ್ಷಾತ್ ನಾರಾಯಣ ಈ ಬಾಣದಿಂದ ಮಧುಕೈಟಭರನ್ನು ಕೊಂದನು. ಅದೇ ಬಾಣವೇ ಲಕ್ಷ್ಮಣನ ತಮ್ಮನಾದ ಶತ್ರುಘ್ನಗೆ ಕೊಟ್ಟನು. ಶತ್ರುಸಂಹಾರಕನಾದ ಶತ್ರುಘ್ನ, ಮಧುನಾಮಕ ಅಸುರನ ಮಗ ಲವಣಾಸುರನ ಕೊಂದು, ಅದೇ ಸ್ಥಳದಲ್ಲಿ ಮಧುರಾಪಟ್ಟಣ ನಿರ್ಮಾಣ ಮಾಡಿದನು. ಸಮಸ್ತ ಅಚೇತನ ಪದಾರ್ಥಗಳ ಸಾರದಿಂದ ಹುಟ್ಟಿದಂಥ ಬಾಣವು, ಲವಣಾಸುರನ ಕೊಂದು, ಶತ್ರುಘ್ನನ ದೆಸೆಯಿಂದ ಪುನಃ ತಿರಗಿ ಬಂದಂಥ ಬಾಣವನ್ನು ಬಲದ ಕೈಯಲ್ಲಿ ಧರಿಸಿದ್ದಾನೆ. ಎಡದ ಕೈಯಲ್ಲಿ ಶಾರ್ಙ್ಗಧನುಸ್ಸನ್ನು ಹಿಡದಾನೆ. ಉತ್ತಮವಾದ ಬಾಹುಭೂಷಣ, ಶೋಭಿಸುವ ಬಾಹುಪುರಿ, ಕಂಕಣ ಇಟ್ಟಿದ್ದಾನೆ. ಸದೃಶವಿಲ್ಲದ ಉಂಗುರಗಳಿಟ್ಟಿದ್ದಾನೆ. ನಿದರ್ಶವಾದಂಥ ಕರ-ಕಮಲಗಳಿಂದ ಒಪ್ಪಥಾನೆ. ಅನರ್ಘ್ಯವಾದಂಥ ರತ್ನಮಾಲಾ, ವನಮಾಲಾ ಧರಿಸಿದ್ದಾನೆ. ಸರ್ವಸಮರ್ಥನಾದಂಥ ರಾಮದೇವರು, ವಿಸ್ತಾರವಾದ ಹೃದಯದಲ್ಲಿ ಲಕ್ಷ್ಮೀದೇವಿಯ ಧರಿಸಿದ್ದಾನೆ. ಸಮೀಚೀನವಾದಂಥ ಕೆಂಪಿನಿಂದ ಶೋಭಿಸುವ ಪಾದಪಲ್ಲವಗಳುಳ್ಳಾತ. ಪೀತಾಂಬರದಿಂದ ಮಿಂಚಿನೋಪಾದಿ ವಿರಾಜಮಾನ

ನಾದಂಥಾತ. ಒಪ್ಪಲ್ಪಟ್ಟ ನಡುವಿಗೆ ಕಾಂಚೀಧಾಮವನ್ನು ಕಟ್ಟಿದ್ದಾನೆ. ಶ್ರೀವತ್ಸದಿಂದ ಶೋಭಿಸುವಂಥಾತ. ಗಂಭೀರನಾಭಿಯಿಂದ ಕೆರಿಬೊಜ್ಜಿನಲ್ಲಿ ತ್ರಿವಳಿಗಳುಳ್ಳಾತ. ವರ್ತುಳವಾದ ಜಾನು ಜಂಘಗಳುಳ್ಳಾತ. ಪಾದಗಳಲ್ಲಿ ಧ್ವಜ ಪದ್ಮ ಅಂಕುಶ ವಜ್ರರೇಖ ಉಳ್ಳಾತ. ಇಂದ್ರನೀಲಮಣಿಯೋಪಾದಿ ಪ್ರಕಾಶಮಾನವಾದ ಕಾಂತಿಯುಳ್ಳಾತ. ಇಂಥಾ ರಾಮದೇವರು ಅತ್ಯಂತವಾಗಿ ಒಪ್ಪಿದನು. ದೋಷ-ರಹಿತ, ಅಮಿತ ಸುಖಸಮುದ್ರ, ಸಂಪೂರ್ಣ ಶಕ್ತಿಯುಳ್ಳಾತ, ನಿರ್ದೋಷವಾದ ಶರೀರವುಳ್ಳಾತ, ಸಮಸ್ತ ದೇವತೆಗಳಿಗೆ ಆದಿದೇವನಾದಂಥ ಶ್ರೀರಾಮದೇವರು, ಶೋಕರಹಿತವಾದ ಉತ್ತರದಿಕ್ಕನ್ನ ಕುರಿತು ಅಭಿಮುಖನಾಗಿ ಸ್ವಸ್ಥಾನಕ್ಕೆ ತೆರಳುವಂಥಾತನಾದ. ಎಂಥಾತನಾಗಿ ಎಂದರೆ, ತನ್ನ ಎರಡು ನೇತ್ರಗಳಿಂದ ಜ್ಞಾನಾರ್ಥಿಗಳಿಗೆ ಜ್ಞಾನವನ್ನು ಕೊಡತ, ಉತ್ತಮವಾದ ಮುಖಕಮಲದಿಂದ, ಶಾಸ್ತ್ರಾರ್ಥ ಅಪೇಕ್ಷ ಉಳ್ಳವರಿಗೆ, ಸರ್ವವೇದಾರ್ಥದೊಳಗಾಗಿ ಸಾರಭೂತವಾದ ಅರ್ಥವನ್ನು ಹೇಳಿಕೊಡತ, ಪ್ರಕಾಶಮಾನನಾದ ರಘುನಾಥ, ತನ್ನ ಶರೀರದ ಅತ್ಯಂತ ಕಾಂತಿಯಿಂದ ಬ್ರಹ್ಮಾಂಡದ ಒಳಗೂ ಹೊರಗೂ ಅವ್ಯಾಕೃತ ಆಕಾಶ ದಾಟಿ ಪ್ರಕಾಶಿಸುವಂಥಾತನಾಗಿ, ಉತ್ತಮವಾದ ಕರಕಮಲಗಳಿಂದ ಅನಿಷ್ಟನಿವೃತ್ತಿ, ಇಷ್ಟಪ್ರಾಪ್ತಿ ಬೇಕೆಂಬೋ ಸಮಸ್ತ ಪ್ರಾಣಿಗಳಿಗೆ ಆದೇ ಪ್ರಕಾರ ಮಾಡಿಕೊಡತ ಹೋಗುವಂಥಾತನಾದನು.

ಆ ವ್ಯಾಳ್ಯಾದಲ್ಲಿ ದಾರುದಾರು ಏನೇನು ಸೇವಿ ಮಾಡಿದರೆಂದರೆ, ಹನುಮಂತ ಅಮೃತಬಿಂದುಗಳ ಸ್ರವಿಸೋಂಥ ಹತ್ತುಸಹಸ್ರ ಚಂದ್ರಪ್ರಕಾಶಕ್ಕೆ ಮಿಗಿಲಾದ ಛತ್ರ ಹಿಡಿದನು. ಇಷ್ವಾಕು ಪರಿಯಂತ ಅದೃಶ್ಯಳಾಗಿ ರಾಮನ ಸೇವಿ ಮಾಡಿದಂಥ ಸೀತಾದೇವಿಯು, ಸಮಸ್ತರ ದೃಷ್ಟಿಗೆ ವಿಷಯಳಾಗಿ, ಸೂರ್ಯನ ಪ್ರಭಿಗೆ ಸದೃಶಪ್ರಭಿಯುಳ್ಳಾಕಿಯಾಗಿ, ಜ್ಞಾನಾನಂದವೇ ಗುಣಗಳಾದ ಶರೀರ ವುಳ್ಳಂಥ ಸೀತಾದೇವಿಯು, ಅಲಂಕಾರಗಳಿಂದ ಅಲಂಕೃತಳಾಗಿ, ಎರಡು ಪಾರ್ಶ್ವ ದಲ್ಲಿ ಪೂರ್ಣಚಂದ್ರನ ಕಾಂತಿಯೋಪಾದಿ ವ್ಯಜನಗಳಿಂದ ಬೀಸತಿಹೋಳು. ಅನುಪಚಾರದಿಂದ ಚಕ್ರಕ್ಕೆ ಅಭಿಮಾನಿಯಾದಂಥ ಭರತನು, ಸುದರ್ಶನಚಕ್ರ ವನ್ನು ಹಿಡಕೊಂಡು, ಸ್ವಾಮೀ ದಕ್ಷಿಣಭಾಗದಲ್ಲಿ ನಡದನು. ಶಂಖಕ್ಕೆ ಅಭಿಮಾನಿ ಯಾದಂಥ ಶತ್ರುಘ್ನ, ಪಾಂಚಜನ್ಯ ಶಂಖ ಹಿಡಕೊಂಡು, ಸ್ವಾಮೀ ಎಡಭಾಗದಲ್ಲಿ ನಡದನು. ಬ್ರಹ್ಮದೇವರೇ ಮೊದಲಾದ ಅಶೇಷ ದೇವತಿಗಳು, ಓಂಕಾರದಿಂದ ಸಹಿತವಾದ ವೇದಾಭಿಮಾನಿ ದೇವತಿಗಳು, ಸ್ವಾಮೀ ಎದುರುಗೊಂಡು ಮುಂಭಾಗ ದಲ್ಲಿ ನಡೀತಿಹೋರು. ಸ್ವಕೀಯವಾದ ಸ್ಥಾನಕ್ಕೆ ಹೋಗುವಂಥ ರಘುನಾಥನ ಹಿಂಭಾಗದಲ್ಲಿ, ಸಮಸ್ತವಾದ ಜಗತ್ತು, ಖಗಾದಿಗಳು ಮೊದಲು, ತೃಣಾದಿಗಳು ಕಡಿಯಾಗಿ ಹೋಗತಿಹೋರು. ಸುಗ್ರೀವಾದಿ ಕಪಿಗಳು ಸ್ವಾಮೀ ಬಲಭಾಗದಲ್ಲಿ ನಡದರು. ಮನುಷ್ಯರು ಶೀಘ್ರದಿಂದ ಎಡಭಾಗದಲ್ಲಿ ನಡದರು. ಏನು ಮಾಡು ವಂಥಾವರಾಗಿ ಎಂದರೆ, ರಾಮಾವತಾರದ ಉತ್ಕೃಷ್ಟವಾದಂಥ ಚರಿತ್ರಿಯನ್ನು ಗಾನಮಾಡತ ನಡದರು. ಆ ವ್ಯಾಳ್ಯಾದಲ್ಲಿ ಗಂಧರ್ವರುಗಳಿಂದ ಗಾಯನಮಾಡಿಸಿ-ಕೊಳ್ಳತ, ಬ್ರಹ್ಮದೇವರೇ ಮೊದಲಾಗಿ ಉಳ್ಳ ದೇವತಿಗಣಗಳಿಂದ ವೇದರೂಪವಾದ, ಉತ್ತಮಾರ್ಥ ವಾಕ್ಯಗಳಿಂದ ಸರ್ವದಾ ಸ್ತೋತ್ರವಾಡಿಸಿಕೊಳ್ಳತ, ಅವರಿಂದ ಮಂದಾರ ಪಾರಿಜಾತ ಹೂವಿನ ಮಳಿ ಕರಸಿಕೊಳ್ಳತ, ಸರ್ವಪ್ರಾಣಿಗಳಿಂದ ಏಕಾಗ್ರಚಿತ್ತದಲ್ಲಿ ಭಕ್ತ್ಯತಿಶಯದಿಂದ ಎವಿ ಹಾಕದೆ ಸವಿಸೀಚೀನ ಕಣ್ಣುಗಳಿಂದ, ಆಶ್ಚರ್ಯರೂಪದಿಂದ ಕಾಣಿಸಿಕೊಂಬೋ ಅಂಥಾತನಾಗಿ, ಶೇಷ, ಗರುಡ, ರುದ್ರಾದಿ ನಿಜಭಕ್ತರುಗಳಿಂದ ಜೆನ್ನಾಗಿ ಸೇವಿತವಾದಂಥ ವೈಕುಂಠಕ್ಕೆ ಹೋಗು ವಂಥಾತನಾದನು. ಬ್ರಹ್ಮ, ರುದ್ರ, ಶೇಷ, ಗರುಡ, ದಕ್ಷಪ್ರಜೇಶ್ವರ ಮೊದಲಾಗಿ ಸಮಸ್ತರಿಂದ ಸ್ತೋತ್ರಮಾಡಿಸಿಕೊಳ್ಳತ, ಶೋಭನಗುಣ ವಿಸ್ತಾರವಾದಂಥ ರಾಮ-ದೇವರು, ಮಾನಸಸರೋವರ ಪರಿಯಂತ ಭೂಮೀಮ್ಯಾಲೆ ನಡದನು. ಅಲ್ಲಿಂದ ಮೆಲ್ಲಮೆಲ್ಲಗೆ ರಘುವೀರ, ಅಂತರಿಕ್ಷಮಾರ್ಗದಲ್ಲಿ ನಡಯಲಾಗಿ, ಸಮಸ್ತ ಪ್ರಾಣಿಗಳೂ ಅಲೌಕಿಕವಾದಂಥ ಶರೀರವುಳ್ಳವರಾದರು.

ಆಕಾಶಮಾರ್ಗ ಐದಿದ ತರುವಾಯ ಬ್ರಹ್ಮರಾಯ, ಸಮರ್ಥನಾದಂಥ ಹರಿಯನ್ನು ಸ್ತೋತ್ರಮಾಡಿ, ಬಿನ್ನಹ ಮಾಡಿಕೊಳ್ಳಥಾನೆ. 'ಸ್ವಾಮಿ, ನೀನು

ಲಂಕಾಪಟ್ಟಣದಲ್ಲಿ ರಾವಣನ ಕೂಡ ಯುದ್ಧ ಮಾಡುವಾಗ, ಕಪಿಸೇನಿ ಸತ್ತು ಯಮಪಟ್ಟಣಕ್ಕೆ ಬಂದಿರಲಾಗಿ, ಅಷ್ಟೂ ಕಪಿಸೇನಿ ಬರಬೇಕಾಗಿ, ಸಮಸ್ತರನ್ನೂ ಕಳುಹು ಎಂದು ಯಮಧರ್ಮಗೆ ನಿನ್ನ ಆಜ್ಞೆ ಆಗಲಿಕ್ಕೆ, ಸಮಸ್ತರನ್ನೂ ಕಳುಹಿದನು. ಆ ಸಮಯದಲ್ಲಿ ನಿನ್ನ ಪಾದಕಮಲಗಳ ಸ್ತೋತ್ರಮಾಡಲಿಕ್ಕೆ, ಇಂದ್ರಾದಿಗಳ ಸಂಗಡ ಬಂದಿದ್ದಂಥ ದಶರಥರಾಯ ನಿನ್ನ ಸಮೀಪಕ್ಕೆ ಬಂದು, ನಿನ್ನಾಜ್ಞೆದವ್ಯಾಲೆ ವೀರಲೋಕಕ್ಕೆ ಬಂದನು. ನಿನ್ನಾಜ್ಞೆದಿಂದ ಬಂದಂಥ ದಶರಥರಾಯಗೆ, ಯೋಗ್ಯವಾದಂಥ ಸ್ಥಾನವು ನಿನ್ನಿಂದ ಕೊಡಲ್ಪಟ್ಟಿತು. 'ನೀನು ವನವಾಸದಿಂದ ಬಂದಮ್ಯಾಲೆ, ಮೂರುಸಹಸ್ರ ವರುಷಕ್ಕೆ ಕೌಸಲ್ಯಾದೇವೇರು ಮೊದಲಾದ ನಿನ್ನ ತಾಯಂದಿರು, ದೇಹವಿಯೋಗಮಾಡಿ ಪರಲೋಕಕ್ಕೆ ಬಂದರು. ದಶರಥರಾಯನಲ್ಲಿ ಲೋಕ ಕೊಟ್ಟು ಹತ್ತುಸಹಸ್ರ ವರುಷವಾಯಿತು.' ತಾಯಂದಿರ ವಿಷಯದಲ್ಲಿ ಒಂದೇ ಲೋಕ ಕೊಟ್ಟನು, ಅಪವಾದ ಬಂತಲ್ಲ ಎಂದರೆ 'ನಿನ್ನ ದ್ರೋಹ ಮಾಡಿದ್ದರಿಂದ ಸದ್ಗತಿಗೆ ಅನರ್ಹಳಾದಂಥ ಕೈಕೇಯಿಗೆ, ದಯಾಳು ವಾದಂಥ ನಿನ್ನ ಆಜ್ಞೆದಿಂದ ಸದ್ಗತಿ ಕೊಟ್ಟೇನು. ನಿನ್ನಿಂದಾದರೂ ಏನುಕಾರಣ ಆಜ್ಞಾಪಿಸಲ್ಪಟ್ಟಿತೆಂದರೆ, ನಿನ್ನ ದಾಸನಾದ ಭರತನ್ನ ಹಡದ ಪ್ರಭಾವದಿಂದ, ನರಕಕ್ಕೆ ಹೋಗಬಾರದೆಂಬೋ ಅಭಿಪ್ರಾಯದಿಂದ ನಿನ್ನಿಂದ ಆಜ್ಞಾಪಿಸಲ್ಪಟ್ಟಿತು.' ಹಾಂಗಾದರೆ ರಾಮನ ಕುರಿತು ಅಪರಾಧ ಮಾಡಿದ್ದಕ್ಕೆ ಫಲವೇನು ಎಂದರೆ, 'ಭರತನ ಪ್ರಸವಿಸಿದ್ದರಿಂದ ಕೈಕೇಯಿಗೆ ಸದ್ಗತಿ ಪ್ರಾಪ್ತವಾಯಿತು. ಕೈಕೇಯಿ ಸ್ವಪ್ನೇವ ಅಪರಾಧ ಮಾಡಿದಾಕೆಯಲ್ಲ. ದುಷ್ಟಾವೇಶದಿಂದ ಅಪರಾಧ ಮಾಡಿದಳು. ಆ ದುಷ್ಟಳಾದಂಥ, ನಿಕೃತಿ ಎಂದು ನಾಮದಿಂದ ಪ್ರಸಿದ್ಧಳಾದಂಥಾಕೀನ, ನಿತ್ಯ ವಾದಂಥ ತಮಸ್ಸಿನಲ್ಲಿ ನನ್ನಿಂದ ಹಾಕಲ್ಪಟ್ಟಿತು. ನಿಕೃತೀದೆಸಿಯಿಂದ ಕೈಕೇಯಿಗೆ ಹಾನಿ ಆಯಿತು. ಅದೇನೆಂದರೆ, ಚಲನಲೋಕ ಪ್ರಾಪ್ತವಾಯಿತು, ಕೌಸಲ್ಯಾದೇವಿ ಹಾಂಗೆ ಅಚಲಲೋಕ ಪ್ರಾಪ್ತವಾಗಲಿಲ್ಲ. ಒಂದಾನೂಂದು ಕಾಲಕ್ಕೂ ಅಚಲ-ಲೋಕ ಪ್ರಾಪ್ತವಾಗಲಿಲ್ಲ. ಏನುಕಾರಣವೆಂದರೆ ನಿಕೃತಿ ಆವೇಶ ಹೋದ ತರುವಾಯ, ಪಶ್ಚಾತ್ತಾಪದಿಂದ ನಿನ್ನಲ್ಲಿ ಭಕ್ತಿ ಮಾಡಿದಳು. ಆದಕಾರಣದಿಂದ ಚಲನಲೋಕದಲ್ಲಿದ್ದಾಳೆ. ಭಕ್ತಿ ಪೂರ್ತಿಯಾದ ತರುವಾಯ, ಅಚಲಲೋಕವನ್ನು ಕಾಲಾಂತರದಲ್ಲಿ ಐದಾಳು. ಶ್ರೀರಾಮನ ದ್ರೋಹದಲ್ಲಿ ಮುಖ್ಯಕಾರಣಳಾದ ಕಡಿಯಿಂದ, ದುಷ್ಟಮೂರ್ಖವತಿಯಾದಂಥ ಮಂಥರಾನ್ನ ಅಂಧತಮಸ್ಸಿನಲ್ಲಿ ಹಾಕಿದ್ದೀನಿ. ಸೀತಾದೇವಿ ನಿಮಿತ್ತವಾಗಿ ನಿನ್ನ ನಿಂದ ಮಾಡಿದಂಥ ಸುರಾಣಕರು ಮಹಾ ತಮಸ್ಸು ಐದಿದರು. ಪ್ರಾಯಶಃ ರಾಕ್ಷಸರು ತಮಸ್ಸು ಐದ್ಯಾರು. ಅದರೊಳಗೆ ಉಳಿದಂಥ ರಾಕ್ಷಸರು, ನೀನು ಕೃಷ್ಣಾವತಾರ ಮಾಡತ ಇರಲಾಗಿ, ನಿನ್ನ ದ್ರೋಹದಿಂದ ತಮಸ್ಸು ಐದ್ಯಾರು. ಅದರೊಳಗೂ ಉಳಿದಂಥ ರಾಕ್ಷಸರು

ವೈವಸ್ವತಮನ್ವಂತರದಲ್ಲಿ, ಇಪ್ಪತ್ತೆಂಟನೇ ಮಹಾಯುಗದೊಳಗೆ ಕಲಿಯುಗದಲ್ಲಿ ನಾಲ್ನೂರಾವಿರದ ಮುನ್ನೂರು (೪,೩೦೦) ವರುಷ ಹೋಗತ ಇರಲಾಗಿ, ಮಹತ್ತಾದಂಥ ತಮಸ್ಸು ಐದ್ಯಾರು. ಸಮಸ್ತ ರಾಕ್ಷಸರು ಬ್ರಹ್ಮಪ್ರಳಯಾನಂತರದಲ್ಲಿ ತಮ್ಮ ತಮ್ಮಗೆ ಯೋಗ್ಯವಾದ ತಮಸ್ಸು ಐದ್ಯಾರು.' ತಮಸ್ಸು ಪ್ರಾಪ್ತವಾಗೋ ಅಂಥಾವರು, ತಮಸ್ಸಿನ ಸಾಧನ ಸಂಪತ್ತು ನಿಮಿತ್ತವಾಗಿ ಭೂಮೀನ್ಯಾಲೆ ಹುಟ್ಟಿ, ಪಾಪವನ್ನ ಇಚ್ಛೈಸಥಾರೆಂದು ದೃಷ್ಟಾಂತ ತೋರಿಸಿದರು.

' ಹೇ ಸರ್ವೇಶ್ವರಾ, ನಿನ್ನ ಪಾದಾಂಬುಜ ಮಕರಂದದಲ್ಲಿ ಏಕನಿಷ್ಠ ಉಳ್ಳಂಥ, ನಿನ್ನ ಕೂಡ ಬಂದಂಥ ಖಗಾದಿಗಳಿಗೆ ಉತ್ತಮವಾದಂಥ ಸ್ಥಾನವನ್ನು ಕೊಡು. ಎಲ್ಲೈ ಸ್ವಾಮೀ, ಬ್ರಹ್ಮನಾದ ನಾನೂ, ರುದ್ರ, ಇಂದ್ರ ಮೊದಲಾದ ಸಮಸ್ತ ದೇವತಿಗಳೂ ನಿನ್ನ ಭೃತ್ಯರು. ಈ ಸಮಯದಲ್ಲಿ ನಮಗೆ ದಾವ ಪ್ರಯೋಜನ ನಿರೂಪಿಸಬೇಕೋ ಆ ಪ್ರಯೋಜನ ಶೀಘ್ರದಿಂದ ನಿರೂಪಿಸು ' ಎಂದು ಶತಾನಂದ ನಾದಂಥ ಬ್ರಹ್ಮ ಮಾತನಾಡತಾ ಇರಲಾಗಿ, ಶ್ರೀರಾಮದೇವರು ಕೇಳಿ ಶೋಭನಕರವಾದಂಥ ಮುಗುಳುನಗೆಯಿಂದ ಯುಕ್ತವಾದಂಥ ಅಧರಪಲ್ಲವ ಉಳ್ಳವನಾಗಿ, ಮೇಘಗಂಭೀರ ವಚನ ಆಡಥಾನೆ. ' ಎಲ್ಲೈ ಕಮಲೋದ್ಭವನೇ, ನನ್ನಿಂದ ನಿನಗೆ

ಜಗದ್ಗುರುತ್ವ ಆಜ್ಞಾಪಿಸಲ್ಪಟ್ಟಿತು. ಗುರೂಪದೇಶ ಅಪೇಕ್ಷಿಸಿದಂಥಾವರಿಗೆ ನಿನ್ನಿಂದ ಸದ್ಗತಿಯು ಆಜ್ಞಾಪಿಸಲ್ಪಟ್ಟಿತು. ಆದಕಾರಣ ನಿನ್ನ ದ್ವಾರದಿಂದಲೇ ಸದ್ಗತಿ ಆಗಬೇಕು. ನೀನು ನನ್ನ ಆಜ್ಞೆಯಿಂದ, ನನ್ನ ಸಂಗಡ ಬಂದ ಪ್ರಾಣಿಗಳಿಗೆ ಲೋಕವನ್ನು ಕೊಡು. ಇಂಥಿಂಥಾ ಲೋಕ ಇಂಥಿಂಥಾವರಿಗೆ ಕೊಡು ಎಂದು ನನ್ನಿಂದ ಹೇಳಲ್ಪಡುವುದಿಲ್ಲ. ಏನುಕಾರಣವೆಂದೀ, ನನ್ನ ಹೃದಯಭಾವವನ್ನು ನೀ ಒಬ್ಬ ಬಲ್ಲೆ ' ಎಂದು ಮಾತನಾಡತ ಇರಲಾಗಿ, ಬ್ರಹ್ಮನು ರಾಮನ ಅಭಿಪ್ರಾಯ ತಿಳಿದು, ಇರುವು ಮೊದಲಾಗಿ, ತೃಣ ಕಡಿಯಾಗಿ ಜೀವರುಗಳಿಗೆ ಅತ್ಯುತ್ತಮ ಲೋಕವನ್ನು ಕೊಟ್ಟನು.

ಅತ್ಯುತ್ತಮ ಲೋಕವೆಂದಿದ್ದಕ್ಕೆ ವ್ಯಾಖ್ಯಾನ ಮಾಡಥಾರೆ. ರಾಮನ ಸಂಗಡ ಬಾರದೇ ಇದ್ದರೆ ದಾವ ಲೋಕ ಆಗೋದೋ, ಅದಕ್ಕಿಂತಲೂ ಉತ್ತಮಲೋಕ ಕೊಟ್ಟನು. ಆ ಲೋಕ ಎಂಥಾದ್ದೆಂದರೆ, ವೈಷ್ಣವಲೋಕ, ವಿಷ್ಣು ಸಂಬಂಧಿಯಾದಂಥಾದ್ದು. ಹಾಂಗಾದರೆ, ಪುರಾಣದಲ್ಲಿ ' ಸಾಂತಾನಿಕಲೋಕ ಕೊಟ್ಟನು ' ಅಂತ ಅದೆ. ಇಲ್ಲಿ ವೈಷ್ಣವಲೋಕ ಕೊಟ್ಟನು ಅಂದಮ್ಯಾಲೆ, ಪುರಾಣವಚನಕ್ಕೂ ಇದಕ್ಕೂ ವಿರೋಧ ಬಂತಲ್ಲ ಎಂದಲ್ಲೆ, ಆದೇ ಲೋಕಕ್ಕೆ ಸಾಂತಾನಿಕ ವ್ಯಾಜದಿಂದ, ಪುರಾಣ ಹೇಳುವಂಥ ಜ್ಞಾನಿಗಳು, ಸಾಂತಾನಿಕಲೋಕವೆಂದು ಬಲ್ಲರು. ಆ ಲೋಕವು ಸ್ವರ್ಗಾದಿಗಳಂತೆ ಅನಿತ್ಯವೆಂದು ತಿಳಿಯಬ್ಯಾಡಿ, ನಿತ್ಯವಾದಂಥಾದ್ದು. ಸಂಸಾರದಲ್ಲಿ ಮುಕ್ತರಾದಂಥ ಜೀವರುಗಳು, ಮುಪ್ಪಿನಿಂದ ಮರಣರಹಿತರಾಗಿ,

ಸರ್ವದುಃಖಗಳಿಂದ ವರ್ಜಿತರಾಗಿ, ನಿತ್ಯನಿರಂತರದಲ್ಲಿ ಸ್ವರೂಪಭೂತದಿಂದ ಅಧಿಕ ಸುಖವುಳ್ಳವರಾಗಿ, ಆ ಲೋಕದಲ್ಲಿ ವಾಸಮಾಡಿಕೊಂಡು ಇರಥಾರೆ. ರಾಮಾವತಾರದಲ್ಲಿ ದಾವದಾವ ದೇವತಿಗಳು ದೇವರ ಆಜ್ಞೆದಿಂದ ಮನುಷ್ಯಶರೀರ, ವಾನರಶರೀರ ಉಳ್ಳವರಾಗಿ ಭೂಮಿಯಲ್ಲಿ ಹುಟ್ಟಿದ್ದರು, ಅಶ್ವಿನೀದೇವತಿಗಳ ಅವತಾರರಾದಂಥ ವಿವಿದ ಮೈಂದರು ಹೊರತಾಗಿ, ಸಮಸ್ತರೂ ತಮ್ಮತಮ್ಮ ಮೂಲರೂಪ ಐದಿದರು.

ವಿವಿದ ಮೈಂದ ವಿನಾವಾಗಿ ಅಂತ ಏನುಕಾರಣ ಹೇಳಿದರು ಎಂದಲ್ಲಿ, ಅಸುರಾವೇಶ ನಿಮಿತ್ತ ರಾಮನ ಕೂಡ ಹೋಗಲಿಲ್ಲ. ಅದೇ ಶರೀರದಿಂದ, ಕೃಷ್ಣಾವತಾರ ಪರಿಯಂತ ಇದ್ದರು. ಈ ಕಾಲದಲ್ಲಿ ಅವರಿಬ್ಬರೂ ಮರಣ ಐದಲಿಲ್ಲ. ಏನುಕಾರಣವೆಂದಲ್ಲಿ, ಪೂರ್ವದಲ್ಲಿ ಅಮೃತಪಾನ ಮಾಡಿದ್ದರು. ಜರಾಮರಣ-ರಹಿತತ್ವದಲ್ಲಿ ಮತ್ತೆ ಒಂದು ಪ್ರಯೋಜನ ಹೇಳಥಾರೆ. ಪೂರ್ವದಲ್ಲಿ ವಿವಿದ ಮೈಂದರ ತಪಸ್ಸಿನಿಂದ ತುಷ್ಟನಾದ ಬ್ರಹ್ಮದೇವರು, ಇಬ್ಬರನ್ನೂ ಜರಾಮರಣ-ರಹಿತರನ್ನಾಗಿ ಮಾಡಿದ್ದ. ಆದಕಾರಣದಿಂದ ಮಹಾಬಲವುದವುಳ್ಳವರಾಗಿ, ಅಮೃತ ನಿಮಿತ್ತವಾಗಿ ಕ್ಷೀರಸಾಗರಮಥನಕಾಲದಲ್ಲಿ, ಬಲಾತ್ಕಾರವಾಗಿ ಅಮೃತಪಾನ ಮಾಡೇವೆಂದು ದೇವತಿಗಳ ಸಾಲಿನಲ್ಲಿ ಕುಳಿತರು. ' ದೇವಾವತಾರವಾದರೂ ಸರಿಯೆ, ವೈದ್ಯಕರ್ಮ ಮಾಡಥಾರೆ, ಅಮೃತಕ್ಕೆ ಅರ್ಹರಲ್ಲ ' ಎಂದು ದೇವತಿಗಳಿಂದ ಅಮೃತಪಾನ ಮಾಡೋದರಲ್ಲಿ ನಿವಾರಿತರಾಗಿದ್ದರು. ಹಾಂಗಾದರೆ ಇವರಿಬ್ಬರಿಗೆ ಹ್ಯಾಂಗೆ ಅಮೃತ ಸಾಧ್ಯವಾಯಿತು, ಪುನಃ ಹ್ಯಾಂಗೆ ಮಾಡಿದರು ಎಂದಲ್ಲಿ, ಅಮೃತನಿಮಿತ್ತವಾಗಿ ದೇವತಿಗಳಿಗೂ ದೈತ್ಯರುಗಳಿಗೂ ಯುದ್ಧ ಆರಂಭವಾಯಿತು. ಆ ಕಾಲದಲ್ಲಿ ದೇವತಿಗಳು ಅಶ್ವಿನೀದೇವತಿಗಳ ಕೈಯ, ಅಮೃತ ಬಚ್ಚಿಡಲಿಕ್ಕೆ ಕೊಟ್ಟರು. ಮೊದಲೇ ತಮಗೆ ಪ್ರಾಪ್ತವಾಗಿದ್ದಿಲ್ಲವೆಂದು, ಅದೇ ಸಮಯದಲ್ಲಿ ಶೀಘ್ರ ಪಾನಮಾಡಿದರು. ಆದ್ದರಿಂದ ದೇವತಿಗಳೊಳಗೆ ಅಶ್ವಿನೀದೇವತಿಗಳು ಎಂದು ಎಣಿಕೆಗೆ ಬಂದಾರೆ. ಹೊರಗಿನವರು ಕುಡಿಯಲಿಲ್ಲ, ಹ್ಯಾಂಗಾದರೂ ತಮ್ಮವರೇ ಕುಡಿದರೆಂದು ಕಲಹ ಬಲಿಸಿದ್ದಿಲ್ಲ, ದೇವತಿಗಳು ಸುಮ್ಮಗಾದರು. ದೇವತಿಗಳ ಅವಜ್ಞರೂಪವಾದಂಥ ದೋಷನಿಮಿತ್ತದಿಂದ, ಉಗ್ರವಾದಂಥ ಅಸುರಸ್ವಭಾವ ಐದಿದರು. ಈ ಕಾರಣದಿಂದ ರಾಮನ ಸಂಗಡ ಪರಂಧಾಮಕ್ಕೆ ಐದಲಿಲ್ಲ.

ಅಂಗದನು ರಾವುನನುಜ್ಞದಿಂದ ರಘುವರ್ಯನ ಮಗನಾದಂಥ ಕುಶನಿಂದ ಯುಕ್ತನಾಗಿ, ರಾಜ್ಯಪರಿಪಾಲನಿ ಮಾಡಿದನು. ತದನಂತರದಲ್ಲಿ ತನ್ನ ಕಪಿರೂಪ ಬಿಟ್ಟು, ತನ್ನ ಮೂಲರೂಪ ಚಂದ್ರನ ಕೂಡಿದನು. ಇಂದ್ರನವತಾರನಾದಂಥ ಕುಶ, ರಾಮ ಆಳಿದ ಸಮಗ್ರ ರಾಜ್ಯ ಆಳಿ, ತನ್ನ ದೇಹವಿಯೋಗ ಮಾಡಿಕೊಂಡು ಮೂಲರೂಪ ಇಂದ್ರನ ಕೂಡಿದನು. ಧರ್ಮದಲ್ಲಿ ನಿಷ್ಠಾವುಳ್ಳ ವಿಭೀಷಣ, ಶ್ರೀರಾಮದೇವರ ಆಜ್ಞೆ ಸ್ವೀಕರಿಸಿ, ಕುಬೇರನ ಸೇನಾಪತಿಯಾಗಿ ಲಂಕಾಪಟ್ಟಣದಲ್ಲಿ

ಅರಸಾಗಿ, ಕಲ್ಪಪರಿಯಂತ ರಾಕ್ಷಸರ ಸಂರಕ್ಷಿಸಿದನು. ಜಾಂಬವಂತ ಪರಂಧಾವುಕ್ಕೆ ಹೋಗಲಿಲ್ಲ. ಏನುಕಾರಣವೆಂದಲ್ಲಿ, ಕೃಷ್ಣಾವತಾರದಲ್ಲಿ ಜಾಂಬವತೀಯನ್ನು ಕೃಷ್ಣಗೆ ಮದುವಿ ಮ್ಹಾಡಿಕೊಡಬೇಕೆಂದು ಜಾಂಬವಂತನ್ನ ನಿಂದ್ರಿಸಿ, ಸ್ವಾಮಿ ಪರಂಧಾವುಕ್ಕೆ ಹೋದನು. ಶ್ರೀರಾಮದೇವರ ಆಜ್ಞೆದಿಂದ ಜಾಂಬವಂತನು ಕೃಷ್ಣನ ಹೆಂಡತಿಯಾದ ಜಾಂಬವತಿಯ ಉತ್ಪತ್ಯರ್ಥವಾಗಿ ತಪಸ್ಸು ಮಾಡಿ. ಕೊಳ್ಳತಾ, ಭೂಮಿಯಲ್ಲೀವೇ ವಾಸ ಮಾಡಿದನು. ಸ್ವಾಮಿ ತನ್ನ ಸ್ವಸ್ಥಾನಕ್ಕೆ ಹೋದ ತರುವಾಯ, ರಘುಕುಲಕ್ಕೆಲ್ಲ ಶ್ರೇಷ್ಠನಾದಂಥ ರಾಮದೇವರು, ಹಿಂದು ರಾಮರೂಪದಿಂದ ದೇವೇಂದ್ರ ಮೊದಲಾಗಿ ದೇವತಿಗಳಿಂದ ಪೂಜಿಮಾಡಿಸಿಕೊಳ್ಳತ ಸ್ವರ್ಗದಲ್ಲಿ ವಾಸ ಮಾಡಿದನು. ಮುಖ್ಯಸ್ವಾಮಿಯಾದಂಥ ರಘುನಾಥ, ಎರಡನೇ ರಾಮರೂಪದಿಂದ ಬ್ರಹ್ಮನ ಕೈಯ ಸತ್ಯಲೋಕದಲ್ಲಿ ಪೂಜಿ ಮಾಡಿಸಿಕೊಳ್ಳತ ವಾಸ ಮಾಡಿದನು. ಸ್ವಾಮಿ ಮೂರನೇ ರಾಮರೂಪದಿಂದ ತನ್ನ ಮನಿಯಾದಂಥ ಶ್ವೇತದ್ವೀಪದಲ್ಲಿ ವಾಸ ಮಾಡಿದನು. ಅದೇ ಮೂರನೇ ರಾಮರೂಪದಿಂದ, ವೈಕುಂಠ ಎಂದು ಹೆಸರುಳ್ಳಂಥ ತನ್ನ ಮನಿಯಲ್ಲಿ, ಸಮರ್ಥನಾದಂಥ ರಾಮ-ದೇವರು ಒಪ್ಪಿದನು. ಉತ್ಕೃಷ್ಟವಾದಂಥ ಭಕ್ತಿಯಿಂದ ದೇವತಿಗಳು ಕಳಹುತಾ ಹೋಗಿ, ತಮ್ಮತಮ್ಮ ಮರ್ಯಾದಸ್ಥಳದಲ್ಲಿ ಕ್ರಮಾನುಸಾರದಿಂದ ಶ್ರೀರಾಮ-ದೇವರನ್ನ ನೋಡತಲೇವೇ, ಸ್ತೋತ್ರಮಾಡತಲೇವೇ ನಿಂತುಕೊಂಡರು. ಕ್ರಮಾನುಸಾರದಿಂದ ಎಂದದ್ದಕ್ಕೆ ವಿಸ್ತಾರ ಹೇಳಥಾರೆ. ಬ್ರಹ್ಮ ವಾಯು, ಗರುಡ ಶೇಷ ರುದ್ರ, ಇಂದ್ರ ಕಾಮ, ದಕ್ಷಪ್ರಜೇಶ್ವರ ಇವರೇ ಮೊದಲಾಗಿ ಉಳ್ಳಂಥ ಚಂದ್ರಸೂರ್ಯಾದಿಗಳು, ತಾರತಮ್ಯಾನುಸಾರದಿಂದ ಹಿಂದೆ ಹೋಗಿ, ರಘುವರ್ಯನ ಆಜ್ಞೆ ಶಿರಸಾವಹಿಸಿ ಹಿಂದಕ್ಕೆ ನಿಂತರು. ಬ್ರಹ್ಮದೇವರೇ ಮೊದ ಲಾದಂಥ ಗರುಡ, ಶೇಷ, ರುದ್ರ, ಇಂದ್ರನೇ ಮೊದಲಾದಂಥ ದೇವತಿಗಳು, ತರುವಾಯ ಅಪ್ಪಣಿ ಪಡೆದು ತಮ್ಮತಮ್ಮ ಲೋಕಕ್ಕೆ ಹೋದರು.

ಅನಂತರ ಹನುಮಂತದೇವರು ಹಿರೇ ಬದರಿಕಾಶ್ರಮಕ್ಕೆ ಹೋಗಿ ಶ್ರೀ ನಾರಾಯಣನ ಪಾದಸೇವಿ ಮಾಡುವಂಥಾತನಾದನು. ಸಮಸ್ತ ಶಾಸ್ತ್ರಗಳಿಂದ ಪೂರ್ಣನಾದಂಥ ವೇದವ್ಯಾಸನ ವಾಕ್ಯ, ಬ್ರಹ್ಮಸೂತ್ರ ಮೊದಲಾದ ಶಾಸ್ತ್ರಗಳ ಪರಮಾನಂದದಿಂದ ಕರ್ಣಪುಟದಲ್ಲಿ ಧರಿಸುವಂಥಾತನಾದ, ಸರ್ವದಾ ದೇವೋ-ತ್ತಮರುಗಳಿಗೆ, ಹಾಂಗೆ ಮುನಿಗಳಿಗೆ ಪರಮಾತ್ಮನ ವಿಷಯಕವಾದಂಥ ತತ್ತ್ವ-ಜ್ಞಾನವನ್ನು ಹೇಳೋ ಅಂಥಾತನಾಗಿ ಸುಖದಿಂದ ವಾಸ ಮಾಡಿದನು. ತರುವಾಯ ರಾಮನಾಜ್ಞೆದಿಂದ, ಕೆಂಪುರುಷಖಂಡದಲ್ಲಿದ್ದಂಥ ಬಹಳ ಸ್ಥಳಗಳಲ್ಲಿ ಹನುಮದ್ರೂಪ ದಿಂದ ರಾಜ್ಯ ಮಾಡಿದನು. ಹಾಂಗೇವೇ ಸಮಸ್ತವಾದಂಥ ನಾರಾಯಣನ ಲೋಕ ಗಳಲ್ಲಿ, ಮಿಗಿಲಾದ ಸ್ಥಳಗಳಲ್ಲಿ, ಅನೇಕ ಹನುಮದ್ರೂಪದಿಂದ ತನ್ನ ಮನ ಬಂದ-

ಹಾಂಗೆ ವಾಸ ಮಾಡಿದನು. ಈಗ ಹೇಳಿದ ಪ್ರಕಾರ ರೂಪಗಳ ಧರಿಸಿ, ಶತಕೋಟಿ ಶ್ಲೋಕಗಳಿಂದ ವಿಸ್ತಾರವಾದ ಮೂಲರಾಮಾಯಣ, ಹಾಂಗೆ ಪಾಂಚರಾತ್ರಾಗಮ ದಿಂದ ಭಾರತವನ್ನು ಗಾಯನ ಮಾಡತ, ಹಾಂಗೆ ಬ್ರಹ್ಮಸೂತ್ರಗಳಿಂದ ಸಹಿತವಾದ ಸರ್ವ ವೇದಗಳ ವ್ಯಾಖ್ಯಾನ ಹೇಳತ, ಸುಖಪೂರ್ಣದಿಂದ ಇರಹೊಕ್ಕನು. ಶ್ರೀರಾಮನು ಹನುಮಂತನಿಂದ ಸಹಿತನಾಗಿ, ಭರತ ಶತ್ರುಘ್ನರಿಂದ ಯುಕ್ತನಾಗಿ, ಗರುಡನೇ ಮೊದಲಾದ ವಿಷ್ವಕ್ಸೇನಾದಿ ಪಾರ್ಶದರುಗಳಿಂದ ಸೇವಿ ಮಾಡಿಸಿಕೊಳ್ಳತ, ಕ್ಷೀರಸಮುದ್ರ ಶ್ವೇತದ್ವೀಪದಲ್ಲಿ ವಾಸಮಾಡಿದನು. ಈ ಪ್ರಕಾರ ಬಹಳವಾದಂಥ ದೇವರ ರೂಪಗಳಿಗೆ ಭೇದ, ಶಂಕಾ ಮಾಡಬಾರದು ಎಂದು ಹೇಳಥಾರೆ. ಸಮರ್ಥ ನಾದಂಥ ನಾರಾಯಣನು, ಬ್ರಹ್ಮಪ್ರಳಯದಲ್ಲಿ ರಾಮಕೃಷ್ಣಾದಿ ಸರ್ವರೂಪಗಳೂ ಒಂದೇ ಮೂಲರೂಪವಾಗಿ, ಅಹಿಪತಿಯಾದಂಥ ಶೇಷನಮ್ಯಾಲೆ ಯೋಗನಿದ್ರಿ ಮಾಡಥಾನೆ. ಲಕ್ಷ್ಮೀಪತಿಯಾದಂಥ ಅನೆಂತ ಸದ್ಗುಣಗಳಿಂದ ಪೂರ್ಣನಾದಂಥ ಹರಿ, ಸೃಷ್ಟಿಕಾಲದಲ್ಲಿ ತನ್ನ ಸ್ವೇಚ್ಛೆಯಿಂದ, ಬ್ಯಾರೆಬ್ಯಾರೆ ಬಹುರೂಪಗಳಿಂದ, ವಾಸುದೇವ ಸಂಕರ್ಷಣ ಪ್ರದ್ಯುಮ್ನ ಅನಿರುದ್ಧ ಹಾಂಗೆ ಮತ್ಸ್ಯಾದಿ ಅನೇಕ ರೂಪಗಳ ಅವತಾರಮಾಡಿ ಕ್ರೀಡಿಸಥಾನೆ.

ಈ ಪ್ರಕಾರ ವಿಸ್ತಾರವಾದಂಥ ರಾಮಕಥ ಹೇಳಿ, ಸ್ವೀಕಾರ ಮಾಡಲಿಕ್ಕೆ ಪ್ರಯೋಜಕವಾದಂಥ ಪ್ರಮಾಣಮೂಲತ್ವ, ಆಪ್ತಿಮೂಲತ್ವವನ್ನು ತೋರಿಸಥಾರೆ. 'ಹಿಂದೆ ಹೇಳಿದ ಪ್ರಕಾರದಿಂದ ನನ್ನಿಂದ ಈ ನಿರ್ದುಷ್ಟವಾದಂಥ ಕಥಿಯು ಹೇಳಲ್ಪಟ್ಟಿತು. ದಾವ ಪ್ರಕಾರ ಎಂದರೆ, ಅಶೇಷ ಪುರಾಣಗಳ ದೆಸಿಯಿಂದಲೂ, ಪಾಂಚರಾತ್ರಾಗಮ ದೆಸಿಯಿಂದಲೂ, ಭಾರತದ ದೆಸಿಯಿಂದಲೂ, ಋಗಾದಿ ವೇದಗಳ ದೆಸಿಯಿಂದಲೂ, ರಾಮಾವತಾರದಲ್ಲಿ ಆದ ರಾಮಾಯಣದ ದೆಸಿ ಯಿಂದಲೂ, ಪರಸ್ಪರ ವಿರೋಧ ಪರಿಹಾರದಿಂದ, ಯುಕ್ತಿಯಿಂದ, ಬುದ್ಧಿಬಲದಿಂದ, ನಾರಾಯಣನ ಪ್ರಸಾದದಿಂದಲೇ ಮಹಾಕಲ್ಪ, ಅವಾಂತರಕಲ್ಪ ಭೇದದಿಂದ ಭಿನ್ನ ವಾದಂಥ ಕಲ್ಪಗಳ ಅನುಸಾರದಿಂದ, ಯಥಾರ್ಥವಾಗಿ ನಿರ್ಣಯವು ಇದೇ ಪ್ರಕಾರವೇ ಹೊರ್ತು, ಮತ್ತೆ ಒಂದು ಪ್ರಕಾರವಲ್ಲ. ಹೀಂಗೆಂದು ನಿರ್ಣಯಮಾಡಿ ಹೇಳಲ್ಪಟ್ಟಿತು. ಅಶೇಷ ಪುರಾಣಗಳ ದೆಸಿಯಿಂದಲೂ ಎಂತ ಏನುಕಾರಣ ಅನಬೇಕು ಎಂದಲ್ಲಿ, ಒಂದು ಗ್ರಂಥಾಶ್ರಯದಿಂದ ನಿರ್ಣಯವು ಮಾಡಲ್ಪಟ್ಟಿಲ್ಲ. ಆದಕಾರಣ ದಿಂದ ನನ್ನಿಂದ ಹೇಳಲ್ಪಟ್ಟಂಥ ಕಥಿಯಲ್ಲಿ ಒಂದು ಗ್ರಂಥವಿರೋಧವನ್ನೂ ಶಂಕಿಸ ಬಾರದು. ಏನುಕಾರಣವೆಂದರೆ, ಬಹು ಗ್ರಂಥಗಳಿಗೆ ವಿರೋಧವಾದಂಥ ಒಂದು ಗ್ರಂಥದಲ್ಲಿ, ಅಸುರಜನಮೋಹನಾರ್ಥವಾಗಿ, ಪ್ರಕಾರಾಂತರದಿಂದ ಪ್ರವೃತ್ತ ವಾಗಿರತದೆ. ಕೆಲವು ಪುರಾಣಗಳಲ್ಲಿ ಪುರುಷವ್ಯತ್ಯಾಸ ಕಾಲವ್ಯತ್ಯಾಸ ಹೀಂಗೆ ಅನೇಕ ಭಿನ್ನವ್ಯತ್ಯಾಸಗಳು ಹೇಳಲ್ಪಟ್ಟವೆ. ಹಾಂಗೇ ಪ್ರತಿಲೋಮದಿಂದಲೂ ಹೇಳಲ್ಪಟ್ಟವೆ.'

ಪ್ರತಿಲೋಮಪ್ರಕಾರ ಹೇಳಥಾರೆ. 'ಉತ್ಪತ್ತಿಕ್ರಮದಿಂದ ಹೇಳೋದು ಬಿಟ್ಟು ಸಂಹಾರಕ್ರಮದಿಂದ ಆರಂಭವಾಡಿ ಹೇಳೋಣ, ಇದು ಪ್ರತಿಲೋಮ. ಹೀಂಗೇನುಕಾರಣ ಹೇಳಬೇಕೆಂದಲ್ಲಿ ಅಸುರರಿಗೆ ಮೋಹಿಸಿ ವಿಪರೀತ ಜ್ಞಾನ ಹುಟ್ಟಿಸೋ ನಿಮಿತ್ತ ಹೇಳಲ್ಪಟ್ಟವೆ. ಆ ಕಾರಣದಿಂದ ನನ್ನಿಂದ ಹೇಳಲ್ಪಟ್ಟ ಕಥಿಗಳಿಗೆ, ಅನೇಕ ಗ್ರಂಥಮೂಲದಿಂದ ನಿರ್ಣೀತವಾಗೇದೆಂದು ನೋಡಿಕೊಂಡು, ಅನಿರ್ಣೀತವಾದಂಥ ಪ್ರಕಾರಾಂತರದಿಂದ ಒಂದು ಗ್ರಂಥವಿರೋಧವೂ ಶಂಕಿಸ ಬಾರದು. ಇದು ತೋರಿಸಬೇಕಾಗಿ, ನನ್ನಿಂದ ಈ ನಿರ್ಣಯ ಮಾಡಲ್ಪಟ್ಟಿತು.' ಅಲ್ಪಗ್ರಂಥವಿರೋಧಶಂಕೆಯು ಅನ್ಯತ್ರದಲ್ಲಿಯೂ ಶಂಕಿಸಬಾರದು, ಎಂದು ತೋರಸಥಾರೆ. 'ಮುಂದೆ ಹೇಳೋ ಅಂಥಾ ವೇದವ್ಯಾಸ, ಕೃಷ್ಣಾವತಾರ ಕಥಾ ಪ್ರಬಂಧದಲ್ಲಿಯೂ, ಹಿಂದೆ ಹೇಳಿದ ಪ್ರಕಾರದಿಂದ ನಿರ್ಣಯವಾದಂಥ ಒಂದು ಗ್ರಂಥವಿರೋಧವೂ ಶಂಕಿಸಬಾರದು. ಹೇಳೋಣ ಕಾರಣದಿಂದ ಹೇಳೋಣ ವಾಯಿತು. ಇಲ್ಲಿ ಹೇಳಿದಂಥಾ ಸೃಷ್ಟಿಪರಂಪರಾಕ್ರಮವು ನೀಚೋಚ್ಚ ಪರಂಪರಾ ಕ್ರಮ. ತಾರತಮ್ಯಗಳು ಸರ್ವಕಾಲದಲ್ಲಿಯೂ ಸರ್ವಕಲ್ಪಗಳಲ್ಲಿಯೂ ಸಮ. ಸರ್ವಕಲ್ಪದಲ್ಲಿಯೂ ಬ್ರಹ್ಮಕಲ್ಪದಲ್ಲಿಯೂ ಸೃಷ್ಟಿ ಆದ ಪ್ರಕಾರದಿಂದ, ತಾರತಮ್ಯವು ಕ್ರಮದಿಂದ ತಿಳಿಯಬೇಕು.' ಕೆಲವು ಪುರಾಣಗಳಲ್ಲಿ ವ್ಯತ್ಯಾಸ ಹೇಳೀವೆಂದು ಹೇಳಿದ್ದಕ್ಕೂ, ವ್ಯತ್ಯಾಸೋಕ್ತಿಯು ಪ್ರತಿಜ್ಞಾಪೂರ್ವಕದಿಂದ ಹೇಳಥಾರೆ. ಪುರಾಣಗಳ ಒಂದಾನೊಂದು ಭಾಗದಲ್ಲಿ ಪುರುಷವ್ಯತ್ಯಾಸ ಕಾಲವ್ಯತ್ಯಾಸಗಳು ಅವೆ. ಹ್ಯಾಂಗೆಂದರೆ,

ಕೃಷ್ಣಾವಾಹಾ ಯೆಥಾ ಕೃಷ್ಣೋ ಧನಂಜಯೆಶರೈರ್ಹತಾನ್ ।
ಶತಂ ದುರ್ಯೋಧನಾದೀಂಸ್ತೇ ದರ್ಶಯಿಷ್ಯ ಇತಿ ಪ್ರಭುಃ ॥

ಈ ಶ್ಲೋಕದಲ್ಲಿ ತೋರಸ್ತಾರೆ. "ಸಮರ್ಥನಾದಂಥ ಕೃಷ್ಣ ದ್ರೌಪದೀ ಕೂಡ ಮಾತನಾಡಥಾನೆ. 'ಅರ್ಜುನನ ಬಾಣಗಳಿಂದ ಸತ್ತಂಥ ದುರ್ಯೋಧನಾದಿಗಳು ನೂರುಮಂದಿ ಅಣ್ಣತಮ್ಮಂದಿರನ್ನ ನಿನಗೆ ತೋರಿಸೇನು.' ಇಲ್ಲಿ ಪುರುಷವ್ಯತ್ಯಾಸ ಬಂತು. ಹ್ಯಾಂಗೆ ಎಂದಲ್ಲಿ, ಭೀಮಸೇನನಿಂದ ಸತ್ತರು ಎಂದು ಹೇಳೋದು ಬಿಟ್ಟು, ಅರ್ಜುನನಿಂದ ಸತ್ತರು ಎಂದು ಹೇಳೋ ವಾಕ್ಯವು ಪುರುಷವ್ಯತ್ಯಾಸವೆಂದು ಏನು ಕಾರಣ ಅನ್ನಬೇಕು ಎಂದಲ್ಲಿ, ದುರ್ಯೋಧನಾದಿಗಳು ಭೀಮಸೇನನಿಂದ ಸತ್ತರು ಎಂದು, ಬಹುವಾಕ್ಯದ ದೆಸಿಯಿಂದಲೂ ತಿಳಿಯಲ್ಪಡತದೆ. ಅರ್ಜುನನಿಂದ ಸತ್ತರು ಎಂದು, ಒಂದು ವಾಕ್ಯ ದುರ್ಬಲತ್ವ ಅದೆ. ಅದರ ದೆಸಿಯಿಂದ ಪುರುಷವ್ಯತ್ಯಾಸವೆಂದು ತಿಳಿಯಲ್ಪಡತದೆ. ಭೀಮಸೇನನಿಂದ ಸತ್ತರು ಎಂದು ಬಹುವಾಕ್ಯಗಳಲ್ಲಿ ತೋರೋಣದರ ದೆಸಿಯಿಂದ, ಬಹುವಾಕ್ಯ ಪ್ರಾಬಲ್ಯದಿಂದ ತೋರುವ ಅರ್ಥವೇ ಪ್ರಮಾಣವೆಂದು ತಿಳಿಯಲ್ಪಡತದೆ. ಹೀಂಗೆ ಅನ್ಯತ್ರದಲ್ಲಿ ಬಹಳ ವ್ಯತ್ಯಾಸಗಳು

ತಿಳಿಯಲ್ಪಡತವೆ. ಬಹುವಾಕ್ಯ ವಿಸ್ತಾರದಲ್ಲಿ ಕೃಷ್ಣ ಕೊಂದ ಎಂದು ಹೇಳತದೆ. ಸಂಕ್ಷೇಪದಿಂದ ಒಂದಲ್ಪವಾಕ್ಯದಲ್ಲಿ ಬಲಭದ್ರ ಕೊಂದನೆಂದು ಹೇಳತದೆ. ಅದರಿಂದ ಬಹುವಾಕ್ಯ ಅಲ್ಪವಾಕ್ಯದ್ದೆಸಿಯಿಂದ ವ್ಯತ್ಯಾಸವು ತಿಳಿಯಲ್ಪಡತದೆ." ಈ ಪ್ರಕಾರ ಪುರುಷವ್ಯತ್ಯಾಸ ಹೇಳಿ, ಇನ್ನು ಕಾಲವ್ಯತ್ಯಾಸ ಹೇಳಥಾರೆ.

'ಕೆಲವು ವಾಕ್ಯಗಳಲ್ಲಿ ಕಾಲವ್ಯತ್ಯಾಸವೂ ಆದೆ. ಹ್ಯಾಂಗೆಂದರೆ, ಭೀಮಸೇನದೇವರು, ಕೃಷ್ಣ ಸಭೆಯಲ್ಲಿರತಿರಲಿಕ್ಕೆ, ಸ್ಥಳಭ್ರಾಂತಿಯಿಂದ ಜಲದೊಳಗೆ ಬಿದ್ದಂಥ ದುರ್ಯೋಧನನ್ನ ನೋಡಿ ನಕ್ಕನೆಂದು ವಾಕ್ಯಗಳಲ್ಲಿ ನಿರ್ಣಯದಿಂದ ತಿಳಿಯಲ್ಪಡತದೆ. ನಿರ್ಣಯದಿಂದ ರಹಿತವಾದಂಥ ಅಲ್ಪವಾಕ್ಯಗಳಲ್ಲಿ, ಭೀಮ ನಗೋದಕ್ಕಿಂತ ಮೊದಲೆ ಕೃಷ್ಣ ದ್ವಾರಕಿಗೆ ಹೋಗಿದ್ದನೆಂದು ಹೇಳತದೆ. ಕೃಷ್ಣ ಇರಲಿಕ್ಕೆ ಭೀಮಸೇನ ನಕ್ಕನೆಂದು, ಬಹುವಾಕ್ಯಗಳಲ್ಲಿ ನಿರ್ಣಯವಾಗೇದೆ. ಕೃಷ್ಣ ಹೋದಮ್ಯಾಲೆ ನಕ್ಕನೆಂದು, ಅಲ್ಪವಾಕ್ಯದಲ್ಲಿ ತೋರೋದರ ದೆಸಿಯಿಂದ ದುರ್ಬಲತ್ವ. ಅದರಿಂದ, ಇಲ್ಲಿ ಕಾಲವ್ಯತ್ಯಾಸ ಪ್ರವೃತ್ತಿಯೆಂದು ತಿಳಿಯಲ್ಪಡತದೆ. ಇವೇ ಮೊದಲಾದ ವ್ಯತ್ಯಾಸಾದಿಗಳು, ಲಕ್ಷಣಪ್ರತಿಪಾದಕವಾದ ಗ್ರಂಥಗಳಲ್ಲಿ ವ್ಯಾಖ್ಯಾನ ಮಾಡಿದ್ದರಿಂದ ತಿಳಿಯಲ್ಪಡತವೆ. ಅಂಥ ನಿರ್ಣಯಗ್ರಂಥ ಆಶ್ರಯಿಸಿ, ಲಕ್ಷಣಶಾಸ್ತ್ರಾನುಸಾರ, ಬಹುವಾಕ್ಯ ಅನುಕೂಲದಿಂದ ನಿರ್ಣಯವು ನನ್ನಿಂದ ಮಾಡಲ್ಪಟ್ಟಿತು.' ನಿರ್ಣಯಗ್ರಂಥಾದಿಗಳಲ್ಲಿ ಪರಿಜ್ಞಾನವಿಲ್ಲದೆ ಶಾಸ್ತ್ರನಿರ್ಣಯ ಮಾಡಿದರೆ, ಮಹಾ ಅನರ್ಥವಾಗತದೆಂಬೋದರಲ್ಲಿ ವೇದವ್ಯಾಸದೇವರ ವಾಕ್ಯ ಹೇಳಥಾರೆ. ವೇದವ್ಯಾಸದೇವರಿಂದ ಮಾಡಲ್ಪಟ್ಟಂಥ ಲಕ್ಷಣಶಾಸ್ತ್ರದಲ್ಲಿ ಹೇಳತದೆ ಎಂದು ಹೇಳಥಾರೆ. ಅದು ಹ್ಯಾಂಗೆಂದರೆ, ದಾವ ಪುರುಷನು ಸಮಾಧಿಭಾಷ, ದರ್ಶನಭಾಷ, ಗುಹ್ಯಭಾಷ, ಈ ಪ್ರಕಾರ ಭಾಷಾತ್ರಯವನ್ನೂ ಹಾಂಗೆ, ಶತ್ರೀತಿಗಳ್ಳನ್ನೂ, ವ್ಯತ್ಯಾಸಾದಿ ಏಳು ಭೇದಗಳು, ಇವುಗಳನ್ನೂ ತಿಳೀದಲೇವೆ, ವೇದ ಪುರಾಣಾದ್ಯರ್ಥಗಳನ್ನು ಹೇಳಥಾನೋ ಆ ಪುರುಷನು, ವಿಪರೀತಜ್ಞಾನ ಪ್ರಾಪ್ತವಾದಂಥ, ಭಯಂಕರವಾದಂಥ ನಿತ್ಯನರಕವನ್ನು ಐದಥಾನೆ. ಮತ್ತೆ ಕೆಲವು ಶಾಸ್ತ್ರದಲ್ಲಿಯೂ, ಅಲ್ಲಲ್ಲಿಗೆ ಬಹುವಾಕ್ಯಗಳು ಅದೇ ಪ್ರಕಾರ ಹೇಳಲ್ಪಟ್ಟವೆಂದು ಸ್ವಲ್ಪದಿಂದ ತೋರಸ್ತಾರೆ. 'ವ್ಯತ್ಯಾಸವು ಪ್ರತಿಲೋಮ, ಗೋಮೂತ್ರಿ, ಪ್ರಘುಸ್ತಃ, ಉಕ್ಷಣಃ, ಸುಧರಃ, ಸಾಧುಃ ಈ ಪ್ರಕಾರ ಏಳು ಭೇದಗಳು ಹೇಳಲ್ಪಟ್ಟವೆ ಎಂದು ಹೇಳಿದರು. ಹಾಂಗಾದರೆ, ವ್ಯತ್ಯಾಸಾದಿಗಳಿಗೆ ಏನು ಲಕ್ಷಣ, ನೂರು ರೀತಿಗಳಿಗೆ ಏನು ಲಕ್ಷಣವೆಂದಲ್ಲಿ, ಈ ಗ್ರಂಥದಲ್ಲಿ ವ್ಯತ್ಯಾಸಾದಿಗಳಿಗೆ ಲಕ್ಷಣ ಹೇಳೋದಿಲ್ಲ. ಏನುಕಾರಣವೆಂದರೆ ಅವತಾರಗಳ ಕಥ, ವರ್ಣನಪ್ರಸಂಗದಲ್ಲಿ ಲಕ್ಷಣ ಹೇಳೋ ಪ್ರಸ್ತುತವಿಲ್ಲ. ನಿರ್ಣಯ ಮಾಡುವಂಥಾವರಿಗೆ ಆ ಜ್ಞಾನವು ಅವಶ್ಯಕವಾದ್ದರಿಂದ, ಈ ಜ್ಞಾನಗಳು ನನ್ನಲ್ಲಿ ಅವೆ. ಅಂಥ ಲಕ್ಷಣ ಶಾಸ್ತ್ರಗಳನುಸರಿಸಿ ನನ್ನಿಂದ ಈ

ನಿರ್ಣಯವು ಮಾಡಲ್ಪಟ್ಟಿತು. ಈ ನಿರ್ಣಯಶಾಸ್ತ್ರದ ಜ್ಞಾನ ಬೇಕು ಎಂದು ಇಚ್ಛೆ ಉಳ್ಳವರು, ಓದಿಕೋಬೇಕು.' ಈ ರಾಮಾವತಾರ ಕಥಿಯು ಪಠಣ ಮಾಡಿದವರಿಗೆ, ಕೇಳಿದವರಿಗೆ ಫಲವನ್ನು ಹೇಳಿ ಸಮಾಪ್ತ ಮಾಡಥಾರೆ.

'ಸಮಸ್ತ ಶಾಸ್ತ್ರಾನುಸಾರ ದೆಸಿಯಿಂದಲೂ ಉತ್ತಮವಾದಂಥಾದ್ದು, ಸಂಸಾರದುಃಖವನ್ನು ಕೆಡಿಸುವಂಥಾದ್ದು, ಇಂಥಾ ರಾಮನ ಕಥಿಯು ನನ್ನಿಂದ ಹೇಳಲ್ಪಟ್ಟಿತು. ದಾವ ಪುರುಷನು ಈ ರಾಮಕಥಿಯನ್ನು ಪಠಣ ಮಾಡಥಾನೋ, ಈ ಕಥಿ ಕೇಳಥಾನೋ, ಆ ಪುರುಷನು ಸಂಸಾರಬಂಧದಿಂದ ಮುಕ್ತಿಯನ್ನು ಐದಿ, ಅಚ್ಚ ಮೋಕ್ಷಸುಖವನ್ನು ಭೋಗಿಸಥಾನೆ' ಎಂಬಲ್ಲಿಗೆ, ಶ್ರೀಮದಾಚಾರ್ಯರು ಹೇಳಿದ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯವನ್ನು ಪ್ರಾಕೃತದಿಂದ ವಿವರಿಸುವ, 'ಶ್ರೀರಾಮಚರಿತೇ ಉತ್ತರಕಾಂಡ ಕಥಾನಿರೂಪಣಂ (ಶ್ರೀರಾಮಸ್ವಧಾಮ ಪ್ರವೇಶಃ)' ಎಂಬ ಒಂಭತ್ತನೇ ಅಧ್ಯಾಯವು ಸಂಪೂರ್ಣವು.

ಶ್ರೀಮಧ್ವೇಶಾರ್ಪಣಮಸ್ತು

ಅಧ್ಯಾಯ ೧೦

ಶ್ರೀಕೃಷ್ಣಚರಿತೇ—ಶ್ರೀ ವೇದವ್ಯಾಸ ಅವತಾರನಿರ್ಣಯಃ

ಈ ಹತ್ತನೇ ಅಧ್ಯಾಯದಲ್ಲಿ ರಾಮಕೃಷ್ಣಾವತಾರದ ಮಧ್ಯದಲ್ಲಿ ವ್ಯಾಸಾವತಾರವಾಗೇದೆ. ಆದಕಾರಣ, ಮೊದಲ ಮೂರು ಅಧ್ಯಾಯಗಳಲ್ಲಿ ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ, ವಾಮನ, ಪರಶುರಾಮ, ರಾಮಾವತಾರಗಳ ಹೇಳಿ, ನಾಲ್ಕನೇ ಅಧ್ಯಾಯ ಆರಂಭವಾಗಿ ಒಂಭತ್ತು ಅಧ್ಯಾಯ ಪರಿಯಂತ ರಾಮಚರಿತ್ರ ಹೇಳಿ ಈ ಹತ್ತನೇ ಅಧ್ಯಾಯದಲ್ಲಿ, ವ್ಯಾಸಾವತಾರ ಹೇಳಲ್ಪಡತದೆ.

ದಿನಕಲ್ಪದಲ್ಲಿ ಹದಿನಾಲ್ಕು ಮನುಗಳು ಆಳಿಹೋಗಥಾರೆ. ಅದರೊಳಗೆ ಸ್ವಾಯಂಭು, ಸ್ವಾರೋಚಿಷ, ಉತ್ತಮ, ರೈವತ, ತಾಪಸ, ಚಾಕ್ಷುಷ, ಹೀಂಗೆ ಆರು ಮನುಗಳು ಆಳಿಹೋದಮ್ಯಾಲೆ, ವೈವಸ್ವತಮನ್ವಂತರದಲ್ಲಿ ಮೊದಲ ಮಹಾಯುಗ ಆರಂಭಮಾಡಿಕೊಂಡು ನೋಡಲಾಗಿ, ಇಪ್ಪತ್ತೈಂಟನೇ ಮಹಾಯುಗದೊಳಗೆ ಮತ್ಸ್ಯಾದಿ ಅವತಾರಗಳಾಗೇವೆ. ಅದರೊಳಗೆ ದ್ವಾಪರದಲ್ಲಿ ಈ

ವ್ಯಾಸಾವತಾರವಾಗೇದೆ. ಸ್ವಾಮಿ ವ್ಯಾಸಾವತಾರ ಏನುಕಾರಣ ಮಾಡಿದನೆಂದರೆ, ಬ್ರಾಹ್ಮಣರು ಗೌತಮಶಾಪದಿಂದ ಅಜ್ಞಾನಿಗಳಾಗಿದ್ದರು. ಹರಿದಾಸರು ಮಿಥ್ಯಾಜ್ಞಾನಿಗಳಾಗಿದ್ದರು. ಇವರು ಕೆಡಬಾರದೆಂದು ಪುನಃ ಬ್ರಹ್ಮ, ರುದ್ರ, ಶಕ್ರ ಮೊದಲಾದ ದೇವತಿಗಳು ಕ್ಷೀರಸಮುದ್ರತೀರಕ್ಕೆ ಹೋದರು. ಏನುಕಾರಣ ಎಂದಲ್ಲಿ, ಅವತಾರಮಾಡಿ, ಜ್ಞಾನಪ್ರಕಾಶ ಮಾಡಿಕೊಡಬೇಕೆಂದು ಪ್ರಾರ್ಥನ ಮಾಡೋದರ ಗೋಸ್ಕರ ಹೋದರು. ರಾಮಾವತಾರ ನಿಮಿತ್ತವಾಗಿ ಮೊದಲೇ ಕ್ಷೀರಸಮುದ್ರಕ್ಕೆ ಹೋಗಿದ್ದರು. ಪುನಃ ಏನುಕಾರಣ ಹೋದರೆಂತ ಹೇಳಿದರು. ದೇವಶ್ರೇಷ್ಠರುಗಳು, ಕ್ಷೀರಸಮುದ್ರದ ಉತ್ತರದಿಕ್ಕಿಗೆ ಹೋಗಿ, ಪದ್ಮದಳದೋಪಾದಿ ಕಣ್ಣುಗಳುಳ್ಳಾತ, ನಾಶರಹಿತನಾದಂಥಾತ, ಕ್ಷರಾಕ್ಷರ ಪುರುಷರಿಗೆ ಉತ್ತಮನಾದಂಥ ನಾರಾಯಣನ ಸ್ತೋತ್ರ ಮಾಡಲಿಕ್ಕೆ, ಸಾಕ್ಷಾತ್ ಪರದೇವತಿ ಪರಾಶರನ ದೆಸಿಯಿಂದ ಸತ್ಯವತೀಯಲ್ಲಿ, ಯಮುನಾದೇವಿ ಗಡ್ಡಿಯ ಒಳಗೆ ವ್ಯಾಸಾವತಾರ ಮಾಡಿದ್ದಾನೆ.

ಗೌತಮನ ಶಾಪ ಬ್ರಾಹ್ಮಣರಿಗೆ ಆಗಲಿಕ್ಕೆ ಕಾರಣವೇನೆಂದರೆ, ಹನ್ನೆರಡು ವರುಷ ಅನಾವೃಷ್ಟಿಯಾಗಿ ಬಹಳ ದುರ್ಭಿಕ್ಷ ಬಿತ್ತು. ಅನ್ನ ಹುಟ್ಟದ ಕಾರಣ ಬ್ರಾಹ್ಮಣರೆಲ್ಲ ವಿಳಿತರಾಗಿ, ಹನ್ನೆರಡು ಸಾವಿರ ಬ್ರಾಹ್ಮಣ್ಯ, ಗೌತಮನ ಆಶ್ರಮಕ್ಕೆ ನಾಸಿಕ ತ್ರಿಯಂಬಕಕ್ಷೇತ್ರಕ್ಕೆ ಹೋದರು. ಗೌತಮಋಷಿ ತನ್ನ ತಪೋಸಾಮರ್ಥ್ಯದಿಂದ ಕವಳೆ ಬಿತ್ತಿ ಬೆಳೆದು, ಯಥೇಷ್ಟ ಅನ್ನಪಾನಾದಿಗಳಿಂದ ಹನ್ನೆರಡುಸಾವಿರ ಬ್ರಾಹ್ಮಣ್ಯಕ್ಕೆ ಬಹಳ ತುಷ್ಟಿಬಡಿಸುವ. ಹೀಂಗೆ ಏಕಪ್ರಕಾರದಿಂದ ಹನ್ನೆರಡುವರುಷ

ಬ್ರಾಹ್ಮಣರಿಗೆ ಭೋಜನ ಮಾಡಿಸಲಾಗಿ ಸುಭಿಕ್ಷವಾಯಿತು. ನಾಲ್ಕೂಕಡೀಲಿ ಬಿತ್ತು ಬೆಳಸು ಆಯಿತು. ಬ್ರಾಹ್ಮಣರು ತಮ್ಮ ತಮ್ಮ ಯಾಚನಿಗೆ ಹೋಗಥೀ-ವೆಂದರೆ, ಬ್ರಾಹ್ಮಣ ಸಂತರ್ಪಣೆ ಆಗತದೆಂದು, ಅಪ್ಪಣಿ ಕೊಡಲಾರ. ಗೌತಮಋಷಿ ತಮಗೆ ಅಪ್ಪಣಿ ಕೊಡವಲ್ಲನೆಂದು, ದರ್ಭಿಯಿಂದ ಆಕಳು ಮಾಡಿ ಕವಳೀಗದ್ದಿ ಒಳಗೆ ಬಿಟ್ಟುಕೊಟ್ಟರು. ಆಕಳು ಕವಳಿ ತಿನ್ನತದೆಂದು ದರ್ಭಿ ಬಿಷ್ಟು ಹೆಂಕಾರ ಮಾಡಲಿಕ್ಕೆ, ಆಕಳು ಸತ್ತಿತು. ಗೌತಮು ಗೋಹತ್ಯ ಮಾಡಿದ. ಇಂಥಾ ಗೋಹತ್ಯ-ಕಾರನಲ್ಲಿ ಅನ್ನ ಕೊಳ್ಳಬಾರದೆಂದು ಗೌತಮುನವ್ಯಾಲೆ ಅಪವಾದ ಹೊರಿಸಿ, ಬ್ರಾಹ್ಮಣರೆಲ್ಲ ತಮ್ಮ ಯಾಚನಿವೃತ್ತಿಗೆ ಹೋದರು. ಈ ಪ್ರಕಾರ ಮಾಡಿದಂಥ ಬ್ರಾಹ್ಮಣರ ಖೂಳತನ ಕಂಡು 'ಜ್ಞಾನಭ್ರಷ್ಟರಾಗಿರಿ' ಎಂದು ಬ್ರಾಹ್ಮಣರಿಗೆ ಶಾಪ ಕೊಟ್ಟನು. ಆದಕಾರಣ ಬ್ರಾಹ್ಮಣರೆಲ್ಲ ಅಜ್ಞಾನಿಗಳಾಗಿರಲಿಕ್ಕೆ, ಬ್ರಹ್ಮಾದಿ ದೇವತಿಗಳು ಕ್ಷೀರಸಮುದ್ರಕ್ಕೆ ಹೋಗಿ ಸ್ತೋತ್ರ ಮಾಡಥಾರೆ.

ನಮೋ ನಮೋಽನಂತಗುಣೈಕಧಾಮ್ನೇ
ಸಮಸ್ತವಿಜ್ಞಾನ ಮರೀಚಿಮಾಲಿನೇ।
ಅನಾದ್ಯವಿಜ್ಞಾನ ತಮೋ ನಿಹಂತ್ರೇ
ಪರಾವೃತಾನಂದಪದಪ್ರದಾಯಿನೇ॥

ಸ್ತೋತ್ರಪ್ರಕಾರವು ಸ್ವಲ್ಪದಿಂದ ಹೋರಸ್ತಾರೆ. ಶ್ಲೋಕಾರ್ಥ—'ಅನಂತಗುಣಗಳಿಗೆ ಮುಖ್ಯಾಶ್ರಯನಾದಂಥ, ಸಂಪೂರ್ಣ ವಿಜ್ಞಾನಗಳೆಂಬ ಕಿರಣಮಾಲಿಕೆಯುಳ್ಳಂಥ ಅನಾದಿಭೂತವಾದ ಅಜ್ಞಾನವೆಂಬ ತಮಸ್ಸು ಪರಿಹರಿಸುವಂಥ, ಉತ್ತಮವಾದ ಅಮೃತಪದವಾಚ್ಯ, ಆನಂದಪದವಾಚ್ಯವಾದಂಥ ಮೋಕ್ಷವನ್ನು ಕೊಡುವಂಥಾತ, ಇಂಥಾ ನಿನಗೋಸ್ಕರ ನಮೋ ನಮಃ' ಎಂತ ಸ್ತೋತ್ರಮಾಡಿ ಬ್ರಹ್ಮ, ವಿಜ್ಞಾಪನಿ ಮಾಡಥಾನೆ. "ಸ್ವಾಮಿ, ನಮಗೆ ಮೊದಲೀ ಉಪಕಾರ ಬಹಳವಾಗಿ ಮಾಡಿದ್ದೀ. ದೂರ್ವಾಸನ ಶಾಪದಿಂದ ದೇವತಿಗಳು ಐಶ್ವರ್ಯಭ್ರಷ್ಟರಾಗಿದ್ದರು. ಅದು ಹ್ಯಾಂಗೆಂದರೆ, ದೇವೇಂದ್ರ ತನ್ನ ಐರಾವತ ಏರಿಕೊಂಡು ದೇವತಿಗಳ ಕೈಯ ವಾಲ್ಗೈಸಿಕೊಳ್ಳತ, ವೈಹಾಳಿ ಮಾಡತ ಹೋಗಲಿಕ್ಕೆ, ಸ್ವರ್ಗಕ್ಕೆ ಅರಸು ದೇವೇಂದ್ರ ಬರಥಾನೆಂದು ದೂರ್ವಾಸ, ರಿಕ್ತಹಸ್ತದಿಂದ ದೇವೇಂದ್ರನ ಭೆಟ್ಟಿಕೊಳ್ಳಬಾರದೆಂದು, ತನ್ನ ಆಶ್ರಮದಮ್ಯಾಲೆ ಹಾದುಹೋಗೋ ದೇವೇಂದ್ರಗೆ ಪುಷ್ಪಮಾಲಿ ಕೊಟ್ಟನು. ಆ ಮಾಲಿಯನ್ನು ಆದರದಿಂದ ಕೊರಳಿಗೆ ಹಾಕಿಕೊಳ್ಳಬೇಕು. ಅದು ಬಿಟ್ಟು, ಆನೀ ಕುಂಭಸ್ಥಳದಮ್ಯಾಲೆ ಹಾಕಿದನು. ಹೂವಿನ ಮಾಲಿಕಿ ಜಿಗಳಿ ದೂರ್ವಾಸನ ಆಶ್ರಮದಲ್ಲಿ ಬಿತ್ತು. ದೂರ್ವಾಸ ನೋಡಥಾನೆ. ತಾ ಕೊಟ್ಟ ಮಾಲಿಕಿ ಹ್ಯಾಂಗೆ ಅನಾದರ ಮಾಡಿದನೆಂದು ಕೋಪಾವಿಷ್ಟನಾಗಿ, 'ದೇವತಿಗಳೆಲ್ಲ ಐಶ್ವರ್ಯಭ್ರಷ್ಟ-ರಾಗಿರಿ' ಎಂದು ಶಾಪ ಕೊಟ್ಟನು.

"ಇಷ್ಟಾಗಲಿಕ್ಕೆ ಬಲಿಚಕ್ರವರ್ತಿ ಸ್ವರ್ಗಕ್ಕೆ ಧಾಳಿ ಹಾಕಿದನು. ದೈತ್ಯರ ಕೂಡ ಯುದ್ಧ ಮಾಡುವ ಕಾಲವಲ್ಲ, ದೈತ್ಯರು ಬಹಳ ಬಲವಂತರಾಗ್ಯಾರೆ. 'ಅದೃಶ್ಯರಾಗಿಹೋಗಿ' ಎಂದು ಬೃಹಸ್ಪತಿ ಪುರೋಹಿತ ಹೇಳಿದನು. ಗುರುವಚನ ವಿಶ್ವಾಸಮಾಡಿ, ಅದಿತಿ ಆಶ್ರಮಕ್ಕೆ ಹೋದರು. ಹೀಂಗೆ ಐಶ್ವರ್ಯಭ್ರಷ್ಟರಾಗಿ ಎಷ್ಟು ದಿವಸ ಇರಬೇಕೆಂದು, ನಾವು ಪೂರ್ವದಲ್ಲಿ ನಿನಗೆ ನಮಸ್ಕಾರ ಮಾಡಿ ಶರಣುಹೊಕ್ಕೆವು. ಸ್ವಾಮಿ, ನೀನು ನಮಗೆ ಬುದ್ಧಿಮಾರ್ಗ ತೋರಿಸಿಕೊಟ್ಟೆ. 'ಈ ದೈತ್ಯರು ಬಲಿಷ್ಠರಾಗಿದ್ದಾರೆ. ಕಾರ್ಯಾರ್ಥವಾಗಿ ದೈತ್ಯರ ಕೂಡ ಸಂಧಿ ಬೆಳಸರೀ. ಸರ್ಪ ತನ್ನ ಕಾರ್ಯಾರ್ಥವಾಗಿ ಇಲೀ ಕೂಡ ಹ್ಯಾಂಗೆ ಗೆಳೆತನ ಕಟ್ಟಿತು, ಹಾಂಗೆ ಕಾರ್ಯ ಸಾಧಿಸಿಕೋಬೇಕು. ಒಬ್ಬ ಗಾರುಡಿಗ್ಯ ಸರ್ಪ ಬಲಿ ಹಿಡಿದು, ಪೆಟ್ಟಿಗಿಯೊಳಗೆ ಹಾಕಿ, ಆಹಾರನಿಮಿತ್ತ ಒಂದು ಮೂಷಕನ್ನ ಒಳಗೆ ಹಾಕಿದನು. ಸರ್ಪ ತನ್ನೊಳಗೆ ತಾ ವಿಚಾರಮಾಡಿ ಮೂಷಕನ ತಿಂದ ಪಕ್ಷನೇ ಒಂದು ದಿವಸದ ಆಹಾರವಾಗದು ಎಂದು ತಿಳದು, ಆದಕಾರಣ ಮೂಷಕನ ಕೂಡ ಗೆಳೆತನ ಕಟ್ಟಿ, ನಾನೂ ನೀನೂ ಹೊರಗೆ ಹೋಗುವ, ನಾನು ತಿಂಬೋಹಾಂಗೆ ಇಲ್ಲ ಎಂದು ಅಭಯ ಕೊಟ್ಟು, ಪೆಟ್ಟಿಗಿ ಕಡಿಯಲಿಕ್ಕೆ ಅನುಕೂಲವಾಗದ ಕಾರಣ ಮೂಷಕನ್ನ ತನ್ನ ಹೆಡಿಯುವ್ಯಾಲೆ ಕೂಡಿಸಿಕೊಂಡಿತು. ಮೂಷಕ ಪೆಟ್ಟಿಗಿ ಕಡಿಯಿತು. ಮಾರ್ಗವಾಯಿತು. ಆ ಇಲಿಯು ಹೊರಗೆ ಹೋಗಬೇಕಾದರೆ ಮಾರ್ಜಾಲ ಕುಳಿತಿತ್ತು. ಅದರಿಂದ ಅಂಜಿ, ಸರ್ಪ ತನ್ನ ಗೆಳಿಯನೆಂದು ಒಳಗೆ ಬರಲಿಕ್ಕೆ, ಸರ್ಪ ಮೂಷಕನ್ನನುಂಗಿ ಹೊರಗೆ ಹೋಯಿತು. ನೀವು ಕಾರ್ಯಾರ್ಥವಾಗಿ ಬಲಿಚಕ್ರವರ್ತಿಯ ಕೂಡ ಸಂಧಾನ ಮಾಡಿ ದೈತ್ಯರುಗಳ ಕೂಡಿಕೊಂಡು ಸಮುದ್ರ ಮಥನ ಮಾಡಿದರೆ ನಿಮ್ಮ ಐಶ್ವರ್ಯ ಬಂದೀತು' ಎಂದು ಸ್ವಾಮಿ ನೀ ಆಜ್ಞೆ ಕೊಟ್ಟೆ. ನಿನ್ನ ಆಜ್ಞೆ ಪ್ರಕಾರ ಬಲಿಚಕ್ರವರ್ತಿ ಕೂಡ ಸಂಧಾನ ಮಾಡಿ-ಕೊಂಡು, ದೇವತೆಗಳು ಮಹಾರುದ್ರನ ವರದ ದೆಸೆಯಿಂದ, ಮತ್ತೆ ಒಬ್ಬರಿಂದ ಅಲ್ಲಾಡಿಸಲಿಕ್ಕೆ ಶಕ್ಯವಲ್ಲದೇ ಇದ್ದಂಥ ಮಂದರಪರ್ವತಕ್ಕೆ ಹೋಗಿ, ದೈತ್ಯರಿಂದ ಕೂಡಿ ತಮ್ಮ ಬಾಹುಗಳಿಂದ ಹಿಡಿದು ಅಲ್ಲಾಡಿಸೋದರಲ್ಲಿ ಶಕ್ತರಾಗಲಿಲ್ಲ. ಆ ವ್ಯಾಳ್ಯಾದಲ್ಲಿ ಈ ರೀತಿ ಅಶಕ್ತರಾದಂಥವರನ್ನ ನೋಡಿ, ನಿನ್ನಿಂದ ಅನಂತನಾಮಕ ನಾದಂಥ ಗರುಡನವ್ಯಾಲೆ ಪರ್ವತವು ಸ್ಥಾಪಿಸಲ್ಪಟ್ಟಿತು." ಈ ಗ್ರಂಥಕ್ಕೆ ಅಶೇಷ-ಶಾಸ್ತ್ರನಿರ್ಣಯವು ಸ್ವಲ್ಪದರಿಂದ ತೋರಸ್ತಾರೆ.

ಅನಂತೋಽಶೋ ಮಂದರಸ್ತು ಯದಾ ನೈವಸ್ಪತಾಂತರೆ।
ಅವ್ಯಕ್ತಾರ್ಥಂ ಸುಪರ್ಣೋಽಶೋ ಚಾಕ್ಷುಷಸ್ಯಾಂತರೇ ಮನೋಃ॥

ಈ ಪ್ರಕಾರ ಬ್ರಹ್ಮಾಂಡಪುರಾಣಾಂತರ್ಗತ ವಚನವು. 'ಅನಂತ' ಶಬ್ದದಿಂದ ಶೇಷನ್ನ ತಕೋಬಾರದು. ಏನುಕಾರಣವೆಂದಲ್ಲಿ, ನಿತ್ಯಬಲತ್ವ ಕಾರಣದಿಂದ

'ಅನಂತ'ವೆಂಬೋ ವಾಕ್ಯವು ಗರುಡಗೆ ಅದೆ ಎಂದು ತೋರಿಸಿದರು. 'ಪುನಃ ಈ ಪರ್ವತ ಹೊತ್ತುಕೊಂಬೋದಕ್ಕೆ ನಮ್ಮಗಳಿಗೆ ಶಕ್ತಿ ಅದೆಯೋ ಇಲ್ಲವೋ ಪರೀಕ್ಷಾ ಮಾಡಬೇಕೆಂದು ದೇವತಿಗಳು, ಅಸುರರ ಸಹಿತರಾಗಿ ಗರುಡನ ಹೆಗಲಮ್ಯಾಲೆ ಇದ್ದಂಥ ಪರ್ವತ ಅಲ್ಲಾಡಿಸಲಿಕ್ಕೆ, ಹೊತ್ತುಕೊಂಡು ಮ್ಯಾಲೆ ಬಿದ್ದು ಸರ್ವರನ್ನ ಪುಡಿಪುಡಿ ಮಾಡಿತು. ಪುನಃ ಆ ದೇವತಿಗಳು ಅಸುರರು ನಿನ್ನ ಕೃಪಾದೃಷ್ಟಿ ಬೀಳಲಿಕ್ಕೆ, ಎಲೈ ಅತಿ ಸಮರ್ಥನಾದಂಥ ಸ್ವಾಮಿಯೇ! ಮೊದಲೆ ದಾವ ಪ್ರಕಾರ ಇದ್ದರು, ಅದೇ ಪ್ರಕಾರ ಎದ್ದುನಿಂದರುವಂಥಾವರಾದರು. ಪುನರಪಿ, ಮುಂದರ-ಪರ್ವತವನ್ನು ಎಡದ ಕೈಯಲ್ಲಿ ಎತ್ತಿ ಗರುಡನಮ್ಯಾಲೆ ಇಟ್ಟು, ನೀನು ಗರುಡನ ಹೆಗಲಮ್ಯಾಲೆ ಏರಿಕೊಂಡು ಸುರಾಸುರರಿಂದ ಸಹಿತನಾಗಿ, ಮುಂದರಪರ್ವತವನ್ನು ಕಡಗೋಲು ಮಾಡಿ ಮಥನ ಮಾಡಲಿಕ್ಕೆ ಹಗ್ಗ ಬೇಕಲ್ಲ, ಧಕ್ಷಪ್ರಜೇಶ್ವರನ ಮಗಳಾದ ಕದ್ರೂದೇವಿಯ ಮಗನಾದ ವಾಸುಕಿ ಎಂದು ಪ್ರಸಿದ್ಧನಾದ ಸರ್ಪನನ್ನು, ಸುತ್ತುವಂಥಾ ಹಗ್ಗವನ್ನಾಗಿ ಮಾಡಿದಿ. ಆ ವಾಸುಕಿ ಸರ್ಪ ದಾರಿಂದ ಹುಟ್ಟಿದನು ಎಂದಲ್ಲಿ, ಸರ್ಪಗಳಿಗೆ ಅರಸಾದಂಥ ವಾಸುಕಿಯು ಕಶ್ಯಪನ ದೆಸಿಯಿಂದ ಹುಟ್ಟಿದ್ದಾನೆ. ಅಸುರರು ಸುರರ ಸಹಿತರಾಗಿ ಕ್ಷೀರಸಮುದ್ರವನ್ನು ಮಥನ ಮಾಡುವಂಥಾವರಾದರು.

'ದಿತಿಯ ಮಕ್ಕಳಾದ ಅಸುರರು ವಾಸುಕಿಯ ಪುಚ್ಛಭಾಗವನ್ನು ಹಿಡಿಯೋದರಲ್ಲಿ ಇಚ್ಛಾವಾಡಲಿಲ್ಲ. ಏನುಕಾರಣ ಎಂದಲ್ಲಿ, ಆ ಪುಚ್ಛಭಾಗವು ಹೀನಾಂಗ, ಅಮಂಗಳಕರವಾದಂಥಾದ್ದು ಎಂಬ ಅಭಿಪ್ರಾಯದಿಂದ, ಉತ್ತಮಾಂಗ ಶಿರೋಭಾಗ ಮಹಾವಿಷದಿಂದ ಉಗ್ರವಾದಂಥಾದ್ದನ್ನು ಹಿಡದರು. ಆದಕಾರಣ ವಿಷ ಅಧಿಕವಾದಂಥ ಶಿರೋಭಾಗ ಹಿಡದದರ ದೆಸಿಯಿಂದ, ಸರ್ಪದ ಮುಖ-ವಿಷೋಲ್ಬಣದಿಂದ ಪೀಡಿತರಾಗಿ, ದೈತ್ಯರು ಬಹಳ ಶ್ರಮ ಉಳ್ಳವರಾದರು. ದೇವತಿಗಳು ನಿನ್ನಿಂದ ಸಹಿತರಾಗಿ, ನಿನ್ನ ಬುದ್ಧಿಬಲಾಶ್ರಯದಿಂದ ವಾಸುಕಿಸರ್ಪದ ಪುಚ್ಛಭಾಗ ಹಿಡದರು. ಸಮೀಚೀನವಾದ ಒಂಗಾರಮಯವಾದ ಮುಂದರಪರ್ವತವು, ತನ್ನ ಭಾರದಿಂದ ಪಾತಾಳಕ್ಕೆ ಇಳಿಯಿತು. ಅನಂತರದಲ್ಲಿ ನೀನೇವೆ ಕೂರ್ಮ-ರೂಪನಾಗಿ ನಿನ್ನ ಬೆನ್ನಮ್ಯಾಲೆ, ನಿನ್ನ ಹೊರ್ತಾಗಿ ಮತ್ತೊಬ್ಬರಿಂದ ಎತ್ತಲಿಕ್ಕೆ ಶಕ್ಯವಲ್ಲದೆ ಇದ್ದಂಥ, ಮುಂದರಪರ್ವತವನ್ನು ಅತಿ ಲೀಲಾದಿಂದ ಚೆನ್ನಾಗಿ ಎತ್ತಿ ಹೊರುವಂಥಾತನಾದಿ. ಪರ್ವತ ಮ್ಯಾಲಕ್ಕೆ ಚಿಮ್ಮೀತೆಂದು, ಪರ್ವತದ ಮ್ಯಾಲೂ, ಕೆಳಗೂ, ಹಾಂಗೆ ಪಾಶರೂಪವಾದಂಥ ವಾಸುಕಿ ಸರ್ಪದಲ್ಲಿಯೂ, ದೇವಾಸುರರಲ್ಲಿಯೂ, ಸರ್ವೋತ್ಕೃಷ್ಟತ್ವದಿಂದ ನೀನು ಪ್ರವಿಷ್ಟವಾಗತಿರಲಾಗಿ, ಅಭಿವೃದ್ಧರಾದಂಥ ದೇವಾಸುರರು ಮದದಿಂದ ಪೂರ್ಣರಾಗಿ, ಭಯಪ್ರಾಪ್ತಿಯುಳ್ಳಂಥ ಮೊಸಳೆಗಳು ಮೊದಲಾಗಿ ಉಳ್ಳಂಥ, ಅಶೇಷ ಜಲಚರಪ್ರಾಣಿಗಳ ಸಮೂಹದಿಂದ ಯುಕ್ತವಾದಂಥ ಕ್ಷೀರಸಮುದ್ರವನ್ನು ಮಥನ ಮಾಡಿದರು.

' ದೇವತಿಗಳು ಅಸುರರು ಬಹಳ ಶ್ರಮದಿಂದ ಬಳಲುತ್ತಿರಲಾಗಿ, ಉತ್ಕೃಷ್ಟ ಪರಾಕ್ರಮದಿಂದ ಮುಖ್ಯನಾದಂಥ ನೀನು, ಅಮೃತಾರ್ಥವಾಗಿ ಸಂತೋಷದಿಂದ ಮಥನ ಮಾಡಿದಿ. ಮಥನ ಮಾಡತ ಇರಲಾಗಿ, ಮೂರು ಲೋಕವನ್ನೂ ನುಂಗುವಂಥ ಕಾಲಕೂಟವಿಷವು ಹುಟ್ಟಿತು. ಮುಖ್ಯಪ್ರಾಣದೇವರು, ನಿನ್ನ ಆಜ್ಞೆದಿಂದ ತನ್ನ ಕೈಯೊಳಗೆ ಧರಿಸಿದನು. ವಿಷ ಎಂಥಾದ್ದು ಎಂದರೆ, ಕಲಿಸ್ವರೂಪಭೂತವಾದಂಥಾದ್ದು. ಬ್ರಹ್ಮದೇವರ ವರದಿಂದ ಅತ್ಯಂತವಾಗಿ ಸಕಲ ಲೋಗರಿಂದ ಧರಿಸಲಿಕ್ಕೆ ಶಕ್ಯವಲ್ಲದೆ ಇದ್ದಂಥಾದ್ದು, ಸಕಲ ಲೋಗರಿಂದ ಮುಟ್ಟಲಿಕ್ಕೆ ಅಶಕ್ಯವಾದಂಥಾದ್ದು. ಇಂಥಾ ವಿಷವನ್ನು ವಾಯುದೇವರು ಸ್ವಲ್ಪಮಾತ್ರ ತೆಗೆದುಕೊಂಡು, ತನ್ನ ಅಂಗೈಯಿಂದ ಜೆನ್ನಾಗಿ ಮರ್ದಿಸಿ ನಿರ್ವೀರ್ಯಮಾಡಿ, ರುದ್ರನ ಸರ್ವೋತ್ತಮತ್ವ ಪರಿಹರಿಸಬೇಕಾಗಿ, ಆತಗೆ ಕೊಟ್ಟನು. ಮಹಾರುದ್ರ ಆ ವಿಷವನ್ನು ಮಹಾಕಷ್ಟದಿಂದ ನುಂಗಲಿಕ್ಕೆ, ಕಂಠದಲ್ಲಿ ನಿಂತಿತು ಆ ವಿಷದಿಂದ ಶೀಘ್ರ ಮೂರ್ಛಾಗತನಾಗಿ ಭೂತಳದಲ್ಲಿ ಬಿದ್ದನು. ರುದ್ರನು ನಾರಾಯಣನ ಕರಸ್ಪರ್ಶದಿಂದ ಎಚ್ಚರಿಕೆಯುಳ್ಳವನಾಗಿ ಎದ್ದು ಕುಳಿತನು. ಅದರಿಂದ ಕುತ್ತಿಗೆ ಕಪ್ಪಾಯಿತು. ಅದರಿಂದಲೇ ' ನೀಲಕಂಠ 'ನೆಂದು ನಾಮ ಬಂತು. ಅನಂತರದಲ್ಲಿ ವಾಯುದೇವರು ನಿನ್ನ ಆಜ್ಞೆ ಮುಂದುಮಾಡಿಕೊಂಡು, ಬಂಗಾರದ ಪಾತ್ರೆಯೊಳಗೆ ಹಾಕಿಕೊಂಡು, ಮರ್ದಿಸದೆ ವೀರ್ಯವುಳ್ಳಂಥ ವಿಷವನ್ನು ತಾನೇ ಪಾನಮಾಡಿದನು. ಆ ವಿಷ ವಾಯುದೇವರಿಗೆ ಜೀರ್ಣವಾಯಿತು. ಮಹಾರುದ್ರಗೆ, ನಿರ್ವೀರ್ಯವಾದಂಥ ಅತ್ಯಲ್ಪವಾದ ವಿಷಪಾನ ಮಾಡಿದ್ದರಿಂದ ಶಿರೋವ್ಯಥಿಯಾಯಿತು, ಶೀತಳಾರ್ಥವಾಗಿ ಭಾಗೀರಥಿಯ ಧರಿಸಿದ್ದಾನೆ, ಚಂದ್ರನ ಧರಿಸಿದ್ದಾನೆ. ವಾಯುದೇವರು ಸಂಪೂರ್ಣ ವಿಷ ಅಪ್ರಯಾಸದಿಂದ ಪಾನ ಮಾಡಿದ್ದರಿಂದ ಏನೂ ವ್ಯಥಿ ವಾಯುದೇವರಿಗೆ ಆಗಲಿಲ್ಲ, ರಸಾಯನ ಕೊಂಡಹಾಂಗೆ ಆಯಿತು. ವಾಯುದೇವರ ಕೈಯಿಂದ ಜಿಗಳಿಬಿದ್ದ ವಿಷದಿಂದ ಕಲಿದೇಹವಾಯಿತು. ಕಲಿಯು ಸರ್ವಜಗತ್ತಿನಲ್ಲಿ ಪ್ರವರ್ತಿಸುವಂಥಾತನಾದ. ಅತ್ಯಲ್ಪ ವಿಷಕ್ಕೆ ಇಷ್ಟು ಸಾಮರ್ಥ್ಯ, ಸಂಪೂರ್ಣ ವಿಷ ಅಪ್ರಯಾಸದಿಂದ ಪಾನಮಾಡಿ ನಿಂತಂಥ ವಾಯುದೇವರಿಗೆ ಲೇಶತಃ ವಿಕಾರವಾಗಲಿಲ್ಲ! ನಿನ್ನ ಭಕ್ತರು ಅದ್ಭುತ ಚರಿತ್ರಿ ಉಳ್ಳವರು. ಕಲಿದೇಹವಾಗಲಿಕ್ಕೆ, ಉಳದಂಥ ವಿಷದಿಂದ ಸರ್ಪಗಳು, ಚೇಳುಗಳು ಮೊದಲಾದ ಕಚ್ಚೋ ಪ್ರಾಣಿಗಳು ಹುಟ್ಟಿದುವು, ರಾಕ್ಷಸರು ಹುಟ್ಟಿದರು.

" ವಿಷ ಹುಟ್ಟಿದ ತರುವಾಯ, ನಿನ್ನಿಂದ ಕ್ಷೀರಸಮುದ್ರ ಮಥನ ಮಾಡಲ್ಪಡುತ್ತಿರಲಾಗಿ ಸುರಾ ಹುಟ್ಟಿತು, ಅಸುರರು ತೆಗೆದುಕೊಂಡರು. ಅದರ ತರುವಾಯ ಉಚ್ಚೈಶ್ರವನಾಮದಿಂದ ಪ್ರಸಿದ್ಧವಾದಂಥ ಕುದರಿ ಹೊರಟಿತು, ಬಲಿಚಕ್ರೇಶ್ವರ ತೆಗೆದುಕೊಂಡನು. ಹಾಂಗೆ ಐರಾವತವೆಂಬ ನಾಮವುಳ್ಳ ಆನೆ

ಹುಟ್ಟಿತು, ದೇವೇಂದ್ರ ಕೊಂಡನು. ಕಡಿಮೆ ದಿಕ್ಪಾಲಕರ ಗಜ ಕುಮುದಾದಿಗಳು ಹುಟ್ಟಿದವು. ಶ್ರೇಷ್ಠರಾದಂಥ ಸಹಸ್ರ ಅಪ್ಸರಸ್ತ್ರೀಯರು ಹುಟ್ಟಿದರು. ಹಾಂಗೆ ದೇವತೆಗಳ ಆಭರಣಗಳು, ಆಯುಧಗಳು ಹುಟ್ಟಿದವು. ಪಾರಿಜಾತವೃಕ್ಷ, ಕಾಮ-ಧೇನು, ಚಂದ್ರ ಹಾಂಗೆ ಲೋಕಸಾರಭೂತ ಕೌಸ್ತುಭಮಣಿ ಹುಟ್ಟಿತು. ತರುವಾಯ ಲಕ್ಷ್ಮೀದೇವಿಯು, ಯದ್ಯಪಿ ನಿತ್ಯವಾದ ದೇಹವುಳ್ಳಾಕಿಯಾದರೂ ಸರಿಯೆ, ಕ್ಷೀರಾಬ್ಧಿಯಲ್ಲಿ ತನ್ನ ಎರಡನೇ (ಅವತಾರ) ರೂಪದಿಂದ ಆವಿರ್ಭೂತಳಾದಳು. ನೀನು ಬಲದ ಕೈಯಲ್ಲಿ ಪೂರ್ಣವಾದಂಥ ಅಮೃತ ಕಮಂಡಲು ಹಿಡಕೊಂಡು, ಹಾಂಗೆ ಎರಡನೇದಾದಂಥ ಎಡದ ಕೈಯಿಂದ ಸುಧಾಪೂರ್ಣವಾದ ಕಲಶ ಹಿಡಕೊಂಡು, ಇಂದ್ರನೀಲಮಣಿಯೋಪಾದಿ ಪ್ರಕಾಶಿಸ್ತ, ಧನ್ವಂತರಿ ಎಂಬ ನಾಮದಿಂದ ಪ್ರಸಿದ್ಧನಾಗಿ, ಕ್ಷೀರಸಮುದ್ರ ದೆಸೆಯಿಂದ ಪ್ರಾದುರ್ಭೂತನಾದಿ. ತರುವಾಯ ದಿತೀಪುತ್ರರಾದಂಥ ದೈತ್ಯರುಗಳು, ನಿನ್ನ ಕೈಯೊಳಗೆ ಇದ್ದಂಥ ಅಮೃತದಿಂದ ಪೂರ್ಣವಾದಂಥ ಕಮಂಡಲು, ಕಲಶವನ್ನು ಕಸಕೊಂಡರು. ಅಶಕ್ತನಾಗಿ ಕೊಟ್ಟಾತನಲ್ಲ, ಆ ದೈತ್ಯರ ಸಂಹಾರ ಮಾಡೋದರಗೋಸ್ಕರ, ಸತ್ಯ-ಭ್ರಷ್ಟರ ಮಾಡೋದರಗೋಸ್ಕರ ಪರಾಕ್ರಮ ಉಳ್ಳಾತನಾದರೂ ಸರಿಯೆ, ನಿನ್ನಿಂದ ಅಮೃತಕಲಶವು ಬಿಡಲ್ಪಟ್ಟಿತು. ಅಪರಾಧ ವಿನಾವಾಗಿ ವಧಿ ಮಾಡಬಾರದೆಂದು, ಅಸುರರುಗಳ ಅಪರಾಧಿಗಳ ಮಾಡೋದರಗೋಸ್ಕರ ಸುಮ್ಮನಿರುವಂಥಾತನಾದಿ. ಅಸಾಧಾರಣ ವಸ್ತು ದೈತ್ಯರ ವಶವಾಯಿತೆಂದು ದೇವತೆಗಳು ಬಹಳ ಚಿಂತೆಯಿಂದ ಯುಕ್ತರಾಗಲಿಕ್ಕೆ, ಆ ಕಾಲದಲ್ಲಿ ದೈತ್ಯರು ಅಮೃತಕಲಶವನ್ನು ತಾವಾಗಿ ತಂದು-ಕೊಡೋಹಾಂಗೆ ಮಾಡಥೀನೆಂದು ದೇವತೆಗಳಿಗೆ ಸಮಾಧಾನ ಮಾಡಿ, ಉತ್ತಮ ವಾದ ಅಸದೃಶರೂಪವನ್ನು ಶೀಘ್ರ ಧರಿಸಿ, ಅಸುರರ ಮೋಹಿಸೋದರಗೋಸ್ಕರ, ನಾರಾಯಣೀರೂಪ ಪ್ರಕಟವಾಡಿ, ವನದೊಳಗಿಂದ ಬಾಹೋ ಅಂಥಾತನಾದಿ. ರೂಪ ಎಂಥಾದ್ದು ಎಂದರೆ ಷೋಡಶವರುಷ ಪ್ರಾಯವುಳ್ಳ, ಜಘನಪ್ರದೇಶದಲ್ಲಿ ರತ್ನಮಯವಾದ ಕಾಂಚೀಧಾಮದಿಂದ ರಮ್ಯವಾದಂಥ, ಬಂಗಾರದೋಪಾದಿ ವರ್ಣ ವುಳ್ಳಂಥ ಪೀತಾಂಬರದಿಂದ ಯುಕ್ತವಾದ, ಸವಿೀಚೀನವಾದ ಮಧ್ಯಪ್ರದೇಶ ವುಳ್ಳಂಥಾದ್ದು. ವಿಸ್ತೀರ್ಣವಾದಂಥ ಜಘನದಿಂದ ಶೋಭಿಸುವಂಥಾದ್ದು. ಕಲಶ ದೋಪಾದಿ ಕುಚಗಳುಳ್ಳಂಥ, ನಿರ್ದುಷ್ಟವಾದಂಥ ಕಮಲದೋಪಾದಿ ಆಯತವಾದ ಕಣ್ಣುಗಳುಳ್ಳಂಥ ಪ್ರಕಾಶಮಾನವಾದಂಥ, ಸರ್ವಪದಾರ್ಥಗಳೊಳಗೆ ಉತ್ತಮ ವಾದಂಥ, ದೋಷರಹಿತವಾದಂಥ ಗುಣಗಳಿಂದ ಪರಿಪೂರ್ಣವಾದಂಥಾದ್ದು. ಇಂಥಾ ರೂಪವನ್ನು ಕಂಡು ಅಸುರರು ಚೆನ್ನಾಗಿ ಮೋಹಿಸಿದರು. ಸರ್ವ ದೈತ್ಯರು ಗಳೂ ಅಮೃತದ ನಿಮಿತ್ತ ಪರಸ್ಪರ ಹೊಡೆದಾಡುವಂಥಾವರಾಗಿ, ನನಗೆ ಬೇಕು ತನಗೆ ಬೇಕು ಎಂದು ಸ್ಪರ್ಧಿಸುವಂಥ ದೈತ್ಯರುಗಳು, ಇಂಥಾ ಸ್ತ್ರೀಭೋಗ

ತವುಗೆ ಆಗಬೇಕೆಂದು ಮೋಹಿತರಾಗಿ, ಸ್ತ್ರೀಯಳ ತಮ್ಮ ವಶ ಮಾಡಿಕೋ-ಬೇಕೆಂಬ ಭ್ರಾಂತಿಯಿಂದ, ನಿನ್ನ ಕೈಯೊಳಗೆ ಅಮೃತಕಲಶವನ್ನು ಕೊಟ್ಟರು.

"ನಿನ್ನ ಮಾಯ ಜ್ಞಾನಿಗಳಿಗೇ ಮೋಹಿಸತದೆ, ದೈತ್ಯರು ಮೋಹಿತರಾದ ರೆಂಬೋದು ಏನು ಆಶ್ಚರ್ಯ! ಅಮೃತಕಲಶವು ದಾವ ಅಭಿಪ್ರಾಯದಿಂದ ನಿನ್ನ ಕೈಯಲ್ಲಿ ಕೊಟ್ಟರು ಎಂದಲ್ಲಿ, 'ಅಮೃತ ಸವನಾಗಿ ಭಾಗಮಾಡಿ ನಮುಗೆ ಪಾನ ಮಾಡಿಸು' ಎಂದು ಕೈಯಲ್ಲಿ ಕೊಟ್ಟರು. ದೈತ್ಯರು ನಿನ್ನಿಂದ ಮೆಚ್ಚಿಸಿ-ಕೊಳ್ಳಲ್ಪಟ್ಟರು. ಆ ಸಮಯದಲ್ಲಿ ದುಷ್ಟ ಜನರುಗಳಲ್ಲಿ ಧರ್ಮ ಪರಿತ್ಯಾಗ ಮಾಡಿಸಬೇಕೆಂದು ತಿಳಿಸೋದರಗೋಸ್ಕರ, ಅಸುರರ ಕುರಿತು ಮಾತಾಡುವಂಥಾತ ನಾದಿ. 'ನನ್ನಿಂದ ಮಾಡಲ್ಪಟ್ಟಂಥ ಈ ಕಾರ್ಯದಲ್ಲಿ ನಿಮ್ಮಗಳಿಗೆ ಸಂವಾದ ಬಾರದ ಪಕ್ಷವೇ, ಈ ಅಮೃತವನ್ನು ಭಾಗಮಾಡೇನು. ನನ್ನ ಸರಿಬಂದಹಾಂಗೆ ಹಾಕೇನು. ನೀವೇನು ಅನಬಾರದು. ಸ್ತ್ರೀಯಳಾದ ನನ್ನಲ್ಲಿ ಒಂದಾನೊಂದು ವಿಷಯದಲ್ಲೂ ವಿಶ್ವಾಸ ಮಾಡಬ್ಯಾಡಿ' ಎಂದು ಈ ಪ್ರಕಾರ ಮುಗುಳುನಗೆಯಿಂದ ಆಡಿದಂಥ ಮಾತು ಕೇಳಿ, ಸ್ತ್ರೀವಿಲಾಸಗಳಿಂದ ಮೋಹಿತರಾಗಿ, ಆ ದೈತ್ಯರುಗಳು 'ಹಾಂಗೆ ಆಗಲಿ' ಎಂದು ಮಾತನಾಡಿದರು. ತರುವಾಯ ದೇವ ದೈತ್ಯರನ್ನು ಸಾಲುಹಿಡದು ಕೂಡ್ರಿಸಿ, ನಿನ್ನ ಅತಿ ಸುಂದರತ್ವದಿಂದ ಚಂಚಲೀಕೃತರಾದಂಥ ಸಮುಸ್ತ ಅಸುರರ ಕುರಿತು ಮಾತನಾಡುವಂಥಾತನಾದಿ. 'ನಾನು ನಿಮ್ಮ ಕಣ್ಣುಗಳ ನೋಡಿ ನಾಚಥೀನಿ. ನೀವೇ ಕರ್ತೃಗಳಾಗಿ ನನ್ನ ವಿಷಯದಲ್ಲಿ ನೋಡತ ಇರಲಾಗಿ, ನಿಮ್ಮನ್ನ ನೋಡಿ ಬಹಳ ನಾಚಥೀನಿ. ನೀವೆಲ್ಲ ಗಂಡಸರು, ನಾ ಒಬ್ಬಳೇ ಸ್ತ್ರೀ ಸಭಿಯೊಳಗೆ ಹ್ಯಾಂಗೆ ಬರಲಿ, ನಾಚಿಕಿ ಬರತದೆ. ನೀವೆಲ್ಲ ಕಣ್ಣುಮುಚ್ಚಿಕೊಂಡರೆ, ಸಭಿಯೊಳಗೆ ಬಂದು ಅಮೃತ ಬಡಿಸೇನು' ಎನಲಿಕ್ಕೆ ಸ್ತ್ರೀಮಾತು ಕೇಳದಿದ್ದರೆ ಭೋಗಕ್ಕೆ ಬಾರದೆಹೋದಾಳೆಂದು ಮೋಹಿತರಾಗಿ, ಹರಹರದು ಬಾಹೋದು ಬಿಟ್ಟುಕೊಟ್ಟು, ದೈತ್ಯರುಗಳು ಕಣ್ಣು ಮುಚ್ಚಿಕೊಂಡರು. ನಾರಾಯಣೀರೂಪದಿಂದ ದೈತ್ಯರ ಸಮೀಪದಲ್ಲಿ ತಿರುಗಾಡ ತಿದ್ದರೂ, ಸಮೀಚೀನವಾದ ಅಮೃತವನ್ನು ದೇವತಿಗಳಿಗೆ ಪಾನ ಮಾಡಿಸಿದಿ. ರಾಹು, ಕಣ್ಣು ತೆಗೆದು ನೋಡಥಾನೆ! ತನಗೆ ಅಮೃತ ಪ್ರಾಪ್ತವಾಗಲಿಲ್ಲವೆಂದು, ದೈತ್ಯರ ಸಾಲು ಬಿಟ್ಟು ದೇವತಿಗಳ ಸಾಲಿನಲ್ಲಿ ಕುಳಿತನು. ಅಮೃತ ಬಾಯೊಳಗೆ ಕುಡಿಯಲಿಕ್ಕೆ ಸೂರ್ಯಚಂದ್ರರು ತಮ್ಮ ಸೇವಿ ಮುಟ್ಟಿಸಬೇಕಾಗಿ, ರಾಹುವಿನ ತಕ್ಕತನ ಹೇಳಿದರು. ಆ ಕ್ಷಣದಲ್ಲಿ ನಾರಾಯಣೀರೂಪ ಬಿಟ್ಟುಕೊಟ್ಟು, ಪುರುಷಾಕೃತಿಯಾಗಿ, ಅಮೃತಪಾನ ಮಾಡುವಂಥ ರಾಹುವಿನ ಶಿರಸ್ಸು ಸುದರ್ಶನ ದಿಂದ ಕಡದು ಬಿಟ್ಟಿ. ಹಾಂಗಾದರೆ ಅಯೋಗ್ಯರಿಗೆ ಅಮೃತಪ್ರಾಪ್ತಿ ಹ್ಯಾಂಗೆ ಆಯಿತು ಎಂದರೆ, ಆ ರಾಹು ಅಮೃತನಿಮಿತ್ತ ಸಹಸ್ರ ಜನ್ಮಗಳಲ್ಲಿ ಪುನಃಪುನಃ

ತಪಸ್ಸು ಮಾಡಿ, ಬ್ರಹ್ಮದೇವರ ದೆಸೆಯಿಂದ ವರವು ಸಂಪಾದಿಸಿದ್ದ. ಆದಕಾರಣದಿಂದ ರಾಹುವಿನ ಕೈಯೊಳಗೆ ಅಮೃತಬಿಂದು ಮಾತ್ರ ಹಾಕಿ ರಾಹುವಿನ ಶಿರಸ್ಸು ಛೇದಿಸಿಬಿಟ್ಟ. ಆ ರಾಹುವಿನ ಶಿರಸ್ಸು, ದೇವತೆಗಳಿಂದ ಸಮಾವಿಷ್ಟವಾಗಿ ನವಗ್ರಹ ದಲ್ಲಿ ಗ್ರಹರೂಪತ್ವ ಐದಿತು. ಸೂರ್ಯಚಂದ್ರರು ಚಾಡಿ ಹೇಳಿದರೆಂದು, ಹುಣ್ಣಿವಿ, ಅಮಾವಾಸ್ಯಕ್ಕೆ ಅಡ್ಡಾಗಥಾರೆ. ಬಾಹುಗಳಿಂದ ಸಹಿತವಾದಂಥ ರಾಹುವಿನ ಕಬಂಧವನ್ನು ನೀನು ಅಂಗುಷ್ಠದಿಂದ ಚಿವ್ಕಲು, ಕ್ಷೀರಸಮುದ್ರದ ಆಚೇಲಿ, ಶಿರಸ್ಸಿನಿಂದ ರಹಿತವಾದ ಕಬಂಧವು ಮರಣವಾಗದೆ ಅದ್ಯಾಪಿ ಬಿದ್ದದೆ.

'ತದನಂತರದಲ್ಲಿ ದೈತ್ಯರು ಕಣ್ಣುತೆರೆದು ನೋಡಥಾರೆ, ಸ್ತ್ರೀನೂ ಇಲ್ಲ! ಅಮೃತವೂ ಪ್ರಾಪ್ತವಾಗಲಿಲ್ಲ! ಬಹಳ ಖಿನ್ನರಾಗಿ ಕೋಪದಿಂದ ಎತ್ತಲ್ಪಟ್ಟ ಆಯುಧವುಳ್ಳಂಥವರಾಗಿ, ಯುದ್ಧದಗೋಸ್ಕರ ಬಾಹೋಂಥಾವರಾದರು. ಈ ದೇವತೆಗಳನ್ನ ಮುಂದುಮಾಡಿಕೊಂಡು, ಸಮಸ್ತ ರಾಕ್ಷಸರನ್ನ ಕೊಂದುಬಿಟ್ಟ. ಬಲಿಚಕ್ರೇಶ್ವರ ಪೆಟ್ಟು ತಿಂದು' ಅಸ್ತಂಗಿರಿ ಪಟ್ಟಣಕ್ಕೆ ಹೋದನು. ದೇವತೆಗಳನ್ನ ಸಂರಕ್ಷಿಸಬೇಕಾಗಿ, ಧರ್ಮಸಂಸ್ಥಾಪನೆ ಮಾಡಬೇಕೆಂದು ಅವತಾರಗಳ ವ್ಯಕ್ತ ಮಾಡಿದಿ. ಗೌತಮನ ಶಾಪದಿಂದ ಬ್ರಾಹ್ಮಣರುಗಳೆಲ್ಲ ಅಜ್ಞಾನಿಗಳಾಗಿದ್ದಾರೆ.

ಇದರ ಹೊರ್ತು, ಕ್ಷೀರಸಮುದ್ರದಲ್ಲಿ ಹುಟ್ಟಿದ ಕಲಿದೇಹವು ನಿನ್ನಿಂದ ಹತ ವಾಯಿತು. ಆ ಕಲಿಯು ಬ್ರಹ್ಮದೇವರ ವರದಿಂದ, ನಿನ್ನ ಹೊರ್ತು ಮತ್ತೊಬ್ಬ ರಿಂದ ಗೆಲ್ಲಲಿಕ್ಕೆ ಶಕ್ಯನಾಗದಂಥಾತ, ಸರ್ವ ಪ್ರಾಣಿಗಳಲ್ಲಿ ವಾಸಮಾಡಿಕೊಂಡಿದ್ದಾನೆ. ವರ ಕೊಟ್ಟ ಬ್ರಹ್ಮನಲ್ಲಿ ಹೊರ್ತಾಗಿ ಸರ್ವರಲ್ಲಿ ಇದ್ದಾನೆ. ದಾರಿದ್ರ್ಯಾಭಿಮಾನಿ-ಯಾದಂಥ ಅಲಕ್ಷ್ಮಿಯು ಅವನ ಹೆಂಡತಿಯಾಗಿದ್ದಾಳೆ. ಸಮಸ್ತವಾದಂಥ ರೋಗಾದಿ ದೋಷಗಳಿಗೆ ಅಭಿಮಾನಿಗಳಾದಂಥ ಅಸುರರು, ಕಲಿ ಮಕ್ಕಳು. ದೈತ್ಯರ ಸಂಹಾರ ಮಾಡಿದ ತರುವಾಯ, ಲಕ್ಷ್ಮೀದೇವಿಯು ನಿನ್ನ ವಕ್ಷಸ್ಥಳದಲ್ಲಿ ಚೆನ್ನಾಗಿ ವಾಸಮಾಡಿದಳು. ಬ್ರಹ್ಮನೇ ಅಭಿಮಾನಿದೇವತೆಯಾಗಿ ಉಳ್ಳಂಥ ಕೌಸ್ತುಭರತ್ನವು ನಿನ್ನ ಕೊರಳಲ್ಲಿರೋದಾಯಿತು. ಹಾಂಗೆ ಕ್ಷೀರಸಮುದ್ರದಲ್ಲಿ ಉಚ್ಚೈಶ್ರವ ಮೊದಲಾದ ಕೆಲವು ಪದಾರ್ಥಗಳು, ದಾರದಾರಿಗೆ ನಾವದಾವದು ಯೋಗ್ಯವದೆ ಆ ಪ್ರಕಾರ ವಿಭಾಗಮಾಡಿ, ದೇವೇಂದ್ರ ಮೊದಲಾದ ದೇವತೆಗಳಿಗೆ ಕೊಟ್ಟ. ದೇವತೆಗಳೇ ಮೋಕ್ಷಯೋಗ್ಯರು, ಅಸುರರು ಮೋಕ್ಷಯೋಗ್ಯರಲ್ಲವೆಂದು ದೃಷ್ಟಾಂತ ತೋರಿಸಬೇಕಾಗಿ ಸಮೀಚೀನವಾದಂಥ ಅಮೃತ ದೇವತೆಗಳಿಗೆ ಕೊಟ್ಟ.'

ಅದನ್ನೇ ಸ್ಪಷ್ಟ ಮಾಡಥಾರೆ.

'ದೇವತೆಗಳಿಗೆ ನಿಯತದಿಂದ ಮೋಕ್ಷವಾಗತದೆ. ಆ ಮೋಕ್ಷವು ಒಂದಾ-ನೊಂದು ಕಾಲಕ್ಕೂ ಅಸುರರಿಗೆ ಆಗುವುದಿಲ್ಲ. ಮೋಕ್ಷಾರ್ಥವಾಗಿ ಉದ್ಯೋಗ ಮಾಡಿದಂಥ ಅಯೋಗ್ಯ ಅಸುರರಿಗೆ, ಮೋಕ್ಷವಿರೋಧಿಯಾದ ದುಃಖಸ್ವರೂಪ

ಅಂಧಂತವ.ಸ್ಸು, ಆಗತದೆ. ಇದಕ್ಕೆ ದೃಷ್ಟಾಂತವೇನೆಂದರೆ, ರಾಹು ಅಮೃತಾರ್ಥ ಉದ್ಯೋಗ ಮಾಡಿದರೆ, ಅಮೃತಕ್ಕೆ ವಿರೋಧವಾದ ಶಿರಚ್ಛೇದನವಾಯಿತು. ಅದರಿಂದ ದೇವತಿಗಳಿಗೆ ಮೋಕ್ಷವೇ ನಿಯತವೆಂದು ತೋರಿಸಬೇಕಾಗಿ ಅಮೃತಪಾನ ಮಾಡಿಸಿದಿ.' ಸದ್ಯ ಪ್ರಕೃತವೇನಂದರೆ ದೇವತಿಗಳು ವಿಜ್ಞಾಪನೆ ಮಾಡಥಾರೆ.

'ಈ ಕಾಲದಲ್ಲಿ ಕಲಿಯು ಬ್ರಹ್ಮದೇವರ ವರಬಲದಿಂದ, ದೇವತಿಗಳಾದಂಥ ನಮ್ಮನ್ನು ಪೀಡಸ್ತಾನೆ. ಡಾವ ಪ್ರಕಾರವೆಂದರೆ, ಅಜ್ಞಾನ ಒಂದು, ಮಿಥ್ಯಾಜ್ಞಾನ ಇನ್ನೊಂದು, ಈ ಎರಡು ರೂಪಗಳಿಂದ ಸಮೀಚೀನವಾದಂಥ ಜ್ಞಾನಕ್ಕೆ ವಿರೋಧ-ರೂಪವಾದಂಥ ಕಲಿಯು ನಮ್ಮನ್ನ ಪೀಡಸ್ತಾನೆ. ಅಜ್ಞಾನ ಪ್ರಾಪ್ತಿ ಆದದ್ದರಿಂದ, ಸಮೀಚೀನವಾದಂಥ ಜ್ಞಾನವು ದೂರೋತ್ಸರಿತವಾಯಿತು. ಆದ್ದರಿಂದ ನಾವೇ ಮೊದಲಾದಂಥ ಸಜ್ಜನರ ಹೃದಯದೊಳಗೆ ಪ್ರವೇಶಮಾಡಿ, ಮಿಥ್ಯಾಜ್ಞಾನ ಹುಟ್ಟಿಸಿ ಬಾಧಸ್ತಾನೆ. ಅವಗೂ, ನಿನ್ನ ಆಜ್ಞೆದಿಂದ ಬ್ರಹ್ಮದೇವರು ಅಜೇಯತ್ವಾದಿ-ರೂಪ ವರವು ಕೊಟ್ಟಿದ್ದಾನೆ. ಆ ಕಾರಣದಿಂದ ಕಲಿಯು ರುದ್ರನಲ್ಲಿ ಪ್ರವೇಶ ಮಾಡಿ ಪಾಶುಪತಾದಿ ಕುಶಾಸ್ತ್ರಗಳನ್ನು ಮಾಡಥಾನೆ. ಕುತ್ಸಿತ ಯುಕ್ತಿಗಳಿಗೆ ದೂಷಣ ಮಾಡೋದರಲ್ಲಿ ಒಬ್ಬಾನೊಬ್ಬ ಪುರುಷನೂ ಸಮರ್ಥನಾಗೋದಿಲ್ಲವೆಂದು ಪ್ರಸಿದ್ಧವಾಗೇದೆ. ಆ ಕಲಿಯು ಸಮಸ್ತ ಶಾಸ್ತ್ರಗಳ ಸಮೂಹಗಳಿಂದ ಸಹಿತವಾದಂಥ ಸರ್ವ ವೇದಾರ್ಥಗಳು ವಿಪರೀತ ಮಾಡಿ, ಶಾಸ್ತ್ರಮರ್ಯಾದಾದಿಗಳು ಕೆಡಿಸಿಬಿಟ್ಟಿದ್ದಾನೆ. ಆದಕಾರಣದಿಂದ ಆ ವೇದಗಳು ಅಪೌರುಷೇಯವಾದರೂ, ಈ ಕಾಲದಲ್ಲಿ ಇದ್ದೂ ಇಲ್ಲದಹಾಂಗೆ ಆಗೇವೆ. ಸಮ್ಯಕ್‌ಜ್ಞಾನ ತತ್ತ್ವ ಇಲ್ಲದ ಕಾರಣದಿಂದ, ಸಮೀಚೀನವಾದಂಥ ಶಾಸ್ತ್ರಗಳು, ಬ್ರಹ್ಮಸೂತ್ರವು, ಭಾರತ ಮೊದಲಾದಂಥಾವು ಮಾಡು. ಇಷ್ಟು ಏನುಕಾರಣ ಸ್ತೋತ್ರಮಾಡಬೇಕು. ಆ ಕಲಿಯು ಒಬ್ಬಾತ, ನೀವು ಬಹುಮಂದಿ, ಏನುಕಾರಣ ಕೊಲ್ಲವಲ್ಲರಿ ಎಂದಲ್ಲಿ, ಆ ಕಲಿಯು ಕಣ್ಣಿಗೆ ಕಾಣಿಸುವುದಿಲ್ಲ. ಇಂಥಾ ಸ್ಥಳದಲ್ಲಿ ಇದ್ದಾನೆಂದು ತಿಳಿಯಲಿಕ್ಕೆ ಶಕ್ಯವಲ್ಲ. ಸರ್ವ ಪ್ರಾಣಿಗಳ ಹೃದಯದಲ್ಲಿ ಕಾಣಬಾರದಹಾಂಗೆ ವಾಸಮಾಡಿ-ಕೊಂಡು ಇದ್ದಾನೆ. ಅವನ ಸ್ವರೂಪ ಎಂಥಾದ್ದು ಎಂದಲ್ಲಿ, ಯೋಚನಿ ಮಾಡಲಿಕ್ಕೆ ಶಕ್ಯವಲ್ಲ. ಆದ್ದರಿಂದ ಸಚ್ಛಾಸ್ತ್ರವೆಂಬ ಖಡ್ಡದಿಂದ ಶೀಘ್ರ ಕೊಂದು, ಮುಕ್ತಿ-ಯೋಗ್ಯ ಜನರಿಗೆ ಯೋಗ್ಯತಾನುಸಾರದಿಂದ ನಿನ್ನ ವೈಕುಂಠದಲ್ಲಿ ಸ್ಥಾನವನ್ನು ಕೊಡು. ನಿನ್ನ ಹೊರ್ತು ಕಲಿಯನ್ನು ಸಂಹಾರ ಮಾಡಲಿಕ್ಕೆ ಸಮರ್ಥರ್ಯಾರೂ ಇಲ್ಲ. ನೀ ಒಬ್ಬನೇ ಸಕಲ ಶಕ್ತಿಯಿಂದಲೂ ಪೂರ್ಣ ಎಂಬೋದು ನೋಡಿಕೊಂಡು, ನಾವು ಸ್ವರೂಪಭೂತವಾದಂಥ ಜ್ಞಾನಾನಂದ ಶರೀರವುಳ್ಳಂಥ ನಿನ್ನನ್ನು, ಅಜ್ಞಾನ-ಪರಿಹಾರಾರ್ಥವಾಗಿ ಶರಣಹೊಕ್ಕಿದ್ದೀವೆ' ಎಂದು ಸ್ತೋತ್ರಮಾಡಲಿಕ್ಕೆ, ಉತ್ತಮ ನಾದಂಥ, ತಿಳಿಯಲಿಕ್ಕೆ ಶಕ್ಯನಲ್ಲದಂಥ ಹರಿಯು, ಈ ಪ್ರಕಾರ ದೇವತಿಗಳಿಂದ

ಸ್ತೋತ್ರ ಮಾಡಿಸಿಕೊಂಬೋವಂಥಾತನಾಗಿ, ದೇವತಾಶ್ರೇಷ್ಠರಿಗೆ ಅಭಯವನ್ನು ಕೊಟ್ಟು, ಮೋಕ್ಷಕ್ಕೆ ಆಶ್ರಯನಾದಂಥ, ನಿರ್ದೋಷವಿಜ್ಞಾನೈಕಸ್ವರೂಪನಾದಂಥ ನಾರಾಯಣನು, ಭೂಮಿಯಲ್ಲಿ ಪ್ರಾದುರ್ಭೂತನಾದನು. ಎಲ್ಲಿ ಎಂದಲ್ಲಿ, ಕಮಲೋದ್ಭವನಾದಂಥ ಬ್ರಹ್ಮದೇವರ ಮಗ ವಸಿಷ್ಠ, ವಸಿಷ್ಠನ ಮಗ ಶಕ್ತಿ ಎಂಬ ಋಷಿ, ಶಕ್ತಿ ಮಗ ಪರಾಶರ ಋಷಿಯು ಉತ್ತಮವಾದಂಥ ತಪಸ್ಸು ಮಾಡಿದನು. ದಾವ ಅಭಿಪ್ರಾಯದಿಂದ ಎಂದಲ್ಲಿ, ಸಾಕ್ಷಾತ್ ನಾರಾಯಣನೇ ತನ್ನ ಮಗನಾಗ ಬೇಕೆಂಬ ಅಭಿಪ್ರಾಯದಿಂದ ತಪಸ್ಸು ಮಾಡಿದನು. ಅವಶ್ಯ ನಿನ್ನ ಮಗನಾಗ ಶೇನೆಂದು ವರವು ಕೊಟ್ಟನು.

ತಪಸ್ಸಿನಿಂದ ಅತ್ಯಂತ ಸಂತುಷ್ಟನಾಗಿ, ಅವ್ಯಾಹತ ಷಡ್ಗುಣೈಶ್ವರ್ಯಸಂಪನ್ನ-ನಾದಂಥ ಸ್ವಾಮಿಯು ಪರಾಶರನ ಕೂಡ ಮಾತನಾಡಿದನು. 'ನನ್ನ ಭಕ್ತ-ನಾದಂಥ ಅರಸು ದಾಶರಾಯನ್ನಿದ್ದಾನೆ. ಆತನಲ್ಲಿ ಶೋಭನಗುಣಗಳುಳ್ಳಂಥ ಕನ್ನಿಕೆ ಇದ್ದಾಳೆ. ಆ ಕನ್ಯಾ ಆತನ ಮಗಳು ಹ್ಯಾಂಗಾದಳೆಂದರೆ ವಸುರಾಯ ದೊಡ್ಡ ಚಕ್ರವರ್ತಿ; ಪರ್ವತದ ದೆಸಿಯಿಂದ ನದೀ, ಮಗಳನ್ನ ಹಡದಿದ್ದಳು. ವಸುರಾಯ ಆ ಕನ್ನಿಕೆ ಮದುವಿ ಆಗಿದ್ದ. ಋತುಕಾಲದಲ್ಲಿ ಭೋಗ ಕೊಡಬೇಕು. ಅದೇ ವ್ಯಾಳ್ಯಾದಲ್ಲಿ ಪಿತೃಗಳು ಮೃಗಮಾಂಸ ಬೇಡಿದರು. ಮಾಂಸ ತರಲಿಕ್ಕೆ ಅರಣ್ಯಕ್ಕೆ ಹೋದನು. ಹೆಂಡತಿ ನೆನಪಿನಿಂದ ರಮಣಸುಖ ನೆನಪು ಮಾಡಿಕೊಳ್ಳತಾ ಹೋಗಲಿಕ್ಕೆ, ವೀರ್ಯ ಜಿಗಳಿ ಭೂಮೀಮ್ಯಾಲೆ ಬಿತ್ತು. ಅಮೋಘವೀರ್ಯ ವ್ಯರ್ಥವಾಗಬಾರದೆಂದು ಎಲಿ ಒಳಗೆ ಹಾಕಿ, ಈ ರೇತಸ್ಸನ್ನು ತನ್ನ ಹೆಂಡತೀ ಕೈಲಿ ಕೊಡಲು ಶ್ಯೇನಪಕ್ಷಿ ಕೈಯ ಕೊಟ್ಟನು. ಆ ಪಕ್ಷಿಯು ಚುಂಚುಪುಟದಿಂದ ಹಿಡದು-ಕೊಂಡು ಆಕಾಶದಲ್ಲಿ ಹಾರತ ಬರಲಿಕ್ಕೆ, ಏನೋ ಒಯ್ಯತದೆಂದು ಮತ್ತೊಂದು ಶ್ಯೇನಪಕ್ಷಿ ಬಂದು ಯುದ್ಧಮಾಡಲಿಕ್ಕೆ, ಶ್ಯೇನಪಕ್ಷಿ ಚುಂಚುಪುಟದಲ್ಲಿದ್ದ ವೀರ್ಯ ಜಿಗಳಿ ನೀರೊಳಗೆ ಬಿತ್ತು. ಯಮುನ ತಂಗಿ ಯಮುನಾನದಿಯ ಜಲದೊಳಗೆ ಬೀಳಲಿಕ್ಕೆ, ಆ ರೇತಸ್ಸು ಒಂದು ಹೆಣ್ಣುಮೀನ ನುಂಗಿತು. ಅಂಬಿಗೇರ ಬಲಿ ಒಳಗೆ ಆ ಮೀನ ಬೀಳಲಿಕ್ಕೆ, ಆ ಮೀನ ಸೀಳಿ ನೋಡಲಾಗಿ, ಅದರ ಹೊಟ್ಟೆಯೊಳಗೆ ಅವಳೀಜವಳಿ ಎರಡು ಮಕ್ಕಳ ರೂಪ ಅವೆ! ಇಂಥಾ ಆಶ್ಚರ್ಯ ಕಂಡು, ತಮ್ಮ ಅರಸಾದಂಥ ದಾಶರಾಯಗೆ ಅಂಬಿಗ ಕೊಟ್ಟನು. ದಾಶರಾಯ, ಚಿತ್ರತರ ಮಕ್ಕಳನ್ನ ನೋಡಿ ತನ್ನ ಅರಸಾದಂಥ ವಸುರಾಯಗೆ ಕೊಟ್ಟನು. ಆ ವಸುರಾಯ, ಮೀನ ಛೇದಿಸಲಿಕ್ಕೆ ಹೆಣ್ಣು ಗಂಡು ಎರಡು ಅವಳೀಜವಳಿ ಹೊರಟವು ಎಂಬೋದು ಕೇಳಿ ಗಂಡಸುಮಗನ್ನ ತಾ ತೆಗೆದುಕೊಂಡು, ಹೆಣ್ಣು ಮಗಳನ್ನ ದಾಶರಾಯಗೆ ಕೊಟ್ಟನು. ತರುವಾಯ ವಸುರಾಯನ ಮಗ ಪ್ರಸಿದ್ಧನಾದಂಥಾತನಾಗಿ, ವಿರಾಟರಾಯ ಎಂಬ ಅಭಿದಾನದಿಂದ ಮತ್ಸ್ಯದೇಶದಲ್ಲಿ ಅರಸತ್ವ ಆಳಹೊಕ್ಕನು.

ಅತ್ಯಂತ ಸುಂದರರೂಪಳಾದ ಕನ್ನಿಕೆಯು ಅಂಬಿಗೇರಿಗೆ ಅರಸಾದಂಥ ದಾಶರಾಯನ ಮನಿಯೊಳಗೆ ಬೆಳೆದಳು. ಆ ಕನ್ನಿಕೆಯು 'ಸತ್ಯವತೀ' ಎಂಬ ನಾವುದಿಂದ ಪ್ರಸಿದ್ಧಳಾಗಿ, ತನ್ನ ಸಾಕಿದ ದಾಶರಾಯನ ಕೈಯ ಒಂದು ನಾವಿ ಇಸಕೊಂಡು, ದ್ರವ್ಯ ತೆಗೆದುಕೊಳ್ಳದೆ, ಬಂದಂಥಾ ಬ್ರಾಹ್ಮಣರಿಗೆ ಧರ್ಮನಾವಿ ದಾಟಸ್ತಾಳೆ. ಅಲ್ಲಿಗೆ ನೀನು ಹೋಗು; ನಾನು ಉತ್ಪತ್ತಿಶೂನ್ಯನಾದರೂ, ನಿನ್ನ ಮನೋಭೀಷ್ಟ ಪೂರ್ತಿ ಮಾಡಬೇಕಾಗಿ ಸತ್ಯವತೀಯಲ್ಲಿ ನಿನಗೆ ಮಗನಾಗಿ ಅವತಾರ ಮಾಡೇನು' ಎನಲಿಕ್ಕೆ, ಮುನೀಶ್ವರನಾದಂಥ ಪರಾಶರನು ಚಕ್ರಧರನಾದಂಥ ನಾರಾಯಣನ ಕೈಯ ನುಡಿಸಿಕೊಂಡಾತನಾಗಿ ತೀರ್ಥಯಾತ್ರಿ ಮಾಡತ, ಸೂರ್ಯನ್ನಮಗಳಾದ ಸಮುದ್ರಗಾಮಿಯಾದಂಥ ಯಮುನಾತೀರಕ್ಕೆ ಬಂದು,—ಅಲ್ಲೇ ಸತ್ಯವತೀ ಧರ್ಮನಾವಿ ದಾಟಸ್ತಾಳೆ—ಳಿಕೀ ಕೂಡ ಪರಾಶರ ಋಷಿ ಭೋಗ ಮಾಡಬೇಕೆಂದು ಮಾತನಾಡಿದ. 'ನಾ ಇನ್ನೂ ಕನ್ನಿಕೆ, ಮುಂದೆ ಗಂಡ ಬಾರನೆ ಹೋದಾನು. ಯೌವನತ್ವ ಕೆಟ್ಟೀತು. ಅದೂ ಅಲ್ಲದೆ ಹಾಡೇಹಗಲು, ಬ್ರಾಹ್ಮಣರು ಮುನಿಗಳು ಈ ನಾವಿ ಒಳಗೆ ಕುಳಿಥಾರೆ. ದುರಾಚಾರವನ್ನು ಕಂಡು ನಕ್ಕಾರಲ್ಲ.' ಹೀಂಗಂತ ಸತ್ಯವತೀ ಮಾತಾಡಲಿಕ್ಕೆ 'ದೇವರ ಆಜ್ಞೆ ಅದೆ. ಅವಶ್ಯ ಭೋಗ ಆಗಬೇಕು. ನನ್ನ ತಪೋಸಾಮರ್ಥ್ಯಿಂದ ದಾರೂ ಕಾಣದ ಹಾಂಗೆ ಮಂಜು ಕಟ್ಟಸ್ತೀನಿ. ಈ ಕ್ಷಣವೇ ಭೋಗವಾಗಬೇಕು' ಎಂದು ಮುನಿ ಮಾತಾಡಲಿಕ್ಕೆ, ಭೋಗಕ್ಕೆ ಅಂಗೀಕಾರಳಾದಳು. ಘರದಿಯಪ್ಪಂದೆ ಮಂಜು ಕಟ್ಟಿಸಿ ಪರಾಶರ, ಸತ್ಯವತೀ ಕೂಡ ರಮಿಸಿದನು. ತರುವಾಯ ಸತ್ಯವತೀಯಲ್ಲಿ, ವಿಶುದ್ಧ ಜ್ಞಾನೈಕದೇಹದಿಂದ ಸ್ವಾಮಿಯು ಶೀಘ್ರ ಪ್ರಾದುರ್ಭೂತನಾದನು. ಗರ್ಭವಾಸಾದಿಗಳಿಂದ ರಹಿತನಾಗಿ ಅಭಿವ್ಯಕ್ತನಾದನು.

ಏನುಕಾರಣ ಹೀಂಗನಬೇಕು, ಇತರರೋಪಾದಿ ಹುಟ್ಟಿದ ಅಂತ ಅನಬಾರದೆ ಎಂದಲ್ಲಿ, ನಮ್ಮ ಸ್ವಾಮಿಯು ಎಂಥಾತ ಎಂದರೆ, ದೋಷರಹಿತನಾದಂಥಾತ. ಜ್ಞಾನಾನಂದೈಕಗುಣಗಳುಳ್ಳ ದೇಹ ಶುಕ್ಲಶೋಣಿತ ಸಂಬಂಧದಿಂದ ರಹಿತನಾದಂಥ ಇಂಥಾ ನಾರಾಯಣನು, ಜನನರಹಿತನಾದರೂ ದುಷ್ಟಜನರ ಮೋಹಿಸಬೇಕಾಗಿ ಋಷಿರೂಪದಿಂದಲೇವೆ ಸ್ತ್ರೀಯರಲ್ಲಿ, ಪುರುಷನ ದೆಸಿಯಿಂದಲಾದರೂ ಹ್ಯಾಂಗೆ ಪುಟ್ಟಥಾರೆ, ಹಾಂಗೆ ಯೋನಿದ್ವಾರದಿಂದ ಬಂದಹಾಂಗೆ ತೋರಿಸಿದನು. ಪರಂತು ಬಲಜ್ಞಾನಾನಂದಾದಿರೂಪದೇಹ, ಇಂಥಾ ಸ್ವಾಮಿಯು ಒಮ್ಮಾನೊಮ್ಮಿಗೂ ಹುಟ್ಟೋದಿಲ್ಲ. ಹಾಂಗಾದರೆ, ನಿಯಮಿತ ಸ್ತ್ರೀಪುರುಷರ ಸಂಯೋಗದಿಂದ ಹುಟ್ಟಥಾನೆಂಬೋದು ಸಿದ್ಧವಾಗೋದಲ್ಲ ಎಂದಲ್ಲಿ ಈ ನಿಯಮವು ಅಸಿದ್ಧ. ಏನುಕಾರಣ, ನರಸಿಂಹ ಕಂಭದ ದೆಸಿಯಿಂದ ಹ್ಯಾಂಗೆ ಆವಿರ್ಭೂತನಾದನೋ ಅದೇ ಪ್ರಕಾರ ನಿತ್ಯದೇಹವುಳ್ಳಂಥ ಸಮರ್ಥ ವೇದವ್ಯಾಸನು, ಸ್ತಂಭಸ್ಥಾನೀಯಳಾದಂಥ

ಸತ್ಯವತೀಯಲ್ಲಿ ಆವಿರ್ಭೂತನಾದನು. ಸ್ತ್ರೀಪುರುಷರ ಶುಕ್ಲಶೋಣಿತದಿಂದ ಹುಟ್ಟಿದ ಶರೀರವಲ್ಲ. ಹಾಂಗಾದಕಾಲಕ್ಕೂ, ಸ್ಥಂಭಸ್ಥಾನೀಯಳಾದ ಸತ್ಯವತೀಯಲ್ಲಿ ದುಷ್ಟ-ಜನರಿಗೆ ಮಿಥ್ಯಾಜ್ಞಾನ ಹುಟ್ಟಿಸಬೇಕಾಗಿ, ಸ್ತ್ರೀಪುರುಷರ ದೆಸಿಯಿಂದ ಹುಟ್ಟಿದ ಹಾಂಗೆ ತೋರಿಸಿದನು. ಒಬ್ಬಾನೊಬ್ಬ ಸ್ತ್ರೀಪುರುಷರ ದೆಸಿಯಿಂದ ಪ್ರಾದುರ್ಭೂತ ನೆಂಬೋ ಹಾಂಗೆ ತೋರದಲೆ ಇದ್ದರೆ, ದುಷ್ಟಜನರು ಹ್ಯಾಂಗೆ ಮೋಹಿಸ್ಯಾರು? ಆದಕಾರಣದಿಂದ ಸ್ತ್ರೀಪುರುಷರ ಸಂಯೋಗದ ದೆಸಿಯಿಂದ ದೂರನಾದರೂ ಸರಿಯೆ, ದುಷ್ಟಜನ ಮೋಹನಾರ್ಥವಾಗಿ, ಸ್ತಂಭಸ್ಥಾನೀಯಳಾದಂಥ ಸತ್ಯವತೀಯಲ್ಲಿ ಆವಿರ್ಭೂತನಾದನು. ಆದಕಾರಣದಿಂದ ಪೂರ್ಣಗುಣೈಕನಾದಂಥ ನಾರಾಯಣನು, ಸ್ತ್ರೀಪುರುಷರ ಸಂಯೋಗದಿಂದ (ಶುಕ್ಲಶೋಣಿತಸಂಬಂಧದಿಂದ) ಹುಟ್ಟಿದನೆಂದು ದುಷ್ಟಜನರು ಮೋಹಿತರಾಗಥಾರೆ. ವಿಶ್ವಕರ್ತೃವಾದಂಥ ನಾರಾಯಣನು, ಸೂರ್ಯನ ಮಗಳಾದಂಥ ಯಮುನಾದೇವೀ ನಡುಗಡ್ಡೀಯೊಳಗೆ, ಕಳವೀದ ಗ್ರಾಮದ ತೀರದಲ್ಲಿ, ಸತ್ಯವತೀ ದೆಸಿಯಿಂದ ಪ್ರಾದುರ್ಭೂತನಾದನು. ಜ್ಞಾನವೆಂಬ ರಶಿಮುಮಂಡಲವೇ ಸ್ವರೂಪವಾಗುಳ್ಳಂಥ ಸ್ವಾಮಿಯು ಪ್ರಕಾಶಿಸಿದನು. ಸ್ವಾಮೀ ಪ್ರಕಾಶ ಎಂಥಾದ್ದು ಎಂದರೆ, ಬ್ರಹ್ಮಾಂಡದ ಒಳಗೂ ಹೊರಗೂ ಪ್ರಕಾಶಿಸುವಂಥಾತನಾಗಿ, ಸಹಸ್ರಲಕ್ಷ ಅನಂತಸೂರ್ಯರ ಕಾಂತಿಯಿಂದ ಅವರವರ ಅಧಿಕಾರಾನುಸಾರದಿಂದ, ಕಾಣಿಸಿಕೊಂಬೋ ಅಂಥಾತನಾಗಿ ಪ್ರಕಾಶಿಸಿದನು. ಮತ್ತು ಎಂಥಾತ, ಅನಂತವಾದ ಅಪ್ರಾಕೃತ ಉತ್ಕೃಷ್ಟ ಗುಣಗಳಿಂದ ಸಮುದ್ರ-ಸದೃಶನಾದಂಥಾತ. ಸಮರ್ಥನಾದ, ಸಕಲ ವಿದ್ಯಗಳಿಗೆ ಅಧಿಪತಿಯಾದ, ಜಗತ್ತಿಗೆ ಗುರು ಆದಂಥ ಇಂಥಾ ಸ್ವಾಮಿ, ವಿದ್ಯಮಾನನಾಗಿ ಪ್ರಕಾಶಿಸಿದನು.

ಅನಂತಶಕ್ತಿ ಜಗದೀಶ್ವರೇಶ್ವರಃ।
ಸಮಸ್ತದೋಷಾತಿವಿದೂರವಿಗ್ರಹಃ॥
ಶುಭಮುರಕತವರ್ಣೋ ರಕ್ತಪಾದಾಬ್ಜನೇತ್ರಾ।
ಧರಕರನಖರಸನಾಗ್ರಶ್ಚಕ್ರಶಂಖಾಬ್ಜರೇಖಃ॥
ರವಿಕರವರಗೌರಂ ಚರ್ಮಚೈಣಂ ವಸಾನ-।
ಸ್ತಟಿದಮಲ ಜಟಾಸಂದೀಪ್ತ ಚೂಡಂ ದಧಾನಃ॥
ವಿಸ್ತೀರ್ಣವಕ್ತ್ರಾಃ ಕಮಲಾಯತಾಕ್ಷೋ।
ಬೃಹದ್ಭುಜಃ ಕಂಬುಸಮಾನಕಂಠಃ॥
ಸಮಸ್ತ ವೇದಾನ್ ಮುಖತಃ ಸಮುದ್ಗಿರಾನ್।
ಅನಂತಚಂದ್ರಾಧಿಕಕಾಂತಿಸನ್ಮುಖಃ॥
ಪ್ರಬೋಧಮುದ್ರಾಭಯದೋರ್ಧ್ವಯೋನ್ಯಿತೋ।
ಯಜ್ಞೋಪವೀತಾಜಿನ ಮೇಖಲೋಲ್ಲಸನ್॥

ಇದಕ್ಕೆ ಅರ್ಥ: ವೇದವ್ಯಾಸದೇವರು ಎಂಥಾತ ಎಂದರೆ, ಪರಿಪೂರ್ಣ ಶಕ್ತಿಯುಳ್ಳಾತ. ಜಗತ್ತಿಗೆ ಈಶ್ವರನಾದ ಬ್ರಹ್ಮಾದಿಗಳಿಗೆ ಸ್ವಾಮಿಯಾದಂಥಾತ. ಸಮಸ್ತ ಪಾರತಂತ್ರ್ಯಾದಿ ದೋಷಗಳಿಂದ ರಹಿತವಾದಂಥ ಶರೀರವುಳ್ಳಾತ. ಉತ್ತಮವಾದ ಇಂದ್ರನೀಲಮಣಿಯೋಪಾದಿ ವರ್ಣವುಳ್ಳಂಥಾತ. ಪಾದ, ನೇತ್ರ, ಕೆಳದುಟಿ, ಅಂಗೈ ನಖಗಳು, ಜಿಹ್ವೇಂದ್ರಿಯದಲ್ಲಿ ರಕ್ತವರ್ಣವುಳ್ಳಾತ. ಪಾದತಳದಲ್ಲಿ ಚಕ್ರ, ಶಂಖ, ಅಬ್ಜರೇಖಾ ಉಳ್ಳಾತ. ಸೂರ್ಯಕಿರಣದೋಪಾದಿ ಪೀತವರ್ಣವುಳ್ಳ, ಉತ್ತಮ ಎರಳೀ ಪೀತಚರ್ಮವೇ ವಸನವು ಆಗಿ 'ಉಳ್ಳಂಥಾತ. ಪಿಂಚಿನೋಪಾದಿ ನಿರ್ದೋಷವಾದ ಜಟಾಗಳುಳ್ಳಾತ. ಕಮಲದ ಎಸಳಿನೋಪಾದಿ ಆಯತವಾದ ಕಣ್ಣುಗಳುಳ್ಳಾತ. ಅತ್ಯಂತ ಪುಷ್ಟವಾದ ಭುಜಗಳುಳ್ಳಾತ. ಶಂಖಕ್ಕೆ ಸಮಾನವಾದ ಮೂರು ರೇಖಾವುಳ್ಳ ಕಂಠದಿಂದ ಯುಕ್ತನಾದಂಥಾತ. ಸಮಸ್ತ ವೇದಗಳನ್ನು ಮುಖದಿಂದ ನುಡಿಯುವಂಥಾತ. ಅನಂತ ಚಂದ್ರರು ಒಂದೇ ಕಡೇಲಿ ಒದಗಿದರೆ ಎಷ್ಟು ಕಾಂತಿ, ಅದಕ್ಕೂ ಅಧಿಕ ಕಾಂತಿಯುಳ್ಳಂಥ, ನಿರ್ದುಷ್ಟ ಮುಖವುಳ್ಳಾತ. ಒಂದು ಹಸ್ತದಲ್ಲಿ ಜ್ಞಾನಮುದ್ರ, ಒಂದು ಹಸ್ತದಲ್ಲಿ ಅಭಯಮುದ್ರವುಳ್ಳಾತ. ಇಂಥಾ ಸ್ವಾಮಿ ಜಗತ್ತಿನಲ್ಲಿ ಮಹತ್ತಾದಂಥ ಅಜ್ಞಾನಾಖ್ಯ ಸರ್ಪದಿಂದ ಕಚ್ಚಿಸಿಕೊಂಡಂಥ ಸಜ್ಜನರನ್ನು ದಯಾದೃಷ್ಟಿಯಿಂದ ಬದುಕಿಸುವಂಥಾತನಾಗಿ ಅತ್ಯಂತ ಪ್ರಕಾಶದಿಂದ ಒಪ್ಪಿದನು. ಸಾಕ್ಷಾತ್ ವೇದವ್ಯಾಸನು, ಲೋಕದಲ್ಲಿ ಧರ್ಮ ಸಂರಕ್ಷಿಸಬೇಕೆಂಬೋ ಇಚ್ಛಾದಿಂದ ತಂದಿಯಾದಂಥ ಪರಾಶರನ ಕೈಯಿಂದ ಉಪನಯನ ಮಾಡಿಸಿಕೊಂಡು, ಗುರುದಕ್ಷಿಣಿ ಕೊಡಬೇಕಲ್ಲ, ತನ್ನ ವಿಷಯಕವಾದಂಥ ಜ್ಞಾನವನ್ನು ಕೊಟ್ಟನು. ತಾಯಿತಂದೇರಿಗೆ ತನ್ನ ಸ್ಮರಣೆ ಮಾತ್ರದಿಂದ ಪ್ರತ್ಯಕ್ಷವಾದೇನೆಂದು ವರವು ಕೊಟ್ಟನು. ಅನಂತರದಲ್ಲಿ, ವೇದವ್ಯಾಸನು ಬ್ರಹ್ಮಾದಿ ದೇವತಿಗಳಿಂದ ವಾಲ್ಮೈಸಿಕೊಳ್ಳತ ಮೇರುಪರ್ವತಕ್ಕೆ ಹೋದನು.

ಕಲಿ ಮೊದಲಾದ ಕುತ್ಸಿತ ದೈತ್ಯರು ವೇದಾರ್ಥವನ್ನೆಲ್ಲ ಕೆಡಿಸಿಬಿಟ್ಟಿದ್ದರು. ಅಂಥ ವೇದಗಳ ಉದ್ಧಾರಮಾಡಿ ದೇವತಿಗಳಿಗೆ, ಮುನಿಗಳಿಗೆ ಉಪದೇಶ ಮಾಡಿದನು. ತರುವಾಯದಲ್ಲಿ ಬ್ರಹ್ಮತರ್ಕಾದಿ ಸರ್ವಶಾಸ್ತ್ರಗಳ ಮಾಡಿ, ವಿಶೇಷ ಪ್ರಕಾರದಿಂದ ವೇದನಿರ್ಣಯವಾದಂಥ ಬ್ರಹ್ಮಸೂತ್ರ ಮಾಡಿದನು. ಬ್ರಹ್ಮ ರುದ್ರ ಇಂದ್ರ ಮೊದಲಾದ ಅಶೇಷ ದೇವತಿಗಳಿಗೆ ಹಾಂಗೆ, ಮುನಿಶ್ರೇಷ್ಠರಾದಂಥ ಜೈಮಿನ್ಯಾದಿ ಋಷಿಗಳಿಗೆ, ವೇದವ್ಯಾಸದೇವರು ಬ್ರಹ್ಮಸೂತ್ರ ಶ್ರವಣ ಮಾಡಿಸಿದನು. ಸಮಸ್ತ ಶಾಸ್ತ್ರಾರ್ಥ ನಿರ್ಣಯಗಳಿಗೆ ದೃಷ್ಟಾಂತರೂಪದಿಂದ, ಮಹಾಭಾರತ ಎಂದು ನಾಮವುಳ್ಳಂಥ ಗ್ರಂಥ ಮಾಡಿದನು. ಆ ಮಹಾಭಾರತ, ಬ್ರಹ್ಮರುದ್ರರುಗಳೇ ಮೊದಲಾಗಿವುಳ್ಳಂಥ ಸಮಸ್ತ ದೇವತಿಗಳು, ವೇದವ್ಯಾಸನ ಮುಖದಿಂದ ಕೇಳಿ, ಅರ್ಥದಿಂದ ಯುಕ್ತವಾದ ಪಾಠಾಭ್ಯಾಸ ಮಾಡಿದರು. ಭಾರತಕ್ಕೆ ಹತ್ತು ಪರಿ

ಅರ್ಥ, ದರ್ಶನಭಾಷ, ಗುಹ್ಯಭಾಷ, ಸಮಾಧಿಭಾಷ ಹೀಂಗೆ ಭಾಷಾತ್ರಯದಿಂದ ಗ್ರಂಥ ನಡದದೆ. ಹಾಂಗೂ ಮಹಾಭಾರತ, ಸಕಲಶಾಸ್ತ್ರ, ಒಂದು ತಕ್ಕಡಿಯೊಳಗೆ ಹಾಕಿ ತೂಗಿ ನೋಡಲಾಗಿ ಮಹಾಭಾರತ ತೂಕಕ್ಕೆ ಹೆಚ್ಚಿತು. ಆ ಕಾರಣದಿಂದ ವೇದೋತ್ತಮ ಭಾರತ, ಐದನೇ ವೇದ, ಇರವತ್ತು ಲಕ್ಷ ಭಾರತ ಶ್ಲೋಕ ಮಾಡಿದನು. ದೇವತಿಗಳಿಗೆ, ಗಂಧರ್ವರಿಗೆ, ಪಿತೃಗಳಿಗೆ ವಿಭಾಗ ಮಾಡಿಕೊಡಲಿಕ್ಕೆ ಒಂದು ಲಕ್ಷ ಭೂತಳದಲ್ಲಿ ನಿಂತಿತ್ತು. ಮಹಾರುದ್ರ ಮೊದಲಾದವರುಗಳಲ್ಲಿ ಪ್ರವೇಶ ನಾದಂಥ ಕಲಿಯು, ಅವ್ಯಾಹತ ಷಡ್ಗುಣೈಶ್ವರ್ಯಸಂಪನ್ನನಾದಂಥ ವೇದವ್ಯಾಸನ ಮುಖದಿಂದ ಹೊರಡುವಂಥ ಬ್ರಹ್ಮಸೂತ್ರಾದಿ ಸುವಾಕ್ಯರೂಪವಾದಂಥ ಬಾಣ ಗಳಿಂದ, ಅಜ್ಞಾನಾಖ್ಯ ಶಿರಸ್ಸು ಛೇದಿಸಿಕೊಂಡು ಸತ್ತುಹೋದನು. ದೇಹದಿಂದ ಇದ್ದಕಾಲಕ್ಕೂ ಮೃತಪ್ರಾಯನಾದನು. ದೇವತಿಗಳು ಸಮ್ಯಕ್‌ಜ್ಞಾನಕ್ಕೆ ವಿರೋಧಿ ಯಾದಂಥ ಕಲಿಯ ವ್ಯಾಪಾರದಿಂದ ನಿವರ್ತಕರಾದರು. ಸಮ್ಯಕ್‌ಜ್ಞಾನರೂಪ ವಾದಂಥ ಸುಧಾರಸವನ್ನು ಪಾನ ಮಾಡಿ ಬಹಳ ಕೃತಾರ್ಥರಾದರು. ತರುವಾಯ ಮನುಷ್ಯರಲ್ಲಿ ದೈತ್ಯರುಗಳಲ್ಲಿ, ಕಲಿ ತನ್ನ ಮೂಲರೂಪದಿಂದ ನಿಂತನು. ಮನುಷ್ಯ ರೊಳಗೆ ಉತ್ತಮರಾದಂಥ ಮುಕ್ತಿಯೋಗ್ಯರುಗಳಲ್ಲಿ ಇದ್ದಂಥ ಕಲಿಯನ್ನು

ಸಂಹಾರ ಮಾಡಬೇಕೆಂದು ವೇದವ್ಯಾಸ ಆಲೋಚನೆ ಮಾಡಿದನು. ತರುವಾಯ ಕಾಲದ ಬಲದ್ದೆಶೆಯಿಂದ ಮನುಷ್ಯರುಗಳು ಅಲ್ಪಾಯುಷ್ಯ ಉಳ್ಳವರಾಗಿ, ಅಲ್ಪ ಬುದ್ಧಿ, ಅಲ್ಪವಾದ ಕರ್ಮವುಳ್ಳವರೆಂದು ನೋಡಿ, ಸಮರ್ಥನಾದಂಥ ವೇದವ್ಯಾಸನು ಋಗಾದಿ ನಾಮಗಳಿಂದ ಇದ್ದಂಥ ಮೂಲವೇದಗಳ ನಾಲ್ಕು ವಿಭಾಗ ಮಾಡಿದನು. ಋಗ್ವೇದರಾಶಿಯೊಳಗೆ ವಿಭಾಗಮಾಡಿ ಅಚ್ಚ ಋಗ್ವೇದ ಮಾಡಿದನು. ಯಜುರ್ವೇದ ರಾಶಿಯೊಳಗೆ ವಿಭಾಗ ಮಾಡಿ ಯಜುರ್ವೇದ ಏಳು ಅಟ್ಟವಾಡಿ, ಸಾಮ-ವೇದ ಅಥರ್ವಣವೇದ ಮಾಡಿದನು. ವೇದಪಠಣ ಮಾಡಿದಲ್ಲದೆ ವೇದಾರ್ಥ ಹ್ಯಾಂಗೆ ತಿಳೀತದೆ? ಆದಕಾರಣ ವೇದವ್ಯಾಸದೇವರು, ಸಜ್ಜನರ ಹಿತದಗೋಸ್ಕರ ವೇದಾರ್ಥ ತಿಳಿಹಬೇಕಾಗಿ, ಸಚ್ಛಾಸ್ತ್ರ.ಭಾಗವತ ಪುರಾಣ ಮಾಡಿದನು. ಸಜ್ಜನರು ಭಾಗವತಪುರಾಣ ಮರಳಿಮರಳಿ ಆಸ್ವಾದಸ್ತಾರೆ.

ಈ ಭೂಮಿಮಂಡಲದಲ್ಲಿ ಜನರು ದಾರುದಾರು ಅಜ್ಞಾನದಿಂದ ಯುಕ್ತ ರಾಗಿದ್ದರು, ಅಂಥಾ ಸಜ್ಜನರುಗಳ ಸುವಾಕ್ಯರೂಪವಾದಂಥ ಉಪದೇಶದಿಂದ ಅಜ್ಞಾನವನ್ನು ಪರಿಹಾರಮಾಡತ, ಸಜ್ಜನರಿಗೆ ತನ್ನ ದರ್ಶನಮಾತ್ರದಿಂದ ದಿವ್ಯಗತಿ ಕೊಡಬೇಕಾಗಿ, ವೇದವ್ಯಾಸದೇವರು ದಿಗ್ವಿಜಯ ಹೋಗಲಿಕ್ಕೆ, ಸ್ವರ್ಗದಲ್ಲಿ ಹುಳುವಿನ ಕಂಡು, ಆ ಹುಳುವಿನ ಕೂಡ ಮಾತನಾಡಥಾನೆ. 'ಈ ಕೆಟ್ಟ ಶರೀರ ಬಿಟ್ಟು, ಉತ್ತಮ ದೇಹ ಧರಿಸಿ ಸಿಂಹಾಸನಪದವಿ ಆಳು' ಎಂದು ನುಡಿಯಲಿಕ್ಕೆ, 'ಪ್ರಾಣಿಗಳಿಗೆ ದಾವ ದೇಹ ಬಂದಿರತದೆ ಆ ದೇಹ ಬಿಡಲಿಕ್ಕೆ ವಶವಲ್ಲ. ಆದಕಾರಣ

ದೇಹ ಬಿಡಲಾರೆ' ಎಂದು ಹುಳುವು ಆಡಲು, ಸ್ವಾಮಿ ಅಘಟನಘಟನಾಶಕ್ತಿಯುಳ್ಳಾತ, ಸತ್ಯಸೃಷ್ಟಿ ಮಾಡುವ ಸ್ವಾಮಿ, ಆ ಕ್ಷಣವೇ ಪಟ್ಟಣ ನಿರ್ಮಾಣ ಮಾಡಿ, ಹುಳುವಿನ ಕೈಯ ಸಾಮ್ರಾಜ್ಯ ಆಳಿಸಿದನು. ಈ ಹುಳುವಿನ ಕೂಡ ಏನು ಕಾರಣ ಅರಸತ್ವ ಆಳಿಸಬೇಕು ಎಂದಲ್ಲಿ, ಪೂರ್ವದಲ್ಲಿ ತನ್ನ ಭಕ್ತ ಶೂದ್ರ, ಮಹಾಲುಬ್ಧ, ಸಜ್ಜನರಲ್ಲಿ ದ್ರವ್ಯ ವೆಚ್ಚಮಾಡತಿದ್ದಿಲ್ಲ. ಆದಕಾರಣ ಹುಳುವಿನ ಜನ್ಮ ಬಂತು. ಶ್ರೀವೇದವ್ಯಾಸದೇವರ ಅನುಗ್ರಹದಿಂದ ಶೀಘ್ರ ಅರಸು ಆದನು. ಆ ಹುಳುವು ಅರಸುತನ ಮಾಡತ ಇರಲಾಗಿ, ದೇಶದೇಶದ ರಾಯರು ನಮಸ್ಕಾರ ಮಾಡತ ಇರಲಾಗಿ, ವೈಶ್ಯರು ಅರಮನಿಗೆ ಹ್ಯಾಂಗೆ ಕಪ್ಪಗಳ ತಂದುಕೊಡಥಾರೆ ಹಾಂಗೆ, ದಿಗ್ದೇಶದ ರಾಯರು ಕಪ್ಪ ತಂದುಕೊಡತಿಹೋರು.

ಅರಸುಗಳಿಗೆ ರಾಜ್ಯಾಂತೆ ನರಕ ಎಂದು ಹೇಳತದೆ. ನರಕ ಆಗದಹಾಂಗೆ ವರವು ಕೊಟ್ಟು, ಅವ್ಯಾಹತ ಷಡ್ಗುಣೈಶ್ವರ್ಯಸಂಪನ್ನನಾದಂಥ ವೇದವ್ಯಾಸ, ಹುಳುವಿನ ಕೂಡ ಮಾತನಾಡಥಾನೆ. 'ಇದೇ ಕ್ಷಣದಲ್ಲಿ ನಿನಗೆ ಮೋಕ್ಷ ಕೊಡೋದರಲ್ಲಿ ಸಮರ್ಥನಿದ್ದೀನಿ. ಪರಂತು, ಸ್ವಾಭಾವಿಕ ಚತುರ್ವರ್ಣದೊಳಗಾಗಿ ಬ್ರಾಹ್ಮಣಜನ್ಮದಲ್ಲಿ ಮುಕ್ತಿ ಕೊಡಬೇಕೆಂದು ಮರ್ಯಾದ ಅದೆ. ಮರ್ಯಾದ-ಸಂರಕ್ಷಣಾರ್ಥವಾಗಿ, ಹುಳುವಿನ ಜನ್ಮ ತ್ಯಾಗಮಾಡಿ ಬ್ರಾಹ್ಮಣನಾಗಿ ಹುಟ್ಟಿ, ಸಾಧನ ಸಂಪತ್ತು ಮಾಡಿ ನನ್ನ ಲೋಕಕ್ಕೆ ಬಾ' ಎಂದು ಹೇಳಿದನು. ಆ ಹುಳುವಿಗೆ ದಿವ್ಯಜ್ಞಾನ ಕೊಟ್ಟನು. ಬಿಟ್ಟೀಬಣಜಿಗ್ಯ, ಸ್ವಾಮೀ ಆಜ್ಞೆದಿಂದ ಕೆಟ್ಟ ದೇಹದಲ್ಲಿ ಸಪ್ತದ್ವೀಪಾಂತರ ಭೂಮಿ ಆಳಿ, ರಾಜ್ಯಪರಿಪಾಲನಾಂತದಲ್ಲಿ ಕೆಟ್ಟದೇಹ ತ್ಯಾಗಮಾಡಿ, ಬ್ರಾಹ್ಮಣನಾಗಿ ಹುಟ್ಟಿ ಸಾಧನ ಸಂಪಾದನ ಮಾಡಿ, ಪರಮಾತ್ಮನ ವಿಷಯಕ ಜ್ಞಾನ ಸಂಪಾದಿಸಿ, ತತ್ತ್ವಪರೋಕ್ಷಜ್ಞಾನಿಯಾಗಿ ವೈಕುಂಠವನ್ನು ಐದಿದನು. ಹೀಂಗೆ ಹೇಳಿದ ರೀತಿಯಿಂದ ವ್ಯಾಸರೂಪಿಯಾದಂಥ ಜನಾರ್ದನನು, ಮತ್ತೆ ಕೆಲವರಾದ ಜನರುಗಳ ಸಂಸಾರಾಖ್ಯ ಬಂಧದಿಂದ ವಿಮೋಚನಿ ಮಾಡಿಸಿ ಮುಕ್ತರನ್ನ ಮಾಡಿದನು. ಬ್ರಹ್ಮಾದಿ ಸರ್ವ ದೇವತಿಗಳಿಂದ ಕೀರ್ತನ ಮಾಡಿಸಿಕೊಳ್ಳುವಂಥ ಶ್ರೀವೇದವ್ಯಾಸದೇವರ ಚರಿತ್ರಗಳು ಅನಂತ ಇದ್ದಾವೆ. ಆದಕಾರಣ ಸಾಕಲ್ಯದಿಂದ ಸ್ವಾಮೀ ಚರಿತ್ರಗಳು ತಿಳಿಯಲಿಕ್ಕೆ ಶಕ್ಯವಲ್ಲ.

ತರುವಾಯ ಮಹಾರುದ್ರ, ವೇದವ್ಯಾಸರ ಮಗನಾಗಬೇಕೆಂಬೋ ಇಚ್ಛಾದಿಂದ, ವ್ಯಾಸರ ಕುರಿತು ಸಮೀಚೀನ ತಪಸ್ಸು ಮಾಡಿದನು. ಅವ್ಯಾಹತ ಷಡ್ಗುಣೈಶ್ವರ್ಯಸಂಪನ್ನನಾದಂಥ ವೇದವ್ಯಾಸ, 'ನನ್ನ ಮಗನಾಗು' ಎಂದು ಆತನಿಂದ ಪ್ರಾರ್ಥಿಸಿಕೊಂಡು ವರವು ಕೊಟ್ಟನು. ವೇದವ್ಯಾಸ, ತನಗೆ ಮಗ ಬೇಕು ಎಂದು ತಪಸ್ಸು ಮಾಡಿದ. ಘೃತಾಚೀ ಎಂಬ ಅಪ್ಸರಸ್ತ್ರೀಯಳಿಗೆ ಕಾಮಾತುರನಾಗಿ ಭೋಗಕ್ಕೆ ಕರೆದರೆ, 'ಮಗ ಹುಟ್ಟಿದರೆ ನನ್ನ ಹೆಸರು ಇಡು' ಎಂದಳು.

ಭೋಗಾರ್ಥವಾಗಿ ಸ್ತ್ರೀಯಳ ಮಾತು ಕೇಳಿದನೆಂದು ಮೋಹಕ ಕಥ ಹೇಳತದೆ. ಅಂಬಾ, ಅಂಬಾಲಿಕಾರಲ್ಲಿ ಲಕ್ಷ್ಮೀರೂಪಗಳಿಂದ, ಅವರ ಮ್ಯಾಲೆ ಅನುಗ್ರಹಾರ್ಥವಾಗಿ ತನ್ನವರಾದಿನೆಂದವರಿಗೆ ಭೋಗ ಕೊಟ್ಟ, ಧೃತರಾಷ್ಟ್ರನ್ನ, ಪಾಂಡು ಚಕ್ರವರ್ತಿಯನ್ನ ಹಡದಿದ್ದಾನೆ. ಸ್ವಾಮಿಗೆ ಕಾಮಾದಿ ದೋಷಗಳಿಲ್ಲ. ಅವರೂ ಅಸುರಜನ ಮೋಹನಾರ್ಥವಾಗಿ ವೇದವ್ಯಾಸನು, ರುದ್ರನು ತನ್ನ ಮಗನಾಗ-ಬೇಕೆಂದು ತಪಸ್ಸು ಮಾಡಿದ ಹಾಂಗೆ ತೋರಿಸಿದನು. ಇವೆಲ್ಲ ಪ್ರಸಿದ್ಧ ಮಾತ್ರ, ಅನ್ಯತ್ರದಲ್ಲಿ ಇದೇ ಪ್ರಕಾರ ಹೇಳಿದ್ದಾರೆ. ಸಮರ್ಥನಾದ ವೇದವ್ಯಾಸ, ಅಸುರ-ಜನಕ್ಕೆ ಭ್ರಾಂತಿ ಹುಟ್ಟಿಸಿಕೊಡಬೇಕಾಗಿ, ತಾನು ತಪಸ್ಸು ಮಾಡಿದಹಾಂಗೆ ತೋರಿಸಿದನು. ಪರಂತು, ಸಂತಾನಾರ್ಥ ತಪಸ್ಸು ಮಾಡಲಿಲ್ಲ. ಯಾಕೆ ಪುತ್ರಾ-ದ್ಯಾಕಾಂಕ್ಷಿಯಿಂದಲೇ ತಪಸ್ಸು ಮಾಡಿದ ಎಂತ ಅನಬಾರದು ಎಂದಲ್ಲಿ, ಫಲಾ-ಕಾಂಕ್ಷಾದಿ ದೋಷವು ಸ್ವಾಮಿಗೆ ಇಲ್ಲ. ಅಸುರಜನ ಮೋಹನಾರ್ಥವಾಗಿ ತೋರಿಸಿದನೇ ಹೊರ್ತು, ನಾರಾಯಣಗೆ ಒಂದಾನೊಂದು ಕಾಲದಲ್ಲಿಯೂ ದೋಷಗಳಿಲ್ಲ. ಏನು ಕಾರಣವೆಂದರೆ, ಸಕಲ ಪುರುಷಾರ್ಥಗಳಿಂದಲೂ ಪರಿಪೂರ್ಣ. ಇಂಥಾ ಸ್ವಾಮಿ ಮಹಾರುದ್ರಗೆ ವರವು ಕೊಟ್ಟ ತರುವಾಯ, ವೇದವ್ಯಾಸದೇವರು ರುದ್ರನ ಅವತಾರನಾದಂಥ ಶುಕನ ಉತ್ಪತ್ತ್ಯರ್ಥವಾಗಿ, ಅಶ್ವತ್ಥ ಬನ್ನಿಕಾಷ್ಠದಿಂದ ಅಗ್ನಿ-ನಿಮಿತ್ತ ಮಥನ ಮಾಡಲಿಕ್ಕೆ, ರುದ್ರ ಮಗನಾಗಿ ಹುಟ್ಟಿದ.

ಆ ಮಗಗೆ ಶುಕನೆಂಬೋ ನಾಮ ಬಂದದ್ದಕ್ಕೆ ನಿಮಿತ್ತ ಹೇಳಥಾರೆ. ಘೃತಾಚೀ ಎಂಬ ಅಪ್ಸರಸ್ತ್ರೀ ಶುಕರೂಪಳಾಗಿ, ಅಶ್ವತ್ಥ ಬನ್ನಿಕಾಷ್ಠ ಮಥನ ಮಾಡುವ ಕಾಲಕ್ಕೆ, ವೇದವ್ಯಾಸದೇವರ ಸಮೀಪಕ್ಕೆ ಬಂದಳು. ಸ್ವಾಮಿ ಕಾಮಾದಿ ದೋಷಗಳಿಂದ ರಹಿತನಾದರೂ ಕಾಮುಕನೋಪಾದಿ ಆಗಿ, ಗಿಳಿ ರೂಪದಿಂದ ಬಂದ ಘೃತಾಚಿಯು, ಮಥಿತ ಕಾಷ್ಠದಿಂದ ಹುಟ್ಟಿದಂಥಾತನ್ನ ತನ್ನ ಮಗನ ಮಾಡು ಎಂದು ಬೇಡಿಕೊಳ್ಳಲಾಗಿ, ಮಥಿತ ಕಾಷ್ಠದಿಂದ ಹುಟ್ಟಿದಂಥ ಮಗಗೆ, ಮೋಕ್ಷ-ಸಾಗ್ರದಲ್ಲಿ ಅಯೋಗ್ಯರಾದಂಥ ಅಸುರಜನ ಮೋಹನಾರ್ಥವಾಗಿ, ಶುಕನೆಂಬೋ ನಾಮ ಇಟ್ಟನು. ಶುಕರೂಪಳಾದಂಥ ಘೃತಾಚಿಯಲ್ಲಿ ಹುಟ್ಟಿದ, ಆದ್ದರಿಂದ ಶುಕ ನೆಂಬೋ ನಾಮ ಇಟ್ಟ ಎಂಬೋದು ಯಥಾರ್ಥವಲ್ಲ. ಶುಕಾಚಾರ್ಯಗೆ ಸಕಲ ವೇದಾರ್ಥವಾಗಿ, ಶುಕನ ಯೋಗ್ಯತಾನುಸಾರ ಫಲ ಕೊಡಬೇಕೆಂದು, ಶುಕನ ಒಳಗೆ ವಾಯುದೇವರು ಪ್ರವೇಶ ಮಾಡಿದ. ತರುವಾಯ, ಸರ್ವತತ್ತ್ವವಿಷಯಕವಾದಂಥ ಜ್ಞಾನವನ್ನು ಕೊಟ್ಟನು. ಅದರನ್ನೇ ವಿಸ್ತಾರ ಮಾಡಥಾರೆ. ಸರ್ವ ವೇದಗಳು, ಹಾಂಗೆ ಭಾರತದಿಂದ ಸಹಿತವಾದಂಥ ಭಾಗವತಪುರಾಣ ಶುಕಾಚಾರ್ಯಗೆ ಉಪದೇಶ ಮಾಡಿದನು.

ತರುವಾಯ, ಪೈಲಾದಿಗಳೇ ಮೊದಲಾದ ವೇದವ್ಯಾಸರ ಶಿಷ್ಯರಲ್ಲಿ, ಅವರವರ ಯೋಗ್ಯತಾನುಸಾರ ಫಲ ಕೊಡಬೇಕಾಗಿ, ಅವರವರಲ್ಲಿ ಶೇಷನೇ ಮೊದಲಾದಂಥ ದೇವತೆಗಳು ಪ್ರವೇಶ ಮಾಡಿದರು. ಅನಂತರದಲ್ಲಿ ವೇದವ್ಯಾಸದೇವರು ಉಪದೇಶ ಮಾಡಿದನು. ದಾರದಾರಲ್ಲಿ, ದಾರುವಾರು ಪ್ರವೇಶ ಮಾಡಿದರು ಎಂದಲ್ಲಿ, ಪೈಲ-ಮುನಿಯಲ್ಲಿ ಶೇಷ ಪ್ರವೇಶ ಮಾಡಿದನು. ಜೈಮಿನಿಯಲ್ಲಿ ದೇವೇಂದ್ರ ಪ್ರವೇಶ ಮಾಡಿದನು. ವೈಶಂಪಾಯನನಲ್ಲಿ ಬ್ರಹ್ಮದೇವರು ಪ್ರವೇಶ ಮಾಡಿದನು. ಏನು-ಕಾರಣ ಪ್ರವೇಶ ಮಾಡಿದರು ಎಂದರೆ, ಶ್ರೀವೇದವ್ಯಾಸರ ಸೇವಿ ಮಾಡಬೇಕೆಂಬೋ ಲವಲವಿಕೆಯಿಂದ ಯುಕ್ತರಾಗಿ, ಪೈಲಾದಿ ಮುನಿಗಳಲ್ಲಿ ಶೇಷನೇ ಮೊದಲಾಗಿ ದೇವತಾಶ್ರೇಷ್ಠರು ಪ್ರವೇಶ ಮಾಡಿದರು. ವೇದವ್ಯಾಸದೇವರು ತನ್ನ ಶಿಷ್ಯರಾದಂಥ ಪೈಲಾದಿಗಳಲ್ಲಿ, ಬ್ರಹ್ಮಮೀಮಾಂಸವೇ ಮೊದಲಾಗಿ ಉಳ್ಳಂಥ ಸಮಸ್ತ ಶಾಸ್ತ್ರಗಳ ಉಪದೇಶ ಮಾಡಿದನು. ತರುವಾಯ ಮುನೀಶ್ವರ ಅವರನ್ನು ಆ ವಿದ್ಯಗಳಲ್ಲಿ ಪ್ರವರ್ತಕರನ್ನ ಮಾಡಿದನು. ಅದರನ್ನೇ ವಿಸ್ತಾರ ಮಾಡಹಾರೆ. ಪೈಲಮುನಿಯು ಋಗ್ವೇದಪ್ರವರ್ತಕ, ಯಜುರ್ವೇದಕ್ಕೆ ವೈಶಂಪಾಯನಮುನಿ, ಹಾಂಗೆ ಸೂರ್ಯನ್ನ ಪ್ರವರ್ತಕರನ್ನ ಮಾಡಿದನು. ಯಜುರ್ವೇದ ಎರಡು ಪ್ರಕಾರ, ಕೃಷ್ಣಯಜು-ರ್ವೇದಕ್ಕೆ ವೈಶಂಪಾಯನ, ಶುಕ್ಲಯಜುರ್ವೇದಕ್ಕೆ ಸೂರ್ಯನ್ನ ಮಾಡಿದನು. ಸಾಮವೇದಕ್ಕೆ ಜೈಮಿನಿ ಆಚಾರ್ಯ ಪ್ರವರ್ತಕನಾದ. ಅಥರ್ವಣವೇದಕ್ಕೆ ಸುಮಂತ ಆಂಗೀರಸರನ್ನ ಪ್ರವರ್ತಕರನ್ನ ಮಾಡಿದನು. ಮನುಷ್ಯಲೋಕದಲ್ಲಿ ಭಾರತ ಹೇಳೋದಕ್ಕೆ ವೈಶಂಪಾಯನಗೆ ಆಜ್ಞಾಪಿಸಿದನು. ಗಂಧರ್ವಕಿನ್ನರಾದಿ ಲೋಕಗಳಲ್ಲಿ ಭಾರತ ಹೇಳೋದಕ್ಕೆ, ತನ್ನ ಮಗನಾದ ಶುಕಾಚಾರ್ಯಗೆ ಆಜ್ಞೆ ಕೊಟ್ಟ. ದೇವಲೋಕದಲ್ಲಿ ಹೇಳೋದಕ್ಕೆ ನಾರದಗೆ ಆಜ್ಞೆ ಕೊಟ್ಟ. ತರುವಾಯ ವೇದವ್ಯಾಸದೇವರು ತನ್ನ ಅನಂದೋದ್ರೇಕ ರೋಮದ ಡೆಸಿಯಿಂದ ರೋಮ-ಹರ್ಷಣನ ಪುಟ್ಟಿಸಿದನು. ಅನಂತರದಲ್ಲಿ ರೋಮಹರ್ಷಣಮುನಿಗೆ ಭಾರತ ಸೊದಲಾದ ಇತರ ಪುರಾಣಗಳು, ಮಹಾ ರಾಮಾಯಣ, ಪಾಂಚರಾತ್ರಾಗಮ, ಸಕಲ ಶಾಸ್ತ್ರ ಹೇಳೋದಕ್ಕೆ ನಿರೂಪ ಕೊಟ್ಟನು. ವೇದವ್ಯಾಸರ ಸೇವಿ ಮಾಡ ಬೇಕೆಂಬ ಲವಲವಿಕೆಯಿಂದ, ರೋಮಹರ್ಷಣನಲ್ಲಿ ಕಾಮದೇವ ಪ್ರವೇಶ ಮಾಡಿದನು, ಸಮರ್ಥನಾದಂಥ ವೇದವ್ಯಾಸದೇವರು, ರೋಮಹರ್ಷಣಗೆ ಸಮಸ್ತ ತತ್ತ್ವವಿಷಯಕವಾದಂಥ ಜ್ಞಾನ ಕೊಟ್ಟನು. ಸನತ್ಕುಮಾರಾದಿಗಳನ್ನು ಧ್ಯಾನ-ಯೋಗಕ್ಕೆ ಪ್ರವರ್ತಕರನ್ನ ಮಾಡಿದನು. ಇಷ್ಟುಮಾತ್ರವೇ ಅಲ್ಲ, ಅವರಿಗೆ ದೋಷರಹಿತವಾದಂಥ ಜ್ಞಾನ ಕೊಟ್ಟನು. ಸಮರ್ಥನಾದಂಥ ವೇದವ್ಯಾಸನು ಕರ್ಮಮೀಮಾಂಸಕ್ಕೆ, ಜೈಮಿನಿಯನ್ನು ಪ್ರವರ್ತಕನ್ನಾಗಿ ಮಾಡಿದನು. ವೇದ-ವ್ಯಾಸದೇವರು, ದೇವಮೀಮಾಂಸಕ್ಕೆ ಆದಿಭಾಗ, ಅಂತ್ಯಭಾಗ ಮಾಡಿ, ಮಧ್ಯಭಾಗ

ಮಾಡೋದಕ್ಕೆ ಶೇಷಗೆ, ಪೈಲಮುನಿಗೆ ಆಜ್ಞೆ ಕೊಟ್ಟನು. ಬ್ರಹ್ಮಮೀಮಾಂಸಕ್ಕೆ ತಾನೇ ಪ್ರವರ್ತಕನಾದನು. ತರುವಾಯ ಹದಿನೆಂಟು ಪುರಾಣಗಳನ್ನು ಮಾಡಿ, ಇದನ್ನು ಮೂರು ಭಾಗ ಮಾಡಿದನು. ಒಂದೊಂದು ಭಾಗಕ್ಕೆ ಮೂಲ ದಾವುದು ಎಂದರೆ ಹೇಳಥಾರೆ.

ಅಸುರರಿಗೆ ವಿಪರೀತಜ್ಞಾನ ಹುಟ್ಟಿಸಬೇಕಾಗಿ, ಪಾಶುಪತ ಆಗಮದ ದೆಸಿಯಿಂದ, ಶಿವಪ್ರತಿಪಾದಕವಾದಂಥ ತಾಮಸ ಪುರಾಣ ಮಾಡಿದನು. ಸಜ್ಜನರಿಗೆ ಯಥಾರ್ಥಜ್ಞಾನ ತಿಳಿಸಿಕೊಡಬೇಕಾಗಿ, ಪಾಂಚರಾತ್ರಾಗಮದ ದೆಸಿಯಿಂದ, ವಿಷ್ಣುಪ್ರತಿಪಾದಕವಾದಂಥ ಪುರಾಣ ಆರು ಮಾಡಿದನು. ಸಂಶಯಜ್ಞಾನ ನಿವಿತ್ತ ವಾಗಿ, ಬ್ರಹ್ಮ ಸರ್ವೋತ್ತಮನೆಂದು ಹೇಳುವಂಥ ವೇದಾರ್ಥಗಳ ದೆಸಿಯಿಂದ, ಬ್ರಹ್ಮಪ್ರತಿಪಾದಕವಾದಂಥ ರಾಜಸಪುರಾಣ ಆರು ಮಾಡಿದನು. ದೇವತಿಗಳು, ಋಷಿಗಳು, ಸನತ್ಕುಮಾರನೇ ಮೊದಲಾದ ಸಮಸ್ತರೂ ಪೂರ್ವದಲ್ಲಿ ಜ್ಞಾನಿಗಳಾದ ಕಾಲಕ್ಕೂ, ಪುನಃ ವೇದವ್ಯಾಸದೇವರ ಕೈಯಿಂದ ಉಪದೇಶ ಮಾಡಿಸಿಕೊಂಡು, ದಿವ್ಯಜ್ಞಾನವುಳ್ಳಂಥವರಾಗಿ, ಸರ್ವದಾ ಸಂತೋಷಬಡಹೊಕ್ಕರು. ಜಗತ್ತಿಗೆ ಸುಖ ಹೆಚ್ಚಿಸಿಕೊಡಬೇಕಾಗಿ ಪುರಾಣಗಳು, ಭಾರತಾದಿ ಶಾಸ್ತ್ರಗಳ ಮಾಡಿದ್ದಾನೆ. ಸೂರ್ಯ ತನ್ನ ಕಿರಣಗಳಿಂದ ಅಂಧಕಾರ ಹ್ಯಾಂಗೆ ಪರಿಹರಿಸಥಾನೆ, ಹಾಂಗೆ ವೇದವ್ಯಾಸನೆಂಬೋ ಸೂರ್ಯ, ಸಮಸ್ತ ವಿಷಯಕ ಜ್ಞಾನಲಕ್ಷಣಗಳೆಂಬಂಥ ಕಿರಣಗಳ ಸಮೂಹವನ್ನು ಪ್ರಸರಿಸಿ, ಸರ್ವ ಜಗತ್ತಿನಲ್ಲಿ ಪ್ರಾಪ್ತವಾದಂಥ ಅಜ್ಞಾನಾಖ್ಯ ಅಂಧಕಾರವನ್ನು ಪರಿಹರಿಸುವಂಥಾತನಾಗಿ ಪ್ರಕಾಶಿಸಿದನು. ಬ್ರಹ್ಮಾಂಡದೊಳಗೆ ವೇದವ್ಯಾಸ ಮಾಡಿದಂಥ ಗ್ರಂಥ, ಬ್ರಹ್ಮಾದಿ ದೇವತಿಗಳು ಪ್ರತಿಕ್ಷಣದಲ್ಲಿ ಆಸ್ವಾದಸಥಾರೆ. ಬ್ರಹ್ಮ, ರುದ್ರ, ಇಂದ್ರನೇ ಮೊದಲಾದ ಸಮಸ್ತ ದೇವತಿಗಳಿಂದ ಸರ್ವದಾ ಸೇವಿ ಮಾಡಿಸಿಕೊಂಬಂಥ ಪಾದಪಲ್ಲವಗಳುಳ್ಳಂಥಾತನಾಗಿ, ವೇದವ್ಯಾಸ, ನಿರ್ದುಷ್ಟ ಗುಣಗಳಿಂದ ಮೇರುಪರ್ವತದಲ್ಲಿ ಹಾಂಗೆ, ಹಿರೇಬದರಿಯಲ್ಲಿ ಆನಂದೋದ್ರೇಕದಿಂದ ವಾಸಮಾಡಿಕೊಂಡು ಇದ್ದಾನೆ. ವೇದವ್ಯಾಸನ ಚರಿತ್ರ ಕೇಳಿದ ಮಾತ್ರದಿಂದ ಮೋಕ್ಷವಾಗತದೆಂಬಲ್ಲಿಗೆ, ಶ್ರೀಮದಾಚಾರ್ಯರು ಹೇಳಿದ ಮಹಾಭಾರತತಾತ್ಪರ್ಯನಿರ್ಣಯವನ್ನು ಪ್ರಾಕೃತದಿಂದ ವಿವರಿಸುವ, ' ಶ್ರೀಕೃಷ್ಣ-ಚರಿತೇ ಶ್ರೀವೇದವ್ಯಾಸ ಅವತಾರನಿರ್ಣಯಃ ' ಎಂಬ ,ಹತ್ತನೇ ಅಧ್ಯಾಯವು ಸಂಪೂರ್ಣವು.

ಶ್ರೀ ಮಧ್ವೇಶಾರ್ಪಣಮಸ್ತು

ಈ ಗ್ರಂಥದಲ್ಲಿ ಪ್ರತಿಪಾದಿತ ಹಾಗೂ ನಿರ್ಣೀತ ವಿಷಯಗಳ ಪುಟಸಂಖ್ಯಾಸೂಚಿ

ವಿಷಯ		ಪುಟಸಂಖ್ಯೆ
ಮಹಾಭಾರತತಾತ್ಪರ್ಯನಿರ್ಣಯ ಗ್ರಂಥರಚನೆಗೆ ನಿಮಿತ್ತ	....	೧, ೨೧
ಗ್ರಂಥರಚನಾರಂಭದಲ್ಲಿ ಏಕೆ ಶ್ರೀಹರಿಯನ್ನೇ ಕುರಿತು ಸ್ಮರಣ ನಮನಗಳನ್ನು ಮಾಡಬೇಕು		೧-೨
ಶ್ರೀಹರಿಯು ಸೃಷ್ಟಿಕಾರ್ಯವನ್ನು ಮಾಡಲು ನಿಮಿತ್ತ	....	೩
ಸೃಷ್ಟ್ಯಾರಂಭಕಾಲದಲ್ಲಿ ಶ್ರೀಲಕ್ಷ್ಮೀನಾರಾಯಣರ ಅವತಾರಗಳು ಮತ್ತು ಜೀವರ ಅನಿರುದ್ಧ, ಸ್ಥೂಲದೇಹಗಳ ಸೃಷ್ಟಿ		೪
ತಾರತಮ್ಯತ್ವೇನ ದೇವತೆಗಳ ಬಿಂಬಪ್ರತಿಬಿಂಬತ್ವ	....	೫
ಜೀವರಲ್ಲಿ ತಾರತಮ್ಯದ ಸೂಕ್ಷ್ಮ ನಿರೂಪಣೆ	....	೫-೬
ಶ್ರೀನಾರಾಯಣನ ಗುಣೋತ್ಕರ್ಷಣೆ	....	೬-೭
ಜೀವ-ಪರಮಾತ್ಮರ ಗುಣ, ಆನಂದ ತಾರತಮ್ಯ	....	೭
ಜೀವ-ಪರಮಾತ್ಮರ ತಾರತಮ್ಯ ಸಿದ್ಧಾಂತಕ್ಕೆ ಪ್ರಮಾಣ	....	೮
ಸ್ವಾಮಿ ಪ್ರಕಟಮಾಡಿರುವ ಸ್ವಗತಭೇದಗಳು ಮೋಹಕವೆಂಬ ನಿರ್ಣಯ	....	೮-೯
ರುದ್ರದೇವರಿಗೆ ಮೋಹಕಪುರಾಣಗಳನ್ನು ರಚಿಸಲು ಶ್ರೀನಾರಾಯಣನ ಆಜ್ಞೆ-ವರಾಹಪುರಾಣ ವಾಕ್ಯ		೯
ರುದ್ರದೇವರಿಂದ ಷಣ್ಮುಖನಿಗೆ ಹರಿಸರ್ವೋತ್ತಮತ್ವ ಜ್ಞಾನೋಪದೇಶ—ಸ್ಕಾಂದಪುರಾಣೋಕ್ತ		೧೦
ಪಾರ್ವತೀದೇವಿಯರಿಗೆ ರುದ್ರದೇವರಿಂದ ಮೋಹಕಪುರಾಣಗಳ ಯಥಾರ್ಥ ಜ್ಞಾನೋಪದೇಶ—ಪಾದ್ಮಪುರಾಣೋಕ್ತ		೧೦-೧೧
ಮನುಷ್ಯೋತ್ತಮರಿಂದ ಶ್ರೀಹರಿಪರಿಯಂತ ಆರೋಹಣ ತಾರತಮ್ಯ	....	೧೨-೧೩
ಮುಕ್ತಿಪ್ರಾಪ್ತ್ಯರ್ಥ ಮಾಡಬೇಕಾದ ಕರ್ಮ	....	೧೪-೧೫
ಭಕ್ತಿಕ್ರಮ—ನವವಿಧ ಭಕ್ತಿ, ನವವಿಧ ದ್ವೇಷ	....	೧೫-೧೬
ಗುರುವಿನ ಲಕ್ಷಣಗಳು—ಗುರು-ಶಿಷ್ಯಸಂಬಂಧ	....	೧೭
ಅಪರೋಕ್ಷಾನಂತರ ಪಾಪ ಪುಣ್ಯ ವಿಷಯ	....	೧೮
ಪ್ರಮುಖ ಮುಕ್ತಿಯೋಗ್ಯರಲ್ಲಿ ನಾರಾಯಣನ ಆವೇಶ	....	೨೩
ದೇವತಾಸ್ತ್ರೀಯರಲ್ಲಿ ತಾರತಮ್ಯ ವಿಚಾರ	....	೨೩-೨೪
ಶ್ರೀಕೃಷ್ಣಾವತಾರದಲ್ಲಿ ಶ್ರೀಹರಿಕಾರ್ಯಕ್ಕೆ ಅಂಗಭೂತರಾದ ದೇವತೆಗಳ ವಿಚಾರ		೨೪
ಶ್ರೀರಾಮಾವತಾರದಲ್ಲಿ ಶ್ರೀಹರಿಕಾರ್ಯಕ್ಕೆ ಅಂಗಭೂತರಾದ ದೇವತೆಗಳ ವಿಚಾರ		೨೪-೨೫
ಶ್ರೀಮನ್ಮಹಾಭಾರತದ ವೈಶಿಷ್ಟ್ಯ	....	೨೫
ಗುಣಪೂರ್ಣನಾದ ಶ್ರೀಹರಿ ಜಗತ್ತನ್ನು ಮೋಹಿಸುವ ಕ್ರಮ	....	೨೮
ನಿಶ್ಚಯಜ್ಞಾನಿಗಳು ಯಾರು	....	೨೯

ವಿಷಯ		ಪುಟಸಂಖ್ಯೆ
ಆಸುರೀಜ್ಞಾನದ ಲಕ್ಷಣ	....	೨೯-೩೦
ಮೋಕ್ಷಧರ್ಮ	....	೩೦-೩೧
ಭಾಷಾತ್ರಯ ವಿವರಣೆ	....	೩೧-೩೨
ತಾರತಮ್ಯತ್ವೇನ ಶ್ರೀಹರಿಗೆ ಅಂಗಭೂತರಾದ ದೇವತೆಗಳು ಮತ್ತು ತಾರತಮ್ಯ-ಜ್ಞಾನದ ಅವಶ್ಯಕತೆ		೩೨-೩೫
ಶ್ರೀರಾಮಾವತಾರಕ್ಕೆ ಮತ್ತು ಆ ಅವತಾರದಲ್ಲಿ ಮಾಡಿದ ಕ್ರಿಯೆಗಳಿಗೆ ನಿರ್ಣಯ		೩೫-೩೪
ಭಾರತದಲ್ಲಿ ಬರುವ ಅರ್ಥತ್ರಯಗಳ್ಯನಿರೂಪಣೆ	....	೩೪-೩೫
ವಾಯುದೇವರ ಅವತಾರತ್ರಯ ಮತ್ತು ಜೀವೋತ್ತಮತ್ವ ವಿಷಯ	....	೩೫-೩೬
ಪುರುಷಬ್ರಹ್ಮ ಇವರೇ ಮೊದಲಾದವರ ಸೃಷ್ಟಿ	....	೪೪
ತತ್ತ್ವಸೃಷ್ಟಿ	....	೪೪
ಬ್ರಹ್ಮಾಂಡದ ಉತ್ಪತ್ತಿ	....	೪೫ ೪೬
ವಾಯುದೇವರ ಜೀವೋತ್ತಮತ್ವ ದೇವತೆಗಳಿಂದ ತಿಳಿಯಲ್ಪಟ್ಟದ್ದು	....	೪೬-೪೭
ಸ್ಥೂಲಸೃಷ್ಟಿ	....	೪೭
ದೇವತೆಗಳ ಸೃಷ್ಟಿಕ್ರಮದಿಂದ ಅವರುಗಳ ತಾರತಮ್ಯ ಸಿದ್ಧಿಸುವುದಿಲ್ಲ	....	೪೮
ಮಿಥುನಸೃಷ್ಟಿ	....	೪೯
~~ಮತ್ಸ್ಯಾದಿ ದಶಾವತಾರಗಳಲ್ಲಿ ನರಾಹಾವತಾರ~~	....	~~೪೯~~
ಮತ್ಸ್ಯಾವತಾರ	....	೫೧
ಯಾವಾಗ ವೇದೋಚ್ಚಾರವನ್ನು ಮಾಡಬಾರದು; ನಿಷೇಧಿಸಿದ ಕಾಲಗಳಲ್ಲಿ ವೇದೋಚ್ಚಾರ ಮಾಡುವುದರ ಪರಿಣಾಮ		೫೧
ಶ್ರೀನರಸಿಂಹ, ಕೂರ್ಮ, ವಾಮನಾವತಾರಗಳು	...	೫೧-೫೩
ಬಲಿ ದೈತ್ಯನಾದರೂ ಶ್ರೀಹರಿಯಿಂದ ಸಂಹರಿಸಲ್ಪಡದಿರಲು ಕಾರಣ	....	೫೪
ಪರಶುರಾಮ ಮತ್ತು ರಾಮಾವತಾರಗಳು	....	೫೫
ದೇವ ಮತ್ತು ಮನುಷ್ಯಮಾನದಿಂದ ಕಾಲಗಣನೆ; ಚತುರ್ಯುಗಗಳ ಕಾಲಮಾನ, ಬ್ರಹ್ಮದೇವರ ಹಗಲುರಾತ್ರಿ ಗಣನೆ		೫೬
ಮಧು ಕೈಟಭ ರಾಕ್ಷಸರಿಂದ ಸ್ವಾಮಿ ವರ ಬೇಡಿದ್ದಕ್ಕೆ ನಿರ್ಣಯ	....	೫೭
ಹಯಗ್ರೀವಾವತಾರ ಮಾಡಲು ನಿಮಿತ್ತ	....	೫೭
ರಾಮಾವತಾರದಲ್ಲಿ ದೇವತೆಗಳ ಅವತಾರ ಮತ್ತು ಅವರ ಅಂಶ-ಆವೇಶಗಳು		೫೮
ಶ್ರೀಹರಿಯ ಆಯುಧಗಳ ಅಭಿಮಾನಿ ಮತ್ತು ಅವಾಂತರಾಭಿಮಾನಿ ದೇವತೆಗಳು		೫೮-೫೯
ದಶರಥರಾಯನ ನಾಲ್ಕು ಮಕ್ಕಳು ಅಮರೋತ್ತಮರೆಂದು ಗ್ರಂಥಾಂತರಗಳಲ್ಲಿ ಹೇಳಿದ್ದಕ್ಕೆ ನಿರ್ಣಯ		೫೯
ಶ್ರೀಲಕ್ಷ್ಮೀ-ನಾರಾಯಣರು ಶುಕ್ಲಶೋಣಿತದಿಂದ ಜನಿಸಿದವರಲ್ಲ ಎನ್ನುವುದಕ್ಕೆ ದೃಷ್ಟಾಂತಪೂರ್ವಕ ನಿರ್ಣಯ		೬೦
ಆದಿ ಮತ್ತು ಅನುಸೃಷ್ಟಿಗಳಲ್ಲಿ ಗುಣನಿರ್ಣಯ	....	೬೦
ಮೂಲರಾಮಾಯಣ ಶ್ಲೋಕಗಳು ಹಂಚಿಹೋದದ್ದು; ವಾಲ್ಮೀಕಿ ರಾಮಾಯಣ ರಚನೆ		೬೧

ವಿಷಯ		ಪುಟಸಂಖ್ಯೆ
ಸರ್ವಜ್ಞನಾದ ಶ್ರೀರಾಮನು ವಿಶ್ವಾಮಿತ್ರನಿಂದ ಮಂತ್ರೋಪದೇಶ ಕೊಂಡಿದ್ದಕ್ಕೆ ನಿರ್ಣಯ		೬೨
ಇಂದ್ರನು ಅಹಲ್ಯಾದೇವಿಯನ್ನ ಸಂಪರ್ಕ ಮಾಡಿದ್ದಕ್ಕೆ ಕಾರಣ	....	೬೩
ಅಹಲ್ಯಾ ಅಪರಾಧಿನಿಯಾದರೂ ವಿಮೋಚಿತಳಾಗಿದ್ದಕ್ಕೆ ನಿರ್ಣಯ	....	೬೪
ಜನಕರಾಯನು ರುದ್ರಧನುಸ್ಸು ಸಂಪಾದಿಸಲು ನಿಮಿತ್ತ	....	೬೫
ರಾಮ-ಪರಶುರಾಮರು ಒಬ್ಬನೇ ಆದ ನಾರಾಯಣನಾದರೂ ಪರಸ್ಪರ ಯುದ್ಧ ಮಾಡಿದ್ದಕ್ಕೆ ನಿರ್ಣಯ		೬೭-೬೮
ಅತುಳನಾಮಕ ದೈತ್ಯ ಪರಶುರಾಮನಲ್ಲಿರಲು ಕಾರಣ	....	೬೯
ಪರಶುರಾಮನು ಶ್ರೀರಾಮಚಂದ್ರನಲ್ಲಿ ಏಕೀಭೂತನಾದಮೇಲೆ ಬಹಿರಾಗತನಾದದ್ದು		೭೦
ಮಂಥರೆಯ ಸ್ವರೂಪ ಮತ್ತು ಅವಳು ಶ್ರೀರಾಮಪಟ್ಟಾಭಿಷೇಕಕ್ಕೆ ವಿಘ್ನ ಆಚರಿಸಿದ್ದಕ್ಕೆ ನಿರ್ಣಯ		೭೦-೭೧
ಸರ್ವೋತ್ತಮನಾದರೂ ಶ್ರೀರಾಮನು ವನಕ್ಕೆ ಹೋಗಲು ಕಾರಣ	....	೭೨
ಜಯಂತನು ಕಾಗೆಯಾಗಲು ಮತ್ತು ಕಾಗೆಗಳಿಗೆ ಏಕಾಕ್ಷವಾಗಲು ಕಾರಣ	....	೭೫-೭೬
ಸ್ವಾಮಿ ಸ್ವರ್ಣಮೃಗವನ್ನು ಬೆನ್ನಟ್ಟಿಹೋಗಿ ಸಂಹರಿಸಿದ್ದಕ್ಕೆ ನಿರ್ಣಯ	....	೭೯-೮೦
ಶ್ರೀರಾಮನಿಗೆ ಅಕ್ಷೇಮವಿಲ್ಲೆಂದು ಲಕ್ಷ್ಮಣನು ಹೇಳಿದಾಗ ಸೀತಾದೇವಿ ಉಗ್ರ-ವಚನಗಳಾಡಿದ್ದು ಅಜ್ಞಾನದಿಂದಲ್ಲ		೮೦
ರಾವಣ ಕೊಂಡುಹೋದದ್ದು ಲಕ್ಷ್ಮೀರೂಪಳಾದ ಸೀತಾದೇವಿಯನ್ನಲ್ಲ	....	೮೧
ಲಕ್ಷ್ಮೀರೂಪಳಾದ ಸೀತಾದೇವಿಯು ಕೈಲಾಸಕ್ಕೆ ಹೋಗಲು ಕಾರಣ	....	೮೧
ಸೀತಾಪ್ರತಿಕೃತಿಯಲ್ಲಿ ಚೇಷ್ಟಾದಿಗಳು ಪ್ರವೃತ್ತವಾದ ಬಗೆ	....	೮೧
ಸೀತಾಪ್ರತಿಕೃತಿಯನ್ನು ರಾವಣನು ಕೊಂಡುಹೋಗುವಾಗ ಹನುಮಂತನು ನೋಡಿದರೂ, ರಾವಣನನ್ನ ಕೊಲ್ಲದಿದ್ದುದಕ್ಕೆ ನಿಮಿತ್ತ		೮೨
ಸೀತಾವಿಯೋಗ ದುಃಖವನ್ನು ಶ್ರೀರಾಮನು ಪ್ರಕಟ ಮಾಡಿದ್ದಕ್ಕೆ ನಿರ್ಣಯ	....	೮೩
ಕಬಂಧರಾಕ್ಷಸನ ಸ್ವರೂಪ	....	೮೪
ಶಬರಿಯ ಸ್ವರೂಪವೃತ್ತಾಂತ ಮತ್ತು ಅವಳಿಗೆ ದಿವ್ಯಗತಿಯಾದದ್ದು	....	೮೪
ಶ್ರೀರಾಮನು ವಾಲಿಯನ್ನು ಸಂಹರಿಸಿ, ಸುಗ್ರೀವನನ್ನು ಸಂಹರಿಸದಿದ್ದುದಕ್ಕೆ ನಿರ್ಣಯ		೮೫-೮೬
ಸರ್ವಶಕ್ತನಾದರೂ ಶ್ರೀರಾಮನು ರಾವಣನ ಸಂಹಾರಕ್ಕೆ ಕಪಿಸೇನಾ ಸಹಾಯವನ್ನೇಕೆ ತೆಗೆದುಕೊಂಡನು		೮೬
ಏಳು ತಾಳವೃಕ್ಷಗಳನ್ನು ಕೆಡಹಿ, ಅದೇ ಬಾಣದಿಂದ ಕುಮುದಿನಾವು ದೈತ್ಯರನ್ನು, ಶ್ರೀರಾಮ ಸಂಹರಿಸಿದ್ದೇಕೆ		೯೦-೯೧
ರಾಮ-ಸುಗ್ರೀವರಿಗೆ ಸ್ನೇಹವಾದದ್ದು ತಾರಾದೇವಿ ಹೇಗೆ ತಿಳಿದಳು	....	೯೧
ಪ್ರಥಮದಲ್ಲೇ ವಾಲಿಯನ್ನು ಶ್ರೀರಾಮನು ಸಂಹರಿಸದಿದ್ದುದಕ್ಕೆ ನಿಮಿತ್ತಗಳು		೯೧-೯೨
ಶ್ರೀರಾಮನು ವಾಲಿಯ ದೃಷ್ಟಿಗೆ ಗೋಚರನಾಗದೆ ಅವನನ್ನು ಸಂಹರಿಸಿದ್ದೇಕೆ		೯೨
ಸಪ್ತದ್ವೀಪಗಳಲ್ಲಿದ್ದ ಇತರ ಕಪಿಗಳನ್ನೆಲ್ಲ ತರಲು ಈ ಕಪಿಗಳು ಹೇಗೆ ಸಮರ್ಥರಾದರು		೯೫

ವಿಷಯ	ಪುಟಸಂಖ್ಯೆ
ಸಿಂಹಿಕಾ ಎಂಬ ರಾಕ್ಷಸಿ ಬ್ರಹ್ಮದೇವರಿಂದ ಅವಧ್ಯತ್ವ ವರವನ್ನು ಪಡೆದಿದ್ದರೂ ಹನುಮಂತನು ಅವಳನ್ನು ಸಂಹರಿಸಿದ್ದೀಕೆ	೧೦೩
ಸೀತಾಪ್ರತಿಕೃತಿಗೆ ಆಭರಣಗಳು ಬಂದ ಬಗೆ	೧೦೪
ಸೀತಾಪ್ರತಿಕೃತಿ ಮತ್ತು ಹನುಮಂತ, ರಾಮಮುದ್ರಿಕೆ ಸ್ವೀಕಾರ ಮತ್ತು ಚೂಡಾಮಣಿ ಪ್ರದಾನ ಮಾಡಿದ್ದಕ್ಕೆ ನಿರ್ಣಯ	೧೦೪
ಹನುಮಂತ ಬ್ರಹ್ಮಾಸ್ತ್ರ ಎದುರಿಸಲು ಸಮರ್ಥನಾದರೂ, ಇಂದ್ರಜಿತುವಿನಿಂದ ಪ್ರಯೋಗಿಸಲ್ಪಟ್ಟ ಬ್ರಹ್ಮಾಸ್ತ್ರದಿಂದ ಕಟ್ಟಿಸಿಕೊಳ್ಳಲು ಕಾರಣ	೧೦೬-೧೦೭
ಹನುಮಂತನ ಬಾಲಕ್ಕೆ ಅಗ್ನಿಸ್ಪರ್ಶವಾದರೂ ಸುಡದಿರಲು ಕಾರಣ	೧೦೭
ರಾವಣನ ವಧಾಪೂರ್ವಕ್ಕೇ ಲಂಕಾರಾಜ್ಯಾಧಿಪತಿಯಾಗಿ ವಿಭೀಷಣನಿಗೆ ರಾಮನು ರಾಜ್ಯಾಭಿಷೇಕ ಮಾಡಲು ಕಾರಣ	೧೧೧-೧೧೨
ಇಂದ್ರನು ಗರುಡನ ಮೇಲೆ ವಜ್ರಾಯುಧವನ್ನು ಪ್ರಯೋಗ ಮಾಡಲು ಅದು ವ್ಯರ್ಥವಾದದ್ದು; ವಿನುತಾದೇವಿ ದಾಸೀತ್ವ ಪರಿಹಾರ	೧೧೫-೧೧೭
ಅತಿಕಾಯನ ಮೇಲೆ ಲಕ್ಷ್ಮಣನು ಬ್ರಹ್ಮಾಸ್ತ್ರ ಪ್ರಯೋಗ ಮಾಡಲು ಕಾರಣ....	೧೧೯
ಪಂಚಪ್ರಾಣರು ಮತ್ತು ಕುಬೇರ ಇವರ ಕಪಿರೂಪಗಳು	೧೨೦
ರಾವಣನಿಂದ ಪ್ರಯೋಗಿಸಲ್ಪಟ್ಟ ಅಗ್ನ್ಯಸ್ತ್ರ ನೀಲನನ್ನು ಸುಡಲಿಲ್ಲ	೧೨೧
~~ಪ್ರಬಲನಾದ ರಾವಣನು ಮಾಯಾಧೀಗತನಾದ ಲಕ್ಷ್ಮಣನನ್ನ ಎತ್ತಲು ಅಸಮರ್ಥ~~	~~೧೨೨-೧೨೩~~
ನಾದರೂ, ಹನುಮಂತನು ಲೀಲಾಮಾತ್ರದಲ್ಲಿ ಎತ್ತಲು ಸಮರ್ಥನಾದನು	
ರಾಮನನ್ನು ಸಂಹರಿಸಲು ರಾವಣನು ಕುಂಭಕರ್ಣನಿಗೆ ಹೇಳಲು, ರಾವಣನನ್ನು ಕುಂಭಕರ್ಣನು ನಿಂದಿಸಿದ್ದಕ್ಕೆ ನಿರ್ಣಯ	೧೨೪-೧೨೫
ಕುಂಭಕರ್ಣ ಸುಗ್ರೀವನ್ನ ಕೈಸೆರೆ ಕೊಂಡುಹೋದಾಗ ಹನುಮಂತನು ಅವನನ್ನು ಅನುಸರಿಸಿ ಹೋಗಲು ನಿಮಿತ್ತ	೧೨೬
ಕುಂಭಕರ್ಣನನ್ನು ಸಂಹರಿಸಲು ಹನುಮಂತ ಸಮರ್ಥನಾದರೂ ಸಂಹರಿಸಲಿಲ್ಲ— ನಿರ್ಣಯ	೧೨೬-೧೨೭
ಸಂಹೃತನಾದ ಕುಂಭಕರ್ಣನ ದೇಹವನ್ನು ತುಂಡುತುಂಡುಗಳಾಗಿ ಮಾಡಿ, ಶ್ರೀರಾಮನು ಸಮುದ್ರದಲ್ಲಿ ಹಾಕಲು ನಿಮಿತ್ತ	೧೨೮
ಶೇಷಾಂಶನಾದ ಲಕ್ಷ್ಮಣ ನಾಗಪಾಶದಿಂದ ಕಟ್ಟಿಸಿಕೊಳ್ಳಲ್ಪಟ್ಟದ್ದಕ್ಕೆ ನಿರ್ಣಯ	೧೨೮
ಶ್ರೀರಾಮದೇವರು, ಹನುಮಂತ ಮತ್ತು ಲಕ್ಷ್ಮಣ ಇವರುಗಳು ಇಂದ್ರಜಿತನ ನಾಗಪಾಶವನ್ನು ನಿವಾರಿಸಲು ಶಕ್ತರಾದರೂ, ಗರುಡನೇ ಅದನ್ನು ನಿವಾರಿಸಿದನು	೧೨೮-೧೨೯
ಲಕ್ಷ್ಮಣನು ಬ್ರಹ್ಮಾಸ್ತ್ರದಿಂದ ಕಟ್ಟಿಸಿಕೊಳ್ಳಲ್ಪಟ್ಟು ಮೂರ್ಛಿತನಾಗಿದ್ದರೂ ಸ್ವಾಮಿಯು ಕೂಡ ಮಾತನಾಡಿದನು	೧೩೧
ಇಂದ್ರಜಿತುವನ್ನು ಸಂಹರಿಸಲು ಸ್ವಾಮಿ ತಾ ಸಮರ್ಥನಾದರೂ ಆ ಕಾರ್ಯಕ್ಕೆ ಲಕ್ಷ್ಮಣನಿಗೆ ಆಜ್ಞಾಪಿಸಿದನು	೧೩೪
ಅಸಂಖ್ಯವಾದ ರಾವಣನ ಸೈನ್ಯವು ಅಲ್ಪಪ್ರದೇಶವಾದ ಲಂಕಾಪಟ್ಟಣದಲ್ಲಿರಲು ಹೇಗೆ ಸಾಧ್ಯ	೧೩೪

ವಿಷಯ	ಪುಟಸಂಖ್ಯೆ
ರಾವಣನ ಶಕ್ತ್ಯಾಯುಧದಿಂದ ಹೊಡೆಸಿಕೊಂಡು ಮೂರ್ಛಿತನಾದ ಲಕ್ಷ್ಮಣನನ್ನು ಜಾಗ್ರತಗೊಳಿಸಲು ಶ್ರೀರಾಮದೇವರು ತಾನೇ ಶಕ್ತನಾದರೂ ಹನುಮಂತನಿಂದ ಔಷಧಗಳನ್ನು ತರಿಸಿ ಮೂರ್ಛೆಯನ್ನು ನಿವಾರಿಸಿದನು	೧೩೬
ಔಷಧಯುಕ್ತವಾದ ಪರ್ವತದ ಗಂಧದಿಂದಲೇ ಲಕ್ಷ್ಮಣನೂ ಸತ್ತಂಥ ಕಪಿಗಳೂ ಬದುಕಿದರೂ, ಹಾಗೆಯೇ ಸತ್ತಂಥಾ ರಾಕ್ಷಸರುಗಳು ಮಾತ್ರ ಬದುಕದಿರಲು ಕಾರಣ	೧೩೭
ರುದ್ರದೇವರು ಶ್ರೀ ಸ್ವಾಮಿಯ ಭಕ್ತನಾದರೂ, ಶ್ರೀರಾಮನು ರಾವಣನನ್ನು ಕೊಂದಿದ್ದಕ್ಕಾಗಿ ಶ್ರೀರಾಮನ ಮೇಲೆ ಯುದ್ಧಕ್ಕೆ ಬಂದನು	೧೩೮-೧೩೯
ಸೀತಾಪ್ರತಿಕೃತಿಯು ಅಗ್ನಿಪ್ರವೇಶ, ಮೂಲಸೀತಾದೇವಿ ಅಗ್ನಿಕುಂಡದಿಂದ ಆವಿರ್ಭವಿಸಿದ್ದು	೧೩೯
ಸ್ವಾಮಿಯಿಂದ ಆಜ್ಞಪ್ತನಾದ ಸುಷೇಣನು ಸತ್ತಂಥ ಕಪಿಗಳನ್ನು ಬದುಕಿಸಿದ್ದು	೧೩೯-೧೪೦
ಹನುಮಂತದೇವರ ಭಕ್ತಿಸ್ವರೂಪ	೧೪೧
ಶ್ರೀರಾಮನೂ, ವಾಯುದೇವರೂ ಈ ಮುಂಚೆಯೇ ರಾವಣನನ್ನು ಗೆದ್ದಿದ್ದುದು. ಶ್ರೀರಾಮದೇವರು, ಕಾರ್ತವೀರ್ಯಾರ್ಜುನ, ರುದ್ರದೇವರು ಇವರೆಲ್ಲರೂ ರಾವಣನನ್ನು ಗೆದ್ದಿದ್ದರೂ, ಇದರಲ್ಲಿರುವ ತಾರತಮ್ಯ	೧೪೧-೧೪೩
ಹನುಮಂತ ಹಣ್ಣೆಂದು ಭ್ರಮಿಸಿ ಸೂರ್ಯನನ್ನು ಹಿಡಿಯಹೋದನೆ	೧೪೩-೧೪೬
ಹನುಮಂತನಿಗೆ ಸ್ವಾಮಿ ಸಹಭೋಜನ ಕೊಟ್ಟನು ಎನ್ನುವುದಕ್ಕೆ ವಿವರಣೆ	೧೪೬
ಹನುಮಂತನು ಸ್ವಾಮಿಯಿಂದ ಯಾವ ಪ್ರಕಾರದ ಜೀವನವನ್ನು ತನಗಾಗಿ ಬೇಡಿದನು	೧೪೬-೧೪೪
ಅಗ್ನಿಮುಖನಾಗಿ ತಪಸ್ಸು ಮಾಡಿದ ಶೂದ್ರನನ್ನು ಶ್ರೀರಾಮದೇವರು ಸಂಹಾರ ಮಾಡಲು ನಿಮಿತ್ತ	೧೪೪
ಶ್ವೇತರಾಯನು ಕೊಟ್ಟ ಮಾಲಿಕೆಯನ್ನು ಅವನ ಕೈಯಿಂದಲೇ ಸ್ವೀಕರಿಸದೆ, ಶ್ರೀರಾಮನು ಅಗಸ್ತ್ಯನ ಮೂಲಕ ಸ್ವೀಕರಿಸಲು ಕಾರಣ; ಶ್ರೀರಾಮನಿಗೆ ಶ್ವೇತರಾಯನು ಮಾಲಿಕೆ ಕೊಡಲು ನಿಮಿತ್ತ	೧೪೪-೧೪೯
ಸುರಾಣಕ ದೈತ್ಯರು ಮೋಕ್ಷಸಾಧಕವಾದ ವರವನ್ನು ಬ್ರಹ್ಮದೇವರಿಂದ ಪಡೆದಿದ್ದರೂ ಅವರೆಲ್ಲರೂ ತಮಸ್ಸಿಗೆ ಬೀಳಲು ಕಾರಣ	೧೫೦-೧೫೧
ಬ್ರಹ್ಮದೇವರು ಕೊಟ್ಟಂಥ ಕೆಲವು ವರಗಳನ್ನು ಶ್ರೀಹರಿ ಮತ್ತು ವಾಯು-ದೇವರು ಭಂಗಗೊಳಿಸಲು ಕಾರಣ	೧೫೦-೧೫೧
ಸೀತಾದೇವಿ ಅಗ್ನಿಪ್ರವೇಶ ಮಾಡಿದಮೇಲೆ, ಶ್ರೀರಾಮನು ಕುಶಗ್ರಂಥಿಯಿಂದ ಸೀತಾಪ್ರತಿಮೆ ಮಾಡಿ ಯಜ್ಞಮಾಡಿದ್ದು ಮೋಹಕವೆಂಬುದಕ್ಕೆ ನಿರ್ಣಯ	೧೫೧-೧೫೨
ರಾಮ ಮತ್ತು ಕೃಷ್ಣಾವತಾರಗಳಲ್ಲಿ ದೂರ್ವಾಸನನ್ನು ಶ್ರೀಹರಿಯು ಪರಾಭವಗೊಳಿಸಿದ ಬಗೆ	೧೫೩-೧೫೪
ಶ್ರೀರಾಮನನ್ನು ಪರಂಧಾಮಕ್ಕೆ ಆಹ್ವಾನಿಸಲು ರುದ್ರದೇವರು ಬಂದಾಗ ಶ್ರೀರಾಮನು ಲಕ್ಷ್ಮಣನನ್ನು ಕಾವಲಿಟ್ಟು, ಯಾರನ್ನಾದರೂ ಒಳಗೆ ಬಿಟ್ಟಲ್ಲಿ ಲಕ್ಷ್ಮಣನನ್ನು ಸಂಹರಿಸುವುದಾಗಿ ಹೇಳಿ, ಆಜ್ಞೆ ಮೀರಿ ದೂರ್ವಾಸನನ್ನು ಒಳಗೆ ಬಿಟ್ಟರೂ ಸಂಹರಿಸಲಿಲ್ಲ	೧೫೪-೧೫೫

ವಿಷಯ		ಪುಟಸಂಖ್ಯೆ
ಶೇಷದೇವರ ವರ್ಣನೆ	....	೧೫೫
ಶ್ರೀರಾಮನು ಹನುಮಂತನನ್ನು ಅನುಗ್ರಹಿಸಿದ್ದು	....	೧೫೬
ಜ್ಞಾನಿಗಳಿಗೆ ಸದ್ಗತಿಯೆಂದು ಶ್ರುತಿವಾಕ್ಯ ಹೇಳುತ್ತಿರುವಾಗ ತೃಣ ಮಿಗಾದಿಗಳೂ ಶ್ರೀರಾಮನ ಸಂಗಡ ಪರಂಧಾಮಕ್ಕೆ ಹೋಗಲು ಹೇಗೆ ಯೋಗ್ಯರು		೧೫೭
ಕೌಸಲ್ಯಾದೇವಿ ಮತ್ತು ಶ್ರೀರಾಮನಲ್ಲಿ ದ್ರೋಹ ಬಗೆದ ಕೈಕೇಯೀ ಇಬ್ಬರಿಗೂ ಸದ್ಗತಿಯಾಯಿತು ಎಂದರೆ ಹೇಗೆ ಕೂಡುತ್ತದೆ		೧೬೦
ಬ್ರಹ್ಮದೇವರ ಮೂಲಕವೇ ಜೀವರಿಗೆ ಸದ್ಗತಿ, ಶ್ರೀಹರಿಯ ಹೃದ್ಭಾವವನ್ನು ಅರಿತವರು ಬ್ರಹ್ಮದೇವರೊಬ್ಬರೇ—ಶ್ರೀರಾಮನ ವಾಕ್ಯ		೧೬೧
ರಾಮಾವತಾರದಲ್ಲಿ ಅವತಾರ ಮಾಡಿದಂಥ ದೇವತೆಗಳೆಲ್ಲರೂ ಅವರವರ ಮೂಲ ರೂಪವನ್ನು ಐದಿದರೂ, ವಿವಿಧ-ನ್ಯೆಂದರು ಮಾತ್ರ ತಮ್ಮ ಮೂಲರೂಪವನ್ನು ಐದಲಿಲ್ಲ—ನಿರ್ಣಯ		೧೬೩
ಜಾಂಬವಂತನು ಶ್ರೀರಾಮನ ಸಂಗಡ ಪರಂಧಾಮಕ್ಕೆ ಹೋಗಲಿಲ್ಲವೇಕೆ	....	೧೬೩
ಶ್ರೀರಾಮನು ಪರಂಧಾಮಕ್ಕೆ ಹೋದಮೇಲೆ ಹನುಮಂತನ ವಿಷಯ	...	೧೬೩-೧೬೪
ಬ್ರಹ್ಮಪ್ರಳಯದಲ್ಲಿ ಮತ್ತು ಸೃಷ್ಟಿಕಾಲದಲ್ಲಿ ಶ್ರೀನಾರಾಯಣನ ಅನೇಕ ರೂಪಗಳ ವಿಷಯ		೧೬೪
ಭಾರತತಾತ್ಪರ್ಯನಿರ್ಣಯವು ಯಥಾರ್ಥನಿರ್ಣಯವೆನ್ನುವುದಕ್ಕೆ ಶ್ರೀಮದಾಚಾರ್ಯರಿಂದ ಸಕಾರಣ ಸಮರ್ಥನೆ		೧೬೪-೧೬೬
ಶ್ರೀಹರಿಯು ವ್ಯಾಸಾವತಾರ ಮಾಡಲು ನಿಮಿತ್ತ	....	೧೬೪
ಬ್ರಾಹ್ಮಣರಿಗೆ ಗೌತಮರ ಶಾಪವಾಗಲು ಕಾರಣ	....	೧೬೪-೧೬೯
ದೇವತೆಗಳಿಗೆ ಐಶ್ವರ್ಯಭ್ರಷ್ಟತ್ವ ಬರಲೆಂದು ದೂರ್ವಾಸಮುನಿಯು ಶಾಪ ಕೊಡಲು ಕಾರಣ		೧೬೯
ಅಮೃತಾರ್ಥವಾಗಿ ಸಮುದ್ರಮಥನವನ್ನು ಶ್ರೀಹರಿಯೇ ಮಾಡಿದನು	..	೧೭೧-೧೭೨
ಸಮುದ್ರಮಥನಕಾಲದಲ್ಲಿ ಹುಟ್ಟಿದ ಕಾಲಕೂಟ ವಿಷವು ಹಂಚಿಹೋದ ಬಗೆ	.	೧೭೨
ಸಮುದ್ರಮಥನಕಾಲದಲ್ಲಿ ಹುಟ್ಟಿದ ಬೇರೆಬೇರೆ ಪದಾರ್ಥಗಳು	....	೧೭೩
ಸರ್ವಶಕ್ತನಾದ ಶ್ರೀ ಧನ್ವಂತರಿಯು ಅಮೃತಕಲಶಸಹಿತ ಪ್ರಾದುರ್ಭೂತನಾದಾಗ, ದೈತ್ಯರು ಅಮೃತಕಲಶವನ್ನು ಶ್ರೀಹರಿಯಿಂದ ಅಪಹರಿಸಲು ಹೇಗೆ ಸಮರ್ಥರಾದರು		೧೭೩
ದೈತ್ಯನಾದ ರಾಹುವಿಗೆ ಅಮೃತವು ಹೇಗೆ ಪ್ರಾಪ್ತವಾಯಿತು	....	೧೭೪-೧೭೫
ದೇವ-ದೈತ್ಯರಿಬ್ಬರೂ ಕೂಡಿಯೇ ಸಮುದ್ರಮಥನ ಮಾಡಿದ್ದರೂ, ಶ್ರೀಹರಿಯಿಂದ ದೇವತೆಗಳಿಗೆ ಮಾತ್ರ ಅಮೃತ ಕೊಡಲ್ಪಡಲು ಕಾರಣ		೧೭೫-೧೭೬
ಕಲಿಯು ತನ್ನ ದುಷ್ಟಕಾರ್ಯಗಳನ್ನು ಮಾಡುವ ಬಗೆ	....	೧೭೬
ಶ್ರೀ ವೇದವ್ಯಾಸನು ಸತ್ಯವತೀ-ಪರಾಶರರಲ್ಲಿ ಜನಿಸಿದನೆಂಬುದಕ್ಕೆ ನಿರ್ಣಯ	....	೧೭೮-೧೭೯
ಶ್ರೀ ವೇದವ್ಯಾಸ ವರ್ಣನೆ	....	೧೭೯-೧೮೦
ಭಾರತಶ್ಲೋಕಗಳು ಹಂಚಿಹೋದ ಬಗೆ	....	೧೮೧

ವಿಷಯ	ಪುಟಸಂಖ್ಯೆ
ವೇದವ್ಯಾಸನು ಹುಳುವಿನಿಂದ ಸಾಮ್ರಾಜ್ಯ ಆಳಿಸಿ, ಆ ಜೀವನಿಗೆ ವೈಕುಂಠ-ಪ್ರಾಪ್ತಿ ಮಾಡಿಕೊಟ್ಟದ್ದು	೧೪೧-೧೪೨
ರುದ್ರದೇವರು ವೇದವ್ಯಾಸನ ಮಗನಾಗಬೇಕೆಂದು ತಪಸ್ಸು ಮಾಡಿದ್ದು ಮತ್ತು ವೇದವ್ಯಾಸನು ರುದ್ರದೇವರು ತನಗೆ ಮಗನಾಗಬೇಕೆಂದು ತಪಸ್ಸು ಮಾಡಿದ್ದಕ್ಕೆ ನಿರ್ಣಯ; ಶುಕನ ಉತ್ಪತ್ತಿ; ಶುಕನೆಂಬೋ ನಾಮ ಬರಲು ಕಾರಣ	೧೪೨-೧೪೪
ವೇದವ್ಯಾಸನ ಶಿಷ್ಯರಾದ ಪೈಲ ಜೈಮಿನ್ಯಾದಿಗಳಲ್ಲಿ ದೇವತೆಗಳ ಪ್ರವೇಶ ಮತ್ತು ಇದಕ್ಕೆ ನಿಮಿತ್ತ	೧೪೪
ವೇದವ್ಯಾಸನು ಶಿಷ್ಯರನ್ನ ಬೇರೆಬೇರೆ ಕಾರ್ಯಗಳಲ್ಲಿ ಪ್ರವರ್ತಕರನ್ನಾಗಿ ಮಾಡಿದ್ದು. ರೋಮಹರ್ಷಣಋಷಿಯ ಜನನ ಮತ್ತು ಅವನಲ್ಲಿ ಕಾಮ-ದೇವನು ಪ್ರವೇಶ ಮಾಡಿದ್ದು	೧೪೪
ವೇದವ್ಯಾಸರಿಂದ ಅಷ್ಟಾದಶ ಪುರಾಣಗಳ ರಚನೆ ಮತ್ತು ಅವುಗಳನ್ನು ಸಾತ್ತ್ವಿಕ, ರಾಜಸ, ತಾಮಸಗಳಾಗಿ ವಿಭಾಗ ಮಾಡಲು ಕಾರಣ	೧೪೫

॥ ಶ್ರೀ ಮಧ್ವಾಂತರ್ಗತ ಶ್ರೀ ವೇದವ್ಯಾಸಾಯ ನಮಃ ॥

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ ವಿರಚಿತ

ಭಾವಿಸಮೀರ ಶ್ರೀಮದ್ವಾದಿರಾಜತೀರ್ಥರಿಂದ ಅನುವಾದಿತ ಕನ್ನಡ

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯ

ಸಂಪುಟ ೧

T. VENKANNA, B.A., B.L.
ADVOCATE
381, Third Block,
NEAR RAMA MANDIR,
RAJAJINAGAR,
BANGALORE-560010.

ಶ್ರೀ ತ್ರೈಲೋಕ್ಯಾಚಾರ್ಯ ಸೇವಕ ವೃಂದ
ನಂ. 223, ಎರಡನೇ ಕ್ರಾಸ್, ಹನುಮಂತನಗರ
ಬೆಂಗಳೂರು-560 019

ಭಾವಿಸಮೀರ ಶ್ರೀಮದ್ವಾದಿರಾಜತೀರ್ಥರಿಂದ ಅನುವಾದಿತ ಕನ್ನಡ

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯ

"Sreemanmahaabhaaratataatparyanirnaya"—Vol. I

Prose Translation in Kannada by Srimadvadirajatheertha

1,000 ಪ್ರತಿಗಳು — ಆಗಸ್ಟ್ 1980

ಈ ಪುಸ್ತಕವನ್ನು ಬೆಂಗಳೂರು ಅವೆನ್ಯೂ ರಸ್ತೆಯಲ್ಲಿರುವ ಕರ್ನಾಟಕ ಪಬ್ಲಿಷರ್ಸ್ ಅಂಡ್
ಬುಕ್‌ಸೆಲ್ಲರ್ಸ್ ಅಸೋಸಿಯೇಷನ್‌ನ ಅಧ್ಯಕ್ಷರಾದ ಶ್ರೀ ಹೆಚ್. ಕಮಲಾನಾಥ್
ಇವರಿಂದ ರಿಯಾಯಿತಿದರದಲ್ಲಿ ದೊರೆತ ಕಾಗದದಲ್ಲಿ ಮುದ್ರಿಸಲಾಗಿದೆ.

ಆನಂದ್ ಪ್ರಿಂಟರ್ಸ್
25, ಗಾಂಧೀ ಬಜಾರ್, ಬೆಂಗಳೂರು-4
ಇವರಿಂದ ಮುದ್ರಿತ

ಶ್ರೀಮದಾನಂದತೀರ್ಥರಿಂದ

ರಚಿತವಾದ ದೇವನಾಗರೀಲಿಪಿಯ

" ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯ "

ಗ್ರಂಥವನ್ನು ಕನ್ನಡದಲ್ಲಿ ರಚಿಸಿ ಉಪಕರಿಸಿರುವ ಭಾವಿಸಮೀರ

ಶ್ರೀಮದ್ವಾದಿರಾಜಗುರುಸಾರ್ವಭೌಮ ಶ್ರೀಪಾದಂಗಳವರ

ಚರಣಾರವಿಂದಗಳಲ್ಲಿ ಅವರ ಪಂಚಶತಾಬ್ದಿಯ ಜಯಂತ್ಯುತ್ಸವದ

ಶುಭ ಸನ್ನಿವೇಶದ ಸವಿನೆನಪಿಗಾಗಿ ಈ ಸಂಪುಟವನ್ನು

ಭಕ್ತಿಪೂರ್ವಕವಾಗಿ ಸಮರ್ಪಿಸಲಾಗಿದೆ

॥ ಶ್ರೀ ಗುರುರಾಜೋ ವಿಜಯತೇ ॥

ಮುನ್ನುಡಿ

ಶ್ರೀಮನ್ಮಹಾಭಾರತ

'ಇತಿಹಾಸ ಪುರಾಣಾಭ್ಯಾಂ ಪಂಚಮೋ ವೇದಾನಾಂ ವೇದಃ', 'ವೇದಾದಪಿ ಪರಂ ಚಕ್ರೇ ಮಹಾಭಾರತಮುತ್ತಮಮ್', 'ಸ್ತ್ರೀಶೂದ್ರಬ್ರಹ್ಮಬಂಧೂನಾಂ ತ್ರಯೀನ ಶ್ರುತಿಗೋಚರಾ। ಇತಿ ಭಾರತಮಾಖ್ಯಾನಂ ಕೃಪಯಾ ಮುನಿನಾ ಕೃತಮ್॥', 'ಮುನಿರ್ವಿವಕ್ಷುಃ ಭಗವದ್ಗುಣಾನಾಂ ಸಖಾಽಪಿ ತೇ ಭಾರತ-ಮಾಹ ಕೃಷ್ಣಃ॥', 'ಮಹತ್ವಾತ್ ಭಾರವತ್ವಾತ್ ಚ ಮಹಾಭಾರತಮುಚ್ಯತೇ॥', 'ಕೋಽನ್ಯಃ ಪುಂಡರೀಕಾಕ್ಷಾತ್ ಮಹಾಭಾರತ ಕೃದ್ಭವೇತ್', 'ವೇದೋಕ್ತ ತದನುಕ್ತ ಭಾರತೋಕ್ತ...' ಇತ್ಯಾದಿ ಶ್ರುತಿಸ್ಮೃತಿಪ್ರಾಜ್ಞೋಕ್ತಿಗಳ ಅವಲೋಕನದಿಂದ ಶ್ರೀಮನ್ಮಹಾಭಾರತ ಗ್ರಂಥದ ಶ್ರೇಷ್ಠತ್ವ ತಿಳಿಯಲ್ಪಡುತ್ತದೆ. ಶ್ರೀ ವೇದವ್ಯಾಸದೇವರಿಂದ ನಿರ್ಮಿತವಾದ ಈ ಗ್ರಂಥವು ಪೌರುಷೇಯ ಗ್ರಂಥವಾದರೂ ಅಪೌರುಷೇಯ ವೇದರಾಶಿಗಿಂತಲೂ ಒಳ ಹೊರಗಿನ ಗರಿಮೆ ಹಿರಿಮೆಯನ್ನು ಹೊಂದಿರುವ ಏಕೈಕ ಗ್ರಂಥ. ಈ ಗ್ರಂಥದಲ್ಲಿರುವ ವಿಷಯಗಳೇ ಬೇರೇ ಗ್ರಂಥಗಳಲ್ಲಿ ಭಾಗಶಃ ಇವೆ. ಇದರಲ್ಲಿ ಯಾವುದಿಲ್ಲವೋ ಅದು ಎಲ್ಲೂ ಇಲ್ಲ. 'ಯದಿಹಾಸ್ತಿ ತದನ್ಯತ್ರ ಯನ್ನೇಹಾಸ್ತಿ ನ ಕುತ್ರಚಿತ್' ಎಂಬ ಯಥಾರ್ಥ ವರ್ಣನೆಗೆ ಯೋಗ್ಯವಾದ ಹತ್ತಕ್ಕೂ ಕಡಿಮೆಯಿಲ್ಲದ ಅರ್ಥ ವೈಶಿಷ್ಟ್ಯ ಇದರಲ್ಲಿದೆ. ಇದರಲ್ಲಿ ಘಟಕವಾದ ಭಗವದ್ಗೀತಾ ವಿಷ್ಣುಸಹಸ್ರನಾಮ–ಇವುಗಳು ನೂರಾರು ಅರ್ಥಗಳಿಂದ ಕೂಡಿವೆ. ಆದ್ದರಿಂದಲೇ 'ವ್ಯಾಸಾಯಾಪ್ರತಿಮೇತಿಹಾಸರಚನೋಲ್ಲಾಸಾಯ...' ಎಂದು ಶ್ರೀ ವಾದಿರಾಜರು ತಮ್ಮ 'ಲಕ್ಷ್ಮಾಭರಣ' ಗ್ರಂಥದ ಆದಿಯಲ್ಲಿ ಅಪ್ರತಿಮ ಇತಿಹಾಸಕಾರರೆಂದು ಶ್ರೀ ವೇದವ್ಯಾಸದೇವರನ್ನು ಕೊಂಡಾಡಿದ್ದಾರೆ. ಇಂತಹ ಗ್ರಂಥದ ಅಧ್ಯಯನದಿಂದ ಸುಜನರು ಮೋಕ್ಷಾದಿ ಪುರುಷಾರ್ಥ ಭಾಗಿಗಳಾಗಲಿ ಎಂದು ಬ್ರಹ್ಮಾದಿ ದೇವತೆಗಳ ದ್ವಾರ ಜಗತ್ತಿಗೆ ಉಪದೇಶಿಸಿದರು. ಹದಿನೆಂಟು ಪರ್ವಗಳಿಂದ ಒಡಗೂಡಿ ಒಂದು ಲಕ್ಷಗ್ರಂಥಸಂಖ್ಯೆಯಲ್ಲಿರುವ ಈ ಅಪ್ರತಿಮ ಪ್ರಬಂಧದ, ಪ್ರತಿಯೊಂದು ಪರ್ವ, ಅಧ್ಯಾಯ, ಪ್ರಕರಣ, ಶ್ಲೋಕ, ಚರಣ, ಪದ, ವರ್ಣ ಮುಂತಾದವುಗಳಲ್ಲಿ ಪ್ರಧಾನವಾಗಿ ಭಗವದ್ಗುಣಗಳು, ಅಪ್ರಧಾನವಾಗಿ ಶ್ರೀರಮಾದೇವಿ, ವಾಯುದೇವರೇ ಮುಂತಾದ ಶ್ರೀಹರಿಯ ಪರಿವಾರದವರ ಮಹಿಮೆ, ಇತರ ಜಗದ್ವಿಚಾರಾದಿಗಳು ಹೇಳಲ್ಪಟ್ಟಿವೆ. ಇಂತಹ ಗ್ರಂಥ ಪ್ರವಚನ

ಪರಿಶೀಲನಾದಿಗಳು ಶ್ರೀ ವೈಶಂಪಾಯನರ ದ್ವಾರಾ ಈ ಮನುಜಲೋಕದಲ್ಲಿ ಪ್ರವಹಿಸುವಂತೆ ಮಾಡಿ ಪರಮಾನುಗ್ರಹ ಮಾಡಿದ್ದಾರೆ, ಶ್ರೀವೇದವ್ಯಾಸದೇವರು.

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯ

ದರ್ಶನಭಾಷಾ, ಗುಹ್ಯಭಾಷಾ, ಸಮಾಧಿಭಾಷಾ ಎಂಬ ಭಾಷಾತ್ರಯ, ರೀತಿ-ಶತಕಗಳನ್ನು ಬಲ್ಲವರು ಮಾತ್ರ ಯಥಾರ್ಥವಾಗಿ ಅರಿಯಲು ಸಾಧ್ಯವಾಗಿರುವ ಈ ಮಹಾಭಾರತ ಗ್ರಂಥವು, ಕಲಿಕಾಲಕ್ಕನುಗುಣವಾಗಿ ಪ್ರಚುರಗೊಂಡ ದುರ್ಮತ-ಪ್ರವರ್ತಕರ ಅಪವ್ಯಾಖ್ಯಾನಾದಿಗಳು, ಅಪಪಾಠ, ಪ್ರಕ್ಷೇಪ, ಪೂರ್ವಾಪರೀಕರಣ-ಪರಿಲೋಪ, ಭಾಷಾತ್ರಯ ಅಪರಿಜ್ಞಾನ, ರೀತಿಶತಕಗಳ ಅಜ್ಞಾನ ಮುಂತಾದ ಅನೇಕ ಮಾರ್ಗದಿಂದ ಸುಜನರಿಗೆ ಉಪಯೋಗವಾಗದೇ ಇರುವುದನ್ನು ಕಂಡು, ಶ್ರೀವೇದವ್ಯಾಸದೇವರಿಂದ ವಿಶೇಷವಾಗಿ ಆಜ್ಞಪ್ತರಾದ ಶ್ರೀಮನ್ಮಧ್ವಾಚಾರ್ಯರಿಂದ ರಚಿಸಲ್ಪಟ್ಟ ಗ್ರಂಥರತ್ನ 'ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯ.' ವಿಶೇಷತಃ ಮಹಾಭಾರತ ಕಥಾಪ್ರಮೇಯ ನಿರ್ಣಾಯಕವಾಗಿರುವುದರಿಂದ, 'ಶ್ರೀಮನ್ಮಹಾ-ಭಾರತತಾತ್ಪರ್ಯನಿರ್ಣಯ'ವೆಂದು ಹೆಸರಿಸಿದ್ದರೂ, 'ಸಮಸ್ತ ಶಾಸ್ತ್ರಾರ್ಥನಿರ್ಣಾಯಕ

ಗ್ರಂಥ 'ಇದು' ಎಂದು ಶ್ರೀ ಮಧ್ವಾಚಾರ್ಯರೇ ತಿಳಿಸಿರುವರು. 'ಸಮಸ್ತ ಶಾಸ್ತ್ರಾರ್ಥನಿರ್ಣಾಯೋಽಯಂ ವಿಶೇಷತೋ ಭಾರತವರ್ತ್ಮಚಾರೀ' ಶ್ರೀವೇದ-ವ್ಯಾಸದೇವರಿಂದ ಪ್ರಣೀತವಾದ ಅಷ್ಟಾದಶ ಪುರಾಣಪ್ರಸ್ಥಾನ ಹಾಗೂ ಮಹಾ-ಭಾರತ ಮೂಲರಾಮಾಯಣಾದಿ ಇತಿಹಾಸಪ್ರಸ್ಥಾನ ಶ್ರುತಿಸ್ಮೃತಿಗಳಿಗೆ ವ್ಯಾಖ್ಯಾನ ರೂಪವಾದ ಈ ಗ್ರಂಥವು ನಾನಾ ಛಂದೋಬದ್ಧವಾದ ಸಹಸ್ರಾರು ಶ್ಲೋಕಗಳಿಂದ ಒಳಗೊಂಡಿದೆ. ಮೂವತ್ತೆರಡು ಅಧ್ಯಾಯಗಳಿಂದ ವಿಂಗಡಿಸಿ, ಸಮಸ್ತ ಶಾಸ್ತ್ರಾರ್ಥ ಸಾರವನ್ನು ಸುಲಭ ಹಾಗೂ ಸುದೃಢ ಶೈಲಿಯಲ್ಲಿ ಜೇತೋಹಾರಿಯಾಗಿ ವಿರಚಿಸಿರುವುದನ್ನು ನೋಡಿದರೆ, 'ಇತಿಹಾಸಪುರಾಣಾಬ್ಧೇಃ ಭ ವಚ್ಚಿತ್ತಾದ್ರಿ-ಲೋಡಿತಾತ್। ಜಾತಾಂ ಭಾರತ ತಾತ್ಪರ್ಯಸುಧಾಂ ಕಃ ಸನ್ ನ ಸೇವತೇ॥' ಎಂದು ಶ್ರೀಸುಮಧ್ವವಿಜಯಕಾರರು ವರ್ಣಿಸಿರುವುದು ಎಷ್ಟು ಯಥಾರ್ಥವಾಗಿದೆಯೆಂದು ಅರಿವಾಗದೇ ಇರದು. ಮೊದಲನೇ ಅಧ್ಯಾಯದಲ್ಲಿ ಶ್ರೀಹರಿಯ ಜಗತ್-ಕರ್ತೃತ್ವಾದಿ ಸಮಸ್ತ ಶಾಸ್ತ್ರಾರ್ಥನಿರ್ಣಯವನ್ನು ಮಾಡಿರುವ ಕ್ರಮ, ಎರಡನೇ ಅಧ್ಯಾಯದಲ್ಲಿ ತಮ್ಮ ನಿರ್ಣಯಕ್ಕನುಗುಣವಾಗಿ ಭಾರತಾದಿ ಸುವಾಕ್ಯಗಳ ಉದ್ಧಾರಕ್ರಮ, ಮೂರನೇ ಅಧ್ಯಾಯದಲ್ಲಿ ಬಾಹ್ಯಸೃಷ್ಟಿ, ಅಂತಃಸೃಷ್ಟಿ, ಶ್ರೀಹರಿ-ಪ್ರಾದುರ್ಭಾವನಿರ್ಣಯಕ್ರಮಗಳನ್ನು ಸರಿಯಾಗಿ ಅರಿತ ಅಧಿಕಾರಿ, ಯಾವ ಪುರಾಣಗ್ರಂಥಗಳನ್ನಾದರೂ ಸುಲಭವಾಗಿ ಜೀರ್ಣಿಸಿಕೊಳ್ಳಬಹುದು. ಹೀಗೆ ನಿರೂಪಿಸುವ ಪದ್ಧತಿ ಶ್ರೀಮದಾಚಾರ್ಯರಿಗೇ ಮೀಸಲಾದುದು. ನಾಲ್ಕನೇ

ಅಧ್ಯಾಯದಿಂದ ಒಂಭತ್ತನೇ ಅಧ್ಯಾಯದವರೆಗೆ ಮಾಡಿರುವ ರಾಮಕಥಾ ನಿರ್ಣಯವನ್ನು ಅರಿಯದ ಹೊರತು, ರಾಮಾಯಣದ ಅನೇಕ ಕಥಾಪ್ರಸಂಗಗಳ ಮೇಲೆ ಬರುವ ಆಕ್ಷೇಪಗಳ ಪರಿಹಾರವಾಗದೇ, ವಿಪರೀತ ಜ್ಞಾನೋತ್ಪತ್ತಿಯಿಂದ ಅಧಃಪತನವಾಗುವುದರಲ್ಲಿ ಸಂದೇಹವಿಲ್ಲ. ಹತ್ತನೇ ಅಧ್ಯಾಯದಲ್ಲಿ ಮಾಡಿರುವ ಶ್ರೀವೇದವ್ಯಾಸ ಕಥಾನಿರ್ಣಯವೆಂಬುದು 'ವ್ಯಾಸೋನಾಮ ಕಶ್ಚನ ಋಷಿಃ', 'ವ್ಯಾಸಃ ವ್ಯಭಿಚಾರಜಾತಃ' ಮುಂತಾದ ಕ್ಷುಲ್ಲಕ ಹರಟೆಗೆ ಕೆಂಚಿತ್ತೂ ಅವಕಾಶ ಕೊಡದಂತೆ, ಶ್ರೀವೇದವ್ಯಾಸದೇವರ ಸಮಗ್ರ ಚಿತ್ರಣವನ್ನು ನೀಡಿರುವುದರಿಂದ, ಶ್ರೀಮದಾಚಾರ್ಯರ ಅನುಗ್ರಹವನ್ನು ಎಷ್ಟು ಕೊಂಡಾಡಿದರೂ ಸಾಲದು. ಹನ್ನೊಂದನೇ ಅಧ್ಯಾಯದಿಂದ ಮೂವತ್ತೆರಡನೇ ಅಧ್ಯಾಯದವರೆಗೆ ಶ್ರೀಕೃಷ್ಣಕಥಾ, ಪಾಂಡವರ ಕಥಾ, ಅದಕ್ಕನುಗುಣವಾದ ದೇವಾಧಿದೇವತೆಗಳ ಅಂಶಾಂಶಿಭಾವ ಮುಂತಾದ ಸಮಗ್ರ ವಿಷಯಗಳನ್ನು ನಿರ್ಣಯಿಸಿರುವರು. 'ಭಾರತ, ಭಾಗವತ, ಹರಿವಂಶಾದಿಗಳಲ್ಲಿ ಬಂದಿರುವ ವಿಷಯಗಳನ್ನು ವಿರೋಧಾಭಾಸಗಳ ಪರಿಹಾರ ದೊಂದಿಗೆ ಒಂದಕ್ಕೊಂದು ಪೂರಕವಾಗುವಂತೆ ನಿರ್ಣಯಿಸಿರುವ ಕ್ರಮ ಮತ್ತು ಯಾವುದಾದ ಮೇಲೆ ಯಾವುದು ನಡೆದಿದೆ ಎಂಬುದರ ಕಾಲಾನುಗುಣ ನಿರ್ಣಯ-

---

ಕ್ರಮ, ಶ್ರೀಮದಾಚಾರ್ಯರಿಂದಲೇ ಸಾಧ್ಯ' ಎಂದು ಶ್ರೀ ವಾದಿರಾಜತೀರ್ಥರೇ ಮೊದಲಾದವರು ಹೇಳುತ್ತಿರುವಾಗ ಮತ್ತೊಬ್ಬರ ಮಾತೇನು!

ಸರ್ವತ್ರ ಶ್ರೀಕೃಷ್ಣಮಹಿಮಾ, ಶ್ರೀ ಭೀಮಸೇನದೇವರ ಶುದ್ಧಭಾಗವ-ತೋತ್ತಮತ್ವ, ಶ್ರೀಹರಿಯ ಕಾರ್ಯದಲ್ಲಿ ಪ್ರಧಾನಾಂಗತ್ವ ಮುಂತಾದ ಸಕಲ ವಿಷಯಗಳನ್ನು ನಿರ್ಣಯಿಸಿರುವುದನ್ನು ನೋಡಿದಾಗ, ಶ್ರೀಮದಾಚಾರ್ಯರನ್ನು ಸರ್ವಜ್ಞರೆಂದು ಒಪ್ಪದೇ ಯಾರೂ ಇರಲಾರರು. ಕೊನೆಯಲ್ಲಿ 'ತನುಸ್ತೃತೀಯಾ ಪವನಸ್ಯ ಸೇಯಂ ಸದ್ಭಾರತಾರ್ಥ ಪ್ರತಿಪಾದನಾಯ' ಎಂಬುದಾಗಿ ಭೀಮ-ಸೇನಾಂಶವೇ ಮಧ್ವರೂಪದಿಂದ ಬಂದು, ಶ್ರೀಹರಿಕಥಾನಿರ್ಣಯವನ್ನು ನೀಡುತ್ತಿದೆ ಎಂದು ತಮ್ಮ ಸ್ವರೂಪನಿರ್ಣಯದೊಂದಿಗೆ ಈ ಗ್ರಂಥವನ್ನು ಶ್ರೀಹರಿಗೆ ಸಮರ್ಪಿಸಿದ್ದಾರೆ. ಇಂತಹ ಸಮಗ್ರ ನಿರ್ಣಯಾತ್ಮಕ ಗ್ರಂಥವನ್ನು ಸರಿಯಾದ ಗುರು-ಮುಖದಿಂದ ಅಧ್ಯಯನ ಮಾಡದ ಹೊರತು, ಮೋಕ್ಷೋಪಯೋಗಿ ಯಥಾರ್ಥ-ಜ್ಞಾನವನ್ನು ಯಾರೂ ಎಂದೆಂದಿಗೂ ಪಡೆಯಲಾರರು. ಆದ್ದರಿಂದಲೇ ಬಹ್ವರ್ಥ-ಗರ್ಭಿತವೂ, ಅನೇಕ ವ್ಯಾಕರಣಮರ್ಯಾದಾಭೂಷಿತವೂ, ನಾನಾ ಛಂದೋ ನಿಬಂಧಿತವೂ, ಬಹು ಗಂಭೀರಶೈಲಿ ಸಮಾಲಂಕೃತವೂ ಆದ ಗ್ರಂಥವನ್ನು, ಸುಜನರು ಸರಿಯಾಗಿ ತಿಳಿದುಕೊಳ್ಳಲಿ ಎಂಬ ಅಭಿಪ್ರಾಯದಿಂದ ಅನೇಕ ಅಪರೋಕ್ಷ ಜ್ಞಾನಿಗಳು ಈ ಗ್ರಂಥಕ್ಕೆ ವ್ಯಾಖ್ಯಾನವನ್ನು ಬರೆದಿದ್ದಾರೆ. ಅದರಲ್ಲೂ ಶ್ರೀಮತ್ ವಾದಿರಾಜಪೂಜ್ಯಚರಣರಿಂದ ವಿರಚಿತವಾದ ವ್ಯಾಖ್ಯಾನವು ಶಿಖರಪ್ರಾಯವೂ,

ಬಹು ಉಪಕಾರಕವೂ ಆಗಿದೆ. ಶ್ರೀಮದ್ರಾಘವೇಂದ್ರತೀರ್ಥರಂತೂ, ಇವೆಲ್ಲ ಅಂಶವನ್ನೊಳಗೊಂಡಿರುವ 'ತಾತ್ಪರ್ಯನಿರ್ಣಯಾರ್ಥಸಂಗ್ರಹ' ಎಂಬ ಮೂವತ್ತೆರಡು ಶ್ಲೋಕಗಳ ಚಿಕ್ಕ ಪ್ರಬಂಧವನ್ನು ರಚಿಸಿ, ಬೃಹದ್ವ್ಯಾಖ್ಯಾನಗ್ರಂಥವನ್ನೇ ಮಾಡಿರುವರು. ಶ್ರೀ ಸತ್ಯಾಭಿನವತೀರ್ಥರೇ ಮೊದಲಾದ ಜ್ಞಾನಿಗಳು 'ವಿರೋಧೋದ್ಧಾರ' ಮುಂತಾದ ಗ್ರಂಥಗಳನ್ನು ರಚಿಸಿ ಸಜ್ಜನವೃಂದಕ್ಕೆ ಬಹು ಅನುಗ್ರಹಿಸಿದ್ದಾರೆ. ಇವೆಲ್ಲಾ ಅಂಶಗಳು ಸಂಸ್ಕೃತವಾಙ್ಮಯದಲ್ಲಿರುವುದರಿಂದ, ಸಂಸ್ಕೃತಭಾಷೆಯನ್ನು ಅರಿಯದ ಸುಜನರಿಗೆ ನಿರ್ಣಯಗ್ರಂಥ ದೂರವಾದೀತೆಂಬ ಅನುಕಂಪದಿಂದ, ಶ್ರೀಮದ್ವಾದಿರಾಜತೀರ್ಥಪೂಜ್ಯಚರಣರು ಕನ್ನಡದಲ್ಲಿ ಸಕಲ ಅಂಶಗಳಿಂದ ಒಡಗೂಡಿದ ವ್ಯಾಖ್ಯಾನವನ್ನು ಬರೆದಿರುವರು. ಅದರ ಪರಿಜ್ಞಾನದಿಂದ ಮೂಲಗ್ರಂಥವನ್ನೂ, ಶ್ರೀ ಮಧ್ವಾಚಾರ್ಯರ ಅಂತರ್ಯವನ್ನೂ ಬಹಳ ಸುಲಭವಾಗಿ ಅರಿತುಕೊಳ್ಳಬಹುದು. ಅಜ್ಞಪ್ರಾಜ್ಞರ ಸಾಧಾರಣ ಉಪಕಾರಕ ಗ್ರಂಥವಾದ ಈ ಕನ್ನಡ ತಾತ್ಪರ್ಯನಿರ್ಣಯವನ್ನು ಬಹು ಹಿಂದೆ ಪ್ರಕಾಶಗೊಳಿಸಿದ್ದರೂ, ಈಗ ಅದರ ಉಪಲಬ್ಧವಿಲ್ಲದೇ ಇರುವುದರಿಂದ, ಅದನ್ನು ಪ್ರಕಾಶಗೊಳಿಸಲು ಹೊರಟಿರುವ **ಶ್ರೀ ತ್ರೈಲೋಕ್ಯಾಚಾರ್ಯ ಸೇವಕ ವೃಂದ**ದ ಕಾರ್ಯ ನಿಜವಾಗಿಯೂ ಶ್ರೀಹರಿವಾಯುಗಳ ಹಾಗೂ ಶ್ರೀ ವಾದಿರಾಜತೀರ್ಥರ ಸರಿಯಾದ ಸೇವಾಕಾರ್ಯ. ಇದರಿಂದ ಭಾವಿಸಮೀರರಾದ ಶ್ರೀ **ವಾದಿರಾಜಗುರುಸಾರ್ವಭೌಮರೇ** ಮೊದಲಾದ ಸಕಲ ಜ್ಞಾನಿವರ್ಗದವರು ಸುಪ್ರೀತರಾಗಿ, ಶ್ರೀಹರಿವಾಯುಗಳ ಅನುಗ್ರಹಕ್ಕೆ ಈ ಸೇವಕವೃಂದ ಹೇಗೆ ಪಾತ್ರವಾಗಬೇಕೋ ಹಾಗೆ ಅನುಗ್ರಹಿಸುವರೆಂದು ನಿಶ್ಚಯವಾಗಿ ಹೇಳಬಹುದು. ಇದರ ಪ್ರಥಮ ಸಂಪುಟದ ಸದುಪಯೋಗ ಸುಜನವೃಂದಕ್ಕೆ ಆಗುವುದಲ್ಲದೇ, ಇದರಂತೆ ಉಳಿದ ಸಂಪುಟಗಳೂ ಶೀಘ್ರದಲ್ಲಿ ಪ್ರಕಾಶಿತಗೊಂಡು ಜ್ಞಾನಪ್ರಸಾರವಾಗಲಿ ಎಂದು ಶ್ರೀ ವಾದಿರಾಜಗುರ್ವಂತರ್ಯಾಮಿ ಶ್ರೀ ಮೆಧ್ವಾಂತರ್ಗತಶ್ರೀರಾಮಕೃಷ್ಣವೇದವ್ಯಾಸಾತ್ಮಕ ಶ್ರೀಲಕ್ಷ್ಮೀಹಯಗ್ರೀವದೇವರಲ್ಲಿ ಪ್ರಾರ್ಥಿಸುತ್ತ ಉಪರಮಿಸುತ್ತೇವೆ.

ಹನುಮಂತನಗರ
ಬೆಂಗಳೂರು-560 019

ಬಾಳಗಾರು ಶ್ರೀನಿವಾಸಾಚಾರ್ಯ